# 13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡದ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ

## (ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ)

ಪಿಎಚ್.ಡಿ. ಪದವಿಗಾಗಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಲು ಸಾದರ ಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕರು

**ಹರೀಶ್ ಕುಮಾರ್ ಬಿ.**

**(R.NO.14PSP006)**

ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ – 583 105

ಮಾರ್ಗದರ್ಶಕರು

**ಡಾ. ಮೋಹನ್ ದಾಸ್ ಕೆ.**

ಸಹಾಯಕ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ – 583 105

**ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ**
**ಬಳ್ಳಾರಿ – 583 105**

**2019**

# ಪರಿವಿಡಿ


I ಪ್ರಮಾಣಪತ್ರ

II ದೃಢೀಕರಣ

III ಕೃತಜ್ಞತೆ

IV ಕೋಷ್ಟಕ ವಿವರ

| ಕ್ರ. ಸಂ. | ಅಧ್ಯಾಯ | ಪುಟ ಸಂಖ್ಯೆ. |
|---|---|---|
| ಅಧ್ಯಾಯ–1 | ಪೀಠಿಕೆ | 1-40 |
| ಅಧ್ಯಾಯ–2 | ಮೀಸಲು ಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆ ಮತ್ತು ಬೆಳೆದು ಬಂದ ಹಾದಿ | 41-111 |
| ಅಧ್ಯಾಯ–3 | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳು | 112-203 |
| ಅಧ್ಯಾಯ–4 | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ನಾಯಕತ್ವ | 204-294 |
| ಅಧ್ಯಾಯ–5 | ವಿಧಾನಸಭೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ಪಾತ್ರ | 295-345 |
| ಅಧ್ಯಾಯ–6 | ಉಪಸಂಹಾರ ಮತ್ತು ಸಲಹೆಗಳು | 346-356 |
| ಅನುಬಂಧ–1 | ಪರಾಮರ್ಶನ ಗ್ರಂಥಗಳು | 357-368 |
| ಅನುಬಂಧ–2 | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಸಿದ್ಧಪಡಿಸಿದ ಪ್ರಶ್ನಾವಳಿ | 369-380 |
| | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳ ಶಾಸಕರಿಗೆಸಿದ್ಧಪಡಿಸಿದ ಸಂದರ್ಶನ ಅನುಸೂಚಿ | 381-382 |
| ಅನುಬಂಧ–3 | ಛಾಯಚಿತ್ರಗಳು | |

# ಕೋಷ್ಟಕಗಳು

## ಕೋಷ್ಟಕಗಳ ಪಟ್ಟಿ


| ಕ್ರ. ಸಂ. | ಕೋಷ್ಟಕದ ಮಾಹಿತಿ | ಕೋ. ಸಂಖ್ಯೆ | ಪು.ಸಂ |
|---|---|---|---|
| 1. | 1950ರ ನಂತರ ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ | 1.1 | 8 |
| 2. | 2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಯ ಜಿಲ್ಲಾವಾರು ಜನಸಂಖ್ಯೆ | 1.2 | 10 |
| 3. | 2011ರ ಜನಗಣತಿಯಲ್ಲಿ ಪರಿಶಿಷ್ಟ ಪಂಗಡದ ಜಿಲ್ಲಾವಾರು ಜನಸಂಖ್ಯೆ | 1.3 | 12 |
| 4. | 13ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು | 1.4 | 19 |
| 5. | 14ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು | 1.5 | 20 |
| 6. | ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲೋಕಸಭೆಗೆ ನಿಗದಿಗೊಳಿಸರುವ ಮೀಸಲು ಕ್ಷೇತ್ರಗಳು | 2.1 | 103 |
| 7. | ರಾಜ್ಯ ವಿಧಾನಸಭೆಗಳಲ್ಲಿ ನಿಗದಿಗೊಳಿಸಿರುವ ಮೀಸಲು ಕ್ಷೇತ್ರಗಳ ಸಂಖ್ಯೆ | 2.2 | 106 |
| 8. | 2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿಗೆ ಮಿಸಲಾದ ಕ್ಷೇತ್ರಗಳು | 2.3 | 109 |
| 9. | 2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮಿಸಲಾದ ಕ್ಷೇತ್ರಗಳು | 2.4 | 110 |
| 10. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957 | 3.1 | 130 |
| 11. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962 | 3.2 | 131 |
| 12. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967 | 3.3 | 132 |
| 13. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972 | 3.4 | 133 |
| 14. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978 | 3.5 | 134 |
| 15. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983 | 3.6 | 135 |
| 16. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985 | 3.7 | 136 |
| 17. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989 | 3.8 | 137 |
| 18. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994 | 3.9 | 138 |
| 19. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999 | 3.10 | 140 |
| 20. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004 | 3.11 | 141 |
| 21. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008 | 3.12 | 143 |
| 22. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013 | 3.13 | 144 |
| 23. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018 | 3.14 | 146 |
| 24. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.15 | 159 |
| 25. | ಮತದಾರರ ಮತ ಚಲಾವಣೆ ಅರ್ಹತೆಗಳನ್ನು ಕುರಿತು ಅಭಿಪ್ರಾಯ | 3.16 | 160 |
| 26. | ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ | 3.17 | 162 |
| 27. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.18 | 163 |
| 28. | ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ | 3.19 | 165 |

| | | | |
|---|---|---|---|
| 29. | ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ | 3.20 | 167 |
| 30. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1952 | 3.21 | 174 |
| 31. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957 | 3.22 | 175 |
| 32. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962 | 3.23 | 175 |
| 33. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967 | 3.24 | 176 |
| 34. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972 | 3.25 | 177 |
| 35. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978 | 3.26 | 178 |
| 36. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983 | 3.27 | 179 |
| 37. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985 | 3.28 | 180 |
| 38. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989 | 3.29 | 182 |
| 39. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994 | 3.30 | 184 |
| 40. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮರು ಚುನಾವಣೆ ಫಲಿತಾಂಶ–1997 | 3.31 | 185 |
| 41. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999 | 3.32 | 186 |
| 42. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004 | 3.33 | 187 |
| 43. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008 | 3.34 | 189 |
| 44. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013 | 3.35 | 190 |
| 45. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018 | 3.36 | 192 |
| 46. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.37 | 194 |
| 47. | ಮತದಾನದ ಅರ್ಹತೆಗಳನ್ನು ಕುರಿತು ಮತದಾರರ ಅಭಿಪ್ರಾಯ | 3.38 | 195 |
| 48. | ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ | 3.39 | 197 |
| 49. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.40 | 198 |
| 50. | ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ | 3.41 | 200 |
| 51. | ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ | 3.42 | 202 |
| 52. | ಮತದಾರರ ದೃಷ್ಟಿಯಲ್ಲಿ ನಾಯಕರನ್ನು ಕುರಿತ ಅಭಿಪ್ರಾಯ | 4.1 | 275 |
| 53. | ಮತದಾರರ ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಅಭಿಪ್ರಾಯ | 4.2 | 278 |
| 54. | ಶಾಸಕರ ನಾಯಕತ್ವ ಗುಣ ಕುರಿತು ದಲಿತೇತರರ ಅಭಿಪ್ರಾಯ | 4.3 | 280 |
| 55. | ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕಿರುವ ವ್ಯತ್ಯಾಸಗಳನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.4 | 282 |
| 56. | ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳ ಪಾತ್ರ ಕುರಿತು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.5 | 285 |
| 57. | ಮೀಸಲುಕ್ಷೇತ್ರಗಳು ಪರಿಶಿಷ್ಟ ಪಂಗಡದವರಿಗೆ ರಾಜಕೀಯ ನಾಯಕತ್ವ ರೂಪಿಸುವಲ್ಲಿ ಸಹಕಾರಿಯಾಗಿವೆಯಾ ಎಂಬುದರ ಬಗ್ಗೆ ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.6 | 287 |
| 58. | ಪರಿಶಿಷ್ಟ ಪಂಗಡದವರ ನಾಯಕತ್ವ ಒಪ್ಪುತ್ತೀರಾ ಎಂಬುದನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.7 | 288 |
| 59. | ಶಾಸಕರು ಎಲ್ಲಾ ಜಾತಿ/ಧರ್ಮಗಳನ್ನು ಸಮಾನ ರೀತಿಯಲ್ಲಿ | 4.8 | 290 |

| | | | |
|---|---|---|---|
| | ನೋಡಿದ್ದಾರಾ? ಎಂಬ ಕುರಿತು ಪರಿಶಿಷ್ಟ ಪಂಗಡೇತರರ ಅಭಿಪ್ರಾಯ | | |
| 60. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಚಳ್ಳಕೆರೆ ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.9 | 291 |
| 61. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮೊಳಕಾಲ್ಮೂರು ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.10 | 293 |
| 62. | ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳ ಸಂಖ್ಯೆ ಕುರಿತು | 5.1 | 299 |
| 63. | ಚಿತ್ರದುರ್ಗ ಜಿಲ್ಲೆಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟೆಲ್‌ಗಳ ಸಂಖ್ಯೆ ಕುರಿತು | 5.2 | 303 |
| 64. | ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಕುರಿತು | 5.3 | 312 |
| 65. | ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರ ಕುರಿತು | 5.4 | 312 |
| 66. | ಪರಿಶಿಷ್ಟ ಜಾತಿ/ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಕುರಿತು | 5.5 | 317 |
| 67. | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಮಂಜೂರಾದ ಅನುದಾನ ಕುರಿತು | 5.6 | 318 |
| 68. | ತಾಲ್ಲೂಕುವಾರು ಮಂಜೂರು ವಿದ್ಯಾರ್ಥಿವೇತನ ಕುರಿತು | 5.6 | 319 |
| | **ಲಂಬ ಚಿತ್ರಗಳು** | | |
| 1. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.15 | 159 |
| 2. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.18 | 163 |
| 3. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.37 | 194 |
| 4. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.40 | 199 |
| 5. | ಮತದಾರರ ದೃಷ್ಟಿಯಲ್ಲಿ ನಾಯಕರನ್ನು ಕುರಿತ ಅಭಿಪ್ರಾಯ | 4.1 | 276 |
| 6. | ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.2 | 278 |
| 7. | ಶಾಸಕರ ನಾಯಕತ್ವ ಗುಣ ಕುರಿತು ಪರಿಶಿಷ್ಟ ಪಂದಡೇತರರ ಅಭಿಪ್ರಾಯ | 4.3 | 280 |
| 8. | ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳ ಪಾತ್ರ ಕುರಿತು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.5 | 285 |
| 9. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಚಳ್ಳಕೆರೆ ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.9 | 291 |
| 10. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮೊಳಕಾಲ್ಮೂರು ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.10 | 293 |
| | **ನಕ್ಷೆಗಳು** | | |
| 1. | ಭಾರತ ದೇಶದ ಭೂ ನಕ್ಷೆ | 3.1 | 114 |
| 2. | ಕರ್ನಾಟಕ ನಕ್ಷೆ | 3.2 | 115 |
| 3. | ಚಿತ್ರದುರ್ಗ ಜಿಲ್ಲೆಯ ನಕ್ಷೆ | 3.3 | 117 |
| 4. | ಚಳ್ಳಕೆರೆ ತಾಲ್ಲೂಕಿನ ನಕ್ಷೆ | 3.4 | 129 |
| 5. | ಮೊಳಕಾಲ್ಮೂರು ತಾಲ್ಲೂಕಿನ ನಕ್ಷೆ | 3.5 | 173 |

## ಕೋಷ್ಟಕಗಳು

## ಕೋಷ್ಟಕಗಳ ಪಟ್ಟಿ


| ಕ್ರ. ಸಂ. | ಕೋಷ್ಟಕದ ಮಾಹಿತಿ | ಕೋ. ಸಂಖ್ಯೆ | ಪು.ಸಂ |
|---|---|---|---|
| 1. | 1950ರ ನಂತರ ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ | 1.1 | 8 |
| 2. | 2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಯ ಜಿಲ್ಲಾವಾರು ಜನಸಂಖ್ಯೆ | 1.2 | 10 |
| 3. | 2011ರ ಜನಗಣತಿಯಲ್ಲಿ ಪರಿಶಿಷ್ಟ ಪಂಗಡದ ಜಿಲ್ಲಾವಾರು ಜನಸಂಖ್ಯೆ | 1.3 | 12 |
| 4. | 13ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು | 1.4 | 19 |
| 5. | 14ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು | 1.5 | 20 |
| 6. | ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲೋಕಸಭೆಗೆ ನಿಗದಿಗೊಳಿಸರುವ ಮೀಸಲು ಕ್ಷೇತ್ರಗಳು | 2.1 | 103 |
| 7. | ರಾಜ್ಯ ವಿಧಾನಸಭೆಗಳಲ್ಲಿ ನಿಗದಿಗೊಳಿಸಿರುವ ಮೀಸಲು ಕ್ಷೇತ್ರಗಳ ಸಂಖ್ಯೆ | 2.2 | 106 |
| 8. | 2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿಗೆ ಮಿಸಲಾದ ಕ್ಷೇತ್ರಗಳು | 2.3 | 109 |
| 9. | 2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮಿಸಲಾದ ಕ್ಷೇತ್ರಗಳು | 2.4 | 110 |
| 10. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957 | 3.1 | 130 |
| 11. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962 | 3.2 | 131 |
| 12. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967 | 3.3 | 132 |
| 13. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972 | 3.4 | 133 |
| 14. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978 | 3.5 | 134 |
| 15. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983 | 3.6 | 135 |
| 16. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985 | 3.7 | 136 |
| 17. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989 | 3.8 | 137 |
| 18. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994 | 3.9 | 138 |
| 19. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999 | 3.10 | 140 |
| 20. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004 | 3.11 | 141 |
| 21. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008 | 3.12 | 143 |
| 22. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013 | 3.13 | 144 |
| 23. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018 | 3.14 | 146 |
| 24. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.15 | 159 |
| 25. | ಮತದಾರರ ಮತ ಚಲಾವಣೆ ಅರ್ಹತೆಗಳನ್ನು ಕುರಿತು ಅಭಿಪ್ರಾಯ | 3.16 | 160 |
| 26. | ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ | 3.17 | 162 |
| 27. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.18 | 163 |
| 28. | ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ | 3.19 | 165 |

| | | | |
|---|---|---|---|
| 29. | ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ | 3.20 | 167 |
| 30. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1952 | 3.21 | 174 |
| 31. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957 | 3.22 | 175 |
| 32. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962 | 3.23 | 175 |
| 33. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967 | 3.24 | 176 |
| 34. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972 | 3.25 | 177 |
| 35. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978 | 3.26 | 178 |
| 36. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983 | 3.27 | 179 |
| 37. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985 | 3.28 | 180 |
| 38. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989 | 3.29 | 182 |
| 39. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994 | 3.30 | 184 |
| 40. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮರು ಚುನಾವಣೆ ಫಲಿತಾಂಶ–1997 | 3.31 | 185 |
| 41. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999 | 3.32 | 186 |
| 42. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004 | 3.33 | 187 |
| 43. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008 | 3.34 | 189 |
| 44. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013 | 3.35 | 190 |
| 45. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018 | 3.36 | 192 |
| 46. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.37 | 194 |
| 47. | ಮತದಾನದ ಅರ್ಹತೆಗಳನ್ನು ಕುರಿತು ಮತದಾರರ ಅಭಿಪ್ರಾಯ | 3.38 | 195 |
| 48. | ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ | 3.39 | 197 |
| 49. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.40 | 198 |
| 50. | ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ | 3.41 | 200 |
| 51. | ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ | 3.42 | 202 |
| 52. | ಮತದಾರರ ದೃಷ್ಟಿಯಲ್ಲಿ ನಾಯಕರನ್ನು ಕುರಿತ ಅಭಿಪ್ರಾಯ | 4.1 | 275 |
| 53. | ಮತದಾರರ ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಅಭಿಪ್ರಾಯ | 4.2 | 278 |
| 54. | ಶಾಸಕರ ನಾಯಕತ್ವ ಗುಣ ಕುರಿತು ದಲಿತೇತರರ ಅಭಿಪ್ರಾಯ | 4.3 | 280 |
| 55. | ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕಿರುವ ವ್ಯತ್ಯಾಸಗಳನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.4 | 282 |
| 56. | ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳ ಪಾತ್ರ ಕುರಿತು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.5 | 285 |
| 57. | ಮೀಸಲುಕ್ಷೇತ್ರಗಳು ಪರಿಶಿಷ್ಟ ಪಂಗಡದವರಿಗೆ ರಾಜಕೀಯ ನಾಯಕತ್ವ ರೂಪಿಸುವಲ್ಲಿ ಸಹಕಾರಿಯಾಗಿವೆಯಾ ಎಂಬುದರ ಬಗ್ಗೆ ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.6 | 287 |
| 58. | ಪರಿಶಿಷ್ಟ ಪಂಗಡದವರ ನಾಯಕತ್ವ ಒಪ್ಪುತ್ತೀರಾ ಎಂಬುದನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.7 | 288 |
| 59. | ಶಾಸಕರು ಎಲ್ಲಾ ಜಾತಿ/ಧರ್ಮಗಳನ್ನು ಸಮಾನ ರೀತಿಯಲ್ಲಿ | 4.8 | 290 |

| | | | |
|---|---|---|---|
| | ನೋಡಿದ್ದಾರಾ? ಎಂಬ ಕುರಿತು ಪರಿಶಿಷ್ಟ ಪಂಗಡೇತರರ ಅಭಿಪ್ರಾಯ | | |
| 60. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಚಳ್ಳಕೆರೆ ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.9 | 291 |
| 61. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮೊಳಕಾಲ್ಮೂರು ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.10 | 293 |
| 62. | ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳ ಸಂಖ್ಯೆ ಕುರಿತು | 5.1 | 299 |
| 63. | ಚಿತ್ರದುರ್ಗ ಜಿಲ್ಲೆಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟೆಲ್‌ಗಳ ಸಂಖ್ಯೆ ಕುರಿತು | 5.2 | 303 |
| 64. | ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಕುರಿತು | 5.3 | 312 |
| 65. | ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರ ಕುರಿತು | 5.4 | 312 |
| 66. | ಪರಿಶಿಷ್ಟ ಜಾತಿ/ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಕುರಿತು | 5.5 | 317 |
| 67. | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಮಂಜೂರಾದ ಅನುದಾನ ಕುರಿತು | 5.6 | 318 |
| 68. | ತಾಲ್ಲೂಕುವಾರು ಮಂಜೂರು ವಿದ್ಯಾರ್ಥಿವೇತನ ಕುರಿತು | 5.6 | 319 |
| | **ಲಂಬ ಚಿತ್ರಗಳು** | | |
| 1. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.15 | 159 |
| 2. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.18 | 163 |
| 3. | ಮತದಾನ ಕುರಿತ ಮತದಾರರ ಅಭಿಪ್ರಾಯ | 3.37 | 194 |
| 4. | ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ | 3.40 | 199 |
| 5. | ಮತದಾರರ ದೃಷ್ಟಿಯಲ್ಲಿ ನಾಯಕರನ್ನು ಕುರಿತ ಅಭಿಪ್ರಾಯ | 4.1 | 276 |
| 6. | ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ | 4.2 | 278 |
| 7. | ಶಾಸಕರ ನಾಯಕತ್ವ ಗುಣ ಕುರಿತು ಪರಿಶಿಷ್ಟ ಪಂದಡೇತರರ ಅಭಿಪ್ರಾಯ | 4.3 | 280 |
| 8. | ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳ ಪಾತ್ರ ಕುರಿತು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ | 4.5 | 285 |
| 9. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಚಳ್ಳಕೆರೆ ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.9 | 291 |
| 10. | ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮೊಳಕಾಲ್ಮೂರು ಕ್ಷೇತ್ರದ ಮತದಾರರ ಪ್ರತಿಕ್ರಿಯೆ | 4.10 | 293 |
| | **ನಕ್ಷೆಗಳು** | | |
| 1. | ಭಾರತ ದೇಶದ ಭೂ ನಕ್ಷೆ | 3.1 | 114 |
| 2. | ಕರ್ನಾಟಕ ನಕ್ಷೆ | 3.2 | 115 |
| 3. | ಚಿತ್ರದುರ್ಗ ಜಿಲ್ಲೆಯ ನಕ್ಷೆ | 3.3 | 117 |
| 4. | ಚಳ್ಳಕೆರೆ ತಾಲ್ಲೂಕಿನ ನಕ್ಷೆ | 3.4 | 129 |
| 5. | ಮೊಳಕಾಲ್ಮೂರು ತಾಲ್ಲೂಕಿನ ನಕ್ಷೆ | 3.5 | 173 |

# ABBREVIATIONS

JNP - Janata Party

INC - Indian National Congress

JP - Janata Party

JD - Janata Dal,

KRS - Karnataka Rajya Ryota Sangha

BJP - Bharathiya Janata Party

JD - Janata Dal

KCP - Karnataka Congress Party

KRRS - Karnataka Rajya Ryota Sangha

SP - Samajwadi Party

JD(S) – Janata Dal (Secular)

JD(U) – Janata Dal (United)

BSP – Bahujan Samaj Party

KCVP – Kannada Chalavali Vatal Paksha

CPI – Communist Party Of India

KNDP - Kannada Nadu Party

KCPV- Kannada Chalavali Vatal Paksha

KJP – Karnataka Jantha Paksha

BSRCP – Basavara Shramikara Raitara Congress Party

PSP – Praja Socialist Party

INC(I) - Indian National Congress (Indian)

KCP – Karnataka Congress Party

PPOI – Pyramid party of India

CPI – Communist Party of India

SUP – Swarna Yuga Party

PPOI - Pyramid Party of India

AIMEP – All India Mahila Empowerment Party

IND – Independent

NOTA – None of the Above

# ಪರಿವಿಡಿ


| ಕ್ರ. ಸಂ. | ಅಧ್ಯಾಯ | ಪುಟ ಸಂಖ್ಯೆ |
|---|---|---|
| **ಅಧ್ಯಾಯ–1** | **ಪೀಠಿಕೆ** | 1–40 |
| 1.1. | ಪೀಠಿಕೆ | 1–20 |
| 1.2. | ಸಾಹಿತ್ಯ ಸಮೀಕ್ಷೆ | 21–33 |
| 1.3. | ಸಮಸ್ಯೆಯ ಹೇಳಿಕೆ | 33 |
| 1.4. | ಅಧ್ಯಯನದ ಉದ್ದೇಶಗಳು | 34 |
| 1.5. | ಪ್ರಾಕ್‌ಕಲ್ಪನೆಗಳು | 34 |
| 1.6. | ಅಧ್ಯಯನದ ವ್ಯಾಪ್ತಿ | 35 |
| 1.7. | ಅಧ್ಯಯನದ ಮಹತ್ವ | 35 |
| 1.8. | ಅಧ್ಯಯನದ ವಿಧಾನ | 36 |
| 1.9. | ಮಾಹಿತಿ ಸಂಗ್ರಹಣೆ ವಿಧಾನ | 37 |
| 1.10. | ಅಧ್ಯಯನದ ವಿನ್ಯಾಸ | 38–40 |
| **ಅಧ್ಯಾಯ–2** | **ಮೀಸಲುಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆ ಮತ್ತು ಬೆಳೆದುಬಂದ ಹಾದಿ** | 41–111 |
| 2.1. | ಪ್ರಾಚೀನ ಭಾರತದ ಇತಿಹಾಸ | 41–42 |
| 2.2. | ಗೌತಮ ಬುದ್ಧನ ಕ್ರಾಂತಿ | 42–46 |
| 2.3. | ಸೌತ್ ಬರೋ ಸಮಿತಿ | 46–55 |
| 2.4. | ಸೈಮನ್ ಆಯೋಗ | 55–62 |
| 2.5. | ದುಂಡುಮೇಜಿನ ಸಮ್ಮೇಳನಗಳು | 62–77 |
| 2.6. | ಲೋಥಿಯಾನ್ ಸಮಿತಿ | 77–78 |
| 2.7. | ಪೂನಾ ಒಪ್ಪಂದ | 79–81 |
| 2.8. | ಸಂವಿಧಾನ ರಚನಾಸಮಿತಿಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿ ಕುರಿತು ಚರ್ಚೆಗಳು | 81–103 |
| 2.9. | ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಯಲ್ಲಿ ಮೀಸಲಾತಿ ಕ್ಷೇತ್ರಗಳು | 103–108 |
| 2.10. | ಕರ್ನಾಟಕದ ಮೀಸಲು ವಿಧಾನಸಭಾ ಕ್ಷೇತ್ರಗಳು | 108–111 |
| **ಅಧ್ಯಾಯ–3** | **ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳು** | 112–203 |
| 3.1. | ಕರ್ನಾಟಕದ ಸಮಗ್ರ ಚಿತ್ರಣ | 112–116 |
| 3.2. | ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನೆಲೆ | 116–125 |
| 3.3. | ಚಳ್ಳಕೆರೆ ತಾಲ್ಲೂಕು ಹಾಗೂ ವಿಧಾನಸಭಾ ಕ್ಷೇತ್ರದ ಪರಿಚಯ | 125–128 |
| 3.4. | ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಇತಿಹಾಸ | 129–147 |
| 3.5. | ಮತದಾನ ನಡವಳಿಕೆ | 147–158 |
| 3.6. | ಚಳ್ಳಕೆರೆ ಮತದಾರರ ನಡವಳಿಕೆ | 159–168 |
| 3.7. | ಮೊಳಕಾಲ್ಮೂರು ತಾಲ್ಲೂಕು ಹಾಗೂ ವಿಧಾನಸಭಾ ಕ್ಷೇತ್ರದ ಪರಿಚಯ | 168–173 |

| | | |
|---|---|---|
| 3.8. | ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಇತಿಹಾಸ | 173–193 |
| 3.9. | ಮೊಳಕಾಲ್ಮೂರು ಮತದಾರರ ನಡವಳಿಕೆ | 194–203 |
| **ಅಧ್ಯಾಯ–4** | **ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ನಾಯಕತ್ವ** | 204–294 |
| 4.1. | ನಾಯಕತ್ವ | 204–212 |
| 4.2. | ಚಳ್ಳಕೆರೆ ಶಾಸಕರ ಪರಿಚಯ ಮತ್ತು ಕೊಡುಗೆಗಳು | 212–257 |
| 4.3. | ಮೊಳಕಾಲ್ಮೂರು ಶಾಸಕರ ಪರಿಚಯ ಮತ್ತು ಕೊಡುಗೆಗಳು | 258–275 |
| 4.4. | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರದ ಮತದಾರರ ದೃಷ್ಟಿಯಲ್ಲಿ ಶಾಸಕರ ನಾಯಕತ್ವ | 275–294 |
| **ಅಧ್ಯಾಯ–5** | **ವಿಧಾನಸಭೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ಪಾತ್ರ** | 295–345 |
| 5.1. | ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ಚರ್ಚೆ | 295–311 |
| 5.2. | ಪರಿಶಿಷ್ಟರ ಹಿತರಕ್ಷಣೆ ಕುರಿತು ಚರ್ಚೆಗಳು | 311–320 |
| 5.3. | ರಾಜ್ಯದ ಪ್ರಮುಖ ವಿಷಯಗಳ ಮೇಲಿನ ಚರ್ಚೆ | 320–345 |
| **ಅಧ್ಯಾಯ –6** | **ಉಪಸಂಹಾರ ಮತ್ತು ಸಲಹೆಗಳು** | 346–356 |
| **ಅನುಬಂಧ–1** | **ಪರಾಮರ್ಶನ ಗ್ರಂಥಗಳು** | 357–368 |
| **ಅನುಬಂಧ–2** | ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಸಿದ್ಧಪಡಿಸಿದ ಪ್ರಶ್ನಾವಳಿ<br>ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳ ಶಾಸಕರಿಗೆ ಸಿದ್ಧಪಡಿಸಿದ ಸಂದರ್ಶನ ಅನುಸೂಚಿ | 369–382 |
| **ಅನುಬಂಧ–3** | ಛಾಯಚಿತ್ರಗಳು | |

## ಅಧ್ಯಾಯ–1

### 1.1. ಪೀಠಿಕೆ

ಭಾರತೀಯ ಸಮಾಜದ ಜಾತಿವ್ಯವಸ್ಥೆಯ ಸಂಪ್ರದಾಯ, ಶ್ರೇಣೀಕರಣಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ತಮ್ಮ ಗುಲಾಮರೆಂದು ಭಾವಿಸಿ ವರ್ತಿಸುವುದನ್ನು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಯಾವುದೋ ಒಂದು ಕೆಳಸಮುದಾಯದ ವ್ಯಕ್ತಿ ತಮ್ಮ ಸಮಾನಕ್ಕೆ ಅಧಿಕಾರ ಚಲಾಯಿಸುವುದನ್ನು ಮೇಲ್ವರ್ಗಗಳು ಸಹಿಸುವುದು ಕಷ್ಟಸಾಧ್ಯದ ವಿಚಾರವಾಗಿದೆ. ಪ್ರಜಾಪ್ರಭುತ್ವವು ಎಲ್ಲರಿಗೂ ಸಮಾನ ಅವಕಾಶಗಳನ್ನು ಸಮಾನತೆ ತಳಪಾಯದ ಮೇಲೆ ಕೊಟ್ಟಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ಇಂದು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ರಾಜಕೀಯ ವ್ಯವಸ್ಥೆಯಲ್ಲಿ ವ್ಯಕ್ತಿಯ ಗೆಲುವಿಗೆ ಕೇವಲ ಜಾತಿ ಮತ್ತು ಹಣವೇ ಮುಖ್ಯ ಪಾತ್ರ ವಹಿಸುತ್ತವೆಂಬುದನ್ನು ಇಂದಿನ ಚುನಾವಣೆಗಳು ಬಹಿರಂಗಗೊಳಿಸಿವೆ. ಅದರಲ್ಲೂ ಮೇಲ್ವರ್ಗದವರು, ಬಂಡವಾಳಶಾಹಿಗಳು ರಾಜಕೀಯ ವ್ಯವಸ್ಥೆಯ ಹಕ್ಕುದಾರರಂತೆ ವರ್ತಿಸುತ್ತಿರುವುದನ್ನು ಗಮನಿಸಬಹುದು. ರಾಜಕೀಯ ಕನಿಷ್ಠ ಘಟಕವಾದ ಗ್ರಾಮಪಂಚಾಯಿತಿಯಿಂದ ಹಿಡಿದು ಲೋಕಸಭೆಯವರೆಗೂ ಇವುಗಳ ಅಟ್ಟಹಾಸವನ್ನೇ ಕಾಣುತ್ತಿದ್ದೇವೆ. ಕೇವಲ ಮೀಸಲಾತಿ ಕಾರಣಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ಹಾಗೂ ಮಹಿಳಾ ಸದಸ್ಯರು ರಾಜಕೀಯ ಪ್ರವೇಶ ಮಾಡುವರಾಗಿ ಅವರು ಮೇಲ್ವರ್ಗದವರ ಕೈಗೊಂಬೆಗಳಂತೆ ವರ್ತಿಸಬೇಕಾದ ಅನಿವಾರ್ಯತೆಯಿದೆ.

ಮೂಲಭೂತ ಹಕ್ಕುಗಳು ಪ್ರತಿಯೊಬ್ಬ ಭಾರತೀಯನಿಗೆ ತಲುಪಬೇಕೆಂಬುದೇ ಸಂವಿಧಾನದ ಆಶಯವಾಗಿದೆ. ಆದರೆ ಸಮಾಧಾನಕರ ವಿಚಾರವೆಂದರೆ ಸಂವಿಧಾನದ ಶಾಸನಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಾದ ಅನಿವಾರ್ಯತೆಯಿರುವುದರಿಂದ ಭಾರತೀಯ ರಾಜಕೀಯ ವ್ಯವಸ್ಥೆ ಅಲ್ಪಮಟ್ಟಿಗಾದರೂ ಬದಲಾವಣೆಗೊಂಡಿರುವುದಂತೂ ಸತ್ಯ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಮ್ಮ ಸಂವಿಧಾನದ 243ನೇ ಡಿ ವಿಧಿಯಲ್ಲಿ ಗ್ರಾಮೀಣ ಸ್ಥಳೀಯ ಸರ್ಕಾರಗಳಲ್ಲಿ ಮೀಸಲಾತಿ, 243ನೇ ಟಿ ವಿಧಿ ನಗರ ಸ್ಥಳೀಯ ಸರ್ಕಾರಗಳಲ್ಲಿ ಮೀಸಲಾತಿ, 330ನೇ ವಿಧಿ ಲೋಕಸಭೆಯಲ್ಲಿ ಮೀಸಲಾತಿ, 332ನೇ ವಿಧಿ ವಿಧಾನಸಭೆಗಳಲ್ಲಿ ಮೀಸಲಾತಿ ಕೊಟ್ಟಿರುವುದು ರಾಜಕೀಯಕ್ಕೆ ವರದಾನವಾಗಿ ಪರಿಣಮಿಸಿದೆ.[1] ಭಾರತ ಸರ್ಕಾರ 2002ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

[1] ಪ್ರೊ. ಮಹೇಶ, ಮೀಸಲಾತಿ ಮತ್ತು ಭವಿಷ್ಯದ ಪಥಗಳು ವಿಮೋಚನಾ ಪ್ರಕಾಶನ, ಚಿತ್ರದುರ್ಗ, 2003, ಪು.ಸಂ.72.

ಪಂಗಡದವರಿಗೆ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಮೀಸಲುಕ್ಷೇತ್ರಗಳನ್ನು ಗುರುತಿಸುವ ಸಲುವಾಗಿ *ಡಿಲಿಮಿಟೇಶನ್ ಸಮಿತಿಯನ್ನು* ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ **ಕುಲದೀಪ್ ಸಿಂಗ್** ಅವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಯಿತು. ಈ ಆಯೋಗವು 2001ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 2008ರಿಂದ ಪರಿಶಿಷ್ಟ ಜಾತಿಗೆ ಲೋಕಸಭೆಯಲ್ಲಿ 5 ಸ್ಥಾನ, ವಿಧಾನಸಭೆಯಲ್ಲಿ 36 ಸ್ಥಾನಗಳನ್ನು ಮತ್ತು ಪರಿಶಿಷ್ಟ ಪಂಗಡದವರಿಗೆ ಲೋಕಸಭೆಯಲ್ಲಿ 2 ಸ್ಥಾನ, ವಿಧಾನಸಭೆಯಲ್ಲಿ 15 ಸ್ಥಾನಗಳನ್ನು 2026ರವರೆಗೆ ಕಲ್ಪಿಸಲಾಗಿದೆ.[2] ಕರ್ನಾಟಕದ 13ನೇ ವಿಧಾನಸಭಾ ಚುನಾವಣೆಯಲ್ಲಿ 224 ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದವರ ಪಾಲು 17 ಸ್ಥಾನಗಳು ಹಾಗೂ 14ನೇ ವಿಧಾನಸಭಾ ಚುನಾವಣೆಯಲ್ಲಿ 18 ಸ್ಥಾನಗಳು ಮಾತ್ರ, ಅದರಲ್ಲೂ 15 ಸ್ಥಾನಗಳು ಮೀಸಲಾತಿ ಇರುವುದರಿಂದ ಬಂದಿದೆ. ಮೀಸಲಾತಿಯನ್ನು ಹೊರತುಪಡಿಸಿದರೆ ಇನ್ನು ಉಳಿದ 173 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದ ಸ್ಥಾನಗಳು 13ನೇ ವಿಧಾನಸಭಾ ಚುನಾವಣೆಯಲ್ಲಿ ಎರಡು ಮತ್ತು 14ನೇ ವಿಧಾನಸಭಾ ಚುನಾವಣೆಯಲ್ಲಿ 3 ಕ್ಷೇತ್ರಗಳನ್ನು ಪಡೆದಿದೆ. ಒಂದು ವೇಳೆ ಈ ವರ್ಗಕ್ಕೆ ರಾಜಕೀಯ ಮೀಸಲಾತಿಯನ್ನು ಕಲ್ಪಿಸದಿದ್ದಲ್ಲಿ ರಾಜಕೀಯದಿಂದ ತುಂಬಾ ದೂರ ಸರಿಯಬೇಕಾಗಿತ್ತು. ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರದಲ್ಲಿ 2, ವಿಧಾನಸಭಾ ಕ್ಷೇತ್ರದಲ್ಲಿ 15 ಕ್ಷೇತ್ರಗಳ ಮೀಸಲಾತಿ ದೊರೆತಿವೆಯಾದರೂ ಸ್ವತಂತ್ರವಾಗಿ ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂಬುದು ವಿಪರ್ಯಾಸದ ಸಂಗತಿಯಾಗಿದೆ.

ಸಂವಿಧಾನಬದ್ಧವಾಗಿರುವ ವಿಧಾನಸಭಾ ಮೀಸಲಾತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ಚುನಾಯಿತರಾದ ಪರಿಶಿಷ್ಟ ಪಂಗಡದ ಸದಸ್ಯರು ರಾಜಕೀಯ ಕಾರ್ಯ ಚಟುವಟಿಕೆಗಳಲ್ಲಿ ಎಷ್ಟು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ?. ಮೀಸಲಾತಿ ಸೌಲಭ್ಯ ಎಷ್ಟರ ಮಟ್ಟಿಗೆ ಸದುಪಯೋಗವಾಗಿದೆ?. ಈ ಪ್ರತಿನಿಧಿಗಳು ಶಾಸನ ಸಭೆಗಳಲ್ಲಿ ತಮ್ಮ ಕ್ಷೇತ್ರದ ಅಭಿವೃದ್ಧಿಯ ವಿಷಯಗಳ ಬಗ್ಗೆ ಯಾವ ರೀತಿ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ?. ಮುಖ್ಯವಾಗಿ ಕೆಳವರ್ಗದವರಾದ ಪರಿಶಿಷ್ಟ ಪಂಗಡದ ಸಶಕ್ತೀಕರಣಕ್ಕೆ ಈ ಮೀಸಲಾತಿ ವ್ಯವಸ್ಥೆ ಹೇಗೆ ಪೂರಕವಾಗಿದೆ? ಅದರ ಸಾಧಕ ಬಾಧಕಗಳೇನು? ಎಂಬುದನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ 13 ಮತ್ತು 14ನೇ ವಿಧಾನಸಭೆಗಳಲ್ಲಿ ಮೀಸಲುಕ್ಷೇತ್ರದಿಂದ ಚುನಾಯಿತಗೊಂಡ ಹಾಗೂ ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಗೊಂಡ

[2] Changing Face of Electoral India: Delimitation 2008. Delimitation Commission of India, New Delhi, 2008. Pp.-598.

ಪರಿಶಿಷ್ಟ ಪಂಗಡದ ಸದಸ್ಯರು ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆ ಎಂಬುದನ್ನು ಕುರಿತು ಈ ಅಧ್ಯಯನದಲ್ಲಿ ಅರಿಯುವ ಪ್ರಯತ್ನ ಮಾಡಲಾಗಿದೆ.

### 1.1.1. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನ

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ವೇದಗಳ ಕಾಲದಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ತುಳಿತಕ್ಕೆ ಒಳಗಾಗಿರುವ ಅಥವಾ ಹಿಂದುಳಿದ ಜನಸಮುದಾಯವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಎಂಬ ಶೀರ್ಷಿಕೆಯಡಿಯಲ್ಲಿ ಗುರುತಿಸಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರನ್ನು ಸ್ವಾತಂತ್ರ್ಯಪೂರ್ವದಲ್ಲಿ ಅಸ್ಪೃಶ್ಯರು, ನಿಮ್ನವರ್ಗದವರು, ಪಂಚಮರು, ಅಂತ್ಯರು ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಯಾವುದು ಎಂಬುದನ್ನು ನಿರ್ಧರಿಸುವುದಕ್ಕೆ ಯಾವುದೇ ಒಂದು ನಿಖರವಾದ ಕಾನೂನಾತ್ಮಕ ಹಾಗೂ ಅಧಿಕಾರಯುಕ್ತವಾದ ಮಾನದಂಡಗಳು ಇರಲಿಲ್ಲ.[3]

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 1881ರಲ್ಲಿ ನಡೆದ ಸಾಮಾನ್ಯ ಜನಗಣತಿಯಲ್ಲಿ ಭಾರತದಲ್ಲಿನ ಜಾತಿಗಳನ್ನು ಮೇಲು–ಕೀಳು ಎಂದಾಗಲಿ ಅಥವಾ ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂದಾಗಲಿ ವಿಭಾಗಿಸುವ ಪ್ರಯತ್ನ ನಡೆದಿರುವುಲ್ಲ. ಮೇಲು ಮತ್ತು ಕೀಳು ಯಾರು ಎಂಬುದನ್ನು ನಿರ್ಧರಿಸುವಲ್ಲಿ ಆ ಸಂದರ್ಭದಲ್ಲಿಯೇ ಸಾಕಷ್ಟು ಗೊಂದಲಮಯವಾದ ವಾತಾವರಣ ಸೃಷ್ಟಿಯಾಗಿತ್ತು.[4] ಆದರೆ 1911ರಲ್ಲಿ ನಡೆದ ಜನಗಣತಿಯಲ್ಲಿ ಸ್ಪೃಶ್ಯರಿಂದ ಅಸ್ಪೃಶ್ಯರನ್ನು ಹೊರತುಪಡಿಸಿ ಗುರುತಿಸಲು ಬೇಕಾದ ಹತ್ತು ಸೂತ್ರಗಳನ್ನು ವಾಸ್ತವಿಕವಾಗಿ ನಿಬಂಧನೆಗೊಳಪಡಿಸಲಾಯಿತು. ಅವುಗಳೆಂದರೆ,

- ಬ್ರಾಹ್ಮಣ ಶ್ರೇಷ್ಠತೆಯನ್ನು ನಿರಾಕರಿಸುವವರು
- ಬ್ರಾಹ್ಮಣ ಅಥವಾ ಹಿಂದೂ ಗುರುಗಳಿಂದ ಮಂತ್ರವನ್ನು ಸ್ವೀಕರಿಸದವರು
- ವೇದಗಳ ಪ್ರಾಮಾಣ್ಯವನ್ನು ನಿರಾಕರಿಸುವವರು
- ಪ್ರಮುಖ ಹಿಂದೂ ದೇವತೆಗಳನ್ನು ಪೂಜೆ ಮಾಡದವರು

---

[3]ದಾಷ್‌ಕಿನ್, ಲೀಲಾ, ಷೆಡ್ಯೂಲ್ಡ್ ಕ್ಯಾಸ್ಟ್ ಪಾಲಿಟಿಕ್ಸ್ ಆ್ಯಂಡ್ ಅನ್‌ಟಚಬಲ್ಸ್ ಇನ್ ಕಾಂಟೆಂಪೊರರಿ ಇಂಡಿಯಾ, (ಎಡಿಟರ್ಸ್) ಮಿಕಲಾಲ್ ಮಹಾರ್, ಯೂನಿವರ್ಸಿಟಿ ಆಫ್ ಅರಿಜೋನಾ ಪ್ರೆಸ್ ಡೇವ್‌ಸನ್, 1972.

[4]ಡಾ. ಬಿ.ಆರ್. ಅಂಬೇಡ್ಕರ್, ಅಸ್ಪೃಶ್ಯರು ಅಥವಾ ಭಾರತದ ಕೊಳಗೇರಿಗಳ ಮಕ್ಕಳು ಮತ್ತು ಇತರೆ ಪ್ರಬಂಧಗಳು, ಕರ್ನಾಟಕ ಸರ್ಕಾರ, ಸಂಪುಟ–5, ಪು.ಸಂ.312.

- ಕಟ್ಟಾ ಬ್ರಾಹ್ಮಣರಿಂದ ಸೇವೆ ಪಡೆಯದಿದ್ದವರು
- ಬ್ರಾಹ್ಮಣ ಪೂಜಾರಿಗಳನ್ನು ಹೊಂದಿರದೆ ಇರುವವರು
- ಸಾಮಾನ್ಯ ಹಿಂದೂ ದೇವಾಲಯಗಳಿಗೆ ಪ್ರವೇಶವಿಲ್ಲದವರು
- ಮಾಲಿನ್ಯ ಉಂಟುಮಾಡುವವರು
- ಸತ್ತವರನ್ನು ಹೂಳುವವರು
- ಗೋವನ್ನು ಪೂಜಿಸದವರು ಮತ್ತು ಗೋಮಾಂಸವನ್ನು ತಿನ್ನುವವರು

ಮೇಲಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಮೊದಲ ಬಾರಿಗೆ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂದು ತೀರ್ಮಾನಿಸುವ ಪ್ರಯತ್ನ ನಡೆಸಲಾಯಿತು.[5]

1930ರಲ್ಲಿ ಬ್ರಿಟಿಷ್ ಸರ್ಕಾರ ಪ್ರಥಮವಾಗಿ ಭಾರತದಲ್ಲಿನ ಪರಿಶಿಷ್ಟರ ಜಾತಿವಾರು ಪಟ್ಟಿಯನ್ನು ಪ್ರಕಟಿಸಿತು. ಇದಕ್ಕೆ ಸಂಬಂಧಿಸಿದಂತೆ 1927ರಲ್ಲಿ ಭಾತರಕ್ಕೆ ಭೇಟಿ ನೀಡಿದ್ದ ಸೈಮನ್ ಆಯೋಗ ಭಾರತದಲ್ಲಿ ಒಟ್ಟು 4 ಕೋಟಿ 45 ಲಕ್ಷ ಪರಿಶಿಷ್ಟ ಜನಸಂಖ್ಯೆ ಇದೆ ಎಂಬ ಅಂದಾಜನ್ನು ರೂಪಿಸಿತು.[6]

ಸೈಮನ್ ಕಮಿಷನ್ ವರದಿಯನ್ನು ಆಧರಿಸಿ ಭಾರತದಲ್ಲಿ ಜಾರಿಗೆ ಬಂದ ಭಾರತ ಕೇಂದ್ರ ಕಾಯಿದೆ–1935ರಲ್ಲಿ ಮೊದಲ ಬಾರಿಗೆ ಭಾರತದಲ್ಲಿ ಅಸ್ಪೃಶ್ಯವರ್ಗ ಮತ್ತು ಗುಡ್ಡಗಾಡಿನಲ್ಲಿ ವಾಸವಾಗಿದ್ದ ಹಿಂದುಳಿದ ಜನರನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಎಂದು ಹೆಸರಿಸಲಾಯಿತು.[7]

ಭಾರತ ಸ್ವಾತಂತ್ರ್ಯನಂತರ ರಚನೆಗೊಂಡ ಸಂವಿಧಾನದಲ್ಲಿ 341 ಮತ್ತು 342ನೇ ವಿಧಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳೆಂದು 1950ರಲ್ಲಿ ಅಧಿಕೃತವಾಗಿ ಘೋಷಿಸಲಾಯಿತು. ಆದರೆ 1956ರಲ್ಲಿ ಜಾತಿವಾರು ವಿವರಗಳನ್ನು ಮೊದಲ ಬಾರಿಗೆ ಪ್ರಕಟಿಸಲಾಯಿತು. ಈ ವಿವರದಲ್ಲಿ ಕೇಂದ್ರ ಸರ್ಕಾರ 11,000 ಜಾತಿ ಮತ್ತು ಉಪಜಾತಿಗಳನ್ನು ಹಿಂದುಳಿದ ಅಥವಾ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜಾತಿಗಳೆಂದು ಪ್ರಕಟಿಸಿತು.[8] ಇದೇ ಸಂದರ್ಭದಲ್ಲಿ ರಾಜ್ಯಗಳ ಪುನರ್ ವಿಂಗಡಣೆಯಾದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಪರಿಶಿಷ್ಟರ ಜನಸಂಖ್ಯೆ ಶೇ.

---

[5] ಸೆಲ್ವಿನಾಥನ್ ಎಸ್. ಸೋಶಿಯಲ್ ಸ್ಟೇಟಸ್ ಆಫ್ ದ ಷೆಡ್ಯೂಲ್ಡ್ ಕ್ಯಾಸ್ಟ್, ಆಶಿಷ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 1999.

[6] ಡಾ. ಬಿ.ಆರ್. ಅಂಬೇಡ್ಕರ್ ಆ್ಯಂಡ್ ಅಂಟಚೆಬಲ್ಸ್ ಆರ್ ಇಂಡಿಯನ್ ಸ್ಲಮ್ ಚಿಲ್ಡ್ರನ್ ಆ್ಯಂಡ್ ಅದರ್ ಎಸ್ಸೇಸ್, ಅಧ್ಯಯನ ವಿಕಾಸ ಕೇಂದ್ರ, ಬಾಂಬೆ.

[7] ಕಮಲಾಕ್ಷ ಪಿ. ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1994, ಪು.ಸಂ 16.

[8] ಸೂರ್ಯನಾಥ ವಿ. ಕಾಮತ್, ಕರ್ನಾಟಕ ಗೆಜೆಟಿಯರ್ ಪಾರ್ಟ್–1, ಗವರ್ನಮೆಂಟ್ ಆಫ್ ಕರ್ನಾಟಕ, 1984.

21ರಷ್ಟಿದ್ದು, ಒಕ್ಕಲಿಗರನ್ನು ಬಿಟ್ಟರೆ ಇದು 2ನೇ ಬಹುಸಂಖ್ಯಾತ ವರ್ಗವಾಗಿತ್ತು. ಈ ವರ್ಗದ ಜನರನ್ನು ಪಂಚಮರು, ದಲಿತರು ಎಂದು ಕರೆಯುವುದು ರೂಢಿಯಲ್ಲಿತ್ತು.[9] ರಾಜ್ಯ ಪುನರ್ ವಿಂಗಡಣೆಯ ನಂತರ ರಾಜ್ಯ ಸರ್ಕಾರದಿಂದ ಪ್ರಕಟಗೊಂಡ ಪರಿಷ್ಕೃತ ಪಟ್ಟಿಯಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಬೋವಿ, ಲಂಬಾಣಿ, ಕೊರಚ, ಕೊರಮ ಈ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಗುರುತಿಸಲಾಯಿತು.[10] ನಂತರ 1976ರಲ್ಲಿ ರಾಜ್ಯ ಸರ್ಕಾರ ಹೊರಡಿಸಿದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆದೇಶದಲ್ಲಿ(ಆದೇಶ ಸಂಖ್ಯೆ 108ನೇ 1976, ದಿನಾಂಕ 18, ಸೆಪ್ಟೆಂಬರ್ 1976) ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳು, ಪರಿಶಿಷ್ಟ ಪಂಗಡದಲ್ಲಿ 52 ಉಪಜಾತಿಗಳಿವೆ ಎಂದು ಗುರುತಿಸಲಾಯಿತು.[11]

### 1.1.2. **ಪರಿಶಿಷ್ಟ ಜಾತಿ**

ಭಾರತೀಯ ಸಮಾಜದಲ್ಲಿ ಸಾಮಾಜಿಕ ಸ್ತರವಿನ್ಯಾಸದ ಅತ್ಯಂತ ಕೆಳಮಟ್ಟದಲ್ಲಿರುವ ಜಾತಿಯ ಜನರನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಗಿದೆ. ಇವರನ್ನು ಸಾಮಾನ್ಯವಾಗಿ ಅಸ್ಪೃಶ್ಯರು, ಅತಿಶೂದ್ರರು, ಪಂಚಮರು, ಅಂತ್ಯಜರು, ಹರಿಜನರು ಇತ್ಯಾದಿ ಹೆಸರುಗಳಿಂದ ಕರೆಯುವುದು ಚಾಲ್ತಿಯಲ್ಲಿತ್ತು. ಕರ್ನಾಟಕದಲ್ಲಿ ಇವರನ್ನು ಹೊಲೆಯ, ಮಾದಿಗ, ಆದಿದ್ರಾವಿಡ, ಆದಿಕರ್ನಾಟಕ, ಚಲವಾದಿ, ಕೊರಮ, ಕೊರಚ, ಚಮ್ಮಾರ, ಭೋವಿ, ಲಂಬಾಣಿ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ.[12] 1955ರ ಮೈಸೂರು ರಾಜ್ಯದ ಜನಗಣತಿಯ ಪ್ರಕಾರ ಆರು ಜಾತಿಗಳನ್ನು ಮಾತ್ರ ಪರಿಶಿಷ್ಟ ಜಾತಿಗಳೆಂದು ಪರಿಗಣಿಸಲಾಗಿತ್ತು. ಅವುಗಳಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಲಂಬಾಣಿ(ಬಂಜಾರ), ಭೋವಿ(ವಡ್ಡ), ಕೊರಮ, ಕೊರಚ ಈ ಜಾತಿಗಳಿದ್ದವು.[13] ಪರಿಶಿಷ್ಟ ಜಾತಿಗಳು ಎಂಬುದಕ್ಕೆ 1928ರಲ್ಲಿ ಭಾರತಕ್ಕೆ ಭೇಟಿ ನೀಡಿದ ಸೈಮನ್ ಆಯೋಗದ ವರದಿಯ ಪ್ರಕಾರ ಜಾರಿಗೆ ಬಂದ 1935ರ ಭಾರತ ಸರ್ಕಾರ ಕಾಯಿದೆಯಲ್ಲಿ ಮೊದಲ ಬಾರಿಗೆ ಕಾನೂನಾತ್ಮಕವಾಗಿ ನೆಲೆಗಳನ್ನು ದೊರಕಿಸಿಕೊಡಲಾಯಿತು. ಭಾರತ ಸ್ವಾತಂತ್ರ್ಯ ನಂತರ ರಚನೆಗೊಂಡ ಭಾರತ ಸಂವಿಧಾನ 341ನೇ ವಿಧಿಯನ್ವಯ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಸಂವಿಧಾನಾತ್ಮಕವಾದ ಚೌಕಟ್ಟನ್ನು ಕಲ್ಪಿಸಲಾಯಿತು.

---

[9] ಚಂದ್ರಶೇಖರ್ ಎಸ್. ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಚಳವಳಿಗಳು, ಅಂಕಣ ಪ್ರಕಾಶನ, ಬೆಂಗಳೂರು, 1940.

[10] ಉಷಾ ರಾವ್ ಎನ್. ಜೆ. ಡಿಪ್ರೆಸ್ಡ್ ಕ್ಯಾಸ್ಟ್ ಇನ್ ಇಂಡಿಯಾ, ಚಿಂಗ್ ಪಬ್ಲಿಷರ್ಸ್, ಅಲಹಾಬಾದ್, 1981.

[11] ಸೆನ್ಸಸ್ ಆಫ್ ಇಂಡಿಯಾ, ಕರ್ನಾಟಕ ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್, ಪಾರ್ಟ್–ಬಿ, ಸೀರಿಸ್ 2, ಡೈರಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್ಸ್, ಕರ್ನಾಟಕ, 2001.

[12] ರಾಜಶೇಖರ ಶೆಟ್ಟಿ ವಿ. ಟಿ. ದಲಿತ್ ಮೂಮೆಂಟ್ ಇನ್ ಕರ್ನಾಟಕ, ದ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, 1978.

[13] ಸೆನ್ಸಸ್ ಆಫ್ ಇಂಡಿಯಾ, ಕರ್ನಾಟಕ ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್, ಪಾರ್ಟ್–ಬಿ(1), ಸೀರಿಸ್ 2, ಡೈರಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್ಸ್, ಕರ್ನಾಟಕ, 1991.

### 1.1.3. ಪರಿಶಿಷ್ಟ ಪಂಗಡಗಳು

ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ಕಂಡುಬರುವ ಅನಕ್ಷರಸ್ಥರನ್ನು ಹಾಗೂ ನಾಗರಿಕತೆಯಲ್ಲಿ ಹಿಂದುಳಿದ ಜನಸಮುದಾಯವನ್ನು ಒಳಗೊಂಡಂತೆ ಸಾಮಾಜಿಕ ಜೀವನವನ್ನು ರೂಪಿಸಿಕೊಂಡ ಒಂದು ಗುಂಪನ್ನು ಪರಿಶಿಷ್ಟ ಪಂಗಡಗಳೆಂದು ಕರೆಯಲಾಗುತ್ತದೆ. ಈ ಜನಸಮುದಾಯ ಹೆಚ್ಚಾಗಿ ನಾಗರಿಕ ಸಮಾಜದಿಂದ ದೂರವಿರುವ ಅರಣ್ಯಪ್ರದೇಶಗಳಲ್ಲಿ ಗಿರಿ–ಶಿಖರಗಳಲ್ಲಿ, ಕಣಿವೆಗಳಲ್ಲಿ ವಾಸಿಸುವ ಪರಿಪಾಟ ಹೆಚ್ಚಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಭಾರತ ಸಂವಿಧಾನದ 342ನೇ ವಿಧಿಯ ಅನ್ವಯ ಈ ಸಮುದಾಯನ್ನು ಪರಿಶಿಷ್ಟ ಪಂಗಡ ಎಂದು ಗುರುತಿಸಲಾಗಿದ್ದು ಇವರಲ್ಲಿ ಸುಮಾರು 52 ಉಪಜಾತಿಗಳನ್ನು ಗುರುತಿಸಲಾಗಿದೆ. ಅವುಗಳನ್ನು ವಾಲ್ಮೀಕಿ, ನಾಯಕ, ಬೇಡ, ಬಿಲ್ಲರು, ಗೌಂಡರು, ಕೊರಗ, ಕಾಡುಕುರುಬರು, ಜೇನುಕುರುಬರು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಈ ಜನಸಮುದಾಯಕ್ಕೆ ಸಂವಿಧಾನದ 342 ನೇ ವಿಧಿಯನ್ವಯ ಹಲವು ವಿಶೇಷ ಅಭಿವೃದ್ಧಿಪರ ಯೋಜನೆಗಳನ್ನು ಭಾರತ ಸರ್ಕಾರ ಕೈಗೊಂಡ ನಂತರ ಹೆಚ್ಚು ಹೆಚ್ಚು ಜನರು ಒಂದೆಡೆ ವಾಸಿಸುವ ಒಂದು ಪ್ರಕ್ರಿಯೆ ಆರಂಭಗೊಂಡಿದೆ.[14]

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವೇದಗಳ ಕಾಲದಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಈ ಜನಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸ್ವಾತಂತ್ರ್ಯ ನಂತರ ಭಾರತ ಸಂವಿಧಾನದಲ್ಲಿ ಶಿಕ್ಷಣ, ಉದ್ಯೋಗ, ಆಡಳಿತ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಕಾನೂನಾತ್ಮಕವಾಗಿ ವಿಶೇಷ ಸವಲತ್ತುಗಳನ್ನು ಕಲ್ಪಿಸಲಾಯಿತು. ಅವುಗಳೆಂದರೆ,

- ಅನುಚ್ಛೇದ 46ರಲ್ಲಿ ರಾಜ್ಯ ನಿರ್ದೇಶಕಾತ್ಮಕ ತತ್ವಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಶೈಕ್ಷಣಿಕ, ಆರ್ಥಿಕ ಹಿತಾಸಕ್ತಿ ಕಾಪಾಡುವುದು. ಈ ಉದ್ದೇಶ ಸಾಧನೆಗಾಗಿ ರಾಷ್ಟ್ರದಲ್ಲಿನ ಪ್ರತಿಯೊಂದು ರಾಜ್ಯ ಸರ್ಕಾರಗಳು ಈ ವರ್ಗಗಳ ಅಭಿವೃದ್ಧಿಗಾಗಿ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಸಾಮಾಜಿಕ ನ್ಯಾಯವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

---

[14] ಘನಶ್ಯಾಮ್ ಷಾ. ಪಾಲಿಟಿಕ್ಸ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಆ್ಯಂಡ್ ಷೆಡ್ಯೂಲ್ಡ್ ಟ್ರೈಬ್ಸ್, ಆದಿವಾಸಿ ಆ್ಯಂಡ್ ಹರಿಜನ್ ಲೀಡರ್ಸ್ ಆಫ್ ಗುಜರಾತ್, ಬಾಂಬೆ, 1975.

- ಅನುಚ್ಛೇದ 330ರ ಪ್ರಕಾರ ಸಂಸತ್ತಿನ ಸದಸ್ಯ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲುಸ್ಥಾನಗಳನ್ನು ಕಾಯ್ದಿರಿಸಲಾಗಿದೆ.
- ಅನುಚ್ಛೇದ 332(1)ರ ಪ್ರಕಾರ ರಾಜ್ಯಗಳ ವಿಧಾನಸಭಾ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲುಸ್ಥಾನಗಳನ್ನು ಕಾಯ್ದಿರಿಸಲಾಗಿದೆ.
- ಅನುಚ್ಛೇದ 335ರ ಪ್ರಕಾರ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆಡಳಿತ ಸೇವೆಗಳ ಉದ್ಯೋಗಗಳನ್ನು ಭರ್ತಿ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲುಸೌಲಭ್ಯವನ್ನು ಕಲ್ಪಿಸಲಾಗಿದೆ.
- ಸಂವಿಧಾನದ 341 ಮತ್ತು 342ನೇ ವಿಧಿಯನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆ.

**1950ರ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನ**

ಪ್ರಸ್ತುತ ಅಧ್ಯಾಯದಲ್ಲಿ 1950ರ ನಂತರ ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನವನ್ನು ಗುರುತಿಸುವ ಉದ್ದೇಶದಿಂದ ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಹಂಚಿಕೆ ಪ್ರಮಾಣ, ಇತ್ಯಾದಿಗಳ ಜಿಲ್ಲಾವಾರು ವಿವರವನ್ನು ಸಂಗ್ರಹಿಸಿದ ಅಂಕಿ-ಅಂಶಗಳ ಆಧಾರದ ಮೇಲೆ ವಿವರಿಸುವ ಪ್ರಯತ್ನವನ್ನು ನಡೆಸಲಾಗಿದೆ.

1950ರ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಪ್ರತಿ ರಾಜ್ಯ ಸರ್ಕಾರಗಳು ಕೂಡಾ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು ಭಾರತ ಸಂವಿಧಾನದ ಅನುಚ್ಛೇದ 46ರ ಪ್ರಕಾರ ರಾಜ್ಯ ನಿರ್ದೇಶಕ ತತ್ವಗಳ ಅಡಿಯಲ್ಲಿ ನಿರ್ದೇಶಿಸಲಾಯಿತು. ಈ ರೀತಿಯ ನಿರ್ದೇಶನದ ನಂತರ ರಾಷ್ಟ್ರದಲ್ಲಿನ ಪ್ರತಿಯೊಂದು ರಾಜ್ಯ ಸರ್ಕಾರಗಳು ಕೂಡಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಹಲವಾರು ರೀತಿಯ ಪ್ರಯತ್ನಗಳನ್ನು ನಡೆಸಿದವು. ಈ ರೀತಿಯ ಪ್ರಯತ್ನವನ್ನು ಕರ್ನಾಟಕ ಸರ್ಕಾರವೂ ಸಹ 1950ರ ನಂತರದಲ್ಲಿ ನಿರಂತರವಾಗಿ ನಡೆಸುತ್ತಾ ಬಂದಿದೆ. ಹೀಗೆ ಕರ್ನಾಟಕದಲ್ಲಿ 1950ರಿಂದ ಪ್ರಸ್ತುತದವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳು ಪ್ರಮಾಣಾನುಸಾರವಾಗಿ ಯಾವ ಮಟ್ಟದಲ್ಲಿವೆ ಎಂಬುದನ್ನು ವಿಶ್ಲೇಷಣೆ ಮಾಡುವುದು ಅಗತ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ 1950ರಿಂದ 2011ರವರೆಗೆ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡಗಳ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ಈ ಕೆಳಗಿನ ಕೋಷ್ಟಕದ ಸಹಾಯದಿಂದ ತಿಳಿಯಬಹುದಾಗಿದೆ.

**ಕೋಷ್ಟಕ–1.1.**

**1950ರ ನಂತರ ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ**

| ವರ್ಷಗಳು | ಪ.ಜಾತಿ ಒಟ್ಟು ಜನಸಂಖ್ಯೆ | ಶೇಕಡವಾರು | ಪ.ಪಂಗಡದ ಒಟ್ಟು ಜನಸಂಖ್ಯೆ | ಶೇಕಡವಾರು |
|---|---|---|---|---|
| 1951 | 28.15.600 | 13.31 | 87.6 | 0.48 |
| 1961 | 31.17.232 | 13.22 | 1.92.092 | 0.81 |
| 1971 | 38.50.034 | 13.14 | 2.31.268 | 0.79 |
| 1981 | 55.07.491 | 15.07 | 18.25.203 | 4.91 |
| 1991 | 73.07.491 | 16.38 | 19.51.691 | 4.26 |
| 2001 | 85.63.930 | 16.2 | 34.63.986 | 6.55 |
| 2011 | 1,04,74,992 | 17.15 | 42,48,987 | 6.95 |

1. 1951 Mysore Backward Class Committee Final Report, Bangalore, Government of Mysore, Government Press, 1960-61.
2. 1961-1971, V. Suryakanth, Karnataka Gazetteer Part-1, Karnataka Government Publication,1989.
3. 1981-1991, 2001- Census of India, 2001 Primary Census Abstract General Population Series-II, Karnataka Part-B (1), Directorate of Census Operation in Karnataka.
4. 2001-2011, 2011- Census of India, 2011 Primary Census Abstract Data Highlights Karnataka-30, Directorate of Census Operation, Karnataka.

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ 1951ರಲ್ಲಿ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯ ಪ್ರಮಾಣ 28.15.600 ಇದ್ದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 13.31ರಷ್ಟಿದೆ. ಈ ಪ್ರಮಾಣ 1961ರಲ್ಲಿ 31,17,232 ಇದ್ದು ರಾಜ್ಯದ ಜನಸಂಖ್ಯೆಯ ಶೇ. 13.22, 1971ರಲ್ಲಿ 38,50,034 ಇದ್ದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 13.14, 1981ರಲ್ಲಿ ಶೇ. 15.07ರಷ್ಟಿದ್ದರೆ ನಂತರ ಕ್ರಮವಾಗಿ 1991 ಮತ್ತು 2001ರಲ್ಲಿ ಶೇ. 16.38 ಮತ್ತು 13.2 ಇರುವುದು ತಿಳಿದುಬರುತ್ತದೆ. ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಈ ಕೋಷ್ಟಕದಲ್ಲಿನ ದತ್ತಾಂಶಗಳನ್ನು ಅವಲೋಕಿಸಿದಾಗ 1951ರಲ್ಲಿ 13.31ರಷ್ಟಿದ್ದು ಜನಸಂಖ್ಯೆಯು 2001ರ ವೇಳೆಗೆ ಜನಸಂಖ್ಯೆ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ.

ಹಾಗೆಯೇ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಅವಲೋಕಿಸಿದಾಗ 1951ರಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 87.600 ಇದ್ದು ಇದರ ಶೇಕಡವಾರು ಪ್ರಮಾಣ 0.48ರಷ್ಟಿತ್ತು. ನಂತರ 1961ರಲ್ಲಿ ಶೇ. 0.81, 1971ರಲ್ಲಿ ಶೇ. 0.79, 1981ರಲ್ಲಿ ಶೇ. 4.91, 1991ರಲ್ಲಿ ಶೇ. 4.26, 2001ರಲ್ಲಿ ಶೇ. 6.6ರಷ್ಟಿರುವುದು ಕಂಡುಬರುತ್ತದೆ. ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಒಟ್ಟಾರೆ ಗಮನಿಸಿದಾಗ ಪರಿಶಿಷ್ಟ ಪಂಗಡದ ಜನಸಂಖ್ಯೆ 1981ರ ನಂತರ ಗಣನೀಯವಾಗಿ ಹೆಚ್ಚಾಗಿರುವುದು ಕಂಡುಬರುತ್ತದೆ. 1971ರಲ್ಲಿ 0.79ರಷ್ಟಿದ್ದ ಜನಸಂಖ್ಯೆ 1981ರ ವೇಳೆಗೆ ಶೇ. 4.91ರಷ್ಟು ಹೆಚ್ಚಾಗಲು ಕಾರಣವೇನು ಎಂಬುದನ್ನು ಅವಲೋಕಿಸಿದಾಗ ಕರ್ನಾಟಕ ಸರ್ಕಾರ ಕಾಲದಿಂದ ಕಾಲಕ್ಕೆ ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳ ಅನ್ವಯ ನಿಗದಿಪಡಿಸಿದ ನಿಯಮಗಳಿಂದಾಗಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣ ಗಣನೀಯವಾಗಿ ಹೆಚ್ಚಾಗಿರುವುದು ತಿಳಿದುಬರುತ್ತದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣವನ್ನು ತಿಳಿದ ನಂತರ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯು ಇಡೀ ರಾಜ್ಯಾದ್ಯಂತ ಜಿಲ್ಲಾವಾರು ಯಾವ ಪ್ರಮಾಣದಲ್ಲಿ ಹಂಚಿಕೆಯಾಗಿದೆ ಎಂಬುದನ್ನು ತಿಳಿಯುವ ಅಗತ್ಯ ಇದ್ದು ಅದಕ್ಕೆ ಸಂಬಂಧಿಸಿದ ಸಾಂಖ್ಯಿಕ ವಿವರವನ್ನು ಈ ಕೆಳಗಿನ ಕೋಷ್ಟಕದ ಮೂಲಕ ತಿಳಿಯಬಹುದಾಗಿದೆ.

**ಕೋಷ್ಟಕ–1.2.**

**2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಯ ಜಿಲ್ಲಾವಾರು ಜನಸಂಖ್ಯೆ**

| ಜಿಲ್ಲಾವಾರು ಜನಸಂಖ್ಯೆ | | | | |
|---|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ಒಟ್ಟು | ಗ್ರಾಮೀಣ | ನಗರ |
| 1 | ಬೆಂಗಳೂರು(ನಗರ) | 11,98,385 | 1,99,870 | 9,98,515 |
| 2 | ಬೆಂಗಳೂರು(ಗ್ರಾಮೀಣ) | 2,13,700 | 2,81,501 | 32,199 |
| 3 | ಬಾಗಲಕೋಟೆ | 3,19,149 | 2,38,014 | 81,135 |
| 4 | ಬೀದರ್ | 3,99,785 | 3,30,419 | 69,366 |
| 5 | ವಿಜಯಪುರ | 4,42,773 | 3,64,088 | 78,685 |
| 6 | ಬಳ್ಳಾರಿ | 5,17,409 | 3,66,016 | 1,51,393 |
| 7 | ಬೆಳಗಾವಿ | 5,77,418 | 4,48,375 | 1,29,043 |
| 8 | ಚಾಮರಾಜನಗರ | 2,59,445 | 2,21,650 | 37,795 |
| 9 | ಚಿಕ್ಕಮಗಳೂರು | 2,53,651 | 2,18,406 | 35,245 |
| 10 | ಚಿತ್ರದುರ್ಗ | 3,98,117 | 3,33,571 | 55,546 |
| 11 | ಚಿಕ್ಕಬಳ್ಳಾಪುರ | 3,12,565 | 2,72,891 | 39,674 |
| 12 | ದಕ್ಷಿಣ ಕನ್ನಡ | 1,48,178 | 1,02,737 | 45,441 |
| 13 | ದಾವಣಗೆರೆ | 3,92,595 | 3,15,926 | 76,669 |
| 14 | ಧಾರವಾಡ | 1,77,855 | 71,387 | 1,06,468 |
| 15 | ಗದಗ | 1,74,196 | 1,27,515 | 46,681 |
| 16 | ಗುಲ್ಬರ್ಗಾ | 6,48,782 | 4,89,697 | 1,59,085 |
| 17 | ಹಾಸನ | 3,45,031 | 2,98,013 | 47,018 |
| 18 | ಹಾವೇರಿ | 2,19,976 | 1,88,161 | 31,815 |
| 19 | ಕೋಲಾರ | 4,65,867 | 3,27,424 | 1,38,443 |
| 20 | ಕೊಪ್ಪಳ | 2,58,608 | 2,22,935 | 35,673 |
| 21 | ಮಂಡ್ಯ | 2,65,294 | 2,21,943 | 43,351 |
| 22 | ಕೊಡಗು | 73,584 | 64,618 | 8,966 |
| 23 | ಮೈಸೂರು | 5,36,643 | 3,80,388 | 1,56,255 |
| 24 | ರಾಯಚೂರು | 4,00,933 | 3,13,581 | 87,352 |
| 25 | ರಾಮನಗರ | 2,03,819 | 1,64,788 | 39,031 |
| 26 | ಶಿವಮೊಗ್ಗ | 3,08,158 | 2,25,316 | 82,842 |
| 27 | ತುಮಕೂರು | 5,06,901 | 4,29,957 | 76,944 |
| 28 | ಉತ್ತರ ಕನ್ನಡ | 1,16,431 | 78,859 | 37,572 |
| 29 | ಉಡುಪಿ | 75,429 | 55,996 | 19,433 |
| 30 | ಯಾದಗಿರಿ | 2,73,315 | 2,41,721 | 31,594 |
| | **ಒಟ್ಟು** | **1,04,74,992** | **74,95,763** | **29,79,229** |

**ಮೂಲ:** 2011ರ ಜನಗಣತಿ

ಕರ್ನಾಟಕ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆ 1,04,74,992ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವವರು 74,95,763ರಷ್ಟಿದೆ. ನಗರಪ್ರದೇಶದಲ್ಲಿ

ವಾಸಿಸುತ್ತಿರುವವರು 29,79,229 ರಷ್ಟಿದೆ. ಕರ್ನಾಟಕದ 30 ಜಿಲ್ಲೆಗಳಲ್ಲಿಯೂ ಈ ಜಾತಿಗಳ ಜನಸಂಖ್ಯೆ ಇರುವುದು ಕಂಡುಬರುತ್ತದೆ. 2011ರ ಜನಗಣತಿಯಲ್ಲಿ ಕಂಡುಬಂದಿರುವ ಅತ್ಯಂತ ಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆ ಹೊಂದಿರುವ ಜಿಲ್ಲೆಗಳು ಬೊಗಳೂರು ನಗರ 11,98,385, ಗುಲ್ಬರ್ಗಾ 6,48,782, ಬೆಳಗಾಂ 5,77,418, ತುಮಕೂರು 5,06,901, ಬಳ್ಳಾರಿ 5,17,409, ಜನಸಂಖ್ಯೆಯನ್ನು ಹೊಂದಿವೆ. ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿರುವ ಜಿಲ್ಲೆಗಳು ಕೊಡಗು 73,584, ಉಡುಪಿ 75,429, ಇನ್ನುಳಿದ ಎಲ್ಲ ಜಿಲ್ಲೆಗಳಲ್ಲೂ 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವುದು ಕಂಡುಬಂದಿದೆ. ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರ ಸಂಖ್ಯೆಯ ಪ್ರಮಾಣ 1000ಜನ ಪುರುಷರಿಗೆ 973 ಮಹಿಳೆಯರು ಇರುವುದು ಕಂಡುಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ 977 ಮಹಿಳೆಯರಿದ್ದಾರೆ. ನಗರಪ್ರದೇಶಗಳಲ್ಲಿ 761 ಜನರಿದ್ದಾರೆ. ಅತ್ಯಂತ ಕಡಿಮೆ ಲಿಂಗಾನುಪಾತವಿರುವುದು ಹಾವೇರಿ 946, ಬೀದರ್ 945, ವಿಜಯಪುರ 953, ದಾವಣಗೆರೆ 956, ಗುಲ್ಬರ್ಗಾ 952, ಚಿತ್ರದುರ್ಗ 956, ಚಾಮರಾಜನಗರ 957 ಇರುವುದು ಕಂಡುಬಂದಿದೆ. ಅನೇಕ ಜಿಲ್ಲೆಗಳಲ್ಲಿ ಮಹಿಳೆಯರು ಮತ್ತು ಪುರುಷರ ಸಂಖ್ಯೆಯಲ್ಲಿ ಅಂತರವಿರುವುದು ಕಂಡುಬಂದಿದೆ. ಈ ಗುಂಪಿನಲ್ಲಿರುವ 101 ಜಾತಿಗಳಲ್ಲಿ 51 ಜಾತಿಗಳು ಇಂದಿಗೂ ಸಹ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಅಲೆಮಾರಿ/ಅರೆ ಅಲೆಮಾರಿ ಆದಿವಾಸಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಇವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮೂಲಭೂತ ಸೌಲಭ್ಯಗಳಿಲ್ಲದೇ ಹಿಂದುಳಿದಿರುವುದು ಕಂಡುಬಂದಿದೆ.

**ಕೋಷ್ಟಕ–1.3.**

**2011ರ ಜನಗಣತಿಯಲ್ಲಿ ಪರಿಶಿಷ್ಟ ಪಂಗಡದ ಜಿಲ್ಲಾವಾರು ಜನಸಂಖ್ಯೆ**

| ಜಿಲ್ಲಾವಾರು ಜನಸಂಖ್ಯೆ | | | | |
|---|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ಒಟ್ಟು | ಗ್ರಾಮೀಣ | ನಗರ |
| 1 | ಬೆಂಗಳೂರು(ನಗರ) | 1,90,239 | 28,415 | 1,61,824 |
| 2 | ಬೆಂಗಳೂರು(ಗ್ರಾಮೀಣ) | 52,903 | 44,412 | 8,491 |
| 3 | ಬಾಗಲಕೋಟೆ | 97,203 | 80,820 | 16,383 |
| 4 | ಬೀದರ್ | 2,35,822 | 2,14,759 | 21,063 |
| 5 | ವಿಜಯಪುರ | 39,314 | 31,644 | 7,670 |
| 6 | ಬಳ್ಳಾರಿ | 4,51,406 | 3,34,131 | 1,17,275 |
| 7 | ಬೆಳಗಾವಿ | 2,97,198 | 2,53,876 | 43,322 |
| 8 | ಚಾಮರಾಜನಗರ | 1,20,219 | 96,434 | 23,785 |
| 9 | ಚಿಕ್ಕಮಗಳೂರು | 44,970 | 40,142 | 4,828 |
| 10 | ಚಿತ್ರದುರ್ಗ | 3,02,554 | 2,66,526 | 36,028 |
| 11 | ಚಿಕ್ಕಬಳ್ಳಾಪುರ | 1,56,487 | 1,39,201 | 17,286 |
| 12 | ದಕ್ಷಿಣ ಕನ್ನಡ | 82,268 | 65,844 | 16,424 |
| 13 | ದಾವಣಗೆರೆ | 2,33,112 | 1,91,754 | 41,358 |
| 14 | ಧಾರವಾಡ | 87,548 | 50,089 | 37,459 |
| 15 | ಗದಗ | 61,654 | 50,637 | 11,017 |
| 16 | ಗುಲ್ಬರ್ಗಾ | 65,259 | 50,074 | 15,185 |
| 17 | ಹಾಸನ | 32,329 | 27,896 | 4,433 |
| 18 | ಹಾವೇರಿ | 1,41,380 | 1,26,249 | 15,131 |
| 19 | ಕೋಲಾರ | 78,875 | 72,143 | 6,732 |
| 20 | ಕೊಪ್ಪಳ | 1,64,271 | 1,52,563 | 11,708 |
| 21 | ಮಂಡ್ಯ | 22,402 | 17,361 | 5,041 |
| 22 | ಕೊಡಗು | 58,054 | 56,298 | 1,756 |
| 23 | ಮೈಸೂರು | 3,34,547 | 2,57,081 | 77,466 |
| 24 | ರಾಯಚೂರು | 3,67,071 | 3,34,023 | 33,048 |
| 25 | ರಾಮನಗರ | 22,946 | 19,163 | 3,783 |
| 26 | ಶಿವಮೊಗ್ಗ | 65,412 | 49,963 | 15,449 |
| 27 | ತುಮಕೂರು | 2,09,559 | 1,80,024 | 29,535 |
| 28 | ಉತ್ತರ ಕನ್ನಡ | 34,239 | 27,949 | 6,290 |
| 29 | ಉಡುಪಿ | 52,897 | 41,596 | 11,301 |
| 30 | ಯಾದಗಿರಿ | 1,46,849 | 1,28,724 | 6,732 |
| | **ಒಟ್ಟು** | **42,48,987** | **34,29,791** | **8,19,196** |

**ಮೂಲ:** 2011ರ ಜನಗಣತಿ

ಕರ್ನಾಟಕದ ಪರಿಶಿಷ್ಟ ಪಂಗಡದಲ್ಲಿರುವ 52 ಜಾತಿಗಳ ಒಟ್ಟು ಜನಸಂಖ್ಯೆ 42,48,987 ಜನರಿದ್ದಾರೆ. ಅದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವರು 34,29,791 ಜನಸಂಖ್ಯೆಯಿದೆ. ನಗರಪ್ರದೇಶಗಳಲ್ಲಿ 8,19,196 ಜನಸಂಖ್ಯೆಯಿದೆ. ಪರಿಶಿಷ್ಟ ಪಂಗಡದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆಗಳು ಬಳ್ಳಾರಿ 4,51,406 ಜನಸಂಖ್ಯೆ, ರಾಯಚೂರು 3,67,071 ಜನಸಂಖ್ಯೆ, ಮೈಸೂರು 3,34,547 ಜನಸಂಖ್ಯೆ, ಚಿತ್ರದುರ್ಗ 3,02,554 ಜನಸಂಖ್ಯೆಯಿರುವುದು ಕಂಡುಬರುತ್ತದೆ. ಅತ್ಯಂತ ಕಡಿಮೆ ಪರಿಶಿಷ್ಟ ಪಂಗಡ ಇರುವ ಜಿಲ್ಲೆಗಳು ಮಂಡ್ಯ 22,402 ಜನಸಂಖ್ಯೆ, ರಾಮನಗರ 22,946 ಜನಸಂಖ್ಯೆ, ಹಾಸನ 32,329 ಜನಸಂಖ್ಯೆ, ಉತ್ತರಕನ್ನಡ 34,239 ಜನಸಂಖ್ಯೆ, ವಿಜಯಪುರ 39,314 ಜನಸಂಖ್ಯೆ, ಚಿಕ್ಕಮಗಳೂರು 44,970 ಜನಸಂಖ್ಯೆ, 16 ಜಿಲ್ಲೆಗಳಲ್ಲಿ 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದೆ. ಪರಿಶಿಷ್ಟ ಪಂಗಡದಲ್ಲಿರುವ ಪುರುಷ ಮತ್ತು ಮಹಿಳೆಯರ ಪ್ರಮಾಣವನ್ನು ಗಮನಿಸಿದರೆ 1,000 ಪುರುಷರಿಗೆ 972ರಷ್ಟು ಮಹಿಳೆಯರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 975, ನಗರಪ್ರದೇಶದಲ್ಲಿ 960 ಜನ ಮಹಿಳೆಯರಿದ್ದಾರೆ. ಅತ್ಯಂತ ಕಡಿಮೆ ಲಿಂಗಾನುಪಾತವಿರುವ ಜಿಲ್ಲೆಗಳು ಬೆಂಗಳೂರು ನಗರ 913, ಹಾವೇರಿ 941, ವಿಜಯಪುರ 944, ರಾಮನಗರ 945, ಬೆಂಗಳೂರು ಗ್ರಾಮಾಂತರ 955, ಅನುಪಾತವಿರುವುದು ಪರಿಶಿಷ್ಟ ಪಂಗಡದ ಗುಂಪಿನಲ್ಲಿ ಕಂಡುಬರುತ್ತದೆ. ಈ ಗುಂಪಿನಲ್ಲಿರುವ 52 ಜಾತಿಗಳಲ್ಲಿ 23 ಜಾತಿಗಳು ಇಂದಿಗೂ ಸಹ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ/ಅರೆಅಲೆಮಾರಿ ಆದಿವಾಸಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ.

### 1.1.4. **ಕರ್ನಾಟಕ ವಿಧಾನಸಭೆಯ ಆರಂಭ ಮತ್ತು ಬೆಳವಣಿಗೆ**

ಜ್ಞಾನವಂತರಾದ ಒಡೆಯರ್‌ಗಳ ಆಳ್ವಿಕೆಯಲ್ಲಿದ್ದ ಹಿಂದಿನ ಅರಸರ ಮೈಸೂರು ರಾಜ್ಯವು ಪ್ರಗತಿಪರ ರಾಜ್ಯವಾಗಿದ್ದು, ಪ್ರಜಾಪ್ರಭುತ್ವ ಆಡಳಿತದ ಮುನ್ಸೂಚನೆಯಾಗಿತ್ತು. ರಾಜ್ಯದ ಆಡಳಿತದಲ್ಲಿ ಪ್ರಜೆಗಳ ಸಹಚರ್ಯವು ಮೂಲರೂಪವಾಗಿ 19ನೇ ಶತಮಾನದ 80ರ ದಶಕದಲ್ಲಿ ಪ್ರಾರಂಭವಾಯಿತು. ಮಾರ್ಚ್ 1881ರಲ್ಲಿ ಘನವೆತ್ತ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಅವರು ರಾಜ್ಯದ ಅಧಿಕಾರವನ್ನು ವಹಿಸಿಕೊಂಡರು. ಇದೇ ವರ್ಷದಲ್ಲಿಯೇ ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಉದ್ಘಾಟಿಸಲಾಯಿತು.

ಮಹಾರಾಜರಿಗೆ ಮೈಸೂರು ಪ್ರಾಂತ್ಯವನ್ನು ವರ್ಗಾಯಿಸುವ ಒಂದು ಷರತ್ತಾಗಿ 1879ರಲ್ಲಿ ಮೈಸೂರಿನ ಮುಖ್ಯ ಕಮಿಷನರ್ ಮಿಸ್ಟರ್ ಜಿ.ಡಿ.ಗೋರ್ಡನ್ ಅವರು ಪ್ರಸ್ತಾಪ ಮಾಡಿದ್ದ ಸಭೆಯ ಸ್ಥಾಪನೆ ಬಗ್ಗೆ ಆಗಿನ ಭಾರತ ಸರ್ಕಾರಕ್ಕೆ ಒಲವಿರಲಿಲ್ಲ. ಚೀಫ್

ಕಮೀಷನರ್ ಅವರು, ಖ್ಯಾತಿವಂತರಾದ ನಿವೃತ್ತ ಅಧಿಕಾರಿಗಳು, ವಿವಿಧ ವರ್ಗಗಳು ಮತ್ತು ಪಂಗಡಗಳ ಪ್ರತಿನಿಧಿಗಳನ್ನು ಒಳಗೊಂಡ ಆಲೋಚನಾಸಭೆಯ ರಚನೆಗೆ ಸಲಹೆ ಮಾಡಿದ್ದರು. ಉದ್ದೇಶಿತ ಆಲೋಚನಾಸಭೆಗೆ ಶಾಸನಗಳನ್ನು ರಚಿಸುವ, ಹಣಕಾಸು ಅಥವಾ ಕಾರ್ಯಾಂಗ, ಇದು ಮೂಲ ಉದ್ದೇಶಗಳಿಗಿಂತಲೂ ಹೆಚ್ಚಾಗಿ ಯಶಸ್ಸಿನ ಪತನ ಅಥವಾ ಕಾರ್ಯಚಟುವಟಿಕೆ ಮತ್ತು ಪ್ರಭಾವ ಕುರಿತಂತೆ ಅಭಿವೃದ್ಧಿ ಪ್ರವೃತ್ತಿ ಉಳ್ಳದಾಗಿದ್ದು ಇದನ್ನು ಒಪ್ಪಿಕೊಳ್ಳುವ ಅವಶ್ಯಕತೆಯು ಇರುವುದಿಲ್ಲ ಎಂಬುದಾಗಿ ಭಾವಿಸಿದ್ದರಿಂದಾಗಿ ಭಾರತ ಸರ್ಕಾರವು ಈ ಸಭೆಯ ರಚನೆ ಪರವಾಗಿರಲಿಲ್ಲ. ವೈಸ್‌ರಾಯ್ ಅವರು ರಾಜ್ಯದ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯುವ ಮೂಲಕ ಬ್ರಿಟಿಷರು ಭಾರತದಲ್ಲಿಯೇ ಆಲೋಚನಾಸಭೆಗಳಂತಹ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಯತ್ನಗಳೇ ನಡೆಯದಿರುವುದರಿಂದ ಇಲ್ಲಿ ಪ್ರಾರಂಭದಲ್ಲಿಯೇ ಇದನ್ನು ಆರಂಭಿಸಲು ಹೊರಟಿರುವುದು ಅಕಾಲಿಕವಾದುದಾಗಿರುತ್ತದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದರು.

ಆದರೂ ಮಹಾರಾಜರು 1881ರ ಆಗಸ್ಟ್ 25ರಂದು ಸಭೆಯ ರಚನೆಯ ಆದೇಶವನ್ನು ಹೊರಡಿಸಿದರು. ಈ ಆದೇಶದಲ್ಲಿ ಮಾನ್ಯ ಮಹಾರಾಜರು ಪ್ರಾಂತ್ಯದ ಆಡಳಿತದ ಅನುಕೂಲಕ್ಕಾಗಿ ಅಳವಡಿಸಿಕೊಂಡಿರುವ ಕ್ರಮಗಳ ದೃಷ್ಟಿಯಲ್ಲಿ ಸರ್ಕಾರವು ಹೊಂದಿರುವ ಅಭಿಪ್ರಾಯಗಳು ಮತ್ತು ಉದ್ದೇಶಗಳು, ಯಾರ ಪ್ರಯೋಜನಕ್ಕಾಗಿ ಇವುಗಳನ್ನು ಸಂಕಲ್ಪಿಸಲಾಗಿದೆಯೋ ಆ ಜನರಿಗೆ ಇವುಗಳ ಬಗ್ಗೆ ಹೆಚ್ಚಾಗಿ ಅರಿವಿದ್ದು ಇದನ್ನು ಅವರು ಮೆಚ್ಚಿಕೊಳ್ಳಬೇಕು ಎಂಬುದಾಗಿ ಹಂಬಲಿಸಿದ್ದರು. ಈ ಉದ್ದೇಶದ ಸಾಧನೆಯ ದಿಕ್ಕಿನಲ್ಲಿನ ಉಪಕ್ರಮವನ್ನು ಪ್ರಾಂತ್ಯದ ಎಲ್ಲಾ ಭಾಗಗಳ ಭೂ ಹಿಡುವಳಿದಾರರು ಮತ್ತು ವರ್ತಕ ಪ್ರತಿನಿಧಿಗಳ ವಾರ್ಷಿಕ ಸಭೆಯ ಮೂಲಕ ಮಾಡಬಹುದಾಗಿರುತ್ತದೆ ಎಂಬುದಾಗಿಯೂ ಇವರು ಅಭಿಪ್ರಾಯಪಟ್ಟಿದ್ದರು. ಇದನ್ನು ಮೈಸೂರು ಸಂಸ್ಥಾನದ ಪ್ರಜೆಗಳ ಮ್ಯಾಗ್ನಕಾರ್ಟ ಎಂದೇ ಭಾವಿಸಲಾಗಿದೆ. ಇದನ್ನು ಜನರ ದೃಷ್ಟಿಯಲ್ಲಿ ಸ್ವತಃ ಖಚಿತಪಡಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ ಎಂಬುದಾಗಿ ಇಡೀ ಭಾರತದಲ್ಲಿ ಮೊದಲ ಬಾರಿಗೆ ಘೋಷಿಸಲಾಯಿತು. ಸರ್ಕಾರವು ತನ್ನ ಉದ್ದೇಶಗಳ ಅರ್ಹತೆ ಮತ್ತು ತನ್ನ ಕಾರ್ಯನೀತಿಗಳ ದೃಢತೆಯ ಬಗ್ಗೆ ಜನತೆಗೆ ಮನದಟ್ಟು ಮಾಡುವುದು ಅಗತ್ಯವಾಗಿರುತ್ತದೆ ಎಂಬುದನ್ನು ಮಾನ್ಯ ಮಾಡಿರುತ್ತದೆ. ಇನ್ನೊಂದು ರೀತಿಯಾಗಿ ಇದನ್ನು ಸರ್ಕಾರವು ಸ್ವತಃ ತನ್ನ ಪ್ರಜೆಗಳ ತೀರ್ಪಿಗೆ ಹಾಗೂ ಮಾರ್ಗದರ್ಶನಕ್ಕೆ ಬಿಡಬೇಕು ಎಂಬ ಸ್ಪಷ್ಟ ಅಂಗೀಕಾರವಾಗಿರುತ್ತದೆ.

ಪ್ರಜಾಪ್ರತಿನಿಧಿ ಸಭೆಯು 1881ರ ಅಕ್ಟೋಬರ್ 7ರಂದು ಮೊದಲ ಬಾರಿಗೆ ಸೇರಿತ್ತು. ಆರಂಭದಲ್ಲಿ ಇದು ಪ್ರಾಂತ್ಯದ ಎಲ್ಲಾ ಭಾಗದ ಭೂ ಹಿಡುವಳಿದಾರರು ಮತ್ತು ವರ್ತಕ ಪ್ರತಿನಿಧಿಗಳ ಸಭೆಯಾಗಿದ್ದು ಇದನ್ನು 1.ಇವರನ್ನು ಪ್ರತಿನಿಧಿಸುತ್ತಿದ್ದ ಸ್ಥಳೀಯ ನಿಧಿ ಮಂಡಳಿಗಳು ತಾವೇ ಸ್ವತಃ ಮತ್ತು ಇತರರ ಮೂಲಕ 2.ಪ್ರತಿ ತಾಲ್ಲೂಕಿನಿಂದ ಅಲ್ಲಿನ ಜನರ ಪೈಕಿ ಸಾಮಾನ್ಯ ತಿಳಿವಳಿಕೆ ಮತ್ತು ಪ್ರಭಾವ ಹೊಂದಿರುವ ಒಬ್ಬರು ಅಥವಾ ಇಬ್ಬರು ಸಾಗುವಳಿದಾರರ ಮೂಲಕ ಹಾಗೂ 3.ಸಾಮಾನ್ಯವಾಗಿ ಪ್ರತಿ ಜಿಲ್ಲೆಗೆ ಹೆಸರಾಂತ ಮೂವರು ಅಥವಾ ನಾಲ್ವರು ವರ್ತಕರ ಮೂಲಕ ಆಯ್ಕೆಯನ್ನು ಮಾಡಬೇಕಾಗಿತ್ತು. ಸಭೆಯ ಹಾಜರಾತಿಯು ಸ್ವವಿಚ್ಛೆಯದಾಗಿತ್ತು. 1891ರಲ್ಲಿ ಚುನಾವಣೆಯ ನೀತಿಯನ್ನು ಆಚರಣೆಗೆ ತರಲಾಯಿತು. ಜನರು ಸಂದಾಯ ಮಾಡುತ್ತಿದ್ದ ಕೆಲವು ರೀತಿಯ ಕಂದಾಯ ಅಥವಾ ಮೊಹತರ್ಫ್ ಇದು ತಾಲ್ಲೂಕಿನಿಂದ ತಾಲ್ಲೂಕಿಗೆ ವ್ಯತ್ಯಾಸವಿದ್ದು, ಕೆಲವು ಬೆರಿಝ್ ಇರುವ ವರ್ಗಾವಣೆ ಮಾಡಲಾದ ಗ್ರಾಮಗಳ ಮಾಲೀಕರು ಮತ್ತು ಭಾರತದ ವಿಶ್ವವಿದ್ಯಾಲಯಗಳ ಪದವೀಧರರು ಮತ ಚಲಾಯಿಸುವುದಕ್ಕಾಗಿ ಮತ್ತು ಸದಸ್ಯರಾಗುವುದಕ್ಕಾಗಿ ಅರ್ಹರಾಗಿದ್ದರು. ಪ್ರತಿ ತಾಲ್ಲೂಕಿಗೆ ಸಂಖ್ಯೆಯನ್ನು ನಿಗದಿಪಡಿಸಲಾಗಿತ್ತು. ನಿಯಮಗಳ ಅಡಿಯಲ್ಲಿ ಅರ್ಹರಾದ ವ್ಯಕ್ತಿಗಳು ವಾರ್ಷಿಕವಾಗಿ ಪ್ರತಿ ತಾಲ್ಲೂಕಿನಲ್ಲಿ ಸಭೆ ಸೇರಿ ಅವರೊಳಗೆ ಆ ತಾಲ್ಲೂಕಿಗೆ ಹಂಚಿಕೆ ಮಾಡಲಾದಷ್ಟು ಸಂಖ್ಯೆಯ ಸದಸ್ಯರನ್ನು ಆಯ್ಕೆ ಮಾಡಬೇಕಾಗಿತ್ತು. ಪುರಸಭೆಗಳು ಹಾಗೂ ಸಂಘಗಳು ಸಹ ತಮ್ಮ ಪ್ರತಿನಿಧಿಗಳನ್ನು ನಿಯೋಜಿಸಲು ಅವಕಾಶವಿತ್ತು. ಯೋಚನಾಮಾರ್ಗವು ತುಂಬಾ ಪ್ರಗತಿಪರವಾಗಿದ್ದು, ಆಗಲೂ ಕೂಡ 18ರ ವಯಸ್ಸನ್ನು ತಲುಪಿದಂತಹ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಲಾಗಿದ್ದು, ಇವರು ಸಹ ಸಂಘಗಳ ಸದಸ್ಯರಾಗಲು ಹಾಗೆಯೇ ಪ್ರತಿನಿಧಿಗಳನ್ನು ನಿಯೋಜಿಸಲು ಅರ್ಹರಾಗಿದ್ದರು. 18ರ ವಯೋಮಾನ ತುಂಬಿದ ಪ್ರತಿಯೊಬ್ಬರೂ ಮತದಾರನಾಗಲು ಅಥವಾ ಸದಸ್ಯರಾಗಲು ಅರ್ಹರಾಗಿದ್ದರು. ಆದರೆ, ಅಭ್ಯರ್ಥಿಯ ವಯಸ್ಸನ್ನು 1924ರಲ್ಲಿ 21ಕ್ಕೆ ಮತ್ತು 1940ರಲ್ಲಿ 25ಕ್ಕೆ ಹೆಚ್ಚಿಸಲಾಯಿತು. 1894ರಲ್ಲಿ ಇನ್ನೂ ಕೆಲವು ಮಾರ್ಪಾಟುಗಳನ್ನು ಮಾಡಲಾಯಿತು. 5000 ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪುರಸಭೆಗಳು ಮಾತ್ರ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಅನುಮತಿಸಲಾಗಿತ್ತು. ಮತದಾರರ ಸಮುದಾಯವನ್ನು ಹೆಚ್ಚಿಸಲು ಮತದಾರರಿಗೆ ಇರಬೇಕಾದ ಅರ್ಹತೆಯನ್ನು ಅಭ್ಯರ್ಥಿಗಳಿಗೆ ಏನನ್ನು ನಿಗದಿಪಡಿಸಲಾಗಿದೆಯೋ ಅದರ ಭೂಕಂದಾಯದ ಅರ್ಧದಷ್ಟನ್ನು ನಿಗದಿಪಡಿಸಲಾಗಿತ್ತು. ಸ್ವತ್ತಿನ ಅರ್ಹತೆಯಿಲ್ಲದ ಪದವೀಧರರು ಸದಸ್ಯರಾಗಲು ಅವಕಾಶ ನೀಡಿರಲಿಲ್ಲ. ತಾಲ್ಲೂಕು ಸದಸ್ಯರ ಕಾಲಾವಧಿ ಮೂರು ವರ್ಷ ಮತ್ತು ಇತರರಿಗೆ ಒಂದು ವರ್ಷವನ್ನು ನಿಗದಿಪಡಿಸಲಾಗಿತ್ತು. 1918ರಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ಮತ ಚಲಾಯಿಸುವುದಕ್ಕಾಗಿ

ಸ್ವತ್ತಿನ ಅರ್ಹತೆಯಲ್ಲಿ ಅಸಮತೆಯನ್ನು ರದ್ದುಪಡಿಸಲಾಗಿದ್ದು ತಾಲ್ಲೂಕುಗಳಿಗೆ ಏಕರೀತಿಯ ಪ್ರಮಾಣವನ್ನು ನಿಗದಿಪಡಿಸಲಾಗಿತ್ತು. ಈ ಪ್ರಮಾಣವನ್ನು ಸಹ ಕಡಿಮೆಗೊಳಿಸಲಾಯಿತು. ಮತ ಚಲಾಯಿಸುವುದಕ್ಕಾಗಿ ಸದಸ್ಯತ್ವ ಪಡೆಯುವುದಕ್ಕಾಗಿ ನಡುವೆ ಇದ್ದಂತಹ ಅರ್ಹತೆಗಳ ವ್ಯತ್ಯಾಸವನ್ನು ರದ್ದುಪಡಿಸಲಾಯಿತು. 1919ರಲ್ಲಿ ಪುರಸಭೆಗಳಿಗೆ ಹೆಚ್ಚಿನ ಪ್ರಮಾಣದ ಪ್ರತಿನಿಧಿತ್ವವನ್ನು ಕೊಡಲಾಗಿದ್ದು, ಇದರ ಸದಸ್ಯರ ಮತ್ತು ಒಂದು ನಿಬಂಧನೆಯನ್ನು ಮೂರು ವರ್ಷಗಳಾಗಿ ನಿಗದಿಪಡಿಸಲಾಯಿತು.

1923ರಲ್ಲಿ ತಾಲ್ಲೂಕುಗಳ ಸ್ಥಾನವನ್ನು ಜನಸಂಖ್ಯೆಯ ಆಧಾರದ ಮೇಲೆ ಮರು ಹೊಂದಾಣಿಕೆ ಮಾಡಲಾಯಿತು. ಬೆಂಗಳೂರು ಮತ್ತು ಮೈಸೂರು ನಗರ ಕ್ಷೇತ್ರಗಳಿಂದ ಸದಸ್ಯರ ಚುನಾವಣೆಗಾಗಿ 1932ರಲ್ಲಿ ಸರಿಯಾದ ಪ್ರಮಾಣದ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. 1935ರಲ್ಲಿ ವಿಧಾನಪರಿಷತ್ ಸಭೆಯ ಸದಸ್ಯರ ಚುನಾವಣೆಯನ್ನು ಒಬ್ಬ ವ್ಯಕ್ತಿಯನ್ನು ಎರಡು ಸದನಗಳ ಸದಸ್ಯನನ್ನಾಗಿ ಮಾಡುವುದು ಅನಗತ್ಯವಾಗಿರುವುದಾಗಿ ಪರಿಗಣಿಸಲಾಗಿದ್ದರಿಂದ ನಿಲ್ಲಿಸಿಬಿಡಲಾಯಿತು.

ಒಂದು ಕಾರ್ಯಾಂಗ ಆದೇಶದ ಮೂಲಕ 1881ರಲ್ಲಿ ರಚಿಸಲಾಗಿದ್ದ ಪ್ರಜಾಪ್ರತಿನಿಧಿ ಸಭೆಯನ್ನು ಮಹಾರಾಜರು ವಿನಿಮಯವನ್ನು ಹೊರಡಿಸಿದಾಗ 1923ರವರೆಗೆ ಇದರ ಕಾರ್ಯಾಚರಣೆಯನ್ನು ಮುಂದುವರಿಸಿದ್ದು ಇದರಡಿಯಲ್ಲಿ ಸಭೆಗೆ ಶಾಸನಬದ್ಧ ಸ್ಥಾನಮಾನವನ್ನು ನೀಡಲಾಯಿತು.

ಪ್ರಾರಂಭಿಕವಾಗಿ ಸಭೆಯ ಸದಸ್ಯರಲ್ಲಿ ಯಾವುದೇ ಅಂಗೀಕೃತ ವಿಶೇಷಾಧಿಕಾರಗಳು ನಿಹಿತವಾಗಿರಲಿಲ್ಲ. ಆದರೆ ಇವರು ದಿವಾನರ ಭಾಷಣದ ಅನಾಸಕ್ತ ಕೇಳುಗರಾಗಿರಲಿಲ್ಲ. ಇವರು ಪ್ರತಿಯೊಂದು ವಿಚಾರಕ್ಕೆ ಸಂಬಂಧಿಸಿರುವ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಲ್ಲಿ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ನೀಡುತ್ತಿದ್ದರು. ಇವರು ಎಲ್ಲಾ ವಿಭಾಗಗಳಲ್ಲಿನ ಆಡಳಿತ ಕಾರ್ಯನಿರ್ವಹಣೆಯನ್ನು ಗಮನಿಸಿ ಮನ್ನಿಸಿ ಮತ್ತು ನ್ಯೂನತೆಗಳು ಮತ್ತು ದೋಷಗಳನ್ನು ಗಮನಕ್ಕೆ ತರುವುದರೊಂದಿಗೆ ಉಪಯುಕ್ತ ಕೊಡುಗೆಯನ್ನು ನೀಡಿದ್ದಾರೆ. ಸದಸ್ಯರಿಗೆ ಚರ್ಚಿಸಬೇಕಾದ ವಿಷಯಗಳ ವ್ಯಾಪ್ತಿ ಬಗ್ಗೆ ಯಾವುದೇ ಮಿತಿ ಇರಲಿಲ್ಲ. ದಿವಾನರ ಕಛೇರಿಯ ಕಾರ್ಯಾವಧಿಯಿಂದ ಹಿಡಿದು ಪರಿಷತ್ತಿನ ರಚನೆ ತನಕ ಹಾಗೂ ತೋಟಿಯ ಮೀರಾಸಿ ಹಕ್ಕಿನಿಂದ ಅರಣ್ಯದ ಮಳೆನೀರಿನ ಹೊಳೆಗೆ ಅಣೆಕಟ್ಟು ನಿರ್ಮಿಸುವವರೆಗೆ ಎಲ್ಲಾ ವಿಷಯಗಳ ಕುರಿತು ವಿಚಾರಣೆ ನಡೆಯುತ್ತಿತ್ತು. ಸಭೆಯು ಮತ

ಚಲಾಯಿಸುವ ಅಧಿಕಾರವನ್ನು ಹೊಂದಿರಲಿಲ್ಲ. ಶಾಸನ ರಚಿಸುವ ಪ್ರತಿಯೊಂದು ಉದ್ದೇಶಿತ ಕ್ರಮವನ್ನು ಮೊದಲ ಬಾರಿ ಸಭೆಯಲ್ಲಿ ಮಂಡಿಸಬೇಕು ಮತ್ತು ಅದರ ಬಗ್ಗೆ ಅಭಿಪ್ರಾಯಗಳನ್ನು ಪಡೆಯಬೇಕು ಎಂಬುದನ್ನು ಸದಸ್ಯರಿಗೆ ಮನದಟ್ಟು ಮಾಡಿಸಲಾಗುತ್ತಿತ್ತು. ಅತಿ ಮುಖ್ಯವಾದಂತಹ ಶಾಸನಗಳ ರಚನೆ ವಿಷಯದಲ್ಲಿ ಸರ್ಕಾರವು ಇವರೊಂದಿಗೆ ಸಮಾಲೋಚನೆ ಮಾಡುತ್ತಿದ್ದರೂ, ಇದು ಸರ್ಕಾರಕ್ಕೆ ಸ್ವತಃ ಬಂಧನಕಾರಿಯಾಗಿರಲಿಲ್ಲ. ಸದಸ್ಯರು ಸರ್ಕಾರವನ್ನು ಪ್ರತಿನಿಧಿಸುವುದು ಪ್ರಜಾಪ್ರತಿನಿಧಿ ಸಭೆಯ ಮುಖ್ಯ ವೈಶಿಷ್ಟ್ಯವಾಗಿತ್ತು.

ಕಳೆದ ಶತಮಾನದ ತೊಂಬತ್ತರ ಪೂರ್ವದಲ್ಲಿ ಸದಸ್ಯರು ಪ್ರಜಾಪ್ರತಿನಿಧಿ ಸಭೆಯ ಸದಸ್ಯನನ್ನು ಮಹಾರಾಜರ ಪರಿಷತ್ತಿನ ನಾಮನಿರ್ದೇಶನ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರು. ಕಡೆಗೆ 1940ರಲ್ಲಿ ಅಂಥ ಪಾಲ್ಗೊಳ್ಳುವಿಕೆಗೆ ಸರ್ಕಾರವು ಸಮ್ಮತಿ ನೀಡಿತು. 1940ರ ಮೈಸೂರು ಸರ್ಕಾರದ ಕಾಯ್ದೆಯಲ್ಲಿ ಸಚಿವ ಪರಿಷತ್ತಿನ ರಚನೆಗಾಗಿ ಉಪಬಂಧ ಕಲ್ಪಿಸಿದ್ದು, ಇದಕ್ಕೆ ಮಹಾರಾಜರು ವಿಧಾನಸಭೆಯಿಂದ ಒಬ್ಬರನ್ನು, ವಿಧಾನಪರಿಷತ್ತಿನಿಂದ ಇನ್ನೊಬ್ಬರನ್ನು ಒಟ್ಟು ಇಬ್ಬರು ಚುನಾಯಿತ ಸದಸ್ಯರನ್ನು ನೇಮಕ ಮಾಡಬಹುದಾಗಿತ್ತು.

ದಿವಾನರು ಮತ್ತು ಇವರ ಗೈರುಹಾಜರಿಯಲ್ಲಿ ಕಾರ್ಯಕಾರಿ ಪರಿಷತ್ತಿನ ಸದಸ್ಯರು ಜನಪ್ರತಿನಿಧಿ ಸಭೆ ಮತ್ತು ವಿಧಾನಪರಿಷತ್ತಿನ ಎರಡೂ ಸದನಗಳ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಿದ್ದರು. 1940ರಲ್ಲಿ ವಿಧಾನ ಪರಿಷತ್ತಿಗೆ ತನ್ನ ಸಭೆಯ ಅಧ್ಯಕ್ಷತೆಯನ್ನು ವಹಿಸಲು ತನ್ನ ಸದಸ್ಯರ ಪೈಕಿಯಿಂದ ತನ್ನ ಸ್ವಂತ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲು ಅಧಿಕಾರ ಕೊಡಲಾಗಿತ್ತು. ಆದರೆ ಸಭೆಯ ಸಂದರ್ಭದಲ್ಲಿ ಈ ಅಧಿಕಾರವನ್ನು ಕೊಟ್ಟಿರಲಿಲ್ಲ. ದಿವಾನ್ ಮತ್ತು ಇವರ ಗೈರುಹಾಜರಿಯಲ್ಲಿ ಕಾರ್ಯಕಾರಿ ಪರಿಷತ್ತಿನ ಸದಸ್ಯರು ಕೇವಲ ಸದನದ ಒಬ್ಬ ಅಧಿಕಾರಿಯಾಗಿ ಮಾತ್ರ, ಆದರೆ ಆಡಳಿತದಲ್ಲಿ ಯಾವುದೇ ಸಂಬಂಧವನ್ನು ಹೊಂದಿಲ್ಲದಿರುವ ಆಧಿಕಾರೇತರ ಅಧ್ಯಕ್ಷನಾಗುವ ಆಧಾರದ ಮೇಲೆ ಅಧ್ಯಕ್ಷತೆಯನ್ನು ವಹಿಸುವುದು ಮುಂದುವರಿದಿದ್ದು, ಆಡಳಿತದ ಸದಸ್ಯನಾಗಿ ಪ್ರತಿನಿಧಿಸುವುದರೊಂದಿಗೆ ಯಾವುದೇ ರೀತಿಯಾಗಿ ವ್ಯವಹರಿಸಲು ಅದೇ ರಿತಿಯ ಪ್ರಯೋಜನಕಾರಿಯಾದ ಸ್ಥಾನದಲ್ಲಿ ಇರುವಂತಿರಲಿಲ್ಲ.

### 1.1.5. ರಾಜಕೀಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಸ್ಥಾನಮಾನ

ಸ್ವಾತಂತ್ರ್ಯಪೂರ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಾಜಕೀಯದಲ್ಲಿ ಅಧಿಕಾರ ಪಡೆಯುವ ಹಾಗೂ ರಾಜಕೀಯವಾಗಿ ಗುರುತಿಸಿಕೊಳ್ಳುವ ಅವಕಾಶ ಮತ್ತು ಸಾಧ್ಯತೆ ಇರಲ್ಲಿಲ್ಲ. ಆದರೆ ಅಂಬೇಡ್ಕರ್ ಅವರು ಮಾತ್ರ ಕ್ರಿಯಾತ್ಮಕವಾಗಿ ರಾಜಕೀಯದಲ್ಲಿ ಪಾಲ್ಗೊಂಡಿದ್ದರು. ಭಾರತದ ಇತಿಹಾಸದಲ್ಲಿ ಪರಿಶಿಷ್ಟ ಜನರಲ್ಲಿ ರಾಜಕೀಯ ಪ್ರವೇಶ ಮಾಡಿದ ಮೊದಲಿಗರೆಂದರೆ ಅಂಬೇಡ್ಕರ್ ಮಾತ್ರ. ಶತಶತಮಾನಗಳಿಂದ ತುಳಿತಕ್ಕೊಳಗಾದ ಜನರ ಪರವಾಗಿ ಮೊದಲ ಹೆಜ್ಜೆ ಇಟ್ಟವರು, ಇಂಗ್ಲೆಂಡಿನಲ್ಲಿ ನಡೆದ ಮೊದಲನೇ ದುಂಡುಮೇಜಿನ ಸಮ್ಮೇಳನದಲ್ಲಿ ಪರಿಶಿಷ್ಟ ಜನರ ಪ್ರತಿನಿಧಿಯಾಗಿ ಪಾಲ್ಗೊಂಡು ಪರಿಶಿಷ್ಟ ಜನರ ರಾಜಕೀಯ ಹಕ್ಕು, ಶಿಕ್ಷಣ, ಆಡಳಿತಗಳಲ್ಲಿ ಪ್ರವೇಶ ನೀಡಬೇಕೆಂಬ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರಕ್ಕೆ ನೀಡಿದವರು. ಇವರ ಪ್ರಯತ್ನದ ಫಲವಾಗಿ ಶತಶತಮಾನಗಳಿಂದ ತುಳಿತಕ್ಕೊಳಗಾದ ಜನರ ಏಳಿಗೆಗೆ ಮೊದಲ ಬಾರಿಗೆ ಬೇಡಿಕೆಗಳನ್ನು ನೀಡಿದ ದಿಟ್ಟ ನಾಯಕ ಅಂಬೇಡ್ಕರ್ ಆಗಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸಾಮಾಜಿಕ ಅಸಮಾನತೆ ಹಾಗೂ ಗುಲಾಮಗಿರಿಯ ಶೋಷಣೆಗೆ ಒಳಗಾಗಿದ್ದಾರೆ. ಇಂದಿಗೂ ಇಂತಹ ಅಸಮಾನತೆಗಳು ಕಡಿಮೆಯಾಗಿಲ್ಲ. ಹಾಗೆಯೇ ಎಲ್ಲಾ ಉತ್ತಮ ಅಧಿಕಾರಗಳಿಂದ ವಂಚಿತರಾಗಿರುವಂತಹ ವರ್ಗಗಳಾಗಿವೆ. ಆದರೆ ಭಾರತ ಸ್ವಾತಂತ್ರ್ಯ ನಂತರ ಪರಿಶಿಷ್ಟ ಜನರಲ್ಲಿ ಒಂದು ರೀತಿಯ ಆಶಾಭಾವನೆಯ ಬೆಳಕು ಕಂಡಂತಾಯಿತು. ಕಾರಣ ಅಂಬೇಡ್ಕರ್ ಅವರು ಸಂವಿಧಾನ ಕರಡುಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಪರಿಶಿಷ್ಟ ಜನರಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕ ಸಂತೋಷ ಆಗಿದ್ದು ಆ ಸಂದರ್ಭದಲ್ಲಿ, ಏಕೆಂದರೆ ಪರಿಶಿಷ್ಟ ಜನರು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ರಕ್ಷಿಸುವ ಹಾಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವಂತಹ ಅವಕಾಶ ಅಂಬೇಡ್ಕರ್ ಅವರಿಗೆ ಲಭಿಸಿತು. ಭಾರತದ ಪರಿಶಿಷ್ಟ ಜನರಲ್ಲಿ ಅಂಬೇಡ್ಕರ್ ಅವರು ಪ್ರಪ್ರಥಮ ರಾಜಕೀಯ ಗಣ್ಯರಾದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ರಾಜಕೀಯ ಪ್ರಾತಿನಿಧ್ಯತೆಯಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರು ಜಾತಿವ್ಯವಸ್ಥೆಯಿಂದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಶತಶತಮಾನಗಳಿಂದ ಶೋಷಣೆ, ದಬ್ಬಾಳಿಕೆ ಹಾಗೂ ಅಸಮಾನತೆಗೆ ಗುರಿಯಾಗಿದ್ದಾರೆ. ಹಿಂದೂಧರ್ಮದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತುಳಿಯಲ್ಪಟ್ಟಂತಹ

ಹಾಗೂ ಅಮಾನವೀಯ ಹೀನ ಕೃತ್ಯಗಳಿಗೆ ಗುರಿಯಾಗಿದೆ. ಈ ವರ್ಗಗಳು ಕೆಳಜಾತಿಯಿಂದ ಬಂದಂತಹವರಾಗಿದ್ದು, ಸಮಾಜದ ತುಳಿತಕ್ಕೊಳಗಾದವರು ಹಾಗೂ ಹಳೆಯ ಸಂಪ್ರದಾಯ ವ್ಯವಸ್ಥೆಗಳ ಬಗೆಗೆ ಹೆಚ್ಚು ನಂಬಿಕೆಯುಳ್ಳವರಾದ್ದರಿಂದ ಈ ವರ್ಗದ ಸಮಸ್ಯೆಗಳ ಬಗ್ಗೆ ರಾಜಕೀಯ ಸಂಶೋಧಕರು ವೈಜ್ಞಾನಿಕ ಸಮೀಕ್ಷೆಗಳನ್ನು ಮಾಡಬೇಕಾದಂತಹ ಅಗತ್ಯ ಇದೆ.

**ಕೋಷ್ಟಕ–1.4.**

**13ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು**

| ಕ್ರ. ಸಂ. | ಶಾಸಕರ ಹೆಸರು | ಕ್ಷೇತ್ರ | ಪಕ್ಷ |
|---|---|---|---|
| 1 | ಶ್ರೀ ಸತೀಶ್ ಜಾರಕಿಹೊಳಿ | ಯಮಕನಮರಡಿ | ಕಾಂಗ್ರೆಸ್ |
| 2 | ಶ್ರೀ ನರಸಿಂಹ ನಾಯಕ | ಸುರಪುರ | ಬಿ.ಜೆ.ಪಿ. |
| 3 | ಶ್ರೀ ರಾಜ ರಾಯಪ್ಪ ನಾಯಕ | ರಾಯಚೂರು ಗ್ರಾಮಾಂತರ | ಕಾಂಗ್ರೆಸ್ |
| 4 | ಶ್ರೀ ಹಂಪಯ್ಯ ಸಾಹುಕಾರ್ | ಮಾನ್ವಿ | ಕಾಂಗ್ರೆಸ್ |
| 5 | ಶ್ರೀ ಶಿವನಗೌಡ ನಾಯಕ | ದೇವದುರ್ಗ | ಜೆ.ಡಿ.ಎಸ್. |
| 6 | ಶ್ರೀ ಪ್ರತಾಪಗೌಡ ಪಾಟೀಲ | ಮಸ್ಕಿ | ಬಿ.ಜೆ.ಪಿ. |
| 7 | ಶ್ರೀ ಸುರೇಶ್‌ಬಾಬು | ಕಂಪ್ಲಿ | ಬಿ.ಜೆ.ಪಿ. |
| 8 | ಶ್ರೀ ಎಂ.ಎಸ್.ಸೋಮಲಿಂಗಪ್ಪ | ಸಿರುಗುಪ್ಪ | ಬಿ.ಜೆ.ಪಿ. |
| 9 | ಶ್ರೀ ಬಿ. ಶ್ರೀರಾಮುಲು | ಬಳ್ಳಾರಿ ಗ್ರಾಮಾಂತರ | ಬಿ.ಜೆ.ಪಿ. |
| 10 | ಶ್ರೀ ತುಕಾರಾಂ | ಸಂಡೂರು | ಕಾಂಗ್ರೆಸ್ |
| 11 | ಶ್ರೀ ನಾಗೇಂದ್ರ ಬಿ. | ಕೂಡ್ಲಿಗಿ | ಬಿ.ಜೆ.ಪಿ. |
| 12 | ಶ್ರೀ ಎನ್.ವೈ.ಗೋಪಾಲಕೃಷ್ಣ | ಮೊಳಕಾಲ್ಮೂರು | ಕಾಂಗ್ರೆಸ್ |
| 13 | ಶ್ರೀ ತಿಪ್ಪೇಸ್ವಾಮಿ | ಚಳ್ಳಕೆರೆ | ಬಿ.ಜೆ.ಪಿ. |
| 14 | ಶ್ರೀ ಎಸ್. ವಿ. ರಾಮಚಂದ್ರ | ಜಗಳೂರು | ಬಿ.ಜೆ.ಪಿ. |
| 15 | ಶ್ರೀ ಚಿಕ್ಕಣ್ಣ | ಹೆಚ್. ಡಿ. ಕೋಟೆ | ಕಾಂಗ್ರೆಸ್ |
| 16 | ಶ್ರೀ ಬಾಲಚಂದ್ರ ಜಾರಕಿಹೊಳಿ | ಅರಭಾವಿ | ಜೆ.ಡಿ.ಎಸ್. |
| 17 | ಶ್ರೀ ರಮೇಶ ಜಾರಕಿಹೊಳಿ | ಗೋಕಾಕ್ | ಕಾಂಗ್ರೆಸ್ |

**Source:** Election Commission of India

2008ರ ಮೇನಲ್ಲಿ ನಡೆದ 13ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರ ಈ ಮೇಲಿನ ಪಟ್ಟಿಯಲ್ಲಿ ಬಿಜೆಪಿಯಿಂದ ಎಂಟು ಅಭ್ಯರ್ಥಿಗಳು, ಕಾಂಗ್ರೆಸ್ ಪಕ್ಷದಿಂದ ಏಳು ಅಭ್ಯರ್ಥಿಗಳು, ಜೆಡಿಎಸ್ ಪಕ್ಷದಿಂದ ಇಬ್ಬರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.[15]

[15] Statistical Report on General Election, 2008 To The Legislative Assembly of Karnataka, Election Commission of India New Delhi, 2008. Pp.-6.

**ಕೋಷ್ಟಕ–1.5.**

**14ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರು**

| ಕ್ರ. ಸಂ. | ಶಾಸಕರ ಹೆಸರು | ಕ್ಷೇತ್ರ | ಪಕ್ಷ |
|---|---|---|---|
| 1 | ಶ್ರೀ ಬಾಲಚಂದ್ರ ಜಾರಕಿಹೊಳಿ | ಅರಭಾವಿ | ಬಿ.ಜೆ.ಪಿ. |
| 2 | ಶ್ರೀ ರಮೇಶ ಜಾರಕಿಹೊಳಿ | ಗೋಕಾಕ್ | ಕಾಂಗ್ರೆಸ್ |
| 3 | ಶ್ರೀ ಸತೀಶ ಜಾರಕಿಹೊಳಿ | ಯಮಕನಮರಡಿ | ಕಾಂಗ್ರೆಸ್ |
| 4 | ಶ್ರೀ ಕೆ. ಎನ್. ರಾಜಣ್ಣ | ಮಧುಗಿರಿ | ಕಾಂಗ್ರೆಸ್ |
| 5 | ಶ್ರೀ ಚಿಕ್ಕಮಾಧು | ಹೆಚ್.ಡಿ. ಕೋಟೆ | ಜೆ.ಡಿ.ಎಸ್. |
| 6 | ಶ್ರೀ ಬಿ. ಶ್ರೀರಾಮುಲು | ಬಳ್ಳಾರಿ ಗ್ರಾಮಾಂತರ | ಬಿ.ಎಸ್.ಆರ್. |
| 7 | ಶ್ರೀ ಸುರೇಶ್‌ಬಾಬು | ಕಂಪ್ಲಿ | ಬಿ.ಎಸ್.ಆರ್. |
| 8 | ಶ್ರೀ ತುಕಾರಾಮ್ | ಸಂಡೂರು | ಕಾಂಗ್ರೆಸ್ |
| 9 | ಶ್ರೀ ರಾಜೇಶ್ | ಜಗಳೂರು | ಕಾಂಗ್ರೆಸ್ |
| 10 | ಶ್ರೀ ನಾಗರಾಜ್ | ಸಿರುಗುಪ್ಪ | ಕಾಂಗ್ರೆಸ್ |
| 11 | ಶ್ರೀ ರಾಜಾ ವೆಂಕಟಪ್ಪ ನಾಯಕ | ಸುರಪುರ | ಕಾಂಗ್ರೆಸ್ |
| 12 | ಶ್ರೀ ಎ. ವೆಂಕಟೇಶ ನಾಯಕ | ದೇವದುರ್ಗ | ಕಾಂಗ್ರೆಸ್ |
| 13 | ಶ್ರೀ ತಿಪ್ಪರಾಜ್ | ರಾಯಚೂರು ಗ್ರಾಮಾಂತರ | ಬಿ.ಜೆ.ಪಿ. |
| 14 | ಶ್ರೀ ಹಂಪಯ್ಯ ಸಾಹುಕಾರ್ | ಮಾನ್ವಿ | ಬಿ.ಜೆ.ಪಿ. |
| 15 | ಶ್ರೀ ಪ್ರತಾಪಗೌಡ ಪಾಟೀಲ್ | ಮಸ್ಕಿ | ಕಾಂಗ್ರೆಸ್ |
| 16 | ಶ್ರೀ ರಘುಮೂರ್ತಿ | ಚಳ್ಳಕೆರೆ | ಕಾಂಗ್ರೆಸ್ |
| 17 | ಶ್ರೀ ತಿಪ್ಪೇಸ್ವಾಮಿ ಎಸ್. | ಮೊಳಕಾಲ್ಮೂರು | ಬಿ.ಎಸ್.ಆರ್. |
| 18 | ಶ್ರೀ ನಾಗೇಂದ್ರ ಬಿ. | ಕೂಡ್ಲಿಗಿ | ಪಕ್ಷೇತರ |

**Source:** Election Commission of India

2013ರ ಮೇ 5ರಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಶಾಸಕರ ಈ ಮೇಲಿನ ಪಟ್ಟಿಯಲ್ಲಿ ಕಾಂಗ್ರೆಸ್ ಪಕ್ಷದಿಂದ 10 ಅಭ್ಯರ್ಥಿಗಳು, ಬಿ.ಜೆ.ಪಿ.ಯಿಂದ 3 ಅಭ್ಯರ್ಥಿಗಳು, ಬಿ.ಎಸ್.ಆರ್. ಪಕ್ಷದಿಂದ 3 ಅಭ್ಯರ್ಥಿಗಳು ಮತ್ತು ಜೆ.ಡಿ.ಎಸ್. ಪಕ್ಷದಿಂದ ಒಬ್ಬ ಅಭ್ಯರ್ಥಿ ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಒಬ್ಬರು 14ನೇ ವಿಧಾನಸಭೆಯಲ್ಲಿ ಆಯ್ಕೆಯಾಗಿದ್ದಾರೆ.[16] ಆದರೆ 2014ರಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಲ್ಲಿ ಶ್ರೀರಾಮುಲು

[16] Statistical Report on General Election, 2013 To The Legislative Assembly of Karnataka, Election Commission of India New Delhi, 2013. Pp.- 6.

ರಾಜೀನಾಮೆ ನೀಡಿದ್ದರಿಂದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎನ್.ವೈ. ಗೋಪಾಲಕೃಷ್ಣ ಅವರು ಆಯ್ಕೆಯಾಗಿದ್ದಾರೆ.

## 1.2. ಸಾಹಿತ್ಯ ಸಮೀಕ್ಷೆ

ಯಾವುದೇ ಒಂದು ಸಂಶೋಧನೆಯು ಪರಿಪೂರ್ಣ ಆಗಬೇಕಾದರೆ ಅದಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಗ್ರಂಥಗಳು, ವಿವಿಧ ಲೇಖಕರು ಪ್ರಕಟಿಸಿರುವ ಲೇಖನಗಳು, ಸಂಶೋಧನ ಗ್ರಂಥಗಳು ಬೇಕಾಗುತ್ತವೆ. ಆದರೆ ಸಂಶೋಧನಾ ವಿಷಯಕ್ಕೆ ಅತ್ಯವಶ್ಯಕವಾದ ಸಾಹಿತ್ಯ ಪರಿಕರಗಳು ನಿರ್ದಿಷ್ಟವಾಗಿ ಒಂದೇ ಗ್ರಂಥ ಅಥವಾ ಲೇಖನಗಳಲ್ಲಿ ದೊರೆಯುವುದಿಲ್ಲ. ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಹಲವಾರು ಪುಸ್ತಕ ಲೇಖನಗಳನ್ನು ಸಾಹಿತ್ಯ ಸಮೀಕ್ಷೆಗೆ ಒಳಪಡಿಸಲಾಗಿದೆ.

**ಅಂಬೇಡ್ಕರ್ ಬಿ.ಆರ್**.(1945) ಅವರ **ಗಾಂಧಿ ಮತ್ತು ಕಾಂಗ್ರೆಸ್ ಅಸ್ಪೃಶ್ಯರಿಗಾಗಿ ಮಾಡಿರುವುದಾದರೂ ಏನು**? ಎಂಬ ಅಧ್ಯಯನದಲ್ಲಿ ಸ್ವಾತಂತ್ರ್ಯಪೂರ್ವ ಭಾರತದಲ್ಲಿನ ದಲಿತ ಸಮುದಾಯದ ಅಭಿವೃದ್ಧಿಗಾಗಿ ಯಾವುದೇ ಒಂದು ನಿರ್ಣಾಯಕ ಕ್ರಮಗಳನ್ನು ತೆಗದುಕೊಳ್ಳುವಲ್ಲಿ ಕಾಂಗ್ರೆಸ್ ಮತ್ತು ಗಾಂಧಿ ವಿಫಲವಾಗಿದ್ದಾರೆ ಎಂಬ ವಾದವನ್ನು ಮಂಡಿಸಿದ್ದಾರೆ. ಇದಕ್ಕೆ ಅವರು ನೀಡುವ ಕಾರಣ ಗಾಂಧೀಜಿಯವರು ಭಾರತೀಯ ರಾಷ್ಟ್ರೀಯ ಚಳುವಳಿಯಲ್ಲಿ ದಲಿತ ಸಮುದಾಯವನ್ನು ತೊಡಗಿಸುವುದರ ಜೊತೆಗೆ ಅವರನ್ನು ಒಗ್ಗೂಡಿಸುವ ಪ್ರಯತ್ನವನ್ನು ಮಾಡಿದರು. ಆದರೆ ಅವರ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸುಧಾರಣೆಯ ಕಡೆಗೆ ಯಾವುದೇ ಒಂದು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

**ಪ್ರೊ. ಮಹೇಶ್** ಅವರ **ಮೀಸಲಾತಿ ಮತ್ತು ಭವಿಷ್ಯದ ಪಥಗಳು**(2003) ಎಂಬ ಅಧ್ಯಯನದಲ್ಲಿ ಅಂಬೇಡ್ಕರ್‌ರನ್ನು ನೆನೆಯದ ಕ್ಷಣಗಳು, ಸ್ಥಳಗಳು, ಸಂಘ–ಸಂಸ್ಥೆಗಳು, ವ್ಯಕ್ತಿಗಳು ಇಂದು ಅತಿ ವಿರಳ. ಅವರಿರದ ಊರು ಕೇರಿ, ಹಳ್ಳಿ, ಪಟ್ಟಣ, ಬೀದಿ ಗಲ್ಲಿಗಳು ಕಾಣವು. ದೇಶ ಮತ್ತು ದಲಿತರ ಹಿತಕ್ಕಾಗಿ ಅಂಬೇಡ್ಕರರು ಸಂವಿಧಾನ ಸಭೆ ಸದಸ್ಯತ್ವ ಹೊಂದುವುದು ಅಗತ್ಯವಿತ್ತು. 1972ರ Delimitation act ಪ್ರಕಾರ ಸಂವಿಧಾನದ ವಿಧಿ 330 ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಲೋಕಸಭೆಯಲ್ಲಿ ಪ್ರಾತಿನಿಧ್ಯತೆ ಕಲ್ಪಿಸಿದೆ. ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 543. ಅದರಲ್ಲಿ ಪರಿಶಿಷ್ಟ ಜಾತಿಗೆ 79 ಮತ್ತು ಪರಿಶಿಷ್ಟ ವರ್ಗಕ್ಕೆ 41 ಸೀಟುಗಳನ್ನು ಮೀಸಲಿಡಲಾಗಿದೆ. ದೇಶದ ಎಲ್ಲಾ ರಾಜ್ಯಗಳ ಒಟ್ಟು

ವಿಧಾನಸಭೆಗಳ ಸದಸ್ಯರ ಸಂಖ್ಯೆ 3997. ಅದರಲ್ಲಿ 570 ಸದಸ್ಯರು ಪರಿಶಿಷ್ಟ ಜಾತಿಯ ಮತ್ತು 315 ಸದಸ್ಯರು ಪರಿಶಿಷ್ಟ ವರ್ಗಕ್ಕೆ ಸೇರಿರುತ್ತಾರೆ. 2002ರ ಡಿಲಿಮಿಟೇಶನ್ ಆಕ್ಟ್ ಪ್ರಕಾರ ಈಗ ಲೋಕಸಭೆಯ 543 ಸದಸ್ಯರಲ್ಲಿ ಪರಿಶಿಷ್ಟ ಜಾತಿಗೆ 84 ಮತ್ತು ಪರಿಶಿಷ್ಟ ವರ್ಗಕ್ಕೆ 47 ಸೀಟುಗಳನ್ನು ಮೀಸಲಿಡಲಾಗಿದೆ.

ಅಂಬೇಡ್ಕರ್ ಅವರು ಸಂವಿಧಾನ ರಚಿಸದಿದ್ದರೆ ಇವತ್ತಿನ ಈ ಮೀಸಲಾತಿಯ ಸೌಲಭ್ಯಗಳು ಎನ್ನುವುದು ಗಗನಕುಸುಮ ಆಗಿರುತ್ತಿತ್ತು. ಕನಿಷ್ಠ ಪ್ರಮಾಣದಲ್ಲಾದರೂ ಇಂದು ದಲಿತರು ಗಳಿಸಿರುವ ಶಿಕ್ಷಣ ಹುದ್ದೆಗಳು, ರಾಜಕೀಯ ಸ್ಥಾನಮಾನಗಳು ಮರೀಚಿಕೆ ಆಗುತ್ತಿದ್ದವು ಎಂಬುದನ್ನು ವಿವರಿಸಿದ್ದಾರೆ.

**ಡಾ. ವಿರೂಪಾಕ್ಷಿ ಪೂಜಾರಹಳ್ಳಿ**(2008) ಅವರ **ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ** ಎಂಬ ಅಧ್ಯಯನದಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆ ಅಪಾರ ಇದ್ದರೂ ರಾಜಕೀಯ ಸ್ಥಾನಮಾನ ಕಡಿಮೆಯಾಗಿದೆ ಮತ್ತು ರಾಜಕೀಯ ಅಧಿಕಾರವಿಲ್ಲದೆ ಪ್ರಗತಿ ಸಾಧ್ಯವಿಲ್ಲ ಎಂದು ಹೇಳಲಾಗುತ್ತದೆ. ಪಕ್ಷ ಯಾವುದೇ ಇರಲಿ ಎಲ್ಲ ಹಂತಗಳಲ್ಲೂ ರಾಜಕೀಯ ಪ್ರವೇಶ ಮಾಡಬೇಕು. ಜನಹಿತಕ್ಕಾಗಿ ಹೋರಾಟವು ಗುರಿಯಾಗಿರಬೇಕು. ರಾಜಕಾರಣ ಸಮಾಜ ಸೇವೆಯ ಒಂದು ಪ್ರಮುಖ ಅಂಗ ಚುನಾವಣಾ ಆಯೋಗ ಪರಿಶಿಷ್ಟ ಪಂಗಡದವರಿಗೆ ಇತ್ತೀಚೆಗೆ 15 ವಿಧಾನಸಭಾ, ಎರಡು ಲೋಕಸಭಾ ಕ್ಷೇತ್ರಗಳನ್ನು ಮೀಸಲಿರಿಸಿರುವುದು ಸ್ವಲ್ಪ ಸಮಾಧಾನದ ಸಂಗತಿ ಎಂಬುದನ್ನು ತಿಳಿಸಿದ್ದಾರೆ.

**ಡಿ. ಓಬಯ್ಯ ದೇವರಹಟ್ಟಿ**(2008) ಅವರ **ಬೇಡ ಸಮುದಾಯದ ಸಮಸ್ಯೆ ಮತ್ತು ಸವಾಲುಗಳು** ಎಂಬ ಲೇಖನದಲ್ಲಿ ಇಂದಿನ ದಿನಗಳಲ್ಲಿ ಪರಿಶಿಷ್ಟ ಪಂಗಡ ಸಮುದಾಯದ ಸ್ಥಿತಿಗತಿ, ಸ್ಥಾನಮಾನ ಬದುಕಿನ ನಿರ್ವಹಣೆಯ ಮಾನದಂಡಗಳ ಮೂಲಕ ಹೇಳುವುದಾದರೆ ಈ ಸಮುದಾಯದ ಜೀವನಸ್ಥಿತಿ ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ಸುಮಾರು ವರ್ಷಗಳಿಂದ ಈ ಸಮುದಾಯದ ಪರಂಪರೆ ಅಸ್ತಿತ್ವದಲ್ಲಿದ್ದರೂ ಹಲವಾರು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ ಮತ್ತು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ತೀರಾ ಹಿಂದುಳಿದಿದೆ. ಆದ್ದರಿಂದ ಇವತ್ತಿನ ಸಂದರ್ಭದಲ್ಲಿ ಇಂತಹ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಯಾವುದೇ ಸಭೆ ಸಮಾರಂಭಗಳಲ್ಲಿಯೂ ಕೇವಲ ಹೊಗಳಿಕೆ ಮಾತುಗಳು ಹೊರತು ಸಮಸ್ಯೆಗಳಿಗೆ ಯಾವುದೇ ಪರಿಹಾರವಿಲ್ಲ.

ಇವತ್ತಿನ ಸಂದರ್ಭದಲ್ಲಿ ಹಸಿವು, ಬಡತನ, ನಿರುದ್ಯೋಗ ಸಮಸ್ಯೆಯು ಹೆಚ್ಚಾಗಿದೆ. ಈ ಎಲ್ಲಾ ಸಮಸ್ಯೆಗಳಿಗೆ ಬಹುಮುಖ್ಯವಾದ ಕಾರಣ ಆರ್ಥಿಕತೆ. ಆದ್ದರಿಂದ ಇಂತಹ ಒಂದು ಪರಿಸ್ಥಿತಿಯಲ್ಲಿ ರಾಜಕೀಯ ಮುಖಂಡರು, ಬುದ್ಧಿಜೀವಿಗಳು ಹಾಗೂ ಸಂಘಸಂಸ್ಥೆಗಳು ಹೋರಾಟಕ್ಕಿಳಿದು ಸರ್ಕಾರಕ್ಕೆ ಬೇಡಿಕೆ ಇಟ್ಟರೆ ಮಾತ್ರ ಸಾಧ್ಯ ಎಂಬುದನ್ನು ತಿಳಿಸಿದ್ದಾರೆ.

**ಪಾಂಡ (Panda)** (2010) **ಅವರ Political participation of Tribals** ಎಂಬ ಅಧ್ಯಯನದಲ್ಲಿ ಪ್ರಜಾಪ್ರಭುತ್ವವು ಜನರ ಅಂತಿಮ ಶಕ್ತಿಯ ತಳಹದಿಯಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರ ಪಾತ್ರ, ಜನರ ಸಂಘಟನೆ, ರಾಜಕೀಯ ಪ್ರಕ್ರಿಯೆಯಲ್ಲಿ ಜನರು ನ್ಯಾಯವನ್ನು ಪಡೆಯುವುದರಲ್ಲಿ, ರಾಜಕೀಯ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲಿ ಸಾಕಷ್ಟು ವಿಷಯಗಳಲ್ಲಿ ಜನರ ಪಾತ್ರ ಪ್ರಮುಖವಾಗಿರುತ್ತದೆ. ಪ್ರಜಾಪ್ರಭುತ್ವದ ಸಫಲತೆಗೆ ಮತ್ತು ವಿಫಲತೆಗೆ ಹಾಗೂ ಸತತ ಮತ್ತು ಪರಿಣಾಮಕಾರಿ ರಾಜಕೀಯ ಭಾಗವಹಿಸುವಿಕೆ ವಿವಿಧ ಹಂತಗಳಲ್ಲಿ ತೀರ್ಮಾನ ಕೈಗೊಳ್ಳುವಿಕೆ ಅತ್ಯಂತ ಪ್ರಮುಖವಾಗಿದೆ. ಆದರೆ ಭಾರತ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವವಾದರೂ ಸಾಕಷ್ಟು ಜನರು ರಾಜಕೀಯ ವ್ಯವಹಾರ ಮತ್ತು ಸಮಸ್ಯೆಗಳ ಬಗ್ಗೆ ಆಸಕ್ತಿ ತೋರದೆ ಇರುವುದು ವಿಷಾದನೀಯವಾಗಿದೆ. ತೀರ್ಮಾನ ಕೈಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಜನರು ಭಾಗವಹಿಸದೆ ಇರುವುದು ಒಂದು ಪ್ರಶ್ನೆಯಾಗಿದೆ ಎಂಬುದನ್ನು ತಿಳಿಸಿದ್ದಾರೆ.

**ಗಣೇಶ್ ಮೊಗಳ್ಳಿ**(1991) ಅವರ **ಆಧುನಿಕತೆಯನ್ನು ಬೆನ್ನುಹತ್ತಿದ ದಲಿತರು** ಎಂಬ ಅಧ್ಯಯನದಲ್ಲಿ ದಲಿತ ಮತ್ತು ಶೋಷಿತ ವರ್ಗದವರ ಸಾಮಾಜಿಕ ಜೀವನ ಚಿತ್ರಣವನ್ನು ಒಳಗೊಂಡಿದ್ದು, ಸಂಶೋಧನಾ ಅಧ್ಯಯನದ ದೃಷ್ಟಿಯಿಂದ ಒಂದು ಉತ್ತಮ ಪರಾಮರ್ಶನ ಕೃತಿಯಾಗಿದೆ. ಈ ಕೃತಿಯಲ್ಲಿ ದಲಿತರು ಪ್ರಾಚೀನ ಕಾಲದಿಂದಲೂ ಅನೇಕ ಅನರ್ಹತೆಗೆ ಹಾಗೂ ಶೋಷಣೆಗೆ ಒಳಗಾಗಿ ತಮ್ಮ ಜೀವನವನ್ನು ಸಾಗಿಸುತ್ತಾ ಬಂದಿದ್ದರೆ, ಸ್ವಾತಂತ್ರ್ಯ ನಂತರ ಸಂವಿಧಾನದ ರಕ್ಷಣೆಯಲ್ಲಿ ಶಿಕ್ಷಣ, ರಾಜಕೀಯವಾಗಿ ಮೀಸಲಾತಿ ಹಾಗೂ ಶಿಕ್ಷಣ, ಕೈಗಾರೀಕರಣ, ನಗರೀಕರಣ, ಆಧುನೀಕರಣ ಹಾಗೂ ಪಾಶ್ಚಾತ್ಯೀಕರಣಗಳ ಪ್ರಭಾವದಿಂದ ದಲಿತರು ಪ್ರಸ್ತುತ ದಿನಗಳಲ್ಲಿ ಯಾವ ರೀತಿ ಬದಲಾವಣೆ ಪ್ರಕ್ರಿಯೆಗೆ ಒಳಗಾಗುತ್ತಿದ್ದಾರೆ ಎನ್ನುವ ಅಂಶವನ್ನು ನಮ್ಮ ಮುಂದಿಟ್ಟಿದ್ದಾರೆ.

**ಮೂರ್ತಿ ಎನ್**.(2006) ಅವರ **ಭಾರತದ ರಾಜಕೀಯ ಸುಧಾರಣೆ** ಎಂಬ ಅಧ್ಯಯನದಲ್ಲಿ ಭಾರತದ ವಿವಿಧ ರಾಜ್ಯಗಳ ರಾಜಕೀಯ ಸುಧಾರಣೆಗೆ ಸಂಬಂಧಿಸಿದಂತೆ ಸಮಗ್ರವಾದ ಮಾಹಿತಿಯನ್ನು ನೀಡುತ್ತದೆ. ಭಾರತದ ವಿವಿಧ ರಾಜ್ಯಗಳಲ್ಲಿ ರಾಜಕೀಯ

ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಗಳ ಬಗ್ಗೆ ಮತ್ತು ಸಮಾಜದ ಕೆಳವರ್ಗದವರನ್ನು ಸಮಾನತೆ ಪರಿಕಲ್ಪನೆಗಳ ಬಗ್ಗೆ ವಿವರಣೆ ನೀಡುತ್ತದೆ.

**ಎಚ್.ಟಿ. ಪೋತೆ ಮತ್ತು ಜಗನ್ನಾಥ ಸಿಂದೆ**(2006) ಅವರ **ಮೀಸಲಾತಿಯ ಸಮಸ್ಯೆ : ಸವಾಲುಗಳು** ಎಂಬ ಪುಸ್ತಕದಲ್ಲಿ ಹಿಂದುಳಿದ ವರ್ಗಗಳ ಪುನರ್ ಸಂಘಟನೆ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿ, ಇತ್ಯಾದಿಗಳನ್ನು ಒಂದೆಡೆ ಕಾಣುತ್ತಿದ್ದರೆ, ಇನ್ನೊಂದಡೆ ದಲಿತವರ್ಗಗಳ ಒಡೆದು ಹೋಳಾಗಿ ಹೋಗುವ ವ್ಯವಸ್ಥೆಯನ್ನು ತಿಳಿಸುತ್ತದೆ. ಇದು ನನ್ನ ಸಂಶೋಧನ ವಿಷಯದ ಪ್ರಸುತ್ತ ಕಾಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಸ್ಯೆಗಳು ತಿಳಿಯಲು ಸಹಕಾರಿಯಾಗಿದೆ.

**ಹೆಚ್.ಎಂ. ರಾಜಶೇಖರ್**(2013) ಅವರ **ಭಾರತ ಸರ್ಕಾರ ಮತ್ತು ರಾಜಕೀಯ** ಎಂಬ ಪುಸ್ತಕವು ನಮ್ಮ ಸಂವಿಧಾನದಲ್ಲಿ ಭಾರತ ಮತ್ತು ವಿವಿಧ ರಾಜ್ಯಗಳ ಚುನಾವಣೆ ವ್ಯವಸ್ಥೆಯ ಬಗ್ಗೆ ಶಾಸನಬದ್ಧವಾದ ನೀತಿ ನಿಯಮಗಳನ್ನು ಮತ್ತು ಕಾನೂನುಗಳನ್ನು ತಿಳಿಯಲು ಸಹಕಾರಿಯಾಗಿದೆ. ನಮ್ಮ ರಾಜ್ಯದ ಜನತಾ ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಅನುಸರಿಸಬೇಕಾದ ಮಾಹಿತಿಯನ್ನು ಸಂಗ್ರಹಿಸಲು ತುಂಬಾ ಸಹಕಾರಿಯಾದ ಗ್ರಂಥವಾಗಿದೆ.

**ಡಾ.ಟಿ.ಆರ್. ಚಂದ್ರಶೇಖರ್**(2004) ಅವರ **ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ** ಎಂಬ ಅಧ್ಯಯನದಲ್ಲಿ ಇಂದು ಭಾರತವು ಎದುರಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಅಂಬೇಡ್ಕರ್ ಚಿಂತನೆಗಳು ಹೆಚ್ಚು ಉಪಯುಕ್ತವೆಂದು ತಿಳಿಸಿದ್ದಾರೆ. ಭಾರತವು ಎದುರಿಸುತ್ತಿರುವ ವರ್ತಮಾನದ ಸಮಸ್ಯೆಗಳನ್ನು ಚರ್ಚಿಸುವ ಸಂದರ್ಭದಲ್ಲಿ ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ನಾವು ಹೆಚ್ಚು ಹೆಚ್ಚು ಅಂಬೇಡ್ಕರ್ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಿರುತ್ತೇವೆ. ಆದರೆ ಅವರಿಗೆ ನೀಡಬೇಕಾದಷ್ಟು ಗೌರವವನ್ನು ನೀಡಿಲ್ಲ. ಈಗಲೂ ಭಾರತದ ಅಖಂಡತೆಯ ಬಗ್ಗೆ ಮಾತನಾಡುವಾಗ ನಾವು ಸರ್ದಾರ್ ವಲ್ಲಭಬಾಯ್ ಪಟೇಲರ ಕೊಡುಗೆಯನ್ನು ಎತ್ತಿ ಹೇಳುತ್ತಿರುತ್ತೇವೆ. ಇದು ಒಂದು ರೀತಿಯಲ್ಲಿ ಸರಿ. ಇದಕ್ಕೆ ಸಮಾನಾಂತರವಾಗಿ ಅಂಬೇಡ್ಕರ್ ಅವರು ನಾಡಿನ ದಮನಿತ ದಲಿತ ಸಮುದಾಯಗಳನ್ನು ಸಂಘಟಿಸಿ ಸಾಮಾಜಿಕ ಏಕೀಕರಣಕ್ಕೆ ನೀಡಿದ ಕೊಡುಗೆಯು ಅಷ್ಟೇ ಮಹತ್ವವಾದುದು ಎಂಬುದನ್ನು ನಾವು ಮರೆಯಬಾರದು ಎಂಬುದನ್ನು ತಿಳಿಸಿದ್ದಾರೆ.

**ಹಣಮಂತ್ರಾಯ ದೊಡ್ಡಮನಿ**(2011) ಅವರ **ದೇವರಾಜ ಅರಸು ಮತ್ತು ಕರ್ನಾಟಕ ರಾಜಕಾರಣ** ಎಂಬ ಅಧ್ಯಯನವು ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಕೇವಲ ಮೇಲುಜಾತಿಯವರೆ ಪ್ರಮುಖರಲ್ಲ, ಸಮಾಜದ  ಕೊನೆಯಲ್ಲಿ ವಾಸಿಸುತ್ತಿರುವ ಕೆಳ ಸಮುದಾಯದ ಜನರು ಕೂಡ ಪ್ರಮುಖರು ಎಂಬುದನ್ನು ಇದರ ಮೂಲಕ ತಿಳಿಯಬಹುದಾಗಿದೆ.

**ಮಿಲ್ಲರ್ ಡೇವಿಡ್** ಅವರ **ದಿ ಐಡಿಯಾಲಾಜಿಕಲ್ ಬ್ಯಾಗ್ರೌಂಡ್ಸ್ ಟು ಕನ್ಸಪ್ಷನ್ಸ್ ಆಫ್ ಸೋಸಿಯಲ್ ಜಸ್ಟಿಸ್** ಎಂಬ ಲೇಖನದಲ್ಲಿ ರಾಜಕೀಯ ಅಧಿಕಾರವು ಆಸ್ತಿ ಹಂಚಿಕೆಯಾಗುವಂತೆ ಹಂಚಿಕೆಯಾಗಬೇಕೆಂದು ಹೇಳುತ್ತಾ, ಪ್ರಜಾಪ್ರಭುತ್ವವು ಸಾಮಾಜಿಕ ನ್ಯಾಯದ ತತ್ವದ ಬಗ್ಗೆ ಹೇಳುತ್ತಾ ಅದರಲ್ಲಿ ಸಾಮಾಜಿಕ ನ್ಯಾಯದ ಅಂಶವು ಒಳಗೊಂಡಿರುವ ಬಗೆಯನ್ನು ತಿಳಿಸುತ್ತಾರೆ. ಸಾಮಾಜಿಕ ನ್ಯಾಯವು ಮತ್ತು ರಾಜಕೀಯ ಸಮಾನತೆಯು ಕ್ಲಾಸಿಕಲ್ ಉದಾರವಾದದಲ್ಲಿ ಯಾವ ಅರ್ಥವನ್ನು ಹೊಂದಿದೆ ಎಂಬುದನ್ನು ವಿವರಿಸುತ್ತಾ ರಾಜಕೀಯ ಸಮಾನತೆ ಮತ್ತು ನಾಗರಿಕತೆಯು ಆಧುನಿಕ ಉದಾರವಾದದಲ್ಲಿ ಹೇಗೆ ಸಂಬಂಧವನ್ನು ಹೊಂದಿದೆ ಎಂಬುದನ್ನು ಕೂಡಾ ಈ ಲೇಖನದಲ್ಲಿ ವಿಶ್ಲೇಷಣೆಯನ್ನು ಮಾಡಿದ್ದಾರೆ.

**ನಂದಾ ಗುಲ್‌ಜರಿಲಾಲ್** ಅವರ **ಎಕನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಜಸ್ಟಿಸ್** ಎಂಬ ಲೇಖನದಲ್ಲಿ ಆರ್ಥಿಕ ಅಭಿವೃದ್ಧಿಯ ಇಂದಿನ ಸಮಾಜದ ಮಹತ್ವದ ಅಂಶವಾಗಿದೆ ಎಂಬ ಅಂಶವನ್ನು ವಿವರಿಸುತ್ತಾ ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಯು ಸಂವಿಧಾನದ ಪೀಠಿಕೆಯಲ್ಲಿ, ಹಾಗೆಯೇ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾಗಿದ್ದನ್ನು ಕೂಡ ಲೇಖನದಲ್ಲಿ ವಿವರಿಸಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾಜಿಕ ನ್ಯಾಯದ ಸಾಧನೆಗಾಗಿ ಖರ್ಚು ಮಾಡಿದ ವೆಚ್ಚದ ಬಗ್ಗೆ ವಿವರಣೆಯನ್ನು ನೀಡುತ್ತಾರೆ. ಆರ್ಥಿಕ ಅಭಿವೃದ್ಧಿಯಿಂದ ಸಮಾಜದಲ್ಲಿ ಎಲ್ಲರೂ ಸಮಾನತೆಯನ್ನು ಹೊಂದಿ ಸಾಮಾಜಿಕ ನ್ಯಾಯವನ್ನು ಸಾಧಿಸಬಹುದೆಂದು ವಿವರಿಸುತ್ತಾ ಸಮಾಜದ ಬದಲಾವಣೆಗೆ ಹೊಸ ವಿಧದ ತಂತ್ರಜ್ಞಾನದ ಅವಶ್ಯಕತೆ ಇದೆ ಎಂಬುದನ್ನು ಈ ಲೇಖನದಲ್ಲಿ ಎತ್ತಿ ತೋರಿಸಿದ್ದಾರೆ.

**ಶರ್ಮಾ ಬಿ.ಡಿ.**(1990) ಅವರ **ಸೋಶಿಯಲ್ ಜಸ್ಟಿಸ್ ರಿಯಾಲಿಟಿ ಬ್ಲಾಸ್ಟ್ ಮಿಥ್: ಕಂಡಿಶನ್ ಆಫ್ ಎಸ್.ಸಿ. ಆ್ಯಂಡ್ ಎಸ್.ಟಿ. ಡಿ ಟರಿಯೋರ್ಟ್ಸ್ ಪರದರ್ ಇನ್ ಈಕ್ವಾಲಿಟಿ ಇನ್ ಸೊಸೈಟಿ ಗ್ರೋವಿಂಗ್ ಪಾಸ್ಟ್** ಎಂಬ ಲೇಖನದಲ್ಲಿ ಸ್ವಾತಂತ್ರ್ಯ ನಂತರ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿರುವುದನ್ನು ವಿವರಿಸಿದ್ದಾರೆ. ಆದ್ದರಿಂದ ಶೈಕ್ಷಣಿಕವಾಗಿ ಅವರು ಸ್ವಲ್ಪಮಟ್ಟಿಗೆ ಬೆಳವಣಿಗೆಯನ್ನು ಹೊಂದಿದ್ದಾರೆ ಹಾಗೂ ಕೆಲವರು ಸರಕಾರಿ ಹುದ್ದೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಅವರ ಪರಿಸ್ಥಿತಿ ಯಾವುದೇ ರೀತಿಯಲ್ಲಿ ಇನ್ನೂ ಬದಲಾವಣೆ ಆಗಿಲ್ಲವೆಂಬುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ನಮ್ಮ ದೇಶದ ಆರ್ಥಿಕ ಪದ್ಧತಿಯು ಅಸಮಾನತೆಯಿಂದ ಹೆಚ್ಚಾಗುತ್ತಾ ನಡೆದಿರುವುದನ್ನು ಕೂಲಿಕಾರರಿಗೆ ಸರಿಯಾದ ಕೂಲಿ ಕೊಡದೇ ಇರುವುದನ್ನು ಕೂಡ ಈ ಲೇಖನದಲ್ಲಿ ಚರ್ಚೆ ಮಾಡಿದ್ದಾರೆ.

**ಎಂ. ಮಂಜಣ್ಣ**(2011) ಅವರ **ಅಂಬೇಡ್ಕರ್ ಮತ್ತು ಸ್ವಾತಂತ್ರ್ಯೋತ್ತರ ಭಾರತ** ಎಂಬ ಅಧ್ಯಯನದಲ್ಲಿ ಅಂಬೇಡ್ಕರರು ಭಾರತಕ್ಕೆ ಸ್ವತಂತ್ರ ಸಂವಿಧಾನ ನಿರ್ಮಾಣದ ಹಂತದಲ್ಲಿ ಅನೇಕ ಬಗೆಯ ತಿರಸ್ಕಾರಗಳಿಗೆ ಒಳಗಾದರು. ತಮ್ಮ ಅವಮಾನವನ್ನು ಸಹಿಸಿಕೊಂಡು ಸಮಷ್ಟಿ ನೆಲೆಯ ಹಿತವನ್ನೇ ಬಯಸಿದ ಕೀರ್ತಿ ಅಂಬೇಡ್ಕರ್ ಅವರದ್ದಾಗಿದೆ. ಅವರು ಸಂವಿಧಾನ ರಚನೆಯ ಅಧ್ಯಕ್ಷರಾಗಲು ಒಪ್ಪಿದ್ದು, ಸಂವಿಧಾನ ರಚಿಸಿದ್ದು ಇಂಡಿಯಾದಲ್ಲಿ ಅವರಷ್ಟೇ ಪ್ರತಿಭಾವಂತರ ಕೊರತೆಯನ್ನು ಸೂಚಿಸುವುದಲ್ಲದೆ ದಲಿತರಿಗೆ ನ್ಯಾಯ ಒದಗಿಸಬೇಕೆಂಬ ಅತೀವ ಕಳಕಳಿಯಿಂದ. ಪುಣೆ ಒಪ್ಪಂದದ ನಂತರ ದಲಿತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ಒದಗಿಸಬೇಕೆಂಬುದು ಅವರ ಅಚಲ ನಿಲುವಾಗಿತ್ತು. ದಲಿತರಿಗೆ ಸಂಬಂಧಿಸಿದಂತೆ ಹೋರಾಟದ ನಿರಂತರತೆಯಲ್ಲಿ ಅವರು ಕೆಲವು ವಾಸ್ತವ ಸತ್ಯಗಳನ್ನು ಅರಿತವರಾಗಿದ್ದರು. ಇದರ ಫಲವಾಗಿಯೇ ರಾಜಕಾರಣದಲ್ಲಿ ದಲಿತರು ಅವಕಾಶಗಳನ್ನು ಪಡೆಯುವಂತಾಯಿತು ಎನ್ನುವುದನ್ನು ತಿಳಿಸಿದ್ದಾರೆ.

**ಬಸವರಾಜ್**(2005) ಅವರ **ಅಧಿಕಾರ ವಿಕೇಂದ್ರೀಕರಣ ಹಾಗೂ ಗ್ರಾಮ ಪಂಚಾಯತಿ ಸ್ವರೂಪ ಮತ್ತು ಅದರ ಕಾರ್ಯಾಚರಣೆ – ಶಿವಮೊಗ್ಗ ಜಿಲ್ಲೆ ಒಂದು ಅಧ್ಯಯನ**ದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಯಾವುದೇ ರೀತಿಯ ರಾಜಕೀಯ ಜ್ಞಾನ ಇಲ್ಲದಿರುವುದು ತಿಳಿಯುತ್ತದೆ. ಅನಕ್ಷರಸ್ಥರು ಹಾಗೂ ಅಜ್ಞಾನಿಗಳಾಗಿರುವುದರಿಂದ ಈ ವಿಷಯದ ಬಗ್ಗೆ ಅರಿವನ್ನು ಹೊಂದಿಲ್ಲದಿರುವುದು ಕಂಡುಬರುತ್ತದೆ. ಪರಿಶಿಷ್ಟ ಜನಾಂಗದವರು ಚುನಾವಣೆಯಲ್ಲಿ ಹೆಚ್ಚು ಜನ ಚುನಾಯಿತರಾದರೂ ಅವರ ರಾಜಕೀಯ

ಜ್ಞಾನದ ಕೊರತೆಯಿರುವುದರಿಂದ ಸಮರ್ಪಕವಾದ ಆಡಳಿತ ಒದಗಿಸಲು ಸಾಧ್ಯವಾಗಿಲ್ಲ ಎಂಬುದನ್ನು ತಿಳಿಸಿದ್ದಾರೆ.

**ಕರ್ನಾಟಕ ವಿಧಾನಸಭೆ**(2015) **14ನೇ ವಿಧಾನಸಭಾ ಸದಸ್ಯರ ಸಂಕ್ಷಿಪ್ತ ವ್ಯಕ್ತಿ ಪರಿಚಯ** ಎಂಬ ಶೀರ್ಷಿಕೆಯಲ್ಲಿ ಸದಸ್ಯರಿಂದ ಸ್ವೀಕರಿಸಲಾದ ವಿವರಗಳನ್ನು ಆಂಗ್ಲ ಭಾಷೆಯ ಅಕ್ಷರ ಕ್ರಮಾನುಸಾರ ಜೋಡಿಸಲಾಗಿದೆ. 14ನೇ ವಿಧಾನಸಭೆಯ ಸದಸ್ಯರು, ಮಹಿಳಾ ಸದಸ್ಯರು, ಸದಸ್ಯರ ಸದಸ್ಯತ್ವ ಅವಧಿ ಹಾಗೂ ವಿಧಾನಸಭೆಯ ಅವಧಿ, ಪಕ್ಷಗಳ ಬಲಾಬಲ, ವಿಧಾನಸಭಾ ಸದಸ್ಯರ ವಿದ್ಯಾರ್ಹತೆಯ ಸಂಕ್ಷಿಪ್ತ ವಿವರಗಳನ್ನು ತಿಳಿಸಲಾಗಿದೆ. ಇದರ ಜೊತೆಗೆ ಕರ್ನಾಟಕ ಸರ್ಕಾರದ ಮಂತ್ರಿಮಂಡಲದ ಸದಸ್ಯರ ಹೆಸರು, ಖಾತೆ ಹಾಗೂ ವಿಳಾಸಗಳ ವಿವರಗಳನ್ನು ಸಹ ಹೇಳಲಾಗಿದೆ.

ಈ ಶೀರ್ಷಿಕೆಯು ಶಾಸಕರಿಗೆ ಉಪಯುಕ್ತವಾಗುವುದರ ಜೊತೆಗೆ ಸಂಶೋಧಕರಿಗೆ, ವಿದ್ವಾಂಸರಿಗೆ ಹಾಗೂ ಚುನಾಯಿತ ಪ್ರತಿನಿಧಿಗಳ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ಹೊಂದಿರುವ ಇತರ ಎಲ್ಲರಿಗೂ ಸಹ ಸಹಕಾರಿಯಾಗಿದೆ.

**ಡಾ. ದುರುಗಪ್ಪ ಎಂ.ಕೆ.**(2010) ಅವರ **ವಿಜಯನಗರೋತ್ತರಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ** ಎಂಬ ಅಧ್ಯಯನದಲ್ಲಿ ರಾಜಕೀಯದಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗಳಿಗೆ ಕೆಲವು ಸ್ಥಾನಗಳನ್ನು ಮೀಸಲಿಟ್ಟದ್ದರಿಂದ ಈ ವರ್ಗದವರು ರಾಜಕೀಯದಲ್ಲಿ ಬೆಳೆಯಲು ಅನುಕೂಲವಾಯಿತು ಎಂದಿದ್ದಾರೆ. ರಾಜ್ಯದ ರಾಜಕೀಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಪ್ರಮಾಣ ಈ ಮೊದಲು ಕೇವಲ ಶೇ. 3%. ಹಾಗಾಗಿ ಕೇವಲ ಎರಡು ವಿಧಾನಸಭಾ ಕ್ಷೇತ್ರಗಳು ಮಾತ್ರ ಅವರಿಗೆ ಮೀಸಲು ಇಡಲಾಗಿತ್ತು. ಇತ್ತೀಚೆಗೆ ಜಾತಿವಾರು ಸಂಖ್ಯೆಗನುಗುಣವಾಗಿ ಕ್ಷೇತ್ರ ಮರುವಿಂಗಡಣೆ ನಡೆಸಿರುವುದರಿಂದ ಬೇಡರಿಗೆ 15 ವಿಧಾನಸಭಾ ಕ್ಷೇತ್ರಗಳು ಮತ್ತು 2 ಲೋಕಸಭಾ ಕ್ಷೇತ್ರಗಳನ್ನು ಮೀಸಲಿಡಲಾಗಿದೆ ಎಂಬುದನ್ನು ತಿಳಿಸಿದ್ದಾರೆ.

**ಪ್ರೊ. ಲಕ್ಕಪ್ಪ ಗೌಡ ಹೆಚ್.ಜೆ.**(1998) ಅವರ **ಕರ್ನಾಟಕ ಬುಡಕಟ್ಟುಗಳು** ಎಂಬ ಅಧ್ಯಯನದಲ್ಲಿ ಬುಡಕಟ್ಟು ಎಂಬ ಪದವನ್ನು ಇಂಗ್ಲೀಷಿನ Tribe ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಈ ಪದಕ್ಕೆ ವಿದ್ವಾಂಸರು ಹಲವು ವ್ಯಾಖ್ಯೆಗಳನ್ನು ನೀಡುವುದನ್ನು ವಿವರಿಸಿದ್ದಾರೆ. ಅದರಲ್ಲಿ ಅಮೆರಿಕದ ವಿಶ್ವಕೋಶ ಪ್ರಕಾರ ನಾಡಿನ

ಕಾನೂನಿಗಿಂತ ಭಿನ್ನವಾದ ಸಂಪ್ರದಾಯಗಳನ್ನು ಇಂದಿಗೂ ಪರಿಪಾಲಿಸಿಕೊಂಡು ಬರುತ್ತಿರುವ ಜನರನ್ನು ಸೂಚಿಸಲು ಬಳಸಲಾಗುತ್ತಿರುವ ಪದ ಎಂದು ತಿಳಿಸಲಾಗಿದೆ. ಮತ್ತೊಂದು ರೀತಿಯಲ್ಲಿ ಒಂದೇ ವಾಸ ಪ್ರದೇಶವನ್ನು ಹೊಂದಿ, ಏಕರೂಪದ ಪದ್ಧತಿಗಳನ್ನು ಅನುಸರಿಸುತ್ತಾ ನಾಡಿನ ಸಮಾಜದ ಭಾಗವಾಗದೆ ಪ್ರತ್ಯೇಕವಾಗಿರುವ ಜನರ ಯಾವುದೇ ಗುಂಪಿಗೆ ಈ ಪದವನ್ನು ಅನ್ವಯಿಸಬಹುದು ಎಂದಿದ್ದಾರೆ.

**ಶ್ರೀ ತೆ. ಹನುಮಂತಪ್ಪ**(2001) ಅವರ **ವಿಧಾನಮಂಡಲದ ಇತಿಹಾಸ** ಎಂಬ ಅಧ್ಯಯನದಲ್ಲಿ ಹಿಂದಿನ ಮೈಸೂರು ರಾಜ್ಯ ಇಡೀ ರಾಷ್ಟ್ರದಲ್ಲೇ ಪ್ರಪ್ರಥಮ ಚುನಾಯಿತ ಪ್ರಜಾಪ್ರತಿನಿಧಿ ಸಭೆಯನ್ನು ಹೊಂದಿದ್ದ ರಾಜ್ಯವೆಂದು ಪ್ರಖ್ಯಾತಿ ಹೊಂದಿತ್ತು. ಈ ಪ್ರತಿನಿಧಿ ಸಭೆಯ ಇತಿಹಾಸವನ್ನು ಹಾಗೂ ಅದರ ಹಿನ್ನೆಲೆಯ ವಿಷಯ ಸಂಗ್ರಹಿಸಿ ತಯಾರಿಸಿರುವ ಈ ಗ್ರಂಥ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಆಸಕ್ತಿ ಇರುವವರೆಲ್ಲರಿಗೂ ಬಹಳ ಉಪಯುಕ್ತವಾದ ಆಧಾರಗ್ರಂಥವಾಗಿದೆ. ಪ್ರಜಾಪ್ರತಿನಿಧಿ ಸಭೆಯ ಕಾರ್ಯಕಲಾಪಗಳ ವಿಶ್ಲೇಷಣಾತ್ಮಕ ವಿಮರ್ಶೆಯನ್ನೊಳಗೊಂಡಿದ್ದು, ಅದರಿಂದ ರಾಜ್ಯದ ಜನತೆಯ ಮೇಲೆ ಆಗಿರುವ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ.

**ಡಾ. ವಿರೂಪಾಕ್ಷಿ ಪೂಜಾರಹಳ್ಳಿ**(2007) ಅವರ **ಬೇಟೆ ಮತ್ತು ಬೇಡರು** ಎಂಬ ಅಧ್ಯಯನದಲ್ಲಿ ನಾಯಕ, ವಾಲ್ಮೀಕಿ, ಬೇಡ ಜನಾಂಗಕ್ಕೆ ಇತರ ಪರ್ಯಾಯ ಜಾತಿಗಳನ್ನು ಸೇರಿಸಲು ಒತ್ತಾಯಿಸಿ ಅನೇಕ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದಿದ್ದಾರೆ. 1972ರಲ್ಲಿ ಎಲ್.ಜಿ. ಹಾವನೂರು ಅವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 1975ರಲ್ಲಿ ಯೋಜನೆ ತಯಾರಿಸಿತು. ಇದರಿಂದ ಬೇಡರ ಸುಮಾರು 18 ಪರ್ಯಾಯ ಪಂಗಡಗಳಿಗೆ ಅನುಕೂಲವಾಯಿತು. ಅದೇ ಕೋಮಿನ ಉಳಿದವರಿಗೆ ಅನ್ಯಾಯವಾಗಿದ್ದು ಸ್ಪಷ್ಟ. ಈ ಅನ್ಯಾಯವನ್ನು ಸರಿಪಡಿಸಿದ್ದು ಕೆಲವು ವರ್ಷಗಳ ನಂತರ ರಾಷ್ಟ್ರೀಯ ನಾಯಕರು (1991) ಬೇಡ, ವಾಲ್ಮೀಕಿ  ಮೊದಲಾದವರು ಮೇಲಿನ ಸೌಲಭ್ಯ ಪಡೆದರೂ ತಳವಾರ, ಪರಿವಾರ ಮೊದಲಾದವರಿಗೆ ಆ ಸೌಲಭ್ಯ(ಎಸ್. ಟಿ.) ಸಿಗಲಿಲ್ಲ ಮತ್ತು ರಾಜ್ಯದ ಪರಿಶಿಷ್ಟ ಪಂಗಡಕ್ಕಿರುವ  ಶೇ.3 ರಷ್ಟು ಮೀಸಲಾತಿ ಪ್ರಮಾಣವನ್ನು ಕೇಂದ್ರ ಸರ್ಕಾರದಂತೆ ಶೇ.7ಕ್ಕೆ ಹೆಚ್ಚಿಸಲು ಮತ್ತು ಪರಿವಾರ, ತಳವಾರ ಮೊದಲಾದವರನ್ನು ಎಸ್.ಟಿ. ವರ್ಗಕ್ಕೆ ಸೇರಿಸಲು ಹೋರಾಟಗಳು ನಡೆಯುತ್ತಿವೆ. ಚಿತ್ರದುರ್ಗ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳ ಬೇಡರು ಸರ್ಕಾರಕ್ಕೆ ಮನವಿ ಪತ್ರಗಳನ್ನು ಕೊಟ್ಟಿರುವುದನ್ನು ತಿಳಿಸಿದ್ದಾರೆ.

**ಅಮಾಲ್ ಕುಮಾರ್** ಅವರು **ಪೊಲಿಟಿಕಲ್ ಸೋಷಿಯಾಲಜಿ: ಎನ್ ಇಂಟ್ರಡಕ್ಟರಿ ಅನಾಲಿಸಿಸ್** (Political sociology: An Introductory Analysis) ಎಂಬ ಅಧ್ಯಯನದಲ್ಲಿ ಭಾಗವಹಿಸುವಿಕೆ ಪ್ರಮುಖ ಅರ್ಥವಾಗಿದ್ದು ಸಂಪರ್ಕ ಅನುಮೋದನೆಯಾಗುತ್ತದೆ. ಆದರೆ ಪ್ರಜಾಪ್ರಭುತ್ವದಲ್ಲಿ ಹಿಂತೆಗೆಯಲಾಗುತ್ತದೆ ಮತ್ತು ಅಧಿಕಾರಿಗಳಿರುವುದೇ ಅಧಿಕಾರ ಚಲಾಯಿಸಲು ಎನ್ನುವಂತಾಗಿದೆ ಎಂದಿದ್ದಾರೆ.

**ಟಿಯಾನ್ಜಿಯಾನ್(Tianjion)** ಅವರ **ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಬೀಜಿಂಗ್** (Political Participation in Beijing) ಎಂಬ ಅಧ್ಯಯನದಲ್ಲಿ ರಾಜಕೀಯ ಮಾದರಿಯಲ್ಲಿ ಭಾಗವಹಿಸುವಿಕೆಯ ರೀತಿ ಮತ್ತು ಗ್ರಹಿಕೆ, ಯಶಸ್ವಿ ಕಾರ್ಯ ಭಾಗವಹಿಸುವಿಕೆಯಲ್ಲಿ ಸಫಲತೆಯನ್ನು ಕಂಡಿದೆ ಎಂದಿದ್ದಾರೆ.

**ಗೆರೈನ್ ಪ್ಯಾರಿ(Geraint Parry)**(1972) ಅವರ **ಪಾರ್ಟಿಸಿಪೇಷನ್ ಇನ್ ಪಾಲಿಟಿಕ್ಸ್** (Participation in Politics) ಎಂಬ ಪ್ರಮುಖ ಪುಸ್ತಕದಲ್ಲಿ ಸ್ಪಷ್ಟವಾದ ಮಾದರಿಯಲ್ಲಿ ಅದು ಪರಿಚಯಾತ್ಮಕವಾಗಿದೆ. ಎಷ್ಟು ಸದಸ್ಯರು ಪ್ರೋತ್ಸಾಹ ನೀಡುತ್ತಾರೆ, ಎಷ್ಟು ಸದಸ್ಯರು ಪರಿಣಾಮಕಾರಿಯಾಗಿ ಇತರೆ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳೊಂದಿಗೆ ಸಂಪರ್ಕವನ್ನು ಹೊಂದುತ್ತಾರೆ ಎನ್ನುವುದು ಮುಖ್ಯ ಎಂಬುದನ್ನು ತಿಳಿಸಿದ್ದಾರೆ.

**ರಿಚರ್ಡ್ ರೋಸ್(Richard Rose)**(1980) ಅವರ **ಎಲೆಕ್ಟೊರಲ್ ಪಾರ್ಟಿಸಿಪೇಷನ್: ಎ ಡೆವಲಪ್ಮೆಂಟ್ ಅಪ್ರೋಚ್, ಜಿ. ಎ. ಅಲ್ಮೊಂಡ್ ಆ್ಯಂಡ್ ಜಿ. ಬಿ. ಪೊವೆಲ್**(Electoral Participation: A Development Approach, G. A. Almond and G. B. Powell)ರ ತುಲನಾತ್ಮಕ ರಾಜಕೀಯ ಒಂದು ಅಭಿವೃದ್ಧಿದಾಯಕ ಪ್ರಕ್ರಿಯೆ ಮತ್ತು ಅತೀವ ರಾಜಕೀಯ ಭಾಗವಹಿಸುವಿಕೆಯ ಪುಸ್ತಕಗಳು ಪ್ರಮುಖವಾದ ಕಾರ್ಯಗಳಾಗಿವೆ. ಇವು ಸ್ಪಷ್ಟವಾಗಿ ಶಾಸಕಾಂಗ ಮೌಲ್ಯಮಾಪನ ಮತ್ತು ರಾಜ್ಯದ ಬೆಳವಣಿಗೆಯ ಬಗ್ಗೆ ಒತ್ತು ಕೊಟ್ಟಿದ್ದಾರೆ.

**ಬೇಟೆಯಿಲ್ಲೆ(Beteille)**(1966) ಅವರ ಅಧ್ಯಯನದಲ್ಲಿ ವರ್ಗ, ಜಾತಿ, ಅಧಿಕಾರ, ಗಣ್ಯರ ಲಕ್ಷಣಗಳು ಮತ್ತು ಬದಲಾಗುತ್ತಿರುವ ವಿಧಾನಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. Beteille ಅವರು ಮೂರು ವಿವಿಧ ಗಣ್ಯರ ಬಗ್ಗೆ ತಿಳಿಸಿದ್ದಾರೆ. 1. ರಾಜಕೀಯ ಮಟ್ಟದಲ್ಲಿನ

ಗಣ್ಯರು, 2. ಅಧಿಕಾರಶಾಹಿ ಗಣ್ಯರು, 3. ವ್ಯವಹಾರದಲ್ಲಿ ಕಾರ್ಯ ನಿರ್ವಹಿಸುವ ಗಣ್ಯರು ಎಂದು ವಿಂಗಡಿಸಿದ್ದಾರೆ. ಹಾಗೆಯೇ ಅವರು ಪಾಶ್ಚಿಮಾತ್ಯ ಮತ್ತು ನಗರೀಕರಣದ ಕೊಡುಗೆಯಿಂದ ರಾಜಕೀಯದಲ್ಲಿ ವರ್ಗ, ಜಾತಿಯ ಸ್ಥಾನಮಾನ ಸಾಂಪ್ರದಾಯಿಕ ಸಮಾಜದಲ್ಲಿ ಮತ್ತು ಉದಯಿಸುತ್ತಿರುವ ಹೊಸ ಸ್ಥಾನಮಾನಗಳ ಬಗ್ಗೆ ತಿಳಿಸಿದ್ದಾರೆ.

**ಜೋಶಿ(Joshi)** (1968) ಅವರು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ರಾಜಕೀಯ ಗಣ್ಯರ ಪಾತ್ರ ಮತ್ತು ಗಣ್ಯರ ಪಾತ್ರದ ಬಗ್ಗೆ ಒತ್ತುಕೊಟ್ಟಿದ್ದಾರೆ.

**ಎಲ್. ಪಿ. ವಿದ್ಯಾರ್ಥಿಸ್(L. P. Vidyarthis)** (1967) ಅವರು ನಿರ್ದಿಷ್ಟ ಸೈದ್ಧಾಂತಿಕ ಮತ್ತು ವಿಧಾನಾತ್ಮಕ ಮಾದರಿಗಳು ಭಾರತದಲ್ಲಿ ಗಣ್ಯರು ಮತ್ತು ಬುಡಕಟ್ಟು ಸಮುದಾಯದಲ್ಲಿ ರಾಜಕೀಯ ರಚನೆ ಮತ್ತು ಬುಡಕಟ್ಟು ಸಮುದಾಯಗಳ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಆದರೂ ಭಾರತದಲ್ಲಿನ ಗತಿಶೀಲ ರಾಜಕೀಯ ನಾಯಕತ್ವದ ಬಗ್ಗೆ ಚರ್ಚಿಸಿಲ್ಲ.

**ದೇಸಾಯಿ**(1965) ಅವರು ಭಾರತದಲ್ಲಿ ಉದಯಿಸುತ್ತಿರುವ ನವಗಣ್ಯರ ಪ್ರಮುಖ ಕಾರಣಗಳನ್ನು ಅವಲೋಕಿಸಿದ್ದಾರೆ. ಈ ರೀತಿಯ ಬದಲಾವಣೆಗೆ ಬ್ರಿಟಿಷರೊಂದಿಗಿನ ಸಂಪರ್ಕ ಮತ್ತು ವಿನೂತನ ಶಿಕ್ಷಣ ವ್ಯವಸ್ಥೆ ಪ್ರಮುಖ ಕಾರಣವಾಗಿದೆ. ಇದರಿಂದ ನವಗಣ್ಯರ ಜನನವಾಗಿದೆಯೇ ವಿನಾ ಸಾಮಾನ್ಯ ಬದಲಾವಣೆ ಅಥವಾ ರಾಷ್ಟ್ರೀಯತೆಯ ಅಥವಾ ಆಧುನಿಕತೆಯಲ್ಲಿ ಸಾಮಾಜಿಕ ರಾಜಕೀಯ ರಚನೆಯಿಂದಾಗಿದೆ.

**ಸುರ್ಜಿತ್ ಸಿನ್ಹಾ(Surjit sinha)**(1972) ಅವರು **ಟ್ರೈಬಲ್ ಸಿತುಆಶನ್ ಇನ್ ಇಂಡಿಯಾ** (Tribal Situation in India) ಎಂಬ ಅಧ್ಯಯನದಲ್ಲಿ ಬುಡಕಟ್ಟು ಜನರ ಪ್ರಜ್ಞೆಯನ್ನು ಅರ್ಥೈಸಿದ್ದಾರೆ. ಅವರ ಪಾತ್ರ ಮತ್ತು ಅಲ್ಪಸಂಖ್ಯಾತರ ಗುಂಪುಗಳು, ಹಿಂದಿನ ಪೀಳಿಗೆಯವರ ಸಾಂಸ್ಕೃತಿಕ ಪರಿಸರ ಕಾಳಜಿಯ ಬಗ್ಗೆ, ಆರ್ಥಿಕ ಹಿಂದುಳಿಯುವಿಕೆ ಮತ್ತು ಬುಡಕಟ್ಟು ಜನ ಕೆಳಸ್ಥಾನಮಾನ ಬುಡಕಟ್ಟು ಸಮಾಜದಲ್ಲಿ ಈ ರೀತಿ ಬೆಳೆಯುತ್ತಿರುವ ಪ್ರಜ್ಞೆಯಿಂದ ಗಣ್ಯರು ಬುಡಕಟ್ಟು ಸಮಾಜದಲ್ಲಿ ಬದಲಾವಣೆಯಾಗುತ್ತಿದೆ. ದುರ್ಬಲ ವರ್ಗದವರ ಗಣ್ಯರ ಮೇಲೆ ಸಾಕಷ್ಟು ರೀತಿಯಲ್ಲಿ ಕಾರ್ಯ ಕೈಗೊಂಡಿಲ್ಲ.

**ಸಚ್ಚಿದಾನಂದ(Sachidananda)**(1977) ಅವರ **ದಿ ಹರಿಜಿಯಾನ್ ಎಲೈಟ್** (The Harijian Elite) ಎಂಬ ಅಧ್ಯಯನದಲ್ಲಿ ಶಿಕ್ಷಣದ ಮಾನದಂಡ ವಿಧಾನ, ಶಿಕ್ಷಣದಲ್ಲಿ ಬದಲಾವಣೆಗಳಿಂದ ಸಾಕಷ್ಟು ರೀತಿಯಲ್ಲಿ ಗಣ್ಯರು ಸಾಮಾಜಿಕ ಜೀವನದಲ್ಲಿ ಬದಲಾಗಲು ಸಹಾಯವಾಗಬಲ್ಲವು ಸಮಾಜ ಬದಲಾವಣೆಗೆ ಅವರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಅಭಿಪ್ರಾಯಿಸಿದ್ದಾರೆ.

ವಿ. **ದೇಶಪಾಂಡೆ (V. Despande)**(1978) ಅವರ **ಟುವರ್ಡ್ಸ್ ಸೋಶಿಯಲ್ ಇಂಟಿಗ್ರೇಷನ್ ಪ್ರಾಬ್ಲೆಮ್ಸ್ ಆಫ್ ಅಡ್ಜಸ್ಟ್ಮೆಂಟ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಎಲೇಟ್ಸ್**(Towards Social Integration Problems of Adjustment of Scheduled caste Elites) ಎಂಬ ಅಧ್ಯಯನದಲ್ಲಿ ದೇಶದಲ್ಲಿರುವ ಪರಿಶಿಷ್ಟ ಜಾತಿಯವರ ದಮನೀಯ ಸ್ಥಿತಿಗತಿಯನ್ನು ಎಲ್ಲ ರೀತಿಯಲ್ಲಿ ಒಂದು ಉತ್ತಮ ಜೀವನ ಮಾರ್ಪಾಡಾಗಲು ಅವರ ಚಿಂತಾಜನಕ ಸ್ಥಿತಿಗತಿಯನ್ನು ತನ್ನದೇ ವರ್ಗದವರಿಂದ ಆಯ್ಕೆಯಾದ ಗಣ್ಯರು ಮಾತ್ರ ಅವರಿಗೆ ಉತ್ತಮ ರೀತಿಯಲ್ಲಿ ಸಹಾಯವಾಗಬಲ್ಲರು ಎಂದು ಅರ್ಥೈಸಿದ್ದಾರೆ.

**ರಜೋರಾ(Rajora)**(1987) ಅವರ **ಸೋಶಿಯಲ್ ಸ್ಟ್ರಕ್ಚರ್ ಆ್ಯಂಡ್ ಟ್ರೈಬಲ್ ಎಲೇಟ್ಸ್**(Social structure and Tribal Elites) ಎಂಬ ಅಧ್ಯಯನದಲ್ಲಿ ಬುಡಕಟ್ಟು ಜನರಿಗೆ ಬದಲಾದ ಶೋಷಣೆಯ ಬಗ್ಗೆ ನವ್ಯ ಒಳನೋಟವನ್ನು ಒದಗಿಸಿದ್ದಾರೆ. ಶೋಷಣೆಯ ರೀತಿಯಲ್ಲಿ ಬದಲಾದರೂ ಶೋಷಣೆಯು ಇನ್ನೂ ಹಾಗೆಯೇ ಇದೆ. ಅಭ್ಯಾಸಗಳಲ್ಲಿ ಬುಡಕಟ್ಟುಯೇತರ ಜನರು ಬುಡಕಟ್ಟು ಜನರ ಶೋಷಣೆ, ಬುಡಕಟ್ಟು ಮತ್ತು ಬುಡಕಟ್ಟೇತರ ಗಣ್ಯರ ಸಾಮರಸ್ಯ ಮತ್ತು ಒಕ್ಕೂಟಗಳ ಮಾರ್ಪಾಡು ಮಾಡುವ ಹಂಬಲ ಬೆಳೆಸಿಕೊಳ್ಳಬೇಕು, ಆದರೆ ಅವರು ಬುಡಕಟ್ಟು ಜನರು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ ಎನ್ನುವುದನ್ನು ತಿಳಿಸಿಲ್ಲ ಅಥವಾ ಒಕ್ಕೂಟದ ಬಗ್ಗೆ ತಿಳಿಸಿಲ್ಲ.

ಇತ್ತೀಚಿನ ಸಂಶೋಧನಾ ಅಧ್ಯಯನಗಳ ವಿದ್ವಾಂಸರು ಶಾಸನಾತ್ಮಕ ಕಾರ್ಯವೈಖರಿ ಮತ್ತು ವರ್ತನೆಯ ಮೇಲೆ ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಶಾಸಕಾಂಗದ ಗಣ್ಯರ ಮೇಲೆ ಸಂಶೋಧನಾ ಕಾರ್ಯಗಳು ರಾಷ್ಟ್ರೀಯ, ರಾಜ್ಯಮಟ್ಟದಲ್ಲಿ ಸಾಕಷ್ಟು ಪೂರ್ಣಮಟ್ಟದಲ್ಲಿ ನಡೆಸಿಲ್ಲ. ಆದರೂ ಸಾಕಷ್ಟು ಅಧ್ಯಯನಗಳು ಪಶ್ಚಿಮದಲ್ಲಿ ನಡೆಸಿದ್ದಾರೆ. ಕೆಲವು ವಿದ್ವಾಂಸರು ಶಾಸಕಾಂಗದ ವರ್ತನೆ ಕಾರ್ಯ ವೈಖರಿಯ ಬಗ್ಗೆ ಸಿದ್ಧಾಂತದ ಪಾತ್ರದ ಬಗ್ಗೆ ತಿಳಿಸಿದ್ದಾರೆ.

**ಮೋರಿಸ್ ಜೋನ್ಸ್(Morris Jones)**(1657) ಅವರ **ಪಾರ್ಲಿಮೆಂಟ್ ಎನ್ ಇಂಡಿಯಾ** (Parliament in India) ಎಂಬ ಅಧ್ಯಯನ ಬಹಳ ಪ್ರಮುಖವಾದ ಅಧ್ಯಯನವಾಗಿದೆ. ಅವರು ಭಾರತದಲ್ಲಿನ ಸಂಸತ್ತು, ಇದರಲ್ಲಿ ಭಾರತೀಯ ಸಾಮಾಜಿಕ, ಆರ್ಥಿಕ ಹಿನ್ನೆಲೆಯ ಬಗ್ಗೆ ಪರಿಶೀಲಿಸಿದ್ದಾರೆ.

**ಭವಾನಿ ಸಿಂಗ್(Bhawani singh)**(1973) ಅವರು **ಕೌನ್ಸಿಲ್ ಆಫ್ ಸ್ಟೇಟ್ಸ್ ಇನ್ ಇಂಡಿಯಾ** (Council of states in India) ಎಂಬ ಈ ಅಧ್ಯಯನವನ್ನು ಸಾದೃಶ್ಯಪಡಿಸುವ ರೀತಿಯಲ್ಲಿ 1962ರವರೆಗೆ ಯಾವ ರೀತಿಯ ಹಿನ್ನೆಲೆಯಿಂದ ರಾಜಕೀಯ ಪ್ರವೇಶ ಪಡೆಯುತ್ತಿದ್ದರು ಎನ್ನುವುದನ್ನು ತಿಳಿಸಿದ್ದಾರೆ.

**ಡೇವಿಡ್ ಜಡ್ಜ್(David Judge)**(1993) ಅವರು **ದಿ ಪಾರ್ಲಿಮೆಂಟರಿ ಸ್ಟೇಟ್**(The Parlimentary state) ಎಂಬ ಅಧ್ಯಯನದಲ್ಲಿ ಶಾಸಕಾಂಗದ ಅಧಿಕಾರ ರಾಜ್ಯದಲ್ಲಿ ಯಾವ ರೀತಿಯಾಗಿ ಯಶಸ್ವಿಯಾಗಿ ಶಾಸಕಾಂಗಕ್ಕೆ ರಾಜ್ಯದಲ್ಲಿ ಯಾವ ರೀತಿಯ ಆದ್ಯತೆಯನ್ನು ಕೊಟ್ಟಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

**ಕರ್ನಾಟಕ ಸರ್ಕಾರ**(2014)ರ **ಕರ್ನಾಟಕ ಆರ್ಥಿಕ ಸಮೀಕ್ಷೆ 2013–14** ಎಂಬ ಅಧ್ಯಯನದಲ್ಲಿ ಸರ್ಕಾರವು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001–02ರ ಆಯವ್ಯಯದಲ್ಲಿ ರೂ. 75 ಕೋಟಿಗಳನ್ನು ಯೋಜನೇತರ ಅನುದಾನದಲ್ಲಿ ನಿಗದಿಪಡಿಸುವುದರ ಮೂಲಕ ಜಾರಿಗೊಳಿಸಿತು. ಉತ್ತಮ ಯೋಜನೆಗಳ ಹೊರತಾಗಿಯೂ ಕೆಲವು ಮೂಲಭೂತ ಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿರುವ ಪ್ರದೇಶಗಳಿಗೆ ವಲಯಾಧಾರಿತವಾಗಿ ವೆಚ್ಚವನ್ನು ಮಾಡಲಾಗುತ್ತದೆ. ಸ್ಥಳೀಯ ಹಂತದಲ್ಲಿ ಜನರ ಆಕಾಂಕ್ಷೆಯನ್ನು ಮತ್ತು ಉತ್ತಮ ಬೇಡಿಕೆಗಳನ್ನು ಈಡೇರಿಸಲು ಮತ್ತು ಜವಾಬ್ದಾರಿಯುತ ಯೋಜನೆ ಮತ್ತು ಸಮರ್ಪಕ ಸೇವೆಗಳನ್ನು ಒದಗಿಸಲು ಸರಕಾರವು ಯೋಜನೆಗಳನ್ನು ಕೈಗೊಂಡಿದೆ. ಇವುಗಳಿಂದ ಮೂಲಭೂತ ಸೌಕರ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮಾಡುವ ಮೂಲ ಬಡ ಮತ್ತು ದುರ್ಬಲ ವರ್ಗದವರ ಅಭಿವೃದ್ಧಿಯನ್ನು ಈ ನಿಧಿಯ ಮೂಲಕ ಕೈಗೊಳ್ಳಲಾಗುತ್ತದೆ ಎಂಬುದನ್ನು ತಿಳಿಸುತ್ತದೆ.

**ಡಾ. ಮುತ್ತಯ್ಯ ಎಸ್.ಎಂ.**(2013) ಅವರ **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು: ಪರಂಪರೆ–ಆಧುನಿಕತೆ** ಎಂಬ ಅಧ್ಯಯನದಲ್ಲಿ ಆಧುನಿಕತೆ ಬಹಳಷ್ಟು ಜಿಜ್ಞಾಸೆಗೆ ಒಳಗಾದ ಪರಿಕಲ್ಪನೆ. ಇದು 15ನೇ ಶತಮಾನದಿಂದ ಇಂದಿನವರೆಗೂ ಅನೇಕ ಬಗೆಯ ಅರ್ಥಗಳನ್ನು ಪಡೆಯುತ್ತಾ ಬಂದಿದೆ. ಬುಡಕಟ್ಟುಗಳು ಆರಂಭದಿಂದಲೇ ಯಾವುದೇ ಭಿನ್ನತೆಗಳಿಲ್ಲದೆ ನಾವೆಲ್ಲರೂ ಒಂದೇ ಎಂಬ ತತ್ವವನ್ನು ನಂಬಿ ನಡೆದಂತವು. ಆದರೆ ಈ ನಂಬಿಕೆ ಆಧುನಿಕತೆಯ ಪರಿಣಾಮದಿಂದ ಇಂದು ಹಿಂದಿನಷ್ಟು ಗಟ್ಟಿಯಾಗಿಲ್ಲ. ಸಮೂಹಗಳಲ್ಲಿರಬೇಕಿದ್ದ ಒಗ್ಗಟ್ಟು ವ್ಯಕ್ತಿ ಪ್ರಧಾನ ತತ್ವಗಳಿಂದಾಗಿ ಮಾಯವಾಗತೊಡಗಿದೆ. ಸಾಮೂಹಿಕ ಹಿತಾಸಕ್ತಿಯ ದೃಷ್ಟಿಯಿಂದ ಯೋಚಿಸುತ್ತಿದ್ದ ಈ ಬುಡಕಟ್ಟು ಸಮೂಹಗಳು ಇಂದು ಕುಟುಂಬ ವ್ಯಕ್ತಿನೆಲೆಯಲ್ಲಿ ತಮ್ಮ ಹಿತಾಸಕ್ತಿಯನ್ನು ಪ್ರಕಟಿಸುವಂತಾಗಿದೆ. ಆಧುನಿಕ ಮೌಲ್ಯಗಳೇ ಇದಕ್ಕೆ ಕಾರಣ ಎಂದು ತಿಳಿಸಿದ್ದಾರೆ.

## 1.3. ಸಮಸ್ಯೆಯ ಹೇಳಿಕೆ

13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ ಎಂಬ ಸಂಶೋಧನ ವಿಷಯದ ಅನೇಕ ಸಮಸ್ಯೆಗಳನ್ನು ಕುರಿತು ಸಂಶೋಧನೆಯನ್ನು ಮಾಡಲಾಗುತ್ತದೆ. ಅವುಗಳಲ್ಲಿ ಪ್ರಮುಖವಾದ ಸಮಸ್ಯೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

1. ಪರಿಶಿಷ್ಟ ಪಂಗಡದ ಪ್ರತಿನಿಧಿಗಳು ಕಾರ್ಯ ನಿರ್ವಹಿಸುವಲ್ಲಿ, ಅಧಿಕಾರ ಚಲಾಯಿಸುವಲ್ಲಿ ಏಕೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ?
2. ಪರಿಶಿಷ್ಟ ಪಂಗಡದ ಪ್ರತಿನಿಧಿಗಳು ಮೇಲ್ಜಾತಿಯವರ ಪ್ರಭಾವಕ್ಕೆ ಏಕೆ ಒಳಗಾಗುತ್ತಿದ್ದಾರೆ?
3. ಸಂವಿಧಾನದಲ್ಲಿ ನೀಡಿರುವ ಮೀಸಲಾತಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಪರಿಶಿಷ್ಟ ಪಂಗಡದ ಜನರು ಸಬಲೀಕರಣ ಹೊಂದಿದ್ದಾರೆಯೇ?
4. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಜಾರಿಗೊಳಿಸುತ್ತಿರುವ ಕಲ್ಯಾಣ ಕಾರ್ಯಕ್ರಮಗಳ ಲಾಭ ಪಡೆಯುವಲ್ಲಿ ಪರಿಶಿಷ್ಟ ಪಂಗಡದ ಜನತೆಯು ಸಫಲತೆಯನ್ನು ಹೊಂದಿದ್ದಾರೆಯೇ?

## 1.4. ಅಧ್ಯಯನದ ಉದ್ದೇಶಗಳು

13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ ಎಂಬ ಸಂಶೋಧನಾ ವಿಷಯವು ಅನೇಕ ವಿಧದ ಉದ್ದೇಶಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾದ ಉದ್ದೇಶಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

1. ಮೀಸಲು ಕ್ಷೇತ್ರಗಳ ಐತಿಹಾಸಿಕ ಬೆಳವಣಿಗೆಯನ್ನು ಅಧ್ಯಯನ ಮಾಡುವುದು.
2. ಚಳ್ಳಕೆರೆ ಮತ್ತು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಗಳ ರಾಜಕೀಯವನ್ನು ಅವಲೋಕಿಸುವುದು.
3. ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರಗಳ ರಾಜಕೀಯ ಪ್ರಕ್ರಿಯೆಯನ್ನು ಅಧ್ಯಯನ ಮಾಡುವ ಮೂಲಕ ಪರಿಶಿಷ್ಟ ಪಂಗಡ ನಾಯಕತ್ವದ ಬೆಳವಣಿಗೆಯ ಹಂತಗಳನ್ನು ಗುರುತಿಸುವುದು.
4. ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರದ ಪರಿಶಿಷ್ಟ ಪಂಗಡ ಪ್ರತಿನಿಧಿಗಳ ಕೊಡುಗೆಗಳನ್ನು ವಿಶ್ಲೇಷಿಸುವುದು.
5. ವಿಧಾನಸಭೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರದ ಪರಿಶಿಷ್ಟ ಪಂಗಡ ಪ್ರತಿನಿಧಿಗಳ ಪಾತ್ರವನ್ನು ಅವಲೋಕಿಸುವುದು.

## 1.5. ಪ್ರಾಕ್‌ಕಲ್ಪನೆಗಳು

ಸಂಶೋಧನಾ ಅಧ್ಯಯನದ ಉದ್ದೇಶಗಳ ಜೊತೆಗೆ ಈ ಕೆಳಗಿನ ಪ್ರಾಕ್‌ಕಲ್ಪನೆಗಳೊಂದಿಗೆ ಸಂಶೋಧನಾ ಅಧ್ಯಯನ ಕೈಗೊಳ್ಳಲಾಗಿದೆ.

1. ಮೀಸಲು ಕ್ಷೇತ್ರಗಳು ಪ್ರಜಾಪ್ರಭುತ್ವಕ್ಕೆ ಪೂರಕವಾಗಿದೆ.
2. ಮೀಸಲು ಕ್ಷೇತ್ರಗಳು ಜಾತಿ ರಾಜಕಾರಣದಿಂದ ಹೊರತಾಗಿಲ್ಲ.
3. ಮೀಸಲು ಕ್ಷೇತ್ರಗಳು ಸಾಮಾನ್ಯ ಮತದಾರರಲ್ಲಿ ರಾಜಕೀಯ ನಿರಾಸಕ್ತಿ ಉಂಟು ಮಾಡಿದೆ.
4. ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರಗಳು ಪರಿಶಿಷ್ಟ ಪಂಗಡದ ನಾಯಕತ್ವ ಬೆಳವಣಿಗೆಗೆ ಪ್ರಯೋಜನಕಾರಿಯಾಗಿದೆ.
5. ಚಳ್ಳಕೆರೆ ಮೀಸಲು ಕ್ಷೇತ್ರ ಅಭಿವೃದ್ಧಿಯಲ್ಲಿ ಮುಂದುವರೆದಿದೆ.

## 1.6. ಅಧ್ಯಯನ ವ್ಯಾಪ್ತಿ

ಕರ್ನಾಟಕವು ವೈವಿಧ್ಯಮವಾದ ಭೌಗೋಳಿಕ, ನೈಸರ್ಗಿಕ ಸಂಪತ್ತು, ಇತಿಹಾಸ, ಸಂಸ್ಕೃತಿಯ ಪರಂಪರೆ, ಸಾಹಿತ್ಯ, ಕಲೆ, ಧರ್ಮ, ಆಧ್ಯಾತ್ಮಿಕ ಕ್ಷೇತ್ರಗಳನ್ನು ಹೊಂದಿದೆ. ಕರ್ನಾಟಕ 1956ರಲ್ಲಿ ಭಾಷಾವಾರು ಆಧಾರದ ಮೇಲೆ ವರ್ಗೀಕರಣಗೊಂಡಿರುವ ರಾಜ್ಯ. ಇಲ್ಲಿ ಕನ್ನಡ ಭಾಷೆಯನ್ನಾಡುವ ಜನರು ಪ್ರಧಾನವಾಗಿ ವಾಸ ಮಾಡುತ್ತಿದ್ದಾರೆ. ಈ ರೀತಿಯ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿಕೊಂಡು ಬಂದಿರುವ ಕರ್ನಾಟಕ ರಾಜ್ಯವು 1,91,791 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಕರ್ನಾಟಕ ಭಾರತದ ಜನಸಂಖ್ಯೆಯಲ್ಲಿ 8 ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ. ಕರ್ನಾಟಕ ರಾಜ್ಯವು 30 ಜಿಲ್ಲೆಗಳನ್ನು, 176 ತಾಲ್ಲೂಕುಗಳನ್ನು, 28 ಲೋಕಸಭಾ ಕ್ಷೇತ್ರಗಳನ್ನು ಮತ್ತು 224 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

13 ಮತ್ತು 14ನೇ ವಿಧಾನಸಭೆಗಳಲ್ಲಿ ಚುನಾಯಿತಗೊಂಡ ಸದಸ್ಯರ ಕಾರ್ಯನಿರ್ವಹಣೆಯನ್ನು ಅರಿಯಲು ಇಡೀ 224 ಕ್ಷೇತ್ರಗಳನ್ನು ಅಧ್ಯಯನಕ್ಕೆ ಅಳವಡಿಸುವುದು ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸ. ಆದ್ದರಿಂದ ಕೇವಲ ಪರಿಶಿಷ್ಟ ಪಂಗಡ ಸದಸ್ಯರ 2 ಕ್ಷೇತ್ರಗಳ ಕಾರ್ಯನಿರ್ವಹಣೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. 13 ಮತ್ತು 14ನೇ ವಿಧಾನಸಭೆಯ 224 ವಿಧಾನಸಭಾ ಕ್ಷೇತ್ರಗಳಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರಗಳನ್ನು ಒಳಗೊಂಡಿದೆ.[17] ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 42,48,987 ಇದರಲ್ಲಿ 21,34,754. ಪುರುಷರು ಮತ್ತು 21,14,233 ಮಹಿಳೆಯರು ಇದ್ದಾರೆ.[18]

## 1.7. ಅಧ್ಯಯನದ ಮಹತ್ವ

ಸಂವಿಧಾನ ಬದ್ಧವಾಗಿರುವ ವಿಧಾನಸಭಾ ಮೀಸಲಾತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ಚುನಾಯಿತರಾದ ಪರಿಶಿಷ್ಟ ಪಂಗಡದ ಸದಸ್ಯರು ರಾಜಕೀಯ ಕಾರ್ಯ ಚಟುವಟಿಕೆಗಳಲ್ಲಿ ಎಷ್ಟು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ? ಮೀಸಲಾತಿ ಸೌಲಭ್ಯ ಎಷ್ಟರ ಮಟ್ಟಿಗೆ ಸದುಪಯೋಗವಾಗಿದೆ? ಈ ಪ್ರತಿನಿಧಿಗಳು ಶಾಸನ ಸಭೆಗಳಲ್ಲಿ ತಮ್ಮ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಯಾವ ರೀತಿ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ? ಮತ್ತು ಆ ಕ್ಷೇತ್ರದ

---

[17] ಕರ್ನಾಟಕ ಸರ್ಕಾರ, "ಕರ್ನಾಟಕ ಕೈಪಿಡಿ 2012", ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2012, ಪು.ಸಂ. 143–144.

[18] Census of India 2011 Primary census Abstract Data Highlights Karnataka Series 30, Directorate of Census operations Karnataka, 2011. Pp- 45.

ಜನರ ಕಲ್ಯಾಣ ಕಾರ್ಯಕ್ರಮಗಳಲ್ಲಿ ಯಾವ ರೀತಿಯಾಗಿ ಪಾಲ್ಗೊಂಡಿದ್ದಾರೆ ಎಂಬುದನ್ನು ತಿಳಿಯಲಾಗಿದೆ.

ಮುಖ್ಯವಾಗಿ ಕೆಳವರ್ಗದವರಾದ ಪರಿಶಿಷ್ಟ ಪಂಗಡದ ಸಶಕ್ತೀಕರಣಕ್ಕೆ ಈ ಮೀಸಲಾತಿ ವ್ಯವಸ್ಥೆ ಹೇಗೆ ಪೂರಕವಾಗಿದೆ? ಅದರ ಸಾಧಕ ಬಾಧಕಗಳೇನು ಎಂಬುದನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ 13 ಮತ್ತು 14ನೇ ವಿಧಾನಸಭೆಗಳಲ್ಲಿ ಮೀಸಲು ಕ್ಷೇತ್ರದಿಂದ ಚುನಾಯಿತಗೊಂಡ ಮತ್ತು ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಗೊಂಡ ಪರಿಶಿಷ್ಟ ಪಂಗಡದ ಸದಸ್ಯರು ಯಾವ ರೀತಿ ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಅನುದಾನಗಳ ಹಂಚಿಕೆಯು ಯಾವ ಯಾವ ಯೋಜನೆಗಳಿಗಾಗಿ ಎಷ್ಟರ ಮಟ್ಟಿಗೆ ಹಂಚಿಕೆಯಾಗಿದೆ ಎಂಬುದನ್ನು ಕುರಿತು ಈ ಅಧ್ಯಯನದಲ್ಲಿ ಅರಿಯುವ ಪ್ರಯತ್ನ ಮಾಡಲಾಗಿದೆ.

## 1.8. ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಯು ಬಹಳ ಮುಖ್ಯವಾದ ಕಾರ್ಯವಾಗಿದ್ದು ಇದು ಸಂಪೂರ್ಣವಾಗಿ ಸಂಶೋಧಕನ ಮೇಲೆ ಅವಲಂಬಿತವಾಗಿರುತ್ತದೆ. ಮಹಾಪ್ರಬಂಧ ರಚನೆಯಲ್ಲಿ ಅವಶ್ಯಕ ಆಧಾರಿತ ಸಂಗ್ರಹಣೆಗಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಾಧಾರಗಳನ್ನು ಅವಲಂಬಿಸಿ ಐತಿಹಾಸಿಕ, ರಾಜಕೀಯ, ಸಂಖ್ಯಾಶಾಸ್ತ್ರೀಯ, ತೌಲನಿಕ, ವರ್ಣನಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ವಿಧಾನದ ವ್ಯಾಪ್ತಿಯಲ್ಲಿ ಸಂದರ್ಶನ, ಸಹಭಾಗಿತ್ವ, ಅವಲೋಕನ ಮತ್ತು ವ್ಯಾಪಕ ಕ್ಷೇತ್ರಕಾರ್ಯ ಒಳಗೊಂಡಂತೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕನು ಕಾರ್ಯ ಪ್ರವೃತ್ತನಾಗಿ, ಪ್ರಸ್ತುತ ಅಧ್ಯಯನಕ್ಕೆ ಸರ್ಕಾರಿ ವರದಿಗಳು, ವಿವಿಧ ಆಯೋಗಗಳ ವರದಿಗಳು, ಸಂಶೋಧನ ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳನ್ನು ದ್ವಿತೀಯ ಬರಹ ಮಾಹಿತಿಗಾಗಿ ಬಳಸಿಕೊಳ್ಳಲಾಗಿದೆ.

**ಪ್ರಾಥಮಿಕ ಮೂಲಗಳು**

ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕನು ಕಾರ್ಯ ಪ್ರವೃತ್ತನಾಗಿ ಪ್ರಸ್ತುತ ಅಧ್ಯಯನಕ್ಕೆ ಕ್ಷೇತ್ರದಿಂದ ನೇರವಾಗಿ ಸಂದರ್ಶನ, ಅನುಸೂಚಿಯನ್ನು ಬಳಸಿಕೊಂಡು, ಸಹಭಾಗಿತ್ವ ಅವಲೋಕನದ ಮೂಲಕ ಸೂಚನದಾರರಿಂದ ವಿವರವನ್ನು ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ.

**ಆನುಷಂಗಿಕ ಮೂಲಗಳು**

ಆನುಷಂಗಿಕ ಆಕರಗಳ ಮೂಲಗಳಿಂದ ಸಂಶೋಧನಾ ಲೇಖನಗಳು, ಸಂಶೋಧನಾ ಗ್ರಂಥಗಳು, ಪರಾಮರ್ಶನ ಗ್ರಂಥಗಳು, ದಿನಪತ್ರಿಕೆಗಳು, ನಿಯತಕಾಲಿಕೆಗಳು, ಸರ್ಕಾರಿ ದಾಖಲೆಗಳು, ಜನಗಣತಿಗಳು, ವರದಿಗಳು, ಮಾಸಪತ್ರಿಕೆಗಳು, ಗ್ರಂಥಾಲಯಗಳ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು.

ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ. ಚಳ್ಳಕೆರೆ ಮೀಸಲು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎರಡು ಹೋಬಳಿಗಳಿಗೂ ಪ್ರಾತಿನಿಧ್ಯ ಕಲ್ಪಿಸಿ ಮತದಾರರ ಸಂಖ್ಯೆಗೆ ಅನುಗುಣವಾಗಿ ಪ್ರತಿ ಹೋಬಳಿಯಿಂದ ಆರು ಗ್ರಾಮಪಂಚಾಯಿತಿಗಳನ್ನು ಆಯ್ದ ಆರು ಗ್ರಾಮ ಪಂಚಾಯಿತಿಗಳಲ್ಲಿ ಮೂರು ಹಳ್ಳಿಗಳನ್ನು ಜಾತಿ ಪ್ರಾಬಲ್ಯದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಒಟ್ಟು 12 ಗ್ರಾಮ ಪಂಚಾಯಿತಿಗಳಿಂದ 36 ಹಳ್ಳಿಗಳ ಜೊತೆಗೆ ಚಳ್ಳಕೆರೆ ನಗರಸಭೆ ಒಳಗೊಂಡು 75 ಪರಿಶಿಷ್ಟ ಪಂಗಡ ಹಾಗೂ 175 ಪರಿಶಿಷ್ಟ ಪಂಗಡೇತರರೂ ಹೀಗೆ ಒಟ್ಟು 250 ಮತದಾರರನ್ನು ಲಿಂಗ, ವಯಸ್ಸು, ಧರ್ಮ, ಜಾತಿ ಮತ್ತು ವಿದ್ಯಾರ್ಹತೆಗಳನ್ನು ಆಧರಿಸಿ ಆಯ್ದುಕೊಳ್ಳಲಾಗಿದೆ.

ಮೊಳಕಾಲ್ಮೂರು ಮೀಸಲು ಕ್ಷೇತ್ರದಲ್ಲಿಯೂ ಚಳ್ಳಕೆರೆ ಮಾದರಿಯಲ್ಲಿ ಮತದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗಾಗಿ ಮೊಳಕಾಲ್ಮೂರು ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೂರು ಹೋಬಳಿಗಳಿಗೂ ಪ್ರಾತಿನಿಧ್ಯ ಕಲ್ಪಿಸಿ ಮತದಾರರ ಸಂಖ್ಯೆಗೆ ಅನುಗುಣವಾಗಿ ಪ್ರತಿ ಹೋಬಳಿಯಿಂದ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಆಯ್ದ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಮೂರು ಹಳ್ಳಿಗಳನ್ನು ಜಾತಿ ಪ್ರಾಬಲ್ಯದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಒಟ್ಟು 12 ಗ್ರಾಮಪಂಚಾಯಿತಿಗಳಿಂದ 36 ಹಳ್ಳಿಗಳ ಜೊತೆಗೆ ಮೊಳಕಾಲ್ಮೂರು ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಗಳನ್ನು ಒಳಗೊಂಡು 75

ಪರಿಶಿಷ್ಟ ಪಂಗಡ ಹಾಗೂ 175 ಪರಿಶಿಷ್ಟ ಪಂಗಡೇತರರೂ ಹೀಗೆ ಒಟ್ಟು 250 ಮತದಾರರನ್ನು ಲಿಂಗ, ವಯಸ್ಸು, ಧರ್ಮ, ಜಾತಿ ಮತ್ತು ವಿದ್ಯಾರ್ಹತೆಗಳನ್ನು ಆಧರಿಸಿ ಆಯ್ದುಕೊಳ್ಳಲಾಗಿದೆ.

ಎರಡು ಕ್ಷೇತ್ರಗಳಿಂದ 500 ಮತದಾರರನ್ನು ಸಂದರ್ಶಿಸಿ ಒಂದೇ ತೆರನಾದ ಬಹು ಆಯ್ಕೆ ಮಾದರಿಯ ಪ್ರಶ್ನಾವಳಿ ಮತ್ತು ಸಹಭಾಗಿತ್ವದ ಮೂಲಕ ಮಾಹಿತಿ ಕ್ರೋಢೀಕರಿಸುವ ಜೊತೆಗೆ ಎರಡು ಕ್ಷೇತ್ರಗಳ ಮಾಜಿ ಶಾಸಕರು ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಪ್ರಭಾವಿ ನಾಯಕರನ್ನು ಸಂದರ್ಶನ ಮಾಡುವ ಮೂಲಕ ಹೊರಹೊಮ್ಮಿದ ಮಾಹಿತಿಯನ್ನು ಈ ಸಾರಲೇಖದಲ್ಲಿ ರಚಿಸಲಾಗಿದೆ.

## 1.9. ಅಧ್ಯಾಯಗಳ ವಿಂಗಡಣೆ

"13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡದ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ"(ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ) ಎಂಬ ಸಂಶೋಧನಾ ವಿಷಯಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ವಿವರಿಸಲಾದ ಹಲವಾರು ಅಂಶಗಳು ಈ ಅಧ್ಯಾಯಗಳಿಂದ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಎಲ್ಲಾ ಅಧ್ಯಾಯಗಳ ಸಾರಾಂಶವನ್ನು ಕ್ರೋಡೀಕರಿಸಿ ಹೇಳಲಾಗಿದೆ. ಉಳಿದ ಆರು ಅಧ್ಯಾಯಗಳಲ್ಲಿ ಚರ್ಚಿಸಿದ ವಿಷಯಗಳನ್ನು ಹಾಗೂ ಕಂಡುಬಂದಂತಹ ಫಲಿತಾಂಶಗಳ ಒಟ್ಟು ಸ್ವರೂಪವನ್ನು ಇಲ್ಲಿ ತಿಳಿಸಲಾಗಿದೆ ಹಾಗೂ ಸಂಶೋಧನಾ ಅಧ್ಯಯನದ ಹಿನ್ನೆಲೆಯಲ್ಲಿ ನೀಡಬಹುದಾದ ಸಲಹೆಗಳನ್ನು ಇಲ್ಲಿ ದಾಖಲಿಸಲಾಗಿದೆ.

**ಅಧ್ಯಾಯ 1: ಪೀಠಿಕೆ:** ಈ ಅಧ್ಯಾಯದಲ್ಲಿ ಸಂಶೋಧನೆಯ ಆರಂಭಿಕ ಹಂತದ ಅಧ್ಯಯನವನ್ನು ನಡೆಸಲಾಗಿದೆ. ಸಂಶೋಧನಾ ವಿಷಯದ ಅರ್ಥ, ವ್ಯಾಖ್ಯೆಗಳು, ಅಧ್ಯಯನದ ಉದ್ದೇಶ, ಪ್ರಾಮುಖ್ಯತೆ, ಅಧ್ಯಯನದ ವ್ಯಾಪ್ತಿ, ಸಂಶೋಧನೆಯಲ್ಲಿ ಬಳಸಲಾದ ಸಾಧನಗಳು ಹಾಗೂ ವಿಧಾನಗಳು, ಸಾಹಿತ್ಯ ಪರಾಮರ್ಶನಗಳು, ವಿವಿಧ ಲೇಖಕರು ಪ್ರಕಟಿಸಿರುವ ಸಂಶೋಧನೆಗಳು ಮುಂತಾದ ಅಂಶಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ ಹಾಗೂ ಸರ್ಕಾರಿ ಸಂಸ್ಥೆಗಳಿಂದ ಪಡೆದುಕೊಂಡ ಅಂಕಿ ಅಂಶಗಳು ಹಾಗೂ ಇನ್ನಿತರ ಪ್ರಮುಖವಾದ ಮಾಹಿತಿಗಳನ್ನು ಬಳಸಿಕೊಂಡು ಈ ಸಂಶೋಧನೆಗೆ ಪೂರಕವಾಗಿ ವ್ಯವಸ್ಥಿತ ಚೌಕಟ್ಟನ್ನು ರೂಪಿಸಲಾಗಿದೆ.

**ಅಧ್ಯಾಯ 2: ಮೀಸಲು ಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆ ಮತ್ತು ಬೆಳೆದುಬಂದ ಹಾದಿ:** ಈ ಅಧ್ಯಾಯದಲ್ಲಿ ಮೀಸಲು ಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆ ಮತ್ತು ಬೆಳೆದುಬಂದ ಹಾದಿಯನ್ನು ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರಚನೆಗೊಂಡ ಸಮಿತಿಗಳು ಹಾಗೂ ಅವು ನೀಡಿರುವ ಶಿಫಾರಸ್ಸುಗಳನ್ನು ಅವಲೋಕಿಸಲಾಗಿದೆ. ಹಾಗೆಯೇ ಸಂವಿಧಾನ ರಚನಾ ಸಭೆಯ ಚರ್ಚೆಯ ದಾಖಲೆಗಳನ್ನು ಪರಿಗಣಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಜಕೀಯ ಮೀಸಲಾತಿ ಬೆಳವಣಿಗೆಯನ್ನು ಅಧ್ಯಯನ ನಡೆಸಲಾಗಿದೆ. ಪ್ರಥಮ ಸಾರ್ವತ್ರಿಕ ಚುನಾವಣೆಯಿಂದ ಹಿಡಿದು ಇಂದಿನವರೆಗೂ ಮೀಸಲಾತಿ ಕ್ಷೇತ್ರಗಳ ಚುನಾವಣೆಯನ್ನು ವಿಶ್ಲೇಷಿಸಲಾಗಿದೆ.

**ಅಧ್ಯಾಯ 3: ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳು:** ಈ ಅಧ್ಯಾಯದಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರಗಳ ಅಧ್ಯಯನ ನಡೆಸಲಾಗಿದೆ. ಮೊದಲಿಗೆ ಕ್ಷೇತ್ರದಲ್ಲಿನ ಮತದಾರರು, ಭೌಗೋಳಿಕ ಹಾಗೂ ಸಾಮಾಜಿಕ ಪರಿಚಯವನ್ನು ನೀಡಲಾಗಿದೆ. ನಂತರ ಮೀಸಲು ಕ್ಷೇತ್ರದ ಐತಿಹಾಸಿಕ ಹಿನ್ನೋಟ ಮತದಾನ ಪ್ರಕ್ರಿಯೆಯ ವಿಶ್ಲೇಷಣೆ ಹಾಗೂ ಮತದಾರರ ನಡವಳಿಕೆಯನ್ನು ಅವಲೋಕಿಸಲಾಗಿದೆ. ಹಾಗೆಯೇ ಈ ಅಧ್ಯಯನವನ್ನು ಅತಿ ಹೆಚ್ಚು ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೊಂದಿರುವ ಮೊಳಕಾಲ್ಮೂರು ಮೀಸಲು ವಿಧಾನ ಸಭಾ ಕ್ಷೇತ್ರಕ್ಕೂ ಹಾಗೂ ಚಳ್ಳಕೆರೆ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು ಅಭಿವೃದ್ಧಿ ಹೊಂದಿರುವ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ನಡುವೆ ತೌಲನಿಕ ಅಧ್ಯಯನ ನಡೆಸಲಾಗಿದೆ.

**ಅಧ್ಯಾಯ 4: ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ನಾಯಕತ್ವ:** ಈ ಅಧ್ಯಾಯದಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರದಲ್ಲಿ ಆಯ್ಕೆಯಾದ ಶಾಸಕರ ನಾಯಕತ್ವ, ಆಡಳಿತ ನಿರ್ವಹಣೆ ಹಾಗೂ ಅಭಿವೃದ್ಧಿಪರ ಆಡಳಿತದ ಮಾದರಿಯ ತೌಲನಿಕ ಅಧ್ಯಯನ ನಡೆಸಲಾಗಿದೆ. ಪರಿಶಿಷ್ಟ ವರ್ಗದವರ ಜೀವನ ಸುಧಾರಣೆಗೆ ಹಾಗೂ ಮೂಲಭೂತ ಅಗತ್ಯೆಗಳ ಪೂರೈಕೆಗೆ ಕೈಗೊಂಡ ಕ್ರಮಗಳ ಅಧ್ಯಯನ ನಡೆಸಲಾಗಿದೆ.

**ಅಧ್ಯಾಯ 5: ವಿಧಾನಸಭೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ಪಾತ್ರ:** ಈ ಅಧ್ಯಾಯದಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ಕ್ಷೇತ್ರದ ಮತದಾರರ ದೃಷ್ಟಿಯಲ್ಲಿ ಶಾಸಕರ ನಾಯಕತ್ವ ಹಾಗೂ ಶಾಸಕರ ಮೇಲೆ ಮತದಾರರ ನಿರೀಕ್ಷೆ ಕುರಿತು ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಹಾಗೆಯೇ ಕ್ಷೇತ್ರದಲ್ಲಿನ ಆಡಳಿತಾತ್ಮಕ ಹಾಗೂ ಅಭಿವೃದ್ಧಿಪರ

ಬೆಳವಣಿಗೆ ಮತ್ತು ಶೋಷಿತ ವರ್ಗದ ಹಿತರಕ್ಷಣೆಗೆ ಕೈಗೊಂಡ ಕ್ರಮಗಳು, ರಾಜ್ಯದ ಪ್ರಮುಖ ಹುದ್ದೆಗಳ ನಿರ್ವಹಣೆಗಳಲ್ಲಿ ಪರಿಶಿಷ್ಟ ಪಂಗಡದ ಶಾಸಕರ ಪಾತ್ರ ಹಾಗೂ ಸಂಶೋಧನೆಗೆ ಪೂರಕವಾದ ಇತರೆ ವಿಷಯಗಳನ್ನು ಕ್ಷೇತ್ರಾಧ್ಯಾಯನದ ಮೂಲಕ ಅಧ್ಯಯನ ನಡೆಸಿ ವಿಶ್ಲೇಷಿಸಲಾಗಿದೆ.

**ಅಧ್ಯಾಯ 6: ಉಪಸಂಹಾರ ಮತ್ತು ಸಲಹೆಗಳು:** ಪ್ರಸ್ತುತ ಅಧ್ಯಯನವು ಈ ಪೌಢಪ್ರಬಂಧದ ಕೊನೆಯ ಅಧ್ಯಾಯವಾಗಿದ್ದು ಸಂಶೋಧನಾ ಉದ್ದೇಶ ಮತ್ತು ಪ್ರಾಕ್‌ಕಲ್ಪನೆಯನ್ನು ಕುರಿತು ವಿವರಿಸಲಾಗಿದೆ. ಹಾಗೂ ಒಟ್ಟಾರೆ ಸಂಶೋಧನೆಯ ಫಲಿತಾಂಶವನ್ನು ಸಾರಾಂಶ ರೂಪದಲ್ಲಿ ವಿವರಿಸಿ ಪರಿಶಿಷ್ಟ ಪಂಗಡದವರ ನಾಯಕತ್ವಕ್ಕೆ ಸಂಬಂಧಿಸಿದ ಕೆಲವು ಸೂಚನೆಗಳನ್ನು ನೀಡಲಾಗಿದೆ.

# ಅಧ್ಯಾಯ–2

# ಮೀಸಲುಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆ ಮತ್ತು ಬೆಳೆದುಬಂದ ಹಾದಿ

## 2.1. ಪ್ರಾಚೀನ ಭಾರತದ ಇತಿಹಾಸ

ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಇದರ ಅರ್ಥ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎನ್ನುವುದರ್ಥವಲ್ಲ. ಡಾ. ಬಿ.ಆರ್ ಅಂಬೇಡ್ಕರ್ ಅವರು ಹೇಳುವ ಹಾಗೇ ಬ್ರಾಹ್ಮಣ ಲೇಖಕರು ಉದ್ದೇಶಪೂರ್ವಕವಾಗಿಯೇ ಪ್ರಾಚೀನ ಭಾರತದ ಇತಿಹಾಸವನ್ನು ವಿರೂಪಗೊಳಿಸಿ ಮಹಿಳೆಯರು ಮತ್ತು ಮಕ್ಕಳನ್ನು ರಂಜಿಸುವ ಪುರಾಣಕತೆಯನ್ನಾಗಿ ಮಾಡಿದ್ದಾರೆ ಎನ್ನುವ ಮಾತು ಅಕ್ಷರಶಃ ಸತ್ಯ.

ಭಾರತದ ಪುರಾತನ ಇತಿಹಾಸವನ್ನು ಬಾಬಾಸಾಹೇಬರ ಹೇಳಿಕೆಯ ಹಿನ್ನೆಲೆಯಲ್ಲಿ ಪರಿಶೀಲಿಸುವುದಾದರೆ ಕ್ರಿ.ಪೂ. 2500 ವರ್ಷಗಳ ಹಿಂದೆ ಭಾರತದ ಮೂಲನಿವಾಸಿಗಳು ಜಗತ್ತಿನ ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತ ನಾಗರೀಕತೆಯೊಂದನ್ನು ಸ್ಥಾಪಿಸಿದ್ದರು ಎನ್ನುವುದಕ್ಕೆ ಸಿಂಧೂ ನಾಗರಿಕತೆ, ಹರಪ್ಪ, ಮೊಹೆಂಜೋದಾರೋ ಎಂಬ ಅತ್ಯಂತ ಅಭಿವೃದ್ಧಿ ಹೊಂದಿದ ನಗರಗಳನ್ನು ಸ್ಥಾಪಿಸಿ, ಜಗತ್ತಿನ ನಾಗರಿಕತೆಯ ಬೆಳವಣಿಗೆಗೆ ನಾಂದಿ ಹಾಡಿದ್ದರು. ಸಿಂಧೂ ನಾಗರಿಕತೆಯ ಸ್ಥಾಪಕರಾದ ಮೂಲನಿವಾಸಿ ಜನಾಂಗಗಳನ್ನು ನಾಗ, ರಾಕ್ಷಸ, ಅರಸು, ದ್ರಾವಿಡ, ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಈ ಮೂಲ ನಿವಾಸಿ ಜನಾಂಗಕ್ಕೆ ಸೇರಿದ ರಾಜರು ಜಗತ್ತಿಗೆ ಮಾದರಿಯಾದ ಪ್ರಜಾಸತ್ತಾತ್ಮಕ ಸಮಾಜವನ್ನು ನಿರ್ಮಾಣ ಮಾಡಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ತತ್ವಗಳಿಗೆ ಸಿಂಧೂ ನಾಗರಿಕತೆಯು ಹೆಸರುವಾಸಿಯಾಗಿತ್ತು.

ಕ್ರಿ.ಪೂ. 1800ರಲ್ಲಿ ಮಧ್ಯ ಏಷಿಯಾದಿಂದ ಖೈಬರ್ ಕಣಿವೆಗಳ ಮೂಲಕ ದನ ಮೇಯಿಸಿಕೊಂಡು ಅಲೆಮಾರಿಗಳಾಗಿ ಬಿಳಿ ಬಣ್ಣದ ಆರ್ಯರು ಬಂದರು. ಸಂಪದ್ಭರಿತವಾದ ಸಿಂಧೂ ನಾಗರಿಕತೆಯನ್ನು ನೋಡಿ ಇಲ್ಲೇ ನಿಲ್ಲಬೇಕೆಂದು ತೀರ್ಮಾನಿಸಿದರು. ವ್ಯವಸ್ಥಿತವಾಗಿ ಸಿಂಧೂ ನಾಗರಿಕತೆಯೊಳಗೆ ನುಸುಳಿಕೊಂಡರು. ಸಮಾನತೆಯಿಂದ ಬದುಕುತ್ತಿದ್ದ ಮೂಲನಿವಾಸಿಗಳ ನಡುವೆ ಇದ್ದ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ದೊಡ್ಡ ವೈರುಧ್ಯಗಳನ್ನಾಗಿ ಪರಿವರ್ತಿಸಿ, ಒಂದು ಗಣರಾಜ್ಯದ ಮೇಲೆ ಮತ್ತೊಂದು ಗಣರಾಜ್ಯವನ್ನು ಎತ್ತಿಕಟ್ಟಿ ಅವರು ವೈರಿಗಳಾಗಿ ಕಾದಾಡುವಂತೆ ಮಾಡಿದರು. ಇದೇ ಸಂದರ್ಭವನ್ನು

ಉಪಯೋಗಿಸಿಕೊಂಡು ಮೂಲನಿವಾಸಿಗಳ ಮೇಲೆ ವ್ಯವಸ್ಥಿತವಾದ ಆಕ್ರಮಣವನ್ನು ನಡೆಸಿ ಸಿಂಧೂ ನಾಗರಿಕತೆಯನ್ನು ನಾಶ ಮಾಡಿದರು.

ಅಲ್ಲಿನ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು. ಮೂಲನಿವಾಸಿ ರಾಜರನ್ನು ಮೋಸದಿಂದ ಕೊಂದು ಅದನ್ನು "ದುಷ್ಟ ಶಿಕ್ಷಣೆ ಶಿಷ್ಟ ರಕ್ಷಣೆ" ಎಂದು ಪ್ರಚಾರ ಮಾಡಿದರು. ಮೂಲ ನಿವಾಸಿ ನಾಗ ಜನಾಂಗದ ರಾಜ್ಯಭಾರವನ್ನು ನಾಶ ಮಾಡಿದ ನಂತರ ಆರ್ಯರು ಸಮಾಜವನ್ನು ವರ್ಣವ್ಯವಸ್ಥೆಯ ಮೇಲೆ ವಿಭಜನೆ ಮಾಡಿದರು. ಬೌದ್ಧಧರ್ಮ ಪೂರ್ವ ಆರ್ಯ ಸಮಾಜದ ಆಡಳಿತದಲ್ಲಿ ಇಡೀ ಸಮಾಜ ಕೆಟ್ಟು ಕೆರ ಹಿಡಿದಿತ್ತು.

## 2.2. ಗೌತಮ ಬುದ್ಧನ ಕ್ರಾಂತಿ

ಆರ್ಯರ ಆಡಳಿತದಿಂದಾಗಿ ನೀತಿಗೆಟ್ಟು, ಮತಿಗೆಟ್ಟಿದ್ದ ಸಮಾಜದ ಒಳಗಿನಿಂದ ಗೌತಮ ಬುದ್ಧ ಹುಟ್ಟಿ ಬಂದರು. ಕ್ರಿ.ಪೂ. 500ರಲ್ಲಿ ಗೌತಮ ಬುದ್ಧ ಬಂಡಾಯ ಹೂಡಿದರು. ಕಾರಣ ಮತ್ತು ಪರಿಣಾಮ ಎಂಬ ಸಹಜ ಸಿದ್ಧಾಂತದ ಮೇಲೆ ಧರ್ಮಸ್ಥಾಪನೆ ಮಾಡಿದರು. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ತತ್ವಗಳನ್ನು ಪ್ರಚಾರ ಮಾಡಿ ನೈಜ ಪ್ರಜಾಪ್ರಭುತ್ವದ ಸಂಸ್ಥಾಪಕರಾದರು. ಜನತೆ ಆರ್ಯರ ಅನೀತಿಯುತ ವ್ಯವಸ್ಥೆಯನ್ನು ತಿರಸ್ಕರಿಸಿದರು. ಬೌದ್ಧ ಧರ್ಮದ ಅನುಯಾಯಿಗಳಾಗಿ ನೆಮ್ಮದಿ ಹಾಗೂ ಸಂತಸದ ಬದುಕನ್ನು ಕಂಡುಕೊಂಡರು.

ಈ ಬೌದ್ಧ ಕ್ರಾಂತಿಯ ಪರಿಣಾಮವಾಗಿ ಬ್ರಾಹ್ಮಣಶಾಹಿ ವ್ಯವಸ್ಥೆಯು ಬುಡಮೇಲಾಯಿತು. ಬೌದ್ಧ ರಾಜರು ಭಾರತವನ್ನು 500 ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಅದರಲ್ಲಿ ಅಶೋಕನಿಂದ ಬೃಹದ್ರಥ ಮೌರ್ಯನವರೆಗೆ ಸುಮಾರು 150 ವರ್ಷಗಳ ಕಾಲದ ಮೌರ್ಯ ಸಾಮ್ರಾಜ್ಯದಲ್ಲಿ ಅತ್ಯುನ್ನತ ಸಾಮಾಜಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಜಾರಿಯಲ್ಲಿತ್ತು. ಅದು ಇಡೀ ಜಗತ್ತಿಗೆ ಮಾದರಿಯಾಯಿತು. ಯಜ್ಞ ಯಾಗಗಳ ನಿಷೇಧದಿಂದಾಗಿ ಅದನ್ನೇ ಕಸುಬಾಗಿಸಿಕೊಂಡಿದ್ದ ಬ್ರಾಹ್ಮಣರು ಬಡ ಬ್ರಾಹ್ಮಣರಾದರು.

### 2.2.1. ಬೌದ್ಧಧರ್ಮವನ್ನು ನಾಶಗೊಳಿಸಿದ ಪುಷ್ಯಮಿತ್ರನ ಪ್ರತಿಕ್ರಾಂತಿ

ಕ್ರಿ.ಪೂ. 185ರಲ್ಲಿ ಮೌರ್ಯರ ಕೊನೆಯ ದೊರೆ ಬೃಹದ್ರಥನನ್ನು ಅವನ ಸೇನಾಧಿಪತಿ ಪುಷ್ಯಮಿತ್ರನೆಂಬ ಸಾಮವೇದಿ ಸುಂಗ ಬ್ರಾಹ್ಮಣನು ಮೋಸದಿಂದ ಕೊಲೆ

ಮಾಡಿದನು. ಅಶ್ವಮೇಧಯಾಗವನ್ನು ಜಾರಿಗೆ ತಂದು ಬೌದ್ಧ ರಾಜರ ವಿರುದ್ಧ ಯುದ್ಧ ಘೋಷಣೆ ಮಾಡಿ ಮೌರ್ಯ ಸಾಮ್ರಾಜ್ಯವನ್ನು ನಾಶ ಮಾಡಿ, ಸುಂಗ ರಾಜ್ಯ ಸ್ಥಾಪನೆ ಮಾಡಿದನು. ಬೌದ್ಧ ಭಿಕ್ಷುಗಳ ತಲೆ ಕತ್ತರಿಸಿ ತಂದವರಿಗೆ ನೂರು ಚಿನ್ನದ ನಾಣ್ಯಗಳನ್ನು ಬಹುಮಾನ ನೀಡುವುದಾಗಿ ಘೋಷಣೆ ಮಾಡಿ ಬೌದ್ದ ಭಿಕ್ಷುಗಳ ಮಾರಣಹೋಮ ಮಾಡಿದನು. ಸುಮತಿ ಭಾರ್ಗವನೆಂಬ ಸಾಮವೇದಿ ಬ್ರಾಹ್ಮಣನ ಕೈಯಿಂದ ಮನುಸ್ಮೃತಿಯನ್ನು ಪುನರ್ ರಚಿಸಿ ಬ್ರಾಹ್ಮಣವಾದವನ್ನು ತನ್ನ ಸಾಮ್ರಾಜ್ಯದ ಸಿದ್ಧಾಂತವನ್ನಾಗಿ ಮಾಡಿದನು. ಪುಷ್ಯಮಿತ್ರನು ಹುಟ್ಟುಹಾಕಿದ ರಾಜಕೀಯ ಪ್ರತಿಕ್ರಾಂತಿಯು ಬೌದ್ಧ ಸಾಮ್ರಾಜ್ಯದ ಸಾಮಾಜಿಕ–ರಾಜಕೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿತು. ಸಮಾನತೆಯ ಸಮಾಜವನ್ನು ಮನುಸ್ಮೃತಿಯು ಮತ್ತೊಮ್ಮೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವಿಭಜಿಸಿ ಶ್ರೇಣೀಕೃತ ಜಾತಿವ್ಯವಸ್ಥೆಯನ್ನು ನಿರ್ಮಾಣ ಮಾಡಿತು. ಇಂತಹ ಮನುವಾದಿ ವ್ಯವಸ್ಥೆಯ ವಿರುದ್ಧ ಶೂದ್ರ ಸಮುದಾಯದ ಒಂದು ದೊಡ್ಡಗುಂಪು ಬಂಡಾಯವೆದ್ದಿತು. ಮನುಸ್ಮೃತಿಯ ನೀತಿ–ನಿಯಮಗಳನ್ನು ವಿರೋಧಿಸಿತು. ಬೌದ್ಧ ಭಿಕ್ಷುಗಳು ನಾಶವಾದ ನಂತರವೂ ಇವರು ಬೌದ್ದರಾಗಿಯೇ ಉಳಿದರು. ಈ ಬಂಡಾಯಗಾರ ಬೌದ್ಧರನ್ನು ಮಣಿಸಲು ಅನೇಕ ಕಾನೂನು ಕಟ್ಟಳೆಗಳನ್ನು ಇವರ ಮೇಲೆ ಹೇರಲಾಯಿತು. ಆ ಬಂಡಾಯಗಾರ ಬೌದ್ದರೇ ಇಂದಿನ ಅಸ್ಪೃಶ್ಯರು–ಅವರ್ಣೀಯರು. ಇವರ ಮೇಲೆ ಸಾಮಾಜಿಕ ಬಹಿಷ್ಕಾರದಂತಹ ಕ್ರೂರ ಸಾಮಾಜಿಕ ಕಾನೂನನ್ನು ಹೇರಿ ದೈಹಿಕ ಮತ್ತು ಮಾನಸಿಕ ಹಿಂಸೆಗೆ ಒಳಪಡಿಸಿ ಅವರನ್ನು ಊರಿಂದ ಹೊರಗಿಡಲಾಯಿತು. ಮನುಸ್ಮೃತಿಯು ಪುಷ್ಯಮಿತ್ರನ ಆಡಳಿತ ವ್ಯವಸ್ಥೆಯ ಕಾನೂನಾಗಿ ಶೂದ್ರ–ಅತಿಶೂದ್ರರಿಗೆ ವಿದ್ಯೆ, ಅಧಿಕಾರ, ಸಂಪತ್ತು ಮತ್ತು ಆಯುಧಗಳನ್ನಿಟ್ಟುಕೊಳ್ಳುವುದನ್ನು ನಿಷೇಧಿಸಿತು. ಇದರ ಪರಿಣಾಮವಾಗಿ ಶೂದ್ರರು ಮತ್ತು ಅಸ್ಪೃಶ್ಯರು ಮಾನಸಿಕ ಮತ್ತು ದೈಹಿಕ ಗುಲಾಮಗಿರಿಗೆ ಒಳಪಟ್ಟರು. ಕಾಲಕಳೆದಂತೆ ಗುಲಾಮಗಿರಿಯು ಅವರ ಜೀವನದ ಒಂದು ಅವಿಭಾಜ್ಯ ಅಂಗವಾಯಿತು. ಪುಷ್ಯಮಿತ್ರನ ನಂತರ ಭಾರತವನ್ನು ಆಳ್ವಿಕೆ ಮಾಡಿದ ಎಲ್ಲಾ ಹಿಂದೂ ರಾಜರು ಈ ಶೋಷಣೆಯನ್ನು ಮುಂದುವರಿಸಿದರು. ಒಂದು ಸಾವಿರ ವರ್ಷಗಳ ಮೊಗಲರ ಆಡಳಿತದಲ್ಲೂ ಶೂದ್ರ ಅತಿಶೂದ್ರರ ಕತ್ತಲ ಬದುಕಿನಲ್ಲಿ ಬದಲಾವಣೆಯ ಬೆಳಕು ಮೂಡಲೇ ಇಲ್ಲ.

ಆಧುನಿಕ ಭಾರತದಲ್ಲೇ ಜರ್ಝರಿತ ಸಮಾಜದ ಪರವಾಗಿ ಸ್ವರವೆತ್ತಿದ ಮೊದಲನೆಯ ಮಹಾಪುರುಷ ಜ್ಯೋತಿ ಬಾಫುಲೆಯಾಗಿದ್ದಾರೆ. ಫುಲೆಯವರು 1882ರಲ್ಲಿ

ಹಂಟರ್ ಆಯೋಗಕ್ಕೆ ಮನವಿ ಸಲ್ಲಿಸಿ ಭಾರತದ ಶೂದ್ರ-ಅಸ್ಪೃಶ್ಯ ಜನರಿಗೆ ಶೈಕ್ಷಣಿಕ ಸವಲತ್ತು ನೀಡಲು ಬ್ರಿಟಿಷರನ್ನು ಬಹಳ ಪರಿಣಾಮಕಾರಿಯಾಗಿ ಒತ್ತಾಯಿಸಿದರು.

ಶಿಕ್ಷಣದ ಜೊತೆಗೆ ಅಸ್ಪೃಶ್ಯರಿಗೆ ಮತ್ತು ಹಿಂದುಳಿದವರಿಗೆ ಅಧಿಕಾರದಲ್ಲಿ ಸಮಪಾಲು ಮತ್ತು ಸಾಮಾಜಿಕ ಸ್ಥಾನಮಾನ ದೊರಕಿಸಿಕೊಟ್ಟ ಮಹಾನ್ ಚೇತನ ಛತ್ರಪತಿ ಶಾಹು ಮಹಾರಾಜ್ ಅವರಾಗಿದ್ದಾರೆ. ಶಾಹು ಮಹಾರಾಜರು 1902ರಲ್ಲಿ ಹಿಂದುಳಿದವರಿಗೆ ಶೋಷಿತರಿಗೆ ಶೇ.50ರಷ್ಟು ಮೀಸಲಾತಿ ನೀಡುವುದರ ಮೂಲಕ ಮೀಸಲಾತಿ ನೀತಿಯನ್ನು ಜಾರಿಗೆ ತಂದ ಮೊದಲ ಭಾರತೀಯ ರಾಜ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬ್ರಾಹ್ಮಣರಿಗೆ ಮೀಸಲಾಗಿದ್ದ ಅರ್ಚಕ ವೃತ್ತಿಯನ್ನು ಬದಲು ಮಾಡಲು ಹೊರಟಿದ್ದು ಅತ್ಯಂತ ಕ್ರಾಂತಿಕಾರಕ ಹೆಜ್ಜೆಯಾಗಿತ್ತು.

"ತತ್ವಜ್ಞಾನಿಯಾದ ಅರಸರು ಜಗತ್ತನ್ನು ಉಳಿಸಬಲ್ಲರು, ಆದ್ದರಿಂದ ಪ್ರಭು ತತ್ವಜ್ಞಾನಿಯಾಗಿರಬೇಕು" ಎಂಬ ಪ್ಲೇಟೋ ಅವರ ಈ ಮಾತು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಅಕ್ಷರಶಃ ಸಲ್ಲುತ್ತದೆ. 20ನೇ ಶತಮಾನದ ಗೊಂದಲಮಯ ಜಗತ್ತಿನಲ್ಲಿ ಮೈಸೂರು ರಾಜ್ಯವನ್ನು ಇಡೀ ಭಾರತದಲ್ಲೇ ಅದೊಂದು ಮಾದರಿ ರಾಜ್ಯವಾಗುವಂತೆ ಮಾಡಿದವರು ನಾಲ್ವಡಿಯವರು. ಇವರು 1918ರಲ್ಲಿ ನೇಮಿಸಿದ ಮಿಲ್ಲರ್ ಆಯೋಗ, 1921ರಲ್ಲಿ ಬ್ರಾಹ್ಮಣೇತರರಿಗೆ ನೀಡಿದ್ದು ಶೇ. 75ರಷ್ಟು ಮೀಸಲಾತಿ(ಎಲ್ಲಾ ಸಮುದಾಯದ ಜನರಿಗೆ ಸರ್ಕಾರಿ ಉದ್ಯೋಗದಲ್ಲಿ ಪ್ರಾತಿನಿಧ್ಯ ನೀಡಲು ಈ ಆಯೋಗ ರಚನೆ).

ದಕ್ಷಿಣ ಭಾರತದಾದ್ಯಂತ ನಡೆದಿದ್ದ ಸಾಮಾಜಿಕ ಪರಿವರ್ತನಾ ಚಳುವಳಿಯ ಪರಿಣಾಮ ಬ್ರಿಟನ್ ಸರ್ಕಾರದ 1909 ಮತ್ತು 1919ರ ಕಾಯ್ದೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿ ಅನೇಕ ಸಾಮಾಜಿಕ-ರಾಜಕೀಯ ಸುಧಾರಣೆಗಳು ಜಾರಿಯಾಗಿದ್ದವು. ಅಷ್ಟೊತ್ತಿಗೆ ಮಹಾರಾಷ್ಟ್ರ ಮತ್ತು ದಕ್ಷಿಣ ಭಾರತದಾದ್ಯಂತ ಎಲ್ಲಾ ಮಹಾತ್ಮರು ನಡೆಸಿದ್ದ ಸಾಮಾಜಿಕ ಪರಿವರ್ತನೆಯ ಚಳುವಳಿಯನ್ನು ದೇಶದಾದ್ಯಂತ ಮುನ್ನಡೆಸುವ ಜವಾಬ್ದಾರಿಯು ಬಾಬಾಸಾಹೇಬ್ ಅಂಬೇಡ್ಕರ್ ಅವರ ಹೆಗಲಿಗೆ ಬಂತು.

ಭಾರತದ ರಾಜಕೀಯ ಇತಿಹಾಸದಲ್ಲಿ ಅಸ್ಪೃಶ್ಯರ ರಾಜಕೀಯ ಹಕ್ಕುಗಳಿಗಾಗಿ ಭಾರತರತ್ನ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನಾತ್ಮಕ ಹೋರಾಟ ಒಂದು ಹೊಸ ಅಧ್ಯಾಯ ಹುಟ್ಟಿಗೆ ಕಾರಣವಾಯಿತು. ರಾಜಕೀಯ ಪ್ರಾತಿನಿಧಿತ್ವವು ಪ್ರಜಾಪ್ರಭುತ್ವ

ಯಶಸ್ಸಿನ ಅಂಶಗಳಲ್ಲಿ ಪ್ರಮುಖವಾದ ವಿಷಯ. ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಪಾಲ್ಗೊಳ್ಳುವ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಜಾರಿಗೆ ತರುವುದು ಒಂದು ಮಹಾ ಕ್ರಾಂತಿಕಾರಕ ಬೆಳವಣಿಗೆಯಾಗಿದೆ. ಅಸಮಾನತೆಯ ಸಮಾಜದ ಸ್ಪೃಶ್ಯ-ಅಸ್ಪೃಶ್ಯ ಸಮುದಾಯಗಳ ಶೋಷಣೆ ದೌರ್ಜನ್ಯಗಳಿಂದ ಕೂಡಿರುವ ಸಮಾಜದಲ್ಲಿ ಪ್ರಾತಿನಿಧಿತ್ವವನ್ನು ರಾಜಕೀಯ ಸಮಾನತೆಯ ಆಧಾರದಲ್ಲಿ ರೂಪುಗೊಳಿಸುವುದು ಸ್ವಾತಂತ್ರ್ಯ ಚಳುವಳಿಯಷ್ಟೇ ಮುಖ್ಯವೆನಿಸಿದ ರಾಜಕೀಯ ಚಳುವಳಿಯಾಗಿತ್ತು. ಸಾಮಾಜಿಕ ಶಕ್ತಿಗಳು ಹೇಗಿತ್ತು ಎಂಬುದನ್ನು ಇಡೀ ಜಗತ್ತಿಗೆ ಪರೋಕ್ಷವಾಗಿ ಮತ್ತು ಭಾರತೀಯರಿಗೆ ನೇರವಾಗಿ ತಿಳಿಯಲ್ಪಡಿಸಿದ ಹೋರಾಟ ಇದಾಗಿತ್ತು. ಇದನ್ನು ತಮ್ಮ ಅಗಾಧ ಬೌದ್ಧಿಕ ಶಕ್ತಿಯ ಮೂಲಕ ಸಾಧ್ಯವಾಗಿಸಿದ್ದನ್ನು ಹೊಸ ಚರಿತ್ರೆಯಾಗಿ ನೋಡಬೇಕಾಗಿದೆ. ಹೊಸ ಚರಿತ್ರೆ ನಿರ್ಮಾಣ ಮಾಡಿದ ಡಾ.ಅಂಬೇಡ್ಕರ್ ಅವರು ಅಸ್ಪೃಶ್ಯರಾಗಿ ಜನಿಸಿ ಸವಾಲಿನ ಬದುಕನ್ನೇ ಸವೆಸಿ ಕೊನೆಗೆ ಬೌದ್ಧ ಧರ್ಮದ ಮೂಲಕ, ದ್ವೇಷದಿಂದ ಕೂಡಿದ ಸಮಾಜಕ್ಕೆ ಪ್ರೀತಿ ನೀಡಿದ ಮಹಾನ್ ಮಾನವತಾವಾದಿಯ ಹೋರಾಟದ ಫಲಿತಾಂಶವೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ರಾಜಕೀಯ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಯಿತು. ಆದರೆ ಈ ಮಹಾಚೇತನ ತಾನು ಬಯಸಿದ ರಾಜಕೀಯ ಪ್ರಾತಿನಿಧಿತ್ವವನ್ನು ಸಂಪೂರ್ಣವಾಗಿ ಪಡೆಯುವಲ್ಲಿ ವಿಫಲರಾಗಿರುವುದನ್ನು ಗಮನಿಸಿದಾಗ, ಈ ದೇಶದ ಪ್ರಬಲ ಸಂಪ್ರದಾಯವಾದಿಗಳ ಶಕ್ತಿ ಏನೆಂಬುದು ತಿಳಿಯಬಹುದು.

ಈ ಅಧ್ಯಾಯದಲ್ಲಿ ಪ್ರಮುಖವಾಗಿ ಅಸ್ಪೃಶ್ಯರ ರಾಜಕೀಯ ಹಕ್ಕುಗಳು ಮತ್ತು ಮೀಸಲು ಕ್ಷೇತ್ರಗಳ ಉಗಮಕ್ಕೆ ಕಾರಣವಾದ ಅಂಶಗಳನ್ನು ತಿಳಿಸುವ ಮೂಲಕ ಸೈದ್ಧಾಂತಿಕ ತಳಹದಿಯನ್ನು ಸಂಶೋಧನೆಗೆ ಒದಗಿಸಲಾಗಿದೆ. ಅಸ್ಪೃಶ್ಯರ ವಿಮೋಚನೆಗೆ ರಾಜಕೀಯ ಅಧಿಕಾರವೊಂದೇ ಕೀಲಿಕೈ ಎಂಬುದನ್ನು ಮನಗಂಡಿದ್ದ ಬಾಬಾಸಾಹೇಬರು ಅಸ್ಪೃಶ್ಯರ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಬ್ರಿಟಿಷ್ ಸಮಿತಿಗಳಾದ ಸೌತ್‌ಬರೊ ಸಮಿತಿ (1918), ಮುದ್ದಿಮಾನ್ ಸಮಿತಿ(1921), ಸೈಮನ್ ಆಯೋಗ(1927), ದುಂಡುಮೇಜಿನ ಸಮ್ಮೇಳನಗಳು 1930, 1931, 1932 ಮತ್ತು ಲೂಥಿಯಾನ್ ಸಮಿತಿ 1931 ಹಾಗೂ ಅಸ್ಪೃಶ್ಯರ ರಾಜಕೀಯ ಸ್ವಾತಂತ್ರ್ಯಕ್ಕೆ ಕಪ್ಪು ಚುಕ್ಕೆಯಾದ 1932ರ ಐತಿಹಾಸಿಕ ಪೂನಾ ಒಪ್ಪಂದ ಮತ್ತು ಸಂವಿಧಾನ ರಚನಾಸಭೆಯಲ್ಲಿ ಮೀಸಲು ಕ್ಷೇತ್ರಗಳ ಬಗ್ಗೆ ನಡೆದ ಚರ್ಚೆಯಲ್ಲಿ ಅಂಬೇಡ್ಕರ್ ಅವರು ಅಸ್ಪೃಶ್ಯರ ಹಿತವನ್ನು ಹೇಗೆ ರಕ್ಷಣೆ ಮಾಡಿದರು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಹಾಗೆ ಭಾರತ ಸಂವಿಧಾನದಲ್ಲಿ ಮೀಸಲು ಕೇತ್ರಗಳಿಗೆ

ಸಂಬಂಧಿಸಿದ ವಿಧಿಗಳು ಹಾಗೂ ಮೀಸಲಾತಿಯನ್ನು ಇಂದಿನವರೆಗೂ ಮುಂದುವರಿಸಲು ಸಂವಿಧಾನಕ್ಕೆ ತಂದಿರುವ ತಿದ್ದುಪಡಿಗಳನ್ನು ಚರ್ಚಿಸಲಾಗಿದೆ. ಕೊನೆಯದಾಗಿ 1976ರ ಕ್ಷೇತ್ರ ಪುನರ್ವಿಂಗಡನಾ ಕಾಯ್ದೆ ಮತ್ತು 2007ರ ನ್ಯಾಯಮೂರ್ತಿ ಕುಲದೀಪ್ ಸಿಂಗ್ ನೇತೃತ್ವದ ಕ್ಷೇತ್ರ ಪುನರ್ವಿಂಗಡನಾ ಸಮಿತಿಯ ವರದಿಯಲ್ಲಿ ಸೂಚಿಸಿರುವ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಯಲ್ಲಿರುವ ಮೀಸಲು ಕ್ಷೇತ್ರಗಳ ಸಂಖ್ಯೆಯನ್ನು ಉಲ್ಲೇಖಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

## 2.3. ಸೌತ್‌ಬರೋ ಸಮಿತಿ

ಬ್ರಿಟಿಷ್ ಭಾರತದ ರಾಜಕೀಯದಲ್ಲಿ ಮತದಾನದ ಹಕ್ಕನ್ನು ಕೇವಲ ಜಮೀನ್ದಾರರು, ತೆರಿಗೆ ಪಾವತಿದಾರರು ಮತ್ತು ಶೈಕ್ಷಣಿಕ ಮಟ್ಟ ಇವುಗಳನ್ನು ಮಾನದಂಡವಾಗಿಟ್ಟುಕೊಂಡು ಅಲ್ಪಸಂಖ್ಯೆ ಜನರಿಗೆ ಮಾತ್ರ ಮತದಾನ ಹಕ್ಕನ್ನು ನೀಡಿ ಬಹುಸಂಖ್ಯಾತರಾದ ಅಸ್ಪೃಶ್ಯರು, ಹಿಂದುಳಿದ ವರ್ಗ ಹಾಗೂ ಮಹಮ್ಮದೀಯರನ್ನು ಕಡೆಗಣಿಸಲಾಗಿತ್ತು. ಈ ವಸ್ತುಸ್ಥಿತಿಯನ್ನು ತಿಳಿಯುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರ ಭಾರತದಲ್ಲಿ ಮತದಾನದ ಹಕ್ಕನ್ನು ವಿಸ್ತರಿಸುವ ಉದ್ದೇಶದಿಂದ ರೈಟ್ ಹಾನರಬಲ್ ಲಾರ್ಡ್ ಸೌತ್‌ಬರೋ ನೇತೃತ್ವದಲ್ಲಿ ಚುನಾವಣಾ ಹಕ್ಕಿನ ಸಮಿತಿಯನ್ನು 1917ರಲ್ಲಿ ರಚಿಸಿತು. ಈ ಸಮಿತಿಯ ಇತರ ಸದಸ್ಯರಾಗಿ ಸರ್ ಫ್ರ್ಯಾಂಕ್‌ಜಿ.ಸ್ಲೈ, ಸಾಹೀಬಜಾದಾ ಅಫ್ತಾಬ್ ಅಹಮ್ಮದ್ ಖಾನ್, ದಿ ಆನರಬಲ್ ಬಾಬು ಸುರೇಂದ್ರನಾಥ ಬ್ಯಾನರ್ಜಿ, ದಿ ಹಾನರಬಲ್ ಎಂ.ಎನ್. ಹಾಗ್, ಡಬ್ಲ್ಯು.ಎಂ. ಹೇಯ್ಲ ಎಸ್ಕ್ವೈಯರ್, ದಿ ಹಾನರಬಲ್ ಶ್ರೀನಿವಾಸಶಾಸ್ತ್ರಿ ನಂತರದಲ್ಲಿ ಇತರ 3 ಸದಸ್ಯರಾದ ಎಲ್.ಸಿ.ಕ್ರಂಪ್, ಕೆ. ನಟರಾಜನ್ ಮತ್ತು ಟಿ.ಸಿ. ಟ್ಯಾಲ್ಲೆಂಟ್ಸ್ ಅವರುಗಳನ್ನು ನೇಮಿಸಲಾಯಿತು.[1] ಇದು ಭಾರತದಲ್ಲಿ ರಚಿತವಾದ ಪ್ರಥಮ ಮತದಾನದ ಹಕ್ಕಿನ ಸಮಿತಿಯಾಗಿದೆ.

ಡಾ. ಅಂಬೇಡ್ಕರ್ ಅವರ ಸಾರ್ವಜನಿಕ ಜೀವನದ ಪ್ರವೇಶವನ್ನು 1917ರಿಂದ ಗುರುತಿಸಬಹುದು.[2] ಬಾಬಾಸಾಹೇಬರು ಅಸ್ಪೃಶ್ಯರ ಮತದಾನದ ಹಕ್ಕಿಗಾಗಿ ನೀಡಿದ ಸಾಕ್ಷ್ಯ ಅವರ ರಾಜಕೀಯ ಬರವಣಿಗೆಯ ಪ್ರಥಮ ಪ್ರಬಂಧವು ಸಹ ಇದಾಗಿದೆ.[3] ಈ ಸಮಿತಿಯ

[1] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–1, ಕರ್ನಾಟಕ ಸರ್ಕಾರ, 1993. ಪು.ಸಂ–340.

[2] Bhardwaj Anil , Welfare of Scheduled castes in India, Deep and Deep Publications, 2002. Pp.- 45.

[3] Ibid-45.

ಮುಂದೆ ಅಂಬೇಡ್ಕರ್ ಅವರು 27 ಜನವರಿ 1919 ರಂದು ಹಾಜರಾಗುವ ಮೂಲಕ ಕೆಳಗಿನ ಮೌಖಿಕ ಹೇಳಿಕೆಯನ್ನು ನೀಡಿದರು.

ಭಾರತದಲ್ಲಿ ಜನಪ್ರಿಯ ಸರ್ಕಾರ ರಚಿಸುವಾಗ ಈ ಸಮಿತಿಯ ಅಭಿಪ್ರಾಯ ಮತ್ತು ವ್ಯಕ್ತಿಗಳ ಪ್ರಾತಿನಿಧ್ಯ ಇವೆರಡಕ್ಕೂ ಅವಕಾಶವಿರಬೇಕು. ಚುನಾವಣಾ ಪದ್ಧತಿ ಮತ್ತು ಮತಕ್ಷೇತ್ರಗಳನ್ನು ರಚಿಸುವಾಗ ಇವುಗಳಿಗೆ ಅವಕಾಶವಿಲ್ಲದೆ ಹೋದರೆ ಜನಪ್ರಿಯ ಸರ್ಕಾರದ ಸ್ಥಾಪನೆ ಉದ್ದೇಶ ವಿಫಲವಾಗುತ್ತದೆ. ಭಾರತೀಯರು ಜಾತಿ ಮತ್ತು ಪಂಗಡಗಳಾಗಿ ವಿಭಜಿತವಾಗಿರುವುದರಿಂದ(Representative Government) ಪ್ರಾತಿನಿಧಿತ್ವ ಸರ್ಕಾರಕ್ಕೆ ಯೋಗ್ಯರಲ್ಲ ಎನ್ನುವುದಾದರೆ ಅಮೆರಿಕದಲ್ಲಿಯೂ ಸಹ ವಿವಿಧ ಭಾಷೆ, ಧಾರ್ಮಿಕ ಮತ್ತು ನೈತಿಕ ಕಟ್ಟಳೆಗಳ ಪರಂಪರೆಯನ್ನು ಹೊಂದಿದ್ದಾರೆ. ಸಾಮಾಜಿಕ ವಿಭಜನೆಯಿಂದಾಗಿ ಯಾವುದಾದರೂ ರಾಷ್ಟ್ರ ಪ್ರತಿನಿಧಿ ಸರ್ಕಾರ ಹೊಂದಲು ಅಸಮರ್ಥತೆ ಎನ್ನುವುದಾದರೆ ಭಾರತದಷ್ಟೇ ಅಮೆರಿಕವು ಸಹ ಅಸಮರ್ಥ ರಾಷ್ಟ್ರವಾಗಬೇಕು. ಸಾಮಾಜಿಕ ವರ್ಗಗಳಿದ್ದರೂ ಅದು ಪ್ರಾತಿನಿಧಿಕ ಸರ್ಕಾರಕ್ಕೆ ಯೋಗ್ಯವಾಗಿದೆ ಎಂದರೆ, ಭಾರತದಲ್ಲಿ ಏಕೆ ಸಾಧ್ಯವಿಲ್ಲ ಎನ್ನುವ ತರ್ಕಬದ್ಧ ನಿಲುವನ್ನು ವ್ಯಕ್ತಪಡಿಸಿದರು.[4]

ಜಾತಿವ್ಯವಸ್ಥೆಯನ್ನು ಕುರಿತು ಹಿಂದುಗಳನ್ನು ಹೊರತುಪಡಿಸಿ ಉಳಿದೆಲ್ಲ ಧರ್ಮಗಳಲ್ಲಿ ಆಂತರಿಕ ಸಂಬಂಧದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ.[5] ಆದರೆ ಹಿಂದುಗಳ ವಿಷಯದಲ್ಲಿ ಸ್ವಲ್ಪ ದೀರ್ಘ ವಿಶ್ಲೇಷಣೆ ಮಾಡಬೇಕಾಗುತ್ತದೆ. ಹಿಂದುಗಳು ಎನಿಸಿಕೊಳ್ಳುವ ಮೊದಲು ಅವರು ಒಂದು ಜಾತಿಗೆ ಸೇರಿದವರಾಗಿರುತ್ತಾರೆ. ಈ ಜಾತಿಗಳು ಎಷ್ಟರಮಟ್ಟಿಗೆ ಪ್ರತ್ಯೇಕವಾಗಿವೆ ಎಂದರೆ ಅವರು ಬೇರೆ ಧರ್ಮೀಯರೊಂದಿಗೆ ವ್ಯವಹರಿಸುವಾಗ ಮಾತ್ರ ತಾವು ಹಿಂದು ಎಂಬ ಅಂಶ ಮುಖ್ಯವಾಗಿರುತ್ತದೆ. ಆದರೆ ಅವರು ತಮ್ಮೊಳಗಿನ ಜಾತಿಯವರೊಂದಿಗೆ ವ್ಯವಹರಿಸುವಾಗ ಅವರಲ್ಲಿ ಜಾತಿಯ ಪ್ರಜ್ಞೆ ಪ್ರಮುಖವಾಗುತ್ತದೆ.[6] ಸಂಪರ್ಕ ದೃಷ್ಟಿಯಿಂದ ಹಿಂದುಗಳಲ್ಲಿನ ಜಾತಿಗಳನ್ನು ಸ್ಪೃಶ್ಯ ಮತ್ತು ಅಸ್ಪೃಶ್ಯರು ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಸ್ಪೃಶ್ಯರಲ್ಲಿ ಏಕಮನಸ್ಕರಾಗಿರುವುದರಿಂದ ಅವರ ನಡುವಿನ ಘರ್ಷಣೆ ಅಷ್ಟು ಗಂಭೀರ ಎನಿಸುವುದಿಲ್ಲ. ಸ್ಪೃಶ್ಯ ಹಾಗೂ ಅಸ್ಪೃಶ್ಯರ ನಡುವಿನ

---

[4] Javaraiah M.N. Ambedkar and We the People of India , Bahujan Media Center, Mysore, 2006. Pp-356.

[5] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–1, ಕರ್ನಾಟಕ ಸರ್ಕಾರ, 1993. ಪು.ಸಂ–344.

[6] ಅದೇ, 345.

ಘರ್ಷಣೆಗೆ ವ್ಯತ್ಯಾಸವಿದೆ ಹಾಗೂ ಇವರ ನಡುವಿನ ಆಂತರಿಕ ಸಂಬಂಧಗಳಿಗೆ ಅಸ್ಪೃಶ್ಯತೆ ಒಂದು ಬಲವಾದ ನಿಷೇಧವಾಗಿದೆ ಎಂಬುದನ್ನು ಅರ್ಥ ಮಾಡಿಸುವ ಮೂಲಕ ಸಮಿತಿಯ ಗಮನ ಸೆಳೆದರು.

ಪ್ರಾದೇಶಿಕ ಮತಕ್ಷೇತ್ರಗಳ ರಚನೆ ಭಾರತದ ಸಂದರ್ಭದಲ್ಲಿ ಸರಿಹೊಂದುವುದಿಲ್ಲ. ಏಕೆಂದರೆ ಹಲವು ಭಾಗಗಳ ಮತದಾರರನ್ನು ಒಂದುಗೂಡಿಸಿದರೆ ಬಹುಮತ ಪಡೆದ ಅಭ್ಯರ್ಥಿಯು ಪ್ರತಿನಿಧಿಯಾಗುತ್ತಾನೆ. ಇದರಿಂದ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ಅಭ್ಯರ್ಥಿಯು ಚುನಾಯಿತನಾಗಲು ಸಾಧ್ಯವಿಲ್ಲ[7]. ಉದಾಹರಣೆಗೆ ಒಬ್ಬ ಹಿಂದು ಅಭ್ಯರ್ಥಿ ಮಹಮದ್ದೀಯರ ಹಿತಾಸಕ್ತಿಯನ್ನು ಎಂದೂ ಪ್ರತಿನಿಧಿಸಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿ, ಅದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಗುಂಪು ಇದ್ದೇ ಇರುತ್ತದೆ.

ಜನತಾ ಸರ್ಕಾರವೆಂಬುದು ಜನರಿಂದಾದ ಸರ್ಕಾರವಾಗಿರದೇ ಕೆಲವೇ ಜನರನ್ನು ಯಜಮಾನರನ್ನಾಗಿ ಹಾಗೂ ಇತರ ಬಹುಸಂಖ್ಯೆಯ ಪ್ರಜೆಗಳನ್ನು ಅವರ ಅಧೀನರನ್ನಾಗಿ ಮಾಡಿದೆ. ಆದ್ದರಿಂದ ಕೇವಲ ಜನರು ಮತದಾರರಾಗಿದ್ದರೆ ಸಾಲದು ಪ್ರತಿನಿಧಿಯಾಗುವುದು ಅವಶ್ಯ[8]. ಇದು ಸಾಧ್ಯವಾಗದೇ ಹೋದರೆ ಪ್ರತಿನಿಧಿಗಳು ಮತದಾರರ ಯಜಮಾನರಾಗುತ್ತಾರೆ ಎನ್ನುವ ಮೂಲಕ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಜನತಾ ಸರ್ಕಾರ ರಚನೆಯಾಗಬೇಕು ಎಂಬುದನ್ನು ಸ್ಪಷ್ಟಪಡಿಸಿದರು. ಮುಂದುವರಿದು ಮಾತನಾಡುತ್ತಾ ಚುನಾವಣಾ ವ್ಯವಸ್ಥೆಯಲ್ಲಿ ಮತದಾನದ ಹಕ್ಕನ್ನು ನೀಡುವಾಗ ಪೂರ್ವ ನಿರ್ಧಾರಿತವಾದ ಶಿಕ್ಷಣಮಟ್ಟ ಮತ್ತು ಆದಾಯದ ಪ್ರಮಾಣವನ್ನು ಅರ್ಹತೆಗಳನ್ನಾಗಿ ಪರಿಗಣಿಸಬಾರದು.[9] ಏಕೆಂದರೆ ಜನಸಂಖ್ಯೆ ಮತ್ತು ಸಂಪತ್ತು ಅಸಮಾನವಾಗಿ ಹಂಚಿಕೆಯಾಗಿರುವುದರಿಂದ ಇದನ್ನು ಪರಿಗಣಿಸಬಾರದು. ಮತದಾನದ ಅರ್ಹತೆಯನ್ನು ನಿರ್ಣಯಿಸುವಾಗ ವಿವಿಧ ಪ್ರಾಂತ್ಯಗಳ ನಡುವೆ ಹಾಗೂ ಒಂದೇ ಪ್ರಾಂತ್ಯದ ಬೇರೆ ಬೇರೆ ಭಾಗಗಳ ನಡುವೆ ವಿಭಿನ್ನ ಅರ್ಹತೆಯ ಆಧಾರವನ್ನು ಅನುಸರಿಸುವುದು ಅವಶ್ಯವಾಗಿದೆ. ಹಾಗೆಯೇ ಹಿಂದೂ ಪ್ರಾಂತ್ಯದಲ್ಲಿ ವಿಭಿನ್ನ ಜಾತಿಗಳಿರುವುದರಿಂದ ಅವರಿಗಾಗಿ ಬೇರೆ ಬೇರೆ ಮಾನದಂಡಗಳನ್ನು ಅನುಸರಿಸಬೇಕು. ಹೀಗೆ ವ್ಯತ್ಯಾಸ ಮಾಡದೇ ಹೋದರೆ ಶ್ರೀಮಂತ ಮತ್ತು ಸುಶಿಕ್ಷಿತ ಜನಸಂಖ್ಯೆಯುಳ್ಳ ಚಿಕ್ಕ ಜಾತಿಗಳು, ಬಡ ಹಾಗೂ ಅಶಿಕ್ಷಿತರನ್ನು ಹೆಚ್ಚಿನ

---

[7] ಅದೇ, 346.

[8] Javaraiah M.N. 2006. Pp.-359.

[9] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–1 ಕರ್ನಾಟಕ ಸರ್ಕಾರ, 1993. ಪು.ಸಂ–353.

ಸಂಖ್ಯೆಯಲ್ಲಿ ಒಳಗೊಂಡ ದೊಡ್ಡ ಜಾತಿಗಳಿಗಿಂತ ಹೆಚ್ಚು ಮತ ಪಡೆಯುತ್ತಾರೆ. ಇದರಿಂದ ಅಲ್ಪಸಂಖ್ಯೆಯ ಜನರು ಬಹುಸಂಖ್ಯಾತರ ಮೇಲೆ ಸವಾರಿ ಮಾಡುತ್ತಾರೆ. ಆದ್ದರಿಂದ ಅಂಬೇಡ್ಕರ್ ಅವರು ಚುನಾವಣಾ ಪದ್ಧತಿಯಲ್ಲಿ ಏಕರೂಪತೆ ತೆಗೆದುಹಾಕಬೇಕೆಂದು ಒತ್ತಾಯಿಸಿದರು.

ನಿಮ್ನವರ್ಗದ ಕುರಿತಾಗಿ ಅಸ್ಪೃಶ್ಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ನಿಷೇಧಗಳ ಮೂಲಕ ಅವರ ವ್ಯಕ್ತಿತ್ವವನ್ನು ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ರಾಜಕೀಯ ಕ್ಷೇತ್ರದಲ್ಲಿ ಕಡೆಗಣಿಸಿ ಗುಲಾಮರ ಸ್ಥಿತಿಗೆ ತಳ್ಳಿದ್ದಾರೆ.[10] ಪ್ಲೇಟೋ ಅವರ ಪ್ರಕಾರ ಯಾರ ಅಸ್ತಿತ್ವ ಇತರರನ್ನು ಅವಲಂಬಿಸಿದೆಯೋ ಅವರೇ ಗುಲಾಮರು.[11] ಈ ವ್ಯಾಖ್ಯೆಯನ್ನು ಒಪ್ಪಿಕೊಳ್ಳುವುದೇ ಆದರೆ ಅಸ್ಪೃಶ್ಯರು ನಿಜವಾಗಲು ಗುಲಾಮರು. ತಮ್ಮ ಹುಟ್ಟು ವಿಧಿಪ್ರಾಪ್ತಿ ಎಂಬ ನಂಬಿಕೆ ಅಸ್ಪೃಶ್ಯರಲ್ಲಿ ಮನೆ ಮಾಡಿದೆ. ಇದನ್ನು ನಾವು ತೊಡೆದುಹಾಕಬಹುದೆಂಬ ವಿಚಾರ ಅವರಿಗೆ ಎಂದೂ ಹೊಳೆಯುವುದಿಲ್ಲ. ಅಸ್ಪೃಶ್ಯತೆಯ ಕಾರಣದಿಂದಾಗಿ ಅವರ ವ್ಯಕ್ತಿತ್ವ ಬೆಳವಣಿಗೆ ಕುಂಠಿತವಾಗಿದೆ. ಅಲ್ಲದೆ ಅವರ ಪ್ರಾಪಂಚಿಕ ಸುಖಕ್ಕೂ ಅಡ್ಡಿಯಾಗಿದೆ. ಇದರಿಂದ ಅಸ್ಪೃಶ್ಯರು ನಾಗರಿಕ ಹಕ್ಕುಗಳಿಂದಲೂ ಸಹ ವಂಚಿತರಾಗಿದ್ದಾರೆ. ಉದಾ: ಕೊಂಕಣದಲ್ಲಿ ಅಸ್ಪೃಶ್ಯರು ಸಾರ್ವಜನಿಕ ರಸ್ತೆಗಳನ್ನು ಉಪಯೋಗಿಸದಂತೆ ನಿಷೇಧಿಸಲಾಗಿದೆ. ಉಚ್ಚಜಾತಿಯವರು ಎದುರಿಗೆ ಬಂದರೆ ಅಸ್ಪೃಶ್ಯರು ಅಲ್ಲಿಂದ ತನ್ನ ನೆರಳು ಅವರ ಮೇಲೆ ಬೀಳದಷ್ಟು ದೂರ ಓಡಿಹೋಗಿ ನಿಲ್ಲಬೇಕು ಎಂಬ ಕಟುಸತ್ಯವನ್ನು ನಿದರ್ಶನವಾಗಿ ನೀಡಿದರು. ಅಸ್ಪೃಶ್ಯರು ಪೌರರಲ್ಲ, ಏಕೆಂದರೆ ಯಾವ ಹಕ್ಕುಗಳನ್ನು ಈ ಜಾತಿ ಆಧಾರಿತ ಸಮಾಜ ಅವರಿಗೆ ನೀಡಿಲ್ಲ. ಬ್ರಿಟಿಷ್ ಸರ್ಕಾರ ಭಾರತೀಯ ಪ್ರಜೆಗಳಿಗೆ ಕಾಲಕ್ರಮೇಣವಾಗಿ ಕೆಲವು ನಾಗರಿಕ ಹಕ್ಕುಗಳನ್ನು ನೀಡಿದೆ. ಆದರೆ ಜಾತಿ ಹಿಂದೂಗಳು ಅಸ್ಪೃಶ್ಯತೆಯ ಒಂದೇ ಕಾರಣದಿಂದ ಪೌರತ್ವ ಹಾಗೂ ರಾಜಕೀಯ ಪ್ರಾತಿನಿಧ್ಯತೆಯ ಹಕ್ಕುಗಳನ್ನು ನಿರಾಕರಿಸುತ್ತಾ ಬಂದಿದ್ದಾರೆ. ಆದ್ದರಿಂದ ತಮ್ಮದೇ ಆದ ವಿಶಿಷ್ಟ ಹಿತಾಸಕ್ತಿಗಳನ್ನು ಹೊಂದಿರುವ ಅಸ್ಪೃಶ್ಯರನ್ನು ಬ್ರಾಹ್ಮಣ, ಮಹಮ್ಮದ್ದೀಯ ಅಥವಾ ಮರಾಠರಾಗಲಿ ಪ್ರತಿನಿಧಿಸಲು ಸಾಧ್ಯವಿಲ್ಲ.[12] ಏಕೆಂದರೆ ಅಸ್ಪೃಶ್ಯತೆಯ ಯಾತನೆ ಅಥವಾ ಅವರ ವಿಶಿಷ್ಟ ಹಿತಾಸಕ್ತಿಗಳ ಅರಿವು ಅವರಿಗಿಲ್ಲ. ಆದ್ದರಿಂದ ತಮ್ಮ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಮತ್ತು ತಮ್ಮ ಕುಂದುಕೊರತೆಗಳನ್ನು ಪರಿಹರಿಸುವ ಅಸ್ಪೃಶ್ಯರೇ ಈ ಸಮುದಾಯ ಪ್ರತಿನಿಧಿಸಬೇಕೆಂದು ಆಗ್ರಹಿಸಿದರು.

---

[10] ಅದೇ, 354.

[11] ಅದೇ, 355.

[12] ಅದೇ, 355.

ಅಸ್ಪೃಶ್ಯರ ದೃಷ್ಟಿಯಿಂದ ಸಾಮಾನ್ಯ ಮತಕ್ಷೇತ್ರಗಳು ಒಳ್ಳೆಯದಲ್ಲ. ಈ ವಿಧಾನದ ಮೂಲಕ ಅಸ್ಪೃಶ್ಯರನ್ನು ಶಾಸನಸಭೆಗೆ ಚುನಾಯಿಸಲು ಸಾಧ್ಯವಿಲ್ಲ. ಏಕೆಂದರೆ ಬಾಂಬೆ ಪ್ರಾಂತ್ಯದಲ್ಲಿ ಮಹಾರ್ ಜನಸಂಖ್ಯೆಯು ಪ್ರತಿ ಸಾವಿರ ಜನಸಂಖ್ಯೆಗೆ 69.4ರಷ್ಟಿದ್ದರೂ ಅಸ್ಪೃಶ್ಯರು ಒಬ್ಬ ಮತದಾರನನ್ನು ಹೊಂದಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ಸಾಮಾನ್ಯ ಮತಕ್ಷೇತ್ರದಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡುವುದು ಅಸಾಧ್ಯ.[13] ಶಾಸನಸಭೆಯಲ್ಲಿ ಸವರ್ಣೀಯರು ಅಸ್ಪೃಶ್ಯರ ಪರವಾಗಿ ಎಂದೂ ಮಾತನಾಡುವುದಿಲ್ಲ ಎಂಬುದನ್ನು ಖಚಿತಪಡಿಸಿ, ಸಾಮಾನ್ಯ ಮತಕ್ಷೇತ್ರಗಳ ಲಾಭವನ್ನು ಜಾತಿಹಿಂದುಗಳು ಪಡೆಯುವುದು ಶತಸಿದ್ಧ ಎಂದು ಖಚಿತಪಡಿಸಿದರು. ಆದ್ದರಿಂದ ಈ ಚುನಾಯಿತ ವ್ಯವಸ್ಥೆಯಿಂದ ಅತ್ಯಂತ ಹೆಚ್ಚಿನ ತೊಂದರೆಗೆ ಒಳಗಾಗುವವರು ಅಸ್ಪೃಶ್ಯರು. ಆದ್ದರಿಂದ ಅವರಿಗೆ ಪ್ರಾತಿನಿಧ್ಯತೆ ನೀಡಲು ವಿಶೇಷ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು.

ಪ್ರಸ್ತುತ ಮತದಾನ ಪದ್ಧತಿಯಲ್ಲಿ ಅಸ್ಪೃಶ್ಯರು ಬೇರೆ ಪಂಗಡದವರಿಗಿಂತ ಪ್ರತಿ ಸಾವಿರಕ್ಕೆ ಕಡಿಮೆ ಪ್ರಮಾಣದ ಮತದಾರರಿದ್ದಾರೆ. ಈ ಪರಿಸ್ಥಿತಿಯನ್ನು ಒಪ್ಪಿಕೊಂಡು ಅವರ ಪ್ರತಿನಿಧಿಗಳ ಸಂಖ್ಯೆಯನ್ನು ಕಡಿತಗೊಳಿಸುವ ಬದಲು ಅಸ್ಪೃಶ್ಯ ಮತದಾರರ ಸಂಖ್ಯೆ ಹೆಚ್ಚಿಸಬೇಕು ಹಾಗೂ ಅಸ್ಪೃಶ್ಯರ ಮತದಾನದ ಅರ್ಹತೆಯನ್ನು ಸಡಿಲಗೊಳಿಸಿ ಅವರ ರಾಜಕೀಯ ಪ್ರಾತಿನಿಧ್ಯತೆಗೆ ಒಲವನ್ನು ತೋರಬೇಕು.[14] ಪ್ರಜಾಪ್ರಭುತ್ವದಲ್ಲಿ ಪಾಲ್ಗೊಳ್ಳುವುದು ಒಂದು ರಾಜಕೀಯ ಶಿಕ್ಷಣವನ್ನು ನೀಡುತ್ತದೆ. ಮತದಾನದ ಹಕ್ಕು ಪ್ರತಿ ವ್ಯಕ್ತಿಯ ಪ್ರಜಾಪ್ರಭುತ್ವ ಆಸಕ್ತಿಯನ್ನು ಜಾಗೃತಗೊಳಿಸಿ ಉತ್ತೇಜಿಸುತ್ತದೆ. ಶಾಂತಚಿತ್ತ ನಾಗರಿಕರನ್ನು ಪ್ರತಿಭಟನಾಶಕ್ತಿಯಾಗಿ ರೂಪಿಸುವ ಮೂಲಕ ಅಸ್ಪೃಶ್ಯರನ್ನು ಬಲಾಢ್ಯರ ಕಪಿಮುಷ್ಟಿಯಿಂದ ಮುಕ್ತಗೊಳಿಸುತ್ತದೆ. ಆದ್ದರಿಂದ ಜನಪ್ರಿಯ ಸರ್ಕಾರ ರಚನೆಯಲ್ಲಿ ಮತದಾನದ ಹಕ್ಕನ್ನು ನಿರ್ಬಂಧಗೊಳಿಸುವುದು ಸರಿಯಲ್ಲ. ಇದರಿಂದ ಜನಪ್ರಿಯ ಸರ್ಕಾರ ಸ್ಥಾಪನೆಯ ಉದ್ದೇಶ ವಿಫಲವಾಗುತ್ತದೆ. ಜಾರಿಯಲ್ಲಿರುವ ಮತದಾನದ ಅರ್ಹತೆಗಳು ಮತದಾರರಲ್ಲಿ ಹಲವಾರು ಗುಂಪುಗಳನ್ನಾಗಿ ಮಾಡಿವೆ. ಆದ್ದರಿಂದ ಈ ವ್ಯವಸ್ಥೆಯಿಂದ ಏಕಾಭಿಪ್ರಾಯ ಹೊರಹೊಮ್ಮಲು ಅಸಾಧ್ಯ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಜಾರಿಯಲ್ಲಿರುವ ಮತದಾನ ವ್ಯವಸ್ಥೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು.

---

[13] Javaraiah M.N. 2006. Pp. -377.

[14] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–1, ಕರ್ನಾಟಕ ಸರ್ಕಾರ, 1993. ಪು.ಸಂ–362.

ಅಸ್ಪೃಶ್ಯರ ಮತದಾರಪಟ್ಟಿ ಚಿಕ್ಕದಾಗಿದೆ ಎಂಬ ಮಾತ್ರಕ್ಕೆ ರಾಜಕೀಯ ಪ್ರಾತಿನಿಧ್ಯಕ್ಕೆ ನಿರಾಕರಿಸುವುದನ್ನು ಕುರಿತು ಪ್ರಸ್ತಾಪಿಸುತ್ತಾ, ಅಸ್ಪೃಶ್ಯತೆ ನಿಮ್ನವರ್ಗದ ನೈತಿಕ ಮತ್ತು ದೈಹಿಕ ಅಬಿವೃದ್ಧಿಗೆ ಅಡ್ಡಿಯಾಗಿದೆ.[15] ವಾಣಿಜ್ಯ ಉದ್ದಿಮೆ ಅಥವಾ ಸರ್ಕಾರಿ ಸೇವೆ ಸಂಪತ್ತನ್ನು ಗಳಿಸುವ ಪ್ರಮುಖ ಸಾಧನಗಳು. ಇವುಗಳನ್ನು ಅಸ್ಪೃಶ್ಯತೆಯ ಕಾರಣದಿಂದಾಗಿ ಅವರಿಗೆ ನಿರಾಕರಿಸಲಾಗಿದೆ. ಒಬ್ಬ ಅಸ್ಪೃಶ್ಯ ವ್ಯಾಪಾರಿಯಿಂದ ಯಾವ ಹಿಂದುವೂ ಕೊಳ್ಳುವುದಿಲ್ಲ. ಆದ್ದರಿಂದ ಅಸ್ಪೃಶ್ಯನಾದವನು ಯಾವುದೇ ಲಾಭದಾಯಕ ಕೆಲಸದಲ್ಲಿ ತೊಡಗುವುದಿಲ್ಲ. ಸರ್ಕಾರಿ ಸೇವೆಗೆ ಬಂದರೆ ಈಸ್ಟ್ ಇಂಡಿಯಾ ಕಂಪನಿಯ ಪ್ರಾರಂಭದ ದಿನಗಳಿಂದಲೂ ಸೈನಿಕ ಸೇವೆಯೆಂಬುದು ಅಸ್ಪೃಶ್ಯನ ಏಕಾಧಿಪತ್ಯವಾಗಿತ್ತು. ಸಿಪಾಯಿದಂಗೆಯ ನಂತರ ಬ್ರಿಟಿಷರು ಮರಾಠರಿಂದ ಸೈನಿಕರನ್ನು ಭರ್ತಿ ಮಾಡಿಕೊಳ್ಳಲು ಪ್ರಾರಂಭಿಸಿದ್ದರಿಂದ ಮುಂಬೈ ಸೈನ್ಯದ ಮೂಲಶಕ್ತಿಯಾಗಿದ್ದ ಅಸ್ಪೃಶ್ಯರ ಪರಿಸ್ಥಿತಿ ಚಿಂತಾಜನಕವಾಯಿತು. ಇದಕ್ಕೆ ಕಾರಣ ಮರಾಠರ ಧಾರ್ಮಿಕ ಭಾವನೆಗಳು ಕೀಳು ಜಾತಿಯ ಅಧಿಕಾರಿಗಳ ಕೈಕೆಳಗೆ ಕೆಲಸ ಮಾಡಲು ಅಡ್ಡಿಪಡಿಸಿದವು. ಇದು ಎಷ್ಟು ಪೂರ್ವಕಲ್ಪಿತವಾಗಿತ್ತು ಎಂದರೆ ಜಾತಿಯ ಭಾವನೆಯನ್ನೇ ತಿಳಿಯದ ಬ್ರಿಟಿಷರು ಕೂಡ ಸೈನ್ಯಕ್ಕೆ ಅಸ್ಪೃಶ್ಯವರ್ಗವನ್ನು ಭರ್ತಿ ಮಾಡುವುದನ್ನೆ ನಿಲ್ಲಿಸಿದರು. ಇದೇ ರೀತಿ ಪೊಲೀಸ್ ಸೇವೆಯಲ್ಲಿ ಬಹಿಷ್ಕೃತರ ಭರ್ತಿಯನ್ನು ನಿರಾಕರಿಸಲಾಯಿತು. ಹಾಗಾಗಿ ಅಸ್ಪೃಶ್ಯರು ಸರ್ಕಾರಿ ಸೇವೆಗೆ ಸೇರುವುದು ಅಸಾಧ್ಯವಾದ ಮಾತು. ಕಾರ್ಖಾನೆಯ ವಿಷಯಕ್ಕೆ ಬಂದರೆ ಅಲ್ಲಿಯೂ ಕೂಡ ತಾರತಮ್ಯ ಎಸಗಲಾಗಿತ್ತು. ವೃತ್ತಿಯಲ್ಲಿ ನೇಕಾರರಾಗಿದ್ದ ಅಸ್ಪೃಶ್ಯರನ್ನು ಹತ್ತಿಗಿರಣಿಗಳಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ ಎಂಬ ವಸ್ತುಸ್ಥಿತಿಯನ್ನು ವಿವರಿಸಿದರು.

ರಾಜಕೀಯ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ಟೀಕಿಸುತ್ತಾ, ಮಹಮ್ಮದ್ದೀಯರನ್ನು ಹೊರತುಪಡಿಸಿ ಇತರ ಯಾರಿಗೂ ಕೋಮುವಾರು ಪ್ರಾತಿನಿಧ್ಯ ನೀಡಬಾರದು ನಾಮಕರಣ ಪದ್ಧತಿಯನ್ನು ನಿರಾಕರಿಸಿದೆ. ಹಾಗಾಗಿ ಅಸ್ಪೃಶ್ಯರ ಉಳಿದಿರುವ ಒಂದೇ ಮಾರ್ಗವೆಂದರೆ ಸಾಮಾನ್ಯ ಚುನಾಯಿಕಗಳಿಂದ ಸ್ಪರ್ಧಿಸುವುದು. ಇದು ಅಸ್ಪೃಶ್ಯರಿಗೆ ಒಳಿತನ್ನು ಮಾಡುವುದಿಲ್ಲ. ಏಕೆಂದರೆ ಜಾತಿ ಆಧಾರಿತ ಸಮಾಜದಲ್ಲಿ ಎಲ್ಲರೂ ಸ್ಪರ್ಧಿಸಲು ಸಮಾನ ಪ್ರಾತಿನಿಧ್ಯಕ್ಕೆ ಅವಕಾಶವಿಲ್ಲ. ಹಾಗಾಗಿ ಬಹಿಷ್ಕೃತರು ಸಾಮಾನ್ಯ ಚುನಾಯಿಕಗಳಿಂದ ಆಯ್ಕೆಯಾಗಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಕಾಂಗ್ರೆಸ್ ಪಕ್ಷ ಧೋರಣೆಯಲ್ಲಿ

[15] ಅದೇ, 363.

ರಾಜಕೀಯ ತೀವ್ರಗಾಮಿಗಳಿಂದ ಹಾಗೂ ಸಾಮಾಜಿಕ ಸಂಪ್ರದಾಯವಾದಿಗಳಿಂದ ಕೂಡಿದ ಸಂಸ್ಥೆ ಎಂದು ತಿಳಿಸಿ ಕಾಂಗ್ರೆಸ್ ಪಕ್ಷದ ಪ್ರಸ್ತಾಪವನ್ನು ಪರಿಗಣಿಸಬಾರದೆಂದು[16] ಸಾಕಷ್ಟು ನಿದರ್ಶನಗಳ ಮೂಲಕ ಸಮಿತಿಗೆ ಮನವರಿಕೆ ಮಾಡಿಸಿದರು.

ಅಸ್ಪೃಶ್ಯರಿಗೆ ಶಾಸಕಾಂಗದಲ್ಲಿ ಸ್ಥಾನಗಳನ್ನು ನಿಗದಿಗೊಳಿಸುವ ಕುರಿತು ಕಾಂಗ್ರೆಸ್ ಸೌಮ್ಯವಾದಿಗಳು ತಮ್ಮ ಪ್ರತ್ಯೇಕ ಸಭೆಯಲ್ಲಿ ಅಸ್ಪೃಶ್ಯರ ಪರವಾಗಿ ನ್ಯಾಯಕ್ಕಿಂತ ದಯೆ ತೋರಿದ್ದಾರೆ. ಹಿಂದುಳಿದ ಕೋಮುಗಳಿಗಾಗಿ ಬಹುಸದಸ್ಯ ಮತಕ್ಷೇತ್ರಗಳಲ್ಲಿ ಸ್ಥಾನಗಳನ್ನು ಮೀಸಲಿರಿಸಬೇಕೆಂದು ತಿಳಿಸಿದ್ದಾರೆ. ಆದರೆ ಅಸ್ಪೃಶ್ಯರಿಗೆ ಎಷ್ಟು ಸ್ಥಾನಗಳು ಬೇಕೆಂಬುದು ತಿಳಿಸಿಲ್ಲ. ಕೆಲವು ಸಹಾನುಭೂತಿ ಉಳ್ಳವರು ಸಾಮಾನ್ಯವಾಗಿ ವಿಧಾನಸಭೆಯಲ್ಲಿ ಒಬ್ಬರು ಅಥವಾ ಇಬ್ಬರು ಅಸ್ಪೃಶ್ಯ ಪ್ರತಿನಿಧಿಗಳಿದ್ದರೆ ಸಾಕು ಎನ್ನುವ ಅಭಿಪ್ರಾಯ ಹೊಂದಿದ್ದಾರೆ. ಇವರ ಸಹಾನುಭೂತಿಗೆ ಬಾಬಾಸಾಹೇಬರು ಕೃತಜ್ಞತೆ ಸಲ್ಲಿಸಿ ಅವರ ವಿಚಾರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ವಿಧಾನಸಭೆಯಲ್ಲಿ ಒಬ್ಬರು ಅಥವಾ ಇಬ್ಬರು ಅಸ್ಪೃಶ್ಯ ಪ್ರತಿನಿಧಿಗಳು ಇದ್ದರೂ ಸಹ ಇಲ್ಲದಂತೆ, ವಿಧಾನಸಭೆಯ ಒಂದು ಲಕ್ಷಣವೇನೆಂದರೆ ಅದು ಸಮಾಜದ ಭವಿಷ್ಯವನ್ನು ನಿರ್ಮಿಸುವ ಅಥವಾ ಹಾಳುಮಾಡುವ ಒಂದು ಸಭೆ.[17] ಒಬ್ಬರು ಅಥವಾ ಇಬ್ಬರು ಅಸ್ಪೃಶ್ಯ ಪ್ರತಿನಿಧಿಗಳು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅವಶ್ಯ ಕಾನೂನುಗಳನ್ನು ಹೇಗೆ ಮಾಡಿಕೊಳ್ಳಲು ಸಾಧ್ಯ ಅಥವಾ ತಮ್ಮ ಸ್ಥಿತಿಯನ್ನು ಅಭದ್ರಗೊಳಿಸುವ ಕಾನೂನುಗಳನ್ನು ಹೇಗೆ ತಡೆಯಬಲ್ಲರು? ಒಂದು ವೇಳೆ ಸವರ್ಣೀಯರಿಗೆ ಕೊಡಲಾದ ರಾಜಕೀಯ ಅಧಿಕಾರದಿಂದ ತುಳಿತಕ್ಕೆ ಒಳಗಾದವರು ಹೆಚ್ಚಿನ ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಜಾತಿ ಹಿಂದುಗಳಿಗೆ ಕೊಡಲಾದ ಈ ರಾಜಕೀಯ ಅಧಿಕಾರವನ್ನು ಅಸ್ಪೃಶ್ಯರ ವಿರುದ್ಧ ಬಳಸುತ್ತಾರೆ ಎಂಬುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ. ಯಾವುದೇ ವಿಧಾನಸಭೆಯು ತನಗೆ ಬೇಕಾದ್ದನ್ನು ಮಾಡುವ ಸೌರ್ವಭೌಮ ಅಧಿಕಾರವನ್ನು ಹೊಂದಿದೆ. ಅದೇ ಇಂಗ್ಲೆಂಡಿನ ಸಂಸತ್ತಿಗೆ ಈ ಅಧಿಕಾರವಿದ್ದರೂ ಅದು ತಾನು ನಡೆಸಿಕೊಂಡು ಬಂದಿರುವ ಸಂಪ್ರದಾಯಕ್ಕೆ ವಿರುದ್ಧವಾಗಿ ಕಾನೂನು ಮಾಡುವುದಿಲ್ಲ. ಹಾಗೆಯೇ ಒಬ್ಬ ಮುಸ್ಲಿಂ ಸುಲ್ತಾನನಿಗೆ ಮುಸ್ಲಿಂಧರ್ಮವನ್ನು ಬದಲಾಯಿಸುವ ಅಧಿಕಾರವಿದ್ದರೂ ಅದನ್ನು ಆತ ಬದಲಾಯಿಸುವುದಿಲ್ಲ. ಅದೇ ರೀತಿ ಪೋಪನಿಗೆ ಈ ಅಧಿಕಾರವಿದ್ದರೂ ಕ್ರೈಸ್ತ ಧರ್ಮವನ್ನು ಕಿತ್ತೊಗೆಯುವುದಿಲ್ಲ. ಹಾಗೆಯೇ ಸವರ್ಣೀಯ

[16] ಅದೇ, 365.

[17] ಅದೇ, 366.

ಹಿಂದುಗಳಿಂದ ಕೂಡಿದ ಶಾಸನಸಭೆಯಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸುವ ಅಂತರ್ಜಾತಿ ವಿವಾಹಗಳನ್ನು ಮನ್ನಿಸುವುದಿಲ್ಲ.[18]

ಸಾರ್ವಜನಿಕ ರಸ್ತೆ, ದೇವಾಲಯ, ಶಾಲೆ ಬಳಸುವ ಅಸ್ಪೃಶ್ಯರ ವಿರುದ್ಧ ಇರುವ ನಿರ್ಬಂಧಗಳನ್ನು ರದ್ದುಪಡಿಸುವಂತಹ ಕಾನೂನುಗಳನ್ನು ಮಾಡುವುದಿಲ್ಲ. ಒಟ್ಟಾರೆಯಾಗಿ ಅಸ್ಪೃಶ್ಯರನ್ನು ಶುದ್ಧಿಗೊಳಿಸುವ ಕಾನೂನುಗಳನ್ನು ಮಾಡುವುದಿಲ್ಲ. ಆದ್ದರಿಂದ ತುಳಿತಕ್ಕೆ ಒಳಗಾದವರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವಷ್ಟು ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ರಾಜಕೀಯ ಪ್ರಾತಿನಿಧ್ಯತೆ ದೊರೆಯಬೇಕು. ವಿಧಾನಸಭೆಯಲ್ಲಿ ಒಬ್ಬರು ಅಥವಾ ಇಬ್ಬರಿಗೆ ಅವಕಾಶ ಕೊಡುವುದು ದಯಾಪರತೆಯಾಗಿದೆಯೇ ಹೊರತು ನ್ಯಾಯಯುತವಾಗಿಲ್ಲ ಎಂದು ಹೇಳುವ ಮೂಲಕ ಪ್ರಾತಿನಿಧ್ಯದ ಪ್ರಮಾಣವನ್ನು ಅವಶ್ಯಕತೆ ನಿರ್ಧರಿಸಬೇಕೇ ಹೊರತು ಸಂಖ್ಯೆಗಳಲ್ಲ ಎಂಬ ಲಾರ್ಡ್ ಮಾರ್ಲೆಯವರ ವ್ಯಾಖ್ಯಾನ ನೀಡಿ ಸಮರ್ಥಿಸಿಕೊಂಡರು.[19]

ಮತದಾನ ಹಕ್ಕಿನ ಮಹತ್ವ ತಿಳಿಸುತ್ತಾ, ರಾಜಕೀಯ ಹಕ್ಕಿನ ನಿಜವಾದ ಸಾರಾಂಶ ತಾಂತ್ರಿಕವಾಗಿ ಮತದಾನದ ಹಕ್ಕು ಎಂದಾಗಿದ್ದರೂ ಅದು ನೈಜವಾಗಿ ಕಾನೂನುಗಳ ಪರವಾಗಿ ಅಥವಾ ವಿರುದ್ಧವಾಗಿ ಮತದಾನ ಮಾಡುವುದರಲ್ಲಿ ಅಡಗಿದೆ. ಮತದಾನವೆಂಬುದು ಕೇವಲ ಅನೇಕ ಹೆಸರುಗಳುಳ್ಳ ಓಟಿನ ಚೀಟಿಯಲ್ಲಿ ಮುದ್ರೆಹೊತ್ತಿ ಮತಪೆಟ್ಟಿಗೆಯಲ್ಲಿ ಹಾಕುವ ಒಂದು ಪ್ರಕ್ರಿಯೆ ಆಗಿರದೇ ಮತದಾನವೆಂಬುದು ಸಾಂಘಿಕ ಜೀವನವನ್ನು ಬಲಪಡಿಸುವ ಕರಾರನ್ನು ನಿಯಂತ್ರಣಗೊಳಿಸುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುವ ಒಂದು ಪ್ರಕ್ರಿಯೆಯಾಗಿದೆ.[20] ಸದ್ಯದಲ್ಲಿರುವ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಸಾಂಘಿಕ ಜೀವನದ ಕರಾರುಗಳು ಅಸ್ಪೃಶ್ಯರಿಗೆ ಅಪಮಾನಕರವಾದರೆ, ಬಹಿಷ್ಕೃತರಿಗೆ ಹಾನಿಕಾರಕವಾಗಿವೆ. ಒಂದು ಜನಾಂಗದ ಸಾಮರ್ಥ್ಯ ಪರಿಣಾಮಕಾರಿಯಾಗಬೇಕಾದರೆ ಅವರಿಗೆ ಸ್ವಸಾಮರ್ಥ್ಯ ಬಳಕೆಗಾಗಿ ಹಾಗೂ ಸಾಮಾಜಿಕ ಕರಾರುಗಳನ್ನು ರೂಪಿಸುವ ಅಧಿಕಾರವಿರಬೇಕು. ಆದ್ದರಿಂದ ಉಚ್ಚನಲ್ಲದ ಪ್ರತಿಯೊಬ್ಬ ವ್ಯಕ್ತಿಗೂ ಮತದಾನದ ಹಕ್ಕನ್ನು ನೀಡಬೇಕೆಂದು ಒತ್ತಾಯಿಸಿದರು.

---

[18] ಅದೇ, 368.

[19] ಅದೇ, 368.

[20] ಅದೇ, 367.

ಅಸ್ಪೃಶ್ಯರ ಪ್ರಾತಿನಿಧ್ಯದ ಬಗ್ಗೆ ನಿಮ್ನವರ್ಗ ಮಂಡಳಿಯು(Depressed class mission) ಇತ್ತೀಚೆಗೆ ಒಂದು ಯೋಜನೆ ರೂಪಿಸಿದೆ. ಇದನ್ನು ವಿಧಾನಸಭೆಯ ಸದಸ್ಯರ ಅಭಿಮತದಿಂದ ಆಯ್ಕೆ ಮಾಡುವ ಪದ್ಧತಿ (Co-Opinion) ಎಂದು ಕರೆಯಲಾಗಿದೆ. ಇದು ಜಾತಿಹಿಂದೂಗಳ ಕುತಂತ್ರವಾಗಿದ್ದು, ಅಸ್ಪೃಶ್ಯರನ್ನು ನಿರಂತರವಾಗಿ ಅಸ್ಪೃಶ್ಯರನ್ನಾಗಿಸುವ ಒಂದು ಹುನ್ನಾರವಾಗಿದೆ. ಅಸ್ಪೃಶ್ಯರು ಎಷ್ಟೇ ಅಜ್ಞಾನಿಗಳಾಗಿದ್ದರೂ ಸಹ ಅವರು ಮೋಸ ಹೋಗಲಾರರು. ಹಾಗೆಯೇ ಇಂತಹ ತಂತ್ರಗಳಿಂದ ಚುನಾವಣಾ ಸಮಿತಿಯ ಸದಸ್ಯರನ್ನು ಮೋಸ ಮಾಡಲು ಸಾಧ್ಯವಿಲ್ಲ ಎಂಬುದನ್ನು ತಿಳಿಸಿ, ಸರ್ಕಾರದಿಂದ ನಾಮಕರಣ ಮಾಡುವ ಪದ್ಧತಿಯನ್ನು ಒಪ್ಪಿಕೊಳ್ಳಬಹುದಾದರೂ ಸಹ ಅಸ್ಪೃಶ್ಯರ ಹಿತದೃಷ್ಟಿಯಿಂದ ವಿರೋಧಿಸಬೇಕಾಗಿದೆ. ಏಕೆಂದರೆ, ಈ ವ್ಯವಸ್ಥೆ ಪ್ರತಿನಿಧಿಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದು ಅಲ್ಲದೇ ಅಸ್ಪೃಶ್ಯರಿಗೆ ಅವಶ್ಯಕವೆನಿಸಿದ ರಾಜಕೀಯ ಶಿಕ್ಷಣವನ್ನು ನೀಡುವಲ್ಲಿ ವಿಫಲವಾಗುತ್ತದೆ.[21]

ಕೋಮುವಾರು ಚುನಾಯಿಕಗಳನ್ನು ಕುರಿತು, ಮತದಾನ ವ್ಯವಸ್ಥೆ ಇಲ್ಲದೇ ಹೋದರೆ ವಿಧಾನಸಭೆಯಲ್ಲಿ ಎಲ್ಲರೂ ಎಂದೂ ಒಟ್ಟಾಗಿ ಕೂಡುವುದು ಸಾಧ್ಯವಿಲ್ಲ. ಆದ್ದರಿಂದ ವಿಧಾನಸಭೆಯು ಸಮಾನತೆಯ ವಿರೋಧಿಗಳಾದ ಹಿಂದುಜಾತಿಗಳು ಮಾತ್ರ ಪ್ರತಿನಿಧಿಸುವ ಸಾಧನಗಳಾಗಿ ಪರಿಣಮಿಸುತ್ತದೆ. ಇದನ್ನು ಅರಿತು ಎಲ್ಲ ಕೋಮಿನವರಿಗೂ ವಿಧಾನಸಭೆಯಲ್ಲಿ ಸ್ಥಾನ ಕಲ್ಪಿಸುವ ಅವಕಾಶ ನೀಡಿ ಪ್ರಜಾಪ್ರಭುತ್ವದಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ಅಸ್ಪೃಶ್ಯರಿಗೆ ಅನುವು ಮಾಡಿಕೊಡಬೇಕೆಂದು ತಿಳಿಸಿದರು. ಅಸ್ಪೃಶ್ಯರ ರಾಜಕೀಯ ಪ್ರಾತಿನಿಧ್ಯಕ್ಕೆ ಎರಡು ಮಾರ್ಗಗಳನ್ನು ಸೂಚಿಸಿದರು.

1. ಅಸ್ಪೃಶ್ಯರಿಗೆ ಬಹುಸಂಖ್ಯಾ ಸದಸ್ಯ ಕ್ಷೇತ್ರಗಳಲ್ಲಿ ಸ್ಥಾನಗಳನ್ನು ಮೀಸಲಿರಸಬೇಕು. ಇಲ್ಲವೇ
2. ಕೋಮುವಾರು ಚುನಾಯಿಕ ಸಮುದಾಯಗಳನ್ನು ರಚಿಸಬೇಕೆಂದು ಆಗ್ರಹಪಡಿಸಿದರು.[22]

ಕೋಮುವಾರು ಪ್ರಾತಿನಿಧ್ಯದ ಮಹತ್ವವನ್ನು ವಿವರಿಸುತ್ತಾ, ದಮನಿತರು ಈ ವಿಷಯ ಕುರಿತಾಗಿ ಎಷ್ಟು ಉದ್ವೇಗದಿಂದ ಮಾತನಾಡುತ್ತಾರೆ ಎಂದರೆ ಮದ್ರಾಸ್ ಪ್ರಾಂತ್ಯದ ಅಸ್ಪೃಶ್ಯರು

---

[21] ಅದೇ, 369.

[22] ಅದೇ, 371.

ಮಾಂಟೆಗೋ ಅವರಿಗೆ ಹೇಳಿದ ಮಾತು ನಿಮ್ನವರ್ಗದವರಿಗೆ ಕೋಮು ಪ್ರಾತಿನಿಧ್ಯವಿಲ್ಲದೆ ಭಾರತಕ್ಕೆ ಸ್ವರಾಜ್ಯವನ್ನು ಕೊಟ್ಟರೆ ರಕ್ತಪಾತ ವಾಗುವುದೆಂದು ಎಚ್ಚರಿಸಿದರು[23] ಎಂಬುದನ್ನು ನಿದರ್ಶನವಾಗಿ ನೀಡುವ ಮೂಲಕ ಅಂಬೇಡ್ಕರ್ ಅವರು ಅಸ್ಪೃಶ್ಯರ ಮನದಾಳದ ನೋವನ್ನು ಈ ಉದ್ವೇಗದ ಮಾತುಗಳಿಂದ ಗುರುತಿಸಬಹುದು. ಮುಂದುವರಿದು ಅಸ್ಪೃಶ್ಯರನ್ನು ಸವರ್ಣೀಯರ ದಯಾಪರತೆಗೆ ಬಿಡುವ ಬದಲು ರಾಜಕೀಯ ಪ್ರಾತಿನಿಧ್ಯತೆಯನ್ನು ಕೊಡಬೇಕೆಂದು ಒತ್ತಾಯಿಸಿದರು.

ಅಂಬೇಡ್ಕರ್ ಅವರು ನಿಮ್ನವರ್ಗದ ರಾಜಕೀಯ ಪ್ರಾತಿನಿಧಿತ್ವದ ಧ್ವನಿಯನ್ನು ತನ್ನ ಸಮುದಾಯಕ್ಕೆ ನೀಡಬೇಕೆಂದು ಒತ್ತಾಯಿಸಿದರ ಫಲವಾಗಿ 1919ರ ಮಾಂಟೆಗೋ ಚೇಲ್ಮ್ಸ್ ಫರ್ಡ್ ಕಾಯ್ದೆಯು ನಿಮ್ನವರ್ಗದ ಅಸ್ತಿತ್ವವನ್ನು ಮಾನ್ಯ ಮಾಡುತ್ತದೆ. ಇದು ಅಸ್ಪೃಶ್ಯರ ರಾಜಕೀಯ ಪ್ರಾತಿನಿಧ್ಯತೆಗಾಗಿ ಪ್ರಥಮ ಬಾರಿಗೆ ಸಂವಿಧಾನ ಚೌಕಟ್ಟನ್ನು ನಿರ್ಮಾಣ ಮಾಡಿಕೊಟ್ಟಿತು. ಅಲ್ಲದೇ ನಿಮ್ನವರ್ಗದ ಪ್ರತಿನಿಧಿಗಳನ್ನು ನಾಮಕರಣ ಮಾಡುವ ಅವಕಾಶವನ್ನು ಸೃಷ್ಟಿಸಿತು. ಆದರೆ ಬಾಬಾಸಾಹೇಬರು ಈ ನಾಮಕರಣದ ಪದ್ಧತಿಯನ್ನು ನಿರಾಕರಿಸಿದರು. ಕೇಂದ್ರೀಯ ಶಾಸನಸಭೆಗೆ ಗೌರ್ನರ್ ಜನರಲ್ ಅವರು ನಾಮಕರಣ ಮಾಡಿದ 14 ಜನ ಅಧಿಕಾರೇತರ ಸದಸ್ಯರಲ್ಲಿ ಪರಿಶಿಷ್ಟ ಜಾತಿಯ ಒಬ್ಬ ಸದಸ್ಯರಿದ್ದರು. ಪ್ರಾಂತೀಯ ಶಾಸನಸಭೆಗಳಲ್ಲಿ ಪರಿಶಿಷ್ಟ ಜಾತಿಯ ನಾಲ್ಕು ಜನ ಪ್ರತಿನಿಧಿಗಳಿದ್ದರು ಎಂಬುದನ್ನು ಕಂಡುಕೊಳ್ಳಲಾಗಿದೆ.[24]

## 2.4 ಸೈಮನ್ ಆಯೋಗ

1919ರ ಮಾಂಟೆಗೋ ಚೇಲ್ಮ್ಸ್ ಫರ್ಡ್ ಕಾಯ್ದೆಯು ಭಾರತದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಪರಿಶೀಲಿಸಲು ಮತ್ತು ಸ್ವಯಂ ಆಡಳಿತ ನೀಡಲು ಕಾಲ ಪರಿಪಕ್ವವಾಗಿದೆಯೇ ಎಂಬುದನ್ನು ತಿಳಿಯುವ ಸಲುವಾಗಿ[25] ಬ್ರಿಟಿಷ್ ಸರ್ಕಾರ ನವೆಂಬರ್ 8, 1927ರಂದು ಸರ್ ಜಾನ್ ಸೈಮನ್ ನೇತೃತ್ವದ 7 ಜನರ ಒಂದು ಆಯೋಗವನ್ನು ರಚನೆ ಮಾಡಿತು.[26] ಈ ಆಯೋಗ ಭಾರತದಲ್ಲಿ ತನ್ನ ಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ 18

---

[23] ಅದೇ, 373.

[24] ಪ್ರತಿಭಾವಂತ ಸಂಸದೀಯ ಪಟುಗಳ ಬದುಕು–ಬರಹ ಮಾಲಿಕೆ, ಡಾ. ಬಿ.ಆರ್. ಅಂಬೇಡ್ಕರ್, ಲೋಕಸಭಾ ಸಚಿವಾಲಯ, ಪುಟ–32.

[25] Keer Dhananjay, Dr. Ambedkar Life and Mission, Popular Prakashan Bomby, 2003. Pp.-114.

[26] Chandra Bipan, Indian Struggle for Indipendence. Penguin, New Delhi,, 1989. Pp. -114.

ನಿಮ್ನವರ್ಗಗಳ ಸಂಘಟನೆಗಳು ಸಾಕ್ಷ್ಯ ನೀಡಿದವು. ಆ ಪೈಕಿ 16 ಸಂಘಟನೆಗಳು ಪ್ರತ್ಯೇಕ ಚುನಾಯಿಕಗಳನ್ನು ನಿಮ್ನವರ್ಗಗಳಿಗೆ ಕೊಡಬೇಕೆಂದು ಸಮಿತಿಯನ್ನು ಆಗ್ರಹಿಸಿದವು.[27] ಬಹಿಷ್ಕೃತ ಹಿತಕಾರಿಣಿ ಸಭಾದ ಪರವಾಗಿ ಡಾ. ಅಂಬೇಡ್ಕರ್ ಅವರು ಮೇ 29, 1929ರಂದು ಬಾಂಬೆಯಲ್ಲಿ ಸೈಮನ್ ಆಯೋಗದ ಮುಂದೆ ತಮ್ಮ ಸಮುದಾಯವನ್ನು ಅಲ್ಪಸಂಖ್ಯಾತರ ಸಮುದಾಯವೆಂದು ಪರಿಗಣಿಸಬೇಕು ಹಾಗೂ ನಿಮ್ನವರ್ಗದವರಿಗೆ ಸರ್ಕಾರಿ ಸೇವೆಯಲ್ಲಿ ಪ್ರಾತಿನಿಧಿತ್ವ ನೀಡಬೇಕೆಂಬ 39 ಪುಟಗಳ ಮನವಿಪತ್ರ ಸಲ್ಲಿಸಿ ವಿವರಣೆಯನ್ನು ಕೆಳಕಂಡಂತೆ ನೀಡಿದರು.[28]

ಮತದಾನದ ಹಕ್ಕಿಗೆ ಸಂಬಂಧಿಸಿದಂತೆ ಸಾಮಾನ್ಯ ಜನರಿಗೆ ಮತದಾನದ ಹಕ್ಕನ್ನು ವಿಸ್ತರಿಸುವುದಕ್ಕೆ ಮಾನದಂಡವಾಗಿರುವ ಸಾಕ್ಷರತೆಯು ನಿಸ್ಸಂದೇಹವಾಗಿ ತಪ್ಪು ತಿಳುವಳಿಕೆಯಿಂದ ಕೂಡಿದೆ. ಬಹುಜನರ ಕಲ್ಪನೆಯಲ್ಲಿ ಮತದಾನವೆಂದರೆ ಮತಪತ್ರದಲ್ಲಿ ಗುರುತು ಹಾಕುವುದಕ್ಕೆ ಸಂಬಂಧಿಸಿದ್ದು ಮಾತ್ರ ಎಂದು ತಿಳಿದುಕೊಂಡಿದ್ದಾರೆ. ಆದರೆ ವಾಸ್ತವವಾಗಿ ಮತದಾನವೆಂಬುದು ಯಾವ ಸಮಿತಿಯೊಳಗೆ ಸಂಘಟಿತ ಬದುಕು ಉಳಿಯಬೇಕೋ ಮತ್ತು ಆ ಸಮಿತಿಗಳನ್ನು ನಿಯಂತ್ರಿಸುವ ಕಾರ್ಯದಲ್ಲಿ ನೇರವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುವುದು[29] ಎಂಬ ಪರಿಕಲ್ಪನೆಯನ್ನು ಒಪ್ಪಿಕೊಂಡು ಸಮಿತಿಯು ಹುಚ್ಚನಲ್ಲದ ಪ್ರತಿಯೊಬ್ಬ ವ್ಯಕ್ತಿಗೂ ಮತದಾನದ ಹಕ್ಕನ್ನು ನೀಡುವುದು ಅನಿವಾರ್ಯ ಎಂದರು. ಏಕೆಂದರೆ ಸಂಘಟಿತ ಜೀವನದಲ್ಲಿ ಎಲ್ಲಾ ವಯಸ್ಕರು ಪಾಲ್ಗೊಳ್ಳುವುದರಿಂದ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಮತದಾನ ಪರಿಣಾಮ ಬೀರುತ್ತದೆ. ವ್ಯಕ್ತಿ ಬಡವನಾದಷ್ಟು ಅವನಿಗೆ ಮತದಾನದ ಅವಶ್ಯಕತೆ ಹೆಚ್ಚು. ಈ ಸಂಘಟಿತ ಜೀವನದಲ್ಲಿ ಕೆಲಸಗಾರರಿಗೆ ವಿರುದ್ಧವಾದ ರೀತಿಯಲ್ಲಿ ನಿಯಮಗಳು ನಿರ್ಧರಿಸಲ್ಪಟ್ಟಿರುತ್ತವೆ. ಆದ್ದರಿಂದ ಕೆಲಸಗಾರರ ಯೋಗಕ್ಷೇಮಕ್ಕೆ ಮಾಲೀಕರಿಂದ ಉಂಟಾಗುವ ಕೇಡಕಿನಿಂದ ರಕ್ಷಣೆ ನೀಡಬೇಕಾದರೆ ಸಂಘಟಿತ ಜೀವನದ ನೀತಿ–ನಿಯಮಗಳನ್ನು ರೂಪಿಸುವ ಅಧಿಕಾರ ಕೆಲಸಗಾರರಿಗೂ ಇರುವುದು ಅಗತ್ಯ. ಆದ್ದರಿಂದ ಮತದಾನದ ಹಕ್ಕನ್ನು ಸಂಪತ್ತಿನಿಂದ ಬೇರ್ಪಡಿಸಿ ಎಲ್ಲ ವಯಸ್ಕರರಿಗೂ ವಿಸ್ತರಿಸುವ ಮೂಲಕ ಸಾಂಘಿಕ ಜೀವನಕ್ಕೆ ನಿಜವಾದ ಅರ್ಥ ಕಲ್ಪಿಸಲು ಸ್ತ್ರೀ

---

[27] Keer Dhananjay 2003 : Dr.Ambedker Life and Mission, Pp.-262.

[28] Chanchreek K.L. (ed), Dr.B.R. Ambedkar A Rebal Dalit Lesder- Vol-1, 2006. Pp.-31.

[29] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ–2, ಭಾಗ–1, ಕರ್ನಾಟಕ ಸರ್ಕಾರ, 1993. ಪು.ಸಂ.–596.

ಪುರುಷರೆಂಬ ಭೇದಭಾವವಿಲ್ಲದೆ 21 ವರ್ಷ ಮೇಲ್ಪಟ್ಟ ಎಲ್ಲಾ ವಯಸ್ಕರರಿಗೂ ಮತದಾನದ ಹಕ್ಕನ್ನು ವಿಸ್ತರಿಸಬೇಕೆಂದು ಶಿಪಾರಸ್ಸು ಮಾಡಿದರು.[30]

ವಯಸ್ಕ ಮತದಾನ ಪ್ರಾರಂಭಿಸುವುದಕ್ಕೆ ರಾಜಕೀಯ ಔಚಿತ್ಯ ಮತ್ತು ಸಾಮಾಜಿಕ ನ್ಯಾಯಗಳೆರಡು ಪರವಾಗಿವೆ. ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಹುಸಂಖ್ಯಾತರಿಗೆ ವಯಸ್ಕ ಮತದಾನದ ಮೂಲಕ ಮತದಾನದ ಹಕ್ಕನ್ನು ಕಲ್ಪಿಸಿದರೆ ಅವರು ಅಲ್ಪಸಂಖ್ಯಾತ ಜಾತಿಹಿಂದುಗಳ ಮೇಲೆ ಪರಿಣಾಮ ಬೀರುತ್ತಾರೆ ಎನ್ನುವ ಒಂದೇ ಉದ್ದೇಶದಿಂದ ಜಾತಿಹಿಂದುಗಳು ವಯಸ್ಕ ಮತದಾನ ಪ್ರಾರಂಭಿಸುವುದಕ್ಕೆ ವಿರುದ್ಧವಾಗಿದ್ದಾರೆ. ಅಲ್ಲದೆ ಕೋಮುವಾರು ಪ್ರಾತಿನಿಧ್ಯಕ್ಕೂ ಸಹ ತಮ್ಮ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಸಾಮಾಜಿಕ ನ್ಯಾಯದಿಂದ ಕೂಡಿದ ವಯಸ್ಕ ಮತದಾನ ಪದ್ಧತಿಯು ಗಣನೀಯ ಪ್ರಮಾಣದಲ್ಲಿ ಸಾರ್ವಜನಿಕರ ಬೆಂಬಲವನ್ನು ಪಡೆಯುತ್ತದೆ ಎಂದು ತಿಳಿಸಿದರು. ಬ್ರಾಹ್ಮಣೇತರರು ಮತ್ತು ಅಸ್ಪೃಶ್ಯರನ್ನು ಬಿಟ್ಟು ಉಳಿದಂತೆ ಭಾರತದ ಎಲ್ಲಾ ರಾಜಕೀಯ ಪಕ್ಷಗಳ ಅಭಿಪ್ರಾಯ ಒಳಗೊಂಡ ನೆಹರು ಸಮಿತಿಯು ಸಹಾ ವಯಸ್ಕರ ಮತದಾನ ಪದ್ಧತಿ ಪ್ರಾರಂಭಿಸುವುದರ ಪರವಾಗಿದೆ.[31] ದೊಡ್ಡ ಪ್ರಮಾಣದ ಸಾರ್ವಜನಿಕ ಅಭಿಪ್ರಾಯವನ್ನು ಹೊಂದಿರುವ ವಯಸ್ಕ ಮತದಾನ ಪದ್ಧತಿಗೆ ಸವರ್ಣೀಯ ಹಿಂದೂಗಳು ಕೊಡುವಕಾರಣವೆಂದರೆ ರಾಷ್ಟ್ರದಲ್ಲಿರುವ ಅನಕ್ಷರತೆ. ಇದನ್ನು ಅಂಬೇಡ್ಕರ್ ಅವರು ಸರಿ ಎಂದು ಒಪ್ಪುವುದಿಲ್ಲ. ಏಕೆಂದರೆ, ಜನರಿಗೆ ಶಿಕ್ಷಣವನ್ನು ನೀಡಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯ. ಅದನ್ನು ಸರ್ಕಾರ ಸರಿಯಾಗಿ ನಿರ್ವಹಿಸಿಲ್ಲ ಎಂದರು.

ಅನಕ್ಷರತೆಯ ಕಾರಣದಿಂದ ಅಸ್ಪೃಶ್ಯರಿಗೆ ಮತದಾನದ ಹಕ್ಕನ್ನು ನಿರಾಕರಿಸಿರುವುದರ ವಿರುದ್ಧ ಬಾಬಾಸಾಹೇಬರು, ಅಸ್ಪೃಶ್ಯರ ಅನಕ್ಷರತೆಗೆ ಸರ್ಕಾರವೇ ನೇರಹೊಣೆ ಎಂದು ಸ್ಪಷ್ಟಪಡಿಸಿದರು. ಮತದಾನದ ಹಕ್ಕನ್ನು ಪಡೆಯಲು ಸಾಕ್ಷರತೆಯನ್ನು ಅರ್ಹತೆಯಾಗಿ ಪರಿಗಣಿಸುವುದಾದರೆ ಯಾವುದೇ ಸ್ವಂತ ತಪ್ಪು ಇಲ್ಲದೆಯೇ ಎಂದೆಂದಿಗೂ ಶಿಕ್ಷಣ ಅವಕಾಶದಿಂದ ವಂಚಿತರಾಗಿರುವ ಬಹುಸಂಖ್ಯಾತ ಅಸ್ಪೃಶ್ಯರಿಗೆ ಮತದಾನದ ಹಕ್ಕನ್ನು ನಿರಾಕರಿಸುವುದು ಸರ್ಕಾರದ ಬಹುದೊಡ್ಡ ತಪ್ಪಾಗುತ್ತದೆ ಎಂದಿದ್ದಾರೆ.[32] ಅನಕ್ಷರತೆ ತೊಡೆದು ಹಾಕಿದ ನಂತರ ಮತದಾನದ ಹಕ್ಕನ್ನು ವಿಸ್ತರಿಸುತ್ತವೆ ಎನ್ನುವ ವಾದಕ್ಕೆ ವಿರೋಧ

---

[30] ಅದೇ, 597.

[31] ಅದೇ, 598.

[32] ಅದೇ, 601.

ವ್ಯಕ್ತಪಡಿಸಿ, ಸರ್ಕಾರ ಮುಂದಿನ ದಿನಗಳಲ್ಲಿ ಈ ಪ್ರಯತ್ನ ಮಾಡುತ್ತದೆ ಎಂಬುದಕ್ಕೆ ನಮ್ಮಲ್ಲಿ ಯಾವ ಭರವಸೆಗಳು ಉಳಿದಿಲ್ಲ ಎಂದರು. ಅಸ್ಪೃಶ್ಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣಕ್ಷೇತ್ರದ ಪ್ರಗತಿಯು ಹಣಕಾಸಿನ ಸಂಪನ್ಮೂಲಗಳನ್ನು ಅವಲಂಬಿಸಿದೆ ಎಂಬುದನ್ನು ಆಯೋಗದ ಗಮನಕ್ಕೆ ತಂದರು. ಜಾರಿಯಲ್ಲಿರುವ ಮತದಾನ ಪದ್ಧತಿಯ ಮೂಲಕ ಆಯ್ಕೆಯಾದ ಸರ್ಕಾರ ದುರ್ಬಲರ ಶಿಕ್ಷಣಕ್ಕೆ ಹಣಕಾಸನ್ನು ಒದಗಿಸುವುದಿಲ್ಲ. ಅದರ ಬದಲು ಅವರ ಮೇಲೆ ತೆರಿಗೆಯನ್ನು ವಿಧಿಸುವ ಕೆಲಸಕ್ಕೆ ಕೈ ಹಾಕುತ್ತದೆ. ಈ ಸತ್ಯವನ್ನು ಅರಿತು ಬ್ರಿಟಿಷ್ ಸರ್ಕಾರ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕೆಂದು ಸೂಚಿಸಿದರು. ಸರ್ಕಾರ ಅನಕ್ಷರತೆಯ ನೆಪ ನೀಡಿ ದಮನಿತರಿಗೆ ಮತದಾನ ನಿರಾಕರಿಸಿದರೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.[33] ಈ ಅನ್ಯಾಯದ ವಿರುದ್ಧ ಶೋಷಿತರು ಮತ್ತಷ್ಟು ಉದ್ವೇಗಗೊಳ್ಳುತ್ತಾರೆ ಎಂದು ಎಚ್ಚರಿಸಿದರು. ಅಸ್ಪೃಶ್ಯರಿಗೆ ಅಂಟಿಕೊಂಡಿರುವ ಅನಕ್ಷರತೆಯನ್ನು ತೊಡೆದು ಹಾಕುವುದಕ್ಕೆ ಹೋರಾಟ ನಡೆಸಲು ಏಕೈಕ ಮಾರ್ಗವಾದ ಮತದಾನದ ಹಕ್ಕನ್ನು ನಿರಾಕರಿಸಿದರೆ ಬಹಿಷ್ಕೃತರಲ್ಲಿ ಅನಕ್ಷರತೆ ಶಾಶ್ವತವಾಗಿ ಉಳಿಸಿದಂತಾಗುತ್ತದೆ ಎಂದರು. ಹಾಗೆ ಮತದಾನದಲ್ಲಿ ಭಾಗವಹಿಸುವ ಅವಕಾಶವನ್ನು ಮತ್ತಷ್ಟು ಮುಂದುವರಿಸಿದಂತಾಗುತ್ತದೆ. ಅನಕ್ಷರಸ್ಥ ವ್ಯಕ್ತಿ ಬುದ್ಧಿವಂತನಲ್ಲ ಎಂಬ ನಂಬಿಕೆಯು ಸಂಪೂರ್ಣವಾಗಿ ತಪ್ಪುಕಲ್ಪನೆಯಿಂದ ಕೂಡಿದೆ. ಏಕೆಂದರೆ, ಭಾರತ ಸೇರಿದಂತೆ ಪ್ರಪಂಚದಾದ್ಯಂತ ಇರುವ ಅನಕ್ಷರತೆ ಜನರು ತಮ್ಮ ಸ್ವಂತ ವ್ಯವಹಾರ ಅರ್ಥ ಮಾಡಿಕೊಂಡು ಯಶಸ್ವಿಯಾಗಿ ಜೀವನ ನಡೆಸುತ್ತಿರುವುದಕ್ಕೆ ಹಿಂದಿನ ಅನುಭವಗಳೇ ಸಾಕ್ಷಿ. ಪ್ರತಿಯೊಬ್ಬ ಮನುಷ್ಯನಿಗೂ ಒಂದು ನಿರ್ದಿಷ್ಟ ವಯಸ್ಸಿನ ನಂತರ ತನ್ನ ಸ್ವಂತ ವ್ಯವಹಾರವನ್ನು ನಿರ್ವಹಿಸಿಕೊಂಡು ಹೋಗುವ ಬುದ್ಧಿವಂತಿಕೆ ಆತನಲ್ಲಿ ಬರುತ್ತದೆ ಎಂದು ಸಮಿತಿಯ ಗಮನಕ್ಕೆ ತಂದು ಹೆಸರಾಂತ ರಾಜ್ಯಶಾಸ್ತ್ರ ಚಿಂತಕ ಲಾರ್ಡ್ ಬ್ರೈಸ್ ಅವರ ಮಾತುಗಳನ್ನು ಅಡಿಟಿಪ್ಪಣಿಯಾಗಿ ನೀಡಿದರು. ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳ ಓದುವ–ಬರೆಯುವ ಸಾಮರ್ಥ್ಯ ಹಾಗೂ ವ್ಯವಹಾರಜ್ಞಾನ ಕುರಿತು ಕಾರ್ಯತಃ ಪರೀಕ್ಷೆ ಮಾಡಬಹುದಾದ ಅಂಶವಾಗಿರುವುದರಿಂದ ಇದೇ ತಕ್ಕ ಪರೀಕ್ಷೆ ಎಂದು ನಾವು ಭಾವಿಸಿದ್ದೇವೆ. ಆದರೆ ಇದು ನಿಜವೆ? 60 ವರ್ಷಗಳ ಹಿಂದಿನ ಗ್ರಾಮಸ್ಥರು ಓದಲು–ಬರೆಯಲು ತಿಳಿದಿರಲಿಲ್ಲ. ಆದರೂ ವ್ಯವಹಾರನಿಪುಣರಾಗಿದ್ದರು. ಅಪಾರ ತಿಳುವಳಿಕೆ ಮತ್ತು ದೃಢ ತೀರ್ಮಾನ ಮಾಡುವ ಶಕ್ತಿಯಿಂದಾಗಿ ಈಗಿನ ವಾರ್ತಾಪತ್ರಿಕೆ ಓದುವ ಹಾಗೂ ಸಿನಿಮಾದಲ್ಲಿ ಮಗ್ನರಾಗಿರುವ ಅವರ ಮೊಮ್ಮಕ್ಕಳಿಗಿಂತ ಮತದಾನ ಮಾಡುವ ವಿಚಾರದಲ್ಲಿ

[33] ಅದೇ, 602.

ಹೆಚ್ಚಿನ ಅರ್ಹತೆ ಹೊಂದಿದ್ದಾರೆ. ಅಥೆನ್ಸ್ ಹಾಗೂ ಗ್ರೀಸ್ ಮತದಾರರ ಬಗ್ಗೆ ವಿವರಣೆಯನ್ನು ಪ್ರಸ್ತಾಪಿಸಿದರು.[34] ಇಂಗ್ಲೆಂಡಿನ ಅನಕ್ಷರಸ್ಥ ಮತದಾರರು ಮತದಾನದ ಗುಣಲಕ್ಷಣಗಳನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವ ಬಗ್ಗೆ 1924 ಆಗಸ್ಟ್ 21ರ ದಿನಪತ್ರಿಕೆ ಟೈಮ್ಸ್ ಲಿಟರರಿ ಸಪ್ಲಿಮೆಂಟ್‌ನ ಒಂದು ವರದಿಯನ್ನು ಸಮಿತಿಯ ಗಮನಕ್ಕೆ ತಂದರು.[35]

ಬ್ರಿಟಿಷ್ ಪ್ರಜಾಪ್ರಭುತ್ವ ಅನಕ್ಷರಸ್ಥ ಮತದಾರರಿಂದಲೇ ಆಳಲ್ಪಡುವಂತಿದ್ದರೆ ವಯಸ್ಕ ಮತದಾನವನ್ನು ವಿರೋಧಿಸುವ ಭಾರತೀಯ(ಜಾತಿಹಿಂದುಗಳು) ದೋಷಿಗಳು, ಉಳ್ಳವರು ರಾಜಕೀಯ ಅಧಿಕಾರ ಪಡೆಯುವುದಕ್ಕೆ ಜನಸಮುದಾಯದ ಅನಕ್ಷರತೆಯನ್ನು ನೆಪ ಮಾಡಿಕೊಂಡಿದ್ದಾರೆ ಎಂಬುದನ್ನು ಆಯೋಗವು ಸೂಕ್ಷ್ಮವಾಗಿ ಗಮನಿಸಬೇಕು ಎಂದು ವಯಸ್ಕ ಮತದಾನ ಪದ್ಧತಿ ವಿರೋಧಿಸುತ್ತಿರುವ ಸಹೋದ್ಯೋಗಿ (ಜಾತಿಹಿಂದು) ಮಿತ್ರರಿಗೆ ಒಪ್ಪಿಗೆಯಾಗುವ ಇಂಗ್ಲೆಂಡಿನ ಇನ್ನೊಂದು ನಿದರ್ಶನವನ್ನು ತೆರೆದಿಡುತ್ತಾರೆ. ಇಂಗ್ಲೆಂಡಿನಲ್ಲಿ 1425ರಲ್ಲಿ 40 ಶಿಲಾಂಗ್ ಆದಾಯ ಹೊಂದಿದ್ದವರಿಗೆ ಮಾತ್ರ ಮತದಾನ ಅಧಿಕಾರವಿತ್ತು. ಆದರೆ 1832ರಲ್ಲಿ ಈ ಹಕ್ಕನ್ನು ಎಲ್ಲಾ ಪುರುಷ ವಯಸ್ಕರರಿಗೂ ವಿಸ್ತರಿಸಲಾಯಿತು.[36] ಎಂದು ಮತದಾನಕ್ಕೆ ನಡೆದ ಬೆಳವಣಿಗೆಯನ್ನು ವಿವರಿಸಿದರು. ಮುಂದುವರಿದು ಅನಕ್ಷರತೆಯ ಕಾರಣದಿಂದ ಬಹುಸಂಖ್ಯಾತ ಅಸ್ಪೃಶ್ಯರನ್ನು ಮತದಾನದಿಂದ ಹೊರಗಿಟ್ಟರೆ ಅದು ಅಲ್ಪಜನಾಧಿಪತ್ಯಕ್ಕೆ ನಾಂದಿಯಾಗುತ್ತದೆ ಎಂಬ ಸೂಚನೆ ನೀಡಿದರು. ಆದ್ದರಿಂದ ಆಯೋಗವು ಅಲ್ಪಜನಾಧಿಪತ್ಯ ತಡೆಯಲು ಪರಿಹಾರೋಪಾಯ ಎಂದರೆ ಇರುವ ಎಲ್ಲಾ ವಯಸ್ಕರರಿಗೂ ಮತದಾನದ ಹಕ್ಕನ್ನೂ ನೀಡುವುದು ಒಂದೇ ಏಕೈಕ ಪರಿಹಾರ. ಜವಾಬ್ದಾರಿಯುತ ಸರ್ಕಾರ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಲು ಕೆಳದರ್ಜೆಯ ಜನರಿಗೆ ಸರ್ಕಾರದಲ್ಲಿ ಹೆಚ್ಚಿನ ಅವಕಾಶ ನೀಡಿದಾಗ ಜವಾಬ್ದಾರಿಯುತ ಸರ್ಕಾರ ಯಶಸ್ಸನ್ನು ಕಾಣಲು ವಯಸ್ಕ ಮತದಾನ ಪದ್ಧತಿಯು ಸಹಕಾರಿಯಾಗುತ್ತದೆ ಎಂಬ ದೃಢನಿಲುವನ್ನು ಅಂಬೇಡ್ಕರ್ ವ್ಯಕ್ತಪಡಿಸಿದರು.

ಪ್ರಾತಿನಿಧ್ಯತೆ ಕುರಿತು ಭಾರತದ ಸಂದರ್ಭದಲ್ಲಿ ಮೇಲ್ವರ್ಗದವರಿಗೆ ಕೆಳಸ್ತರದಲ್ಲಿರುವವರಿಗೆ(ಅಸ್ಪೃಶ್ಯರಿಗೆ) ಆಳುವ ಹಕ್ಕು ಇರಬಾರದು. ಉನ್ನತ ವರ್ಗ ತನ್ನದೇ ಪೂರ್ವಗ್ರಹಗಳನ್ನು ಹೊಂದಿರುವುದರಿಂದ ಕೆಳವರ್ಗದವರನ್ನು ತಮ್ಮ ಜೊತೆ

[34] ಅದೇ, 603.

[35] ಅದೇ, 605.

[36] ಅದೇ, 606.

ಸೇರಿಸಿಕೊಳ್ಳದೇ, ಅವರ ಹಿತಾಸಕ್ತಿಗಳಿಗೆ ವಿರುದ್ಧವಾದ ಕಾನೂನುಗಳನ್ನು ರಚನೆ ಮಾಡುತ್ತಾರೆ.[37] ಇದರಿಂದ ಕೆಳವರ್ಗದವರಿಗೆ ಒಂದೆಡೆ ಅನ್ಯಾಯವಾದರೆ ಮತ್ತೊಂದೆಡೆ ಅವರ ಹಿತಾಸಕ್ತಿಗಳನ್ನು ಪ್ರತಿನಿಧಿಸುವವರು ಇಲ್ಲ. ಆದ್ದರಿಂದ ಸರ್ಕಾರವೇ ಅವರನ್ನು ವಂಚಿಸಿದಂತಾಗುತ್ತದೆ. ಮೇಲ್ವರ್ಗದವರು ಪ್ರತಿನಿಧಿಸುವುದರಿಂದ ಇನ್ನೊಂದು ಲೋಪವೆಂದರೆ ಸಾಮಾನ್ಯವಾಗಿ ಅವರು ಸಾರ್ವಜನಿಕ ಕೆಲಸ ಕಾರ್ಯಗಳಿಗಿಂತ ತಮ್ಮ ವೈಯಕ್ತಿಕ ವ್ಯವಹಾರಗಳ ಕಡೆ ಹೆಚ್ಚು ಲಕ್ಷ್ಯ ಹರಿಸುತ್ತಾರೆ. ಅದೇ ಕೆಳವರ್ಗದವರಿಗೆ ಪ್ರತಿನಿಧಿಸುವ ಅವಕಾಶ ನೀಡಿದರೆ ಸಾಮಾಜಿಕ ಪರಿವರ್ತನೆ ಆಶಯ ಅವರಲ್ಲಿ ಜಾಗೃತವಾಗಿರುತ್ತದೆ. ಕೆಳಸ್ತರದವರಲ್ಲಿ ತ್ಯಾಗ ಮಾಡುವ ಮನೋಭಾವ ಹೆಚ್ಚಾಗಿರುತ್ತದೆ. ಇದು ಸಮಾಜ ಬದಲಾವಣೆಗೆ ಸಹಕಾರಿಯಾಗಿ ಜನರಲ್ಲಿ ಭ್ರಾತೃತ್ವ ಭಾವನೆ ಬೆಳೆಯಲು ಸಾಧ್ಯವಾಗುತ್ತದೆ. ಪ್ರತಿನಿಧಿತ್ವದಲ್ಲಿ ಕೆಳವರ್ಗದ ಭಾಗವಹಿಸುವಿಕೆ ಇಲ್ಲದೇ ಹೋದರೆ ಸಂಸದೀಯ ಸರ್ಕಾರ ಪದ್ಧತಿ ಮತ್ತಷ್ಟು ದುರ್ಬಲವಾಗುತ್ತದೆ ಎಂದು ಚುನಾವಣಾ ಆಯೋಗಕ್ಕೆ ಮನವರಿಕೆ ಮಾಡಿಕೊಟ್ಟರು.

ಪ್ರಾತಿನಿಧಿತ್ವದಲ್ಲಿ ಅಸ್ಪೃಶ್ಯರು ಹಾಗೂ ಮಹಮ್ಮದ್ದೀಯರ ನಡುವೆ ಉಂಟಾಗಿರುವ ತಾರತಮ್ಯವನ್ನು ವಿವರಿಸುತ್ತಾ ಪ್ರಾಂತ್ಯಗಳಲ್ಲಿ ಮಹಮ್ಮದ್ದೀಯರ ಜನಸಂಖ್ಯೆಯು ಶೇ.16ರಷ್ಟಿದೆ. ವಿಧಾನಪರಿಷತ್ತಿನಲ್ಲಿ ಅವರಿಗೆ ಶೇ.31ಕ್ಕಿಂತಲೂ ಹೆಚ್ಚಿನ ಪ್ರಾತಿನಿಧ್ಯತೆ ಕೊಡಲಾಗಿದೆ. ಅದೇ ಅಸ್ಪೃಶ್ಯರು ಅತ್ಯಂತ ಮಿತವಾದ ಅಂದಾಜಿನ ಪ್ರಕಾರ ಶೇ. 08ರಷ್ಟಿದ್ದಾರೆ. ಅವರಿಗೆ ಶೇ.07ರಷ್ಟು ಮಾತ್ರ ಪ್ರಾತಿನಿಧ್ಯತೆ ನೀಡಲಾಗಿದೆ ಎಂಬ ಅಂಶವನ್ನು ಸಮಿತಿಯ ಗಮನಕ್ಕೆ ತರುವ ಮೂಲಕ ಈ ಎರಡು ಅಲ್ಪಸಂಖ್ಯಾತ ವರ್ಗಗಳಲ್ಲಿರುವ ಭಿನ್ನತೆಗಳನ್ನು ವಿವರಿಸಿದರು. ಮಹಮ್ಮದ್ದೀಯರು ನಿಸ್ಸಂದೇಹವಾಗಿ ಸಂಖ್ಯೆ, ಶ್ರೀಮಂತಿಕೆ ಹಾಗೂ ಶಿಕ್ಷಣದಲ್ಲಿ ಅಸ್ಪೃಶ್ಯರಿಗಿಂತ ಪ್ರಬಲರಾಗಿರುತ್ತಾರೆ. ಅಲ್ಲದೆ, ಅಸ್ಪೃಶ್ಯರಿಗಿರುವ ಕೆಲವು ಅಡೆತಡೆಗಳು ಅವರಿಗಿಲ್ಲ. ಶೋಷಿತರು ಸಾರ್ವಜನಿಕ ಕೆರೆ-ಕಟ್ಟೆಗಳನ್ನು ಬಳಸುವಂತಿಲ್ಲ. ಪೊಲೀಸ್, ಸೈನ್ಯಗಳಲ್ಲಿ ನೌಕರಿ ಪಡೆಯುವಂತಿಲ್ಲ. ಸಾರ್ವಜನಿಕ ನಿಧಿಯಿಂದ ನಿರ್ಮಿಸಲ್ಪಟ್ಟ ಸರ್ಕಾರಿ ಶಾಲೆಗಳಿಗೂ ಪ್ರವೇಶವಿಲ್ಲ. ವ್ಯಾಪಾರಕ್ಷೇತ್ರದಲ್ಲಿ ಅಸ್ಪೃಶ್ಯ ವ್ಯಕ್ತಿ ಸ್ಪರ್ಶದಿಂದ ಮೈಲಿಗೆ ಉಂಟಾಗುತ್ತದೆ. ಅಲ್ಲಿಯೂ ಅವರಿಗೆ ನಿರ್ಬಂಧವನ್ನು ಹೇರಲಾಗಿದೆ. ಆದರೆ ಮಹಮ್ಮದೀಯರಿಗೆ ಈ ಯಾವ ಅಡಚಣೆಗಳು ಇಲ್ಲ. ಸಾರ್ವಜನಿಕ ಜೀವನದಲ್ಲಿ ಅವರಿಗೆ ಮುಕ್ತ ಸ್ವಾತಂತ್ರ್ಯವಿದೆ. ಅಲ್ಲದೆ ಕೆಲವು ವಿಭಾಗಗಳಲ್ಲಿ ಸಮಪಾಲನ್ನು ಪಡೆದಿದ್ದಾರೆ. ತಮಗೆ

[37] ಅದೇ, 619.

ಇಷ್ಟ ಬಂದ ರೀತಿ ಜೀವನ ಸಾಗಿಸುವ, ಉಡುಪು ಧರಿಸುವ ಹಾಗೂ ಕೆಲಸ ಮಾಡುವ ಸ್ವಾತಂತ್ರ್ಯ ಅವರಿಗುಂಟು.[38] ಅದರೆ ಅಸ್ಪೃಶ್ಯ ವ್ಯಕ್ತಿಗೆ ಉತ್ತಮ ಉಡುಪು ಧರಿಸುವ ಆರ್ಥಿಕ ಶಕ್ತಿ ಇದ್ದರೂ ಅವರಿಗೆ ಅವಕಾಶವಿಲ್ಲ. ಆತ ಗುಡಸಿಲಿನಲ್ಲಿಯೇ ಜೀವಿಸಬೇಕು. ಶುಭ ಸಮಾರಂಭದ ಸಂದರ್ಭದಲ್ಲಿ ಅವರ ಶ್ರೀಮಂತಿಕೆ ಪ್ರದರ್ಶಿಸುವಂತಿಲ್ಲ. ಸಾರ್ವಜನಿಕ ರಸ್ತೆಯಲ್ಲಿ ಕುದುರೆಯ ಮೇಲೆ ಮದುಮಗನ ಮೆರವಣಿಗೆ ನಡೆಸುವಂತಿಲ್ಲ. ಈ ರೀತಿಯ ಸಾಂಪ್ರದಾಯಿಕ ಕಂದಾಚಾರಕ್ಕೆ ವಿರುದ್ಧವಾಗಿ ಯಾವುದೇ ಕೆಲಸ ಮಾಡಿದರೆ ಹಳ್ಳಿಯ ಇಡೀ ಜನಸಮುದಾಯ ಅವನ ಮೇಲೆ ತಿರುಗಿಬಿಳುವುದು ನಿಶ್ಚಿತ. ಅಸ್ಪೃಶ್ಯರು ಮಹಮ್ಮದ್ದೀಯರಿಗಿಂತ ಹೆಚ್ಚಾಗಿ ಸಂಪ್ರದಾಯವಾದಿ ಜಾತಿಹಿಂದೂಗಳ ದಬ್ಬಾಳಿಕೆಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ನಿಮ್ನವರ್ಗದ ಸಮಸ್ಯೆ ಮಹಮ್ಮದೀಯರಿಗಿಂತ ಭಿನ್ನವಾಗಿದೆ. ಅಸ್ಪೃಶ್ಯರಿಗೆ ಸಮಾಜದಲ್ಲಿನ ಕನಿಷ್ಠ ಮಾನವಹಕ್ಕುಗಳನ್ನು ನೀಡಲು ಸವರ್ಣೀಯ ಹಿಂದೂಗಳು ನಿರಾಕರಿಸುತ್ತಾ ಬಂದಿದ್ದಾರೆ. ಇದು ಅವರ ಜೀವನಕ್ಕೆ ಸವಾಲಾಗಿ ಪರಿಣಮಿಸಿದೆ. ಆದ್ದರಿಂದ ದುರ್ಬಲವರ್ಗದ ವ್ಯಕ್ತಿ ಯಾವಾಗಲೂ ಬಹುಸಂಖ್ಯಾತ ವರ್ಗದ ಶತ್ರುವಾಗುತ್ತಾನೆ. ಅಷ್ಟೇ ಅಲ್ಲದೇ ದಮನಿತರಿಂದ ಸಂಪ್ರದಾಯವಾದಿಗಳಿಗೆ ತೊಂದರೆ ಉಂಟಾದರೆ ಅವರ ಪರವಾಗಿ ಪೊಲೀಸ್ ಮತ್ತು ನ್ಯಾಯವಾದಿಗಳ ದಂಡೇ ಇರುತ್ತದೆ. ಅದೇ ಅಸ್ಪೃಶ್ಯರಿಗೆ ಜಾತಿಹಿಂದುಗಳು ತೊಂದರೆ ಮಾಡಿದರೆ ಪೊಲೀಸ್ ಅಥವಾ ನ್ಯಾಯವಾದಿಗಳು ಸಹ ಅವರ ರಕ್ಷಣೆಗೆ ಬರುವುದಿಲ್ಲ. ವ್ಯತಿರಿಕ್ತವಾಗಿ ಅವರಿಗೆ ಕೆಡಕನ್ನುಂಟು ಮಾಡಲು ಎಲ್ಲರೂ ಜೊತೆ ಸೇರುತ್ತಾರೆ.[39] ಅಸ್ಪೃಶ್ಯರು ಸವರ್ಣೀಯರ ಕಠೋರ ವರ್ತನೆಯನ್ನು ಸಹಿಸಬೇಕಾದಷ್ಟೇ ಅಲ್ಲ, ಮಹಮ್ಮದೀಯರ ಉಪಟಳವನ್ನು ಎದುರಿಸಬೇಕಾದರೆ ಅಸ್ಪೃಶ್ಯರ ಬಗ್ಗೆ ಹಿಂದುಗಳು ಹೊಂದಿರುವ ಸಾಮಾಜಿಕ ಪೂರ್ವಗ್ರಹಗಳನ್ನು ಮಹಮ್ಮದೀಯರು ಹೊಂದಿಲ್ಲವೆಂದು ಆಯೋಗವು ತಿಳಿಯಬಾರದು ಎಂಬುದನ್ನು ಗಮನಕ್ಕೆ ತಂದರು. ಜಾತಿಹಿಂದುಗಳೊಂದಿಗೆ ಮಹಮ್ಮದೀಯರು ಸೇರಿಕೊಂಡು ಅಸ್ಪೃಶ್ಯರ ಮೇಲೆ ಹಲ್ಲೆ ನಡೆಸಿದ ಪ್ರಕರಣವಾದ ಕೋಲಬಾ ಜಿಲ್ಲೆಯ ಮುಂಗಾ ಓನ್ ತಾಲೂಕಿನ ಹರ್ಕುಲ ಗ್ರಾಮದಲ್ಲಿ ನಿಮ್ನವರ್ಗದ ಮೇಲಿನ ಹಲ್ಲೆಯನ್ನು ವಿವರಿಸಿದರು.[40] ಆದ್ದರಿಂದ ಅಸ್ಪೃಶ್ಯರ ಸಮಸ್ಯೆಯ ಮಹಮ್ಮದೀಯರ ಸಮಸ್ಯೆಗಿಂತಲೂ ಹೆಚ್ಚು ಗಂಭೀರ ಎಂಬುದನ್ನು ಮನಗಂಡು ಅಲ್ಪಸಂಖ್ಯಾತರ ವಿಷಯದಲ್ಲಿ ಮಹಮ್ಮದೀಯರು ಮತ್ತು

---

[38] Keer Dhananjay, 2003. Pp.-123.

[39] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, 1993, ಸಂಪುಟ–2, ಭಾಗ–1, ಕರ್ನಾಟಕ ಸರ್ಕಾರ, ಪು.ಸಂ–637.

[40] ಅದೇ, 637.

ಅಸ್ಪೃಶ್ಯರ ಸಮಸ್ಯೆ ಭಿನ್ನವೆಂದು ಪರಿಗಣಿಸಬೇಕು. ರಾಜಕೀಯ ಅಧಿಕಾರವೆಂಬುದು ತುಳಿತಕ್ಕೆ ಒಳಗಾದವರನ್ನು ಮೇಲೆತ್ತಲು ಅಗತ್ಯವೆಂದು ಸಮಿತಿ ಅರಿತು ಅವರಿಗೆ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಪ್ರಾತಿನಿಧ್ಯವನ್ನು ನೀಡಬೇಕೆಂದು ಆಗ್ರಹಿಸಿದರು.

ಕೆಳವರ್ಗದವರ ಸಮಸ್ಯೆ ಒಂದು ಸಾಮಾಜಿಕ ಸಮಸ್ಯೆ ಅದಕ್ಕೆ ಸಾಮಾಜಿಕ ಕ್ಷೇತ್ರದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕು ಎಂಬುದು ಉನ್ನತವರ್ಗದ ಅಭಿಪ್ರಾಯ. ಆದರೆ ಸಾಮಾಜಿಕ ಸಮಸ್ಯೆಯನ್ನು ರಾಜಕೀಯ ಅಧಿಕಾರ ಬಳಸಿ ಪರಿಹರಿಸಲು ಮಾತ್ರ ಸಾಧ್ಯ ಎಂಬ ಸ್ಪಷ್ಟ ನಿಲುವನ್ನು ಆಯೋಗಕ್ಕೆ ತಿಳಿಸಿದರು.[41] ಅಂಬೇಡ್ಕರ್ ರವರ ಪ್ರಕಾರ ಮತದಾನ ಎಂದರೆ ಆತ್ಮರಕ್ಷಣೆಯ ಹಕ್ಕೇ ಹೊರತು ಬೇರೇನೂ ಅಲ್ಲ. ಮತದಾನ ಮತ್ತು ಪ್ರಾತಿನಿಧ್ಯತೆ ವಿಚಾರದಲ್ಲಿ ಸೌತ್‌ಬರೋ ಸಮಿತಿ ಮಾಡಿದ ತಪ್ಪನ್ನು ಮುಂದುವರಿಸದೆ ಆಯೋಗದ ಮುಂದೆ ಇಟ್ಟಿರುವ ಪ್ರಸ್ತಾಪ ಹೆಚ್ಚಿನದೇನೂ ಅಲ್ಲ. ಇದು ಕೇವಲ ಹಿಂದೆ ಮಾಡಿದ ತಪ್ಪನ್ನು ಸರಿಪಡಿಸುವ ಪ್ರಯತ್ನವೆಂಬುದನ್ನು ಸಮಿತಿ ಅರಿತು ಅಸ್ಪೃಶ್ಯರ ಹಿತಾಸಕ್ತಿಗಳನ್ನು ಕಾಪಾಡಲು ಮತದಾನ ಹಾಗೂ ಪ್ರಾತಿನಿಧ್ಯತೆ ಎರಡು ಅಪೇಕ್ಷಣೀಯ ಎಂದು ಅರ್ಥ ಮಾಡಿಕೊಂಡು ಅವರಿಗೆ ರಾಜಕೀಯ ನ್ಯಾಯವನ್ನು ಕಲ್ಪಿಸಬೇಕೆಂದು ಆಯೋಗವನ್ನು ಒತ್ತಾಯಿಸಿದರು.

1919ರ ಮಾಂಟೆಗೋ ಚೇಲ್ಮ್ಸ್ ಫರ್ಡ್ ಕಾಯ್ದೆಯ ಪ್ರಕಾರ ಶೇ. 3ರಷ್ಟು ಜನ ಮಾತ್ರ ಮತ ಚಲಾಯಿಸುವ ಹಕ್ಕು ಹೊಂದಿದ್ದರು. ಆದರೆ ಸೈಮನ್ ಆಯೋಗ ಡಾ. ಬಿ. ಆರ್. ಅಂಬೇಡ್ಕರ್ ಅವರ ಬೇಡಿಕೆಗಳನ್ನು ಕುರಿತು ತನ್ನ ವರದಿಯಲ್ಲಿ ಮತದಾನ ಅಧಿಕಾರವನ್ನು ಶೇ. 10ರಿಂದ 15ರಷ್ಟು ಜನರಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿತು.[42] ಇದು ಅಂಬೇಡ್ಕರ್ ಅವರ ರಾಜಕೀಯ ಹೋರಾಟಕ್ಕೆ ಸಿಕ್ಕಿದ ಪ್ರಾರಂಭಿಕ ಜಯವಾಗಿದೆ.

### 2.5. ದುಂಡುಮೇಜಿನ ಸಮ್ಮೇಳನಗಳು–1930-1932

ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲಾದ ದುಂಡುಮೇಜಿನ ಪರಿಷತ್ ಭಾರತಕ್ಕೆ ಸಂವಿಧಾನ ರಚನೆ, ಸಂವಿಧಾನ ಸ್ವರೂಪ ಮತ್ತು ಸಂವಿಧಾನ ತಿದ್ದುಪಡಿಯ ಮೂಲಕ ಮಾರ್ಪಾಡುಗಳನ್ನು ತರುವ ಉದ್ದೇಶದಿಂದ ರಚಿತವಾಯಿತು. ಬ್ರಿಟಿಷ್ ಸರ್ಕಾರ ಭಾರತದ ವಿಭಿನ್ನ ದೃಷ್ಟಿಕೋನವುಳ್ಳ ಮುಖಂಡರನ್ನು ಒಳಗೊಂಡ ದುಂಡುಮೇಜಿನ ಸಮ್ಮೇಳನವನ್ನು ಕಾರ್ಮಿಕ ಪಕ್ಷದ ಪ್ರಧಾನಿ ರಾಮ್ಸೆ ಮ್ಯಾಕ್ ಡೊನಾಲ್ಡ್

[41] ಅದೇ 638.

[42] ಸದಾಶಿವ ಕೆ. ಸಮಗ್ರ ಭಾರತದ ಇತಿಹಾಸ, ಚೇತನ ಬುಕ್‌ಹೌಸ್, ಮೈಸೂರು, 2005. ಪು.ಸಂ.–476.

ಅವರ ಅಧ್ಯಕ್ಷತೆಯಲ್ಲಿ ಲಂಡನಿನಲ್ಲಿ ಕರೆಯಲಾಯಿತು. ಒಟ್ಟು 89 ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ 16 ಪ್ರತಿನಿಧಿಗಳು ಬ್ರಿಟಿಷ್ ರಾಜಕೀಯ ಪಕ್ಷಗಳಿಂದ, 53 ಜನ ಬ್ರಿಟಿಷ್ ಭಾರತದ ಪ್ರತಿನಿಧಿಗಳು ಹಾಗೂ 20 ಜನ ಭಾರತೀಯ ರಾಜಪ್ರತಿನಿಧಿಗಳು ಭಾಗವಹಿಸಿದ್ದರು.[43] ಪ್ರಥಮ ದುಂಡುಮೇಜಿನ ಸಮ್ಮೇಳನ ನವೆಂಬರ್ 12, 1930ರಂದು ಪ್ರಾರಂಭವಾಯಿತು.[44] ನಿಮ್ನವರ್ಗದ ಪ್ರತಿನಿಧಿಗಳಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ರಾವ್‌ಬಹದ್ದೂರ್ ಶ್ರೀನಿವಾಸ್ ಭಾಗವಹಿಸಿದರು.[45]

ನಿಮ್ನವರ್ಗದ ರಾಜಕೀಯ ಅವಶ್ಯಕತೆ ಕುರಿತಂತೆ ಸರ್ವ ಸದಸ್ಯರ 5ನೇ ಸಭೆಯಲ್ಲಿ ನವೆಂಬರ್ 20, 1930ರಂದು ಅಂಬೇಡ್ಕರ್ ಅವರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ, ನನ್ನ ಮುಖ್ಯ ಉದ್ದೇಶವೆಂದರೆ, ಯಾವ ನಿಮ್ನವರ್ಗದ ಜನತೆಯನ್ನು ನಾನು ಮತ್ತು ನನ್ನ ಸಹೋದ್ಯೋಗಿ ರಾವ್‌ಬಹದ್ದೂರ್ ಶ್ರೀನಿವಾಸನ್ ಅವರು ಪ್ರತಿನಿಧಿಸುವ ಸೌಭಾಗ್ಯವನ್ನು ಪಡೆದಿರುತ್ತೇವೆಯೋ ಆ ನಿಮ್ನವರ್ಗದ ಅಭಿಪ್ರಾಯಗಳನ್ನು ಸಂವಿಧಾನ ಸುಧಾರಣೆಗೆ ಸಂಬಂಧಿಸಿದಂತೆ ಇಡುವುದು ಆಗಿರುತ್ತದೆ. ಇದು ಬ್ರಿಟಿಷ್ ಭಾರತದ ಜನಸಂಖ್ಯೆಯ 1/5 ಜನತೆಯ ಅಭಿಪ್ರಾಯವಾಗಿದೆ.[46] ಎಂದು ಹೇಳುವ ಮೂಲಕ ಸಭೆಯ ಗಮನವನ್ನು ತನ್ನೆಡೆಗೆ ಸೆಳೆದರು. ನಿಮ್ನವರ್ಗದವರು ತಮ್ಮದೇ ಆದ ಗುಂಪು ಮಾಡಿಕೊಂಡಿದ್ದಾರೆ. ಈ ಗುಂಪುಗಳು ಮುಸ್ಲಿಮರಿಗಿಂತ ಭಿನ್ನ ಮತ್ತು ಬೇರೆಯೇ ಆಗಿದೆ. ಇವರನ್ನು ಹಿಂದೂಗಳೆಂದು ಪರಿಗಣಿಸಿದಾಗ್ಯೂ, ಅವರು ಸಮಾಜದ ಯಾವುದೇ ಭಾಗವಾಗಿಲ್ಲ. ಭಾರತದ ಇತರ ಯಾವ ಸಮುದಾಯವು ಅನುಭವಿಸುತ್ತಿರುವ ಸ್ಥಾನಮಾನಗಳಿಗಿಂತ ಭಿನ್ನವಾದ ಸ್ಥಾನವನ್ನು ಈ ಸಮಾಜ ಅವರಿಗೆ ಕೊಟ್ಟಿದೆ. ಕೆಳಸ್ತರದ ಸ್ಥಾನ ಹೊಂದಿರುವಂಥ ಹಲವಾರು ಕೋಮುಗಳಿವೆ. ಆದರೆ ನಿಮ್ನವರ್ಗದವರೆಗೆ ಕೊಡಲಾಗಿರುವ ಸ್ಥಾನ ಸಂಪೂರ್ಣವಾಗಿ ಭಿನ್ನವಾಗಿದೆ. ಆದರೆ ನಿಮ್ನವರ್ಗದವರನ್ನು ಅಂತಹ ಸಂಬಂಧದಿಂದಲೂ ಸಹ ಹೊರಗಿಡುವ ಮೂಲಕ ಗುಲಾಮಗಿರಿಂತ ಕೀಳಾಗಿ ಈ ಸಮಾಜ ನಡೆಸಿಕೊಂಡಿದೆ.[47] ಸಮಾಜ ಅವರಿಗೆ ಅವಶ್ಯಕ ನಾಗರಿಕ ಹಕ್ಕುಗಳನ್ನು ಸಹ ನಿರಾಕರಿಸಿದೆ. ತನ್ನ ಅಸ್ತಿತ್ವದ ಹೋರಾಟದಲ್ಲಿ ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿರುವ

[43] Chanchreek K.L. (ed), Dr.B.R. Ambedkar A Rebal Dalit Leader- Vol-1, 2006. Pp.-31.
[44] ಸದಾಶಿವ ಕೆ. ಸಮಗ್ರ ಭಾರತದ ಇತಿಹಾಸ, 2005. ಪು.ಸಂ.–476.
[45] Javaraiah M.N. Ambedkar Vereuhs Jindu Rashtra, Bahujan Media Center , Mysore, 2005. Pp.-403.
[46] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–2, ಭಾಗ–1, ಕರ್ನಾಟಕ ಸರ್ಕಾರ, 1993. ಪು.ಸಂ–885.
[47] ಅದೇ, 885.

ನಿಮ್ನವರ್ಗದ ಸಾಮಾಜಿಕ ಸಮಸ್ಯೆಗಳಿಗೆ ರಾಜಕೀಯ ಪ್ರಾತಿನಿಧ್ಯತೆಯ ಮೂಲಕ ಪರಿಹಾರವನ್ನು ಒದಗಿಸಬಹುದಾದ ಸಂಬಂಧವನ್ನು ಹೊಂದಿದೆ ಎನ್ನುವ ಅಭಿಪ್ರಾಯವನ್ನು ಸಭೆಯು ಅರ್ಥ ಮಾಡಿಕೊಳ್ಳುತ್ತದೆ ಎಂಬ ಬಗ್ಗೆ ತುಂಬ ಉತ್ಸುಕನಾಗಿದ್ದೇನೆ ಎಂದರು.

ಭಾರತದಲ್ಲಿ ನೌಕರಶಾಹಿ ಪದ್ಧತಿಯ ಸರ್ಕಾರದ ಬದಲಿಗೆ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಸರ್ಕಾರವನ್ನು ಅಸ್ತಿತ್ವಕ್ಕೆ ತರಬೇಕೆಂಬುದು ನಿಮ್ನವರ್ಗದ ಅಭಿಪ್ರಾಯವಾಗಿದೆ.[48] ನಿಮ್ನವರ್ಗದ ಮೇಲೆ ಸಂಪ್ರದಾಯವಾದಿ ಹಿಂದುಗಳು ಅನಾದಿಕಾಲದಿಂದ ನಡೆಸಿದ ದಬ್ಬಾಳಿಕೆ ಮತ್ತು ತುಳಿತದಿಂದ ಬಿಡುಗಡೆ ಮಾಡುತ್ತಾರೆಂದು ಶೋಷಿತ ವರ್ಗವು ಬ್ರಿಟಿಷರ ಮೇಲೆ ವಿಶ್ವಾಸ ಹೊಂದಿದೆ. ನಿಮ್ನವರ್ಗದವರು ತಮಗಾಗಿ ಹಿಂದೂ, ಮುಸಲ್ಮಾನರು ಮತ್ತು ಸಿಖ್ಖರ ವಿರುದ್ಧ ಹೋರಾಡಿ ವಿಶಾಲ ಸಾಮ್ರಾಜ್ಯ ಗೆಲ್ಲಲು ಸಹಾಯ ಮಾಡಿದರು ಎಂಬುದನ್ನು ಬ್ರಿಟಿಷರಿಗೆ ನೆನಪಿಸಿ ಅಸ್ಪೃಶ್ಯರ ಬಗ್ಗೆ ಬ್ರಿಟಿಷರು ತಾಳಿರುವ ತಾತ್ಸಾರ ಭಾವನೆ ಸರಿಯಲ್ಲ ಎಂದು ಟೀಕಿಸಿದರು. ಬ್ರಿಟಿಷ್ ಆಡಳಿತ ಅವಧಿಯಲ್ಲಿ ದಮನಿತರ ಸ್ಥಾನಮಾನಗಳನ್ನು ವಿವರಣಾತ್ಮಕವಾಗಿ ವ್ಯಕ್ತಪಡಿಸುತ್ತಾ, ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಹಿಂದುಗಳೊಡನೆ ನಿಮ್ನವರ್ಗಕ್ಕೆ ತೀವ್ರತರವಾದ ಭಿನ್ನಾಭಿಪ್ರಾಯಗಳಿವೆ. ಆದ್ದರಿಂದ ನಮ್ಮದು(ನಿಮ್ನವರ್ಗ) ಸ್ವಾತಂತ್ರ್ಯ ನಿರ್ಣಯವಾಗಿದೆ ಎಂಬುದನ್ನು ಸಭೆಗೆ ಸ್ಪಷ್ಟಪಡಿಸಿದರು.

ಬ್ರಿಟಿಷ್ ಆಡಳಿತ ಭಾರತದಲ್ಲಿ ನಿಮ್ನವರ್ಗದ ಸ್ಥಿತಿಯನ್ನು ಟೀಕಾತ್ಮಕವಾಗಿ ಬ್ರಿಟಿಷ್ ಪ್ರಭುತ್ವಕ್ಕೆ ಪ್ರಶ್ನೆ ಹಾಕಿದರು. ಬ್ರಿಟಿಷರು ಭಾರತಕ್ಕೆ ಬರುವ ಪೂರ್ವದಲ್ಲಿ ನಾವು ಈ ಸಮಾಜದಲ್ಲಿ ಅನುಭವಿಸಿದ್ದಕ್ಕೂ ಹಾಗೂ ತಮ್ಮ ಈಗಿನ ಪರಿಸ್ಥಿತಿಗೂ ಹೋಲಿಕೆ ಮಾಡಿದಾಗ ನಾವು ಮುಂದುವರಿಯುವ ಬದಲು ಕೇವಲ ಕಾಲ ತಳ್ಳಿದ್ದೇವೆ. ಬ್ರಿಟಿಷ್ ಆಡಳಿತಪೂರ್ವದಲ್ಲಿ ಅಸ್ಪೃಶ್ಯತೆಯಿಂದ ತುಂಬಾ ಹೀನಾಯ ಸ್ಥಿತಿಯಲ್ಲಿದ್ದೆವು. ಬ್ರಿಟಿಷ್ ಸರ್ಕಾರ ಅದನ್ನು ತೊಡೆದು ಹಾಕಲು ಏನಾದರು ಪ್ರಯತ್ನ ಮಾಡಿದೆಯಾ?[49] ಮೊದಲು ಪೊಲೀಸ್ ಸೇವೆಗೆ ನಮ್ಮನ್ನು ನಿರಾಕರಿಸಲಾಗಿತ್ತು. ಈಗ ಅನುಮತಿ ಇದೆಯೇ? ಹಿಂದೆ ದೇವಸ್ಥಾನಗಳಲ್ಲಿ ಪ್ರವೇಶವನ್ನು ನಿಷೇಧಿಸಲಾಗಿತ್ತು. ಅದನ್ನು ಈಗ ಮುಕ್ತಗೊಳಿಸಲಾಗಿದೆಯೇ ಎಂದು ಬ್ರಿಟಿಷರನ್ನು ಪ್ರಶ್ನೆ ಮಾಡುವ ಮೂಲಕ ದೀರ್ಘ ಕಾಲದವರೆಗೆ ನಮ್ಮನ್ನು ಆಳ್ವಿಕೆ ಮಾಡಿರುವ ಬ್ರಿಟಿಷರು ನಮಗೆ ಮಾಡಿರುವ ಉಪಕಾರಕ್ಕಾಗಿ ನಾವು ಸಂತೋಷವಾಗಿ ಕೃತಜ್ಞತೆ ಸಲ್ಲಿಸುತೇವೆ ಎಂದು ಪರೋಕ್ಷವಾಗಿ ಟೀಕೆ ಮಾಡಿದರು. ನೈಜವಾಗಿ ನಮ್ಮ ಸ್ಥಾನಮಾನದಲ್ಲಿ ಯಾವ ಮೂಲಭೂತ

[48] ಅದೇ, 886

[49] Chanchreek K.L (ed). 2006. Pp-32.

ಬದಲಾವಣೆಗಳು ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಆಗಲಿಲ್ಲ. ಬದಲಾಗಿ ಹಿಂದಿನ ಸಾಮಾಜಿಕ ವ್ಯವಸ್ಥೆ ಮುಂದುವರಿಸಿ "ಬ್ರಿಟಿಷ್ ಸರ್ಕಾರ ನಿಮ್ನವರ್ಗಕ್ಕೆ ಹಳೆಯ ಕೋಟಿನ ಮಾದರಿ ಕೊಟ್ಟು ಅದರ ಮೇಲಿನ ಹೊಲಿಗೆ ಮತ್ತು ತೇಪೆ ಇತ್ಯಾದಿಗಳನ್ನು ಒಳಗೊಂಡ ಕೋಟನ್ನು ತುಂಬಾ ಹೆಮ್ಮೆಯಿಂದ ಹೊಸ ಕೋಟು ಹೊಲಿದು ಕೊಟ್ಟಹಾಗೆ ನಡೆದುಕೊಳ್ಳುತ್ತಿದೆ." ಆದರೆ ನಮಗೆ ಎಸಗಿರುವ ಅನ್ಯಾಯಗಳು ಒಡೆದು ಸೋರುತ್ತಿರುವ ಗಾಯಗಳಂತೆ ಉಳಿದುಕೊಂಡಿವೆ. ಬ್ರಿಟಿಷ್ ಆಡಳಿತ 150 ವರ್ಷಗಳೇ ಕಳೆದುಹೋಗಿದ್ದರೂ ಅವುಗಳಿಗೆ ಯಾವ ಉಪಚಾರವನ್ನು ಮಾಡಿಲ್ಲ. ಬ್ರಿಟಿಷರು ನಮ್ಮ ಸಮಸ್ಯೆ ಬಿಡಿಸುವಲ್ಲಿ ಅಸಮರ್ಥರಾಗಿದ್ದಾರೆ. ನಿಮ್ನವರ್ಗದ ಜೀವನವನ್ನು ಹತ್ತಿಕ್ಕಿದ ಸಾಮಾಜಿಕ ಕೆಡುಕುಗಳನ್ನು ತೆಗೆದು ಹಾಕದಿರುವುದಕ್ಕೆ ಕಾರಣಗಳೇನು ಎಂದು ಪ್ರಶ್ನೆ ಮಾಡಿದರು.[50] ಭೂಮಾಲೀಕರು ನಮ್ಮ ಜೀವನ ಹಿಂಡುತ್ತಿದ್ದಾರೆ. ಬಂಡವಾಳಶಾಹಿಗಳು ಕೂಲಿ ಕಾರ್ಮಿಕರಿಗೆ ಬದುಕುವಷ್ಟು ಕೂಲಿಯನ್ನು ಮತ್ತು ದುಡಿಯಲು ಮುಕ್ತ ವಾತಾವರಣ ಇಲ್ಲದಿರುವುದು ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ಆದರೂ ಕೆಡಕುಗಳ ನಿರ್ಮೂಲನೆ ಮಾಡದಿರುವುದು ಏಕೆ? ಅವುಗಳನ್ನು ತೆಗೆದುಹಾಕಲು ಮನಸ್ಸಿಲ್ಲವೋ ಅಥವಾ ಆರ್ಥಿಕ ಮತ್ತು ಸಾಮಾಜಿಕ ಸಂಹಿತೆಗಳನ್ನು ತೊಡೆದುಹಾಕಲು ಕೈಹಾಕಿದರೆ ಪ್ರತಿಭಟನೆಗೆ ಅವಕಾಶ ಮಾಡಿಕೊಡುತ್ತದೆ ಎಂಬ ಭಯ ಸರ್ಕಾರಕ್ಕೆ ಆವರಿಸಿರಬೇಕು ಎಂಬ ಕಹಿಸತ್ಯವನ್ನು ತಿಳಿಸಿದರು. ಸಾಮಾಜಿಕ ಮತ್ತು ಆರ್ಥಿಕ ಸಂಹಿತೆಗಳಿಗೆ ತಿದ್ದುಪಡಿ ತರಲು ಅಂಜದಿರುವ ಜನತಾ ಸರ್ಕಾರವನ್ನು ಸ್ಥಾಪನೆ ಮಾಡುವ ಮೂಲಕ ನಿಮ್ನವರ್ಗದವರಿಗೆ ಅವಕಾಶವನ್ನು ಕಲ್ಪಿಸಬೇಕು ಎಂಬುದನ್ನು ಅರ್ಥ ಮಾಡಿಕೊಂಡು ಕಾರ್ಯವನ್ನು ನಿರ್ವಹಿಸಲು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಸರ್ಕಾರ ರಚನೆಯಿಂದ ಮಾತ್ರ ಸಾಧ್ಯ[51] ಎಂದು ಸ್ಪಷ್ಟಪಡಿಸಿದರು. ಇದರಿಂದ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದ ಪ್ರಬಲ ಪ್ರತಿಪಾದಕರಾಗಿದ್ದರೆಂದು ತಿಳಿದುಬರುತ್ತದೆ.

ಅಂಬೇಡ್ಕರ್ ಅವರು ದಮನಿತವರ್ಗದ ರಾಜಕೀಯ ಹಿತಾಸಕ್ತಿಗಳು ಸ್ವರಾಜ್ಯ ಸಂವಿಧಾನದಲ್ಲಿ ಮಾತ್ರ ಸಾಧ್ಯ ಎಂದು ಮನಗಂಡಿದ್ದ ಅವರು ಸಭೆಗೆ ನಮ್ಮ ಸಂಕಷ್ಟಗಳನ್ನು ಯಾರೂ ತೊಡೆದು ಹಾಕುವುದಿಲ್ಲ ಮತ್ತು ನಾವು ಸಹ ನಮ್ಮ ಕೈಯಲ್ಲಿ ರಾಜಕೀಯ ಅಧಿಕಾರ ದೊರಕದ ಹೊರತು ಅವುಗಳನ್ನು ತೊಡೆದುಹಾಕಲು ಸಾಧ್ಯವಿಲ್ಲ. ಆದ್ದರಿಂದ ಬ್ರಿಟಿಷ್ ಸರ್ಕಾರ ಈಗಿರುವಂತೆಯೇ ಇರುವವರೆಗೆ ರಾಜಕೀಯ ಅಧಿಕಾರದ ಯಾವ ಪಾಲು

[50] Ibid, 32.
[51] Keer, Dhananjay, 2003. Pp.-148.

ನಮಗೆ ಬರುವುದಿಲ್ಲ. ರಾಜಕೀಯ ಅಧಿಕಾರ ಇಲ್ಲದ ಹೊರತು ನಾವು ನಮ್ಮ ಜನರಿಗೆ ವಿಮೋಚನೆ ತರಲು ಸಾಧ್ಯವಿಲ್ಲ. ಅಂಥ ರಾಜಕೀಯ ಅಧಿಕಾರ ಸಿಗುವುದು ಸ್ವರಾಜ್ಯ ಸಂವಿಧಾನದಲ್ಲಿ ಮಾತ್ರ ಸಾಧ್ಯ[52] ಎಂದರು.

ಸ್ವರಾಜ್ಯ ಸಂವಿಧಾನದಲ್ಲಿ ರಾಜಕೀಯ ವಿಧಾನ ವಿಶೇಷ ರಚನೆಯಿಂದ ಕೂಡಿದ್ದಾಗ ಮಾತ್ರ ರಾಜಕೀಯ ಅಧಿಕಾರವು ನಿಮ್ನವರ್ಗಗಳಿಗೆ ದೊರೆಯುತ್ತದೆ. ಸಂವಿಧಾನ ರಚಿಸುವಾಗ ಪ್ರಮುಖವಾಗಿ ಭಾರತದ ಸಾಮಾಜಿಕ ಜೀವನದ ಹಲವು ನೈಜ ಸಂಗತಿಗಳು ಗಣನೆಗೆ ತೆಗೆದುಕೊಂಡು ಪ್ರಜಾಸತ್ತಾತ್ಮಕ ಸಂಸ್ಥೆಗೆ ಅವಶ್ಯಕವಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಭಾವನೆಗಳ ಬೆಳವಣಿಗೆಗೆ ಅವಕಾಶ ಕೊಡುವಂತಹ ಪದ್ಧತಿಗಳನ್ನು ಒಳಗೊಂಡಿರಬೇಕು[53] ಎಂಬುದು ಶೋಷಿತರ ನಿಲುವು ಅಗಿರುತ್ತದೆ ಎನ್ನುವುದನ್ನು ಸ್ಪಷ್ಟಡಿಸಿದರು.

ನಿಮ್ನವರ್ಗದ ಸಮಸ್ಯೆ ಒಂದು ಸಾಮಾಜಿಕ ಸಮಸ್ಯೆಯಾಗಿದೆ. ಅದಕ್ಕೆ ಪರಿಹಾರ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಕೊಳ್ಳಬೇಕು ಎನ್ನುವ ಜಾತಿಹಿಂದೂಗಳ ವಾದಕ್ಕೆ ಡಾ. ಅಂಬೇಡ್ಕರ್ ಅವರು ಪ್ರತಿಕ್ರಿಯಿಸುತ್ತಾ, ಜನತೆಯ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ರಾಜಕೀಯ ಅಧಿಕಾರದಿಂದ ಮಾತ್ರವೇ ನಿಯಂತ್ರಿಸಬಹುದೇ ಹೊರತು ಬೇರೆ ಯಾವುದೇ ಸಾಧನಗಳಿಂದ ಅಸಾಧ್ಯ ಇಂತಹ ರಾಜಕೀಯ ಅಧಿಕಾರ ಬ್ರಿಟಿಷರಿಂದ ಸವರ್ಣೀಯ ಹಿಂದುಗಳ ಕೈಸೇರಿದರೆ ಹಿಂದೆ ನಮ್ಮ ಮೇಲೆ ನಡೆದ ದಬ್ಬಾಳಿಕೆ, ಬಲಾತ್ಕಾರ ಮತ್ತು ಅನ್ಯಾಯಗಳು ಪುನರಾವರ್ತನೆಯಾಗುತ್ತವೆ. ಆದ್ದರಿಂದ ಅಸ್ಪೃಶ್ಯರು ರಾಜಕೀಯ ಅಧಿಕಾರ ಪಡೆದುಕೊಳ್ಳದ ಹೊರತು ನಿಮ್ನವರ್ಗದ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಆದ್ದರಿಂದ ಸ್ವರಾಜ್ಯ ಸಂವಿಧಾನದಲ್ಲಿ ನಮಗೆ ಅವಕಾಶ ಮಾಡಿಕೊಡಬೇಕು ಮತ್ತು ರಾಜಕೀಯ ಅಧಿಕಾರವು ಜಾತಿಹಿಂದೂಗಳ ಕೈಸೇರದಂತೆ ನೋಡಿಕೊಳ್ಳಬೇಕು. ಏಕೆಂದರೆ ಜಾತಿಹಿಂದೂಗಳು ನಮ್ಮ ಹಿತಾಸಕ್ತಿ ಪ್ರತಿನಿಧಿಸಲು ಮತ್ತು ಸಮಸ್ಯೆ ಪರಿಹರಿಸಲು ಎಂದಿಗೂ ಇಚ್ಚಿಸುವುದಿಲ್ಲ. ಆದ್ದರಿಂದ ಅವರ ಕೈಗೆ ಅಧಿಕಾರ ಹೋದರೆ ಅವರನ್ನು ಅಧಿಕಾರದಿಂದ ಕೆಳಗಿಸಲು ನಾವು ಮತ್ತೊಂದು ಕ್ರಾಂತಿಯನ್ನೇ ಮಾಡಬೇಕಾಗುತ್ತದೆ. ಆದ್ದರಿಂದ ನಮ್ಮ

---

[52] Javaraiah M.N. 2006. Pp.- 90.

[53] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–2, ಭಾಗ–2, ಕರ್ನಾಟಕ ಸರ್ಕಾರ, 1993. ಪು.ಸಂ–890.

ಸಮಸ್ಯೆಯ ಇತ್ಯರ್ಥವು ರಾಜಕೀಯದ ಒಂದು ಭಾಗ ಆಗಿರುವುದನ್ನು ಮನಗಂಡು ಆ ಮೂಲಕವೇ ದಮನಿತರ ಸಮಸ್ಯೆ ಪರಿಹರಿಸಬೇಕು ಎಂದರು.[54]

ಕೊನೆಯದಾಗಿ ನಿಮ್ನವರ್ಗದ ಪ್ರತಿನಿಧಿಯಾಗಿ ಅವರ ಪರವಾಗಿ ಹೇಳಬೇಕಾದುದನ್ನು ಹೇಳಿದ್ದೇನೆ. ನೀವು ಈ ಸಮಸ್ಯೆಗಳ ಪರಿಹಾರಕ್ಕೆ ಸರಿಯಾದ ಮಾರ್ಗವನ್ನು ಅನುಸರಿಸುತ್ತೀರೆಂಬ ನಂಬಿಕೆ ಇದೆ. ಆದರೆ ನೀವು ಸಮಸ್ಯೆಯನ್ನು ಪರಸ್ಪರ ತಿಳುವಳಿಕೆಯ ಆಧಾರದ ಮೇಲೆ ಬಗೆಹರಿಸುತ್ತೀರೋ ಅಥವಾ ಬಿಗಿಮುಷ್ಟಿ ಉಪಯೋಗಿಸುತ್ತೀರೋ ಎಂಬುದು ನಿಮ್ಮ ನಿರ್ಣಯಕ್ಕೆ ಬಿಟ್ಟ ವಿಷಯ. ನೀವು ರಚಿಸಬೇಕೆಂದಿರುವ ಹೊಸ ಸಂವಿಧಾನವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಬೇಕೆಂದು ನೀವು ಇಚ್ಛಿಸಿದರೆ ಎಲ್ಲ ಜನರ ಸಮ್ಮತಿ ಅದಕ್ಕೆ ಬೇಕು. ಈ ಎಲ್ಲಾ ಹೊಣೆಯು ನಿಮ್ಮ ಮೇಲೆ ಇದೆ ಎಂದು ತಿಳಿಸಿ ಮಾತು ಮುಗಿಸಿದರು.

ಅಲ್ಪಸಂಖ್ಯಾತರ ಉಪಸಮಿತಿಯ 2ನೇ ಸಭೆಯಲ್ಲಿ ಅಂಬೇಡ್ಕರ್ ಅವರು 31 ಡಿಸೆಂಬರ್ 1930ರಂದು ಮಾತನಾಡುತ್ತಾ,[55] ಅಸ್ಪೃಶ್ಯರ ಪ್ರಶ್ನೆಯನ್ನು ಇದೇ ಪ್ರಥಮ ಬಾರಿಗೆ ರಾಜಕೀಯ ದೃಷ್ಟಿಯಿಂದ ನೋಡುತ್ತಿರುವುದು. ನಿಮ್ನವರ್ಗದವರ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿದಂತೆ ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪತ್ರ ವ್ಯವಹಾರಗಳಲ್ಲಿ ವಿವರವಾಗಿ ತಿಳಿಸಲಾಗಿದೆ. ಆದರೆ ಸರ್ಕಾರ ಪತ್ರ ವ್ಯವಹಾರಗಳಲ್ಲಿರುವ ಸಮಸ್ಯೆಗಳನ್ನು ಮಾತ್ರ ಉಲ್ಲೇಖಿಸಿದೆ. ಆದರೆ ಅವುಗಳ ಪರಿಹಾರಕ್ಕೆ ಯಾವುದೇ ಮಾರ್ಗಗಳನ್ನು ಸೂಚಿಸಿಲ್ಲದಿರುವುದು ವಿಷಾದನೀಯ. ಆದ್ದರಿಂದ ಅಂಬೇಡ್ಕರ್ ಮತ್ತು ರಾವ್‌ಬಹದ್ದೂರ್ ಶ್ರೀನಿವಾಸ್ ಅವರು ನಿಮ್ನವರ್ಗದವರಿಗೆ ಭಾರತದ ಭಾವಿ ಸಂವಿಧಾನದಲ್ಲಿ ತಮ್ಮ ಕೋಮಿಗೆ ಯಾವ ರೀತಿಯ ರಾಜಕೀಯ ರಕ್ಷಣೆ ಕೊಡಬೇಕು ಎಂಬುದರ ಬಗ್ಗೆ ಸಮ್ಮೇಳನಕ್ಕೆ ಸಲ್ಲಿಸಿದ ವಿಜ್ಞಾಪನಾ ಪತ್ರದಲ್ಲಿ ಸ್ಪಷ್ಟೋಕ್ತಿಯಲ್ಲಿ ತಿಳಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಭಾರತದಲ್ಲಿ ರಾಜಕೀಯವಾಗಿ ಗುರುತಿಸಬೇಕಾದಾಗ ಹಲವಾರು ಅಲ್ಪಸಂಖ್ಯಾತ ಕೋಮುಗಳಿರುವ ಕಾರಣದಿಂದ ಎಲ್ಲವನ್ನು ಒಂದೇ ದೃಷ್ಟಿಕೋನದಲ್ಲಿ ನೋಡಲು ಸಾಧ್ಯವಿಲ್ಲ ಎಂಬ ಸಂಗತಿಯನ್ನು ಸಮಿತಿಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.[56] ಉದಾಹರಣೆಗೆ ಪಾರ್ಸಿ ಸಮುದಾಯ ಅಲ್ಪಸಂಖ್ಯಾತರಾದರೂ ಸಾಮಾಜಿಕ ವ್ಯವಸ್ಥೆಯಲ್ಲಿ

---

[54] Keer Dhananjay, 2003. Pp.-150.

[55] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು, ಸಂಪುಟ–2, ಭಾಗ–2, ಕರ್ನಾಟಕ ಸರ್ಕಾರ, 1993. ಪು.ಸಂ.–929.

[56] ಅದೇ, 930.

ಅಗ್ರಸ್ಥಾನದಲ್ಲಿದ್ದಾರೆ. ಆದರೆ ನಿಮ್ನವರ್ಗ ಭಾರತದಲ್ಲಿ ಮುಸಲ್ಮಾನರ ನಂತರ ಬರುವ ಅಲ್ಪಸಂಖ್ಯಾತರಾಗಿದ್ದಾರೆ. ಆದರೂ ಸಹ ಅವರ ಸಾಮಾಜಿಕ ಮಟ್ಟವು ಸಾಮಾನ್ಯ ಮನುಷ್ಯನಿಗಿಂತ ಕೀಳು ಮಟ್ಟದಲ್ಲಿದೆ. ಆದರೆ ಇತರ ಅಲ್ಪಸಂಖ್ಯಾತರು ತಮ್ಮ ನಾಗರಿಕ ಹಕ್ಕುಗಳನ್ನು ಸಂಪೂರ್ಣ ಮತ್ತು ಸ್ವತಂತ್ರವಾಗಿ ಅನುಭವಿಸುವಲ್ಲಿ ಯಾವುದೇ ರೀತಿಯ ತೊಂದರೆಗಳಿಲ್ಲ. ಅದೇ ಅಸ್ಪೃಶ್ಯರಿಗೆ ಯಾವುದೇ ಹಕ್ಕು ಇಲ್ಲ. ಕೆಲವು ಹಕ್ಕುಗಳಿದ್ದರೂ ಸಹ ಅವುಗಳನ್ನು ಅನುಭವಿಸಲು ಅವರಿಗೆ ಸ್ಪೃಶ್ಯರು ಅವಕಾಶವನ್ನು ಕೊಡುವುದಿಲ್ಲ. ಅಲ್ಪಸಂಖ್ಯಾತರೆಲ್ಲರೂ ಒಂದೇ ಹಡಗಿನಲ್ಲಿದ್ದರೂ ಸಹ ಕೆಲವರು ಎ ವರ್ಗ ಮತ್ತೆ ಕೆಲವರು ಬಿ ಮತ್ತು ಸಿ ವರ್ಗದಲ್ಲಿ ಪ್ರಯಾಣಿಸುತ್ತಿದ್ದಾರೆ. ಆದರೆ ಅಸ್ಪೃಶ್ಯರನ್ನು ಅದೇ ಹಡುಗಿನ ಸರಕುಗಳನ್ನು ಇಡುವ ಸ್ಥಳದಲ್ಲಿ ಇರಿಸಲಾಗಿದೆ. ಆದ್ದರಿಂದ ಅಲ್ಪಸಂಖ್ಯಾತರ ಸಮಸ್ಯೆ ನೋಡಬೇಕಾದಾಗ ವಿವಿಧ ದೃಷ್ಟಿಕೋನದಿಂದ ನೋಡಿದರೆ ಮಾತ್ರ ಪರಿಹಾರವನ್ನು ಹುಡುಕಲು ಸಾಧ್ಯವಾಗುತ್ತದೆ ಎಂಬ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದರು.

ಭಾರತದ ಭಾವಿ ಸಂವಿಧಾನದಲ್ಲಿ ಬಹುಮತದ ಆಳ್ವಿಕೆ ಸ್ಥಾಪಿಸಿದರೆ, ಆ ಬಹುಮತದ ಆಳ್ವಿಕೆಯು ಸಂಪ್ರದಾಯವಾದಿ ಜಾತಿಹಿಂದೂಗಳದ್ದಾಗುತ್ತದೆ. ಜಾತಿಹಿಂದೂಗಳು ಸಂಪ್ರದಾಯವಾದದ ನಂಬಿಕೆ ಮತ್ತು ಪೂರ್ವಗ್ರಹಪೀಡಿತ ಅಭಿಪ್ರಾಯಗಳಿಂದಾಗಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಉಲ್ಲಂಘಿಸುತ್ತಾರೆ. ಶಾಸನ ಅಥವಾ ಆಡಳಿತದಲ್ಲಿ ನಾಗರಿಕರ ಸಾರ್ವಜನಿಕರ ಹಕ್ಕುಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರೊಡನೆ ಪಕ್ಷಪಾತ ಮಾಡುತ್ತಾರೆ. ಆದ್ದರಿಂದ ಅಲ್ಪಸಂಖ್ಯಾತರ ರಕ್ಷಣೆಯಲ್ಲಿ ಪಕ್ಷಪಾತ ನಡೆಯದಂತೆ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅವರನ್ನು ರಕ್ಷಿಸುವುದು ಅವಶ್ಯಕ. ಈ ದೃಷ್ಟಿಯಿಂದ ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗ ಮತ್ತು ಕಾರ್ಯಾಂಗದಲ್ಲಿ ನಿಮ್ನವರ್ಗದ ಪ್ರಾತಿನಿಧ್ಯ ಕಲ್ಪಿಸಿ, ನಾಗರಿಕರಲ್ಲಿ ಪಕ್ಷಪಾತ ಮಾಡುವ ಕಾನೂನುಗಳನ್ನು ರಚಿಸಲು ಜಾತಿಹಿಂದೂಗಳಿಗೆ ಇರುವ ಅಧಿಕಾರವನ್ನು ದುರುಪಯೋಗ ಮಾಡದಂತೆ ತಡೆಯಲು ನಿಮ್ನವರ್ಗದ ಪ್ರಾತಿನಿಧ್ಯ ಬಹುಮುಖ್ಯ ಎಂದರು. ಅಲ್ಲದೆ ಜಾತಿಹಿಂದೂಗಳ ಶಾಸನ ಅಧಿಕಾರದ ಮೇಲೆ ಮಿತಿಗಳನ್ನು ಹೇರುವುದಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಬೇಕು ಎಂದರು.

ನಿಮ್ನವರ್ಗಕ್ಕೆ ರಾಜಕೀಯ ಪ್ರಾತಿನಿಧ್ಯತೆ ಕೊಡುವ ಮೂಲಕ ಅವರ ರಕ್ಷಣೆಗಾಗಿ ಈ ಕೆಳಗಿನ ಅಂಶಗಳನ್ನು ಭಾರತದ ಭಾವಿ ಸಂವಿಧಾನದಲ್ಲಿ ಸೇರಿಸಬೇಕೆಂದು[57] ಒತ್ತಾಯಿಸಿದರು. ಅವುಗಳೆಂದರೆ,

- ಎಲ್ಲಾ ಸಾರ್ವಜನಿಕ ಉದ್ಯೋಗಳಲ್ಲಿ ಅಸ್ಪೃಶ್ಯತೆ ಕಾನೂನಿಗೆ ವಿರುದ್ಧ ಎಂದು ಘೋಷಿಸುವ ಮೂಲಭೂತ ಹಕ್ಕನ್ನು ಸಂವಿಧಾನದಲ್ಲಿ ಉಪಬಂಧವಾಗಬೇಕು.
- ಸಾಮಾಜಿಕ ಶಾಪಗಳಿಂದ ನಿಮ್ನವರ್ಗವನ್ನು ಮುಕ್ತಗೊಳಿಸಬೇಕು.
- ಜಾರಿಯಲ್ಲಿದ್ದ ಅಸಮರ್ಥತೆ ಮತ್ತು ಪಕ್ಷಪಾತಗಳನ್ನು ಕಾನೂನಿನ ಮೂಲಕ ಅಸಿಂಧುಗೊಳಿಸಬೇಕು.
- ಅಸ್ಪೃಶ್ಯರ ಮೇಲೆ ನಡೆಯುತ್ತಿರುವ ಸಾಮಾಜಿಕ ಹಿಂಸಾಚಾರಗಳ ವಿರುದ್ಧ ಶಾಸನ ರಚನೆಯಾಗಬೇಕು.
- ತುಂಬ ಅಗತ್ಯವಾಗಿ ಕಾರ್ಯಾಂಗದ ಅಧಿಕಾರಿಗಳಿಗೆ ಅಸ್ಪೃಶ್ಯರ ಶೋಷಣೆ ಕೃತ್ಯಗಳಿಗಾಗಿ ಅವರಿಗೆ ಈಗಿರುವ ಹೊಣೆಗಾರಿಕೆಯು ಪರಿಣಾಮಕಾರಿಯಾಗುವಂತೆ ಮಾಡಬೇಕು. ಏಕೆಂದರೆ ಈಗಿರುವ ಹೊಣೆಗಾರಿಕೆಯು ನೈಜವಾದುದಲ್ಲ.
- ನಮ್ಮ ಕಲ್ಯಾಣದ ಹೊಣೆ ವಹಿಸಿಕೊಳ್ಳಲು ಕೇಂದ್ರ ಸರ್ಕಾರದಲ್ಲಿ ಒಬ್ಬ ಸೆಕ್ರೆಟರಿ ಆಫ್ ಸ್ಟೇಟ್ ಇರಬೇಕು. ಈ ವಿಷಯ ಕುರಿತಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ನಿಮ್ನವರ್ಗದ ಅತ್ಯಂತ ಮಹತ್ವವುಳ್ಳ ವಿಷಯವೆಂದರೆ ಶಾಸನಸಭೆಗಳಲ್ಲಿ ಮುಕ್ತ ಪ್ರಾತಿನಿಧ್ಯಕ್ಕೆ ಅವಕಾಶ ಇರಬೇಕು. ಈ ಪ್ರಾತಿನಿಧ್ಯ ಚುನಾವಣೆ ಮೂಲಕ ಆಗಬೇಕೇ ಹೊರತು ನಾಮಕರಣದ ಮೂಲಕ ಅಲ್ಲ, ಏಕೆಂದರೆ ನಾಮನಿರ್ದೇಶನ ಪದ್ಧತಿ ನಿಮ್ನವರ್ಗದವರಿಗೆ ಸರಿಹೊಂದುವುದಿಲ್ಲ ಎಂದು ವಿರೋಧಿಸಿದರು.[58]

ಜಂಟಿ ಅಥವಾ ಪ್ರತ್ಯೇಕ ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ನೀವು ನಮಗೆ ವಯಸ್ಕ ಮತದಾನದ ಹಕ್ಕನ್ನು ಕಲ್ಪಿಸಿದರೆ ಶೋಷಿತರ ಸಂಘಟನೆಗೆ ಸ್ವಲ್ಪ ಕಾಲಾವಕಾಶ ಕೊಟ್ಟರೆ ನಿಮ್ನವರ್ಗದವರು ಜಂಟಿ ಮತಕ್ಷೇತ್ರ ಮತ್ತು ಸ್ಥಳಗಳ ಮೀಸಲಾತಿಗೆ ಒಪ್ಪುತ್ತಾರೆ. ಅದರೆ

---

[57] ಅದೇ, 936.
[58] ಅದೇ, 937.

ನೀವು ನಮಗೆ ವಯಸ್ಕ ಮತದಾನದ ಹಕ್ಕನ್ನು ಕೊಡದಿದ್ದರೆ ನಾವು ನಮ್ಮ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಕೇಳಲೇಬೇಕಾಗುತ್ತದೆ.[59]

ಡಾ. ಅಂಬೇಡ್ಕರ್ ಅವರು ದಮನಿತವರ್ಗದ ರಕ್ಷಣೆಗಾಗಿ ಇಟ್ಟ ಬೇಡಿಕೆಗಳನ್ನು ಆಲಿಸಿದ ಉಪಸಮಿತಿ ಜನವರಿ 19, 1931ರಂದು ನಿಮ್ನವರ್ಗದ ಹಿತಾಸಕ್ತಿಗಳ ರಕ್ಷಣೆಗಾಗಿ ಸಭೆಯು ಅನುಮೋದಿಸಿದ[60] ಪ್ರಮುಖ ಅಂಶಗಳು ಕೆಳಗಿನಂತಿವೆ.

- ಎಲ್ಲಾ ಕೋಮುಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನ ರಕ್ಷಿಸುವ ಉದ್ದೇಶದಿಂದ ಜನಾಂಗ, ಜಾತಿ ಅಥವಾ ಲಿಂಗ ತಾರತಮ್ಯವಿಲ್ಲದೆ ಆರ್ಥಿಕ, ಸಾಮಾಜಿಕ ಮತ್ತು ನಾಗರಿಕ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸುವ ಮೂಲಭೂತ ಹಕ್ಕುಗಳ ಪಟ್ಟಿಯನ್ನು ಘೋಷಣೆಯಲ್ಲಿ ಸೇರಿಸಿತು. ಈ ಮೂಲಭೂತ ಹಕ್ಕಗಳ ಉಲ್ಲಂಘನೆ ಆದಾಗ ಸಂವಿಧಾನಾತ್ಮಕ ಪರಿಹಾರದ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸುವುದು.
- ಭಾರತದಲ್ಲಿ ಕೋಮುಗಳ ಹಂಚಿಕೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದ ಅಸಮಾನತೆ ನೆಲೆ ಮಾಡಿದೆ. ಆದ್ದರಿಂದ ಅಲ್ಪಸಂಖ್ಯಾತರು ಪಡೆದುಕೊಳ್ಳುವ ಪ್ರಾತಿನಿಧ್ಯವು ಅಸಮರ್ಪಕವಾಗಿದೆ ಎಂದು ತಿಳಿಸಿ ಕೋಮುಭದ್ರತೆ ಒದಗಿಸುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು.
- ಪ್ರಾತಿನಿಧಿತ್ವ ಕಲ್ಪಿಸಲು ನಿರ್ದಿಷ್ಟ ಪ್ರಮಾಣದ ಸ್ಥಳಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಆಯಾ ಕೋಮುಗಳಿಗೆ ಕಾಯ್ದಿಟ್ಟ ಸ್ಥಳಗಳ ಸಂಖ್ಯೆಯು ಜನಸಂಖ್ಯೆ ಹೊಂದಿರುವ ಪ್ರಮಾಣಕ್ಕೆ ಅನುಗುಣವಾಗಿ ಇರಬೇಕು. ಇದು ಯಾವ ಸಂದರ್ಭದಲ್ಲಿಯೂ ಸಹ ಕಡಿಮೆ ಆಗತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಿತು. ಇದನ್ನು ಸಾಧಿಸಲು ಮೂರು ಮುಖ್ಯ ಸಾಧನಗಳನ್ನು ಅನುಮೋದಿಸಲಾಯಿತು. ಅವುಗಳೆಂದರೆ,

1. ನಾಮ ನಿರ್ದೇಶನ
2. ಸ್ಥಳಗಳ ಮೀಸಲಾತಿಯ ಅನ್ವಯ ಜಂಟಿ ಮತಕ್ಷೇತ್ರಗಳು ಮತ್ತು
3. ಪ್ರತ್ಯೇಕ ಮತಕ್ಷೇತ್ರ

[59] ಅದೇ, 938.
[60] ಅದೇ, 978.

- ಪ್ರತ್ಯೇಕ ಮತಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಭಾರತದಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಇದನ್ನು ಪರಿಹರಿಸುವುದು ತುಂಬಾ ಕ್ಲಿಷ್ಟ ಸಮಸ್ಯೆಯಾಗಿದೆ. ಕೇಂದ್ರ ಮತ್ತು ಬೇರೆ ಪ್ರಾಂತ್ಯಗಳಲ್ಲಿ ಕೋಮು ಪ್ರಾತಿನಿಧ್ಯತೆ ಪ್ರಮಾಣ ಎಷ್ಟಿರಬೇಕೆಂದು ನಿಗದಿಪಡಿಸಿಲ್ಲ ಎಂಬುದು ಮೊದಲನೇ ಸಮಸ್ಯೆ. ಶಾಸನ ಸಭೆಯಲ್ಲಿ ಸಂಪೂರ್ಣವಾಗಿ ಎಲ್ಲಾ ಸ್ಥಳಗಳನ್ನು ಕೋಮುಗಳಿಗೆ ಕೊಟ್ಟಾಗ ಅಲ್ಲಿ ಸ್ವತಂತ್ರ ರಾಜಕೀಯ  ಬೆಳವಣಿಗೆ ಮತ್ತು ನಿಜವಾದ ರಾಜಕೀಯ ಪಕ್ಷಗಳ ವಿಕಾಸಕ್ಕೆ ಅವಕಾಶ ಇರುವುದಿಲ್ಲ ಎಂಬುದು ಎರಡನೇ ಸಮಸ್ಯೆ. ನಿಮ್ನವರ್ಗಗಳ ಮತಕ್ಷೇತ್ರದ ಉದ್ದೇಶಕ್ಕಾಗಿ ಹಿಂದೂ ಜನಸಂಖ್ಯೆಯಿಂದ ಬೇರ್ಪಡಿಸಿ ಬೇರೆ ಕೋಮು ಎಂದು ಪರಿಗಣಿಸಬೇಕಾದಾಗ ಮೂರನೇ ಸಮಸ್ಯೆ ಮತ್ತಷ್ಟು ಕ್ಲಿಷ್ಟವಾಯಿತು ಎಂದು ಅನುಮೋದನೆ ತಿಳಿಸುತ್ತದೆ.
- ಪ್ರಾಂತೀಯ ಸಂವಿಧಾನ ಉಪಸಮಿತಿ 2ರಲ್ಲಿ ಮಾಡಿದ ಶಿಫಾರಸ್ಸಿನ ಪ್ರಕಾರ ಪ್ರಾಂತೀಯ ಕಾರ್ಯಾಂಗದಲ್ಲಿ ಅಲ್ಪಸಂಖ್ಯಾತ ಕೋಮುಗಳ ಪ್ರಾತಿನಿಧ್ಯವು ಮಹತ್ವದ ವಿಷಯವಾಗಿದೆ. ಫೆಡರಲ್ ಕಾರ್ಯಾಂಗದಲ್ಲೂ ಮುಸ್ಲಿಮರ ಪ್ರಾತಿನಿಧ್ಯವು ಅದೇ ಪ್ರಮಾಣದಲ್ಲಿರಬೇಕು ಹಾಗೂ ಪ್ರಾಂತೀಯ ಮತ್ತು ಫೆಡರಲ್ ಕಾರ್ಯಾಂಗದಲ್ಲಿ ಜಂಟಿ ಅಥವಾ ವೈಯಕ್ತಿಕವಾಗಿ ಪ್ರಾತಿನಿಧ್ಯ ಇರಲೇಬೇಕು. ಇದು ಅಸಾಧ್ಯವಾದರೆ ಪ್ರತಿಯೊಂದು ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿ ಕಾಪಾಡಲು ಒಬ್ಬ ಮಂತ್ರಿ ಇರಬೇಕು ಎಂಬುದನ್ನು ಒಪ್ಪಲಾಯಿತು.
- ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಾಂತೀಯ ಮತ್ತು ಕೇಂದ್ರ ಸೇವೆಗಳಿಗೆ ನೇಮಕಾತಿ ಮಾಡುವ ಕೆಲಸವನ್ನು ಲೋಕಸೇವಾ ಆಯೋಗಗಳಿಗೆ ಒಪ್ಪಿಸಬೇಕು. ನಿಮ್ನವರ್ಗ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕೊಡಬೇಕು ಎಂದು ಒಪ್ಪಿಕೊಳ್ಳಲಾಯಿತು.
- ಚುನಾವಣೆ ತತ್ವಗಳು ಕೋಮುಗಳ ಆಧಾರದ ಮೇಲೆ ನಿರ್ಧಾರವಾಗಬಾರದು. ಪ್ರತ್ಯೇಕ ಮತಕ್ಷೇತ್ರಗಳ ರಚನೆಯಿಂದ ಸಮಸ್ಯೆಗಳು ಉಂಟಾದರೆ ಅವುಗಳನ್ನು ಸಂವಿಧಾನದಲ್ಲಿ ಚುನಾವಣಾ ವ್ಯವಸ್ಥೆಗೆ ಅನುಗುಣವಾಗಿ ಉಳಿಸಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ನಿಮ್ನವರ್ಗದ ಸಮಸ್ಯೆಯನ್ನು ಪರ್ಯಾಯವಾಗಿ ಆಲೋಚಿಸಬೇಕಾಗುತ್ತದೆ.

➢ ಅಲ್ಪಸಂಖ್ಯಾತ ಮತ್ತು ನಿಮ್ನವರ್ಗಗಳ ಬೇಡಿಕೆಗಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸದ ಹೊರತು ಭಾರತಕ್ಕೆ ಸ್ವಯಂ ಆಡಳಿತ ಸಂವಿಧಾನ ರೂಪಿಸುವ ವಿಚಾರಕ್ಕೆ ಸಮ್ಮತಿಸುವುದಿಲ್ಲ ಎಂದು ಸಮಿತಿ ಖಚಿತವಾಗಿ ಸ್ಪಷ್ಟಪಡಿಸಿತು.

ಮಹಾತ್ಮಗಾಂಧಿ ಅವರು ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ಸೆಪ್ಟೆಂಬರ್ 15, 1931ರಂದು ಸಂಯುಕ್ತ ರಚನಾಸಭೆಯ ಪ್ರಥಮ ದಿನದಂದು ಭಾರತ ರಾಷ್ಟ್ರೀಯ ಕಾಂಗ್ರೆಸ್ ದೇಶದ ಎಲ್ಲ ವರ್ಗಗಳನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ನಾನು ಭಾರತದ ನೈಜಪ್ರತಿನಿಧಿ ಮಹಮ್ಮದ್ದೀಯರು ಮತ್ತು ಸಿಕ್ಕರ ಹೊರತು ಇತರ ಯಾವ ಕೋಮಿಗೂ ರಾಜಕೀಯ ಮಾನ್ಯತೆ ನೀಡಲು ನಾನು ಸಿದ್ಧನಿಲ್ಲ ಎಂದು ತಿಳಿಸಿದರು. ಕಾಂಗ್ರೆಸ್ ಪ್ರತಿನಿಧಿಯಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನು ಬಲಿದಾನ ಮಾಡಿದ್ದೇ ಆದರೆ ಕಾಂಗ್ರೆಸ್ ನನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆದಂತಾಗುತ್ತದೆ. ಪ್ರತಿಯೊಂದು ಕೋಮಿನ ಹಿತಾಸಕ್ತಿ ರಕ್ಷಣೆ ನೀಡಲು ಅನೇಕ ಮಾರ್ಗಗಳಿವೆ. ಈ ನಿಟ್ಟಿನಲ್ಲಿ ಯೋಜನೆ ರೂಪಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಲು ಪ್ರಯತ್ನ ಮಾಡಬೇಕಾಗಿದೆ. ಆದ್ದರಿಂದ ಯಾರೂ ಸಹ ನನ್ನ ಅಭಿಪ್ರಾಯವೇ ಅಂತಿಮ ಎಂದು ಭಾವಿಸದೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಮಾನ ಅವಕಾಶವಿದೆ. ನನ್ನ ಈ ಅಭಿಪ್ರಾಯ ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು ನಿಮಗೆ ಬಿಟ್ಟ ವಿಷಯ[61] ಎಂದು ಸಭೆಯ ಗಮನಕ್ಕೆ ತಂದರು.

ಗಾಂಧಿ ಅವರ ಮಾತುಗಳಿಂದ ನಿರಾಶೆಗೊಂಡ ಅಂಬೇಡ್ಕರ್ ಅವರು ಅದೇ ದಿನ ಸಂಯುಕ್ತ ರಚನಾ ಸಭೆಯಲ್ಲಿ ಪ್ರಾಂತ್ಯಗಳ ಜನರ ರಕ್ಷಣೆ ಕುರಿತಾಗಿ ಉತ್ತಮ ವಾದ ಮಂಡಿಸಿದರು. ಸರ್ ಹೆನ್ರಿ ಗಿಡ್ನೆ, ರಾವ್ ಬಹದ್ದೂರ್ ಪನ್ನಿರು ಸೆಲ್ವಂ ಮತ್ತು ಡಾ. ಮೂಂಜೆ ಅಂಬೇಡ್ಕರ್ ಅವರ ನಿಲುವಿಗೆ ಬೆಂಬಲ ವ್ಯಕ್ತಪಡಿಸಿ ಅವರನ್ನು ಪ್ರಶಂಶಿಸಿದರು.[62]

ಎರಡನೇ ಅಧಿವೇಶನದ ಅಲ್ಪಸಂಖ್ಯಾತರ ಉಪಸಮಿತಿಯ ಪ್ರಥಮಸಭೆ ಸೆಪ್ಟೆಂಬರ್ 28, 1931ರಂದು ನಡೆಯಿತು. ಡಾ. ಅಂಬೇಡ್ಕರ್ ಅವರು ಮಾತನಾಡುತ್ತಾ, ನಿಮ್ನವರ್ಗದ ಪರವಾಗಿ ತಮ್ಮ ವಾದವನ್ನು ಅಲ್ಪಸಂಖ್ಯಾತರ ಉಪಸಮಿತಿಗೆ ಲಿಖಿತವಾಗಿ ಸಲ್ಲಿಸಿದ್ದೇನೆಂದು ತಿಳಿಸಿ, ಸಭೆಯಲ್ಲಿ ನಾವು ಮಾಡಬೇಕಾಗಿರುವ ಒಂದೇ ಕೆಲಸವೆಂದರೆ ನಮಗೆ ಪ್ರಾಂತೀಯ

[61] Javaraiah M.N. 2006. Pp.-103.
[62] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು, ಸಂಪುಟ–2 ಭಾಗ–2 ಕರ್ನಾಟಕ ಸರ್ಕಾರ, 1993. ಪು.ಸಂ–1157.

ಶಾಸನಸಭೆಗಳಲ್ಲಿ ದೊರೆಯಬೇಕಾದ ಪ್ರಾತಿನಿಧ್ಯ ಪ್ರಮಾಣವನ್ನು ಸೂಚಿಸುವ ಒಂದು ಸಂಕ್ಷಿಪ್ತ ಹೇಳಿಕೆ ಕೊಡಬೇಕಾಗಿದೆ ಎಂದರು.

ಕೋಮುಪ್ರಶ್ನೆ ತೀರ್ಮಾನಿಸಲು ಸಂಧಾನಗಳು ನಡೆಯುತ್ತವೆ ಎನ್ನುವ ವಿಷಯ ಸಂತೋಷ ತಂದಿದೆ. ಆದರೆ ಇದರಲ್ಲಿ ಯಾವ ಸಂಶಯವೂ ಉಳಿಯಬಾರದು. ಈ ಸಂಧಾನ ನಡೆಯುತ್ತಿರುವುದು ಸ್ವತಂತ್ರ ರಾಯಭಾರಿಗಳಿಂದಲ್ಲ ಎಂಬುದನ್ನು ಸಭೆ ಅರ್ಥ ಮಾಡಿಕೊಳ್ಳಬೇಕು. ಶ್ರೀಯುತ ಗಾಂಧಿ ಅಥವಾ ಕಾಂಗ್ರೆಸ್ ಸ್ವರೂಪ ಏನೇ ಆಗಿದ್ದರೂ ಅವರಿಂದ ನಮ್ಮ ಹಿತಾಸಕ್ತಿಗಳಿಗೆ ಧಕ್ಕೆಯಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು. ನಿಮ್ನವರ್ಗ ಮತ್ತು ಅಲ್ಪಸಂಖ್ಯಾತರು ಮಂಡಿಸಿರುವ ಬೇಡಿಕೆಗಳನ್ನು ಒಂದು ಅಲ್ಪಸಂಖ್ಯಾತ ಕೋಮು ಮತ್ತು ಕಾಂಗ್ರೆಸ್ ಜೊತೆಯಲ್ಲಿ ಬೇಡಿಕೆ ಮಂಡಿಸಿದ್ದರೆ ಸಂಧಾನವು ಫಲಕಾರಿ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿ ಯಾವುದೇ ಒಂದು ಕೋಮಿಗೆ ಹೆಚ್ಚಿನ ಮಾನ್ಯತೆ ಕೊಡಬೇಕಾದರೆ ಅದನ್ನು ಅಸ್ಪೃಶ್ಯರ ಪಾಲಿನಿಂದ ಕೊಡಬಾರದು ಎಂದರು.

ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ ಅಲ್ಪಸಂಖ್ಯಾತರ ಉಪಸಮಿತಿ ರಚಿಸಲು ಸರ್ಕಾರವನ್ನು ಕೇಳಬೇಡಿ. ನೀವೇ ಆ ಸಮಿತಿ ರಚನೆ ಮಾಡಿಕೊಳ್ಳಿ ಎಂದು ಸದಸ್ಯರಿಗೆ ತಿಳಿಸಿದರು.

ಅಲ್ಪಸಂಖ್ಯಾತರ ಉಪಸಮಿತಿ ಎರಡನೇ ಸಭೆ ಅಕ್ಟೋಬರ್ 1, 1931ರಂದು ನಡೆಯಿತು. ಗಾಂಧಿ ಅವರು ಮುಸ್ಲಿಂ ಹಾಗೂ ವಿವಿಧ ಸಮುದಾಯದ ನಾಯಕರನ್ನು ಒಳಗೊಂಡ ಒಂದು ಸಮಿತಿ ರಚನೆ ಮಾಡುವ ಮೂಲಕ ಪರಿಹಾರ ಕಂಡುಹಿಡಿಯುತ್ತೇವೆ ಎಂದರು. ಸಭೆಯನ್ನು ಒಂದು ವಾರದವರೆಗೆ ಮುಂದೂಡಬೇಕೆಂದು ಕೇಳಿದರು. ಇದನ್ನು ಆಗಾಖಾನ್ ಮತ್ತು ಸರ್ದಾರ್ ಉಜ್ವಲ್‌ಸಿಂಗ್ ಸಂತೋಷದಿಂದ ಅನುಮೋದಿಸಿದರು. ಅಂಬೇಡ್ಕರ್ ಅವರು ಪ್ರತಿಕ್ರಿಯಿಸುತ್ತಾ ಗಾಂಧಿಯವರು ಕೊಟ್ಟಿರುವ ವಿಧಾನಗಳಿಂದ ಸಮಸ್ಯೆ ಬಗೆಹರಿಸಲು ಸಾಧ್ಯವಾಗುವುದಾದರೆ ನನ್ನಿಂದ ಯಾವ ಅಭ್ಯಂತರವಿಲ್ಲ. ಯಾವ ವಿಧವಾದ ಸಮಿತಿ ರಚನೆ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಆ ಸಮಿತಿಯಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯ ಇರುವುದೆಂದು ಭಾವಿಸಿದ್ದೇನೆ ಎಂದರು.

ಅಲ್ಪಸಂಖ್ಯಾತರ 3ನೇ ಸಭೆ ಅಕ್ಟೋಬರ್ 8, 1931ರಂದು ನಡೆಯಿತು.[63] ಗಾಂಧಿಯವರು ಮಾತನಾಡುತ್ತಾ ಕೋಮುಸಮಸ್ಯೆಗೆ ಸಂಬಂಧಿಸಿದಂತೆ ವಿವಿಧ ಕೋಮುಗಳೊಂದಿಗೆ ನಡೆಸಿದ

[63] ಅದೇ, 1164.

ಅನೌಪಚಾರಿಕ ಮಾತುಕತೆ ಪರಿಹಾರ ಕಂಡುಹಿಡಿಯುವಲ್ಲಿ ವಿಫಲವಾಯಿತು ಎಂಬುದನ್ನು ದುಃಖದಿಂದ ಪ್ರಕಟಿಸಬೇಕಾಗಿದೆ ಎಂದರು.[64] ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ನಾನು ಮಾಡದೇ ಇರುವ ಯಾವ ಪ್ರಯತ್ನವೂ ಉಳಿದಿಲ್ಲ. ಮಾತುಕತೆ ಸಂಪೂರ್ಣವಾಗಿ ವಿಫಲವಾಗಲು ಇಲ್ಲಿಯ ಪ್ರತಿನಿಧಿಗಳು ಯಾವ ಪಕ್ಷ ಅಥವಾ ಸಮುದಾಯದಿಂದ ಪ್ರತಿನಿಧಿಸುತ್ತಿದ್ದೇವೆ ಎಂದು ತಿಳಿದುಕೊಂಡಿದ್ದರೋ ಅವರು ಚುನಾಯಿತ ಪ್ರತಿನಿಧಿಗಳಲ್ಲ. ಸಭೆಗೆ ಸರ್ಕಾರದಿಂದ ನಾಮಕರಣಗೊಂಡ ಪ್ರತಿನಿಧಿಗಳು. ಆದ್ದರಿಂದ ಒಂದು ಒಮ್ಮತ ನಿರ್ಣಯ ಮಾಡಲು ಯಾರ ಉಪಸ್ಥಿತಿಯ ಅವಶ್ಯಕತೆ ಇತ್ತೋ ಅವರು ಈ ಸಮಿತಿಯಲ್ಲಿ ಇಲ್ಲ. ಆದ್ದರಿಂದ ಅಲ್ಪಸಂಖ್ಯಾತರ ಸಮಿತಿಯ ಸಭೆ ಕರೆಯಲು ಇದು ಯಾವ ರೀತಿಯಲ್ಲಿಯೂ ಸೂಕ್ತವಾದ ಸಮಯವಲ್ಲ ಎಂದು ತಿಳಿಸಿ ಕಾಂಗ್ರೆಸ್ ವಯಸ್ಕ ಮತದಾನಕ್ಕೆ ಬದ್ಧವಾಗಿದೆ. ಲಕ್ಷೋಪಲಕ್ಷ ಜನರನ್ನು ಮತದಾನ ಪಟ್ಟಿಯಲ್ಲಿ ಸೇರಿಸಬಹುದಾಗಿದೆ. ಅಸ್ಪೃಶ್ಯರು ತೀವ್ರಗತಿಯಲ್ಲಿ ಮಾಯವಾಗುತ್ತಿರುವಾಗ ಇತರ ಸಮುದಾಯದವರು ಅಸ್ಪೃಶ್ಯ ಮತದಾರರನ್ನು ಬಹಿಷ್ಕರಿಸುವರೆಂಬುದನ್ನು ಊಹಿಸಲು ಅಸಾಧ್ಯ. ಅಸ್ಪೃಶ್ಯರು ಶಾಸನಸಭೆಗಳಿಗೆ ಚುನಾಯಿತರಾಗುವುದಕ್ಕಿಂತಲೂ ಅವರಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಿರುಕುಳಗಳಿಂದ ರಕ್ಷಣೆಯ ಅವಶ್ಯಕತೆ ಹೆಚ್ಚಾಗಿದೆ. ಕಾನೂನಿಗಿಂತಲೂ ಶಕ್ತಿಯುತವಾದ ಸಂಪ್ರದಾಯವಿರುವ ಕಾರಣದಿಂದ ಪ್ರತಿಯೊಬ್ಬ ವಿಚಾರವಂತ ಹಿಂದುವು ನಾಚಿಕೆ ಪಡಬೇಕಾಗಿದೆ. ಅಸ್ಪೃಶ್ಯರ ನಿವಾರಣೆಗೆ ಪ್ರತಿಯೊಬ್ಬ ಹಿಂದುವೂ ತಪಸ್ಸು ಮಾಡಬೇಕಾಗಿದೆ. ಉಚ್ಚವರ್ಗವೆಂದು ಕರೆದುಕೊಳ್ಳುತ್ತಿರುವ ಜನರು ನನ್ನ ಈ ದೇಶಭಾಂಧವರಿಗೆ(ಅಸ್ಪೃಶ್ಯ) ನೀಡುತ್ತಿರುವ ಹಿಂಸೆಯನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಿ ಅತ್ಯಂತ ಕಠಿಣ ಶಿಕ್ಷೆ ವಿಧಿಸಲು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ದೇವರ ದಯೆಯಿಂದ ಹಿಂದುಗಳ ವಿವೇಕ ಜಾಗೃತಗೊಂಡಿದೆ. ಅಲ್ಪಸಂಖ್ಯಾತರು ಮಂಡಿಸಿರುವ ವಾದ ಮತ್ತು ಬೇಡಿಕೆಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಅಸ್ಪೃಶ್ಯರ ಬಗ್ಗೆ ಹೇಳಲಾದ ಅಂಶಗಳು ಎಲ್ಲಕ್ಕಿಂತಲೂ ಹೆಚ್ಚು ನಿರ್ದಯೆಯಿಂದ ಕೂಡಿವೆ ಎನಿಸುತ್ತದೆ ಎಂದರು. ಭಾರತ ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕಾಗಿ ಕೂಡ ನಾನು ಅಸ್ಪೃಶ್ಯರ ಅತಿ ಮುಖ್ಯವಾದ ಹಿತಾಸಕ್ತಿಗಳನ್ನು ಬಲಿ ಕೊಡಲಾರೆ ಎಂದು ತಿಳಿಸಿ ವೈಯಕ್ತಿಕವಾಗಿ ಗಾಂಧಿಯವರು ಅಸ್ಪೃಶ್ಯರ ವಿಶಾಲ ಸಮುದಾಯದ ಪ್ರತಿನಿಧಿಯಾಗಿದ್ದೇನೆಂದು ಹೇಳಿದರು. ಗಾಂಧೀಜಿಯವರು ಇಲ್ಲಿ ಕೇವಲ ಕಾಂಗ್ರೆಸ್ ಪರವಾಗಿ ಮಾತನಾಡುತ್ತಿಲ್ಲ, ಅಸ್ಪೃಶ್ಯರ ಪರವಾಗಿಯೂ ಸಹ ಮಾತನಾಡುತ್ತಿದ್ದೇನೆ ಎಂದರು. ಅಸ್ಪೃಶ್ಯರ ಪ್ರತಿನಿಧಿಗಾಗಿ ಚುನಾವಣೆ ನಡೆಸಿದ್ದೇ ಆದರೆ

[64] Keer Dhananjay. 2003. Pp.-150.

ಅವರ ಮತಗಳನ್ನು ಪಡೆಯುತ್ತೇನೆ, ಅಲ್ಲದೇ ಎಲ್ಲರಿಗಿಂತ ಪ್ರಥಮ ಸ್ಥಾನದಲ್ಲಿರುತ್ತೇನೆ ಎಂಬ ಮಾತುಗಳನ್ನಾಡಿ ಅಸ್ಪೃಶ್ಯರ ನೈಜಪ್ರತಿನಿಧಿಯೆಂದು ಸಮರ್ಥಿಸಿಕೊಂಡರು. ಪ್ರತ್ಯೇಕ ಚುನಾಯಿತ ವ್ಯವಸ್ಥೆ ಮತ್ತು ಪ್ರತ್ಯೇಕ ಮೀಸಲಾತಿಗಳೆರಡು ಸನಾತನ ಹಿಂದುಗಳಿಗೆ ನಾಚಿಕೆ ಪಡುವಂತಹ ಪ್ರತಿಬಂಧಕಗಳು. ಆದ್ದರಿಂದ ಅಸ್ಪೃಶ್ಯತೆ ನಿರ್ಮೂಲನೆಗೆ ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪ್ರವಾಸ ಕೈಗೊಳ್ಳುತ್ತೇನೆ ಎಂದು ಘೋಷಿಸಿದರು.

ಅಸ್ಪೃಶ್ಯತೆಯ ಕಳಂಕ ತೊಡೆದುಹಾಕಲು ಪ್ರತಿಜ್ಞೆಗೈದ ಹಿಂದೂ ಸುಧಾರಕರ ತಂಡವಿದೆ. ನಮಗೆ ನಮ್ಮ ಶಾಲಾ ದಾಖಲೆ ಮತ್ತು ಜನಗಣತಿಯಲ್ಲಿ ಅಸ್ಪೃಶ್ಯರನ್ನು ಒಂದು ಪ್ರತ್ಯೇಕ ವರ್ಗವನ್ನಾಗಿ ವರ್ಗೀಕರಿಸುವುದು ಬೇಕಿಲ್ಲ.[65] ಸಿಕ್ಕರು, ಮಹಮ್ಮದೀಯರು, ಯುರೋಪಿಯನ್ನರು ಬೇಕಾದರೆ ಹಾಗೆ ಉಳಿಯಲಿ, ಅಸ್ಪೃಶ್ಯರು ಸದಾ ಅಸ್ಪೃಶ್ಯರಾಗಿಯೇ ಉಳಿಯುವರೆ? "ಅಸ್ಪೃಶ್ಯತೆ ಉಳಿಯುವುದಕ್ಕಿಂತ ಹಿಂದುಧರ್ಮವೇ ಅಳಿಯಲಿ ಎಂದು ಬಯಸುತ್ತೇನೆ"[66] ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ಅಂಬೇಡ್ಕರ್ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಅಸ್ಪೃಶ್ಯರ ಬಗ್ಗೆ ಅವರಿಗೆ ಇರುವ ಕಾಳಜಿ ಮತ್ತು ಕಳಕಳಿಯಿಂದ ನನಗೆ ಅವರ ಬಗ್ಗೆ ವಿಶ್ವಾಸ ಹೆಚ್ಚಾಗಿದೆ. ಆದರೆ ಡಾ. ಅಂಬೇಡ್ಕರ್ ಅವರು ಅನುಭವಿಸಿದ ಕಷ್ಟ-ಕಾರ್ಪಣ್ಯ ಮತ್ತು ಅನ್ಯಾಯಗಳಿಂದ ಅವರ ನಿರ್ಣಯ ಮತ್ತು ವಿವೇಚನೆಗಳು ಸದ್ಯದಲ್ಲಿ ಮಂಕಾಗಿದೆ ಎಂದು ಹೇಳಲು ದುಃಖವಾಗುತ್ತದೆ. ಆದರೆ ಇದನ್ನು ಹೇಳದೆ ಹೋದರೆ ನನ್ನ ಬಹಳ ಜವಾಬ್ದಾರಿ ಮತ್ತು ಪ್ರಜ್ಞೆಯಿಂದ ಮಾತನಾಡುತ್ತಿದ್ದೇನೆ. ಸಭೆಯು ಅರ್ಥ ಮಾಡಿಕೊಳ್ಳಬೇಕು ಎಂದು ವಿನಂತಿಸಿಕೊಂಡರು.

ಡಾ. ಅಂಬೇಡ್ಕರ್ ಅವರು ಇಡೀ ಭಾರತದ ಅಸ್ಪೃಶ್ಯ ಸಮುದಾಯದ ಪರವಾಗಿ ಮಾತನಾಡುತ್ತಿದ್ದೇನೆ ಎಂದು ವಾದಿಸುತ್ತಿರುವುದು ಸರಿಯಲ್ಲ. ಇದರಿಂದ ಹಿಂದುಧರ್ಮ ವಿಭಜನೆಯಾಗುತ್ತದೆ. ಅದು ನನಗೆ ಯಾವ ತೃಪ್ತಿಯನ್ನು ನೀಡುವುದಿಲ್ಲ. "ಅಸ್ಪೃಶ್ಯರು ಬಯಸಿದರೆ ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಲಿ ನನ್ನ ಅಭ್ಯಂತರವಿಲ್ಲ. ಅದನ್ನು ಬೇಕಾದರೆ ಸಹಿಸುವೆ. ಆದರೆ ನಮ್ಮ ಗ್ರಾಮಗಳು ಇಬ್ಭಾಗವಾದರೆ

---

[65] Omvedt Gail, Ambedker, 200., Pp.- 45.

[66] Chandra Bipan, India's struggle for Independence, Penguin book, New Delhi, 1989, Pp.- 293.

ಹಿಂದುಧರ್ಮಕ್ಕೆ ಒದಗಬಹುದಾದ ಸ್ಥಿತಿಯನ್ನು ಸಹಿಸಲಾರೆ[67] ಎಂದು ಘೋಷಿಸಿ ಯಾರು ಅಸ್ಪೃಶ್ಯರ ರಾಜಕೀಯ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದಾರೋ ಅವರಿಗೆ ಭಾರತದ ಅರಿವಿಲ್ಲ. ಭಾರತೀಯ ಸಮಾಜ ಯಾವ ರೀತಿ ರಚನೆಯಾಗಿದೆ ಎಂಬುದು ಗೊತ್ತಿಲ್ಲ. ಆದ್ದರಿಂದ ನನ್ನಲ್ಲಿರುವ ಎಲ್ಲಾ ಶಕ್ತಿಯನ್ನು ಬಳಸಿ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ ಅಸ್ಪೃಶ್ಯರ ಪ್ರತ್ಯೇಕ ಮೀಸಲಾತಿಯನ್ನು ನಾನೊಬ್ಬನೇ ವಿರೋಧಿಸಬೇಕಾಗಿ ಬಂದರೂ ಸಹ ನನ್ನ ಜೀವ ಪಣಕ್ಕೆ ಇಟ್ಟಾದರೂ ಮೀಸಲಾತಿಯನ್ನು ವಿರೋಧಿಸುತ್ತೇನೆ ಎಂದು ತಮ್ಮ ಸ್ಪಷ್ಟನಿಲುವು ವ್ಯಕ್ತಪಡಿಸಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಗಾಂಧಿ ಅವರ ಮಾತಿಗೆ ಪ್ರತಿಕ್ರಿಯಿಸುತ್ತಾ ನಾವು ಕಳೆದ ರಾತ್ರಿ ಅನೌಪಚಾರಿಕ ಸಭೆ ಮುಗಿಸಿ ಹತಾಶ ಭಾವನೆಯಿಂದ ಹೊರಬಂದೆವು. ಇಂದಿನ ಸಭೆಯಲ್ಲಿ ಯಾರನ್ನೂ ಉದ್ವೇಗಗೊಳಿಸುವಂತಹ ಭಾಷಣ ಅಥವಾ ಮಾತುಗಳನ್ನು ಆಡಬಾರದೆಂಬ ಮೌಖಿಕ ಕರಾರಿನೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆವು. ಗಾಂಧಿ ಅವರ ಪ್ರಕಾರ ಅನೌಪಚಾರಿಕ ಸಭೆ ವೈಫಲ್ಯಕ್ಕೆ ಕಾರಣಗಳನ್ನು ವಿವರಿಸುತ್ತಾ ಅಲ್ಪಸಂಖ್ಯಾತ ಸಮಿತಿಯ ಸಭೆ ಮುಂದೂಡಬೇಕೆಂಬ ತಮ್ಮ ಪ್ರಸ್ತಾಪ ಬಿಟ್ಟು ಮೇಜನ್ನು ಸುತ್ತುವರಿದು ಕುಳಿತಿರುವ ವಿವಿಧ ಕೋಮಿನ ಪ್ರತಿನಿಧಿಗಳ ಬಗ್ಗೆ ದೋಷಾರೋಪಣೆ ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಈ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅವಕಾಶ ನಿಮ್ನವರ್ಗಗಳಿಗೆ ಕೊಟ್ಟಿದ್ದ ಪಕ್ಷದಲ್ಲಿ ನನಗೆ ಸ್ಥಾನ ದೊರೆಯುತ್ತಿತ್ತು ಎನ್ನುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.[68] ಆದ್ದರಿಂದ ಗಾಂಧಿ ಅವರು ನನ್ನನ್ನು ಪ್ರತಿನಿಧಿ ಎಂದು ಹೇಳಲಿ ಬಿಡಲಿ ನಾನು ಸಂಪೂರ್ಣವಾಗಿ ನನ್ನ ಕೋಮನ್ನು ಪ್ರತಿನಿಧಿಸುತ್ತೇನೆ ಎಂದು ತಿರುಗೇಟು ನೀಡಿದರು.

ಪ್ರಾಂತೀಯ ಶಾಸನಸಭೆಗಳ ಸ್ವರೂಪ, ಶಾಸನಸಭೆ ಗಾತ್ರ ಮತ್ತು ವಿಶೇಷ ಹಿತಾಸಕ್ತಿಗಳ ಸಂಖ್ಯೆ ಹಾಗೂ ಕೋಮು ಪ್ರಶ್ನೆಗಳನ್ನು ಕುರಿತು ಸರ್ಕಾರ ಪರಿಹಾರ ಹುಡುಕಲು ಸಾಧ್ಯವಾಗಲಿಲ್ಲ. ಆದ್ದರಿಂದ ದುಂಡುಮೇಜಿನ ಪರಿಷತ್ತಿನ ಮತದಾನ ಹಕ್ಕಿನ ಸಮಿತಿಯ ಶಿಫಾರಸ್ಸಿನ ಮೇರೆಗೆ 1931 ಡಿಸೆಂಬರ್‌ನಲ್ಲಿ ಭಾರತೀಯ ಮತದಾನ ಹಕ್ಕಿನ(ಲೋಥಿಯಾನ್) ಸಮಿತಿ ರಚನೆಯಾಯಿತು. ಈ ಸಮಿತಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು

[67] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು, ಸಂಪುಟ–2 ಭಾಗ–2 ಕರ್ನಾಟಕ ಸರ್ಕಾರ, 1993. ಪು.ಸಂ–1170.

[68] ಅದೇ, 1168.

ಒಳಗೊಂಡ 18 ಜನ ಸದಸ್ಯರಿದ್ದರು. ಪಾರ್ಲಿಮೆಂಟರಿ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಮಾರ್ಕ್ವಿಸ್ಟ್ ಆಫ್ ಸಿ.ಎಚ್. ಲೋಥಿಯನ್ ಸಮಿತಿಯ ಅಧ್ಯಕ್ಷರಾಗಿದ್ದರು.[69]

## 2.6. ಭಾರತೀಯ ಮತದಾನಹಕ್ಕಿನ(ಲೋಥಿಯಾನ್) ಸಮಿತಿ

ಡಾ. ಅಂಬೇಡ್ಕರ್ ಅವರು ನಿಮ್ನವರ್ಗದ ಪರವಾಗಿ ಮೇ 1, 1932ರಂದು[70] ನೀಡಿದ ಟಿಪ್ಪಣಿಯಲ್ಲಿ ನಿಮ್ನವರ್ಗದ ಹೇಳಿಕೆ ಅಸ್ಪೃಶ್ಯರಿಗೆ ಮಾತ್ರ ಸೀಮಿತಗೊಳಿಸಬೇಕು. ಅಸ್ಪೃಶ್ಯರನ್ನು ಸವರ್ಣೀಯ ಹಿಂದೂಗಳು ತಮ್ಮ ಸ್ವಹಿತಾಸಕ್ತಿಗಳಿಗಾಗಿ ಶೋಷಣೆ ಮಾಡುತ್ತಿದ್ದಾರೆ. ಜಾತಿಹಿಂದೂಗಳು ಅಸ್ಪೃಶ್ಯರನ್ನು ನಿಮ್ನವರ್ಗದಿಂದ ಹೊರಗಿಡಲು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾರೆ. ಆದ್ದರಿಂದ ಇಂತಹ ವಿಷಯದಲ್ಲಿ ತಮ್ಮ ಅಭಿಪ್ರಾಯದ ಅಗತ್ಯತೆಯನ್ನು ಸಮಿತಿಯ ಗಮನಕ್ಕೆ ತಂದರು. ಅದರ ವಿವರ ಈ ಕೆಳಗಿನಂತಿದೆ.

1. ಅಸ್ಪೃಶ್ಯರನ್ನು ನಿರ್ಧರಿಸಲು ಭಾರತದ ಎಲ್ಲೆಡೆ ಏಕರೀತಿಯ ಪರೀಕ್ಷೆಯನ್ನು ಅನ್ವಯಿಸಬಾರದು. ಪ್ರಾಂತ್ಯಗಳ ಸ್ಥಿತಿಗತಿಗಳಲ್ಲಿ ಬಹಳ ವ್ಯತ್ಯಾಸವಿದೆ. ಪ್ರಾಂತ್ಯಗಳ ನಡುವೆ ಜನಾಂಗ ಮತ್ತು ಭಾಷೆಗೆ ಯಾವುದೇ ಸಂಬಂಧವಿಲ್ಲ. ಸಂಪರ್ಕದ ಕೊರತೆಯಿಂದ ಪ್ರತಿಯೊಂದು ಪ್ರಾಂತ್ಯವು ತನ್ನದೇ ವಿಶಿಷ್ಟ ಸಾಮಾಜಿಕ ಬದುಕಿನ ರೀತಿ–ನೀತಿ ಪಡೆದುಕೊಂಡು ವಿಕಾಸ ಹೊಂದಿವೆ. ಭಾರತದ ಸಂದರ್ಭದಲ್ಲಿ ಏಕರೀತಿಯ ಮಾನದಂಡ ಬಳಸಿ ಅಸ್ಪೃಶ್ಯತೆ ನಿರ್ಧರಿಸುವುದು ಸಮಂಜಸವಲ್ಲ. ಉದಾಹರಣೆಗೆ ಅಸ್ಪೃಶ್ಯತೆಯ ಸಾಮಾಜಿಕ ನಡತೆಗೆ ಸಂಬಧಿಸಿದಂತೆ ಪ್ರತಿ ವ್ಯಕ್ತಿಯ ಸನ್ನಿವೇಶಗಳಿಗೆ ಭಿನ್ನವಾಗಿರುತ್ತದೆ. ಆದ್ದರಿಂದ ಅಸ್ಪೃಶ್ಯತೆ ನಿರ್ಧಾರಕ್ಕೆ ಬಳಸುವ ಪರೀಕ್ಷೆಗಳು ಬೇರೆಯಾದ ಮಾತ್ರಕ್ಕೆ ಅಸ್ಪೃಶ್ಯರ ಸ್ಥಿತಿಗಳು ಬೇರೆಯಾಗುತ್ತವೆ ಎಂದು ತಿಳಿಯುವುದು ತಪ್ಪುಗ್ರಹಿಕೆಯಾಗುತ್ತದೆ.
2. ಮುಟ್ಟಿದರೆ ಮೈಲಿಗೆ ಎನ್ನುವ ಪರೀಕ್ಷೆಯ ದೃಷ್ಟಿಯಿಂದ ನಿರ್ಧರಿಸುವಾಗ ಜನರ ಭಾವನೆಗಳನ್ನು ಗಮನಿಸದೇ ಯಾರನ್ನು ಮುಟ್ಟಿದರೆ ಮೈಲಿಗೆ ಎಂದು ದೂರ ಇಡುತ್ತಾರೋ ಅಥವಾ ಮುಟ್ಟಿಸಿಕೊಂಡರೆ ಶುದ್ಧಿಗೊಳಿಸಿಕೊಳ್ಳಬೇಕಾಗುತ್ತದೆ ಎನ್ನುವ ಸ್ಥಿತಿಯಲ್ಲಿರುವವರೇ ಅಸ್ಪೃಶ್ಯರು. ಈ ಭಾವನೆ ಗಣನೆಗೆ ತೆಗೆದುಕೊಂಡು ಮುಟ್ಟಿದರೆ ಮೈಲಿಗೆ ಆಗುತ್ತದೆ ಎಂದು ಭಾವಿಸುವ ವರ್ಗಕ್ಕೆ ಸೇರಿದವರನ್ನು ಅಸ್ಪೃಶ್ಯರನ್ನು ಸ್ಥಳ

[69] ಅದೇ, 868.

[70] Keer Dhananjay, 2003: Pp.-198.

ಮತ್ತು ಸನ್ನಿವೇಶಗಳಿಂದ ಮುಟ್ಟದೇ ಇರಲು ಸಾಧ್ಯವಾಗದೆ ಇರಬಹುದು ಅಥವಾ ಮುಟ್ಟಿದರೆ ಸ್ನಾನ ಮಾಡಲು ಸಾಧ್ಯವಾಗದೆ ಇರಬಹುದು. ಆದರೂ ಅವರು ಅಸ್ಪೃಶ್ಯರೆ. ಆದ್ದರಿಂದ ಅಸ್ಪೃಶ್ಯತೆ ನಿರ್ಧರಿಸುವಾಗ ಭಾವನೆ ಪರೀಕ್ಷೆ ಅನುಸರಿಸಬೇಕೆಂದು ಒತ್ತಿಹೇಳಿದರು.

3. ಅಸ್ಪೃಶ್ಯತೆ ತ್ವರಿತಗತಿಯಲ್ಲಿ ಮಾಯವಾಗುತ್ತಿದೆ ಎನ್ನುವ ಸವರ್ಣೀಯ ಹಿಂದೂಗಳ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆ ಹಿಂದೂ ಸಮಾಜದ ಒಂದು ಚೌಕಟ್ಟು. ಅಸ್ಪೃಶ್ಯತೆ ತೊಡೆದುಹಾಕಲು ಏಕೆ ಕಷ್ಟವೆಂದರೆ, ಅದಕ್ಕೆ ಧಾರ್ಮಿಕ ಒಪ್ಪಿಗೆಯಿದೆ. ಹಿಂದೂಗಳು ಅಸ್ಪೃಶ್ಯತೆ ಆಚರಣೆ ತನ್ನ ಧರ್ಮದ ಭಾಗವೆಂದು ಭಾವಿಸಿದ್ದಾರೆ. ಅಸ್ಪೃಶ್ಯರ ವಿಷಯ ಬಂದಾಗ ಅಮಾನವೀಯ ರೀತಿ ನಡೆದುಕೊಳ್ಳುವಾಗ ಉದ್ದೇಶಪೂರ್ವ ಕ್ರೌರ್ಯಕ್ಕಿಂತ ತನ್ನ ಧರ್ಮದ ಪ್ರಕಾರ ನಡೆದುಕೊಳ್ಳುತ್ತಾರೆ. ಭಾರತದ ನೆಲದಿಂದ ಅಸ್ಪೃಶ್ಯತೆಯನ್ನು ಬುಡಸಮೇತ ಕಿತ್ತುಹಾಕಲು ಅನೇಕ ಮಹಾಪುರುಷರು ಮಾಡಿದ ಪ್ರಯತ್ನಗಳ ದಾಖಲೆ ಭಾರತದ ಇತಿಹಾಸದಲ್ಲಿದೆ. ಅವರಲ್ಲಿ ಬುದ್ಧ, ರಾಮಾನುಜ ಮತ್ತು ಆಧುನಿಕ ಕಾಲದ ವೈಷ್ಣವರಂತಹ ಮಹಾಪುರುಷರು ಸೇರಿದ್ದಾರೆ. ಒಬ್ಬ ಹಿಂದೂ ಅಸ್ಪೃಶ್ಯತೆ ಆಚರಣೆಯಿಂದ ಪುಣ್ಯ ಬರುತ್ತದೆ ಅದನ್ನು ಆಚರಿಸದಿದ್ದರೆ ಪಾಪ ಬರುತ್ತದೆ ಎಂದು ಭಾವಿಸುತ್ತಾನೆ. ಈ ಭಾವನೆ ಎಲ್ಲಿಯವರೆಗೂ ಇರುತ್ತದೋ ಅಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆ.

4. ಹಿಂದೂ ಸಾಮಾಜಿಕ ಜೀವನದಲ್ಲಿ ವ್ಯಕ್ತಿಯ ಸಾಮಾಜಿಕ ಅಂತಸ್ತು ಆತ ಹುಟ್ಟಿದ ಕೋಮನ್ನು ಅವಲಂಬಿಸಿರುತ್ತದೆ. ಹಿಂದೂ ಸಾಮಾಜಿಕ ನಿಯಮದ ಪ್ರಕಾರ ಒಮ್ಮೆ ಅಸ್ಪೃಶ್ಯನಾದರೆ ಎಂದೆಂದಿಗೂ ಅಸ್ಪೃಶ್ಯನಾಗಿರುತ್ತಾನೆ ಎಂಬುದಕ್ಕೆ ಹಲವಾರು ಉದಾಹರಣೆಗಳ ಸಹಿತ ಗಮನಾರ್ಹವಾದ ಟಿಪ್ಪಣಿ ಬರೆದು ಸಮಿತಿಯ ದೃಷ್ಟಿಕೋನವನ್ನು ನಿಮ್ನವರ್ಗದ ಪರವಾಗಿ ಸೆಳೆಯುವಲ್ಲಿ ಯಶಸ್ವಿಯಾದರು.

## 2.7. ಪೂನಾ ಒಪ್ಪಂದ

ಲೋಥಿಯಾನ್ ಸಮಿತಿಯ ಶಿಫಾರಸ್ಸು ಮತ್ತು ಭಾರತೀಯ ಪ್ರತಿನಿಧಿಗಳ ಕೋಮುವಾರು ಪ್ರಾತಿನಿಧ್ಯದ ಪರ–ವಿರೋಧ ವಾದಗಳನ್ನು ಆಲಿಸಿದ ಬ್ರಿಟಿಷ್ ಸರ್ಕಾರದ ಅಂದಿನ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಅವರು ಆಗಸ್ಟ್ 17, 1932ರಂದು 'ಕೋಮುವಾರು ತೀರ್ಪು' ಪ್ರಕಟಿಸಿದರು.[71] ಈ ತೀರ್ಪಿನ ಪ್ರಕಾರ ನಿಮ್ನವರ್ಗದವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಪ್ರತ್ಯೇಕ ಚುನಾಯಿತ ಕ್ಷೇತ್ರಗಳನ್ನು ನೀಡಲಾಯಿತು. ಇದರಿಂದ ಅಸ್ಪೃಶ್ಯರಿಗೆ 2 ಮತ ನೀಡುವ ಹಕ್ಕು ದೊರೆಯಿತು. ಒಂದು ಮತ ತಮ್ಮ ಕೋಮಿನ ಪ್ರತಿನಿಧಿ ಆಯ್ಕೆ ಮಾಡಲು ಮತ್ತು ಇನ್ನೊಂದು ಮತ ದಲಿತೇತರ ಪ್ರತಿನಿಧಿ ಚುನಾಯಿಸಲು ನೀಡಿತ್ತು. ಈ ತೀರ್ಪಿನಿಂದಾಗಿ ದುಂಡುಮೇಜಿನ ಪರಿಷತ್‌ನಲ್ಲಿ ಡಾ.ಅಂಬೇಡ್ಕರ್ ಅವರು ನಿಮ್ನವರ್ಗದ ರಾಜಕೀಯ ಪ್ರಾತಿನಿಧ್ಯತೆಗಾಗಿ ಹಿಂದೂ ಜಾತಿ ಮತ್ತು ಕಾಂಗ್ರೆಸ್‌ನೊಂದಿಗೆ ತಮ್ಮ ಅಪ್ರತಿಮ ಬೌದ್ಧಿಕ ಶಕ್ತಿಯ ಮೂಲಕ ವಾದವಿವಾದ ನಡೆಸಿ, ಬ್ರಿಟಿಷ್ ಸರ್ಕಾರಕ್ಕೆ ನಿಮ್ನವರ್ಗದ ಬಗ್ಗೆ ಇದ್ದ ಮೌಢ್ಯತೆ ಹೋಗಲಾಡಿಸಿ ಅಸ್ಪೃಶ್ಯರ ನೈಜಸ್ಥಿತಿ ಅರ್ಥೈಸಿದ ಫಲವಾಗಿ ಕೋಮುವಾರು ತೀರ್ಪಿನಲ್ಲಿ ನಿಮ್ನವರ್ಗದ ನೈಜ ರಾಜಕೀಯ ಪ್ರಾತಿನಿಧ್ಯತೆ ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಶೋಷಿತರ ರಾಜಕೀಯ ಪ್ರಾತಿನಿಧ್ಯತೆ ಕುರಿತು ತನ್ನದೇ ದೃಷ್ಟಿಕೋನ ಹೊಂದಿದ್ದ ಗಾಂಧಿಯವರು ಅಂಬೇಡ್ಕರ್ ಅವರ ನಿಲುವಿಗೆ ತೀವ್ರ ವಿರೋಧವನ್ನು ಅಕ್ಟೋಬರ್ 8, 1931ರಂದು ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ ವ್ಯಕ್ತಪಡಿಸಿದರು. ಅದರಂತೆ ಮಾರ್ಚ್ 11, 1932ರಂದು ಪ್ರಧಾನಿಯವರಿಗೆ ಪತ್ರದ ಮೂಲಕ ಮೊದಲು ಉಪವಾಸ ಸತ್ಯಾಗ್ರಹದ ಬೆದರಿಕೆ ಒಡ್ಡಿದರು. ಆದರೆ ಸರ್ಕಾರ ಈ ಪತ್ರಕ್ಕೆ ಯಾವುದೇ ಬೆಲೆ ನೀಡಲಿಲ್ಲ. ಪ್ರಧಾನಿಯವರು ಸೆಪ್ಟೆಂಬರ್ 8, 1932ರ ಪತ್ರದಲ್ಲಿ ಗಾಂಧಿಯವರಿಗೆ ನಿಮ್ನವರ್ಗದ ವಿಷಯವಾಗಿ ತೆಗೆದುಕೊಂಡಿರುವ ನಿಲುವನ್ನು ತಿಳಿಸುತ್ತಾ, ನಿಮ್ನವರ್ಗಗಳನ್ನು ಪ್ರತ್ಯೇಕ ಮತಕ್ಷೇತ್ರಗಳಿಂದ ತುಂಬಬೇಕಾಗಿರುವ ಸ್ಥಾನಗಳ ಸಂಖ್ಯೆ ಕಡಿಮೆ ಎಂದೇ ಕಾಣುತ್ತದೆ. ಈ ತೀರ್ಪು ನಿಮ್ನವರ್ಗ ಜನಸಂಖ್ಯೆಯಿಂದ ನಿಮ್ನವರ್ಗದವರೇ ಆಯ್ಕೆಯಾಗುವ ಕನಿಷ್ಠ ಪ್ರತಿನಿಧಿಗಳಾದರೂ ಇರಲಿ ಎಂದು ಈ ವ್ಯವಸ್ಥೆ ಮಾಡಲಾಗಿದೆ. ನಿಮ್ನವರ್ಗಗಳ ಜನಸಂಖ್ಯೆಯ ಶೇಕಡವಾರಿಗಿಂತ ಅವರಿಗೆ ನೀಡಬೇಕಾಗಿರುವ ವಿಶೇಷ ಸ್ಥಾನಗಳ ಸಂಖ್ಯೆ ತುಂಬಾ ಕಡಿಮೆ ಎಂದು ತಿಳಿಸಿದರು. ಈ ಪತ್ರದಿಂದ ತಮ್ಮ ನಿಲುವಿಗೆ ಹಿನ್ನಡೆಯಾಗುವುದನ್ನು ಖಚಿತಪಡಿಸಿಕೊಂಡು ಗಾಂಧಿಯವರು ಕೋಮುವಾರು ತೀರ್ಪಿನ ವಿರುದ್ಧವಾಗಿ ಪೂನಾದ ಯರೆವಾಡ ಜೈಲಿನಲ್ಲಿ ಸೆಪ್ಟೆಂಬರ್ 20, 1932ರಂದು

[71] Chanchree K.L. (ed). 2006. Pp. – 39.

ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು.[72] ದಿನದಿಂದ ದಿನಕ್ಕೆ ಗಾಂಧಿಯವರ ಸ್ಥಿತಿ ಹದಗೆಡುತ್ತಿದ್ದು, ದೇಶದ ಎಲ್ಲೆಡೆ ಗ್ರಾಸವಾದ ಚರ್ಚೆ ಏರ್ಪಟ್ಟು ಎಲ್ಲರ ದೃಷ್ಟಿ ಪೂನಾದೆಡೆಗೆ ತಿರುಗುವಂತೆ ಆಯಿತು. ದೇಶೀಯ ರಾಜಕೀಯ ವಲಯದಲ್ಲಿ ಗಾಂಧಿಯವರನ್ನು ಉಳಿಸಿಕೊಳ್ಳಲು ಡಾ. ಅಂಬೇಡ್ಕರ್ ಅವರ ಮನವೊಲಿಸುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿದ್ದವು. ಅಂಬೇಡ್ಕರ್ ಅವರು ಒಂದು ಕಡೆ ನಿಮ್ನವರ್ಗದ ಹಿತಾಸಕ್ತಿ, ಇನ್ನೊಂದೆಡೆ ರಾಷ್ಟ್ರದ ಧೀಮಂತ ನಾಯಕನ ಪ್ರಾಣರಕ್ಷಣೆ ಜವಾಬ್ದಾರಿಯಿಂದಾಗಿ ಹೆಚ್ಚಿನ ಒತ್ತಡಕ್ಕೆ ಸಿಲುಕಿದರು. ಕೊನೆಗೆ ಅಂಬೇಡ್ಕರ್ ಅವರು ಕಾಂಗ್ರೆಸ್ ನಾಯಕರ ಒತ್ತಡಕ್ಕೆ ಮಣಿದು ಒಲ್ಲದ ಮನಸ್ಸಿನಲ್ಲಿ ಸೆಪ್ಟೆಂಬರ್ 24, 1932ರಂದು ಇತಿಹಾಸ ಪ್ರಸಿದ್ಧ ಪೂನಾ ಒಪ್ಪಂದಕ್ಕೆ ನಿಮ್ನವರ್ಗಗಳ ಪರವಾಗಿ ಸಹಿ ಹಾಕಿದರು.[73] ಈ ಒಪ್ಪಂದದ ಅಧ್ಯಕ್ಷತೆಯನ್ನು ಹಿಂದೂಮಹಾಸಭಾದ ಅಧ್ಯಕ್ಷ ಮದನಮೋಹನ ಮಾಳವೀಯ ಅವರು ವಹಿಸಿಕೊಂಡು ಹಿಂದೂಮಹಾಸಭಾದ ಪರವಾಗಿ ಸಹಿ ಹಾಕಿದರು. ಇವರೊಂದಿಗೆ ಇತರ ನಾಯಕರಾದ ಎಂ. ಆರ್ ಜಯಕರ್, ತೇಜ್‌ಬಹದ್ದೂರ್ ಸಪ್ರು, ಜಿ.ಡಿ. ಬಿರ್ಲಾ, ರಾಜಗೋಪಾಲಾಚಾರಿ, ಡಾ. ರಾಜೇಂದ್ರಪ್ರಸಾದ್, ರಾವ್‌ಬಹದ್ದೂರ್ ಶ್ರೀನಿವಾಸ್, ಎಂ.ಸಿ ರಾಜು, ಗಾಂಧಿಯವರ ಮಗ ದೇವದಾಸ್ ಗಾಂಧಿ, ರಾಜಬೋಜ, ಪಿ. ಬಾಲು ಗಾವಯಿ, ತಕ್ಕರ್, ಸಿ.ವಿ. ಮೆಹ್ತಾ, ಬೆಕಾಲೆ ಮತ್ತು ಕಾಮತ್ ಸಹಿ ಹಾಕಿದರು.[74]

ಒಪ್ಪಂದದ ಕೇಂದ್ರ ಬಿಂದು ಗಾಂಧಿ ಅವರು ಮಾತ್ರ ಸಹಿ ಮಾಡಲಿಲ್ಲ. ಸೆಪ್ಟೆಂಬರ್ 26, 1932ರಂದು ಬ್ರಿಟಿಷ್ ಸಂಸತ್ತಿನ ಎರಡು ಸದನಗಳು ಪೂನಾ ಒಪ್ಪಂದವನ್ನು ಅನುಮೋದಿಸಿದವು. ಅಂದು ಗಾಂಧಿ ಉಪವಾಸವನ್ನು ಅಂತ್ಯಗೊಳಿಸಿದರು.

ಅಂಬೇಡ್ಕರ್ ಅವರು ಬ್ರಿಟಿಷ್ ಸರ್ಕಾರದಿಂದ ನಿಮ್ನವರ್ಗದ ರಾಜಕೀಯ ಬೇಡಿಕೆ ಈಡೇರಿಸುವಲ್ಲಿ ಸಫಲರಾದರು. ದೇಶದ ಒಳಗಿನ ಪ್ರಬಲಜಾತಿ ಮನಸ್ಸುಗಳ ಮುಂದೆ ಅವರು ಬಯಸಿದ ಯಶಸ್ಸನ್ನು ಪಡೆಯಲಾಗಲಿಲ್ಲ. ಆದರೆ ಅಖಿಲ ಭಾರತದ ನಿಮ್ನವರ್ಗಗಳ ಏಕಮೇವ ನಾಯಕರಾಗಿ ಅಂಬೇಡ್ಕರ್ ಹೊರಹೊಮ್ಮಿದರು. ಈ ಒಪ್ಪಂದದ ಪ್ರಕಾರ ನಿಮ್ನವರ್ಗದವರಿಗೆ ಅಂಬೇಡ್ಕರ್ ಬಯಸಿದ 71 ಪ್ರತ್ಯೇಕ ಚುನಾಯಿಕಗಳಿಗೆ ಬದಲಾಗಿ 148 ಜಂಟಿ ಮತಕ್ಷೇತ್ರಗಳು ದೊರೆತವು.[75] ಪ್ರಾಂತೀಯ ಶಾಸಕಾಂಗಗಳಲ್ಲಿ ನಿಮ್ನವರ್ಗದವರಿಗೆ

[72] Omvedt Gail 2004. Ambedkar,  Pp. - 47.
[73] Chanchree K.L. (ed). 2006. Pp. - 42.
[74] Keer Dhananjay. 2003. Pp. – 91.
[75] Moon Vasant 2002.  Pp - 88.

ಮೀಸಲು ಕ್ಷೇತ್ರಗಳು ಇಂತಿದ್ದವು. ಮದ್ರಾಸ್ 30, ಬಾಂಬೆ ಜೊತೆ ಸಿಂಧ್ 15, ಪಂಜಾಬ್ 8, ಬಿಹಾರ್ ಮತ್ತು ಒರಿಸ್ಸಾ 18, ಕೇಂದ್ರೀಯ ಪ್ರಾಂತ್ಯಗಳಲ್ಲಿ 20, ಅಸ್ಸಾಂ 7, ಬಂಗಾಳ 30, ಒಕ್ಕೂಟ ಪ್ರಾಂತ್ಯಗಳಲ್ಲಿ 20.[76] ಪೂನಾ ಒಪ್ಪಂದದ ಕರಾರುಗಳನ್ನು 1935ರ ಭಾರತ ಸರ್ಕಾರ ಕಾಯ್ದೆಯಲ್ಲಿ ಸೇರಿಸಲಾಯಿತು. ಇದನ್ನು ಪ್ರಥಮ ಬಾರಿಗೆ 1937ರ ಚುನಾವಣೆಯ ಮೂಲಕ ಜಾರಿಗೆ ತರಲಾಯಿತು.

## 2.8. ಸಂವಿಧಾನ ರಚನಾಸಭೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿ ಕುರಿತು ಚರ್ಚೆಗಳು

ಸ್ವತಂತ್ರ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸಲು ಬ್ರಿಟಿಷ್ ಸರ್ಕಾರ ಷರತ್ತು ಹಾಕಿತು. ಹಾಗಾಗಿ ಭಾರತದಲ್ಲಿ ಸಂವಿಧಾನ ರಚನಾಸಮಿತಿಗೆ ಚುನಾವಣೆ ಘೋಷಣೆಯಾಯಿತು. ಡಾ. ಅಂಬೇಡ್ಕರ್ ಅವರು ಪೂನಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡರು. ನಂತರ ಅಂಬೇಡ್ಕರ್ ಅವರು ಸಂವಿಧಾನ ರಚನಾಸಮಿತಿಗೆ ಪ್ರವೇಶಿಸಬೇಕು ಎಂಬ ಅಭಿಲಾಷೆಯಿಂದ ಅಸ್ಪೃಶ್ಯರ ಮತ್ತು ಮುಸ್ಲಿಂ ಲೀಗ್‌ನ ಬೆಂಬಲದೊಂದಿಗೆ ಪಶ್ಚಿಮ ಬಂಗಾಳದಿಂದ ಸಂವಿಧಾನ ರಚನಾಸಭೆಗೆ ಆಯ್ಕೆಗೊಂಡರು. ದೇಶ ವಿಭಜನೆಗೊಂಡ ಕಾರಣದಿಂದ ಅವರ ಸದಸ್ಯತ್ವ ರದ್ದಾಯಿತು. ಆದ್ದರಿಂದ ಎರಡನೇ ಬಾರಿಗೆ ಬಾಂಬೆ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದ ಎಂ.ಆರ್. ಜಯಕರ್ ಅವರನ್ನು ಕಾಂಗ್ರೆಸ್ ಪಕ್ಷ ರಾಜೀನಾಮೆ ಕೊಡಿಸಿ ಆ ಜಾಗದಲ್ಲಿ ಅಂಬೇಡ್ಕರ್ ಅವರನ್ನು ಅವಿರೋಧವಾಗಿ ಸಂವಿಧಾನ ರಚನಾಸಭೆಗೆ ಆಯ್ಕೆ ಮಾಡಲಾಯಿತು.[77] ಸಂವಿಧಾನ ರಚನಾಸಭೆ ಅಂಬೇಡ್ಕರ್ ಅವರ ಅಗಾಧ ಪಾಂಡಿತ್ಯ ಮತ್ತು ಗಣನೀಯ ಸೇವೆಯನ್ನು ಪರಿಗಣಿಸಿ ಕರಡು ರಚನಾಸಭೆಯ ಅಧ್ಯಕ್ಷರಾಗಿ ಆಗಸ್ಟ್ 29, 1947ರಂದು ಅವಿರೋಧವಾಗಿ ಆಯ್ಕೆ ಮಾಡಿತು.[78]

ಡಾ. ಅಂಬೇಡ್ಕರ್ ಅವರು ಸಂವಿಧಾನ ರಚನಾಸಭೆಯಲ್ಲಿ ಆಗಸ್ಟ್ 24, 1949ರಂದು ಪರಿಶಿಷ್ಟರ ರಾಜಕೀಯ ಮೀಸಲಾತಿ ಕುರಿತು ಕರಡುವಿಧಿ 294ನ್ನು ಮಂಡಿಸಿದರು.[79] ಈ ಕರಡು ವಿಧಿಯು ಕೆಳಕಂಡಂತೆ ತಿಳಿಸುತ್ತದೆ.

---

[76] Chanchreek K.L (ed). 2006. Pp.-14.
[77] Gore M.S. The Social context of an ideology, Sage Publication, New Delhi, 1993. Pp. – 177 to 180.
[78] Basu Durga Das, Introduction to the Constitution of India, Nexis Nexis Butterworth, Wadhwa, Nagpur, 2009, Pp. - 18.
[79] Constituent Assembly Debeates, Vol-9, 30 July 1949 to 1st Sep 1949 Lokashabha Secretariat Pp. - 663.

294(1): ಪ್ರತಿ ರಾಜ್ಯ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.

294(2): ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳ ವಿಧಾನಸಭೆಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಥಾನ ಮೀಸಲಿಡುವುದು.

294(3): ರಾಜ್ಯದ ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಮೀಸಲಿರಿಸುವುದು.

294(4): ಅಸ್ಸಾಂನ ಸ್ವಾಯತ್ತ ಜಿಲ್ಲೆಗಳ ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನ ಮೀಸಲಿಡುವುದು.

294(5) ಮತ್ತು 294(6): ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಿಗೆ ಸಂಬಂಧಿಸಿರುತ್ತದೆ.[80]

ಈ ಕರಡು ವಿಧಿಯ ಮೇಲೆ ಸದಸ್ಯರು ಚರ್ಚಿಸಿದ ವಿಷಯಗಳನ್ನು ಪರ, ವಿರುದ್ಧ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಯನ್ನು ಉತ್ತಮಪಡಿಸಲು ನೀಡಿದ ಸಲಹೆಗಳು ಎಂದು ವರ್ಗೀಕರಿಸಿ ಕೆಳಗಿನಂತೆ ಚರ್ಚಿಸಲಾಗಿದೆ.

**ಅ. ವಿಧಿಯ ಪರವಾದ ಸದಸ್ಯರ ಚರ್ಚೆಗಳು**

**ಬ್ರಜೇಶ್ವರ ಪ್ರಸಾದ್**

ಡಾ. ಅಂಬೇಡ್ಕರ್ ಅವರು ಮಂಡಿಸಿದ ವಿಧಿಗೆ ಸಹಮತ ವ್ಯಕ್ತಪಡಿಸಿ ಪರಿಶಿಷ್ಟರ ಸಮಸ್ಯೆಗೆ ರಾಜಕೀಯದಿಂದ ಪರಿಹಾರವಿಲ್ಲ, ಅವರ ಪ್ರಾಥಮಿಕ ಸಮಸ್ಯೆಗಳು ಶಿಕ್ಷಣ ಮತ್ತು ಆರ್ಥಿಕ ರಂಗದಲ್ಲಿವೆ. ರಾಜಕೀಯ ಪ್ರಾತಿನಿಧ್ಯತೆಯಿಂದ ಪ್ರಾಯೋಗಿಕ ನೈತಿಕತೆಗಳು ಅಸ್ಪೃಶ್ಯರ ಸ್ಥಾನಗಳನ್ನು ಹೇಗೆ ಬದಲಿಸುತ್ತವೆ? ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಅವರ ಪ್ರಾತಿನಿಧ್ಯತೆ ಹೊಟ್ಟೆ ತುಂಬಿದವರ ನಾಯಕತ್ವಕ್ಕೆ ಅವಕಾಶ ಮಾಡಿಕೊಡುತ್ತದೆ. ಆದರೆ ಶಿಕ್ಷಣ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಯಾವ ಬದಲಾವಣೆ ಆಗುವುದಿಲ್ಲ. ಆದ್ದರಿಂದ ಪರಿಶಿಷ್ಟರ ಕಲ್ಯಾಣಕ್ಕೆ ಉತ್ತಮ ಮಾರ್ಗವೆಂದರೆ ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗಗಳಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಸಂವಿಧಾನದಲ್ಲಿ ಶೇ. 5ರಷ್ಟು ಹಣ ಬಜೆಟ್‌ನಲ್ಲಿ ಮೀಸಲಿಡಬೇಕು. ಎಸ್.ಸಿ./ಎಸ್.ಟಿ.ಗಳ ಸೌಲಭ್ಯಕ್ಕೆ ಬೇಕಾಗಿರುವುದು ಸಂವಿಧಾನದಲ್ಲಿ ಭದ್ರತೆ. ಅದು ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿರಬಾರದು. ಉಚಿತ ಶಿಕ್ಷಣ ಮತ್ತು ಉಚಿತ ಕೃಷಿಭೂಮಿ ಕೊಡಲು ಸಂವಿಧಾನದಲ್ಲಿ ಸ್ಪಷ್ಟಪಡಿಸಬೇಕು ಎಂಬ ಅಭಿಪ್ರಾಯವನ್ನು ಮಂಡಿಸಿದರು.

---

[80] Ibid 664.

ಪರಿಶಿಷ್ಟ ಪಂಗಡಗಳ ಜನರ ಕುರಿತು ಕರಡುವಿಧಿಯಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಕೆಲವು ಮಾನದಂಡಗಳ ಆಧಾರದ ಮೇಲೆ ವಿಧಾನಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡಬೇಕು. ಇದರಿಂದ ನಾವು ಅವರಿಗೆ ಸಂಬಂಧಿಸಿದ ಷೆಡ್ಯೂಲ್‌ಗಳನ್ನು ಚರ್ಚಿಸಲು ಅವಕಾಶವಾಗುತ್ತದೆ. ಅದೇ ವಿಧಿಯಲ್ಲಿ ತಂದಿರುವ ವಿಷಯಗಳು ಬೇರೆಯಾಗಿವೆ. ಪರಿಶಿಷ್ಟ ಪಂಗಡದವರ ಪ್ರದೇಶದಲ್ಲಿ ಚುನಾವಣೆ ನಡೆಸಲು ರಚಿಸಿರುವ ನಿಯಮಗಳನ್ನು ವಿರೋಧಿಸುತ್ತೇನೆ. ಪರಿಶಿಷ್ಟ ಪಂಗಡದವರ ಸಮಾಜ ಸಂಪೂರ್ಣವಾಗಿ ನಮಗಿಂತ ಭಿನ್ನವಾಗಿದೆ. ಅವರಲ್ಲಿ ಸಹಕಾರ ತತ್ವ ಹೆಚ್ಚಾಗಿರುತ್ತದೆ. ಆದರೆ ಚುನಾವಣೆ ಎಂಬುದು ಪ್ರತ್ಯೇಕತೆ ಮತ್ತು ಜನರ ನಡುವೆ ತೀವ್ರ ಸ್ಪರ್ಧೆ ಏರ್ಪಡಿಸುತ್ತದೆ. ಪರಿಶಿಷ್ಟ ಪಂಗಡದ ಜನರು ದಡ್ಡರು ಹಾಗೂ ತುಳಿತಕ್ಕೆ ಒಳಗಾದವರು. ಚುನಾವಣೆ ಸಂದರ್ಭದಲ್ಲಿ ಪ್ರಬಲ ಗುಂಪುಗಳು ಅವರನ್ನು ವಂಚಿಸಿ ತಮ್ಮ ಕೆಲಸ ಸುಲಭ ಮಾಡಿಕೊಳ್ಳುತ್ತವೆ. ಆದ್ದರಿಂದ ಈ ರೀತಿಯ ಚುನಾವಣಾತತ್ವ ಅವರಿಗೆ ಅನ್ವಯವಾಗುವುದಿಲ್ಲ[81] ಎಂಬ ಅಂಶವನ್ನು ಸಭೆಯ ಮುಂದಿಟ್ಟರು.

**ನಜೀರುದ್ದೀನ್ ಅಹಮದ್**

ಎಸ್.ಸಿ./ಎಸ್.ಟಿ.ಗಳು ಜೀವನುದುದ್ದಕ್ಕೂ ಶೋಷಣೆಗೆ ಒಳಗಾಗಿದ್ದಾರೆ. ಅವರ ಅಜ್ಞಾನದಿಂದ ಶೋಷಣೆಗೆ ಒಳಗಾಗಿ ಹಿಂದುಳಿದಿದ್ದಾರೆ. ನೀವು ಅವರಿಗೆ ವಿಧಾನಸಭೆಯಲ್ಲಿ ಕೆಲವು ಸ್ಥಾನಗಳನ್ನು ಕಾಯ್ದಿರಿಸಿದ ಮಾತ್ರಕ್ಕೆ ಅವರ ಸ್ಥಿತಿ ಉತ್ತಮಪಡಿಸಲು ಸಾಧ್ಯವಿಲ್ಲ. ನೀವು ಕೊಡಲು ಇಚ್ಛಿಸಿರುವ ಪ್ರಾತಿನಿಧ್ಯವು ದುರ್ಬಲವಾಗಿದ್ದರೆ ಅದು ಅವರನ್ನು ಹೇಗೆ ರಕ್ಷಣೆ ಮಾಡುತ್ತದೆ. ನನ್ನ ಸ್ನೇಹಿತರು ಪ್ರಜಾಪ್ರಭುತ್ವದ ಅನುಕೂಲಗಳು ಎಸ್.ಸಿ./ಎಸ್.ಟಿ.ಗಳಿಗೆ ಸಿಗುವುದಿಲ್ಲ ಎನ್ನುತ್ತಿದ್ದಾರೆ. ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸ್ಪೃಶ್ಯರನ್ನು ಕಷ್ಟಕರ ಜೀವನದಿಂದ ಬಿಡುಗಡೆಗೊಳಿಸಲು ಸಾಧ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಧಿಗೆ ಸಂಪೂರ್ಣ ಬೆಂಬಲ ಸೂಚಿಸಿದರು.[82]

---

[81] Ibid, 663-664.

[82] Ibid, 664-665.

**ಜೆ.ಜೆ.ಎಮ್. ನಿಕೊಲಸ್ ರಾಯ್**

ನನ್ನ ಗೌರವಾನ್ವಿತ ಸ್ನೇಹಿತರಾದ ಡಾ. ಅಂಬೇಡ್ಕರ್ ಅವರಿಗೆ ಈ ವಿಧಿಯನ್ನು ಸದನದಲ್ಲಿ ಮಂಡಿಸಿದ್ದಕ್ಕೆ ಅಭಿನಂದನೆ ತಿಳಿಸಿ ವಿಧಿಗೆ ತಮ್ಮ ಬೆಂಬಲ ಸೂಚಿಸಿದರು.[83]

**ಆ. ವಿಧಿಯ ವಿರುದ್ಧ ಚರ್ಚೆಗಳು**

**ಮಹಾವೀರ್‌ತ್ಯಾಗಿ**

ಅಸ್ಪೃಶ್ಯರ ರಾಜಕೀಯ ಮೀಸಲಾತಿಗಾಗಿ ನಡೆದ ಬೆಳವಣಿಗೆ ವಿವರಿಸಿದರು. ನಂತರ ನನ್ನ ಸ್ನೇಹಿತ ಕಂದೇಕ್ ಹೇಳುವಂತೆ ಯಾವ ಒಬ್ಬ ನೈಜ ಹರಿಜನ ಪ್ರತಿನಿಧಿಯು ಈ ವ್ಯವಸ್ಥೆಯಲ್ಲಿ ಆಯ್ಕೆಯಾಗುವುದಿಲ್ಲ.

ಈ ಮೀಸಲಾತಿ ಸೌಲಭ್ಯ ಹರಿಜನರಲ್ಲಿ ಬಹುಸಂಖ್ಯಾತ ಜನರು ತಮ್ಮೊಳಗಿರುವ ಅಲ್ಪಸಂಖ್ಯೆಯ ಉಪಜಾತಿಯವರನ್ನು ಪ್ರತಿನಿಧಿಯಾಗಲು ಅವಕಾಶ ಕೊಡುವುದಿಲ್ಲ ಎಂಬ ಸತ್ಯ ಸಂಗತಿ ತಿಳಿಸಿದರು. ಈ ಸಮಸ್ಯೆ ಅಸ್ಪೃಶ್ಯರಿಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕೋಮುಗಳಿಗೂ ಸಂಬಂಧಿಸಿದ್ದಾಗಿದೆ. ಈ ಮೀಸಲಾತಿ ಸೌಲಭ್ಯದಿಂದ ಅಸ್ಪೃಶ್ಯರಲ್ಲಿ ಬಹುಸಂಖ್ಯಾತ ಚಮ್ಮಾರರಿಗೆ ಹೆಚ್ಚಿನ ಸ್ಥಾನಗಳು ದೊರೆಯುತ್ತವೆ. ಆದರೆ ಚಮ್ಮಾರರಲ್ಲದ ಡಾ. ಅಂಬೇಡ್ಕರ್ ಅವರನ್ನು ಹೊರತುಪಡಿಸಿ ಬೇರೇ ಯಾರನ್ನು ನಾವು ಈ ಸಭೆಯಲ್ಲಿ ನೋಡಲು ಸಾಧ್ಯವಿಲ್ಲ. ಬಿಹಾರ ಹೊರತುಪಡಿಸಿ ಬೇರೆ ಎಲ್ಲಾ ಪ್ರಾಂತ್ಯಗಳಲ್ಲೂ ಒಬ್ಬೊಬ್ಬರೆ ಮಂತ್ರಿಗಳಿದ್ದಾರೆ. ಜಾತಿಯೊಳಗೆ ಬರುವ 400 ಜಾತಿಗಳು ಈ ಮೀಸಲಾತಿ ಸೌಲಭ್ಯ ಪಡೆಯುತ್ತಿವೆಯಾ? ಇಲ್ಲಿ ಕೇವಲ 2 ಅಥವಾ 3 ಜಾತಿಗಳು ಮಾತ್ರ ಮೀಸಲಾತಿ ಉಪಯೋಗ ಪಡೆದುಕೊಳ್ಳುತ್ತಿವೆ. ಬಾಂಬೆ ಪ್ರಾಂತ್ಯದಲ್ಲಿ ಮಹಾರ್ ಜನಾಂಗ ಬಹುಸಂಖ್ಯಾತರು. ಅಲ್ಲಿ ಬೇರೆ ಅಲ್ಪಸಂಖ್ಯಾತರು ಆಯ್ಕೆಯಾಗಲು ಬಿಡುವುದಿಲ್ಲ. ಆದ್ದರಿಂದ ನಾನು ಈ ಮಾದರಿಯ ಮೀಸಲಾತಿ ವಿರೋಧಿಸುತ್ತೇನೆ. ಪರಿಶಿಷ್ಟ ಜಾತಿಯೊಳಗೆ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರೆಂದು ಗುರುತು ಮಾಡಬೇಕು. ಇಲ್ಲದಿದ್ದರೆ ಮೀಸಲಾತಿಯ ಲಾಭ ಬಹುಸಂಖ್ಯಾತರು ಪಡೆಯುತ್ತಾರೆ. ಅಂದರೆ ಭಾರತದಲ್ಲಿ ಚಮ್ಮಾರರು ಇದರ ಸಂಪೂರ್ಣ ಲಾಭ ಪಡೆಯುತ್ತಾರೆ. ಚುನಾವಣೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳು ಆ ಕೋಮಿನ ಜನಸಂಖ್ಯೆ ಎಷ್ಟಿದೆ ಎಂದು ನಿರ್ಧರಿಸಿ ಪಕ್ಷದ ಟಿಕೆಟ್ ಕೊಡುತ್ತಾರೆ. ಹಾಗಾಗಿ ಪರಿಶಿಷ್ಟ ಜಾತಿಯಲ್ಲಿ ಬರುವ ಉಪಜಾತಿಗಳು ಮೀಸಲಾತಿ ಲಾಭ ಪಡೆಯುವುದಿಲ್ಲ.

[83] Ibid, 665-666.

ಜಾತಿಹಿಂದೂಗಳು ಮೀಸಲುಕ್ಷೇತ್ರದಲ್ಲಿ ಬಹುಸಂಖ್ಯಾತ ಅಸ್ಪೃಶ್ಯರ ವಿರುದ್ಧ ಅಲ್ಪಸಂಖ್ಯಾತ ಕೋಮನ್ನು ಎತ್ತಿಕಟ್ಟಿ ಅವರಿಗೆ ಬೆಂಬಲ ನೀಡಿ ಚುನಾವಣೆಯಲ್ಲಿ ಜಯ ಗಳಿಸುವಂತೆ ಮಾಡುತ್ತಾರೆ. ಈ ವಾಸ್ತವ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿಯ ಎಲ್ಲರಿಗೂ ಅನುಕೂಲವಾಗುವ ಕಾನೂನು ರೂಪಿಸಬೇಕಾಗಿದೆ.

ಅಸ್ಪೃಶ್ಯರಿಗೆ ಮೀಸಲಾತಿ ಕೊಡುವುದರಿಂದ ಬೇರೆ ಎಲ್ಲ ಜಾತಿಗಳು ಈ ಸೌಲಭ್ಯವನ್ನು ಕೇಳುತ್ತವೆ. ಇನ್ನೂ ಮುಂದುವರಿದು ತಮ್ಮಲ್ಲಿ ಗುಂಪುಗಳನ್ನು ಮಾಡಿಕೊಂಡು ಬೇರೆ ದೇಶ ಕೇಳುತ್ತಾರೆ. ಉದಾಹರಣೆಗೆ ಮುಸ್ಲಿಂಲೀಗ್. ಆದ್ದರಿಂದ ನನ್ನ ಸ್ವಂತ ವಿವೇಚನೆಯಿಂದ ಹೇಳುವುದಾದರೆ ಮೀಸಲಾತಿ ಸೌಲಭ್ಯ ಬೇಡ. ಅಸ್ಪೃಶ್ಯರು ಮೀಸಲಾತಿ ಸೌಲಭ್ಯವಿಲ್ಲದೇ ಅವರ ಜನಸಂಖ್ಯೆ ಅಧಿಕ ಇರುವ ಕಡೆ ಆಯ್ಕೆಯಾಗುತ್ತಾರೆ. ಮುಂದಿನ 10 ವರ್ಷಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ. ಪ್ರಾತಿನಿಧಿತ್ವ ಅಭ್ಯರ್ಥಿ ಅರ್ಹತೆಯಿಂದ ನಿರ್ಧಾರಿತವಾಗಬೇಕೇ ಹೊರತು ಆತನ ಜಾತಿಯಿಂದಲ್ಲ. ಪ್ರಾತಿನಿಧಿತ್ವ ದೇಶಕ್ಕಾಗಿ ಉತ್ತಮ ಸೇವೆ ಮಾಡಬಲ್ಲ ಮತ್ತು ದೇಶವನ್ನು ಸರಿಯಾಗಿ ಪ್ರತಿನಿಧಿಸುತ್ತಾನೆ ಎಂಬುದರ ಮೇಲೆ ಪ್ರಾತಿನಿಧಿತ್ವ ಮತ್ತು ಚುನಾವಣೆ ಮಹತ್ವ ನಿಂತಿದೆ. ಯಾರು ಇಂಗ್ಲೀಷ್ ಜ್ಞಾನ ಸಂಪಾದಿಸಿರುವರೋ ಅವರು ಇದರ ಬಗ್ಗೆ ಆಲೋಚನೆ ಮಾಡಿಲ್ಲ. ಅಸ್ಪೃಶ್ಯರಿಗಿಂತ ಕೆಲವು ಬ್ರಾಹ್ಮಣ, ಕ್ಷತ್ರಿಯ ಹಾಗೂ ರಜಪೂತ ಕುಟುಂಬಗಳಲ್ಲಿ ಶಿಕ್ಷಣ ಮತ್ತು ಆಸ್ತಿಗಳಿಂದ ಕೆಲವು ಸಮುದಾಯ ವಂಚಿತರಾಗಿದ್ದಾರೆ. ಅವರಿಗಾಗಿ ಈ ಸಂವಿಧಾನದಲ್ಲಿ ಯಾವ ಸೌಲಭ್ಯವಿಲ್ಲ. ಅವರಿಗೆ ಪ್ರತಿನಿಧಿ ಅಥವಾ ಮಂತ್ರಿಗಳಾಗಲು ಅವಕಾಶಗಳಿಲ್ಲ. ಅಂತಹವರಿಗೆ ಪ್ರಾತಿನಿಧಿತ್ವ ಕೊಡಬೇಕು. ಈ ದೇಶದಲ್ಲಿ ಅಶಿಕ್ಷಿತರಿಗೆ ಯಾವ ಮನ್ನಣೆಯೂ ಇಲ್ಲ. ಬ್ರಿಟಿಷ್ ಆಡಳಿತ ಅವಧಿ ಮುಗಿದ ಮೇಲೆ ಇಂಗ್ಲೀಷ್ ಗೊತ್ತಿಲ್ಲದ ಅಸ್ಪೃಶ್ಯರ ನಿಜವಾದ ನಾಯಕ ಬರಲು ಸಾಧ್ಯವಿಲ್ಲ. ಡಾ. ಅಂಬೇಡ್ಕರ್ ಅವರು ಎಲ್ಲಾ ವಿಚಾರಗಳಲ್ಲೂ ಸಮರ್ಥರು ಅವರು ಅಸ್ಪೃಶ್ಯರಲ್ಲೇ ಮುಂದುವರಿದು ಬಂದವರು. ಮುಂದಿನ ದಿನಗಳಲ್ಲಿ ಅಂಬೇಡ್ಕರ್ ಅವರು ತಮ್ಮ ಬುದ್ಧಿವಂತಿಕೆ ಮತ್ತು ಒಳ್ಳೆಯ ಗುಣಗಳಿಂದ ದೇಶದ ಯಾವುದಾದರೂ ಭಾಗದಿಂದ ಶಾಸಕಾಂಗಕ್ಕೆ ಆಯ್ಕೆಯಾಗಿ ಬರುತ್ತಾರೆ. ಆದ್ದರಿಂದ ಈ ಮೀಸಲಾತಿ ಸೌಲಭ್ಯದಿಂದ ಶಾಸಕಾಂಗಕ್ಕೆ ಆ ಕೋಮಿನ ನೈಜ ಪ್ರತಿನಿಧಿ ಆಯ್ಕೆಯಾಗಲು ಸಾಧ್ಯವಿಲ್ಲ. ಇದು ಯಾವಾಗ ಸಾಧ್ಯವಾಗುತ್ತದೆ ಎಂದರೆ ಭಾರತೀಯರು ಮನಸ್ಥಿತಿ ಬದಲಿಸಿಕೊಂಡು ಭಾರತೀಯ ಗೊಡ್ಡು ಸಂಪ್ರದಾಯಗಳನ್ನು ನಿರ್ನಾಮ ಮಾಡಿ ಪ್ರತಿನಿಧಿತ್ವವು ಸಮಸ್ತ ಮಾನವಕುಲದ ಬಗ್ಗೆ

ಒಳ್ಳೆಯ ಕಾಳಜಿ, ಬುದ್ಧಿವಂತಿಕೆ ಅಳವಡಿಸಿಕೊಂಡು ಸಮಸ್ಯೆಗಳನ್ನು ಪರಿಹರಿಸಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದರು.[84]

**ಇ. ಪರಿಶಿಷ್ಟ ಜಾತಿಯ ಕಲ್ಯಾಣಕ್ಕೆ ಸದಸ್ಯರು ನೀಡಿದ ಸಲಹೆಗಳು**

**ಹೆಚ್.ಜೆ. ಕಂದೇಕರ್**

ಪರಿಶಿಷ್ಟ ಜಾತಿಯ ಪ್ರತಿನಿಧಿಯಾಗಿ ಅಂಬೇಡ್ಕರ್ ಅವರು ಮಂಡಿಸಿದ ವಿಧಿಗೆ ಬೆಂಬಲ ಸೂಚಿಸಿದರು. ಪರಿಶಿಷ್ಟ ಜಾತಿಯವರು ಸಾವಿರಾರು ವರ್ಷಗಳಿಂದ ತಮ್ಮದಲ್ಲದ ತಪ್ಪಿನಿಂದಾಗಿ ಶೋಷಣೆಗೆ ಒಳಗಾಗಿದ್ದಾರೆ. ನಾವು ಅವರಿಗೆ ಕೊಡುತ್ತಿರುವ ಮೀಸಲಾತಿ ಸೌಲಭ್ಯವು ಅವರ ಮೇಲಿನ ದೌರ್ಜನ್ಯಕ್ಕೆ ಒಂದು ಪರಿಹಾರವಾಗಿದೆ. ನೀವು ಅವರಿಗೆ ಕೊಟ್ಟಿರುವ ಅವಕಾಶ ದೊಡ್ಡದೇನೂ ಅಲ್ಲ ಎಂದರು. ಅಸ್ಪೃಶ್ಯರ ರಾಜಕೀಯ ಮೀಸಲಾತಿ 10 ವರ್ಷಗಳೆಂದು ಮಿತಿಗೊಳಿಸಲಾಗಿದೆ. ಈ ಅವಧಿಯಲ್ಲಿ ಅವರನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿಲ್ಲ. ಗಾಂಧಿಯವರು 1927ರಿಂದ ನಿರಂತರವಾಗಿ ತಮ್ಮ ದೈಹಿಕ ಮತ್ತು ಮಾನಸಿಕವಾಗಿ ಬಹಳ ಶ್ರಮಪಟ್ಟು ಅಸ್ಪೃಶ್ಯರ ಏಳಿಗೆಗಾಗಿ ದುಡಿಯುತ್ತಾ ಬಂದರೂ ಸಹ ನಾವು ಇಂದಿಗೂ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ 10 ವರ್ಷಗಳಿಗೆ ಮೀಸಲಾತಿ ಅವಧಿ ಮಿತಿಗೊಳಿಸಿರುವುದನ್ನು ನಾನು ವಿರೋಧಿಸುತ್ತೇನೆ. ಅವರ ಕಲ್ಯಾಣಕ್ಕೆ ನಿಯಮಗಳು ಬದಲಾಗಬೇಕು ಎಂದರು.

ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗದಲ್ಲಿ ಮೀಸಲಾತಿ ನೀಡಿರುವಂತೆ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೂ ಈ ಮೀಸಲಾತಿ ವಿಸ್ತರಿಸಿದರೆ ಅವರ ಸ್ಥಿತಿ ಉತ್ತಮಪಡಿಸಬಹುದು. ಈ ವಿಧಿ ಇಂತಹ ಯಾವ ಸೌಲಭ್ಯಗಳನ್ನು ಉಲ್ಲೇಖಿಸಿಲ್ಲ. ದೇಶದ ಯಾವುದೇ ಪ್ರಾಂತ್ಯಗಳಲ್ಲಿ ನೋಡಿದರೂ ಅಸ್ಪೃಶ್ಯರು ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ ಎಂಬುದನ್ನು ಎಲ್ಲರೂ ಗುರುತಿಸಬಹುದು. ಅಸ್ಪೃಶ್ಯ ವ್ಯಕ್ತಿಯೂ ಸ್ಥಳೀಯ ಮಟ್ಟದ ಚುನಾವಣೆಗೆ ಸ್ಪರ್ಧಿಸಿದರೆ ಸವರ್ಣೀಯರ ಮತಗಳು ಅವನಿಗೆ ಸಿಗುವುದಿಲ್ಲ. ಹಾಗಾಗಿ ಅವರು ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಯಾಗಲು ಸಾಧ್ಯವಿಲ್ಲ. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೂ ಮೀಸಲಾತಿ ವಿಸ್ತರಿಸಬೇಕು ಎಂಬ ಬೇಡಿಕೆಯನ್ನು ಸದನದಲ್ಲಿ ಮಂಡಿಸಿದರು.

[84] Ibid, 670-673.

ಈ ಮೀಸಲಾತಿ ಸೌಲಭ್ಯವು ಅಸ್ಪೃಶ್ಯರ ಸ್ಥಿತಿ ಅಭಿವೃದ್ಧಿಪಡಿಸುತ್ತದೆ ಎಂಬುದು ಸುಳ್ಳು. ಆದ್ದರಿಂದ ಅವರನ್ನು ಅಭಿವೃದ್ಧಿಪಡಿಸಲು ಅನೇಕ ಮಾರ್ಗಗಳಿವೆ. ನಾವು ಅವರ ಉನ್ನತಿಗೆ ಯೋಜನೆಗಳನ್ನು ರೂಪಿಸುವ ಮೂಲಕ ಇತರ ಸಮುದಾಯಗಳಂತೆ ಅವರನ್ನು ಅಭಿವೃದ್ಧಿಗೊಳಿಸಬಹುದು. ಮೀಸಲಾತಿ ಸೌಲಭ್ಯ ಒಂದೇ ಈ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಬಹಳ ಹಿಂದಿನಿಂದಲೂ ಅಸ್ಪೃಶ್ಯರು ಶೋಷಣೆಗೆ ಒಳಗಾಗಿದ್ದಾರೆ. ಅದು ಇಂದಿಗೂ ಸಹ ಮುಂದುವರಿಯುತ್ತಿದೆ. ಹರಿಜನರು ಹೆಚ್ಚಾಗಿರುವ ಮತ ಕ್ಷೇತ್ರಗಳಲ್ಲಿ ಸವರ್ಣೀಯ ಹಿಂದೂಗಳು ಅವರನ್ನು ಹತ್ತು ಹಲವು ಭಾಗಗಳಾಗಿ ವಿಂಗಡಿಸುತ್ತಾರೆ. ಅಲ್ಲದೇ ಅಸ್ಪೃಶ್ಯರಲ್ಲಿ ಇರುವ ಅಲ್ಪಸಂಖ್ಯಾತ ಕೋಮಿಗೆ ಹಿಂದೂಜಾತಿಗಳು ತಮ್ಮ ಬೆಂಬಲ ಕೊಟ್ಟು ಹರಿಜನರಲ್ಲಿ ಇರುವ ಬಹುಸಂಖ್ಯಾತ ವರ್ಗವನ್ನು ತುಳಿಯುತ್ತಾರೆ. ಇದು ಈ ಮೀಸಲಾತಿ ಸೌಲಭ್ಯದಿಂದ ಬರುವ ಸ್ಪಷ್ಟ ಫಲಿತಾಂಶ. ನೀವು ಹರಿಜನರಿಗೆ ಪ್ರಾಂತೀಯ ಶಾಸಕಾಂಗದ ಮಂತ್ರಿಮಂಡಲದಲ್ಲಿಯೂ ಸಹ ಮೀಸಲಾತಿ ಕಲ್ಪಿಸಬೇಕು. ಇದಕ್ಕೆ ಉದಾಹರಣೆಯಾಗಿ ಒಂದು ಪ್ರಾಂತ್ಯದ ಶೇ.20ರಿಂದ 25 ಹರಿಜನ ಜನಸಂಖ್ಯೆ ಇರುವ ಪ್ರಾಂತ್ಯದಲ್ಲಿ ಕೇವಲ ಒಬ್ಬ ಮಂತ್ರಿ ಮಾತ್ರ ಇದ್ದಾನೆ. ಅದೇ ಬ್ರಾಹ್ಮಣರು ಶೇ. 2 ಜನಸಂಖ್ಯೆ ಇರುವ ಪ್ರಾಂತ್ಯಗಳಲ್ಲಿ 12 ಜನ ಮಂತ್ರಿಗಳ ಪೈಕಿ 10 ಜನ ಬ್ರಾಹ್ಮಣರಿರುತ್ತಾರೆ. ಇದನ್ನು ನೀವು ಅನ್ಯಾಯವೆಂದು ಪರಿಗಣಿಸುವುದಿಲ್ಲವೇ ಎಂದು ಪ್ರಶ್ನೆ ಮಾಡುತ್ತಾ ಪ್ರತಿ ಕೋಮಿನ ಜನಸಂಖ್ಯೆಗೆ ಅನುಗುಣವಾಗಿ ಮಂತ್ರಿಮಂಡಲದಲ್ಲಿ ಸ್ಥಾನಗಳನ್ನು ನೀಡಬೇಕು ಎಂಬ ಪ್ರಬಲ ವಾದ ಮಂಡಿಸಿದರು.

ಅಸ್ಪೃಶ್ಯರ ರಾಜಕೀಯ ಮೀಸಲಾತಿಗೆ ಯಾರು ವಿರೋಧ ವ್ಯಕ್ತಪಡಿಸುತ್ತಾರೋ ಅಂತಹವರು ಹರಿಜನರನ್ನು ಸಾಮಾನ್ಯ ಕ್ಷೇತ್ರಗಳಿಂದ ಸ್ಪರ್ಧಿಸಲು ಅವಕಾಶ ಕೊಡುವುದಿಲ್ಲ. ಎಲ್ಲಿಯವರೆಗೆ ಸವರ್ಣೀಯರು ಹರಿಜನರಿಗೆ ಸಾಮಾನ್ಯ ಕ್ಷೇತ್ರಗಳಿಂದ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕೊಡುವುದಿಲ್ಲವೋ ಅಲ್ಲಿಯವರೆಗೆ ಅವರ ನಡುವೆ ಸಂಪರ್ಕ ಸೇತುವೆ ನಿರ್ಮಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು ಸದನದ ಒಳಗೆ ಮತ್ತು ಹೊರಗೆ ಇರುವ ಜಾತಿಹಿಂದೂಗಳು ಒಂದು ವಿಷಯ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ನೀವು ಹರಿಜನರನ್ನು ಶೋಷಿಸುವುದನ್ನು ಬಿಟ್ಟು ಅವರು ಏನು ಕೇಳುತ್ತಾರೆ ಅದನ್ನು ಕೊಡುವುದರ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ಕೊಡಬೇಕು. ನೀವು ಇದಕ್ಕೆ ಅವಕಾಶ ಕೊಡದೇ ಹೋದರೆ ಹರಿಜನರು ಅನ್ಯ ಮಾರ್ಗವಿಲ್ಲದೇ ತಮ್ಮ ಉಳಿವಿಗಾಗಿ ಚಳುವಳಿ ಆರಂಭಿಸುತ್ತಾರೆ. ಫಲಿತಾಂಶವಾಗಿ ದೇಶದಲ್ಲಿ ಏನು ನಡೆಯುತ್ತದೆ

ಎಂದು ನಾನು ಭವಿಷ್ಯ ನುಡಿಯಲಾರೆ, ರಾಜಕೀಯ ಪಕ್ಷಗಳ ಸದಸ್ಯರು ಸಂದರ್ಭಕ್ಕೆ ತಕ್ಕಂತೆ ಅಸ್ಪೃಶ್ಯರನ್ನು ಉಪಯೋಗಿಸಿಕೊಂಡು ಲಾಭ ಪಡೆಯುತ್ತಿದ್ದಾರೆ. ಇದು ದೇಶದ ಹಿತಾಸಕ್ತಿಗೆ ಧಕ್ಕೆ ತರುತ್ತದೆ. ಇಂತಹ ಸಂದರ್ಭದಲ್ಲಿ ಹರಿಜನರು ಸವರ್ಣೀಯರ ಮಟ್ಟದವರೆಗೆ ಬರಲು ಯಾವ ಸೌಲಭ್ಯವನ್ನು ಕೇಳುತ್ತಾರೋ ಅದನ್ನು ಕೊಡಬೇಕೆಂದು ಒತ್ತಾಯಿಸಿದರು.

ನೀವು ಪರಿಶಿಷ್ಟರಿಗೆ ನೀಡಿರುವ ಮೀಸಲಾತಿ ಮುಂದುವರಿಸಬೇಕು. ಮುಂದಿನ 10 ವರ್ಷಗಳ ಅವಧಿಯಲ್ಲಿ ಅವರ ಸ್ಥಿತಿ ಉತ್ತಮಪಡಿಸಲು ಯೋಜನೆಗಳನ್ನು ರೂಪಿಸುವ ಮೂಲಕ ಹರಿಜನರನ್ನು ಇತರ ಕೋಮುಗಳ ಮಟ್ಟಕ್ಕೆ ತರಲು ಸಾಧ್ಯವಾಗುತ್ತದೆ. ಆದ್ದರಿಂದ ಈ ರೀತಿಯ ಯೋಜನೆಗಳನ್ನು ರೂಪಿಸುತ್ತೀರಾ? ಹರಿಜನರ ಅತ್ಯಂತ ಅವಶ್ಯಕವಾದ ಶಿಕ್ಷಣಕ್ಕೆ ಯೋಜನೆ ತಯಾರಿಸುತ್ತೀರಾ? ಪ್ರಾಂತೀಯ ಸರ್ಕಾರದಲ್ಲಿ ಹರಿಜನರ ಕಲ್ಯಾಣಕ್ಕಾಗಿ ಸ್ವಲ್ಪ ಹಣವನ್ನು ಮೀಸಲಿಡುತ್ತೀರಾ? ಎನ್ನುವ ಅತಿ ಮುಖ್ಯವಾದ ಪ್ರಶ್ನೆಗಳನ್ನು ಹಾಕಿದರು. ಪ್ರತಿಯೊಂದು ಪ್ರಾಂತ್ಯ ಹಾಗೂ ಕೇಂದ್ರದಲ್ಲಿ ಅಸ್ಪೃಶ್ಯರ ಹಿತಾಸಕ್ತಿಗಳನ್ನು ರಕ್ಷಿಸಲು ಒಬ್ಬ ದಲಿತ ಮಂತ್ರಿ ನೇಮಕ ಮಾಡಬೇಕು. ಆತ ಹರಿಜನರ ಉದ್ಧಾರಕ್ಕಾಗಿ ಕೆಲಸ ಮಾಡುತ್ತಾನೆ.

ಕೊನೆಯದಾಗಿ ಈ ವಿಧಿಯು ಹರಿಜನರ ಒಳಗಿರುವ ಉಪಜಾತಿಗಳ ನಡುವೆ ಎಲ್ಲಾ ವಿಷಯದಲ್ಲೂ ಭಿನ್ನಾಭಿಪ್ರಾಯ ತರುತ್ತದೆ. ಪ್ರಾಂತ್ಯಗಳಲ್ಲಿ ಹೆಚ್ಚಿನ ಜನಸಂಖ್ಯೆ ಇರುವ ಹರಿಜನರನ್ನು ಬಿಟ್ಟು ಅಲ್ಪಸಂಖ್ಯಾತ ಉಪಜಾತಿಯೊಂದಕ್ಕೆ ಸವರ್ಣೀಯರು ಬೆಂಬಲ ನೀಡುತ್ತಾರೆ. ಹಾಗಾಗಿ ಬಹುಸಂಖ್ಯಾತ ಹರಿಜನರನ್ನು ಹತ್ತಿಕ್ಕಿದಂತಾಗುತ್ತದೆ. ಆದ್ದರಿಂದ ಹರಿಜನರಲ್ಲಿ ಪ್ರತಿಯೊಂದು ಉಪಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನ ಮೀಸಲಿಡಬೇಕು. ಇದಕ್ಕೆ ಬಾಂಬೆ ಶಾಸಕಾಂಗವನ್ನು ಉದಾಹರಣೆಯಾಗಿ ಕೊಡುತ್ತಾರೆ. ಈ ಮಾದರಿಯಲ್ಲಿ ವಿಧಿಯನ್ನು ತಿದ್ದುಪಡಿ ಮಾಡದೆ ಹೋದರೆ ಹರಿಜನರು ಮುಂದುವರಿಯುವುದಕ್ಕೆ ಬದಲಾಗಿ ಹಿಂದುಳಿಯುತ್ತಾರೆ. ಈ ವಿಧಿಯಿಂದ ದೇಶಕ್ಕೆ ಪ್ರಯೋಜನವಾಗುತ್ತದೆಯೋ ಅಥವಾ ಕಾಂಗ್ರೆಸ್ ಸರ್ಕಾರಕ್ಕೋ ಅಥವಾ ಹರಿಜನರಿಗೋ ಎಂಬುದು ತಿಳಿಯುತ್ತಿಲ್ಲ. ಅದು ಏನೇ ಆದರೂ ಸಹ ನಾನು ಈ ವಿಧಿಯನ್ನು ಬೆಂಬಲಿಸುತ್ತೇನೆ ಎಂದರು.[85]

ವಾದವಿವಾದಗಳನ್ನು ಪರಿಶೀಲಿಸಿದ ಕರಡು ರಚನಾಸಮಿತಿಯು ಕೆಲವು ತಿದ್ದುಪಡಿಗಳನ್ನು ಈ ವಿಧಿಯಲ್ಲಿ ಸೇರಿಸಿತು. ಈ ವಿವರ ಕೆಳಗಿನಂತಿದೆ.

---

[85] Ibid, 666-670.

294(1): ಪ್ರತಿ ರಾಜ್ಯದ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಅಸ್ಸಾಂ ರಾಜ್ಯದ ಪರಿಶಿಷ್ಟ ಪಂಗಡದವರನ್ನು ಹೊರತುಪಡಿಸಿ ಸ್ಥಾನ ಮೀಸಲಿಡುವುದು ಮೊದಲನೇ ಷೆಡ್ಯೂಲ್ ಭಾಗ 1 ಮತ್ತು 3ರಲ್ಲಿ ಸಮಯಕ್ಕೆ ಅನುಗುಣವಾಗಿ ಗುರುತಿಸಲಾಗಿದೆ.

294(2): ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳ ಶಾಸಕಾಂಗದಲ್ಲಿ ಸ್ಥಾನ ಮೀಸಲಿಡುವುದು.

294(3): ಯಾವುದೇ ರಾಜ್ಯದ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.

294(3.1): ಪ್ರತಿ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಸಂಬಂಧಪಟ್ಟ ರಾಜ್ಯಗಳ ವಿಧಾನಸಭೆಗೆ ಸ್ಥಾನ ಮೀಸಲಿಡುವುದು.

294(4): ಅಸ್ಸಾಂನ ಸ್ವಾಯತ್ತ ಜಿಲ್ಲೆಗಳ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣಕ್ಕಿಂತ ಕಡಿಮೆ ಇಲ್ಲದಂತೆ ಸ್ಥಾನ ಮೀಸಲಿಡುವುದು.

294(5): ಅಸ್ಸಾಂನ ಸ್ವಾಯತ್ತ ಜಿಲ್ಲೆಯ ಮೀಸಲುಕ್ಷೇತ್ರಗಳು ಬೇರೆ ಪ್ರದೇಶದ ಗ್ರಾಮಗಳನ್ನು ಹೊಂದಿರಬಾರದು(Contonment Board ಮತ್ತು ಶಿಲ್ಲಾಂಗ್ ಮುನ್ಸಿಪಾಲಿಟಿ ಬಿಟ್ಟು).

294(6): ಅಸ್ಸಾಂನ ಸ್ವಾಯತ್ತ ಜಿಲ್ಲೆಯ ಪರಿಶಿಷ್ಟ ಪಂಗಡ ಸದಸ್ಯನಲ್ಲದವನು ರಾಜ್ಯದ ಯಾವುದೇ ವಿಧಾನಸಭಾ ಕ್ಷೇತ್ರದಿಂದ ಬೇಕಾದರೂ ಸ್ಪರ್ಧಿಸಬಹುದು(Contonment Board ಮತ್ತು ಶಿಲ್ಲಾಂಗ್ ಮುನ್ಸಿಪಾಲಿಟಿ ಬಿಟ್ಟು).

294ನೇ ವಿಧಿಯನ್ನು ಮೇಲಿನ ತಿದ್ದುಪಡಿಗಳೊಂದಿಗೆ ಆ ದಿನವೇ ಸಂವಿಧಾನಕ್ಕೆ ಸೇರಿಸಲಾಯಿತು.[86]

**ಕರಡುವಿಧಿ 295ಎ**

ಡಾ. ಬಿ.ಆರ್. ಅಂಬೇಡ್ಕರ್ ಅವರು ಆಗಸ್ಟ್ 24, 1949ರಂದು ಕೆಳಕಂಡ 295ಎ ಕರಡುವಿಧಿಯನ್ನು ಸದನದಲ್ಲಿ ಮಂಡಿಸಿದರು. ಈ ವಿಧಿಯ ವಿವರಣೆ ಕೆಳಕಂಡಂತಿದೆ.

295ಎ: ಸಂವಿಧಾನ ಜಾರಿಯಾದ ದಿನದಿಂದ 10 ವರ್ಷಗಳವರೆಗೆ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.

[86] Ibid, 673-674.

ಡಾ. ಬಿ.ಆರ್. ಅಂಬೇಡ್ಕರ್ ಅವರು ಕರಡುವಿಧಿ ಮಂಡಿಸಿದ ಮೇಲೆ ಈ ವಿಧಿ ಕುರಿತಂತೆ ಹೆಚ್ಚಿನ ವಿವರಣೆ ಕೊಡುವ ಅಗತ್ಯವಿಲ್ಲ. ಏಕೆಂದರೆ, ಸದನದಲ್ಲಿ ಮುಕ್ತ ಚರ್ಚೆಯೊಂದಿಗೆ ಈ ವಿಧಿಯು ತೀರ್ಮಾನಕ್ಕೆ ನಿಂತಿದೆ ಎಂದು ತಿಳಿಸಿದರು.[87]

**ಅ. ವಿಧಿಯ ಪರವಾದ ಸದಸ್ಯರ ಚರ್ಚೆಗಳು**

**ಮುನಿಸ್ವಾಮಿ ಪಿಳ್ಳೈ:** ಸಂಸತ್ತು ನೀಡಿರುವ 10 ವರ್ಷಗಳ ಮೀಸಲಾತಿಯು ಕುದುರೆಯ ಮುಂದೆ ಗಾಡಿ ಕಟ್ಟಿದಂತಿದೆ. ಪರಿಶಿಷ್ಟರ ಸ್ಥಿತಿಯು 10 ವರ್ಷಗಳಲ್ಲಿ ಸುಧಾರಿಸದಿದ್ದರೆ, ಅವರಿಗೆ ನೀಡಿರುವ ಮೀಸಲಾತಿ ಅವಧಿ ಮುಂದುವರಿಸಬೇಕು. 1947ರಲ್ಲಿ ಸಲಹಾಸಮಿತಿ ತನ್ನ ವರದಿಯಲ್ಲಿ ಅಸ್ಪೃಶ್ಯರ ಸ್ಥಿತಿ ಕುರಿತು ಅವಲೋಕಿಸದೆ ಕೇಂದ್ರ ಅಥವಾ ಪ್ರಾಂತೀಯ ಸರ್ಕಾರಗಳಿಗೆ ಕೆಲವು ಸಲಹೆ ನೀಡಿತ್ತು. ಆ ವರದಿಯಲ್ಲಿ ಹೆಚ್ಚಿನದೇನೂ ಮಾಡದೆ ತೀರ್ಮಾನ ಕೈಗೊಂಡರು. ಸಂವಿಧಾನ ರಚನಾಸಮಿತಿಯು ಸಹ ಆ ಒಂದು ನಡಾವಳಿ ಅಳವಡಿಸಿಕೊಂಡಿತು. ಆ ಸಂದರ್ಭದಲ್ಲಿ ಎಲ್ಲ ಸದಸ್ಯರು ಅಸ್ಪೃಶ್ಯರ ಬಗ್ಗೆ ಅನುಕಂಪ ಇರುವ ಹಾಗೇ ಹರಿಜನರ ಕಲ್ಯಾಣಕ್ಕೆ ನಡೆವಳಿ ರೂಪಿಸುತ್ತೇವೆ ಎಂದು ಆಶ್ವಾಸನೆ ನೀಡಲಾಯಿತು. ಆದರೆ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ.

ಮೀಸಲಾತಿಯ 10 ವರ್ಷದಲ್ಲಿ ಅಸ್ಪೃಶ್ಯರ ಕಲ್ಯಾಣಕ್ಕಾಗಿ ಸುಭದ್ರ ಯೋಜನೆ ರೂಪಿಸಬೇಕು ಮತ್ತು ಅವರ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವರ ಖಾತೆ ತೆರೆಯುವ ಮೂಲಕ ಹರಿಜನರ ಕಲ್ಯಾಣಕ್ಕೆ ಆಸಕ್ತಿ ತೋರಬೇಕು. ಈ ಕಾರ್ಯವನ್ನು ಸರ್ಕಾರ ಕೈಗೊಂಡಿದ್ದಾದರೆ ಹರಿಜನರ ಅಭಿವೃದ್ಧಿ ಸಾಧ್ಯವಾಗುತ್ತದೆ. ಪ್ರಗತಿಪರ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳದೆ ಹೋದರೆ ಈ ಸದನದಲ್ಲಿ ಚರ್ಚೆ ಮಾಡಿದ್ದು ಸಹ ವ್ಯರ್ಥವಾಗುತ್ತದೆ. ಮೀಸಲಾತಿಯ ಅವಧಿಯನ್ನು ಮುಂದುವರಿಸಬೇಕು ಎಂಬ ತಿದ್ದುಪಡಿಯನ್ನು ಸಭೆಯು ಅಂಗೀಕರಿಸುತ್ತದೆ ಎನ್ನುವ ಆಶಾಭಾವನೆಯೊಂದಿಗೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ಮಸೂದೆಗೆ ಬೆಂಬಲ ಸೂಚಿಸಿದರು.[88]

**ಡಾ. ಮೋಹನ್ ದಾಸ್:** ನಾನು ಸೂಚಿಸುವ ತಿದ್ದುಪಡಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಯು 10 ವರ್ಷ ಮುಗಿದ ನಂತರ ಅಸ್ಪೃಶ್ಯರ ಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಾಗದಿದ್ದರೆ ಸಂಸತ್ತು ರಾಜಕೀಯ ಮೀಸಲಾತಿಯನ್ನು ಕೆಲವು ಅವಧಿಯವರೆಗೆ

[87] Ibid, 674.
[88] Ibid, 680-681.

ವಿಸ್ತರಿಸಬೇಕು. ಸದನದ ಬಹುಸಂಖ್ಯಾತರು ಅಸ್ಪೃಶ್ಯರ ಮೀಸಲಾತಿಗೆ ವಿರುದ್ಧವಾಗಿದ್ದಾರೆ. ಈ ವಿಧಿಯು ಮಿಲಿಯನ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಭವಿಷ್ಯ ನಿರ್ಧರಿಸುವುದರಿಂದ ಮಹತ್ವ ಹೊಂದಿದೆ. ಗೌರವಾನ್ವಿತ ಸದಸ್ಯರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿ ಈ ಅವಧಿಯಲ್ಲಿ ಎಷ್ಟು ಪ್ರಗತಿ ಹೊಂದುತ್ತದೆ? ಈ ಸಮುದಾಯಗಳಿಗೆ ನೀಡಿರುವ ರಾಜಕೀಯ ರಕ್ಷಣೆ ವಿಸ್ತರಿಸುವ ಅವಶ್ಯಕತೆ ಇಲ್ಲವೇ ಸಾಮಾಜಿಕ ಅನಿಷ್ಟಗಳಿಂದ ಶೋಷಣೆಗೆ ಒಳಗಾಗಿರುವ ಅಸ್ಪೃಶ್ಯರು ಈ ಮೀಸಲಾತಿ ಅವಧಿಯಲ್ಲಿ ಪ್ರಗತಿ ಕಾಣುತ್ತಾರಾ? ಎಂದು ಪ್ರಶ್ನೆ ಹಾಕುವ ಮೂಲಕ ಈ ವಿಚಾರಗಳನ್ನು ಖಚಿತಪಡಿಸಬೇಕೆಂದು ಸದಸ್ಯರಿಗೆ ಕೇಳಿದರು.

ನೆನ್ನೆ ಮಾತನಾಡಿದ ಭ್ರಜೇಂದ್ರಪ್ರಸಾದ್ ಅವರಿಗೆ ಪ್ರತಿಕ್ರಿಯಿಸುತ್ತಾ ಶ್ರೀಯುತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಕಾಳಜಿ ಉಳ್ಳವರಾಗಿದ್ದಾರೆ. ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗದಲ್ಲಿ ಕೆಲವು ಸ್ಥಾನಗಳನ್ನು ಮೀಸಲಿರಿಸುವುದರಿಂದ ಅವರ ಮೇಲಿನ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಶೋಷಣೆಗಳನ್ನು ತಡೆಯಬಹುದು ಎಂದು ತಿಳಿಸಿದರು. ಭ್ರಜೇಂದ್ರಪ್ರಸಾದ್ ಅವರು "ಒಂದು ನೆನಪು ಮಾಡಿಕೊಳ್ಳಬೇಕು. ಸದನದ ಸದಸ್ಯರಲ್ಲಿ ಎಷ್ಟು ಬಾರಿ ಕೆಲವು ತೀರ್ಮಾನಗಳನ್ನು ಪುನರ್ ಪರಿಶೀಲಿಸಿಕೊಂಡಿದ್ದೇವೆ. ಇವುಗಳನ್ನು ಕುರಿತು ಡಾ. ಅಂಬೇಡ್ಕರ್ ಅವರು ಎಷ್ಟು ಬಾರಿ ಸಭೆಯ ಸದಸ್ಯರಿಗೆ ಅರ್ಥೈಸಿದ್ದಾರೆ. ಶೋಷಣೆ ಎಂಬುದು ಅಸ್ಪೃಶ್ಯ ನಾಯಕರಿಗೆ ತಮ್ಮ ಮೇಲೆ ಆದ ಸ್ವತಃ ಅನುಭವದಿಂದ ತಿಳಿದಿರುತ್ತದೆ" ಎಂಬ ಸೂಕ್ಷ್ಮತೆಯನ್ನು ಹೊರಗೆಡವಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕೆಲವೇ ಕೆಲವು ಸ್ಥಾನಗಳನ್ನು ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗದಲ್ಲಿ ಕೊಡಬೇಕೆಂಬ ನಿಲುವಿಗೆ ಸದನದ ಸದಸ್ಯರಾದ ನೀವು ಏಕೆ ಅಂಟಿಕೊಂಡಿದ್ದೀರಾ? ಈ ಸದನ 300ಕ್ಕಿಂತ ಹೆಚ್ಚಿನ ಸದಸ್ಯರನ್ನು ಒಳಗೊಂಡಿದೆ. 30ರಿಂದ 40 ಜನ ಮಾತ್ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರನ್ನು ಹೊಂದಿರಬಹುದು. ನಾವು ನಿಮಗೆ ಅನಾನುಕೂಲವಾಗುವ ರೀತಿಯಲ್ಲಿ ಎಂದಾದರೂ ನಡೆದುಕೊಂಡಿದ್ದೇವೆಯೇ ಎಂಬ ಪ್ರಶ್ನೆಗಳನ್ನು ಸದಸ್ಯರಿಗೆ ಹಾಕಿದರು. ಅಸ್ಪೃಶ್ಯರ ಹಿತಾಸಕ್ತಿ ನಡಾವಳಿಗಳು ಸದನದ ಮುಂದೆ ಬಂದರೆ ಸದನದ ತೀರ್ಮಾನದ ಮುಂದೆ ಸೋತ ಪ್ರಸಂಗಗಳೇ ಹೆಚ್ಚು. ಆದ್ದರಿಂದ ನಾವು ನಿಮಗೆ ಅಂಥದ್ದೇನು ಮಾಡಿದ್ದೇವೆ. ನೀವು

ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಅವರು ನಿಮ್ಮನ್ನು ಬಲಪಡಿಸುತ್ತಾರೆ. ಆದ್ದರಿಂದ ದಯಮಾಡಿ ನಿಮ್ಮ ದೃಷ್ಟಿಕೋನ ಬದಲಾಯಿಸಿಕೊಳ್ಳಬೇಕೆಂದು ತಿಳಿಸಿದರು. ಕೊನೆಯದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಅವಧಿ ಮುಂದುವರಿಸಬೇಕು, ಇಲ್ಲದಿದ್ದರೆ ಬಹುಸಂಖ್ಯಾತ ದಮನಿತರನ್ನು ಸರ್ಕಾರ ಎದುರು ಹಾಕಿಕೊಳ್ಳುತ್ತದೆ. ನಂತರದಲ್ಲಿ ಅಸ್ಪೃಶ್ಯರ ರಾಜಕೀಯ ಭವಿಷ್ಯದ ಬಗ್ಗೆ ಅವರೇ ತೀರ್ಮಾನಿಸಬೇಕಾಗುತ್ತದೆ. ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರು ಹಸ್ತ ಇಡುತ್ತಾರೆ ಎಂದು ಪ್ರಸ್ತುತ ಸಂದರ್ಭದ ಅಸ್ಪೃಶ್ಯರ ಪರಿಸ್ಥಿತಿಯನ್ನು ಸಭೆ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.[89]

**ಪಂಡಿತ್ ಠ್ಯಾಕುರ್‌ದಾಸ್ ಭಾರ್ಗವ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಿರುವಂತೆ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ನಾಮಕರಣ ಪದ್ಧತಿ ಕೊಡಲಾಗಿದೆ. ಆದರೆ ಅವರ ಮೀಸಲಾತಿಯ ಅವಧಿಯನ್ನು 10 ವರ್ಷಕ್ಕೆ ಮಿತಿಗೊಳಿಸಬಾರದು. ಅಸ್ಪೃಶ್ಯರ ಸಮಸ್ಯೆ ಆಂಗ್ಲೋ ಇಂಡಿಯನ್ ಸಮುದಾಯಕ್ಕಿಂತ ಭಿನ್ನವಾಗಿದೆ. ಆದ್ದರಿಂದ ಅವರಿಗೆ ಹೆಚ್ಚಿನ ಪ್ರಮಾಣದ ಪ್ರಾತಿನಿಧ್ಯತೆ ಕೊಡುವ ವಿಚಾರದಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ನಾನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಅವರಿಗೆ ಮನೆ ಮಾಲೀಕತ್ವದ ಹಕ್ಕನ್ನು ನೀಡಿ, ಅವರಿಗೆ ಮೂಲಭೂತ ಹಕ್ಕುಗಳನ್ನು ಅನುಭವಿಸುವ ಪೂರಕ ವಾತಾವರಣ ನೀಡಬೇಕು. ಅದೇ ರೀತಿ ಸಂವಿಧಾನ ಜಾರಿಗೆ ಬರುವ ಮೊದಲು ಪರಿಸ್ಥಿತಿ ಅವಲೋಕಿಸಲು ಆಯೋಗಗಳನ್ನು ರಚನೆ ಮಾಡಬೇಕು. ಈ ಆಯೋಗಗಳು ನೀಡಿದ ವರದಿ ಸರಿಯಾಗಿ ಅನುಷ್ಠಾನಗೊಂಡಿದೆಯೇ ಎಂಬುದನ್ನು ಸರ್ಕಾರ ನೋಡಿಕೊಳ್ಳಬೇಕು. ಆದ್ದರಿಂದ ಸಭೆಯಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ ಅಸ್ಪೃಶ್ಯರಿಗೆ ಸಂಬಂಧಿಸಿದ ಕಾಯ್ದೆಗಳನ್ನು ಪಾಸು ಮಾಡುವುದು ನಮ್ಮ ಕರ್ತವ್ಯ. ಆದ್ದರಿಂದ ನಮ್ಮ ಸಹೋದರರಿಗೆ ಪೂರಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.[90]

**ಚಂದ್ರಿಕಾರಾಮ್:** ಡಾ. ಅಂಬೇಡ್ಕರ್ ಅವರು ಮಂಡಿಸಿದ ಕರಡು ವಿಧಿಗೆ ಬೆಂಬಲ ವ್ಯಕ್ತಪಡಿಸಿ ಪರಿಶಿಷ್ಟ ಜಾತಿಯವರಿಗೆ ನೀಡಿರುವ 10 ವರ್ಷ ಮೀಸಲಾತಿ ಅವಧಿಯು ತುಂಬ ಕಡಿಮೆ. ಈ ಅಲ್ಪ ಅವಧಿಯಲ್ಲಿ ಅವರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಿಲ್ಲ. ಏಕೆಂದರೆ ಕೇಂದ್ರ

[89] Ibid, 682-685.
[90] Ibid, 694.

ಮತ್ತು ಪ್ರಾಂತೀಯ ಸರ್ಕಾರಗಳಿಗೆ ವಹಿಸಿದ ಕಾರ್ಯ ಸರಿಯಾಗಿ ನಿಭಾಯಿಸುವುದಿಲ್ಲ. ಸುಮಾರು 15 ವರ್ಷಗಳ ಸ್ವಂತ ಅನುಭವದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ತುಳಿತಕ್ಕೆ ಒಳಗಾದ ಜನರನ್ನು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಮೇಲೆತ್ತುವ ಕೆಲಸ ಮಾಡಿಲ್ಲ. ಆದ್ದರಿಂದ ಮೀಸಲಾತಿಯ ಅವಧಿ 10 ವರ್ಷಗಳಿಗೆ ಮಿತಿಗೊಳಿಸದೇ ಅವರು ಎಲ್ಲಿಯವರೆಗೆ ಇಷ್ಟಪಡುತ್ತಾರೋ ಅಲ್ಲಿಯವರೆಗೆ ವಿಸ್ತರಿಸಬೇಕು ಎಂದರು. ಪರಿಶಿಷ್ಟ ಜಾತಿಯ ಕಲ್ಯಾಣಕ್ಕಾಗಿ ಒಬ್ಬ ಮಂತ್ರಿ ನೇಮಕ ಮಾಡಬೇಕು. ಆ ಮುಖೇನ ಅವರ ಸ್ಥಿತಿಯಲ್ಲಿ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ. ಅಸ್ಪೃಶ್ಯರ ಕಲ್ಯಾಣ ಸಾಧಿಸಲು ಪ್ರತಿ ವರ್ಷದ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು. ಆ ಮೂಲಕ ಅಸ್ಪೃಶ್ಯರ ಪರ ಹೆಚ್ಚು ಯೋಜನೆಗಳನ್ನು ರೂಪಿಸಿ ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು. ಅಸ್ಪೃಶ್ಯತೆ ಆಚರಣೆಯ ವಿರುದ್ಧವಾಗಿ ಪ್ರಾಂತ್ಯ ಹಾಗೂ ಕೇಂದ್ರ ಸರ್ಕಾರ ಕಾನೂನು ರೂಪಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಸುಮಾರು 30 ವರ್ಷಗಳಿಂದ ಗಾಂಧಿ ಮತ್ತು ಇತರರು ಅಸ್ಪೃಶ್ಯತೆ ನಿವಾರಣೆಗಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಆದರೆ ಗಣನೀಯ ಪ್ರಗತಿ ಕಾಣಲು ಸಾಧ್ಯವಾಗಲಿಲ್ಲ ಎಂಬ ಪ್ರಮುಖ ಅಂಶವನ್ನು ಸಭೆಯು ಅರ್ಥ ಮಾಡಿಕೊಂಡಾಗ ಅಸ್ಪೃಶ್ಯರ ಏಳಿಗೆಗಾಗಿ ಕಾನೂನು ರಚಿಸುವುದಕ್ಕೆ ಬಹುಶಃ ಸುಲಭವಾಗುತ್ತದೆ. ಸಾಮಾಜಿಕ ಸಮಾನತೆ ಜಾರಿಗೆ ತರುವ ಕೆಲಸದಲ್ಲಿ ಆತುರದ ನಿರ್ಧಾರ ಕೈಗೊಳ್ಳದೆ ಮೊದಲು ಎಲ್ಲರೂ ಸಾಮಾಜಿಕ ಪರಿವರ್ತನೆಯ ಕೆಲಸ ಮಾಡಲು ಸರ್ಕಾರ ಪ್ರಯತ್ನ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆಯ ಆಚರಣೆ ಹೆಚ್ಚಾಗಿದೆ. ಅದೇ ನಗರಪ್ರದೇಶದಲ್ಲಿ ಸ್ವಲ್ಪ ಸುಧಾರಣೆ ಕಂಡಿದೆ. ಕಾರಣ ನಗರಪ್ರದೇಶದ ಜನರು ಶಿಕ್ಷಿತರಾಗಿದ್ದಾರೆ. ಆದ್ದರಿಂದ ಶಿಕ್ಷಣಕ್ಷೇತ್ರಕ್ಕೆ ಸರ್ಕಾರ ಹೆಚ್ಚು ಒತ್ತು ಕೊಡುವ ಮೂಲಕ ಅಕ್ಷರಸ್ಥರ ಸಂಖ್ಯೆ ಹೆಚ್ಚಿಸಿ ಸಮಾಜದಲ್ಲಿ ಜಟಿಲವಾಗಿರುವ ಮೌಢ್ಯತೆ, ಕಂದಾಚಾರಗಳನ್ನು, ನಿರ್ನಾಮ ಮಾಡಬಹುದು. ಇದರಿಂದ ಹಿಂದೂ ಧರ್ಮದಲ್ಲಿ ಆಚರಣೆಯಲ್ಲಿರುವ ಆಸ್ಪೃಶ್ಯತೆ ನಿರ್ಮೂಲನೆಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದನ್ನು ಸಭೆಗೆ ಮನವರಿಕೆ ಮಾಡಿದರು. ಕೇಂದ್ರ ಸರ್ಕಾರ ಅಸ್ಪೃಶ್ಯರಿಗಾಗಿ ಒಂದು ಆಯೋಗ ಅಥವಾ ಸಮಿತಿ ನೇಮಿಸಿ ಅಸ್ಪೃಶ್ಯರ ಪರವಾಗಿರುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಹೊಂದಲು ಯೋಜನೆಗಳನ್ನು ಒಳಗೊಂಡ ಒಂದು ವರದಿ ಸಲ್ಲಿಸಬೇಕು. ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ವರದಿಯ ಆಧಾರದ ಮೇಲೆ ಯೋಜನೆಗಳನ್ನು ರೂಪಿಸಬೇಕು. ಇಲ್ಲಿ ಅತಿ ಮುಖ್ಯವಾದ ವಿಷಯವೇನೆಂದರೆ ಸರ್ಕಾರದ ನಿಧಿ ಸಮರ್ಪಕವಾಗಿ ಅಸ್ಪೃಶ್ಯರ ಕಲ್ಯಾಣಕ್ಕೆ ಖರ್ಚು ಮಾಡಬೇಕು ಎನ್ನುವ ನಿಲುವುಗಳೊಂದಿಗೆ

ಸರ್ಕಾರ ಅಸ್ಪೃಶ್ಯರ ಪರವಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ರೂಪಿಸುತ್ತದೆ ಎನ್ನುವ ಆಶಾಭಾವನೆಯಿಂದ ಮಾತನ್ನು ಕೊನೆ ಮಾಡಿದರು.[91]

**ಜಗತ್ ನರೀನ್ ಲಾಲ್:** ಚಂದ್ರಿಕಾರಾಮ್ ಅವರ ಮಾತಿಗೆ ಬೆಂಬಲ ಸೂಚಿಸಿ ಹಿಂದಿನ ಸರ್ಕಾರಗಳು ನೇಮಕ ಮಾಡಿದ ಆಯೋಗ ಅಥವಾ ಸಚಿವರು ಅವರ ಕರ್ತವ್ಯ ಸರಿಯಾಗಿ ನಿರ್ವಹಿಸಿಲ್ಲ. ಅಸ್ಪೃಶ್ಯರು ದೇಶದ ನಿಜವಾದ ರಾಷ್ಟ್ರೀಯವಾದಿಗಳು ಅವರನ್ನು ಈ ಸಮಾಜ ಸಹೋದರರರಂತೆ ನಡೆಸಿಕೊಳ್ಳುತ್ತಿಲ್ಲ. ದೇಶದಲ್ಲಿ ಅಸ್ಪೃಶ್ಯರು ಪಡುತ್ತಿರುವ ಕಷ್ಟಗಳು ಕೆಲವು ಭಾಗಗಳಲ್ಲಿ ಮಾತ್ರ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 10 ವರ್ಷಗಳ ಮೀಸಲಾತಿಯ ಅವಧಿ ವಿಸ್ತರಿಸದೆ ಈ ಅವಧಿಯನ್ನು ತುಂಬಾ ಗಂಭೀರವಾಗಿ ಪರಿಗಣಿಸಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಅವರ ಆಸೆ ಆಶೋತ್ತರಗಳು ಈಡೇರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರತಿ 2 ವರ್ಷಕ್ಕೊಮ್ಮೆ ರಾಜ್ಯ ಸರ್ಕಾರಗಳು ಹರಿಜನರ ಕಲ್ಯಾಣಕ್ಕೆ ಯಾವ ಯೋಜನೆಗಳನ್ನು ಹಮ್ಮಿಕೊಂಡಿವೆ ಎಂಬುದನ್ನು ಪರಿಶೀಲನೆ ಮಾಡಬೇಕು. ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಒಟ್ಟಿಗೆ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಬೇಕು. ಉದ್ದೇಶಿತ ಮೀಸಲಾತಿ ಅವಧಿ 10 ವರ್ಷಗಳಿಗೆ ಮಾತ್ರ ಸೀಮಿತವಾಗಬೇಕು. ಅದನ್ನು ಯಾವುದೇ ಕಾರಣಕ್ಕೂ ಮುಂದುವರಿಸಬಾರದು ಎಂಬುದನ್ನು ಬೆಂಬಲಿಸುತ್ತೇನೆ.[92]

**ಉಪೇಂದ್ರನಾಥ್ ಬರ್ಮನ್:** ಡಾ. ಅಂಬೇಡ್ಕರ್ ಅವರು ಮಂಡಿಸಿದ ಕರಡುವಿಧಿಗೆ ಬೆಂಬಲ ಸೂಚಿಸಿ, ಮೀಸಲಾತಿಯ ಅವಧಿ 10 ವರ್ಷಗಳಿಗೆ ನಿಗದಿಗೊಳಿಸಿರುವುದು ಸರಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿಯ ಸಹೋದರರು ಮುಂದುವರಿದ ಕೋಮಿನವರೊಂದಿಗೆ ಸಹಕರಿಸುವ ಮೂಲಕ ನ್ಯಾಯ ಪಡೆಯಬಹುದು. ಎಲ್ಲರಿಗೂ ಸಾರ್ವತ್ರಿಕ ಮತದಾನ ಹಕ್ಕನ್ನು ನೀಡಿದ್ದಾರೆ. ಆ ಮೂಲಕ ತಮ್ಮ ಪ್ರತಿನಿಧಿ ಮತ್ತು ಸರ್ಕಾರ ಆಯ್ಕೆ ಮಾಡುವ ಮೂಲಕ ನ್ಯಾಯ ಪಡೆಯಬಹುದು.

ಪರಿಶಿಷ್ಟ ಜಾತಿಯವರು 1932ರಿಂದ ಪ್ರತ್ಯೇಕ ಕೋಮುಗಳಾಗಿ ಗುರುತಿಸಲ್ಪಟ್ಟಿದ್ದಾರೆ. ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಅಂದಿನ ಸರ್ಕಾರ ಕೆಲವೊಂದು ಅವಕಾಶಗಳನ್ನು ನೀಡಿತ್ತು. 1935ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ಬಂದ ಮೇಲೆ ಅವರ ಕಲ್ಯಾಣಕ್ಕಾಗಿ

[91] Ibid, 689-691.

[92] Ibid, 691-692.

ಅನೇಕ ಯೋಜನೆಗಳನ್ನು ರೂಪಿಸಿತ್ತು. 1935 ಕಳೆದು ಒಂದು ದಶಕವೇ ಕಳೆದಿದೆ. ಅವರು ಯಾವ ಪ್ರಗತಿಯನ್ನು ಕಾಣಲಿಲ್ಲ. ನಿಜವಾಗಿ ನಮ್ಮಲ್ಲಿ ಅಸ್ಪೃಶ್ಯರ ಮೇಲೆ ಕರುಣೆ ಇಲ್ಲ. ನಮ್ಮಲ್ಲಿ ಇರುವುದು ಕೇವಲ ಗಂಟಲು ಮೇಲಿನ ಕರುಣೆ. ನಮ್ಮ ದೇಶದಲ್ಲಿ ಇನ್ನು 20 ವರ್ಷಗಳಾದರೂ ಅಸ್ಪೃಶ್ಯರ ಬಗ್ಗೆ ಇದೇ ತಾತ್ಸಾರ ಭಾವನೆ ಮುಂದುವರಿದರೆ ಅವರ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಸಾಧ್ಯವಿಲ್ಲ ಎಂಬುದನ್ನು ಮುಂದುವರಿದ ಸಮುದಾಯ ಅರ್ಥ ಮಾಡಿಕೊಳ್ಳಬೇಕು. ನಾವು ನಮ್ಮ ಅಸ್ಪೃಶ್ಯ ಅಣ್ಣ ತಮ್ಮಂದಿರಿಗೆ ಬಹಳ ಹಿಂದಿನಿಂದಲೂ ಅನ್ಯಾಯ ಮಾಡಿದ್ದೇವೆ. ಆದರೆ ಈಗ ನಾವು ಅವರಿಗೆ ಸಹಾಯ ಮಾಡುವುದು ನಮ್ಮ ಆದ್ಯ ಕರ್ತವ್ಯ. ಈ ಸತ್ಯವನ್ನು ಎಲ್ಲರೂ ತಿಳಿದುಕೊಂಡಾಗ ಅವರ ಕಲ್ಯಾಣ ಸಾಧ್ಯ ಎಂದು ತಿಳಿಸಿದರು.[93]

### ಆ. ವಿಧಿಯ ವಿರುದ್ಧ ಚರ್ಚೆಗಳು

**ಯುಧಿಷ್ಠಿರ ಮಿಶ್ರ:** ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯ ಅವಧಿ 10 ವರ್ಷಗಳು ಎಂಬುದನ್ನು ತೆಗೆದುಹಾಕಬೇಕು ಹಾಗೂ ಪರಿಶಿಷ್ಟ ಪಂಗಡಗಳ ಸಲಹಾಮಂಡಳಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಆಡಳಿತಾತ್ಮಕ ವಿಷಯ ಮತ್ತು ಪಂಗಡದ ಜನರ ಕಲ್ಯಾಣ ಮಾಡಬೇಕೆಂದು ಸೂಚಿಸುತ್ತದೆ. 3/4ರಷ್ಟು ಸಮಿತಿ ಸದಸ್ಯರು ರಾಜ್ಯವಿಧಾನಸಭೆ ಪ್ರತಿನಿಧಿಗಳು ಅವರಿಗೆ ನೀವು ಮೀಸಲಾತಿ ಕೊಡದಿದ್ದರೆ ಸಂವಿಧಾನ ನೀಡಿರುವ ಅವಕಾಶಗಳನ್ನು ಅವರು ಹೇಗೆ ಜಾರಿಗೊಳಿಸಲು ಸಾಧ್ಯ ಎಂಬುದನ್ನು ಸಭೆ ಅರಿಯಬೇಕು. ಬುಡಕಟ್ಟು ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿರುವ ಕಾರಣದಿಂದ ಅವರಿಗೆ ಮೀಸಲಾತಿಯು ಅನಿವಾರ್ಯ ಮತ್ತು ಅಗತ್ಯವಿದೆ. ಅವರನ್ನು ನೀವು ಮೀಸಲಾತಿ ಸೌಲಭ್ಯದಿಂದ ಹೊರಗಿಟ್ಟರೆ ಅವರಲ್ಲಿ ಕೆಲವರು ಮಾತ್ರ ಶಾಸಕಾಂಗಕ್ಕೆ ಆಯ್ಕೆಯಾಗಲು ಸಾಧ್ಯ. ಈ ಮೀಸಲಾತಿ ಅವಧಿ 10 ವರ್ಷ ಮುಗಿದ ನಂತರ ಪರಿಶಿಷ್ಟ ವರ್ಗ ಹಿಂದುಳಿದಿರುವಿಕೆ ತಡೆಯಲು ನಾವು ಸಮರ್ಥರಾಗಿರುವುದಿಲ್ಲ. ಪಂಗಡದ ಜನರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಪರಿಶಿಷ್ಟ ಜಾತಿಯವರಿಗಿಂತ ಬಹಳ ಹಿಂದುಳಿದಿದ್ದಾರೆ. ಪರಿಶಿಷ್ಟ ಜಾತಿಯವರು ಶಾಸಕಾಂಗದಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಕಷ್ಟ. ಆದ್ದರಿಂದ ಪರಿಶಿಷ್ಟ ಪಂಗಡದವರ ಮಟ್ಟಿಗೆ 10 ವರ್ಷಗಳ

[93] Ibid, 692-694.

ಮೀಸಲಾತಿ ಅವಧಿ ತೆಗೆದುಹಾಕಿ, ಸಂವಿಧಾನ ಕರಡುಸಮಿತಿಯು ಈ ಮನವಿಯನ್ನು ತಿದ್ದುಪಡಿಯಲ್ಲಿ ಸೇರಿಸುತ್ತದೆ ಎಂಬ ಆಶಾಭಾವನೆ ಹೊಂದಿದ್ದೇನೆ ಎಂದರು.[94]

**ಜಡುಬಯನ್ಸ್ ಶಾಹಿ:** ಪರಿಶಿಷ್ಟ ಪಂಗಡ ಕುರಿತು ಮಾತನಾಡಿ ಯುಧಿಷ್ಠಿರ ಮಿತ್ರ ಅವರು ಪರಿಶಿಷ್ಟ ಪಂಗಡಗಳಿಗೆ 10 ವರ್ಷ ಮೀಸಲಾತಿ ಅವಧಿ ಮುಂದುವರಿಸಬೇಕು ಎಂಬುದಕ್ಕೆ ಬೆಂಬಲ ಸೂಚಿಸಿದರು. ಪರಿಶಿಷ್ಟ ಜಾತಿ ಕುರಿತು ಈಗಾಗಲೇ ಪ್ರಸ್ತಾಪಿಸಲಾಗಿದೆ. ಪರಿಶಿಷ್ಟ ಪಂಗಡಗಳನ್ನು ಅಸ್ಪೃಶ್ಯರ ದೃಷ್ಟಿಕೋನದಿಂದ ನೋಡಿದಾಗ ಯುಧಿಷ್ಠರ ಮಿಶ್ರ ಹೇಳಿದ್ದು ಸರಿಯಾಗಿದೆ. ಶತಶತಮಾನಗಳಿಂದ ಪಂಗಡದವರು ಹಿಂದುಳಿದಿರುವುದು ನಮಗೆಲ್ಲ ತಿಳಿದಿದೆ. ಅವರು ಯಾವ ಕ್ಷೇತ್ರದಲ್ಲೂ ಸಹ ಮುಂದುವರೆದಿಲ್ಲ. ಆದ್ದರಿಂದ 10 ವರ್ಷಗಳಲ್ಲಿ ಅವರ ಸ್ಥಿತಿ ಉತ್ತಮಪಡಿಸಲು ಸಾಧ್ಯವಿಲ್ಲ ಎಂಬುದನ್ನು ನನ್ನ ಸ್ನೇಹಿತರು ಮನಗಂಡು ಅವರ ಮೀಸಲಾತಿ ಅವಧಿ ಮುಂದುವರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ, ಇದು ಒತ್ತಾಯವಲ್ಲ ಎಂದರು.[95]

**ಇ. ಪರಿಶಿಷ್ಟ ಜಾತಿಯ ಕಲ್ಯಾಣಕ್ಕೆ ಸದಸ್ಯರು ನೀಡಿದ ಸಲಹೆಗಳು**

**ನಾಗಪ್ಪ:** ಈ ತಿದ್ದುಪಡಿ ಮಂಡಿಸುವ ಉದ್ದೇಶವೆಂದರೆ 10 ವರ್ಷಗಳ ಮೀಸಲಾತಿ ಅವಧಿ ಮುಂದುವರಿಸಬಾರದು. ಈ 10 ವರ್ಷಗಳ ಅವಧಿಯಲ್ಲಿ ಸರ್ಕಾರ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಿ ಅಭಿವೃದ್ಧಿಯಲ್ಲಿ ಹರಿಜನರನ್ನು ಇತರ ಜಾತಿಗೆ ಸರಿಸಮವಾಗಿ ತಂದು ನಿಲ್ಲಿಸಬೇಕು. ಕೆಲವು ಪ್ರಾಂತ್ಯಗಳಲ್ಲಿ ಅಸ್ಪೃಶ್ಯರ ಕಲ್ಯಾಣಕ್ಕಾಗಿ ಮಂತ್ರಿಗಳನ್ನು ನೇಮಕ ಮಾಡಲಾಗಿದೆ. ಆದರೆ ಕೇಂದ್ರ ಸರ್ಕಾರದಲ್ಲಿ ಮಾತ್ರ ಅದು ಸಾಧ್ಯವಾಗಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಹರಿಜನರ ಉದ್ಧಾರಕ್ಕಾಗಿ ಮಂತ್ರಿ ನೇಮಿಸುವ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಯೋಜನೆಗಳನ್ನು ರೂಪಿಸುವ ಮೂಲಕ ಉದ್ದೇಶದ ಈಡೇರಿಕೆಗಾಗಿ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರಕ್ಕೆ ಬರುವ ಕಂದಾಯದಲ್ಲಿ ಶೇ. 5ರಷ್ಟು ಹಣವನ್ನು ಗ್ರಾಮೀಣ ಪ್ರದೇಶದ ಕುಡಿಯುವ ನೀರು ಮತ್ತು ಆರೋಗ್ಯ, ನೈರ್ಮಲ್ಯ ಕಾಪಾಡಲು ಬಳಸಬೇಕು. ಇದರಿಂದ ಅಸ್ಪೃಶ್ಯರು ಉನ್ನತಜಾತಿಯವರ ಸ್ಥಿತಿಗೆ ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಖಂಡಿತವಾಗಿಯೂ ಈ ರೀತಿಯ ಯೋಜನೆಗಳನ್ನು ರೂಪಿಸದ ಹೊರತು ಅವರನ್ನು ತಳಮಟ್ಟದಿಂದ ಮೇಲೆತ್ತಲು ಸಾಧ್ಯವಾಗುವುದಿಲ್ಲ.

[94] Ibid, 674-675.
[95] Ibid, 694-695.

ಅಸ್ಪೃಶ್ಯತೆ ಆಚರಣೆ ಅಪರಾಧ ಎಂಬ ಕಾನೂನು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ದೇಶದ ಸಾಕ್ಷರತೆ ಪ್ರಮಾಣ ಶೇ. 12ರಿಂದ 15ರಷ್ಟಿದೆ. ಇದರಲ್ಲಿ ಹರಿಜನರ ಸಾಕ್ಷರತೆಯು ಶೇ. 1ರಿಂದ 2ರಷ್ಟಿದೆ. ಪ್ರತಿ ವರ್ಷ ಸರ್ಕಾರ ಸಾಕ್ಷರತೆಯ ಬಗ್ಗೆ ಗಮನ ಹರಿಸಬೇಕು. ಎಲ್ಲ ರೀತಿಯ ಅಭಿವೃದ್ಧಿಗೂ ಶಿಕ್ಷಣ ಒಂದೇ ಕೀಲಿಕೈ. ಆದ್ದರಿಂದ ನಾವು ಅಸ್ಪೃಶ್ಯರನ್ನು ಎಲ್ಲಿಯವರೆಗೆ ಶಿಕ್ಷಿತರನ್ನಾಗಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಅವರನ್ನು ಯಾವ ರೀತಿಯಿಂದಲೂ ಅಭಿವೃದ್ಧಿ ಪಡಿಸಲು ಸಾಧ್ಯವಿಲ್ಲ. ಹರಿಜನರಿಗೆ ಪ್ರಾಥಮಿಕ ಹಾಗೂ ಕಡ್ಡಾಯ ಶಿಕ್ಷಣ ಜಾರಿಗೊಳಿಸಬೇಕು. ದೇಶದಲ್ಲಿ ಪಾಳುಬಿದ್ದಿರುವ ಭೂಮಿಯನ್ನು ಹರಿಜನರಿಗೆ ನೀಡಿದರೆ ಅವರು ವ್ಯವಸಾಯ ಮಾಡಿ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ತಮ್ಮ ಅಭಿವೃದ್ಧಿ ಕಾಣುತ್ತಾರೆ. ವಿವಿಧೋದ್ದೇಶ ಹೊಂದಿರುವ ಸೊಸೈಟಿಗಳ ಸ್ಥಾಪನೆ ಮೂಲಕ ಹರಿಜನರನ್ನು ಆರ್ಥಿಕವಾಗಿ ಸಬಲರಾಗಿ ಮಾಡಬಹುದು.

ಮೀಸಲಾತಿ 10 ವರ್ಷಗಳಿಗೆ ಕೊನೆಯಾಗಬೇಕೆಂದು ಸೂಚಿಸುತ್ತೇನೆ. ಮೀಸಲಾತಿ ಅಡಿಯಲ್ಲಿ ಬರುವ ಸೌಲಭ್ಯಗಳನ್ನು ಸರ್ಕಾರವೇ ನೇತೃತ್ವ ವಹಿಸಿ ಕ್ರಮಬದ್ಧವಾಗಿ ಜಾರಿಗೊಳಿಸಬೇಕು. ಸರ್ಕಾರ ಪ್ರತಿ ವರ್ಷ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿ ಹರಿಜನ ಕೋಮಿಗೆ ಸೇರಿದ 100 ಯುವಕರನ್ನು ತಾಂತ್ರಿಕ ಪರಿಣತಿ ಹೊಂದಲು ವಿದೇಶಕ್ಕೆ ಕಳುಹಿಸಿಕೊಡಬೇಕು. ಆ ಮೂಲಕ ಅವನ ಕುಟುಂಬ ಆರ್ಥಿಕ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ವಿದ್ಯಾರ್ಥಿವೇತನ ಮಂಡಳಿಗೆ ಕೊರತೆ ಇದೆ. ಆದ್ದರಿಂದ ಶೇ. 60ರಿಂದ 70 ವಿದ್ಯಾರ್ಥಿಗಳ ಅರ್ಜಿಗಳು ತಿರಸ್ಕೃತಗೊಳ್ಳುತ್ತಿವೆ. ಇದನ್ನು ತಪ್ಪಿಸಬೇಕಾದರೆ ಸರ್ಕಾರ ಹೆಚ್ಚಿನ ಹಣಕಾಸು ನೆರವನ್ನು ಮಂಡಳಿಗೆ ನೀಡಬೇಕು. ಅಸ್ಪೃಶ್ಯರಿಗೆ ಅರ್ಹತೆಗಳಿದ್ದಾಗ್ಯೂ ಸರ್ಕಾರಿ ಹುದ್ದೆ ಪಡೆಯಲು ಪ್ರತಿಕೂಲ ಪರಿಸ್ಥಿತಿ ಇಲ್ಲ. ಆದ್ದರಿಂದ ಪ್ರಾಂತೀಯ ಮತ್ತು ಕೇಂದ್ರ ಲೋಕಸೇವಾ ಆಯೋಗದಲ್ಲಿ ಒಬ್ಬ ಅಸ್ಪೃಶ್ಯ ಸದಸ್ಯನನ್ನು ನೇಮಿಸುವ ಮೂಲಕ ಅಸ್ಪೃಶ್ಯರು ಸರ್ಕಾರಿ ಸೇವೆಗೆ ಸೇರಲು ಸರ್ಕಾರ ಹೆಚ್ಚಿನ ಅನುವು ಮಾಡಿಕೊಡಬೇಕು.

ಹರಿಜನರು ರಕ್ಷಣಾಸೇವೆಯಲ್ಲಿ ಕೆಲಸ ಮಾಡಲು ದೈಹಿಕವಾಗಿ ಸಮರ್ಥರಾಗುತ್ತಾರೆ. ಅವರ ಉಪಯೋಗವನ್ನು ದೇಶಸೇವೆಗೆ ಪಡೆಯಬಹುದು. ಇದರಿಂದ ಅವರಲ್ಲಿ ದೇಶಪ್ರೇಮ ಬೆಳೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಅಸ್ಪೃಶ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ನೇಮಕ ಮಾಡುವ ಜೊತೆಗೆ ಜವಾಬ್ದಾರಿ ಸ್ಥಾನ ನೀಡಬೇಕು. ಮೀಸಲಾತಿಯ 5 ವರ್ಷಗಳ ಅವಧಿ

ಮುಗಿದ ನಂತರ ಒಂದು ಆಯೋಗ ನೇಮಕ ಮಾಡಿ, ಆ ಆಯೋಗ ದೇಶದಾದ್ಯಂತ ಸಂಚರಿಸಿ ಅಸ್ಪೃಶ್ಯರ ಸ್ಥಾನಮಾನಗಳಲ್ಲಿ ಗಣನೀಯ ಪ್ರಮಾಣದ ಬೆಳವಣಿಗೆಯಾಗಿದೆಯೇ? ಅಥವಾ ಇಲ್ಲವೇ ಎಂಬುದನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಕೊಡಬೇಕು. ಯಾವುದೇ ಜಾತಿ, ಬಣ್ಣ, ಧರ್ಮ ಮತ್ತು ವರ್ಗವನ್ನು ನೋಡದೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸುವ ಮೂಲಕ ಜಾರಿಗೆ ಬರುವಂತೆ ಹೆಚ್ಚಿನ ನಿಗಾ ವಹಿಸಬೇಕು.

ಹರಿಜನರ ಅಭಿವೃದ್ಧಿ ತುಂಬ ಅವಶ್ಯಕವಾಗಿದೆ. ಆದ್ದರಿಂದ ನಾವು ಈಗಾಗಲೇ ಅಸ್ಪೃಶ್ಯರ ಮೀಸಲಾತಿ ಒಪ್ಪಿದ್ದೇವೆ ಎಂಬುದನ್ನು ಸರ್ಕಾರ ಮನಗಾಣಬೇಕು. ಭಾರತದ ಭವಿಷ್ಯಕ್ಕಾಗಿ ಸಂವಿಧಾನ ರಚನೆ ಮಾಡಿದ್ದೇವೆ. ಇಲ್ಲಿ ಅಸ್ಪೃಶ್ಯರ ಅವಶ್ಯಕತೆಗಳನ್ನು ಸೇರಿಸುವುದು ಅನಿವಾರ್ಯ ಎಂಬುದನ್ನು ಸಭೆ ಅರ್ಥ ಮಾಡಿಕೊಳ್ಳಬೇಕು. ಈ ಸಲಹೆಗಳು ಉತ್ತಮವಾಗಿದ್ದರೆ ದಯಮಾಡಿ ಅಂಗೀಕರಿಸಿ ಎಂದು ಗೌರವಾನ್ವಿತ ಸದಸ್ಯರಲ್ಲಿ ವಿನಂತಿಸಿಕೊಡರು.[96]

**ಈ. ವಿಧಿ ಕುರಿತು ಸದಸ್ಯರ ಸಂದೇಹಗಳು**

ನಜೀರುದ್ದೀನ್ ಅಹಮದ್: ಸಂವಿಧಾನ ಜಾರಿಯಾದ ದಿನದಿಂದ 10 ವರ್ಷ ಅಥವಾ ಕೇಂದ್ರ ಲೋಕಸಭೆಯ ಅವಧಿ ಕೊನೆಗೊಳ್ಳುವವರೆಗೆ ಅಥವಾ ರಾಜ್ಯಗಳ ವಿಧಾನಸಭೆ ಅವಧಿ ಕೊನೆಗೊಳ್ಳುವವರೆಗೆ ಎಂಬುದನ್ನು ವಿಧಿಯಲ್ಲಿ ಸ್ಪಷ್ಟಪಡಿಸಬೇಕು. ಸಂವಿಧಾನ ಜಾರಿಯಾದ ದಿನದಿಂದ 2ನೇ ಸಾರ್ವತ್ರಿಕ ಚುನಾವಣೆ 9ನೇ ವರ್ಷಕ್ಕೆ ನಡೆದರೆ ಇದರಿಂದ ಉಳಿದ 4 ವರ್ಷಗಳು ನಷ್ಟವಾಗುತ್ತವೆ. ಹಾಗೇ 2ನೇ ಚುನಾವಣೆಯಲ್ಲಿ ಮೀಸಲುಕ್ಷೇತ್ರದಿಂದ ಆಯ್ಕೆಯಾದ ಸದಸ್ಯನು ಒಂದು ವರ್ಷ ಮುಗಿದ ನಂತರ ರಾಜೀನಾಮೆ ಕೋಡಬೇಕೇ ಅಥವಾ ಸಾಮಾನ್ಯ ಸದಸ್ಯನಾಗಿ ಮುಂದುವರಿಯುವನೇ ಅಥವಾ 2ನೇ ಅವಧಿ ಮುಗಿಯುವವರೆಗೆ ಆತ ಸದಸ್ಯನಾಗಿರುವನೇ ಎಂಬುದನ್ನು ಸ್ಪಷ್ಟಪಡಿಸಬೇಕು. ಆದ್ದರಿಂದ ಈ ವಿಧಿಯು ಸದನದಲ್ಲಿ ಬಹುಮತ ಪಡೆಯುವ ಮೊದಲು ಇದನ್ನು ಸ್ಪಷ್ಟವಾಗಿ ವಿವರಿಸಬೇಕು ಎಂದರು.[97]

[96] Ibid, 677-680.
[97] Ibid, 685-686.

**ಟಿ.ಟಿ. ಕೃಷ್ಣಮಾಚಾರಿ:** ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಎಸ್.ಸಿ./ಎಸ್.ಟಿ. ಪ್ರಾತಿನಿಧ್ಯತ್ವವು ಸದನದ ಅವಧಿ ಮುಕ್ತಾಯಗೊಳ್ಳುವವರೆಗೆ ಇರುತ್ತದೆ ಎಂದು ತಿದ್ದುಪಡಿಯಲ್ಲಿ ಸೇರಿಸಬೇಕೆಂದು ಸೂಚಿಸಿದರು.

ಪರಿಶಿಷ್ಟ ಜಾತಿಯ ಸದಸ್ಯರು ಹಿಂದೂಧರ್ಮದ ಒಂದು ಭಾಗ. ಅವರು ಆರ್ಥಿಕ ಅಭಿವೃದ್ಧಿ ಹೊಂದಿದರೆ ಬೇರೆ ಜಾತಿಯವರಂತೆ ಸಮಾನ ಸ್ಥಾನ ಹೊಂದುತ್ತಾರೆ ಎಂದು ಸಭೆಗೆ ತಿಳಿಸಿ ಪಂಡಿತ್ ಠ್ಯಾಕುರ್ ದಾಸ್ ಭಾರ್ಗವ ಅವರಿಗೆ ಆಂಗ್ಲೋ ಇಂಡಿಯನ್ ಸಮುದಾಯದ ವಿಚಾರ ಕುರಿತು ಪ್ರತಿಕ್ರಿಯಿಸುತ್ತಾ, ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸ್ಥಾನಗಳಲ್ಲಿ ಯಾವುದೇ ಮೀಸಲಾತಿ ಇಲ್ಲ. ಆದರೆ ಒಕ್ಕೂಟದ ರಾಷ್ಟ್ರಾಧ್ಯಕ್ಷರು ಮತ್ತು ಪ್ರಾಂತ್ಯಗಳ ರಾಜ್ಯಪಾಲರು ಕೇಂದ್ರ ಮತ್ತು ಪ್ರಾಂತ್ಯಗಳಿಗೆ ನಾಮಕರಣ ಮಾಡುವ ಅಧಿಕಾರ ಹೊಂದಿರುತ್ತಾರೆ. ಅವರಿಗೆ ಶಾಸಕಾಂಗದಲ್ಲಿ ಸ್ಥಾನಗಳು ದೊರೆಯದೆ ಹೋದರೆ ಅವರು ಸಾಮಾನ್ಯ ಚುನಾವಣೆಯ ಮೂಲಕ ಆಯ್ಕೆಯಾಗಿ ಬರಬೇಕು. ಹಾಗಾಗಿ ಆಂಗ್ಲೋ-ಇಂಡಿಯನ್ ಸಮುದಾಯದ ತಿದ್ದುಪಡಿಗೆ ಹೆಚ್ಚು ಒತ್ತುಕೊಡಬಾರದು. ಇದು ತುಂಬ ಸಣ್ಣವಿಚಾರ ಎಂದು ಮನವರಿಕೆ ಮಾಡಿಕೊಟ್ಟರು.[98]

**ಉ. ಕರಡು ರಚನಾ ಸಮಿತಿ ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರಿಂದ ವಿಧಿಯ ಕುರಿತು ಸ್ಪಷ್ಟೀಕರಣ**

**ಡಾ.ಬಿ.ಆರ್.ಅಂಬೇಡ್ಕರ್:** ಸ್ನೇಹಿತ ಭಾರ್ಗವ ಅವರು ಸೂಚಿಸಿದ ತಿದ್ದುಪಡಿ ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಸಾಮಾನ್ಯ ಮಂಡಳಿ ತನ್ನ ವರದಿಯಲ್ಲಿ ಆಂಗ್ಲೋ-ಇಂಡಿಯನ್‌ರ ನಾಮಕರಣ ಕುರಿತಂತೆ ಯಾವುದೇ ಅವಧಿ ನಿಗದಿಗೊಳಿಸಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ಸದನ ಒಪ್ಪಿಕೊಳ್ಳುತ್ತದೆ.

ನಂತರ ನಜೀರ್ ಉದ್ದೀನ್ ಅಹಮದ್ ಅವರು ಎತ್ತಿದ ಪ್ರಶ್ನೆ ಕುರಿತಂತೆ ನನ್ನ ಸ್ನೇಹಿತರಾದ ಟಿ.ಟಿ.ಕೃಷ್ಣಮಚಾರಿ ಅವರು ಮಂಡಿಸಿದ ತಿದ್ದುಪಡಿ ಒಪ್ಪಿಕೊಳ್ಳುತ್ತೇನೆ. ಮೀಸಲಾತಿಗೆ ನಿಗದಿಪಡಿಸಿರುವ ಅವಧಿ ಸಂವಿಧಾನ ಪ್ರಾರಂಭವಾದ ದಿನದಿಂದ ಆರಂಭಿಸಬೇಕೆ ಅಥವಾ ಸಂಸತ್ತಿನ ಪ್ರಥಮ ಚುನಾವಣೆಯಿಂದ ಆರಂಭಿಸಬೇಕೆ ಎಂಬುದನ್ನು

[98] Ibid, 688-689.

ಪ್ರಸ್ತುತದಲ್ಲಿ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಆದರೆ ಸಂವಿಧಾನ ಕರಡು ರಚನಾ ಸಮಿತಿ ಇದರಲ್ಲಿ ಯಾವುದು ಅವಶ್ಯಕವೋ ಅದನ್ನು ಪರಿಗಣಿಸುತ್ತದೆ.

ಮೀಸಲಾತಿ ಅವಧಿ ವಿಸ್ತರಿಸುವ ಕುರಿತು ಮಾತನಾಡಿದ ನನ್ನ ಸ್ನೇಹಿತ ಮುನಿಸ್ವಾಮಿ ಪಿಳ್ಳೈ ಅವರು ನನ್ನನ್ನು ಕ್ಷಮಿಸಬೇಕು. ನೀವು ಸೂಚಿಸಿದ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ನಾವು ಮೊದಲು ರಾಜಕೀಯ ಮೀಸಲಾತಿಯನ್ನು ಸಂವಿಧಾನದಲ್ಲಿ ಪ್ರಸ್ತಾಪಿಸುವಾಗ ಮೂಲ ಅವಧಿಯ ಯಾವುದೇ ಬದಲಾವಣೆ ಕುರಿತ ತಿದ್ದುಪಡಿಯನ್ನು ಸಂವಿಧಾನದಿಂದ ಹೊರಗಿಡಲಾಗಿದೆ.

ನನ್ನ ಪರಿಶಿಷ್ಟರ ಮತ್ತು ಈ ವಿಧಿಯ ಅವಧಿ ಮಿತಿಗೊಳಿಸುವಂತೆ ಯಾರು ಮಾತನಾಡಿದರೂ ಅವರಿಗೆ ಹೇಳುವುದೇನೆಂದರೆ, ಅವರು ದೂರು ನೀಡುವುದಕ್ಕೆ ಯಾವುದೇ ಕಾರಣಗಳಿಲ್ಲ. ಏಕೆಂದರೆ 10 ವರ್ಷ ಅವಧಿಯ ತೀರ್ಮಾನಕ್ಕೆ ಯಾರು ಸಂಬಂಧಿಸಿರುವರೋ ಅವರಿಂದ ಇದಕ್ಕೆ ಉತ್ತರ ಕೊಡುವಂತೆ ನಾನು ಸಹ ಒತ್ತಾಯ ಮಾಡುತ್ತೇನೆ. ಈ ಮೀಸಲಾತಿಯು ಪರಿಶಿಷ್ಟರಿಗೆ ಮಾತ್ರ ಸಂಬಂಧಿಸಿರದೇ ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ 1892ರಿಂದ ವಿಶೇಷ ಮೀಸಲಾತಿ ಕಲ್ಪಿಸಲಾಗಿದೆ. ಅವರು ಮೀಸಲಾತಿಯನ್ನು ಸಮಾರು 60 ವರ್ಷಗಳಿಗಿಂತಲೂ ಹೆಚ್ಚು ಅನುಭವಿಸಿದ್ದಾರೆ. ಕ್ರಿಶ್ಚಿಯನ್ನರು 1920ರ ಸಂವಿಧಾನದಿಂದ ಮೀಸಲಾತಿ ಪಡೆದು 28 ವರ್ಷಗಳಿಂದ ಅನುಭವಿಸುತ್ತಿದ್ದಾರೆ. ಆದರೆ ಪರಿಶಿಷ್ಟರಿಗೆ ವಿಶೇಷ ಮೀಸಲಾತಿಯು 1935ರ ಭಾರತ ಸರ್ಕಾರ ಕಾಯ್ದೆಯಿಂದ ದೊರಕಿತು. ಈ ವಿಶೇಷ ಮೀಸಲಾತಿಯು 1937 ರಿಂದ ಪ್ರಾರಂಭವಾಯಿತು. ಆದರೆ ಅಸ್ಪೃಶ್ಯರ ದುರಂತವೆಂದರೆ 1939ರಿಂದ 1946ರವರೆಗೆ ಸಂವಿಧಾನವನ್ನು ಅಮಾನತ್ತಿನಲ್ಲಿಡಲಾಗಿತ್ತು. ಆದ್ದರಿಂದ ಅವರು ಮೀಸಲಾತಿ ಸೌಲಭ್ಯ ಅನುಭವಿಸಿದ್ದು ಕೇವಲ 2 ವರ್ಷಗಳು. ಏಕೆಂದರೆ ಪರಿಶಿಷ್ಟ ಜಾತಿ 1935ರ ಕಾಯ್ದೆಯಿಂದ ದೊರೆತ ಮೀಸಲಾತಿ ಅನುಕೂಲಗಳನ್ನು ಬಳಸಿಕೊಳ್ಳುವ ಸ್ಥಿತಿಯಲ್ಲಿ ಅಂದು ಇರಲಿಲ್ಲ. ಸದನದಲ್ಲಿ ಒಂದು ವರ್ಗ ಪರಿಶಿಷ್ಟಜಾತಿಯವರಿಗೆ ಮೀಸಲಾತಿಯನ್ನು ದೀರ್ಘ ಅವಧಿಯವರೆಗೆ ಕೊಡಬೇಕೆನ್ನುತ್ತದೆ. ಇದಕ್ಕೆ ನನ್ನ ಪ್ರತಿಕ್ರಿಯೆಗೆ ಸದನವೆಲ್ಲ ಒಪ್ಪಿಕೊಳ್ಳಬೇಕು. ಆದ್ದರಿಂದ ನಾವು ಹಿಂದಿನ ಅವಕಾಶಗಳ ಕಡೆ ಹೋಗುವುದು ಬಹುಶಃ ಸರಿಯಲ್ಲ. ಪರಿಶಿಷ್ಟ ಜಾತಿಯವರು ಈ 10 ವರ್ಷಗಳ ಮೀಸಲಾತಿ ಅವಧಿಯಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳು ಬದಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕುರಿತು ತಮ್ಮ ಸ್ವಂತ ಸಾಮರ್ಥ್ಯದ ಮೇಲೆ

ಅಥವಾ ಬುದ್ಧಿಶಕ್ತಿಯ ಮೇಲೆ ತಮ್ಮ ರಕ್ಷಣೆಗಾಗಿ ಹೊಸಮಾರ್ಗಗಳನ್ನು ಸಂವಿಧಾನದಲ್ಲಿ ಕೊಡಲಾಗಿದೆಯೇ ಎಂಬುದನ್ನು ಗುರುತಿಸಬೇಕು ಎಂದರು.

ಪರಿಶಿಷ್ಟ ಪಂಗಡ ಕುರಿತಂತೆ ಮೀಸಲಾತಿ ದೀರ್ಘ ಅವಧಿಗೆ ಕೊಡಬೇಕೆಂದು ಮಾಡುತ್ತಿದ್ದೇವೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಕುರಿತಂತೆ ಯಾರು ಮಾತನಾಡಿದರೂ ಅವರು 10 ವರ್ಷಗಳ ಅವಧಿಗೆ ಮೀಸಲಾತಿ ಕೊನೆಯಾಗಬೇಕು ಎಂದು ಹೇಳಿದ್ದಾರೆ. ಇದನ್ನು ಕುರಿತಂತೆ ಎಡ್ಮಂಡ್ ಬರ್ಕ್ ಅವರ ಮಾತಿನಲ್ಲಿ ಹೇಳುವುದಾದರೆ "Large Emperies and small minds go ill together " ಎಂದು ಸೂಕ್ಷ್ಮವಾಗಿ ಉತ್ತರ ನೀಡಿದರು.[99]

ಈ ವಿಧಿಯು ಕರಡುರಚನೆಯ 114ನೇ ತಿದ್ದುಪಡಿಯಾಗಿದೆ. ಈ ವಿಧಿಯ ವಿವರಣೆ ಕೆಳಕಂಡಂತಿದೆ.

"ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಪ್ರಾತಿನಿಧಿತ್ವವು ಕೇಂದ್ರ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಯಲ್ಲಿ ಸದನದ ಅವಧಿ ಮುಕ್ತವಾಗುವವರೆಗೂ ಮೀಸಲಾತಿ ಜಾರಿಯಲ್ಲಿರುತ್ತದೆ." 295ಎ ಕರಡು ವಿಧಿಯನ್ನು ಅದೇ ದಿನ ಅಂಗೀಕರಿಸಿ, ಸಂವಿಧಾನಕ್ಕೆ ಅಳವಡಿಸಲಾಯಿತು.[100]

ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿಯನ್ನು ಅಧಿಕೃತವಾಗಿ 330, 332 ಮತ್ತು 334ನೇ ವಿಧಿಗಳಾಗುವ ಮೂಲಕ ಜಾರಿಗೊಳಿಸಲಾಗಿದೆ. ಅವು ಈ ಕೆಳಕಂಡಂತಿವೆ.

330ನೇ ವಿಧಿ ಪ್ರಕಾರ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.

332ನೇ ವಿಧಿ ಪ್ರಕಾರ ರಾಜ್ಯಗಳ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.

---

[99] Ibid, 696-697.
[100] Ibid, 698-699.

334ನೇ ವಿಧಿ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲುಕ್ಷೇತ್ರಗಳ ಕಾಲಮಿತಿ 10 ವರ್ಷಗಳಿಗೆ ನಿಗದಿಗೊಳಿಸಲಾಗಿದೆ.[101]

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಪರಿಶಿಷ್ಟರ ಕಲ್ಯಾಣ ಸಾಧಿಸುವಲ್ಲಿ ವಿಫಲವಾಗಿ ಸಂವಿಧಾನದ 334ನೇ ವಿಧಿಗೆ ಇದುವರೆಗೆ 6 ಬಾರಿ ತಿದ್ದುಪಡಿ ಮಾಡಲಾಗಿದೆ. ಅವುಗಳ ವಿವರ ಈ ರೀತಿಯಾಗಿದೆ.

**2.9. ಸಂವಿಧಾನ ತಿದ್ದುಪಡಿಗಳು**

- ಮೊದಲನೇ ಬಾರಿಗೆ 1959ರಲ್ಲಿ 8ನೇ ಸಂವಿಧಾನ ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿ ಅವಧಿಯನ್ನು 10ರಿಂದ 20 ವರ್ಷಕ್ಕೆ ವಿಸ್ತರಿಸಲಾಯಿತು.
- 2ನೇ ಬಾರಿಗೆ 1969ರಲ್ಲಿ 23ನೇ ತಿದ್ದುಪಡಿಯ ಮೂಲಕ 20ರಿಂದ 30 ವರ್ಷಕ್ಕೆ ಹೆಚ್ಚಿಸಲಾಯಿತು.
- 3ನೇ ಬಾರಿಗೆ 1980 ರಲ್ಲಿ 45ನೇ ತಿದ್ದುಪಡಿಯ ಮೂಲಕ 30ರಿಂದ 40 ವರ್ಷಕ್ಕೆ ಹೆಚ್ಚಿಸಲಾಯಿತು.
- 4ನೇ ಬಾರಿಗೆ 1989ರಲ್ಲಿ 62ನೇ ತಿದ್ದುಪಡಿಯ ಮೂಲಕ 40ರಿಂದ 50 ವರ್ಷಕ್ಕೆ ಹೆಚ್ಚಿಸಲಾಯಿತು.
- 5ನೇ ಬಾರಿಗೆ 1999ರಲ್ಲಿ 79ನೇ ತಿದ್ದುಪಡಿಯ ಮೂಲಕ 50ರಿಂದ 60 ವರ್ಷಕ್ಕೆ ಹೆಚ್ಚಿಸಲಾಯಿತು.[102]
- 6ನೇ ಬಾರಿಗೆ ಸಂವಿಧಾನಕ್ಕೆ 109ನೇ ತಿದ್ದುಪಡಿ ತರುವ ಮೂಲಕ 60ರಿಂದ 70 ವರ್ಷಕ್ಕೆ ವಿಸ್ತರಿಸಲಾಗಿದೆ.[103] ಇದು ಜನವರಿ 25, 2010ರಿಂದ ಅನುಷ್ಠಾನಕ್ಕೆ ಬಂದಿದೆ. ಈ ತಿದ್ದುಪಡಿಯ ಅವಧಿಯು ಜನವರಿ 25, 2020ಕ್ಕೆ ಕೊನೆಗೊಳ್ಳುತ್ತದೆ.
- 109ನೇ ತಿದ್ದುಪಡಿಯ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವ ಸಂದರ್ಭದಲ್ಲಿ ಕೇಂದ್ರ ಕಾನೂನು ಸಚಿವ ಶ್ರೀ ಎಂ ವೀರಪ್ಪಮೊಯ್ಲಿಯವರು ಸದನದಲ್ಲಿ **“**There should be a change of Heart in society towards SCs and

---

[101] The Constitution of India, 2001, Govt. of India, Pp. – 137 to 139.
[102] Basu Durga Das, 2009. Pp.- 452 to 464.
[103] The Hindu News Paper, Dated 5th Aug 2009. Pp.-15.

STs" ಎಂದು ಹೇಳುತ್ತಾ ಅವರು "we need to travel more distance to ensure they join the mainstream, we must practice inclusive politics and not exclusive politics[104] ಎಂದು ಅರ್ಥಪೂರ್ಣವಾಗಿ ಹೇಳುವ ಮೂಲಕ ಮೀಸಲಾತಿಯ ಮುಂದುವರಿಕೆಯನ್ನು ಸಮರ್ಥಿಸಿದ್ದಾರೆ.

## 2.10. ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಯಲ್ಲಿ ಮೀಸಲುಕ್ಷೇತಗಳು

**ಕೋಷ್ಟಕ– 2.1.**

**ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲೋಕಸಭೆಗೆ ನಿಗದಿಗೊಳಿಸರುವ ಮೀಸಲುಕ್ಷೇತ್ರಗಳು**

| ಕ್ರ. ಸಂ. | ರಾಜ್ಯಗಳ ಹೆಸರು | 1976ರ ಕ್ಷೇತ್ರ ಪುನರ್ ವಿಂಗಡಣಾ ವರದಿ ಆಧರಿಸಿ ರಾಜ್ಯ ಲೋಕಸಭೆಗಳಲ್ಲಿ 2004ರ ಚುನಾವಣೆಗೆ ಅಂತ್ಯಗೊಂಡಿದ್ದ ಮೀಸಲು ಕ್ಷೇತ್ರಗಳ ಸಂಖ್ಯೆ | | | | 2008ರ ಕ್ಷೇತ್ರ ಪುನರ್ ವಿಂಗಡಣಾ ವರದಿ ಆಧಾರದ ಮೇಲೆ ರಾಜ್ಯ ಲೋಕಸಭೆಗಳಲ್ಲಿ ಪ್ರಸ್ತುತ ಇರುವ ಮೀಸಲು ಕ್ಷೇತ್ರಗಳ ಸಂಖ್ಯೆ | | | |
|---|---|---|---|---|---|---|---|---|---|
| | ರಾಜ್ಯಗಳು | ಒಟ್ಟು | ಎಸ್ ಸಿ ಮೀಸಲು ಕ್ಷೇತ್ರಗಳು | ಎಸ್. ಟಿ ಮೀಸಲು ಕ್ಷೇತ್ರಗಳು | ಒಟ್ಟು ಮೀಸಲು ಕ್ಷೇತ್ರಗಳು | ಒಟ್ಟು | ಎಸ್.ಟಿ ಮೀಸಲು ಕ್ಷೇತ್ರಗಳು | ಎಸ್ ಟಿ ಮೀಸಲು ಕ್ಷೇತ್ರಗಳು | ಒಟ್ಟು ಮೀಸಲು ಕ್ಷೇತ್ರಗಳು |
| 1 | ಆಂಧ್ರಪ್ರದೇಶ | 42 | 6 | 2 | 8 | 42 | 7 (+1) | 3 (+1) | 10 (+2) |
| 2 | ಅರುಣಾಚಲ ಪ್ರದೇಶ | 02 | – | – | – | 02 | – | – | – |
| 3 | ಅಸ್ಸಾಂ | 14 | 1 | 2 | 3 | 14 | 1 | 2 | 3 |
| 4 | ಬಿಹಾರ | 40 | 7 | – | 7 | 40 | 6 (–1) | 6 | 6 (–1) |
| 5 | ಛತ್ತೀಸ್‌ಗಡ | 11 | 2 | 4 | 6 | 11 | 1 (–1) | 4 | 5 (–1) |
| 6 | ಗೋವಾ | 02 | – | – | – | 02 | – | – | – |
| 7 | ಗುಜರಾತ್ | 26 | 2 | 4 | 6 | 26 | 2 | 4 | 6 |
| 8 | ಹರಿಯಾಣ | 10 | 2 | – | 2 | 10 | 2 | – | 2 |
| 9 | ಹಿಮಾಚಲ ಪ್ರದೇಶ | 4 | 1 | – | 1 | 4 | 1 | – | 1 |
| 10 | ಜಮ್ಮು ಕಾಶ್ಮೀರ * | 6 | – | – | – | 6 | – | – | – |
| 11 | ಜಾರ್ಖಂಡ್ | 4 | 1 | 5 | 6 | 14 | 1 | 5 | 6 |
| 12 | ಕರ್ನಾಟಕ | 8 | 4 | – | 4 | 28 | 5 (+1) | 2 (+2) | 7 (+3) |
| 13 | ಕೇರಳ | 0 | 2 | – | 2 | 20 | 2 | – | 2 |
| 14 | ಮಧ್ಯಪ್ರದೇಶ | 9 | 4 | 5 | 9 | 29 | 4 | 6 (+1) | 10 (+1) |
| 15 | ಮಹಾರಾಷ್ಟ್ರ | 48 | 3 | 4 | 7 | 48 | 5 (+2) | 4 | 9 (+2) |
| 16 | ಮಣಿಪುರ | 2 | – | 1 | 1 | 2 | – | 1 | 1 |
| 17 | ಮೇಘಾಲಯ | 2 | – | – | – | 2 | – | 2 (+2) | 2 |
| 18 | ಮಿಜೋರಾಂ | 1 | – | 1 | 1 | 40 | – | 39 | 39 |
| 19 | ನಾಗಾಲ್ಯಾಂಡ್ | 0 | – | 59 | 59 | 1 | – | 1 | 1 |
| 20 | ಒರಿಸ್ಸಾ | 1 | 3 | 5 | 8 | 21 | 3 | 5 | 8 |
| 21 | ಪಂಜಾಬ್ | 3 | 3 | – | 3 | 13 | 4 (+1) | – | 4 (+1) |
| 22 | ರಾಜಸ್ಥಾನ | 6 | 4 | 3 | 7 | 36 | 4 | 3 | 7 |
| 23 | ಸಿಕ್ಕಿಂ ** | 1 | – | – | – | 1 | – | – | – |
| 24 | ತಮಿಳುನಾಡು | 9 | 7 | – | 7 | 39 | 7 | – | 7 |

[104] Ibid, 15.

| | | | | | | | | | |
|---|---|---|---|---|---|---|---|---|---|
| 25 | ತ್ರಿಪುರ | 2 | – | 1 | 1 | 2 | – | 1 | 1 |
| 26 | ಉತ್ತರಖಂಡ್ | 5 | – | – | – | 5 | 1 (+1) | – | 1 (+1) |
| 27 | ಉತ್ತರಪ್ರದೇಶ | 0 | 18 | – | 18 | 80 | 17 (–1) | – | 17 (–1) |
| 28 | ಪಶ್ಚಿಮ ಬಂಗಾಳ | 42 | 8 | 2 | 10 | 42 | 10 (+2) | 2 | 12 (+2) |
| | **ಕೇಂದ್ರಾಡಳಿತ ಪ್ರದೇಶಗಳು** | | | | | | | | |
| 1 | ಅಂಡಮಾನ್ ನಿಕೋಬಾರ್ | 1 | – | – | – | 1 | – | – | – |
| 2 | ಚಂಢೀಘಡ | 1 | – | – | – | 1 | – | – | – |
| 3 | ದಾದ್ರ ನಗರ್ ಹವೇಲಿ | 1 | – | 1 | 1 | 1 | – | 1 | 1 |
| 4 | ದೆಹಲಿ | 2 | 1 | – | 1 | 2 | 1 | – | 1 |
| 5 | ಡಿಯು ಡಮನ್ | 1 | – | – | – | 1 | – | – | – |
| 6 | ಲಕ್ಷದ್ವೀಪ | 1 | – | 1 | 1 | 1 | – | 1 | 1 |
| 7 | ಪಾಂಡಿಚೇರಿ | 1 | – | – | – | 1 | – | – | – |
| | **ಒಟ್ಟು** | **543** | **79** | **41** | **120** | **543** | **84** | **47** | **131** |

- ಟಿಪ್ಪಣಿ: (+) ಸಂಕೇತವು ಕ್ಷೇತ್ರಗಳು ಹೆಚ್ಚಾಗಿರುವುದನ್ನು ಸೂಚಿಸುತ್ತದೆ.
- (–) ಸಂಕೇತವು ಕ್ಷೇತ್ರಗಳನ್ನು ಕಳೆದುಕೊಂಡಿರುವುದನ್ನು ಸೂಚಿಸುತ್ತದೆ.

1976ರ ಕ್ಷೇತ್ರ ಪುನರ್‌ವಿಂಗಡಣಾ ಆದೇಶ ಕಾಲಕಾಲಕ್ಕೆ ಲೋಕಸಭಾ ಕ್ಷೇತ್ರಗಳು ಬದಲಾದಂತೆ 2004ರ 14ನೇ ಲೋಕಸಭೆಯವರೆಗೂ ಚಾಲ್ತಿಯಲ್ಲಿತ್ತು. ಈ ಅವಧಿಯಲ್ಲಿ ಒಟ್ಟು 543 ಲೋಕಸಭಾ ಕ್ಷೇತ್ರಗಳ ಪೈಕಿ 120 ಮೀಸಲುಕ್ಷೇತ್ರಗಳಿದ್ದವು. ಪರಿಶಿಷ್ಟ ಜಾತಿಗೆ 79 ಹಾಗೂ ಪರಿಶಿಷ್ಟ ಪಂಗಡಕ್ಕೆ 41 ಕ್ಷೇತ್ರಗಳು ಮೀಸಲಾಗಿತ್ತು. 2002ರಲ್ಲಿ ಭಾರತ ಸರ್ಕಾರ ನ್ಯಾಯಮೂರ್ತಿ ಕುಲದೀಪ್ ಸಿಂಗ್ ನೇತೃತ್ವದ ಕ್ಷೇತ್ರ ಪುನರ್‌ವಿಂಗಡಣಾ ಸಮಿತಿಯನ್ನು ರಚಿಸಿತು. ಸಮಿತಿಯು ತನ್ನ ಶಿಫಾರಸ್ಸನ್ನು 2008ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಇದಕ್ಕೆ ಅನುಗುಣವಾಗಿ 15ನೇ ಲೋಕಸಭಾ ಚುನಾವಣೆ ನಡೆಯಿತು. ಒಟ್ಟು 543 ಲೋಕಸಭಾ ಕ್ಷೇತ್ರಗಳಲ್ಲಿ 131 ಮೀಸಲುಕ್ಷೇತ್ರಗಳು ಜಾರಿಯಲ್ಲಿವೆ. ಇದರಲ್ಲಿ ಪರಿಶಿಷ್ಟ ಜಾತಿಗೆ 84 ಹಾಗೂ ಪರಿಶಿಷ್ಟ ಪಂಗಡಕ್ಕೆ 47 ಕ್ಷೇತ್ರಗಳನ್ನು ಮೀಸಲಾಗಿಡಲಾಗಿದೆ. ಹಿಂದೆ ಇದ್ದಂತಹ ಮೀಸಲುಕ್ಷೇತ್ರಗಳನ್ನು ಹೋಲಿಸಿದಾಗ 11 ಕ್ಷೇತ್ರಗಳು ಹೆಚ್ಚಾಗಿವೆ. ಇದರಲ್ಲಿ ಪರಿಶಿಷ್ಟ ಜಾತಿಗೆ 5 ಕ್ಷೇತ್ರಗಳು ಮತ್ತು ಪರಿಶಿಷ್ಟ ಪಂಗಡಕ್ಕೆ 6 ಕ್ಷೇತ್ರಗಳು ಹೆಚ್ಚಾಗಿವೆ. ರಾಜ್ಯವಾರು ಪರಿಶಿಷ್ಟ ಜಾತಿ ಮೀಸಲುಕ್ಷೇತ್ರ ಹೆಚ್ಚಾದ ಪಟ್ಟಿ ನೋಡಿದಾಗ ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳಕ್ಕೆ ತಲಾ ಎರಡೆರಡು ಕ್ಷೇತ್ರಗಳು ಹೆಚ್ಚಾಗಿವೆ. ಆಂಧ್ರಪ್ರದೇಶ, ಉತ್ತರಾಖಂಡ, ಕರ್ನಾಟಕ ಮತ್ತು ಪಂಜಾಬ್ ರಾಜ್ಯಗಳಿಗೆ ತಲಾ ಒಂದೊಂದು ಕ್ಷೇತ್ರಗಳು ಹೆಚ್ಚಾಗಿ ಸಿಕ್ಕಿವೆ. ಅದೇ ರೀತಿ ಬಿಹಾರ, ಛತ್ತೀಸ್‌ಘಢ ಹಾಗೂ ಉತ್ತರ ಪ್ರದೇಶ ರಾಜ್ಯಗಳು ಒಂದೊಂದು ಮೀಸಲು ಕ್ಷೇತ್ರಗಳನ್ನು ಕಳೆದುಕೊಂಡಿದೆ. ಪರಿಶಿಷ್ಟ ಪಂಗಡಗಳ ಮೀಸಲುಕ್ಷೇತ್ರಗಳನ್ನು ಯಾವ

ರಾಜ್ಯಗಳು ಕಳೆದುಕೊಂಡಿಲ್ಲ. ಕರ್ನಾಟಕ, ಮೇಘಾಲಯ ರಾಜ್ಯಗಳಲ್ಲಿ ಈ ಹಿಂದೆ ಪರಿಶಿಷ್ಟ ಪಂಗಡದ ಮೀಸಲುಕ್ಷೇತ್ರಗಳಿರಲಿಲ್ಲ. ಆದರೆ ಈ ಬಾರಿ ತಲಾ ಎರಡೆರಡು ಕ್ಷೇತ್ರಗಳನ್ನು ಹೊಂದಿದೆ. ಹಾಗೆಯೇ ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ ಒಂದೊಂದು ಕ್ಷೇತ್ರ ಹೆಚ್ಚಾದ ಪರಿಣಾಮವಾಗಿ 6 ಮೀಸಲು ಕ್ಷೇತ್ರಗಳು ಹೆಚ್ಚಾಗಿವೆ.

2 ಜೂನ್ 2014ರಂದು ಆಂಧ್ರಪ್ರದೇಶವು ಎರಡು ಭಾಗವಾಗಿ ಒಡೆದು, ಎರಡು ರಾಜ್ಯವಾಯಿತು. ಅವು ತೆಲಂಗಾಣ ಮತ್ತು ಸೀಮಾಂಧ್ರ. ದೇಶದ 29ನೇ ರಾಜ್ಯವಾಗಿ ತೆಲಂಗಾಣ ಉದಯವಾದ ನಂತರ 42 ಲೋಕಸಭಾ ಸದಸ್ಯರನ್ನು ಒಳಗೊಂಡಿದ್ದ ಆಂಧ್ರಪ್ರದೇಶವು ವಿಭಜಿತವಾಗಿ ಅದರಲ್ಲಿ ತೆಲಂಗಾಣ 17 ಸಂಸದರನ್ನು ಒಳಗೊಂಡಿತು. ಅದರಲ್ಲಿ ಪರಿಶಿಷ್ಟ ಜಾತಿಗೆ 3 ಕ್ಷೇತ್ರಗಳು ಮತ್ತು ಪರಿಶಿಷ್ಟ ಪಂಗಡಕ್ಕೆ 2 ಕ್ಷೇತ್ರಗಳನ್ನು ಮೀಸಲಿಡಲಾಯಿತು. ಅದೇ ರೀತಿ ಆಂಧ್ರಪ್ರದೇಶ ರಾಜ್ಯದಲ್ಲಿ 25 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು ಅದರಲ್ಲಿ ಪರಿಶಿಷ್ಟ ಜಾತಿಗೆ 4 ಕ್ಷೇತ್ರಗಳನ್ನು ಹಾಗೂ ಪರಿಶಿಷ್ಟ ಪಂಗಡಕ್ಕೆ 1 ಕ್ಷೇತ್ರವನ್ನು ಮೀಸಲಿಡಲಾಯಿತು.

## ಕೋಷ್ಟಕ– 2.2.
## ರಾಜ್ಯ ವಿಧಾನಸಭೆಗಳಲ್ಲಿ ನಿಗದಿಗೊಳಿಸಿರುವ ಮೀಸಲುಕ್ಷೇತ್ರಗಳ ಸಂಖ್ಯೆ

| ಕ್ರ. ಸಂ. | ರಾಜ್ಯಗಳ ಹೆಸರು | 1976ರ ಕ್ಷೇತ್ರ ಪುನರ್ ವಿಂಗಡಣಾ ವರದಿ ಆಧರಿಸಿ ರಾಜ್ಯ ವಿಧಾನಸಭೆಗಳಲ್ಲಿ 2004ರ ಚುನಾವಣೆಗೆ ಅಂತ್ಯಗೊಂಡಿದ್ದ ಮೀಸಲು ಕ್ಷೇತ್ರಗಳ ಸಂಖ್ಯೆ | | | | 2008ರ ಕ್ಷೇತ್ರ ಪುನರ್ ವಿಂಗಡಣಾ ವರದಿ ಆಧಾರದ ಮೇಲೆ ರಾಜ್ಯ ವಿಧಾನಸಭೆಗಳಲ್ಲಿ ಪ್ರಸ್ತುತ ಇರುವ ಮೀಸಲು ಕ್ಷೇತ್ರಗಳ ಸಂಖ್ಯೆ | | | |
|---|---|---|---|---|---|---|---|---|---|
| | ರಾಜ್ಯಗಳು | ಒಟ್ಟು | ಎಸ್.ಸಿ. ಮೀಸಲು ಕ್ಷೇತ್ರಗಳು | ಎಸ್.ಟಿ. ಮೀಸಲು ಕ್ಷೇತ್ರಗಳು | ಒಟ್ಟು ಮೀಸಲು ಕ್ಷೇತ್ರಗಳು | ಒಟ್ಟು | ಎಸ್.ಸಿ. ಮೀಸಲು ಕ್ಷೇತ್ರಗಳು | ಎಸ್.ಟಿ. ಮೀಸಲು ಕ್ಷೇತ್ರಗಳು | ಒಟ್ಟು ಮೀಸಲು ಕ್ಷೇತ್ರಗಳು |
| 1 | ಆಂಧ್ರಪ್ರದೇಶ | 294 | 39 | 15 | 54 | 294 | 48 (+9) | 19 (+4) | 67 (+13) |
| 2 | ಅರುಣಾಚಲ ಪ್ರದೇಶ | 60 | – | 59 | 59 | 60 | – | 59 | 59 |
| 3 | ಅಸ್ಸಾಂ | 126 | 08 | 16 | 24 | 126 | 08 | 16 | 24 |
| 4 | ಬಿಹಾರ | 243 | 39 | – | 39 | 243 | 38 (–1) | 02 (+2) | 40 (+3) |
| 5 | ಛತ್ತೀಸ್‌ಘಡ | 90 | 10 | 34 | 44 | 90 | 10 | 29 (–5) | 39 (–5) |
| 6 | ಗೋವಾ | 40 | 01 | – | 01 | 40 | 01 | – | 01 |
| 7 | ಗುಜರಾತ್ | 182 | 13 | 26 | 39 | 182 | 13 | 27 (+1) | 40 (+1) |
| 8 | ಹರಿಯಾಣ | 90 | 17 | – | 17 | 90 | 17 | – | 17 |
| 9 | ಹಿಮಾಚಲ ಪ್ರದೇಶ | 68 | 16 | 03 | 19 | 68 | 17 (+1) | 03 | 20 (+1) |
| 10 | ಜಮ್ಮು ಕಾಶ್ಮೀರ * | 76 | 06 | – | 06 | 76 | 07 (+1) | – | 07 (+1) |
| 11 | ಜಾರ್ಖಂಡ್ | 81 | 09 | 28 | 37 | 81 | 09 | 28 | 37 |
| 12 | ಕರ್ನಾಟಕ | 224 | 33 | 02 | 35 | 224 | 36 (+3) | 15 (+13) | 51 (+16) |
| 13 | ಕೇರಳ | 140 | 13 | 01 | 14 | 140 | 14 (+1) | 02 (+1) | 16 (+02) |
| 14 | ಮಧ್ಯ ಪ್ರದೇಶ | 230 | 34 | 41 | 75 | 230 | 35 (+1) | 47 (+6) | 82 (+7) |
| 15 | ಮಹಾರಾಷ್ಟ್ರ | 288 | 18 | 22 | 40 | 288 | 29 (+11) | 25 (+3) | 54 (+14) |
| 16 | ಮಣಿಪುರ | 60 | 01 | 19 | 20 | 60 | 01 | 20 | 20 |
| 17 | ಮೇಘಾಲಯ | 60 | – | 55 | 55 | 60 | – | 55 | 55 |
| 18 | ಮಿಜೋರಾಂ | 40 | – | 39 | 39 | 40 | – | 39 | 39 |
| 19 | ನಾಗಲ್ಯಾಂಡ್ | 60 | – | 59 | 59 | 60 | – | 59 | 59 |
| 20 | ಓರಿಸ್ಸಾ | 147 | 22 | 34 | 56 | 147 | 24 (+2) | 33 (–1) | 57 (+1) |
| 21 | ಪಂಜಾಬ್ | 117 | 29 | – | 29 | 117 | 34 (+5) | – | 34 |
| 22 | ರಾಜಸ್ಥಾನ | 200 | 33 | 24 | 57 | 200 | 34 (+1) | 25 (+1) | 59 (+2) |
| 23 | ಸಿಕ್ಕಿಂ ** | 32 | 02 | 12 | 14 | 32 | 02 | 12 | 14 |
| 24 | ತಮಿಳುನಾಡು | 234 | 42 | 03 | 45 | 234 | 44 (+2) | 02 (–1) | 46 (+1) |
| 25 | ತ್ರಿಪುರ | 60 | 07 | 20 | 27 | 60 | 10 (+3) | 20 | 30 (+3) |
| 26 | ಉತ್ತರಖಂಡ್ | 70 | 12 | 03 | 15 | 70 | 13 (+1) | 02 (–1) | 15 |
| 27 | ಉತ್ತರ ಪ್ರದೇಶ | 403 | 89 | – | 89 | 403 | 85 (–1) | – | 85 (–4) |
| 28 | ಪಶ್ಚಿಮ ಬಂಗಾಳ | 294 | 59 | 17 | 76 | 294 | 68 (+9) | 16 (–1) | 84 (+8) |
| | | | | | ಕೇಂದ್ರಾಡಳಿತ ಪ್ರದೇಶಗಳು | | | | |
| 1 | ದೆಹಲಿ | 70 | 13 | – | 13 | 70 | 12 (–1) | – | 12 (–12) |
| 2 | ಪಾಂಡಿಚೇರಿ | 30 | 05 | – | 15 | 30 | 05 | – | 05 |
| | ಒಟ್ಟು | 4109 | 570 | 532 | 1102 | 4120 | 514(–44) | 554 (+22) | 1168(+66 ) |
| | ಒಟ್ಟು | 4109 | | | 1102 | 4120 | | | 1168 |

* ಜಮ್ಮು ಕಾಶ್ಮೀರ ಸಂವಿಧಾನದ ಪ್ರಕಾರ ಮತ್ತು ಜಮ್ಮು ಮತ್ತು ಕಾಶ್ಮೀರ ಪ್ರತಿನಿಧಿ ಕಾಯ್ದೆ 1957ರ ಪ್ರಕಾರ ಪಾಕ್ ಆಕ್ರಮಿತ ಕಾಶ್ಮೀರ ಒಳಗೊಂಡ 87 ಸದಸ್ಯರ ಪೈಕಿ 7 ಕ್ಷೇತ್ರಗಳನ್ನು ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದೆ.

ಟಿಪ್ಪಣಿ: (+) ಸಂಕೇತವು ಕ್ಷೇತ್ರಗಳು ಹೆಚ್ಚಾಗಿರುವುದನ್ನು ಸೂಚಿಸುತ್ತದೆ.
(–) ಸಂಕೇತವು ಕ್ಷೇತ್ರಗಳನ್ನು ಕಳೆದುಕೊಂಡಿರುವುದನ್ನು ಸೂಚಿಸುತ್ತದೆ.

1976ರ ಕ್ಷೇತ್ರ ಪುನರ್‌ವಿಂಗಡಣಾ ವರದಿ ಕಾಲಕಾಲಕ್ಕೆ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಬದಲಾದಂತೆ 2004 ರಾಜ್ಯ ವಿಧಾನಸಭೆ ಚುನಾವಣೆ ಒಟ್ಟು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 4,309 ವಿಧಾನಸಭಾ ಕ್ಷೇತ್ರಗಳಿದ್ದವು. ಇವುಗಳ ಪೈಕಿ 1,102 ಮೀಸಲುಕ್ಷೇತ್ರಗಳು. ಇದರಲ್ಲಿ ಪರಿಶಿಷ್ಟ ಜಾತಿಗೆ 570 ಮತ್ತು ಪರಿಶಿಷ್ಟ ಪಂಗಡಕ್ಕೆ 532 ಕ್ಷೇತ್ರಗಳು ಮೀಸಲಾಗಿದ್ದವು. ಕುಲದೀಪ್ ಸಿಂಗ್ ನೇತೃತ್ವದ ಕ್ಷೇತ್ರ ಪುನರ್‌ವಿಂಗಡಣಾ ಆಯೋಗದ ವರದಿ ಅನ್ವಯ ಜಮ್ಮು ಮತ್ತು ಕಾಶ್ಮೀರ ಬಿಟ್ಟು ಉಳಿದ ಯಾವ ರಾಜ್ಯಗಳಲ್ಲೂ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿಲ್ಲ. ಆದರೆ ಮೀಸಲು ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾದವು. ಪರಿಶಿಷ್ಟ ಜಾತಿಗೆ 44 ಮತ್ತು ಪರಿಶಿಷ್ಟ ಪಂಗಡಕ್ಕೆ 22 ಕ್ಷೇತ್ರಗಳು ಹೆಚ್ಚಾಗಿ ಲಭಿಸಿದವು. ಪರಿಶಿಷ್ಟ ಜಾತಿ ಕ್ಷೇತ್ರಗಳು ಕ್ರಮವಾಗಿ ಆಂಧ್ರಪ್ರದೇಶದಲ್ಲಿ 9, ಹಿಮಾಚಲ ಪ್ರದೇಶ 1, ಜಮ್ಮು ಮತ್ತು ಕಾಶ್ಮೀರ 1, ಕರ್ನಾಟಕ 3, ಕೇರಳ 1, ಮಧ್ಯಪ್ರದೇಶ 1, ಮಹಾರಾಷ್ಟ್ರ 11, ಒರಿಸ್ಸಾ 2, ಪಂಜಾಬ್ 3, ತಮಿಳುನಾಡು 2, ತ್ರಿಪುರ 3, ಉತ್ತರಖಂಡ 1, ಪಶ್ಚಿಮ ಬಂಗಾಳ 7, ಮೀಸಲುಕ್ಷೇತ್ರಗಳು ಹೆಚ್ಚಾದರೆ, ಬಿಹಾರ 1, ಉತ್ತರ ಪ್ರದೇಶ 4, ದೆಹಲಿ 1, ರಾಜ್ಯಗಳು ತಮ್ಮಲ್ಲಿದ್ದ ಪರಿಶಿಷ್ಟ ಜಾತಿ ಮೀಸಲುಕ್ಷೇತ್ರಗಳನ್ನು ಕಳೆದುಕೊಂಡಿವೆ. ಹಾಗೆಯೇ ಪರಿಶಿಷ್ಟ ಪಂಗಡ ಮೀಸಲುಕ್ಷೇತ್ರಗಳು ಮಧ್ಯಪ್ರದೇಶ 4, ಬಿಹಾರ 2, ಗುಜರಾತ್ 1, ಕರ್ನಾಟಕ 13, ಮಹಾರಾಷ್ಟ್ರ 3, ಹಾಗೂ ರಾಜಸ್ಥಾನದಲ್ಲಿ 1 ಮೀಸಲುಕ್ಷೇತ್ರ ಹೆಚ್ಚಾಗಿದೆ. ಕರ್ನಾಟಕದಲ್ಲಿ ಎಲ್ಲಾ ರಾಜ್ಯಗಳಿಗಿಂತ ಎಸ್.ಟಿ. ಮೀಸಲುಕ್ಷೇತ್ರಗಳ ಸಂಖ್ಯೆ ಹೆಚ್ಚಾಗಿದೆ. ಎಸ್.ಟಿ. ಮೀಸಲುಕ್ಷೇತ್ರಗಳು ಕಡಿಮೆಯಾದ ರಾಜ್ಯಗಳೆಂದರೆ ಛತ್ತೀಸ್‌ಘಡ 5, ಒರಿಸ್ಸಾ 1, ತಮಿಳುನಾಡು 1, ಉತ್ತರಖಂಡ 1, ಪಶ್ಚಿಮ ಬಂಗಾಳ 2, ಅತ್ಯಂತ ಹೆಚ್ಚು ಮೀಸಲುಕ್ಷೇತ್ರಗಳನ್ನು ಹೊಂದಿದ್ದ ಛತ್ತೀಸ್‌ಘಡ ರಾಜ್ಯ. ಈಗ ಅದರ ಸಂಖ್ಯೆ ಕಡಿಮೆಯಾಗಿದೆ.

ತೆಲಂಗಾಣ 29ನೇ ರಾಜ್ಯವಾಗಿ 2 ಜೂನ್ 2014ರಂದು ಉದಯವಾದ ನಂತರ 294 ಸದಸ್ಯರುಳ್ಳ ಆಂಧ್ರಪ್ರದೇಶ ವಿಧಾನಸಭೆಯು ವಿಭಜಿತವಾಗಿ ಅದರಲ್ಲಿ ತೆಲಂಗಾಣದ 119 ಶಾಸಕರಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಗೆ 18 ಕ್ಷೇತ್ರಗಳು ಮತ್ತು ಪರಿಶಿಷ್ಟ ಪಂಗಡಕ್ಕೆ 9 ಕ್ಷೇತ್ರಗಳು ಸೇರಿ ಒಟ್ಟು 27 ಕ್ಷೇತ್ರಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅದೇ ರೀತಿ ಆಂಧ್ರಪ್ರದೇಶವು ವಿಭಜನೆಯಾದ ನಂತರ

175 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಅದರಲ್ಲಿ ಪರಿಶಿಷ್ಟ ಜಾತಿಗೆ 30 ಕ್ಷೇತ್ರಗಳು ಮತ್ತು ಪರಿಶಿಷ್ಟ ಪಂಗಡಕ್ಕೆ 10 ಕ್ಷೇತ್ರಗಳು ಸೇರಿ ಒಟ್ಟು 40 ವಿಧಾನಸಭಾ ಕ್ಷೇತ್ರಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ.

## 2.11. ಕರ್ನಾಟಕ ಮೀಸಲು ವಿಧಾನಸಭಾ ಕ್ಷೇತ್ರಗಳು

ಮೈಸೂರು ರಾಜ್ಯ ಪ್ರಥಮ ವಿಧಾನಸಭೆ ಚುನಾವಣೆಯಲ್ಲಿ ಒಟ್ಟು 80 ವಿಧಾನಸಭಾ ಕ್ಷೇತ್ರಗಳಿದ್ದವು. ಈ ಪೈಕಿ 19 ದ್ವಿಸದಸ್ಯ ಕ್ಷೇತ್ರಗಳಿದ್ದವು. 2ನೇ ವಿಧಾನಸಭಾ ಚುನಾವಣೆ 1957ರಲ್ಲಿ ಒಟ್ಟು 179 ವಿಧಾನಸಭಾ ಕ್ಷೇತ್ರಗಳಿದ್ದವು. ಈ ಪೈಕಿ 27 ದ್ವಿಸದಸ್ಯ ಕ್ಷೇತ್ರಗಳಿದ್ದವು. ಇದರಲ್ಲಿ ಪರಿಶಿಷ್ಟ ಜಾತಿಗೆ 26 ಮತ್ತು ಪರಿಶಿಷ್ಟ ಪಂಗಡಕ್ಕೆ 1 ಕ್ಷೇತ್ರ ಮೀಸಲಾಗಿತ್ತು. 1961ರ ಚುನಾವಣೆ ಕಾಯ್ದೆ ಸೆಕ್ಷನ್ 3 ಮತ್ತು 7ರ ಪ್ರಕಾರ ದ್ವಿಸದಸ್ಯ ಕ್ಷೇತ್ರಗಳು ರದ್ದಾಗಿ, 1962ರ 3ನೇ ವಿಧಾನಸಭೆ ಚುನಾವಣೆಯಲ್ಲಿ 208 ಮತಕ್ಷೇತ್ರಗಳ ಪೈಕಿ ಪರಿಶಿಷ್ಟ ಜಾತಿಗೆ 27 ಮತ್ತು ಪರಿಶಿಷ್ಟ ಪಂಗಡಕ್ಕೆ 1 ಕ್ಷೇತ್ರ ಮಾತ್ರ ಮೀಸಲಾಗಿತ್ತು. 1967ರ 4ನೇ ವಿಧಾನಸಭಾ ಚುನಾವಣೆಯಲ್ಲಿ 216 ಕ್ಷೇತ್ರಗಳಿದ್ದು, ಪರಿಶಿಷ್ಟ ಜಾತಿಗೆ 28, ಪರಿಶಿಷ್ಟ ಪಂಗಡಕ್ಕೆ 3 ಕ್ಷೇತ್ರ(ಗೋಕಾಕ್, ಚಿಕ್ಕೋಡಿ ಸದಲ್ಗಾ, ವಿರಾಜ ಪೇಟೆ)ಗಳಿದ್ದವು. 1972ರ 5ನೇ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 216 ಕ್ಷೇತ್ರಗಳ ಪೈಕಿ ಪರಿಶಿಷ್ಟ ಜಾತಿಗೆ 29, ಪರಿಶಿಷ್ಟ ಪಂಗಡಕ್ಕೆ 2 ಕ್ಷೇತ್ರಗಳು(ಗೋಕಾಕ್, ವಿರಾಜ ಪೇಟೆ) ಮೀಸಲಾಗಿದ್ದವು.

1971ರ ಪ್ರಥಮ ಕ್ಷೇತ್ರ ಪುನರ್ವಿಂಗಡಣಾ ಕಾಯ್ದೆ 1978ರ 6ನೇ ವಿಧಾನಸಭಾ ಚುನಾವಣೆಯಲ್ಲಿ ಜಾರಿಗೆ ಬಂದ ಪರಿಣಾಮವಾಗಿ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 224ಕ್ಕೆ ಹೆಚ್ಚಾಗಿ ಪರಿಶಿಷ್ಟ ಜಾತಿಗೆ 33, ಮತ್ತು ಪರಿಶಿಷ್ಟ ಪಂಗಡಕ್ಕೆ 2 ಕ್ಷೇತ್ರಗಳು ಮೀಸಲಾಗಿದ್ದವು. ಈ ಸಂಖ್ಯೆ 12ನೇ ವಿಧಾನಸಭಾ ಚುನಾವಣೆ ವರೆಗೂ ಮುಂದುವರಿಯಿತು. 13ನೇ ವಿಧಾನಸಭಾ ಚುನಾವಣೆಯಲ್ಲಿ ನ್ಯಾಯಮೂರ್ತಿ ಕುಲದೀಪ್ ಸಿಂಗ್ ಅವರ ಆಯೋಗದ ವರದಿ ಅನುಷ್ಠಾನಗೊಂಡು ಅದರಂತೆ 224 ವಿಧಾನಸಭಾ ಕ್ಷೇತ್ರಗಳಲ್ಲಿ 36 ಪರಿಶಿಷ್ಟ ಜಾತಿಗೆ, 15 ಪರಿಶಿಷ್ಟ ಪಂಗಡಕ್ಕೆ ಒಟ್ಟು 51 ಮೀಸಲುಕ್ಷೇತ್ರಗಳು ಅಸ್ತಿತ್ವದಲ್ಲಿವೆ.

**ಕೋಷ್ಟಕ–2.3.**

**2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿಗೆ ಮಿಸಲಾದ ಕ್ಷೇತ್ರಗಳು**

| ಕ್ರ. ಸಂ. | ಕ್ಷೇತ್ರದ ಸಂಖ್ಯೆ | ಕ್ಷೇತ್ರದ ಹೆಸರು | ಜಿಲ್ಲೆ |
|---|---|---|---|
| 1 | 5 | ಕುಡಚಿ | ಬೆಳಗಾವಿ |
| 2 | 6 | ರಾಯಬಾಗ | ಬೆಳಗಾವಿ |
| 3 | 19 | ಮುಧೋಳ | ಬಾಗಲಕೋಟೆ |
| 4 | 31 | ನಾಗಠಾಣ | ವಿಜಾಪುರ |
| 5 | 40 | ಚಿತ್ತಾಪುರ | ಗುಲ್ಬರ್ಗಾ |
| 6 | 42 | ಚಿಂಚೋಳಿ | ಗುಲ್ಬರ್ಗಾ |
| 7 | 43 | ಗುಲ್ಬರ್ಗಾ ಗ್ರಾಮೀಣ | ಗುಲ್ಬರ್ಗಾ |
| 8 | 52 | ಔರಾದ್ | ಬೀದರ್ |
| 9 | 57 | ಲಿಂಗಸುಗೂರು | ರಾಯಚೂರು |
| 10 | 61 | ಕನಕಗಿರಿ | ಕೊಪ್ಪಳ |
| 11 | 65 | ಶಿರಹಟ್ಟಿ | ಗದಗ |
| 12 | 72 | ಹುಬ್ಬಳ್ಳಿ – ಧಾರವಾಡ ಪೂರ್ವ | ಧಾರವಾಡ |
| 13 | 84 | ಹಾವೇರಿ | ಹಾವೇರಿ |
| 14 | 88 | ಹಡಗಲಿ | ಬಳ್ಳಾರಿ |
| 15 | 89 | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| 16 | 102 | ಹೊಳಲ್ಕೆರೆ | ಚಿತ್ರದುರ್ಗ |
| 17 | 108 | ಮಾಯಕೊಂಡ | ದಾವಣಗೆರೆ |
| 18 | 111 | ಶಿವಮೊಗ್ಗ ಗ್ರಾಮೀಣ | ಶಿವಮೊಗ್ಗ |
| 19 | 124 | ಮೂಡಿಗೆರೆ | ಚಿಕ್ಕಮಗಳೂರು |
| 20 | 134 | ಕೊರಟಗೆರೆ | ತುಮಕೂರು |
| 21 | 137 | ಪಾವಗಡ | ತುಮಕೂರು |
| 22 | 145 | ಮುಳಬಾಗಿಲು | ಕೋಲಾರ |
| 23 | 146 | ಕೋಲಾರ ಗೋಲ್ಡ್ ಫೀಲ್ಡ್ | ಕೋಲಾರ |
| 24 | 147 | ಬಂಗಾರಪೇಟೆ | ಕೋಲಾರ |
| 25 | 159 | ಪುಲಕೇಶಿನಗರ್ | ಬೆಂಗಳೂರು ಉತ್ತರ |
| 26 | 161 | ಶ್ರೀ ಸಿ.ವಿ. ರಾಮನ್ ನಗರ್ | ಬೆಂಗಳೂರು ಉತ್ತರ |
| 27 | 174 | ಮಹದೇವಪುರ | ಬೆಂಗಳೂರು ನಗರ |
| 28 | 177 | ಆನೇಕಲ್ | ಬೆಂಗಳೂರು ನಗರ |
| 29 | 179 | ದೇವನಹಳ್ಳಿ | ಬೆಂಗಳೂರು ಗ್ರಾಮೀಣ |
| 30 | 181 | ನೆಲಮಂಗಲ | ಬೆಂಗಳೂರು ಗ್ರಾಮೀಣ |
| 31 | 186 | ಮಳವಳ್ಳಿ | ಮಂಡ್ಯ |
| 32 | 199 | ಸಕಲೇಶಪುರ | ಹಾಸನ |
| 33 | 207 | ಸುಳ್ಯ | ದಕ್ಷಿಣ ಕನ್ನಡ |
| 34 | 214 | ನಂಜನಗೂಡು | ಮೈಸೂರು |
| 35 | 220 | ಟಿ. ನರಸೀಪುರ | ಮೈಸೂರು |
| 36 | 222 | ಕೊಳ್ಳೇಗಾಲ | ಚಾಮರಾಜನಗರ |

**Source:** Election Commission of India

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಕ್ಷೇತ್ರ ಪುನರ್‌ವಿಂಗಡಣಾ ಆಯೋಗವನ್ನು 2002ರಲ್ಲಿ ಕುಲದೀಪ್ ಸಿಂಗ್ ಅವರ ನೇತೃತ್ವದಲ್ಲಿ ಮರುನೇಮಕ ಮಾಡಲಾಯಿತು. ಇದರ ಅನ್ವಯ ಕರ್ನಾಟಕ ವಿಧಾನಸಭೆಯಲ್ಲಿ 224 ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 36 ಕ್ಷೇತ್ರಗಳನ್ನು ಮೀಸಲಿಡಲಾಗಿದೆ. ಬಾಗಲಕೋಟೆ, ಬಿಜಾಪುರ, ಬೀದರ್, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಹಾವೇರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಹಾಸನ, ದಕ್ಷಿಣ ಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಂದೊಂದು ಕ್ಷೇತ್ರವನ್ನು, ಹಾಗೆಯೇ ಬೆಳಗಾಂ, ಬಳ್ಳಾರಿ, ತುಮಕೂರು, ಬೆಂಗಳೂರು ಉತ್ತರ, ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಎರಡೆರಡು ಕ್ಷೇತ್ರಗಳನ್ನು ಮತ್ತು ಗುಲ್ಬರ್ಗಾ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಮೂರು ಮೂರು ಕ್ಷೇತ್ರಗಳನ್ನು ಪರಿಶಿಷ್ಟ ಜಾತಿಗೆ ಮೀಸಲಾತಿ ಕಲ್ಪಿಸಲಾಗಿದೆ.

**ಕೋಷ್ಟಕ–2.4.**

**2008ರಿಂದ ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮಿಸಲಾದ ಕ್ಷೇತ್ರಗಳು**

| ಕ್ರ. ಸಂ. | ಕ್ಷೇತ್ರದ ಸಂಖ್ಯೆ | ಕ್ಷೇತ್ರದ ಹೆಸರು | ಜಿಲ್ಲೆ |
|---|---|---|---|
| 1 | 9 | ಗೋಕಾಕ್ | ಬೆಳಗಾಂ |
| 2 | 36 | ಸುರಪುರ | ಯಾದಗಿರಿ |
| 3 | 53 | ರಾಯಚೂರು ಗ್ರಾಮಾಂತರ | ರಾಯಚೂರು |
| 4 | 55 | ಮಾನ್ವಿ | ರಾಯಚೂರು |
| 5 | 56 | ದೇವದುರ್ಗ | ರಾಯಚೂರು |
| 6 | 59 | ಮಸ್ಕಿ | ರಾಯಚೂರು |
| 7 | 91 | ಕಂಪ್ಲಿ | ಬಳ್ಳಾರಿ |
| 8 | 92 | ಸಿರುಗುಪ್ಪ | ಬಳ್ಳಾರಿ |
| 9 | 93 | ಬಳ್ಳಾರಿ ಗ್ರಾಮಾಂತರ | ಬಳ್ಳಾರಿ |
| 10 | 95 | ಸಂಡೂರು | ಬಳ್ಳಾರಿ |
| 11 | 96 | ಕೂಡ್ಲಿಗಿ | ಬಳ್ಳಾರಿ |
| 12 | 97 | ಮೊಳಕಾಲ್ಮೂರು | ಚಿತ್ರದುರ್ಗ |
| 13 | 98 | ಚಳ್ಳಕೆರೆ | ಚಿತ್ರದುರ್ಗ |
| 14 | 103 | ಜಗಳೂರು | ದಾವಣಗೆರೆ |
| 15 | 213 | ಹೆಚ್.ಡಿ. ಕೋಟೆ | ಮೈಸೂರು |

**Source:** Election Commission of India

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಕುಲದೀಪ್ ಸಿಂಗ್ ಅವರ ಅಧ್ಯಕ್ಷತೆಯ ಕ್ಷೇತ್ರಗಳ ಪುನರ್ ವಿಂಗಡಣಾ ಆಯೋಗದ ಪ್ರಕಾರ ಕರ್ನಾಟಕದ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡಕ್ಕೆ 224 ವಿಧಾನಸಭಾ ಕ್ಷೇತ್ರಗಳಲ್ಲಿ 15 ವಿಧಾನಸಭಾ ಕ್ಷೇತ್ರಗಳನ್ನು

ಮೀಸಲಿಡಲಾಗಿದೆ. ಅದರಲ್ಲಿ ಬೆಳಗಾಂ, ದಾವಣಗೆರೆ, ಮೈಸೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಂದೊಂದು ಕ್ಷೇತ್ರವನ್ನು, ಚಿತ್ರದುರ್ಗ ಜಿಲ್ಲೆಯಲ್ಲಿ 2 ಕ್ಷೇತ್ರಗಳು, ರಾಯಚೂರು ಜಿಲ್ಲೆಯಲ್ಲಿ 4 ಕ್ಷೇತ್ರಗಳು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ 5 ಕ್ಷೇತ್ರಗಳನ್ನು ಪರಿಶಿಷ್ಟ ಪಂಗಡಕ್ಕೆ ವಿಧಾನಸಭೆಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

## ಅಧ್ಯಾಯ–3

## ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳು

ಭಾರತವು ಒಂದು ಒಕ್ಕೂಟ ರಾಷ್ಟ್ರವಾಗಿದೆ. ದಕ್ಷಿಣ ಏಷ್ಯಾ ಖಂಡದ ಅತ್ಯಂತ ಪ್ರಮುಖ ರಾಷ್ಟ್ರಗಳ ಪೈಕಿ ಒಂದಾಗಿದೆ. ವಿಶ್ವದ ಏಳನೇ ಅತಿ ದೊಡ್ಡ[1] ರಾಷ್ಟ್ರವಾದ ಭಾರತವು 32,87,240 ಚದರ ಕಿಲೋ ಮೀಟರ್[2] ವಿಸ್ತೀರ್ಣವನ್ನು ಹೊಂದಿದೆ. ಜಗತ್ತಿನ ಜನಸಂಖ್ಯೆಯ ಸು. ಶೇ. 17.4 ಜನಸಂಖ್ಯೆಯನ್ನು ಹೊಂದಿರುವ ಭಾರತವು ಜಗತ್ತಿನ ಎರಡನೇ ಅತಿ ದೊಡ್ಡ ಜನಸಂಖ್ಯಾ ರಾಷ್ಟ್ರವಾಗಿ ಹೊರಹೊಮ್ಮಿದೆ.[3] ಪರ್ಯಾಯ ದ್ವೀಪವಾದ ಭಾರತವು ದಕ್ಷಿಣದಲ್ಲಿ "ಹಿಂದೂ ಮಹಾಸಾಗರ", ಪೂರ್ವದಲ್ಲಿ "ಅರಬ್ಬಿ ಸಮುದ್ರ"ವನ್ನು ಹೊಂದಿದ್ದು, ಪಶ್ಚಿಮದಲ್ಲಿ "ಬಂಗಾಳಕೊಲ್ಲಿ"ಯಿಂದ ಸುತ್ತುವರಿದಿದೆ. ಉತ್ತರದಲ್ಲಿ ಹಿಮಾಲಯ ಪರ್ವತವು ಭಾರತದ ಗಡಿಯನ್ನು ರಕ್ಷಿಸುತ್ತಿದೆ. ಭಾರತದ ಇತಿಹಾಸವು ಸು. 9,000[4] ವರ್ಷಗಳಷ್ಟು ಪುರಾತನವಾದ "ಸಿಂದೂ ಕಣಿವೆ" ನಾಗರಿಕತೆಯ ಮೂಲವನ್ನು ಹೊಂದಿದೆ. ಬ್ರಿಟಿಷರ ಆಳ್ವಿಕೆಗೆ ಒಳಪಡುವುದಕ್ಕಿಂತ ಮೊದಲು ಭಾರತವು ನೂರಾರು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ಛಿದ್ರವಾಗಿ ಹೋಗಿತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ರಾಷ್ಟ್ರೀಯವಾದ ಪ್ರಜ್ಞೆ ಜಾಗೃತಗೊಳ್ಳಲಾರಂಭಿಸಿತು. 1917–48ರ ಗಾಂಧಿಯುಗದಲ್ಲಿ[5] ಈ ಪ್ರಜ್ಞೆ ಭಾರತದ ಸಮಸ್ತ ಜನಮನದಲ್ಲಿ ಪ್ರಬುದ್ಧಗೊಂಡಿತು. ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಮೂಲಕ 15/08/1947ರಂದು ಸ್ವಾತಂತ್ರ್ಯಗೊಂಡ ಭಾರತವು ತದ ನಂತರದಲ್ಲಿ ಒಕ್ಕೂಟ ರಾಜ್ಯವಾಗಿ ಬದಲಾಯಿತು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನವು 09/08/1947ರಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಗೆ ಸ್ವೇಚ್ಛೆಯಿಂದ ಸೇರಿಕೊಳ್ಳುವುದರ ಮೂಲಕ ಅಂದಿನ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಅವರು ಸಹಿ ಹಾಕುವ ಮೂಲಕ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಿದರು.[6] 1947ರಲ್ಲಿ ಐದು ಆಡಳಿತ ಪ್ರಾಂತ್ಯಗಳು ಅಂದರೆ 1. ಬಾಂಬೆ, 2. ಮದ್ರಾಸ್ 3. ಕೊಡಗು, 4. ಮೈಸೂರು ಮತ್ತು 5. ಹೈದ್ರಾಬಾದ್ ಪ್ರಾಂತ್ಯಗಳಡಿಯಲ್ಲಿ ಬಂದಿತು. ಇದರ ಜೊತೆಗೆ

---

[1] www.en.wikipedia.org/wiki/list of countries and outlying territories by total area

[2] www.web.archive.org/http://www.censusindia.gov.in/census and you/areaandpopulation.aspx

[3] www.en.wikipedia.org/wiki/list of countries by population

[4] http://news.bbc.co.uk/2/hi/south asia/1763950.stm

[5] www.indianfocentre.info/history/modern/the-gandhian-era-1917ad-1948-ad/

[6] ಕರ್ನಾಟಕ ಮಾಹಿತಿ ಕೈಪಿಡಿ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, 2012, ಪು.ಸಂ. 92.

ಜಮಖಂಡಿ, ರಾಮದುರ್ಗ, ಮುಧೋಳ, ಸಂಡೂರು ಮುಂತಾದ 20 ಸಣ್ಣ ರಾಜಮನೆತನದ ಸಂಸ್ಥಾನಗಳನ್ನು ಸ್ವಾತಂತ್ರ್ಯದ ತರುವಾಯ ನೆರೆಯ ಜಿಲ್ಲೆಗಳೊಂದಿಗೆ ವಿಲೀನಗೊಳಿಸಲಾಯಿತು. ಅನಂತರ ಭಾಷಾವಾರು ಪುನರ್ವಿಂಗಡಣೆಗಾಗಿ ಫಜಲ್ ಆಲಿ ಆಯೋಗವನ್ನು ನೇಮಕ ಮಾಡಲಾಯಿತು. ಅದರ ಶಿಫಾರಸ್ಸಿನ ಅನುಸಾರವಾಗಿ 1956 ನವೆಂಬರ್ 1ರಂದು ಏಕೀಕೃತಗೊಂಡ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. 1973ರಲ್ಲಿ ದೇವರಾಜು ಅರಸು ಅವರ ಅವಧಿಯಲ್ಲಿ ಕರ್ನಾಟಕ ಎಂಬುದಾಗಿ ಮರುನಾಮಕರಣ[7] ಮಾಡಿ ಮೈಸೂರು ರಾಜ್ಯಕ್ಕೆ ಸಾಂಸ್ಕೃತಿಕ ಅನನ್ಯತೆಯನ್ನು ತಂದುಕೊಡಲಾಯಿತು. ರಾಷ್ಟ್ರೀಯ ಚಳುವಳಿ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಜಾಗೃತಗೊಂಡಿದ್ದು ನೆಲ, ಜಲ, ನಾಡು, ನುಡಿ ಮತ್ತು ಸಂಸ್ಕೃತಿಯ ಪ್ರಬುದ್ಧಪ್ರಜ್ಞೆಯ ಪೇರಣೆಯಿಂದಾಗಿ ಆರಂಭವಾದ ಕರ್ನಾಟಕ ಏಕೀಕರಣ ಚಳುವಳಿಯು ಸಹ ವಿಶಾಲ ಕರ್ನಾಟಕದ ಸ್ಥಾಪನೆಯ ಕನಸನ್ನು ನನಸನ್ನಾಗಿಸುವ ಗುರಿ ಇಟ್ಟುಕೊಂಡಿತು. ಧಾರವಾಡದ ವಿದ್ಯಾವರ್ಧಕ ಸಂಘ,[8] ಕಾಸರಗೋಡಿನ ಕರ್ನಾಟಕ ಸಮಿತಿ, ಆಲೂರು ವೆಂಕಟರಾಯರು ಬರೆದ "ಕರ್ನಾಟಕ ಗತವೈಭವ," ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿದ್ದಪ್ಪ ಕಂಬಳಿ, ಆರ್.ಹೆಚ್. ದೇಶಪಾಂಡೆ, ಹೆಚ್.ಸಿ. ದಾಸಪ್ಪ ಇನ್ನೂ ಅನೇಕ ಸಾಹಿತಿಗಳು, ರಾಜಕಾರಣಿಗಳ ನಿರಂತರ ಹೋರಾಟದ ಫಲಶ್ರುತಿಯಾಗಿ ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶಗಳೆಲ್ಲವೂ ಒಟ್ಟುಗೂಡಿ ಕರ್ನಾಟಕ ಏಕೀಕರಣಗೊಂಡಿತು.

ಇಂದು ಕರ್ನಾಟಕವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ದೇಶದಲ್ಲಿ 7ನೇ ಸ್ಥಾನವನ್ನು ಪಡೆದಿದೆ.[9] ಭಾರತದ ಅತ್ಯಂತ ಮುಂದುವರಿದ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಕರ್ನಾಟಕದಲ್ಲಿ ರೇಷ್ಮೆ, ವಾಣಿಜ್ಯ ಬೆಳೆಗಳು, ಐಟಿ–ಬಿಟಿ ಮುಂತಾದವುಗಳಿಗೆ ದೇಶದಲ್ಲೆ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ.

---

7 ಅದೇ, ಪು. 92.

8 Deccan herald, 01-11-2005.

9 The Hindu.

## 3.1.–ನಕ್ಷೆ
## ಭಾರತ ದೇಶದ ಭೂನಕ್ಷೆ




## 3.1. ಕರ್ನಾಟಕದ ಸಮಗ್ರ ಚಿತ್ರಣ

ಇತಿಹಾಸದಲ್ಲಿ ಪ್ರಥಮಬಾರಿಗೆ ಕರ್ನಾಟಕದ ಉಲ್ಲೇಖವು ಕಂಡುಬರುವುದು ಮಹಾಭಾರತದ ಸಭಾ ಮತ್ತು ಭೀಷ್ಮ ಪರ್ವ[10]ಗಳಲ್ಲಿ ಅಂತೆಯೇ ಮತ್ಸ್ಯಪುರಾಣ, ಸ್ಕಂದಪುರಾಣ, ಮಾರ್ಕಂಡೇಯ ಪುರಾಣ ಮತ್ತು ಭಾಗವತ ಪುರಾಣಗಳಲ್ಲಿಯೂ ಸಹ ಕರ್ನಾಟಕ ಎಂಬ ಉಲ್ಲೇಖ ಕಂಡು ಬರುತ್ತದೆ.[11] ಭಾಗವತ ಪುರಾಣದಲ್ಲಿ ಉಲ್ಲೇಖಿಸಿರುವ "ರಿಶಿಬಾದೇವಿ" ಎಂಬ ದೇವಿಯು ಕುಟುಚಲ ಬೆಟ್ಟದಲ್ಲಿ ಅವತರಿಸಿದಳು ಎಂಬ ಪ್ರತೀತಿಯಿದೆ. ಕುಟುಚಲ ಬೆಟ್ಟವು ಇಂದಿನ ಕೋಲಾರ ಜಿಲ್ಲೆಯ ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಕಂಡುಬರುವ ಬೆಟ್ಟವಾಗಿದೆ.[12] ಕರ್ನಾಟಕ ಎಂಬ ಹೆಸರಿನ ಕುರಿತಂತೆ ನಮಗೆ ನಿಕರವಾದ ಮಾಹಿತಿ ಲಭ್ಯವಿಲ್ಲದಿದ್ದರೂ ಕೆಲವು ವಿದ್ವಾಂಸರ ಊಹೆಗಳ ಪ್ರಕಾರ ಕರ್ನಾಟಕ ಎಂಬ ಶಬ್ದವು ಕನ್ನಡದ ಶಬ್ದವಾದ ಕರು ಮತ್ತು ನಾಡು ಎಂಬ ಎರಡು ಶಬ್ದಗಳ ಮಿಶ್ರಣದಿಂದ ಬಂದಿದೆ. ಕರುನಾಡು ಎಂದರೆ ಎತ್ತರದ ಪ್ರದೇಶವೆಂದು ಅರ್ಥ. ಎರಡನೇ ಊಹೆಯ ಪ್ರಕಾರ ಕನ್ನಡ ಶಬ್ದವಾದ ಕಲ್ಲು+ನಾಡು+ಕಲ್ನಾಡು ಎಂಬ ಅರ್ಥವನ್ನು ಸಹ ಪಡೆದಿದೆ. ಮೂರನೇ ಊಹೆಯ ಪ್ರಕಾರ ಇಲ್ಲಿ ಹತ್ತಿಯನ್ನು ಬೆಳೆಯಲು ಸೂಕ್ತವಾದಂತಹ ಕಪ್ಪು ಮಣ್ಣು ಯಥೇಚ್ಛವಾಗಿ ದೊರೆಯುವುದರಿಂದ ಕಪ್ಪು ಮಣ್ಣಿನ ನಾಡು ಎಂಬ

---

[10] The Hindu.

[11] www.ourkarnatak.com

[12] www.vedbbase.net/sb/5/6/en1

ಅರ್ಥದಲ್ಲಿಯೂ ಸಹ ಕರುನಾಡು ಅಥವಾ ಕರ್ನಾಟಕವೆಂಬುದಾಗಿ ಕರೆಯಲಾಗಿದೆ. ಹೀಗೆ ಕರುನಾಡು ಎಂಬ ಹೆಸರನ್ನು ಪಡೆದಿದ್ದ ರಾಜ್ಯವು ಜನರ ಆಡುಭಾಷೆಯಲ್ಲಿ ಕರ್ನಾಟ ಎಂಬುದಾಗಿ ಬದಲಾಗಿ ಕಾಲಾಂತರದಲ್ಲಿ ಕರ್ನಾಟಕ ಎಂಬುದಾಗಿ ರೂಪಗೊಂಡಿದೆ.[13]

## 3.2.–ನಕ್ಷೆ

## ಕರ್ನಾಟಕ ವಿಧಾನಸಭಾ ಕ್ಷೇತ್ರಗಳ ನಕ್ಷೆ




13 ಕರ್ನಾಟಕ ನಾಮಕರಣ ಮಹೋತ್ಸವ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಸುವರ್ಣ ಕರ್ನಾಟಕ ಪ್ರಕಾಶನ, ಬೆಂಗಳೂರು, 2006, ಪು.ಸಂ.77.

**ಕರ್ನಾಟಕದ ಭೌಗೋಳಿಕ ಹಿನ್ನೆಲೆ**

ಕರ್ನಾಟಕ ರಾಜ್ಯವು 11.5 ಡಿಗ್ರಿ ಮತ್ತು ಉತ್ತರ ಅಕ್ಷಾಂಶ ರೇಖೆಯಲ್ಲಿ 18.5 ಡಿಗ್ರಿ ಹಾಗೂ ಪೂರ್ವದಲ್ಲಿ 74 ಡಿಗ್ರಿ ಮತ್ತು ಪೂರ್ವ ರೇಖಾಂಶದಲ್ಲಿ 78.5 ಡಿಗ್ರಿಯೊಳಗಡೆ ನೆಲೆಗೊಂಡಿದೆ.[14] ಕರ್ನಾಟಕವು ಭಾರತದ ದಕ್ಷಿಣ ಭಾಗದಲ್ಲಿದೆ. ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣವು 1,91,791 ಚ. ಕಿ. ಮೀಟರ್[15]ಗಳಾಗಿದೆ. ದೇಶದ ಒಟ್ಟು ಭೂಪ್ರದೇಶದಲ್ಲಿ ಶೇ. 5.83ರಷ್ಟು ಹಾಗೂ ವಿಸ್ತಾರದಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹೋಲಿಸಿದರೆ 9ನೇ ಸ್ಥಾನದಲ್ಲಿದೆ.[16] ಕರ್ನಾಟಕವು ಭಾರತದ ದಕ್ಷಿಣ ಪರ್ಯಾಯ ದ್ವೀಪ ವಲಯದ ಪಶ್ಚಿಮ ಭಾಗದಲ್ಲಿ ನೀಲಗಿರಿ ಪರ್ವತ ಸಮೂಹವು ಒಂದೆಡೆ ಸೇರುವ ಪಶ್ಚಿಮ ಮತ್ತು ಪೂರ್ವ ಘಟ್ಟಗಳ ಪ್ರಸ್ಥಭೂಮಿಯಲ್ಲಿದೆ. ಉತ್ತರ ಮತ್ತು ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ದಕ್ಷಿಣದಲ್ಲಿ ಕೇರಳ ಹಾಗೂ ತಮಿಳುನಾಡು ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ ರಾಜ್ಯಗಳಿಂದ ಸುತ್ತುವರೆದಿದೆ. ಕರ್ನಾಟಕ ರಾಜ್ಯವು ಉತ್ತರದಿಂದ ದಕ್ಷಿಣಕ್ಕೆ ಸುಮಾರು 750 ಕಿ.ಮೀ.ಗಳು ಮತ್ತು ಪೂರ್ವದಿಂದ ಪಶ್ಚಿಮಕ್ಕೆ 400 ಕಿ.ಮೀ.ಗಳಷ್ಟು ವ್ಯಾಪಿಸಿದೆ[17].

**3.2. ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನೆಲೆ**

"ಗಂಡು ಮೆಟ್ಟಿನ ನಾಡೆಂದು ಪ್ರಸಿದ್ಧವಾಗಿರುವ ಚಿತ್ರದುರ್ಗ ಜಿಲ್ಲೆಯು ಕರ್ನಾಟಕ ರಾಜ್ಯದ ಹೃದಯ ಭಾಗದಲ್ಲಿದೆ. ಈ ಜಿಲ್ಲೆಯು ಉತ್ತರಕ್ಕೆ ಬಳ್ಳಾರಿ, ದಕ್ಷಿಣಕ್ಕೆ ತುಮಕೂರು, ಪೂರ್ವದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಗಳನ್ನು ಹೊಂದಿದೆ. ಈ ಜಿಲ್ಲೆಯು ಸುಮಾರು 12.6ರಿಂದ 15.3 ಅಕ್ಷಾಂಶ, 75ರಿಂದ 77 ರೇಖಾಂಶದ ಮಧ್ಯೆ ಇದ್ದು ಸಮುದ್ರಮಟ್ಟದಿಂದ 2000 ಅಡಿ ಎತ್ತರದಲ್ಲಿದೆ. ಇಲ್ಲಿ ಉಷ್ಣಾಂಶ 36.2 ಸೆಲ್ಸಿಯಸ್‌ನಿಂದ 41 ಸೆಲ್ಸಿಯಸ್‌ವರೆಗೂ ಇರುತ್ತದೆ. ಚಿತ್ರದುರ್ಗ ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ." ಕಪ್ಪು, ಕೆಂಪು, ಜೌಗು ಭೂಮಿಯನ್ನು ಹೊಂದಿದೆ. ಇಲ್ಲಿ ರಾಗಿ, ಜೋಳ, ಹತ್ತಿ, ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ, ಎಳ್ಳು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇವು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ತೆಂಗು,

---

[14] www.mapsofindia.com/lat long/karnataka/

[15] ಬೇಂದ್ರೆ ಮಂಜುನಾಥ, "ಕರ್ನಾಟಕ ಜಿಲ್ಲಾ ದರ್ಶನ ಮತ್ತು ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ 29 ಜಿಲ್ಲೆಗಳ ಕಿರುಪರಿಚಯ." ಕರಾವಳಿ ಪ್ರಕಾಶನ, ಮಂಗಳೂರು, 2007, ಪು.ಸಂ–8.

[16] ಕರ್ನಾಟಕ ಮಾಹಿತಿ ಕೈಪಿಡಿ, ಸಂಶೋಧನ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, 2014, ಪು.ಸಂ–1.


[17] ಅದೇ, ಪು.ಸಂ.–1.

ಅಡಿಕೆಯನ್ನು ಬೆಳೆಯುತ್ತಾರೆ. ಈ ಜಿಲ್ಲೆಯು ವ್ಯಾಪಾರ–ವಾಣಿಜ್ಯ ಕೇಂದ್ರವಾಗಿದ್ದು, ಗುಡ್ಡ ಬೆಟ್ಟಸಾಲುಗಳನ್ನು ಒಳಗೊಂಡಿದ್ದು ಇದು ಜಿಲ್ಲೆಗೆ ರಕ್ಷಾಕವಚದಂತಿದೆ. ಈ ಜಿಲ್ಲೆಯ ಮೂಲಕ ಎನ್.ಹೆಚ್–13 ಪ್ರಮುಖ ರಾಷ್ಟ್ರೀಯ ಹೆದ್ದಾರಿ ಹಾದುಹೋಗುತ್ತದೆ. ಈ ಜಿಲ್ಲೆಯು 6 ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ

1. ಚಳ್ಳಕೆರೆ
2. ಮೊಳಕಾಲ್ಮೂರು
3. ಹಿರಿಯೂರು
4. ಹೊಳಲ್ಕೆರೆ
5. ಹೊಸದುರ್ಗ
6. ಚಿತ್ರದುರ್ಗ

**3.3.–ನಕ್ಷೆ**

**ಚಿತ್ರದುರ್ಗ ಜಿಲ್ಲೆಯ ನಕ್ಷೆ**



ಚಿತ್ರದುರ್ಗವನ್ನು ಪ್ರಾಚೀನ ಕಾಲದಿಂದಲೂ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಚಿತ್ರದುರ್ಗಕ್ಕೆ ಸೂಳ್ಗಲ್ಲುನಾಡು, ಚಿತ್ರಕಲ್ಲು, ಬೆಮ್ಮತನಕಲ್ಲು, ಚಿಮ್ಮತನೂರು, ಚಿಂತಲಕಲದುರ್ಗ, ಚಿತ್ರಕಲ್, ಚಿನ್ಮೂಲಾದ್ರಿ, ಫರೂಕಾಬಾದ್ ಹಾಗೂ ಚಿಟಲ್‌ಡ್ರುಗ್ ಎಂಬ ಹೆಸರುಗಳನ್ನು ಕಾಲಕಾಲಕ್ಕೆ ಕರೆದುಕೊಂಡು ಬಂದಿರುವುದು ತಿಳಿದುಬರುತ್ತದೆ. ಚಿತ್ರದುರ್ಗದ ಸ್ಥಳನಾಮವನ್ನು ಅಧ್ಯಯನ ಮಾಡಲು ನಮಗೆ ಸಹಾಯಕವಾಗಿರುವ ಪ್ರಮುಖ ಆಧಾರಗಳೆಂದರೆ ಈ ಜಿಲ್ಲೆಯ ಕೆಲವು ಶಾಸನಗಳು, ಪಾಳೆಯಗಾರರ ದಾಖಲೆಗಳು, ಫ್ರಾನ್ಸಿಸ್ ಬುಕಾನನ್ ಬರೆದ "A Journey from Madras through Mysore canara and Malabar" ಮತ್ತು ಪಾಳೇಯಗಾರರ ದಾಖಲೆಗಳನ್ನು ಆಧರಿಸಿ ಎಂ.ಎಸ್. ಪುಟ್ಟಣ್ಣನವರು ಬರೆದ "ಚಿತ್ರದುರ್ಗದ ಪಾಳೇಗಾರರು" ಎಂಬ ಈ ಎಲ್ಲಾ ಗ್ರಂಥಗಳು ಸ್ಥಳೀಯ ಮೂಲದ ಬಗ್ಗೆ ತಿಳಿಸುತ್ತವೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಚಿತ್ರದುರ್ಗಕ್ಕೆ ಸೂಳ್ಗಲ್ಲುನಾಡು ಎಂದು, ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಬೆಮ್ಮತ್ತನಕಲ್ಲು, ಹೊಯ್ಸಳರ ಕಾಲದಲ್ಲಿ ಬೆಮ್ಮತ್ತೂರು ಪಟ್ಟಣ, ವಿಜಯನಗರ ಕಾಲದಲ್ಲಿ ಬೆಮ್ಮತನಕಲ್ಲು, ಪಾಳೆಯಗಾರರ ಕಾಲದಲ್ಲಿ ಚಿತ್ರಕಲ್ಲುದುರ್ಗ, ಟಿಪ್ಪುಸುಲ್ತಾನನ ಕಾಲದಲ್ಲಿ ಫರೂಕಾಬಾದ್ ಹಾಗೂ ಬ್ರಿಟಿಷರ ಕಾಲದಲ್ಲಿ ಚಿಟಲ್‌ಡ್ರುಗ್ ಆಗಿ ಕಾಲದಿಂದ ಕಾಲಕ್ಕೆ ರೂಪಾಂತರವಾಗುತ್ತ ಪ್ರಸ್ತುತ ಚಿತ್ರದುರ್ಗವೆಂಬ ಹೆಸರು ಹೊಂದಿರುವುದನ್ನು ಕಾಣಬಹುದಾಗಿದೆ.

### 3.2.1. ವಿಸ್ತೀರ್ಣ

ಚಿತ್ರದುರ್ಗ ಜಿಲ್ಲೆಯ ಒಟ್ಟು ವಿಸ್ತೀರ್ಣವು 8344.4 ಚ.ಕಿ.ಮೀ.ಗಳಿದ್ದು ಜಿಲ್ಲೆಯಲ್ಲಿ ಒಟ್ಟಾರೆ ಈಗ 6 ತಾಲ್ಲೂಕುಗಳು ಮತ್ತು 22 ಹೋಬಳಿಗಳಿವೆ. ಆಡಳಿತ ವಿಕೇಂದ್ರೀಕರಣ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳಾದ 185 ಗ್ರಾಮಪಂಚಾಯಿತಿಗಳು, 6 ತಾಲ್ಲೂಕು ಪಂಚಾಯಿತಿಗಳು, 1 ಜಿಲ್ಲಾ ಪಂಚಾಯಿತಿ, 2 ಪಟ್ಟಣ ಪಂಚಾಯಿತಿಗಳು(ಮೊಳಕಾಲ್ಮೂರು ಮತ್ತು ನಾಯಕನಹಟ್ಟಿ), 2 ಪುರಸಭೆಗಳು(ಹೊಳಲ್ಕೆರೆ ಮತ್ತು ಹೊಸದುರ್ಗ), ಚಿತ್ರದುರ್ಗ, ಚಳ್ಳಕೆರೆ ಮತ್ತು ಹಿರಿಯೂರು ನಗರಗಳು ನಗರಸಭೆಯನ್ನು ಹೊಂದಿವೆ. ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 1049 ಗ್ರಾಮಗಳಿವೆ.

ಪೂರ್ವದಿಕ್ಕಿಗೆ ಆಂಧ್ರಪ್ರದೇಶದ ಗಡಿ ಎಲ್ಲೆಯಿಂದ ಸುತ್ತುವರಿದಿದ್ದು, ಉತ್ತರಕ್ಕೆ ಬಳ್ಳಾರಿ ಜಿಲ್ಲೆ, ಪಶ್ಚಿಮಕ್ಕೆ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಗಳು, ದಕ್ಷಿಣಕ್ಕೆ

ತುಮಕೂರು ಜಿಲ್ಲೆ ಆವರಿಸಿದೆ. ಪ್ರಸ್ತುತ ಪರಿಶಿಷ್ಟ ಪಂಗಡ ಸಮುದಾಯವು ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲ್ಲೂಕು ಕೇಂದ್ರ ಹಾಗೂ ಹಳ್ಳಿಗಳಲ್ಲಿ ದಟ್ಟವಾಗಿ ಕೇಂದ್ರೀಕೃತವಾಗಿದೆ. ಬಹುತೇಕವಾಗಿ ಇವರ ಮಾತೃಭಾಷೆ ತೆಲುಗು ಆಗಿದ್ದು ಶಾಲಾಕಾಲೇಜುಗಳಲ್ಲಿ ಮತ್ತು ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

### 3.2.2. ಜನಸಂಖ್ಯೆ

ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆಯ ಗಾತ್ರವನ್ನು ನೋಡುವುದಾದರೆ 2011ರ ಜನಗಣತಿಯ ಪ್ರಕಾರ 3,02,554 ಜನಸಂಖ್ಯೆ ಹೊಂದಿರುವುದು ಕಂಡುಬರುತ್ತದೆ.

### 3.2.3. ಪೌರಾಣಿಕ ಹಿನ್ನೆಲೆ

ಭಾರತದ ಪ್ರತಿಯೊಂದು ಭೂಪ್ರದೇಶಗಳಿಗೆ ಸಂಬಧಿಸಿದಂತೆ ಪೌರಾಣಿಕ ಹಿನ್ನೆಲೆಯಿದ್ದು ಮತ್ತು ಅದರಂತೆ ಇಂದಿನ ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ಹಲವು ಪೌರಾಣಿಕ ಹಿನ್ನೆಲೆಗಳನ್ನು ಗಮನಿಸಬಹುದಾಗಿದೆ. ಚಿತ್ರದುರ್ಗದ ಪಶ್ಚಿಮ ಭಾಗಕ್ಕೆ ಅಂಕಳಿಮಠವಿದ್ದು ಅದರ ಸಮೀಪದಲ್ಲಿ ಪಂಚಲಿಂಗೇಶ್ವರ ದೇವಾಲಯವಿದೆ. ಇಲ್ಲಿಗೆ ಪಾಂಡವರು ಬಂದು ಧರ್ಮೇಶ್ವರ, ಭೀಮೇಶ್ವರ, ಅರ್ಜುನೇಶ್ವರ, ನಕುಲೇಶ್ವರ ಮತ್ತು ಸಹದೇವೇಶ್ವರ ದೇವಾಲಯ ಪ್ರತಿಷ್ಠಾಪಿಸಿದರಂತೆ. ಪಾಂಡವರು ಇಲ್ಲಿ ಅರಗಿನ ಮನೆಯಲ್ಲಿದ್ದಾಗ ಬೆಂಕಿಗೆ ಸಿಕ್ಕು ಪಾರಾಗಿ ಹಿಡಿಂಬವನ ಪ್ರಾಂತ್ಯದಲ್ಲಿ ನೆಲೆಸಿದ್ದರು. ಇಲ್ಲಿಗೆ ಬಂದ ಶ್ರೀಕೃಷ್ಣನಿಂದಾಗಿ ಪವಿತ್ರವಾದ ಪಾಂಡವರ ಮೊಮ್ಮಗ ಜನಮೇಜಯರಾಯನು ಶ್ರೀಕೃಷ್ಣನ ದೇವಾಲಯವನ್ನು ಪ್ರತಿಷ್ಠಾಪಿಸಿದನಂತೆ. ಮೊಳಕಾಲ್ಮೂರು ತಾಲ್ಲೂಕಿನ ಜಟಿಂಗರಾಮೇಶ್ವರ ಬೆಟ್ಟದ ಮೇಲಿನ ಶಾಸನ ಮತ್ತು ಐತಿಹ್ಯಗಳು ರಾಮಾಯಣದ ಕುರುಹುಗಳನ್ನು ಹೇಳುತ್ತವೆ. ಇಲ್ಲಿಯೇ ಜಟಿಂಗರಾಮೇಶ್ವರ ದೇವಾಲಯವಿದ್ದು ಇಲ್ಲಿ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ ಅದರ ಹೆಸರಿನಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿದನೆಂಬುದು ಸ್ಥಳದ ಐತಿಹ್ಯ. ಕ್ರಿ.ಶ. 961ರ ಶಾಸನವೊಂದು ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ ಜಟಾಯು ಪಕ್ಷಿ ಅವನನ್ನು ಅಲ್ಲಿ ತಡೆದು ಹೋರಾಡಿ ಸತ್ತಿತೆಂಬ ಪ್ರತೀತಿಯನ್ನು ಈ ಶಾಸನವು ತಿಳಿಸುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಪೌರಾಣಿಕ ಹಿನ್ನೆಲೆ ಹೊಂದಿರುವ ಧರ್ಮಪುರ, ಹಾಲುರಾಮೇಶ್ವರ, ಭೀಮನಬಂಡೆ, ಸಿದ್ಧಾಪುರ ಹೀಗೆ ಹಲವು ಪ್ರದೇಶಗಳು ಪೌರಾಣಿಕ

ಸಂಗತಿಗಳನ್ನು ಕುರಿತು ತಿಳಿಸುತ್ತವೆ. ಚಿತ್ರದುರ್ಗವನ್ನು ಮಹಾಭಾರತದ ಕಾಲಕ್ಕೆ ಹಿಡಿಂಬಪಟ್ಟಣವೆಂದು ಮತ್ತು ದ್ವಾಪರಯುಗದಲ್ಲಿ ಈ ಸ್ಥಳಕ್ಕೆ ಹಿಡಿಂಬ ಕ್ಷೇತ್ರವೆಂಬ ಹೆಸರಿತ್ತು ಎಂದು ತಿಳಿದುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಕೋಟೆಯಲ್ಲಿ ಪುರಾವೆಗಳಿವೆ.

### 3.2.4. ಇತಿಹಾಸ ಪೂರ್ವಕಾಲದ ಹಿನ್ನೆಲೆ

ಭೂಗರ್ಭತಜ್ಞರ ಅಭಿಪ್ರಾಯದಂತೆ ಜಗತ್ತಿನಲ್ಲಿ ಅತ್ಯಂತ ಪುರಾತನವೆನಿಸಿದ ಪ್ರದೇಶ ಎಂದರೆ ಕರ್ನಾಟಕ. ಅದರಲ್ಲಿ ಅತ್ಯಂತ ಪುರಾತನ ಭೂಭಾಗ ಪ್ರದೇಶವೆಂದು ಹೇಳುತ್ತಾರೆ. ಚಿತ್ರದುರ್ಗದ ಪ್ರಾಚೀನತೆಯನ್ನು ಪ್ರಾಗೈತಿಹಾಸದಿಂದ ಗುರುತಿಸಬಹುದಾಗಿದ್ದು, ಜಿಲ್ಲೆಯಲ್ಲಿ ಇದುವರೆಗೆ ಕಂಡುಬಂದಿರುವ 50ಕ್ಕೂ ಹೆಚ್ಚು ಪುರಾತತ್ವ ನೆಲೆಗಳು ಆಧಾರವಾಗಿವೆ. ಇಲ್ಲಿ ಆದಿ ಹಳೆಶಿಲಾಯುಗ–ಸೂಕ್ಷ್ಮಶಿಲಾಯುಗ ನವಶಿಲಾಯುಗ ಸಾಂಸ್ಕೃತಿಕ ನೆಲೆಗಳು ದೊರೆತಿವೆ. ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ನುಂಕಿಮಲೆ, ಹಳೇಕೆರೆ, ಪೂಜಾರಹಟ್ಟಿ, ಹರಳಯ್ಯಗಡಿ ಮತ್ತು ಹಾನಗಲ್ಲುಗಳಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ.

ಕ್ರಿ.ಶ. 1909ರಲ್ಲಿ ಆರ್. ನರಸಿಂಹಾಚಾರ್ ಮತ್ತು ವೆಂಕಟಸುಬ್ಬಯ್ಯನವರು, ನಂತರ ಕ್ರಿ.ಶ. 1928ರಲ್ಲಿ ಎಂ.ಹೆಚ್. ಕೃಷ್ಣ ಉತ್ಖನನ ನಡೆಸಿ ವಿವಿಧ ಭಾಗಗಳಾಗಿ ವಿಂಗಡಿಸಿದರು. ಅದರಲ್ಲಿ ಶಿಲಾಯುಗದ ಮೈಕ್ರೋಲಿಥಿಕ್, ನಿಯೋಲಿಥಿಕ್ ಮತ್ತು ಮೆಗಾಲಿಥಿಕ್ ಮೌರ್ಯ ಹಾಗೂ ಶಾತವಾಹನರ ಕಾಲಕ್ಕೆ ಸಂಬಂಧಿಸಿದ ಅವಶೇಷಗಳನ್ನು ಪತ್ತೆ ಹಚ್ಚಿದರು. ಕ್ರಿ.ಶ. 1947ರಲ್ಲಿ ಮಾರ್ಟಿಮರ್ ವೀಲರ್ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ಈ ಎರಡು ಪ್ರದೇಶ ನೆಲೆಗಳಲ್ಲಿ ಮೆಗಾಲಿಥಿಕ್ ಸಂಸ್ಕೃತಿ ಪತ್ತೆ ಮಾಡಿದರು. ಈ ರೀತಿ ಈ ಪ್ರದೇಶ ಒಂದು ಇತಿಹಾಸ ಪೂರ್ವಕಾಲದ ಹಿನ್ನೆಲೆಯನ್ನು ಹೊಂದಿದೆ.

### 3.2.5. ಐತಿಹಾಸಿಕ ಹಿನ್ನೆಲೆ

ಚಿತ್ರದುರ್ಗ ಜಿಲ್ಲೆ ಮೌರ್ಯರ ಕಾಲದಲ್ಲಿ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತು ಎಂಬುದಕ್ಕೆ ಅಶೋಕನ ಶಾಸನಗಳು ಬೆಳಕು ಚೆಲ್ಲುತ್ತವೆ. ಹಾಗಾಗಿ ಬ್ರಹ್ಮಗಿರಿ, ಜಟಿಂಗರಾಮೇಶ್ವರ ಅಶೋಕ ಸಿದ್ಧಾಪುರಗಳು ಮೌರ್ಯ ಸಾಮ್ರಾಜ್ಯದ ಎಲ್ಲೆಯನ್ನು ಸೂಚಿಸುತ್ತವೆ. ಬ್ರಹ್ಮಗಿರಿ ಪ್ರದೇಶವು ಅಶೋಕನ ಪ್ರಾಂತ್ಯಾಧಿಕಾರಿಯ ರಾಜಧಾನಿಯಾಗಿತ್ತು ಎಂದು ಪ್ರಾಕ್ತನಶಾಸ್ತ್ರಜ್ಞರಾದ ಡಾ. ಶೇಷಾದ್ರಿಯವರ ಅಭಿಪ್ರಾಯವಾಗಿದೆ. ಇಲ್ಲಿ ನಿರ್ಮಿಸಿರುವ

ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅವಶೇಷಗಳ ಆಧಾರದ ಮೇಲೆ ಇಸಿಲ ಇಲ್ಲೇ ಇದ್ದ ನಗರವೆಂಬುದಕ್ಕೆ ಸಾಕ್ಷಿಯಾಗಿದೆ.

ಮೌರ್ಯರ ನಂತರ ಬಂದ ಶಾತವಾಹನರು ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ಆಳ್ವಿಕೆ ನಡೆಸಿದ್ದರೆಂದು ಹೇಳಲಾಗಿದೆ. ಇಲ್ಲಿ ಚುಟು ಅರಸನಿಗೆ ಸಂಬಂಧಿಸಿದಂತೆ ಅನೇಕ ಸೀಸದ ನಾಣ್ಯಗಳು ಕಂಡುಬಂದಿವೆ. ಈ ಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯ ಉತ್ಖನನದಲ್ಲಿ ದೊರೆತ ಶಾಸನೇತರ ಪುರಾತತ್ವ ಅಂಶಗಳು ಆಧಾರವಾಗಿವೆ. ಬ್ರಿಟಿಷರ ಕಾಲದಲ್ಲಿ ದೊರೆತ ಸೀಸದ ನಾಣ್ಯಗಳನ್ನು ಪರೀಕ್ಷಿಸಿದ ಜೆ. ರ್‍ಯಾಪ್ಸನ್ ಅವರು ಶಾತವಾಹನರ ಮಾಂಡಳಿಕ ನಾಣ್ಯಗಳೆಂದು ತಿಳಿಸಿದ್ದಾರೆ. ಕ್ರಿ.ಶ. 1928ರಲ್ಲಿ ಎಂ.ಎಚ್. ಕೃಷ್ಣ ಅವರ ಚಂದ್ರವಳ್ಳಿಯ ಉತ್ಖನನದಿಂದ ಯಜ್ಞಶ್ರೀಶಾತಕರ್ಣಿಯ, ಶಾತಕರ್ಣಿ ಗೌತಮಿಪುತ್ರ ಹಾಗೂ ರೋಮನ್ ಚಕ್ರವರ್ತಿ ಆಗಸ್ಟಸ್ ಕಾಲದ ನಾಣ್ಯಗಳು ದೊರೆತಿವೆ. ಬ್ರಹ್ಮಗಿರಿಯಲ್ಲಿ ಶೋಧನೆ ಮಾಡಿದ ಸರ್ ಮಾರ್ಟಿಮರ್ ವೀಲರ್ ಅವರಿಗೂ ಶಾತವಾಹನರಿಗೆ ಸಂಬಂಧಿಸಿದ ಹಲವು ಕುರುಹುಗಳು ದೊರೆತಿವೆ.

ಶಾತವಾಹನರ ನಂತರ ಬಂದ ಕದಂಬರು ಚಿತ್ರದುರ್ಗವನ್ನು ಕ್ರಿ.ಶ. 3ನೇ ಶತಮಾನದಿಂದ 7ನೇ ಶತಮಾನದ ಮಧ್ಯ ಭಾಗದವರೆಗೆ ಸುಮಾರು 375 ವರ್ಷ ಆಳ್ವಿಕೆ ನಡೆಸಿದರು ಎಂಬುದು ತಿಳಿಯುತ್ತದೆ. ಡಾ. ರಾಜಶೇಖರಪ್ಪನವರ ಸಂಶೋಧನೆಯಂತೆ ಮಯೂರವರ್ಮ ಪಲ್ಲವರಿಂದ ಅವಮಾನಗೊಂಡು ತನ್ನ ಬ್ರಾಹ್ಮಣತ್ವ ತ್ಯಜಿಸಿ ಕ್ಷತ್ರಿಯತ್ವ ಸ್ವೀಕರಿಸಿ ಚಂದ್ರವಳ್ಳಿಯ ಸಮೀಪದ ಧವಳಪ್ಪನಗುಡ್ಡದ ಸುತ್ತಮುತ್ತ ವಾಸಿಸುತ್ತಿದ್ದ ಎಂದು ತಿಳಿಸುತ್ತಾರೆ. ಮೊಳಕಾಲ್ಮೂರು ಬಳಿಯ ಲಂಕೇಶ್ವರ ದೇವಾಲಯವನ್ನು ಕದಂಬ ವಂಶದ ದೊರೆ 10ನೇ ಶತಮಾನದಲ್ಲಿ ನಿರ್ಮಿಸಿದ ಎಂದು ತಿಳಿದುಬರುತ್ತದೆ. ಕದಂಬರ ನಂತರ ಬಂದ ಬಾದಾಮಿ ಚಾಲುಕ್ಯ ಶಾಸನಗಳು ಕ್ರಿ.ಶ. 6ನೇ ಹಾಗೂ 8ನೇ ಶತಮಾನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬಂದಿವೆ. ಇವರ ಕಾಲದಲ್ಲಿ ಚಿತ್ರದುರ್ಗವನ್ನು ಸೂಳ್ಗಲನಾಡು ಎಂದು ಕರೆಯಲಾಗುತ್ತಿತ್ತು.

ಬಾದಾಮಿ ಚಾಲುಕ್ಯರ ನಂತರ ಬಂದ ನೊಳಂಬರು ಕರ್ನಾಟಕದಲ್ಲಿ ಹಲವು ಸಾಮ್ರಾಜ್ಯಗಳ ಮಹಾಸಾಮಂತರಾಗಿ ಮಾಡಿರುವ ಅಂಶ ಬೆಳಕಿಗೆ ಬರುತ್ತದೆ. ನೊಳಂಬವಾಡಿ 32,000 ಪ್ರದೇಶಗಳನ್ನು ಚಿತ್ರದುರ್ಗ ಒಳಗೊಂಡಿದ್ದ ಪ್ರದೇಶವೆಂದು ತಿಳಿದುಬರುತ್ತದೆ. ಆಡಳಿತದ ದೃಷ್ಟಿಯಿಂದ ವಾಡಿ, ನಾಡು, ಊರು, ವಳ್ಳಿ ಹಾಗೂ

ಹಳ್ಳಿಯಾಗಿ ವಿಭಾಗಿಸಿರುವುದರ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಹಿರೆಮಧುರೆ, ಚಿಕ್ಕಮಧುರೆ, ದೊಡ್ಡಉಳ್ಳಾರ್ಥಿ, ಗಂಜಿಗಟ್ಟೆ, ಬಾಗೇನಾಳು, ಧರ್ಮಪುರ, ಐಮಂಗಲ, ಸಿದ್ಧಾಪುರ, ಮೊಳಕಾಲ್ಮೂರು ಮತ್ತು ತುರುವನೂರುಗಳಲ್ಲಿ ನೊಳಂಬ ಶಾಸನಗಳು ದೊರೆಯುತ್ತವೆ. ಕ್ರಿ.ಶ. 798ರಿಂದ 982ರವರೆಗೆ ರಾಷ್ಟ್ರಕೂಟರು ಚಿತ್ರದುರ್ಗವನ್ನು ಆಳ್ವಿಕೆ ಮಾಡಿದ್ದರೆಂದು ಚಳ್ಳಕೆರೆ ತಾಲ್ಲೂಕಿನ ಶಾಸನಗಳಿಂದ ತಿಳಿದುಬಂದಿದೆ. ಪ್ರಸಿದ್ಧ ದೊರೆ 3ನೇ ಗೋವಿಂದನ ಕಾಲದ ಬಗ್ಗೆ ಬೆಳಕು ಚೆಲ್ಲುತ್ತದೆ. ಒಟ್ಟಾರೆ ಈ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಗುರುತಿಸಬಹುದಾಗಿದೆ.

ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದಂತೆ 3ನೇ ಜಯಸಿಂಹನ ಬಗ್ಗೆ ಅಗಾಧವಾದ ಶಾಸನಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ಚಳ್ಳಕೆರೆ ತಾಲ್ಲೂಕಿನಲ್ಲಿ ದೊರಕುವ ಎರಡು ಶಾಸನಗಳಿಂದ ಮತ್ತು ಇತರೆ ದಾಖಲೆಗಳಿಂದಲೂ ಇರುವ ರೊಳ್ಳೆ ಮತ್ತು ಶಿರಾ ಪ್ರಾಂತ್ಯಗಳನ್ನು ಆಳ್ವಿಕೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಕ್ರಿ.ಶ. 1073ರ ಸಂದರ್ಭದಲ್ಲಿ ಚಿತ್ರದುರ್ಗ ಶಾಸನವೊಂದರ ಪ್ರಕಾರ ಚಿತ್ರದುರ್ಗದಲ್ಲಿ ಕೋಟೆಯಿದ್ದ ವಿಷಯ ಶಾಸನೋಕ್ತವಾಗಿರುವುದು ಇದೇ ಮೊದಲು ಇವರ ಕಾಲದ ಕಲೆ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಇಲ್ಲಿ ಕಂಡುಬಂದಿರುವುದುಂಟು. ಈ ಎಲ್ಲಾ ಆಧಾರಗಳ ಮೇಲೆ ಕಲ್ಯಾಣಿ ಚಾಲುಕ್ಯರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂದು ಹೇಳಬಹುದು.

ಕರ್ನಾಟಕದ ಇತಿಹಾಸದಲ್ಲಿ ಹೊಯ್ಸಳರ ಕಾಲ ಅಮೋಘವಾದದ್ದು, ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯನ್ನು ತಿಳಿಸಲು 50ಕ್ಕೂ ಹೆಚ್ಚು ಶಾಸನಗಳಿವೆ. ಕ್ರಿ.ಶ. 1199ರ ಹೊಯ್ಸಳರ ದೊರೆ ಇಮ್ಮಡಿ ಬಲ್ಲಾಳನ ಶಾಸನವೇ ಈ ಜಿಲ್ಲೆಯಲ್ಲಿ ದೊರೆತ ಹೊಯ್ಸಳರ ಮನೆತನದ ಪ್ರಥಮ ಶಾಸನ. ಚಿತ್ರದುರ್ಗವನ್ನು ಆಗ ಬೆಮ್ಮತ್ತೂರು ಪಟ್ಟಣವೆಂದು ಕರೆಯಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಚಿತ್ರದುರ್ಗ ಬೆಟ್ಟದ ಮೇಲಿನ ಬಂಡೆ ಶಾಸನ, ಗಂಜಿಗಟ್ಟೆ ಗ್ರಾಮದ ಪಂಡರಹಳ್ಳಿ ಬೆಟ್ಟದ ಮೇಲಿನ ಶಾಸನಗಳ ಆಧಾರದ ಮೇಲೆ ಹೊಯ್ಸಳರು ಚಿತ್ರದುರ್ಗ ಪ್ರದೇಶವನ್ನು ಅಂದು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು ಎಂದು ತಿಳಿದುಬರುತ್ತದೆ. ಹೊಯ್ಸಳರ ಅವನತಿಯ ನಂತರ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತು. ಕ್ರಿ.ಶ. 1356ರ ಶಾಸನವು ವಿಜಯನಗರದ ಪ್ರತಿನಿಧಿಯಾಗಿ ಮಲ್ಲಿನಾಥ ಒಡೆಯನು ಬೆಮ್ಮತ್ತನ ಕಲ್ಲು (ಚಿತ್ರದುರ್ಗ) ನಾಡನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದ ಎಂದು ತಿಳಿಸುತ್ತದೆ. ಕ್ರಿ.ಶ. 15ನೇ ಶತಮಾನದ ವೇಳೆಗೆ ಪಾಳೇಗಾರರು ತಲೆ ಎತ್ತಿ ವಿಜಯನಗರದವರು ಸಾಮಂತರಾಗಿ

ಆಳ್ವಿಕೆಯನ್ನು ಪ್ರಾರಂಭಿಸಿದರು. ಕ್ರಿ.ಶ. 1565ರ ತಾಳಿಕೋಟೆಯ ಕದನದಲ್ಲಿ ಸೋಲುಂಡು ವಿಜಯನಗರ ಸಾಮ್ರಾಜ್ಯದ ಪರಿಣಾಮವಾಗಿ ಚಿತ್ರದುರ್ಗದ ಪಾಳೇಗಾರರು ಸ್ವಾತಂತ್ರ್ಯ ಪಡೆಯಲು ನಾಂದಿಯಾಯಿತು.

### 3.2.6. ಪಾಳೇಗಾರರ ಕಾಲದಲ್ಲಿ ಚಿತ್ರದುರ್ಗ

ಪಾಳೇಗಾರರಿಗೆ ಅಮರನಾಯಕರೆಂಬ ಹೆಸರಿತ್ತು. ಊಳಿಗಮಾನ್ಯ ಪದ್ಧತಿಯಂತೆ ಭೂಮಿಯನ್ನು ಮಾಗಣಿಯಾಗಿ ನೀಡುತ್ತಿದ್ದರು. ಇದಕ್ಕೆ ಬದಲಾಗಿ ಅಮರನಾಯಕನು ವಿಜಯನಗರ ಸಾಮ್ರಾಜ್ಯಕ್ಕೆ ಸೈನಿಕ ಸೇವೆಯನ್ನು ನೀಡಬೇಕಿತ್ತು. ಕ್ರಿ.ಶ. 1605ರ ಪಿರಿಯಾಪಟ್ಟಣದ ಶಾಸನ ಹಾಗೂ ಮಂಡ್ಯ ಪ್ರದೇಶದ 63 ನಂಬರಿನ ಕ್ರಿ.ಶ. 1654ರ ಶಾಸನ ಪಾಳೇಗಾರರ ಬಗ್ಗೆ ತಿಳಿಸುತ್ತದೆ. ಎಂ.ಎಸ್. ಪುಟ್ಟಣ್ಣನವರ ಪ್ರಕಾರ ಪಾಳೆಗಾರ ಎಂದರೆ ದಂಡಿನೊಡನೆ ಪಾಳೇಯನ್ನು ರಚಿಸಿಕೊಂಡು ಕದನಕ್ಕೆ ಸಿದ್ಧವಾಗಿರುವವನು ಎಣದಿದ್ದಾರೆ. ಅಂದಿನ ಚಿತ್ರದುರ್ಗದ ಪಾಳೇಗಾರರು ಆಳ್ವಿಕೆ ನಡೆಸಿದ ಸ್ಥಳಗಳು ಎಂದರೆ ರಾಯದುರ್ಗ, ಹರ್ತಿಕೋಟೆ, ಚಿತ್ರದುರ್ಗ, ಸಂತೆಬೆನ್ನೂರು, ನಾಯಕನಹಟ್ಟಿ, ಮತ್ತೋಡು. ಚಿತ್ರದುರ್ಗದ ಪಾಳೇಗಾರರು(ಕ್ರಿ.ಶ. 16ರಿಂದ 18ನೇ ಶತಮಾನ) ಮ್ಯಾಸಬೇಡ ಜನಾಂಗದವರಾಗಿದ್ದ ಇವರು ತಮ್ಮನ್ನು ವಾಲ್ಮೀಕಿ ಗೋತ್ರದವರೆಂದು, ಕಾಮಗೇತಿ ಎಂಬ ವಂಶಕ್ಕೆ ಸೇರಿದವರೆಂದು, ಕಾಮಗೇತಿಕಸ್ತೂರಿ ಎಂದು ಕರೆದುಕೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ವಂಶದ ಮೂಲಪುರುಷ ಚಿತ್ರನಾಯಕ ಕಾಮಗೇತಿ ವಂಶದ ಮೊದಲ ದೊರೆ ಎಂದು ಕರೆಸಿಕೊಂಡನು. ಮತ್ತೀತಿಮ್ಮಣ್ಣನಾಯಕ ಚಿತ್ರದುರ್ಗವನ್ನು ಕೇಂದ್ರವನ್ನಾಗಿಟ್ಟುಕೊಂಡು ತಿಮ್ಮಣ್ಣನಾಯಕನಿಂದ ಹಿಡಿದು ರಾಜವೀರಮದಕರಿ ನಾಯಕನವರೆಗೆ ಒಟ್ಟು 14 ಮಂದಿ ಸೇರಿ 231 ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಒಂದನೇ ಮದಕರಿನಾಯಕನ ಕಾಲದಲ್ಲಿ ಜನರ ಜೀವನೋಪಾಯಕ್ಕಾಗಿ ಸಣ್ಣ ನೀರಾವರಿ ಪ್ರಾರಂಭಿಸಿ ಹುಲ್ಲೂರುಕೆರೆ ಹಾಗೂ ಚಿತ್ರದುರ್ಗದಲ್ಲಿ ದೊಡ್ಡಕೆರೆ ನಿರ್ಮಾಣ ಮಾಡಿದರು. ಆಡಳಿತದ ದೃಷ್ಟಿಯಿಂದ ದಳವಾಯಿಗಳು, ಠಾಣೆಯ ಗುರಿಕಾರರು, ಓಲೆಕಾರರು ಹಾಗೂ ಸೇನೆ ಇರುತ್ತಿತ್ತು ಎಂಬುದು ತಿಳಿದುಬಂದಿದೆ.

ಕ್ರಿ.ಶ. 1675ರಲ್ಲಿ ಚಿಕ್ಕಣ್ಣನಾಯಕನು ನಿಡುಗಲ್ಲು ಪಾಳೇಗಾರರನ್ನು ಸೋಲಿಸಿ ಸಾಣೀಕೆರೆ ಪಾಳೇಗಾರರು ಮತ್ತು ಹಟ್ಟಿ ಪಾಳೇಗಾರರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದನು. ನಂತರ ಚಿಕ್ಕಣ್ಣನಾಯಕನು ವೀರಶೈವನಾಗಿ ಮತಾಂತರಗೊಂಡು

ಉಗ್ರಚನ್ನವೀರದೇವ ಎಂಬ ವಿರಕ್ತ ಜಂಗಮರನ್ನು ಗುರುವಾಗಿ ಸ್ವೀಕರಿಸುವುದರ ಮೂಲಕ ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತಿಗೊಳ್ಳಲು ಕಾರಣರಾದರು.

ನಂತರದಲ್ಲಿ ಆಳ್ವಿಕೆಗೆ ಬಂದ ಬಿಳಿಚೋಡು ಸಂತತಿಯ ಚಿತ್ರದುರ್ಗದ ಪಾಳೇಗಾರರಲ್ಲಿ ಭರಮಪ್ಪನಾಯಕ ಪ್ರಸಿದ್ಧನಾಗಿದ್ದು, ಸಮಾಜಮುಖಿಯಾದ ಇವನು ಕೆರೆಗಳನ್ನು ಕಟ್ಟಿಸಿದ. ಅವುಗಳಲ್ಲಿ ಭರಮಸಾಗರ ಕೆರೆ, ಅಬ್ಬನಾಯಕನ ಕೆರೆ ಮತ್ತು ಹೊಲತಿಹಾಳು ಕೆರೆ ಕಟ್ಟಿಸಿ ಇಲ್ಲಿನ ಪ್ರದೇಶಕ್ಕೆ ಭೀಮಸಮುದ್ರವೆಂದು ನಾಮಕರಣ ಮಾಡಲಾಯಿತು. ಧಾರ್ಮಿಕವಾದ ಕೊಡುಗೆಗೆ ಸಂಬಂಧಿಸಿದಂತೆ 30 ದೇವಾಲಯಗಳು ಮತ್ತು ಚಿತ್ರದುರ್ಗದ ಮುರುಘರಾಜೇಂದ್ರ ಶರಣರಿಗೆ ಕಲ್ಲುಮಠವನ್ನು ನಿರ್ಮಿಸಿದರು.

ಕ್ರಿ.ಶ. 1754ರಲ್ಲಿ ರಾಜವೀರ ಮದಕರಿನಾಯಕನ ಆಳ್ವಿಕೆ 12ನೇ ಕಿರಿಯ ವಯಸ್ಸಿನವನಿದ್ದಾಗಲೇ ಮೂಲವಾಗಿ ಕ್ಷತ್ರಿಯನಲ್ಲದಿದ್ದರೂ ಮದಿಸಿದ ಕರಿ(ಆನೆ)ಯನ್ನು ತನ್ನ ತೋಳಿನ ಬಲದಿಂದಲೇ ಹಿಡಿತಕ್ಕೆ ತೆಗೆದುಕೊಂಡು ಅದರ ಬಲವನ್ನು ಕುಗ್ಗಿಸಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರಿಂದ ಮದಕರಿ ಹೆಸರನ್ನು ಪಡೆದ ಈ ಶಕ್ತಿಶಾಲಿ ಬೇಡ ಜನಾಂಗದವನಾಗಿದ್ದರೂ ರಾಜ್ಯವನ್ನಾಳ್ವಿಕೆ ಮಾಡಿದ್ದು ಸತ್ಯರ್ಹ.

ಇಡೀ ದಕ್ಷಿಣಭಾರತದಲ್ಲಿಯೇ ತುಂಬ ಹೆಸರುವಾಸಿಯಾಗಿದ್ದ ಹೈದರಾಲಿ ಚಿತ್ರದುರ್ಗದ ಮೇಲೆ 4 ಬಾರಿ ದಾಳಿ ಮಾಡಿ ಫಲ ಕಾಣಲಿಲ್ಲ. ಕ್ರಿ.ಶ. 1779ರಲ್ಲಿ ಮದಕರಿನಾಯಕನ ಸೈನ್ಯದಲ್ಲಿದ್ದ ಮುಸ್ಲಿಂ ಸರದಾರರು ಮತ್ತು ಕೆಲವು ಹಿಂದೂ ಅಧಿಕಾರಿಗಳು ಶಾಮೀಲಾಗಿ ಚಿತ್ರದುರ್ಗದ ಕೋಟೆಯನ್ನು ಹೈದರಾಲಿಯು ವಶಪಡಿಸಿಕೊಂಡನು. ತದನಂತರ ಮದಕರಿನಾಯಕ ಅವನ ತಮ್ಮ ಪರಶುರಾಮಪ್ಪನಾಯಕ, ಮಗ ಕುಮಾರಭರಮಪ್ಪನಾಯಕ ಮತ್ತು ದೊಡ್ಡಮದಕರಿನಾಯಕರನ್ನು ಬಂಧಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಹೋಗಲಾಯಿತು. ಇಲ್ಲಿಂದ ಪರಶುರಾಮಪ್ಪನಾಯಕ ಮತ್ತು ಕುಮಾರಭರಮಪ್ಪ ನಾಯಕನನ್ನು ಕಬ್ಬಾಳು ದುರ್ಗದ ಕಾರಾಗೃಹಕ್ಕೆ ಹಾಕಲಾಯಿತು. ಇವರಿಬ್ಬರು ಇಲ್ಲಿಂದ ಪರಾರಿಯಾಗಲು ಪ್ರಯತ್ನಿಸಿ ಸಿಕ್ಕುಬಿದ್ದು ಹೈದರನ ಆದೇಶದಂತೆ ಇಬ್ಬರನ್ನು ಭೈರಾಪಟ್ಟಣ ಗ್ರಾಮದ ಹತ್ತಿರದ ಆಲದ ಮರಕ್ಕೆ ನೇಣು ಹಾಕಲಾಯಿತು. ಬಂಧನದಲ್ಲಿದ್ದ ಮದಕರಿನಾಯಕನಿಗೆ ಆಹಾರದಲ್ಲಿ ವಿಷ ನೀಡಿ ಕೊಲ್ಲಲಾಯಿತು.

ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಚಿತ್ರದುರ್ಗ ಮೈಸೂರು ಪ್ರಾಂತ್ಯಕ್ಕೆ ಸೇರಿದ್ದು ಇವರ ಕಾಲದಲ್ಲಿ ಹಿರಿಯೂರು ತಾಲ್ಲೂಕಿನಲ್ಲಿ ಹರಿದುಹೋಗುವ ವೇದಾವತಿ ನದಿಗೆ ಅಡ್ಡಲಾಗಿ ವಾಣಿವಿಲಾಸಸಾಗರ ಅಣೆಕಟ್ಟು ನಿರ್ಮಿಸಲಾಯಿತು. ಇವರ ಆಳ್ವಿಕೆಯ ಕಾಲದಲ್ಲಿ ಸಾಕಷ್ಟು ಕೆರೆ–ಕಟ್ಟೆ, ಕಲ್ಯಾಣಿಗಳ ನಿರ್ಮಾಣ ಮಾಡುವುದರ ಮೂಲಕ ಜನರಲ್ಲಿ ಇಂದಿಗೂ ಚಿರಾಯುವಾಗಿ ಉಳಿದಿದ್ದಾರೆ. ಕ್ರಿ.ಶ. 1956ರಲ್ಲಿ ರಾಜ್ಯ ಪುನರ್‌ವಿಂಗಡಣೆ ಸಮಯದಲ್ಲಿ ಚಿತ್ರದುರ್ಗವನ್ನು ಐತಿಹಾಸಿಕ ಸ್ಥಳದ ಆಧಾರದ ಮೇಲೆ ಜಿಲ್ಲಾ ಕೇಂದ್ರವನ್ನಾಗಿ ಮಾಡಿ 9 ತಾಲ್ಲೂಕುಗಳಾದ ಚಿತ್ರದುರ್ಗ, ದಾವಣಗೆರೆ, ಹರಿಹರ, ಜಗಳೂರು, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ಸೇರಿಸಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು.

ಸನ್ಮಾನ್ಯ ಶ್ರೀ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಚಿತ್ರದುರ್ಗದ ಜಿಲ್ಲೆಯೊಳಗೆ ತಾಲ್ಲೂಕು ಕೇಂದ್ರವಾಗಿದ್ದ ದಾವಣಗೆರೆಯನ್ನು 1997ರಲ್ಲಿ ಜಿಲ್ಲಾ ಕೇಂದ್ರವನ್ನಾಗಿ ಮಾಡಲಾಯಿತು. ಪ್ರತ್ಯೇಕಗೊಂಡ ಚಿತ್ರದುರ್ಗ ಜಿಲ್ಲೆಗೆ ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕು ಸೇರಿಸಿ, ವಿಭಜಿತ ಚಿತ್ರದುರ್ಗ ಜಿಲ್ಲೆಯಾಗಿ ಮಾಡಲಾಯಿತು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು ಹಾಗೂ ಚಿತ್ರದುರ್ಗ ತಾಲ್ಲೂಕುಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿರುವ ಪರಿಶಿಷ್ಟ ಪಂಗಡದವರ ಐತಿಹಾಸಿಕ ಮತ್ತು ರಾಜ್ಯಶಾಸ್ತ್ರೀಯ ಹಿನ್ನೆಲೆಯ ದೃಷ್ಟಿಯಿಂದ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಲಾಯಿತು.

### 3.3. ಚಳ್ಳಕೆರೆ ತಾಲ್ಲೂಕು ಹಾಗೂ ಮೀಸಲು ವಿಧಾನಸಭಾ ಕ್ಷೇತ್ರದ ಪರಿಚಯ

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ. ಈ ತಾಲ್ಲೂಕಿನಲ್ಲಿ ತುರವನೂರು, ನಾಯಕನಹಟ್ಟಿ, ಪರಶುರಾಂಪುರ ಮತ್ತು ತಳಕು ಎಂಬ 4 ಹೋಬಳಿಗಳಿವೆ. 195 ಹಳ್ಳಿ ಮತ್ತು ಒಂದು ಪಟ್ಟಣವನ್ನು ಹೊಂದಿದೆ. ಚಿತ್ರದುರ್ಗ ಜಿಲ್ಲೆಯಲ್ಲೇ ಅತಿ ಕಡಿಮೆ ಮಳೆಯಾಗುವ ತಾಲ್ಲೂಕು ಇದಾಗಿದೆ. ಇಲ್ಲಿ ಕಡಲೆಕಾಯಿಯನ್ನು ಅತಿ ಹೆಚ್ಚು ಬೆಳೆಯಲಾಗುತ್ತದೆ. 70ಕ್ಕೂ ಹೆಚ್ಚು ಶೇಂಗಾ ಎಣ್ಣೆಯ ಮಿಲ್‌ಗಳು ಇಲ್ಲಿವೆ. ಆದ್ದರಿಂದಲೇ ಇದನ್ನು ಆಯಲ್ ಸಿಟಿ ಮತ್ತು ಚೋಟಾ ಮುಂಬೈ ಎಂದು ಕರೆಯಲಾಗುತ್ತದೆ.

### 3.3.1. ಹೆಸರಿನ ಮೂಲ

ಕ್ರಿ.ಶ. 1882ರವರೆಗೆ ಈ ತಾಲ್ಲೂಕು ದೊಡ್ಡೇರಿ ತಾಲ್ಲೂಕು ಎಂದೇ ಹೆಸರಾಗಿತ್ತು. 1825 ರಿಂದ 1866ರವರೆಗೆ ಮೊಳಕಾಲ್ಮೂರು ತಾಲ್ಲೂಕಿನ ಅನೇಕ ಪ್ರದೇಶಗಳು ಈ ತಾಲ್ಲೂಕಿನಲ್ಲಿ ಒಳಗೊಂಡಿದ್ದವು.

### 3.3.2. ಗಡಿರೇಖೆ

ಉತ್ತರದಲ್ಲಿ ಮೊಳಕಾಲ್ಮೂರು ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆ, ದಕ್ಷಿಣದಲ್ಲಿ ಹಿರಿಯೂರು, ಪಶ್ಚಿಮದಲ್ಲಿ ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳು, ಪೂರ್ವದಲ್ಲಿ ಆಂಧ್ರ ಮತ್ತು ಪಾವಗಡ ತಾಲ್ಲೂಕುಗಳಿಂದ ಆವೃತ್ತವಾಗಿರುವ, ಚಿತ್ರದುರ್ಗ ಜಿಲ್ಲೆಯ ಉಪವಿಭಾಗಕ್ಕೆ ಸೇರಿದ ಒಂದು ತಾಲ್ಲೂಕು ಕೇಂದ್ರ ಹಾಗೂ ತಾಲ್ಲೂಕಿನ ಮುಖ್ಯ ಸ್ಥಳ.

### 3.3.3. ವಿಸ್ತೀರ್ಣ ಮತ್ತು ಜನಸಂಖ್ಯೆ

ಚಳ್ಳಕೆರೆ ತಾಲ್ಲೂಕು ಒಟ್ಟು 2,059.8 ಚದರ ಕಿ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿಯೇ ದೊಡ್ಡ ತಾಲ್ಲೂಕು ಆಗಿದೆ. 2011ರ ಜನಗಣತಿ ಪ್ರಕಾರ ತಾಲ್ಲೂಕಿನಲ್ಲಿ 3,65,784 ಜನಸಂಖ್ಯೆ ಹೊಂದಿದ್ದು, ಇದರಲ್ಲಿ 1,85,931 ಪುರುಷರು ಹಾಗೂ 1,79,853 ಮಹಿಳೆಯರಿದ್ದಾರೆ. ತಾಲ್ಲೂಕಿನಲ್ಲಿ ಪುರುಷರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಲಿಂಗಾನುಪಾತದಲ್ಲಿ ಪ್ರತಿ ಸಾವಿರ ಪುರುಷರಿಗೆ 967 ಮಹಿಳೆಯರಿದ್ದಾರೆ. ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಕ್ರಮವಾಗಿ 82,899 ಮತ್ತು 1,07,640 ಜನರಿದ್ದಾರೆ. ಇದು ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಶೇ.29.4ರಷ್ಟು ಹೊಂದಿರುವ ತಾಲ್ಲೂಕಾಗಿದೆ. ತಾಲ್ಲೂಕಿನಲ್ಲಿ 3,10,590 ಜನ ಗ್ರಾಮೀಣಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. 55,194 ಜನ ನಗರಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ತಾಲ್ಲೂಕಿನ ಸಾಕ್ಷರತೆಯ ಪ್ರಮಾಣ ಶೇ. 69.22 ಇದು ಸಾಕ್ಷರತೆಯ ದೃಷ್ಟಿಯಿಂದ 4ನೇ ಸ್ಥಾನದಲ್ಲಿದೆ.

ತಾಲ್ಲೂಕಿನ ಒಟ್ಟು ವಿಸ್ತೀರ್ಣ 2059.8 ಚ.ಕಿ.ಮೀ. ವಿಶೇಷವಾದ ಬೆಟ್ಟ ಶ್ರೇಣಿಗಳಿಲ್ಲ. ಆದರೆ ಅಲ್ಲಲ್ಲೆ ಕೆಲವು ಕಡೆ ಕಣಶಿಲೆಯ ಬೋಳು ಬೆಟ್ಟಗಳಿವೆ ಮತ್ತು ತೆಗ್ಗು ದಿಣ್ಣೆಗಳಿಂದ ಕೂಡಿದ ಮೈದಾನ ಪ್ರದೇಶಗಳಿಂದ ಕೂಡಿದೆ. ವಿಶೇಷವಾಗಿ ಕಲ್ಲು ಜರುಗಿನಿಂದ ಕೂಡಿದ ಕೆಂಪು ಮಣ್ಣಿದ್ದು, ಕೆಲವು ಕಡೆ ಮಾತ್ರ ಕಪ್ಪು ನೆಲವಿದೆ. ವ್ಯವಸಾಯಕ್ಕೆ ಅಂತಹ ಫಲವತ್ತಾದ ಭೂಮಿಯಿಲ್ಲ. ಆದರೆ ಇತ್ತೀಚೆಗೆ ನೀರಾವರಿಗೆ

ಅನುಕೂಲವಾದ ಅಣೆಕಟ್ಟೆಗಳಿವೆ. ಅಲ್ಲದೆ ಇದು ಚಿತ್ರದುರ್ಗ ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಮಳೆ ಬೀಳುವ ತಾಲ್ಲೂಕು. ವಾರ್ಷಿಕ ಸರಾಸರಿ ಮಳೆ 404.54 ಮಿ.ಮೀ. ಮಾತ್ರ.

ತಾಲ್ಲೂಕಿನ ದಕ್ಷಿಣದಲ್ಲಿ ವೇದಾವತಿ ನದಿಯ ಪ್ರದೇಶವಾಗಿದ್ದು, ಇದು ದಕ್ಷಿಣೋತ್ತರವಾಗಿ ಹರಿದು, ಈಶಾನ್ಯದಲ್ಲಿ ಘಟಪರ್ತಿಯಿಂದ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಗರಣಿಹಳ್ಳ ಹಾಗೂ ನಾಯಕನಹಟ್ಟಿ ಹಳ್ಳಗಳು ಈ ನದಿಗೆ ಸೇರುತ್ತವೆ. ಹಗರಿ ನದಿಯ ಕಣಿವೆ ಪ್ರದೇಶ ಈ ತಾಲ್ಲೂಕಿನ ವಾಯುವ್ಯ ಎಲ್ಲೆಯಾಗಿದೆ. (ನಂದಿಹಳ್ಳಿಯಲ್ಲಿ ನಿರ್ಮಾಣವಾಗಿರುವ ಅಣೆಕಟ್ಟೆಯಿಂದ ಈ ತಾಲ್ಲೂಕಿಗೆ ನೀರು ಒದಗುವ ಸಾಧ್ಯತೆ ಇದೆ ಎಂದು ತಿಳಿದು ಬರುತ್ತದೆ). ಪಾವಗಡ ತಾಲ್ಲೂಕಿನಲ್ಲಿ ಹುಟ್ಟಿ ಈ ತಾಲ್ಲೂಕಿನತ್ತ ಹರಿಯುವ ಸಣ್ಣ ಉಪ ನದಿಯಿಂದ ಈ ತಾಲ್ಲೂಕಿನ ಆಗ್ನೇಯಕ್ಕೆ ನೀರು ಒದಗುತ್ತದೆ. ಈ ತಾಲ್ಲೂಕಿನಲ್ಲಿಯೇ ಪರಶುರಾಮಪುರದ ಕೆರೆಯೇ ಅತ್ಯಂತ ದೊಡ್ಡದು. ಈ ಕೆರೆಯಿಂದ ಸುಮಾರು ಸಾವಿರಾರು ಎಕರೆಗಳಿಗೆ ನೀರು ಒದಗುತ್ತದೆ. ಅಲ್ಲದೆ ನಾರಾಯಣಪುರ ಅಣೆಕಟ್ಟೆಯ ನೀರನ್ನು ಇದಕ್ಕೆ ಬಿಡಲಾಗುತ್ತದೆ.

ಸುಮಾರು 300 ವರ್ಷಗಳ ಹಿಂದೆ ಶ್ರೀ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗಳಿಂದ ಕಟ್ಟಿಸಲ್ಪಟ್ಟ ನಾಯಕನಹಟ್ಟಿಯ ಹಿರಿಕೆರೆ ಅತ್ಯಂತ ಹಳೆಯ ಕೆರೆ. ಮೀರಾಸಾಬಿ ಹಳ್ಳಿ ರಾಣಿಕೆರೆಯಿಂದ 2.062 ಎಕರೆಗೆ, ಮನ್ನೆಕೋಟೆ, ಕೋಡಿಹಳ್ಳಿ ಕೆರೆಗಳಿಂದ 368 ಎಕರೆಗೆ, ನಾರಾಯಣಪುರದ ಕಾಲುವೆಯಿಂದ 3,822 ಎಕರೆಗಳಿಗೆ ಹಾಗೂ ತಾಲ್ಲೂಕಿನ ಇತರೆ ಕೆರೆಗಳಿಂದ ಮತ್ತು ವೇದಾವತಿ ನದಿಯಿಂದ ಏತ ಬಾವಿಗಳಿಂದ ವ್ಯವಸಾಯಕ್ಕೆ ನೀರನ್ನು ಒದಗಿಸಿಕೊಳ್ಳಲಾಗುತ್ತಿದೆ.

ಸುಮಾರು ಈ ತಾಲ್ಲೂಕಿನ ಒಟ್ಟು ಭೂಮಿ 5,09,579 ಎಕರೆಗಳಲ್ಲಿ 2,32,979 ಎಕರೆ ವ್ಯವಸಾಯದ ಭೂಮಿಯಾಗಿದೆ. ಇದರಲ್ಲಿ 7,243 ಎಕರೆಗಳಿಗೂ ಹೆಚ್ಚು ಕಾಡುಪ್ರದೇಶವಿದೆ. ಈ ತಾಲ್ಲೂಕಿನ ಅಮೃತಮಹಲ್ ಕಾವಲುಗಳು ಪ್ರಸಿದ್ಧವಾಗಿವೆ(ಉಳ್ಳಾರ್ಥಿ ಕಾವಲಿನಲ್ಲಿ ಅಮೃತಮಹಲ್ ತಳಿಯ ಹಸುಗಳನ್ನು ಸಾಕುತ್ತಾರೆ).

**3.3.4. ಸೈನ್ಸ್ ಸಿಟಿ ಚಳ್ಳಕೆರೆ**

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ. ಈ ತಾಲ್ಲೂಕಿನಲ್ಲಿ ತುರವನೂರು, ನಾಯಕನಹಟ್ಟಿ, ಪರಶುರಾಂಪುರ ಮತ್ತು ತಳಕು ಎಂಬ 4

ಹೋಬಳಿಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲೇ ಅತಿ ಕಡಿಮೆ ಮಳೆಯಾಗುವ ತಾಲ್ಲೂಕು ಇದಾಗಿದ್ದು, ಇಲ್ಲಿ ಕಡಲೆಕಾಯಿಯನ್ನು ಅತಿ ಹೆಚ್ಚು ಬೆಳೆಯಲಾಗುತ್ತದೆ. 70ಕ್ಕೂ ಹೆಚ್ಚು ಶೇಂಗಾ ಎಣ್ಣೆಯ ಮಿಲ್‌ಗಳು ಇಲ್ಲಿವೆ. ಆದ್ದರಿಂದಲೇ ಇದನ್ನು ಆಯಿಲ್ ಸಿಟಿ ಮತ್ತು ಚೋಟಾ ಮುಂಬೈ ಎಂದು ಕರೆಯಲಾಗುತ್ತದೆ. ಇಲ್ಲಿನ ಕುರುಬ ಸಮುದಾಯದವರು ನೇಯುವ ಕಂಬಳಿಗೆ ರಾಜ್ಯಾದ್ಯಂತ ಬೇಡಿಕೆ ಇದ್ದು, ಮಲೆನಾಡಿನ ಮಾರುಕಟ್ಟೆಗೆ ಇಲ್ಲಿಂದಲೇ ಕಂಬಳಿ ರಫ್ತಾಗುತ್ತದೆ. ವಿಜ್ಞಾನ ಸಂಸ್ಥೆಗಳ ಸ್ಥಾಪನೆಯಿಂದ ವಿಶ್ವದ ಭೂಪಟದಲ್ಲಿ ಚಳ್ಳಕೆರೆಯು ಬೆಳಗುತ್ತಿದೆ. ದೇಶದ ಪ್ರತಿಷ್ಠಿತ ಸಂಸ್ಥೆಯಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಬಿಟ್ಟರೆ ಚಳ್ಳಕೆರೆ ತಾಲ್ಲೂಕಿನ ಕುದಾಪುರದ 500 ಎಕರೆ ಪ್ರದೇಶದಲ್ಲಿ ತಲೆ ಎತ್ತಿದೆ. ಇದರ ಜೊತೆಗೆ DRDO, ISRO, BARC ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ಅನೇಕ ಸಂಸ್ಥೆಗಳು ಪ್ರಾರಂಭವಾಗಿದ್ದು ಇದನ್ನು ಸೈನ್ಸ್ ಸಿಟಿ ಎಂದು ಕರೆಯಲಾಗುತ್ತಿದೆ. ಈ ತಾಲ್ಲೂಕಿನಲ್ಲಿ ಹರಿಯುವ ಪ್ರಮುಖ ನದಿ ವೇದಾವತಿ. ಈ ನದಿಯ ನೀರನ್ನು ಕುಡಿಯಲು ಮತ್ತು ವ್ಯವಸಾಯಕ್ಕೆ ಉಪಯೋಗಿಸಲಾಗುತ್ತಿದೆ. ಪ್ರತಿ ಭಾನುವಾರ ಇಲ್ಲಿ ನಡೆಯುವ ಸಂತೆ ಚಿತ್ರದುರ್ಗ ಜಿಲ್ಲೆಯಲ್ಲೇ ಅತ್ಯಂತ ಪ್ರಸಿದ್ಧವಾಗಿದ್ದು, ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸು. 10 ಸಾವಿರಕ್ಕೂ ಹೆಚ್ಚು ಜನ ಬರುತ್ತಾರೆ. ನೆಲೆಗಡಲೆ, ಹತ್ತಿ, ಭತ್ತ ಇಲ್ಲಿ ವ್ಯಾಪಾರವಾಗುವ ಸರಕುಗಳು.


**ರಾಜಕೀಯ**

ಚಳ್ಳಕೆರೆ ಮೀಸಲು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 40 ಗ್ರಾಮಪಂಚಾಯಿತಿ, 20 ತಾಲ್ಲೂಕು ಪಂಚಾಯಿತಿ ಹಾಗೂ ಚಿತ್ರದುರ್ಗ ಜಿಲ್ಲಾ ಪಂಚಾಯಿತಿಯ 7 ಕ್ಷೇತ್ರಗಳ ಜೊತೆಗೆ ಚಳ್ಳಕೆರೆ ನಗರಸಭೆಯ 27 ವಾರ್ಡ್‌ಗಳನ್ನು ಒಳಗೊಂಡಿದೆ. ಇದು ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರವಾಗಿದ್ದು ಇಲ್ಲಿನ ಮತದಾರರು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿರುತ್ತಾರೆ.

## 3.4. ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಇತಿಹಾಸ

**ನಕ್ಷೆ– 3.4**

**ಚಳ್ಳಕೆರೆ ಮೀಸಲು ಕ್ಷೇತ್ರದ ನಕ್ಷೆ**




ಕರ್ನಾಟಕ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಪೈಕಿ ಚಳ್ಳಕೆರೆ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರವು ಸಹ ಒಂದು. ಚಳ್ಳಕೆರೆ ಕ್ಷೇತ್ರವು ಮೈಸೂರು ರಾಜ್ಯದ ಎರಡನೇ ವಿಧಾನಸಭೆ 1962ರವರೆಗೆ (Double Member Constituency) ದ್ವಿ–ಸದಸ್ಯ ಕ್ಷೇತ್ರವಾಗಿತ್ತು. ಒಬ್ಬರು ಸಾಮಾನ್ಯ ವರ್ಗಕ್ಕೆ ಹಾಗೂ ಮತ್ತೊಬ್ಬರು ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿ ಆಯ್ಕೆಯಾಗುತ್ತಿದ್ದರು. ನಂತರ 1962ರಿಂದ ಚುನಾವಣಾ ಕಾಯ್ದೆ ಅನ್ವಯ ಮೂರನೇ ವಿಧಾನಸಭೆ 1962ರಿಂದ 12ನೇ ವಿಧಾನಸಭೆ 2008 ಏಪ್ರಿಲ್‌ವರೆಗೆ ಸಾಮಾನ್ಯ ಕ್ಷೇತ್ರವಾಗಿತ್ತು. ನಂತರ ನ್ಯಾಯಮೂರ್ತಿ ಕುಲದೀಪ್ ಸಿಂಗ್ ನೇತೃತ್ವದ ಕ್ಷೇತ್ರ ಪುನರ್‌ವಿಂಗಡಣಾ ವರದಿ ಅನ್ವಯ 13ನೇ ವಿಧಾನಸಭೆಯಿಂದ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿದೆ.

ಈ ವಿಧಾನಸಭಾ ಕ್ಷೇತ್ರದ ರಾಜಕೀಯ ಪ್ರಕ್ರಿಯೆಯನ್ನು ಮತ್ತು ಚುನಾವಣಾ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಹಿಂದೆ ನಡೆದಿರುವ ಚುನಾವಣೆಗಳ ಫಲಿತಾಂಶವನ್ನು ತಿಳಿಯುವುದು ಸೂಕ್ತ. ಆದ್ದರಿಂದ ಪ್ರಸ್ತುತ ಅಧ್ಯಾಯದಲ್ಲಿ ಮೈಸೂರು ರಾಜ್ಯದ ಪ್ರಥಮ ವಿಧಾನಸಭೆ ಚುನಾವಣೆ 1951–52ರಿಂದ ಕರ್ನಾಟಕದ 14ನೇ ವಿಧಾನಸಭೆ 2013ರವರೆಗೆ ಚಳ್ಳಕೆರೆ ಕ್ಷೇತ್ರದ ಚುನಾವಣೆ ಫಲಿತಾಂಶವನ್ನು ಅವಲೋಕಿಸಲಾಗಿದೆ.

**ಕೋಷ್ಟಕ – 3.1.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957**

ಒಟ್ಟು ಮತದಾರರು–1,13,172 ಪುರಸ್ಕೃತಗೊಂಡ ಮತಗಳು–1,29,488

ಚಲಾವಣೆಯಾದ ಮತಗಳು–1,29,488

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 01 | ಎ ಭೀಮಪ್ಪ ನಾಯಕ್ | ಐಎನ್‌ಸಿ | 35,883 | 27.71 |
| 02 | ಟಿ ಹನುಮಯ್ಯ (ಎಸ್‌ಸಿ) | ಐಎನ್‌ಸಿ | 33,283 | 25.70 |
| 03 | ಎಂ ಗೋವಿಂದ ರೆಡ್ಡಿ | ಐಎನ್‌ಡಿ | 31,170 | 24.07 |
| 04 | ವಡ್ಡರ ಯಂಗಟಪ್ಪ (ಎಸ್‌ಸಿ) | ಐಎನ್‌ಡಿ | 29,152 | 22.51 |
| | | **ಒಟ್ಟು** | **1,29,488** | **114.42** |

**Source:** Election Commission of India
**Note:** INC-Indian National Congress, IND-Independent.

ದ್ವಿ–ಸದಸ್ಯ ಕ್ಷೇತ್ರಗಳಲ್ಲಿ ಮತದಾರರು 2 ಮತ ಹಾಕುವ ಹಕ್ಕನ್ನು ಹೊಂದಿದ್ದರು. ಪರಿಶಿಷ್ಟ ಜಾತಿಯ ಮೀಸಲು ಸ್ಥಾನಕ್ಕೆ ಹೆಚ್. ಹನುಮಯ್ಯ ಮತ್ತು ವಡ್ಡರ ಯಂಗಟಪ್ಪ ಅವರ ನಡುವೆ ನೇರ ಸ್ಪರ್ಧೆ ಏರ್ಪಟ್ಟು, ಹೆಚ್. ಹನುಮಯ್ಯ ಅವರು ತಮ್ಮ ಪ್ರತಿಸ್ಪರ್ಧಿಗಿಂತ 4,131 ಮತಗಳ ಅಧಿಕ ಅಂತರದಿಂದ ಆಯ್ಕೆಯಾದರು. ಅದೇ ರೀತಿ ಸಾಮಾನ್ಯ ವರ್ಗದ ಸ್ಥಾನಕ್ಕೆ ಎ. ಭೀಮಪ್ಪ ನಾಯಕ ಮತ್ತು ಎಂ. ಗೋವಿಂದರೆಡ್ಡಿ ಅವರ ನಡುವೆ ನೇರಸ್ಪರ್ಧೆ ನಡೆದು ಅಂತಿಮವಾಗಿ ಎ. ಭೀಮಪ್ಪ ನಾಯಕ ಅವರು 4,713 ಮತಗಳ ಅಂತರದಿಂದ ಜಯ ಗಳಿಸಿದರು. ಹಾಗಾಗಿ ಈ ಕ್ಷೇತ್ರವು ಎದುರಿಸಿದ ಚುನಾವಣೆಯಲ್ಲಿ ಮತದಾರ ಕಾಂಗ್ರೆಸ್ ಪಕ್ಷ ಭಾರತಕ್ಕೆ ಸ್ವತಂತ್ರ ತಂದುಕೊಡಲು ಕಾರಣವಾಗಿದೆ ಎಂದು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಒಲವು ತೋರಿದ್ದಾರೆ. ಪರಿಶಿಷ್ಟ ಜಾತಿಯ ಹೆಚ್. ಹನುಮಯ್ಯ ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಗಳ ಗೆಲುವಿನ ಅಂತರವನ್ನು ಗಮನಿಸಿದರೆ ಪ್ರಬಲ ಪೈಪೋಟಿ ಇರುವುದನ್ನು ಕಾಣಬಹುದು. ಕ್ಷೇತ್ರದಲ್ಲಿ 2ನೇ ಬಾರಿಗೆ ಮತದಾರ ಕಾಂಗ್ರೆಸ್ ಪಕ್ಷದ ಪರ ಒಲವು ತೋರಿಸಿದ್ದಾನೆ. ಆದ್ದರಿಂದ ಮತದಾನ

ನಡವಳಿಕೆಯು ಪಕ್ಷ ಆಧಾರಿತವಾಗಿರುತ್ತದೆ ಎಂಬುದು ಈ ಚುನಾವಣೆ ಫಲಿತಾಂಶವನ್ನು ಅವಲೋಕಿಸಿದಾಗ ತಿಳಿದುಬರುತ್ತದೆ.

**ಕೋಷ್ಟಕ – 3.2.**

**ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962**

ಒಟ್ಟು ಮತದಾರರು–65,477 ಪುರಸ್ಕೃತಗೊಂಡ ಮತಗಳು–39,566

ಚಲಾವಣೆಯಾದ ಮತಗಳು–42,663 ತಿರಸ್ಕೃತಗೊಂಡ ಮತಗಳು– 3,097

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಬಿ.ಎಲ್. ಗೌಡ | ಪಿಎಸ್‌ಪಿ | 17,067 | 43.14 |
| 2 | ರತ್ನಗಿರಿ | ಐಎನ್‌ಸಿ | 14,075 | 35.57 |
| 3 | ಟಿ. ಮಾರಪ್ಪ | ಜೆಎಸ್ | 6,507 | 16.45 |
| 4 | ತಿಮ್ಮಾರೆಡ್ಡಿ | ಸಿಪಿಐ | 1,917 | 4.85 |
| | | ಒಟ್ಟು | **39,566** | **100** |

**Source:** Election Commission of India

**Note:** PSP–Praja Socialist Party, INC-Indian National Congress, JS–Jana Sangh, CPI–Communist Party of India.

ಚಳ್ಳಕೆರೆ ಕ್ಷೇತ್ರದ 3ನೇ ವಿಧಾನಸಭಾ ಚುನಾವಣೆ 19.02.1962ರಂದು ನಡೆದಿರುತ್ತದೆ. ಇದರಲ್ಲಿ ನಾಲ್ವರು ಆಕಾಂಕ್ಷಿಗಳು ಚುನಾವಣಾ ಕಣದಲ್ಲಿದ್ದರು. ಈ ಆಕಾಂಕ್ಷಿಗಳು ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯನ್ನು ಎದುರಿಸಿದರು. ಈ ಚುನಾವಣೆಯಲ್ಲಿ ಮತದಾರರಿಂದ ಸಾಧಾರಣ ಪ್ರತಿಕ್ರಿಯೆಯಿಂದ ಶೇ.60.43 ಮತದಾನವಾಗಿರುತ್ತದೆ. ಸಾಮಾನ್ಯ ವರ್ಗದ ಮತದಾರರ ಚುನಾವಣೆ ಭಾಗವಹಿಸುವಿಕೆ ತೃಪ್ತಿಕರವಾಗಿದೆ. ಆದ್ದರಿಂದ ಹೆಚ್ಚು ಪ್ರಮಾಣದ ಮತದಾನ ದಾಖಲಾಗಿದೆ. ಸಾಮಾನ್ಯ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂಬ ಕಾರಣದಿಂದ ಅವರು ಚುನಾವಣಾ ರಾಜಕೀಯದಿಂದ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಆಶಿಕ್ಷಿತ ಅಥವಾ ಶಿಕ್ಷಿತ ಮತದಾರರು ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದಾರೆ. ಜೊತೆಗೆ ಚುನಾವಣಾ ಕಣದಲ್ಲಿಯೂ ಸಹ ಪೈಪೋಟಿ ಕಂಡುಬಂದು ಪಿಎಸ್‌ಪಿಯ ಬಿ.ಎಲ್. ಗೌಡ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ರತ್ನಗಿರಿ ಅವರನ್ನು 2,992 ಮತಗಳ ಅಂತರದಿಂದ ಸೋಲಿಸಿ ಜಯ ಗಳಿಸಿದರು. ಹಾಗಾಗಿ ಪ್ರಜಾ ಸಮಾಜವಾದಿ ಪಕ್ಷ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿತು. ಆಡಳಿತರೂಢ ಕಾಂಗೆಸ್ ಪಕ್ಷಕ್ಕೆ ಮತದಾರರು ಮೊರೆ ಹೋಗಿಲ್ಲದಿರುವುದರಿಂದ ಕಾಂಗ್ರೆಸ್‌ಗೆ ಸೋಲುಂಟಾಯಿತು.

**ಕೋಷ್ಟಕ –3.3.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967**

ಒಟ್ಟು ಮತದಾರರು–60,649 ಪುರಸ್ಕೃತಗೊಂಡ ಮತಗಳು–43,653

ಚಲಾವಣೆಯಾದ ಮತಗಳು–46,265 ತಿರಸ್ಕೃತಗೊಂಡ ಮತಗಳು–2,612

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಬಿ.ಎಲ್. ಗೌಡ | ಐಎನ್‌ಸಿ | 22,194 | 50.84 |
| 2 | ಜಿ.ವಿ. ಅಂಜನಪ್ಪ | ಪಿಎಸ್‌ಪಿ | 18,609 | 42.63 |
| 3 | ಕೆ.ಎಸ್. ಈಶ್ವರ್ | ಐಎನ್‌ಡಿ | 2.498 | 5.72 |
| 4 | ಡಿ. ಬೋರಪ್ಪ | ಐಎನ್‌ಡಿ | 352 | 0.81 |
| | | **ಒಟ್ಟು** | **43,653** | **100** |

**Source:** Election Commission of India
**Note:** INC-Indian National Congress, PSP-Praja Socialist Party, IND–Independent.

ನಾಲ್ಕನೇ ವಿಧಾನಸಭಾ ಚುನಾವಣೆ ದಿನಾಂಕ 21.02.1967ರಂದು ನಡೆದು ಚಳ್ಳಕೆರೆ ಕ್ಷೇತ್ರದಲ್ಲಿ ಶೇ. 71.98ರಷ್ಟು ಮತದಾನ ದಾಖಲಾಯಿತು. ಮೂರನೇ ವಿಧಾನಸಭೆಯಲ್ಲಿ ಗೆಲುವು ಪಡೆದಿದ್ದ ಬಿ.ಎಲ್. ಗೌಡ ಕಾಂಗ್ರೆಸ್ ಪಕ್ಷದಿಂದ ಮತ್ತು ಜಿ.ವಿ. ಅಂಜನಪ್ಪ ಅವರು ಮೊದಲ ಬಾರಿಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಸ್ಪರ್ಧೆಯಲ್ಲಿದ್ದರು. ಜೊತೆಗೆ ಕೆ.ಎಸ್. ಈಶ್ವರ್ ಮತ್ತು ಡಿ. ಬೋರಪ್ಪ ಅವರು ಮೊದಲ ಬಾರಿಗೆ ಸ್ವತಂತ್ರ ಪಕ್ಷದಿಂದ ಉಮೇದುವಾರರಾಗಿದ್ದರು. ಈ ಚುನಾವಣೆಯು ಹಾಲಿ ಶಾಸಕ ಬಿ.ಎಲ್. ಗೌಡ ಮತ್ತು ಜಿ.ವಿ. ಅಂಜನಪ್ಪ ಅವರ ನಡುವೆ ನೇರಸ್ಪರ್ಧೆ ಕಂಡುಬಂದು ಅಂತಿಮವಾಗಿ ಬಿ.ಎಲ್. ಗೌಡ ಅವರು ಪ್ರತಿಸ್ಪರ್ಧಿ ಜಿ.ವಿ. ಅಂಜನಪ್ಪ ಅವರ ವಿರುದ್ಧ 3,585(8.2) ಮತಗಳ ಅಂತರದಿಂದ ಗೆಲವು ಪಡೆದರು. ಹಾಗಾಗಿ ಬಿ.ಎಲ್. ಗೌಡ ಈ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಗೆಲುವು ಸಾಧಿಸಿದರು. ಕಳೆದ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದ್ದ ಬಿ.ಎಲ್. ಗೌಡ ಈ ಬಾರಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ವಿಜಯ ಸಾಧಿಸಿದರು. ಆಡಳಿತಾರೂಢ ಕಾಂಗ್ರೇಸ್ ಪಕ್ಷಕ್ಕೆ ಮತದಾರರು ಮೊರೆ ಹೋಗಿದ್ದರಿಂದ ಕಾಂಗ್ರೆಸ್ ಗೆಲುವು ಸುಲಭವಾಯಿತು.

**ಕೋಷ್ಟಕ – 3.4.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972**

ಒಟ್ಟು ಮತದಾರರು–73,132 ಪುರಸ್ಕೃತಗೊಂಡ ಮತಗಳು–42,251

ಚಲಾವಣೆಯಾದ ಮತಗಳು–43,273 ತಿರಸ್ಕೃತಗೊಂಡ ಮತಗಳು–1,022

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ವಿ. ಮಸಿಯಪ್ಪ | ಐಎನ್‌ಸಿ | 23,643 | 55.96 |
| 2 | ಹೆಚ್.ಸಿ. ಶಿವಶಂಕರಪ್ಪ | ಎನ್‌ಸಿಓ | 16,798 | 39.76 |
| 3 | ಡಿ. ಹನುಮಣ್ಣ | ಐಎನ್‌ಡಿ | 1,810 | 4.28 |
| | | **ಒಟ್ಟು** | **42,251** | **100** |

**Source:** Election Commission of India

**Note:** INC-Indian National Congress, NCO–Indian National Congress (Organization), IND Independent.

ಐದನೇ ವಿಧಾನಸಭಾ ಚುನಾವಣೆ ಚಳ್ಳಕೆರೆ ಕ್ಷೇತ್ರದಲ್ಲಿ ದಿನಾಂಕ 05.03.1972ರಂದು ನಡೆದು ಶೇ. 57.77ರಷ್ಟು ಮತದಾನ ದಾಖಲಾಯಿತು. ನಾಲ್ಕನೇ ವಿಧಾನಸಭೆಗಿಂತ ಶೇ.14.21ರಷ್ಟು ಮತದಾನ ಈ ಬಾರಿ ಚುನಾವಣೆಯಲ್ಲಿ ಕಡಿಮೆಯಾಗಿತ್ತು. ಚುನಾವಣೆ ಸ್ಪರ್ಧೆಯಲ್ಲಿ ಹೊಸದಾಗಿ ವಿ. ಮಸಿಯಪ್ಪ, ಹೆಚ್.ಸಿ. ಶಿವಶಂಕರಪ್ಪ ಹಾಗೂ ಡಿ. ಹನುಮಣ್ಣ ಅವರು ಮೊದಲ ಬಾರಿಗೆ ಸ್ಪರ್ಧೆಯಲ್ಲಿದ್ದರು. 1967ರಲ್ಲಿ ಕಾಂಗ್ರೆಸ್ ವಿಭಜನೆಯು ಈ ಕ್ಷೇತ್ರದ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿತು. ಹಾಗಾಗಿ ವಿ. ಮಸಿಯಪ್ಪ ಅವರು ಇಂದಿರಾ ನೇತೃತ್ವದ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡು ಆ ಪಕ್ಷವನ್ನು ಪ್ರತಿನಿಧಿಸಿದರು. ಹೆಚ್.ಸಿ. ಶಿವಶಂಕರಪ್ಪ ಅವರು ನಿಜಲಿಂಗಪ್ಪ ಬಣದೊಂದಿಗೆ ಗುರುತಿಸಿಕೊಂಡು ಎನ್.ಸಿ.ಓ. ಪಕ್ಷವನ್ನು ಪ್ರತಿನಿಧಿಸಿದರು. ಈ ಬಾರಿಯ ಚುನಾವಣೆಯಲ್ಲಿ ವಿ. ಮಸಿಯಪ್ಪ ಮತ್ತು ಹೆಚ್.ಸಿ. ಶಿವಶಂಕರಪ್ಪನವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ವಿ. ಮಸಿಯಪ್ಪ ಅವರು ತಮ್ಮ ಪ್ರತಿಸ್ಪರ್ಧಿ ಹೆಚ್.ಸಿ. ಶಿವಶಂಕರಪ್ಪರವರನ್ನು 6,845(6.2) ಮತಗಳ ಅಂತರದಿಂದ ಗೆಲುವನ್ನು ಸಾಧಿಸಿದರು. ರಾಜ್ಯ ರಾಜಕೀಯದಲ್ಲಿ ಸ್ವತಂತ್ರ ಪಕ್ಷದ ವರ್ಚಸ್ಸು ಕಡಿಮೆಯಾಗಿದ್ದರಿಂದ ಈ ಚುನಾವಣೆಯಲ್ಲಿ ಸ್ವತಂತ್ರ ಪಕ್ಷಕ್ಕೆ ಮಹತ್ವ ಕೊಡಲಿಲ್ಲ. ವಿ. ಮಸಿಯಪ್ಪ ಅವರ ಗೆಲುವನ್ನು ಅವಲೋಕಿಸಿದಾಗ ಜನ ಭಾಗಶಃ ಇಂದಿರಾ ಕಾಂಗ್ರೆಸ್‌ನ ವರ್ಚಸ್ಸು ಈ ಚುನಾವಣೆಯಲ್ಲಿ ಹೆಚ್ಚು ಕೆಲಸ ಮಾಡಿದೆ ಎಂದು ತಿಳಿಯುತ್ತದೆ. ಹಾಗಾಗಿ ಹೆಚ್.ಸಿ. ಶಿವಶಂಕರಪ್ಪ ಅವರ ಸೋಲು ಗಮನಿಸಿದಾಗ ಅವರಿಗೆ ಸಂದಿರುವ ಮತಗಳು ವ್ಯಕ್ತಿತ್ವಕ್ಕೆ ಸಿಕ್ಕಿದ ಮತಗಳು. ಅವರ ಪಕ್ಷದ ವರ್ಚಸ್ಸು ಕಡಿಮೆಯಾದ್ದರಿಂದ ಅವರಿಗೆ ಸೋಲುಂಟಾಯಿತು ಎಂದು ಹೇಳಬಹುದು.

**ಕೋಷ್ಟಕ –3.5.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978**

ಒಟ್ಟು ಮತದಾರರು–81,514 ಪುರಸ್ಕೃತಗೊಂಡ ಮತಗಳು–60,807

ಚಲಾವಣೆಯಾದ ಮತಗಳು–62,085 ತಿರಸ್ಕೃತಗೊಂಡ ಮತಗಳು–1,278

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್. ಜಯಣ್ಣ | ಐಎನ್‌ಸಿ(ಐ) | 38,411 | 63.17 |
| 2 | ಬಿ.ಎಲ್. ಗೌಡ | ಜೆಎನ್‌ಪಿ | 21,120 | 34.73 |
| 3 | ಬಿ. ಓಬಳಪ್ಪ | ಐಎನ್‌ಸಿ | 2,276 | 2.1 |
| | | ಒಟ್ಟು | **60,807** | **100** |

**Source:** Election Commission of India

**Note:** INC(I)-Indian National Congress (Indian), JNP–Janata Party, INC-Indian National Congress.

ಚಳ್ಳಕೆರೆ ಕ್ಷೇತ್ರದಲ್ಲಿ 6ನೇ ವಿಧಾನಸಭಾ ಚುನಾವಣೆಯು ದಿನಾಂಕ 25.02.1978ರಂದು 122 ಮತ ಕೇಂದ್ರಗಳಲ್ಲಿ ನಡೆಯಿತು. ಚಳ್ಳಕೆರೆ ಕ್ಷೇತ್ರದ ಇತಿಹಾಸದಲ್ಲಿ ಮೊದಲ ಬಾರಿಗೆ ಶೇ. 76.00ರಷ್ಟು ಮತದಾನ ಈ ಚುನಾವಣೆಯಲ್ಲಿ ದಾಖಲಾಯಿತು. ಸಾಮಾನ್ಯ ಕ್ಷೇತ್ರದ ಚುನಾವಣಾ ರಾಜಕೀಯದಲ್ಲಿ ಸಾಮಾನ್ಯ ವರ್ಗದ ಮತದಾರರು ಆಸಕ್ತಿದಾಯಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಈ ಕ್ಷೇತ್ರದಲ್ಲಿ ಎಲ್ಲರಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವಿರುವುದರಿಂದ ಯಾವ ಕೋಮಿನವರು ಬೇಕಾದರೂ ಚುನಾಯಿತರಾಗಲು ಅವಕಾಶವಿರುವುದರಿಂದ ದಲಿತರು ಮತ್ತು ದಲಿತೇತರು ಸಕ್ರಿಯ ಭಾಗವಹಿಸುವಿಕೆ ಫಲವಾಗಿ ಹೆಚ್ಚಿನ ಪ್ರಮಾಣದ ಮತದಾನ ಈ ಬಾರಿ ದಾಖಲಾಗಿದೆ.

ಚುನಾವಣಾ ಕಣದಲ್ಲಿ ಮಾಜಿ ಶಾಸಕ ಬಿ.ಎಲ್. ಗೌಡ ಅವರು ಜನತಾಪಕ್ಷದಿಂದ ಹಾಗೂ ಹೊಸ ಅಭ್ಯರ್ಥಿ ಎನ್. ಜಯಣ್ಣ ಅವರು ಇಂದಿರಾ ಕಾಂಗ್ರೆಸ್‌ನಿಂದ ಮತ್ತು ಬಿ. ಓಬಳಪ್ಪ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಸ್ಪರ್ಧೆಯಲ್ಲಿದ್ದರು. ಎನ್. ಜಯಣ್ಣ ಮತ್ತು ಬಿ.ಎಲ್. ಗೌಡ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಬಿ.ಎಲ್. ಗೌಡ ಅವರನ್ನು 17,291(28.44) ಮತಗಳ ಅಂತರದಿಂದ ಎನ್. ಜಯಣ್ಣ ಅವರು ಸೋಲಿಸಿದರು. ಇದರಿಂದ ಜಯಪ್ರಕಾಶ್ ನಾರಾಯಣ ಅವರ ಜನತಾಪಕ್ಷ ಈ ಕ್ಷೇತ್ರದಲ್ಲಿ ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಆಡಳಿತಾರೂಢ ಕಾಂಗ್ರೆಸ್ ಮೇಲೆ ಮತದಾರನ ಒಲವು ಈ ಚುನಾವಣೆಯಲ್ಲಿಯೂ ವ್ಯಕ್ತವಾಗಿದೆ. 1977ರ ಕಾಂಗ್ರೆಸ್ ವಿಭಜನೆಯು ಸಹ ಕ್ಷೇತ್ರದ ಚುನಾವಣೆ ಫಲಿತಾಂಶದ ಮೇಲೆ ಯಾವುದೇ ಪರಿಣಾಮ

ಬೀರಲಿಲ್ಲ. ಈ ಚುನಾವಣೆಯಲ್ಲಿಯೂ ಮತದಾರ ಭಾಗಶಃ ಪಕ್ಷ ಮತ್ತು ವ್ಯಕ್ತಿ ಆಧಾರಿತ ಮತದಾನದಿಂದಾಗಿ ಇಂದಿರಾ ಕಾಂಗ್ರೆಸ್‌ನ ಎನ್. ಜಯಣ್ಣ ಗೆಲುವು ಸಾಧಿಸಿದ್ದಾರೆ.

**ಕೋಷ್ಟಕ – 3.6.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983**

ಒಟ್ಟು ಮತದಾರರು–87,854 ಪುರಸ್ಕೃತಗೊಂಡ ಮತಗಳು–58,504

ಚಲಾವಣೆಯಾದ ಮತಗಳು–59,605 ತಿರಸ್ಕೃತಗೊಂಡ ಮತಗಳು–1,101

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಹೆಚ್.ಸಿ. ಶಿವಶಂಕರಪ್ಪ | ಜೆಎನ್‌ಪಿ | 38,146 | 65.2 |
| 2 | ಬಿ.ಕೆ. ಸೀತಾರಾಮಯ್ಯ | ಐಎನ್‌ಸಿ | 17,149 | 29.31 |
| 3 | ಜಿ. ಶಿವಣ್ಣ | ಐಎನ್‌ಡಿ | 1,605 | 2.74 |
| 4 | ನೀಲಕಂಠ | ಐಎನ್‌ಡಿ | 1,049 | 1.79 |
| 5 | ರಾಮಶೆಟ್ಟಿ | ಐಎನ್‌ಡಿ | 306 | 0.52 |
| 6 | ಭಾಗೀರಥಿ ನಾಯಕ್ | ಐಎನ್‌ಡಿ | 249 | 0.43 |
| | | **ಒಟ್ಟು** | **58,504** | **100** |

**Source:** Election Commission of India

**Note:** JNP-Janata Party, INC-Indian National Congress, IND-Independent.

ಏಳನೇ ವಿಧಾನಸಭೆ ಚುನಾವಣೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 01.05.1983ರಂದು ಚುನಾವಣೆಯು 125 ಮತದಾನ ಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 702 ಮತದಾರರಿದ್ದರು. ಕ್ಷೇತ್ರದಲ್ಲಿ ಶೇ. 67.85ರಷ್ಟು ಮತದಾನ ದಾಖಲಾಯಿತು. ಹಿಂದಿನ ಚುನಾವಣೆಗಿಂತ ಈ ಬಾರಿ ಚುನಾವಣೆಯಲ್ಲಿ ಸರಾಸರಿ ಶೇ. 8.31ರಷ್ಟು ಕಡಿಮೆ ಮತದಾನವಾಗಿರುತ್ತದೆ.

ಚಳ್ಳಕೆರೆ ಚುನಾವಣೆಯ ಇತಿಹಾಸದಲ್ಲಿ ಮೊದಲ ಬಾರಿಗೆ 6 ಅಭ್ಯರ್ಥಿಗಳು ಸ್ಪರ್ಧೆ ಮಾಡಿರುವುದನ್ನು ಗಮನಿಸಬಹುದು. ಚುನಾವಣಾ ಕಣದಲ್ಲಿರುವ 6 ಆಕಾಂಕ್ಷಿಗಳಲ್ಲಿ ಹೆಚ್.ಸಿ. ಶಿವಶಂಕಪ್ಪ ಅವರನ್ನು ಹೊರತು ಪಡಿಸಿದರೆ, ಉಳಿದವರು ಮೊದಲ ಬಾರಿಗೆ ಚುನಾವಣಾ ರಾಜಕೀಯಕ್ಕೆ ಬಂದವರು. ಜನತಾಪಕ್ಷದ ಹೆಚ್.ಸಿ. ಶಿವಶಂಕಪ್ಪ ಅವರಿಗೆ ಯಾರ ನಡುವೆ ನೇರಸ್ಪರ್ಧೆ ಏರ್ಪಡಲಿಲ್ಲ. ಅಂತಿಮವಾಗಿ ಹೆಚ್.ಸಿ. ಶಿವಶಂಕಪ್ಪ ಅವರು ಬಿ.ಕೆ. ಸೀತಾರಾಮಯ್ಯ ಅವರನ್ನು 20,997(35.89) ಮತಗಳ ಅಂತರದಿಂದ ಸೋಲಿಸಿ ರಾಜಕೀಯ ಜೀವನ ಪ್ರವೇಶಿಸಿದರು. ಹಾಗಾಗಿ ಕ್ಷೇತ್ರದಲ್ಲಿ ಜನತಾಪಕ್ಷ ಮೊದಲ ಬಾರಿಗೆ ಗೆಲುವು ದಾಖಲಿಸಿತು. ರಾಜ್ಯದ ಎಲ್ಲೆಡೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕಾರ್ಯವೈಖರಿಯಿಂದ ಬೇಸರಗೊಂಡಿದ್ದ ಮತದಾರರು ಪರ್ಯಾಯವಾಗಿ ರಾಜ್ಯಕ್ಕೆ ಉತ್ತಮ ಆಡಳಿತ ನೀಡಲು ಜನತಾಪಕ್ಷಕ್ಕೆ ಹೆಚ್ಚಿನ ಒಲವು ತೋರಿ ಪಕ್ಷದ ಗೆಲುವಿಗೆ

ಸಾಕ್ಷಿಯಾದರು. ಇಲ್ಲಿಯ ಮತದಾರರು ರಾಜ್ಯ ರಾಜಕೀಯದ ಆಗು–ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೆಚ್.ಸಿ. ಶಿವಶಂಕರಪ್ಪ ಅವರಿಗೆ ಮತ ನೀಡಿದರು ಎಂಬುದು ಅವರ ಗೆಲುವಿನ ಮೊದಲ ಕಾರಣವಾದರೆ, ರಾಜ್ಯ ದಲಿತ ಸಂಘರ್ಷ ಸಮಿತಿ ಜನತಾಪಕ್ಷಕ್ಕೆ ಬೆಂಬಲ ನೀಡಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿ ಜನತಾಪಕ್ಷದ ಪರವಾಗಿ ಮತ ಯಾಚನೆ ಮಾಡಿ ದಲಿತ ಮತದಾರರನ್ನು ಪಕ್ಷದ ಕಡೆಗೆ ಸೆಳೆಯುವಲ್ಲಿ ಯಶಸ್ಸು ಸಾಧಿಸಿತು. ಆದ್ದರಿಂದ ಜನತಾಪಕ್ಷದ ಪ್ರತಿನಿಧಿ ಹೆಚ್.ಸಿ. ಶಿವಶಂಕರಪ್ಪ ಅವರ ಗೆಲುವಿನ ದಾರಿ ಸುಲಭವಾಯಿತು ಎಂದು ಹೇಳಬಹುದು.

**ಕೋಷ್ಟಕ –3.7.**
**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985**

ಒಟ್ಟು ಮತದಾರರು–97,490 ಪುರಸ್ಕೃತಗೊಂಡ ಮತಗಳು–61,426
ಚಲಾವಣೆಯಾದ ಮತಗಳು–62,421 ತಿರಸ್ಕೃತಗೊಂಡ ಮತಗಳು–995

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ತಿಪ್ಪೇಸ್ವಾಮಿ | ಜೆಎನ್‌ಪಿ | 36,163 | 58.87 |
| 2 | ಬಿ.ಎಲ್. ಗೌಡ | ಐಎನ್‌ಸಿ | 22,551 | 36.71 |
| 3 | ಸಿ.ಪಿ. ತಿಪ್ಪೇಸ್ವಾಮಿ | ಬಿಜೆಪಿ | 1,106 | 1.8 |
| 4 | ಶ್ರೀನಿವಾಸರೆಡ್ಡಿ | ಐಎನ್‌ಡಿ | 704 | 1.15 |
| 5 | ಡಿ. ಹನುಮಂತಪ್ಪ | ಐಎನ್‌ಡಿ | 613 | 1 |
| 6 | ರುದ್ರಣಿ ರಾಜು | ಐಎನ್‌ಡಿ | 289 | 0.47 |
| | | **ಒಟ್ಟು** | **61,426** | **100** |

**Source:** Election Commission of India.
**Note:** JNP-Janata Party, INC-Indian National Congress, BJP–Bharathiya Janata Party, IND Independent.

ಚಳ್ಳಕೆರೆ ಕ್ಷೇತ್ರದಲ್ಲಿ ದಿನಾಂಕ 03.05.1985ರಂದು 135 ಮತಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಪ್ರತಿ ಮತ ಕೇಂದ್ರ 722 ಮತದಾರರನ್ನು ಹೊಂದಿತ್ತು. ಚಲಾವಣೆಯಾದ ಮತಗಳಲ್ಲಿ 34,364 ಪುರುಷರು ಮತ್ತು 28,057 ಮಹಿಳೆಯರು ತಮ್ಮ ಹಕ್ಕನ್ನು ಚಲಾಯಿಸಿದರು. ಹಾಗಾಗಿ ಈ ಚುನಾವಣೆಯಲ್ಲಿ ಶೇ. 64.03 ರಷ್ಟು ಮತದಾನ ದಾಖಲಾಯಿತು.

ಚುನಾವಣಾ ಕಣದಲ್ಲಿ ಮಾಜಿ ಶಾಸಕ ಬಿ.ಎಲ್. ಗೌಡ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದರು. ಇವರನ್ನು ಹೊರತುಪಡಿಸಿದರೆ, ಉಳಿದ ಐವರು ಆಕಾಂಕ್ಷಿಗಳು ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸಿದವರು. ರಾಜ್ಯದ ರಾಜಕೀಯ ಪ್ರಭಾವವನ್ನು ಈ ಚುನಾವಣಾ ಫಲಿತಾಂಶದಲ್ಲಿ ಗುರುತಿಸಬಹುದು. 7ನೇ

ವಿಧಾನಸಭೆ ಚುನಾವಣಾ ಫಲಿತಾಂಶದಿಂದ ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್‌ಯೇತರ ಮತ್ತು ಸಂಮಿಶ್ರ ಸರ್ಕಾರ ರಚನೆಯಾಗಲು ಕಾರಣವಾಯಿತು. ಹೊಸದಾಗಿ ರಚನೆಯಾದ ಸಂಮಿಶ್ರ ಸರ್ಕಾರ ತನ್ನ ಅವಧಿಯನ್ನು ಪೂರ್ಣಗೊಳಿಸಲು ಸನ್ನಿವೇಶಗಳು ಪೂರಕವಾಗಿಲ್ಲದೆ ಸರ್ಕಾರ ಬಿದ್ದುಹೋಯಿತು. ಜನತಾಸರ್ಕಾರದ ಪೂರ್ಣ ಅವಧಿಯ ಒಂದೇ ಸರ್ಕಾರದ ಆಡಳಿತ ನೋಡಲು ಮತದಾರರಿಗೆ ಸಾಧ್ಯವಾಗಲಿಲ್ಲ. ಅಲ್ಪ ಅವಧಿಯಲ್ಲಿ ಜನತಾಸರ್ಕಾರ ಕೈಗೊಂಡ ಕಾರ್ಯಕ್ರಮಗಳು 8ನೇ ವಿಧಾನಸಭೆ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿತು. ಪ್ರಮುಖವಾದ ಅಂಶವು ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿತು. ಚುನಾವಣೆ ಜನತಾಪಕ್ಷ V/s ಕಾಂಗ್ರೆಸ್ ಪಕ್ಷಗಳ ನಡುವೆ ನೇರ ಪೈಪೋಟಿ ಕಂಡುಬಂದರೂ ಫಲಿತಾಂಶ ಮಾತ್ರ ಜನತಾಪಕ್ಷದ ಪರವಿತ್ತು. ಆದ್ದರಿಂದ ಮತದಾರರು ಪುನಃ ಪಕ್ಷ ಆಧಾರಿತವಾಗಿ ಮತ ನೀಡಿದ್ದಾರೆ ಎಂದು ಹೇಳಬಹುದು. ತಿಪ್ಪೇಸ್ವಾಮಿ ಮತ್ತು ಬಿ.ಎಲ್. ಗೌಡ ಅವರ ನಡುವೆ ನೇರ ಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಬಿ.ಎಲ್. ಗೌಡ ಅವರನ್ನು 13,612(22.16) ಮತಗಳ ಅಂತರದಿಂದ ತಿಪ್ಪೇಸ್ವಾಮಿ ಅವರು ಸೋಲಿಸಿದರು.

**ಕೋಷ್ಟಕ – 3.8.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989**

ಒಟ್ಟು ಮತದಾರರು–1,30,221 ಪುರಸ್ಕೃತಗೊಂಡ ಮತಗಳು–79,203

ಚಲಾವಣೆಯಾದ ಮತಗಳು–84,017 ತಿರಸ್ಕೃತಗೊಂಡ ಮತಗಳು–4,814

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್. ಜಯಣ್ಣ | ಐಎನ್‌ಸಿ | 32,274 | 40.75 |
| 2 | ತಿಪ್ಪೇಸ್ವಾಮಿ | ಜೆಎನ್‌ಪಿ(ಜೆಪಿ) | 19,426 | 24.53 |
| 3 | ಪಿ. ತಿಮ್ಮಾರೆಡ್ಡಿ | ಜೆಡಿ | 16,178 | 20.43 |
| 4 | ಕೆ. ರಂಗಸ್ವಾಮಿ | ಕೆಆರ್‌ಎಸ್ | 10,056 | 12.7 |
| 5 | ಬಿ. ಹನುಮಂತಯ್ಯ | ಐಎನ್‌ಡಿ | 831 | 1.05 |
| 6 | ಹೆಚ್. ಜಗಲೂರಯ್ಯ | ಐಎನ್‌ಡಿ | 231 | 0.29 |
| 7 | ಪಿ. ಸುಮಿತ್ರಮ್ಮ | ಐಎನ್‌ಡಿ | 207 | 0.26 |
| | | **ಒಟ್ಟು** | **79,203** | **100** |

**Source:** Election Commission of India

**Note:** INC-Indian National Congress, JNP(JP)-Janata Party (JP), JD–Janata Dal, KRS Karnataka Rajya Ryota Sangha, IND-Independent.

ರಾಜ್ಯದ 9ನೇ ವಿಧಾನಸಭೆಗೆ ನಡದ ಚುನಾವಣೆ ಚಳ್ಳಕೆರೆ ಕ್ಷೇತ್ರದಲ್ಲಿ ದಿನಾಂಕ 24.11.1989ರಂದು 171 ಮತಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 761 ಮತದಾರರಿದ್ದರು. ಈ ಚುನಾವಣೆಯಲ್ಲಿ 66,900 ಪುರುಷರು ಹಾಗೂ 63,32

ಮಹಿಳೆಯರು ಸೇರಿ 1,30,221 ಮತದಾರರು ಮತದಾನದ ಹಕ್ಕನ್ನು ಹೊಂದಿದ್ದರು. ಇವರಲ್ಲಿ 46,408 ಪುರುಷರು ಹಾಗೂ 37,609 ಮಹಿಳೆಯರು, ಒಟ್ಟು 84,017 ಜನ ತಮ್ಮ ಹಕ್ಕನ್ನು ಚಲಾಯಿಸಿದರು. ಇದರ ಪರಿಣಾಮವಾಗಿ 64.52 ಮತದಾನ ದಾಖಲಾಯಿತು. ಇದರಲ್ಲಿ 4,814 ಮತಗಳು ತಿರಸ್ಕೃತಗೊಂಡು 79,203 ಮತಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಯಿತು.

ಚುನಾವಣಾ ಕಣದಲ್ಲಿ ಒಟ್ಟು 7 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಹಾಲಿ ಶಾಸಕ ತಿಪ್ಪೇಸ್ವಾಮಿ ಹಾಗೂ ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎನ್. ಜಯಣ್ಣ ಅವರು ಕಣದಲ್ಲಿದ್ದರು. 8ನೇ ವಿಧಾನಸಭೆ ಚುನಾವಣೆಯಲ್ಲಿ ಜನತಾಪಕ್ಷ ಸ್ಪಷ್ಟವಾದ ಬಹುಮತ ನೀಡಿ ಸುಭದ್ರ ಸರ್ಕಾರ ಮತ್ತು ಆಡಳಿತ ನೀಡಲು ರಾಜ್ಯದ ಜನತೆ ಕಾಂಗ್ರೆಸ್ ಮೇಲಿನ ಬೇಸರದಿಂದ ನಕಾರಾತ್ಮಕ ಮತದಾನ ಮಾಡಿದ್ದರು. ಆದರೆ ಜನತಾಪಕ್ಷದ ಸದಸ್ಯರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಮೂಡಿ ಸರ್ಕಾರದ ಕೊನೆಯ ಅವಧಿಯಲ್ಲಿ ಜನತಾಪಕ್ಷ ಇಬ್ಭಾಗವಾಯಿತು. ಆದ್ದರಿಂದ ರಾಜ್ಯದ ಎಲ್ಲೆಡೆ ಪರ್ಯಾಯವಾಗಿ ಕಾಂಗ್ರೆಸ್ ಪಕ್ಷದ ಮೊರೆ ಹೋದನು. ಅದೇ ಬೆಳವಣಿಗೆ ಈ ಕ್ಷೇತ್ರದಲ್ಲಿಯೂ ಸಹ ನಡೆಯಿತು. ಹಾಗಾಗಿ ಚತುರ್ಥ ಸ್ಪರ್ಧೆಯಲ್ಲಿ ಕಾಂಗ್ರೆಸ್‌ನ ಎನ್. ಜಯಣ್ಣ ಅವರ ಗೆಲುವು ಸುಲಭವಾಯಿತು. ಆದ್ದರಿಂದ ಪುನಃ ಕ್ಷೇತ್ರದ ಜನತೆ ಪಕ್ಷಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ ಎಂದು ಹೇಳಬಹುದು. ಈ ಬಾರಿ ಚುನಾವಣೆಯಲ್ಲಿ ಎನ್. ಜಯಣ್ಣ ಅವರು ಹತ್ತಿರದ ಪ್ರತಿಸ್ಪರ್ಧಿ ತಿಪ್ಪೇಸ್ವಾಮಿ ಅವರನ್ನು 12,848(16.22) ಮತಗಳ ಅಂತರದಿಂದ ಸೋಲಿಸಿದರು.

**ಕೋಷ್ಟಕ – 3.9.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994**

ಒಟ್ಟು ಮತದಾರರು–1,39,637 ಪುರಸ್ಕೃತಗೊಂಡ ಮತಗಳು–94,913

ಚಲಾವಣೆಯಾದ ಮತಗಳು–96,932 ತಿರಸ್ಕೃತಗೊಂಡ ಮತಗಳು–2,019

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ತಿಪ್ಪೇಸ್ವಾಮಿ | ಜೆಡಿ | 39,560 | 41.68 |
| 2 | ಎನ್. ಜಯಣ್ಣ | ಐಎನ್‌ಸಿ | 25,919 | 27.31 |
| 3 | ಜಿ. ಬಸವರಾಜ ಮಂಡಿಮಟ್ | ಬಿಜೆಪಿ | 19,375 | 20.41 |
| 4 | ಟಿ. ತಮ್ಮಣ್ಣ | ಕೆಸಿಪಿ | 9,161 | 9.65 |
| 5 | ಪಾಟೀಲ್ ರಾಜಶೇಖರಪ್ಪ | ಕೆಆರ್‌ಆರ್‌ಎಸ್ | 619 | 0.65 |
| 6 | ಅಮರ್‌ನಾಥ್ | ಎಸ್‌ಪಿ | 279 | 0.29 |
| | | **ಒಟ್ಟು** | **94,913** | **100** |

**Source:** Election Commission of India

**Note** JD–Janata Dal, INC-Indian National Congress, BJP-Bharathiya Janata Party, KCP Karnataka Congress Party, KRRS-Karnataka Rajya Ryota Sangha, SP–Samajwadi Party.

ರಾಜ್ಯದ 10ನೇ ವಿಧಾನಸಭೆಗೆ ಚಳ್ಳಕೆರೆ ಕ್ಷೇತ್ರದಲ್ಲಿ 26.11.1994ರಂದು ಚುನಾವಣೆ ನಡೆದು ಶೇ. 69.42ರಷ್ಟು ಮತದಾನ ದಾಖಲಾಯಿತು. ಹಿಂದಿನ ಚುನಾವಣೆಗಿಂತ ಶೇ. 2.19ರಷ್ಟು ಕಡಿಮೆ ಮತದಾನ ಈ ಬಾರಿ ಆಗಿದೆ. ಮತದಾರರಲ್ಲಿ ರಾಜಕೀಯ ಆಸಕ್ತಿ ಹಿಂದಿನ ಚುನಾವಣೆಗಿಂತ ಈ ಚುನಾವಣೆಯಲ್ಲಿ ಕುಂದಿದ್ದರಿಂದ ಕಡಿಮೆ ಮತದಾನ ದಾಖಲಾಗಿದೆ ಎಂಬುದನ್ನು ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಲಾಗಿದೆ. ಈ ಬಾರಿ 6 ಸ್ಪರ್ಧಾಳುಗಳು ಕಣದಲ್ಲಿದ್ದರೂ ಸಹ ರಾಜಕೀಯ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರನ್ನು ಮತಪೆಟ್ಟಿಗೆಯತ್ತ ಕರೆತರುವಲ್ಲಿ ವಿಫಲವಾಗಿದ್ದಾರೆ.

ಚುನಾವಣಾ ಕಣದಲ್ಲಿ ಹಾಲಿ ಶಾಸಕ ಎನ್. ಜಯಣ್ಣ ಅವರು ಹಾಗೂ ಮಾಜಿ ಶಾಸಕರಾದ ತಿಪ್ಪೇಸ್ವಾಮಿ ಜನತಾದಳದಿಂದ ಮತ್ತು ಜಿ. ಬಸವರಾಜ ಮಂಡಿಮಟ್ ಬಿಜೆಪಿಯಿಂದ ಕಣಕ್ಕೆ ಇಳಿದರು. ಚುನಾವಣೆಯು ಹಾಲಿ ಮತ್ತು ಮಾಜಿ ಶಾಸಕ ಹಾಗೂ ಬಿಜೆಪಿಯ ಈ. ಬಸವರಾಜ ಮಂಡಿಮಟ್ ಅವರ ನಡುವೆ ತ್ರಿಕೋನ ಸ್ಪರ್ಧೆ ಕಂಡುಬಂದು ಅಂತಿಮವಾಗಿ ಜನತಾದಳದ ತಿಪ್ಪೇಸ್ವಾಮಿ ಅವರು ಹತ್ತಿರದ ಪ್ರತಿಸ್ಪರ್ಧಿ ಮಾಜಿ ಶಾಸಕ ಎನ್. ಜಯಣ್ಣ ಅವರನ್ನು 8,852(8.63) ಮತಗಳ ಅಂತರದಿಂದ ಸೋಲಿಸುವ ಮೂಲಕ ಎರಡನೇ ಬಾರಿಗೆ ಗೆಲುವು ಪಡೆದರು. ಈ ಫಲಿತಾಂಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ರಾಜ್ಯ ರಾಜಕೀಯದಲ್ಲಿ ಆದ ಬೆಳವಣಿಗೆಗಳು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿರುವುದು ಸ್ಪಷ್ಟವಾಗುತ್ತದೆ. 1989ರಲ್ಲಿ ವಿಭಜನೆ ಹೊಂದಿದ್ದ ಜನತಾಪಕ್ಷ ಆಂತರಿಕ ವೈಷಮ್ಯಗಳಿಂದ ಹೊರಬಂದು ಜನತಾದಳವಾಗಿ ಚುನಾವಣೆ ಎದುರಿಸಿದ್ದು ರಾಜ್ಯದಲ್ಲಿರುವ ಕ್ಷೇತ್ರಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಫಲಿತಾಂಶವನ್ನು ಬದಲಾಯಿಸಿತು. ಈ ಬಾರಿ ಭಾರತೀಯ ಜನತಾಪಕ್ಷದ ಅಭ್ಯರ್ಥಿ ಜಿ. ಬಸವರಾಜ ಮಂಡಿಮಟ್ ಅವರ ತೀವ್ರ ಸ್ಪರ್ಧೆಯಿಂದ ಮೂರನೇ ಸ್ಥಾನಕ್ಕೆ ಬಂದಿತು. ಅದೇ ರೀತಿ ಕರ್ನಾಟಕ ಪಕ್ಷದ ಅಭ್ಯರ್ಥಿ ಟಿ. ತಮ್ಮಣ್ಣ ಅವರ ತೀವ್ರ ಸ್ಪರ್ಧೆಯಿಂದ ನಾಲ್ಕನೇ ಸ್ಥಾನಕ್ಕೆ ಬಂದಿತು. ಕ್ಷೇತ್ರದ ಮತದಾರರ ನಡವಳಿಕೆ ರಾಜ್ಯ ರಾಜಕೀಯದ ಬೆಳವಣಿಗೆಯನ್ನು ಗಮನಿಸಿ ಪಕ್ಷಕ್ಕೆ ಆದ್ಯತೆ ನೀಡುವ ಜೊತೆಗೆ, ಪಕ್ಷ ಆಧರಿಸಿ ಮತ ನೀಡಿದ್ದಾನೆ ಎಂದು ಹೇಳಬಹುದು.

**ಕೋಷ್ಟಕ – 3.10.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999**

ಒಟ್ಟು ಮತದಾರರು–1,47,647 ಪುರಸ್ಕೃತಗೊಂಡ ಮತಗಳು–1,02,594

ಚಲಾವಣೆಯಾದ ಮತಗಳು–1,11,295 ತಿರಸ್ಕೃತಗೊಂಡ ಮತಗಳು– 8,701

| ಕ್ರ. ಸಂ | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಜಿ. ಬಸವರಾಜ್ ಮಂಡಿಮಟ್ | ಬಿಜೆಪಿ | 26,517 | 25.85 |
| 2 | ತಿಪ್ಪೇಸ್ವಾಮಿ | ಜೆಡಿ(ಎಸ್) | 17,665 | 17.22 |
| 3 | ಎನ್. ಜಯಣ್ಣ | ಐಎನ್‌ಡಿ | 16,922 | 16.49 |
| 4 | ಟಿ. ಪ್ರಭುದೇವ್ | ಐಎನ್‌ಸಿ | 13,121 | 12.79 |
| 5 | ಬಿ.ಎಲ್. ಗೌಡ | ಐಎನ್‌ಡಿ | 8,116 | 7.91 |
| 6 | ಹೆಚ್.ಜಗಲೂರಯ್ಯ | ಐಎನ್‌ಡಿ | 4,200 | 4.09 |
| 7 | ಹೆಚ್.ಸಿ. ಶಿವಶಂಕರಪ್ಪ | ಜೆಡಿ(ಯು) | 3,848 | 3.75 |
| 8 | ಬಸಯ್ಯ | ಐಎನ್‌ಡಿ | 3,658 | 3.57 |
| 9 | ಎಂ. ಶಿವಮೂರ್ತಿ | ಐಎನ್‌ಡಿ | 1,969 | 1.92 |
| 10 | ಎಲ್. ನಾರಾಯಣ ಸ್ವಾಮಿ | ಬಿಎಸ್‌ಪಿ | 1,700 | 1.66 |
| 11 | ಟಿ. ರಂಗಸ್ವಾಮಿ | ಕೆಸಿವಿಪಿ | 1,517 | 1.48 |
| 12 | ಕೆ.ಪಿ. ಭೂತಯ್ಯ | ಐಎನ್‌ಡಿ | 1,313 | 1.28 |
| 13 | ಸಿ. ವೈ. ಶಿವರುದ್ರಪ್ಪ | ಸಿಪಿಐ | 1,109 | 1.08 |
| 14 | ಈ.ಎನ್. ವೆಂಕಟೇಶ್ | ಐಎನ್‌ಡಿ | 939 | 0.92 |
| | | **ಒಟ್ಟು** | **1,02,594** | **100** |

**Source:** Election Commission of India

**Note:** BJP-Bharathiya Janata Party, JD(S)–Janata Dal (Secular), IND–Independent, INC-Indian National Congress, JD(U)–Janata Dal (United), BSP–Bahujan Samaj Party, KCVP– Kannada Chalavali Vatal Paksha, CPI–Communist Party Of India.

ರಾಜ್ಯದ 11ನೇ ವಿಧಾನಸಭೆಗೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 05.09.1999ರಂದು 219 ಮತ ಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ 74,974 ಪುರುಷ ಹಾಗೂ 72,673 ಮಹಿಳಾ ಮತದಾರರಿದ್ದರು. ಈ ಪೈಕಿ 58,507 ಪುರುಷ ಹಾಗೂ 52,723 ಮಹಿಳೆಯರು ಮಾತ್ರ ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದರು. ಹಾಗಾಗಿ ಈ ಕ್ಷೇತ್ರದಲ್ಲಿ ಶೇ. 75.38 ಮತದಾನ ದಾಖಲಾಯಿತು. ಈ ಪೈಕಿ 8,701 ಮತಗಳು ತಿರಸ್ಕೃತಗೊಂಡಿದ್ದರಿಂದ 1,02,594 ಮತಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಯಿತು. ಮತ ಎಣಿಕೆ ಕಾರ್ಯವು ದಿನಾಂಕ 06.09.1999ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ ಏಳು ಅಭ್ಯರ್ಥಿಗಳು ರಾಜಕೀಯ ಪಕ್ಷಗಳಿಂದ, ಏಳು ಜನ ಪಕ್ಷೇತರರಾಗಿ ಸ್ಪರ್ಧಿಸಿದ್ದರು. 1994ರ ಚುನಾವಣೆಯಲ್ಲಿ ಜನತಾದಳ ಪಕ್ಷದಿಂದ ಆಯ್ಕೆಯಾಗಿದ್ದ ತಿಪ್ಪೇಸ್ವಾಮಿ ಅವರು 1999ರ ಚುನಾವಣೆಯಲ್ಲಿಯೂ ಜೆಡಿ(ಎಸ್)ನಿಂದ

ಸ್ಪರ್ಧಿಸಿದ್ದರು. ಹೆಚ್.ಸಿ. ಶಿವಶಂಕರಪ್ಪ ಅವರು ಜನತಾದಳ ಇಬ್ಭಾಗವಾಗಿದ್ದರಿಂದ ಸಂಯುಕ್ತ ಜನತಾದಳದಲ್ಲಿ ಗುರುತಿಸಿಕೊಂಡು ಆ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಎನ್. ಜಯಣ್ಣ ಅವರು ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿಕೆಟ್ ಕೈ ತಪ್ಪಿದ್ದರಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಕಾಂಗ್ರೆಸ್ ನಿಂದ ಟಿ. ಪ್ರಭುದೇವ್ ಅವರು ಸ್ಪರ್ಧಿಸಿದ್ದರು ಮತ್ತು ಮಾಜಿ ಶಾಸಕ ಬಿ.ಎಲ್. ಗೌಡ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ಚುನಾವಣೆಯ ವಿಶೇಷ ಎಂದರೆ ಹಾಲಿ ಶಾಸಕ ತಿಪ್ಪೇಸ್ವಾಮಿ ಹಾಗೂ ಮಾಜಿ ಶಾಸಕರಾದ ಬಿ.ಎಲ್. ಗೌಡ, ಹೆಚ್.ಸಿ. ಶಿವಶಂಕರಪ್ಪ ಮತ್ತು ಎನ್. ಜಯಣ್ಣ ಅವರು ಚುನಾವಣಾ ಕಣದಲ್ಲಿದ್ದರು. ಬಿಜೆಪಿ, ಜೆಡಿ(ಎಸ್), ಪಕ್ಷೇತರ ಎನ್. ಜಯಣ್ಣ ಮತ್ತು ಕಾಂಗ್ರೆಸ್ ಗಳ ನಡುವೆ ಚತುರ್ಥ ಸ್ಪರ್ಧೆ ಸೃಷ್ಟಿಯಾಗಿತ್ತು. ಕೊನೆಗೆ ಬಿಜೆಪಿಯ ಜಿ. ಬಸವರಾಜ್ ಮಂಡಿಮಟ್ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಜೆಡಿ(ಎಸ್)ನ ತಿಪ್ಪೇಸ್ವಾಮಿ ಅವರನ್ನು 8,852(8.63) ಮತಗಳ ಅಂತರದಿಂದ ಸೋಲಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆಯಲ್ಲಿ ಚಳ್ಳಕೆರೆಯನ್ನು ಪ್ರತಿನಿಧಿಸಿದರು. ರಾಜ್ಯದಲ್ಲಿ ಜನತಾದಳ ಇಬ್ಭಾಗವಾಗಿ ಜನತಾದಳ(ಸಂಯುಕ್ತ) ಮತ್ತು ಜನತಾದಳ(ಜಾತ್ಯತೀತ) ಎಂಬ 2 ಪಕ್ಷಗಳಾಗಿರುವುದು ಮತ್ತು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಆದ ಭಿನ್ನಾಭಿಪ್ರಾಯ ಇದು ಬಿಜೆಪಿಯ ಗೆಲುವಿಗೆ ಸಹಾಯಕವಾಯಿತು ಎಂದು ಹೇಳಬಹುದು.

**ಕೋಷ್ಟಕ – 3.11.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004**

ಒಟ್ಟು ಮತದಾರರು–1,73,623 ಪುರಸ್ಕೃತಗೊಂಡ ಮತಗಳು–1,18,991

ಚಲಾವಣೆಯಾದ ಮತಗಳು–1,19,122 ತಿರಸ್ಕೃತಗೊಂಡ ಮತಗಳು–131

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಸುಧಾಕರ್ ಡಿ. | ಐಎನ್‌ಸಿ | 47,550 | 26416% |
| 2 | ಬಸವರಾಜ್ ಮಂಡಿಮಟ್ | ಬಿಜೆಪಿ | 20,199 | 11221% |
| 3 | ತಿಪ್ಪೇಸ್ವಾಮಿ | ಜೆಡಿ(ಎಸ್) | 19,707 | 10948% |
| 4 | ಲಕ್ಷ್ಮೀಕಾಂತ್ ಎನ್.ಆರ್. | ಐಎನ್‌ಡಿ | 14,074 | 78188% |
| 5 | ರಂಗಸ್ವಾಮಿ ಕೆ. | ಐಎನ್‌ಡಿ | 10,195 | 56638% |
| 6 | ಹೆಚ್ ಜಗಲೂರಯ್ಯ | ಜೆಪಿ | 3,263 | 18127% |
| 7 | ಗಿರಿಯಪ್ಪ ಆರ್ (ಆರ್.ಜಿ. ಮಾಸ್ಟರ್) | ಕೆಎನ್‌ಡಿಪಿ | 1,703 | 9461% |
| 8 | ಪಾಂಡುರಂಗ ಜಿ.ಆರ್. | ಬಿಎಸ್‌ಪಿ | 1,077 | 5983% |
| 9 | ದೇವರಾಜ ಟಿ. | ಐಎನ್‌ಡಿ | 655 | 3638% |
| 10 | ರಂಗಸ್ವಾಮಿ ಟಿ. (ಎಲ್‌ಐಸಿ) | ಕೆಸಿವಿಪಿ | 568 | 3155% |
| | | **ಒಟ್ಟು** | **1,18,991** | |

**Source:** Election Commission of India

**Note:** INC-Indian National Congress, BJP-Bharathiya Janata Party, JD(S)-Janata Dal (Secular), IND Independent, JP – Janata Party, KNDP-Kannada Nadu Party, BSP-Bahujan Samaj Party, KCPV Kannada Chalavali Vatal Paksha.

ರಾಜ್ಯದ 12ನೇ ವಿಧಾನಸಭೆಗೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 20.04.2004ರಂದು 186 ಮತಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ 87,527 ಪುರುಷ ಹಾಗೂ 86,096 ಮಹಿಳಾ ಮತದಾರರಿದ್ದರು. ಈ ಪೈಕಿ 61,629 ಪುರುಷ ಹಾಗೂ 57,163 ಮಹಿಳೆಯರು ಮಾತ್ರ ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದರು. 330 ಅಂಚೆ ಮತಗಳನ್ನು ಒಳಗೊಂಡು ಈ ಕ್ಷೇತ್ರದಲ್ಲಿ ಶೇ. 68.61ರಷ್ಟು ಮತದಾನ ದಾಖಲಾಯಿತು. ಈ ಪೈಕಿ 131 ಮತಗಳು ತಿರಸ್ಕೃತಗೊಂಡಿದ್ದರಿಂದ 1,18,991 ಮತಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಯಿತು. ಮತ ಎಣಿಕೆ ಕಾರ್ಯವು ದಿನಾಂಕ 13.05.2004ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ ಏಳು ಅಭ್ಯರ್ಥಿಗಳು ರಾಜಕೀಯ ಪಕ್ಷಗಳಿಂದ, ಮೂರು ಜನ ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಕಳೆದ ಚುನಾವಣೆಯಲ್ಲಿ ಏರ್ಪಟ್ಟ ಚತುರ್ಥ ಸ್ಪರ್ಧೆ ಅದೇ 4 ಪಕ್ಷಗಳ ಆ ನಾಲ್ವರ ನಡುವೆ ಮರುಕಳಿಸಿತು. ಈ ಚುನಾವಣೆಯಲ್ಲಿ ಜನತಾದಳ(ಜಾತ್ಯತೀತ) ಪಕ್ಷದ ತಿಪ್ಪೇಸ್ವಾಮಿ, ಬಿಜೆಪಿಯ ಜಿ. ಬಸವರಾಜ್ ಮಂಡಿಮಟ್ ಹಾಗೂ ಪಕ್ಷೇತರ ಅಭ್ಯರ್ಥಿ ಲಕ್ಷ್ಮೀಕಾಂತ್ ಎನ್.ಆರ್. ಅವರ ನಡುವೆ ಮತಗಳು ಹಂಚಿಕೆಯಾಗಿದ್ದು ಕಾಂಗ್ರೆಸ್‌ನ ಡಿ. ಸುಧಾಕರ್ ಅವರ ಗೆಲುವಿಗೆ ವರದಾನವಾಯಿತು ಎನ್ನಬಹುದು. ಡಿ. ಸುಧಾಕರ್ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಬಿಜೆಪಿಯ ಜಿ. ಬಸವರಾಜ್ ಮಂಡಿಮಟ್ ಅವರನ್ನು 27,351(22.98) ಮತಗಳ ಬಾರಿ ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಗೆಲುವನ್ನು ಪಡೆದು ವಿಧಾನಸಭೆಯಲ್ಲಿ ಚಳ್ಳಕೆರೆಯನ್ನು ಪ್ರತಿನಿಧಿಸಿದರು.

**ಕೋಷ್ಟಕ –3.12.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008**

ಒಟ್ಟು ಮತದಾರರು–1,80,369 ಪುರಸ್ಕೃತಗೊಂಡ ಮತಗಳು–1,18,275

ಚಲಾವಣೆಯಾದ ಮತಗಳು–1,18,476 ತಿರಸ್ಕೃತಗೊಂಡ ಮತಗಳು–201

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ತಿಪ್ಪೇಸ್ವಾಮಿ | ಬಿಜೆಪಿ | 42,591 | 36.01 |
| 2 | ಶಶಿಕುಮಾರ್ | ಐಎನ್‌ಸಿ | 42,302 | 35.77 |
| 3 | ಪಿ. ತಿಪ್ಪೇಸ್ವಾಮಿ(ಪಿ.ಟಿ) | ಜೆಡಿ(ಎಸ್) | 23,777 | 20.01 |
| 4 | ಡಾ. ಓಬಣ್ಣ ಕೆ. ಪೂಜಾರ್ | ಬಿಎಸ್‌ಪಿ | 3,938 | 3.33 |
| 5 | ಸಣ್ಣ ಸೂರಯ್ಯ | ಐಎನ್‌ಡಿ | 2,672 | 2.26 |
| 6 | ಜಿ. ಭಾಗೀರಥಿ ನಾಯಕ | ಜೆಡಿ(ಯು) | 1,804 | 1.53 |
| 7 | ಬಿ. ಓಬಣ್ಣ | ಐಎನ್‌ಡಿ | 1,191 | 1.01 |
| | | **ಒಟ್ಟು** | **1,18,275** | **100** |

**Source:** Election Commission of India

**Note:** BJP-Bharathiya Janata Party, INC-Indian National Congress, JD(S) - Janata Dal (Secular), BSP-Bahujan Samaj Party, IND-Independent, JD(U)-Janata Dal (United).

ರಾಜ್ಯದ 13ನೇ ವಿಧಾನಸಭೆಗೆ ಚಳ್ಳಕೆರೆ ಮೀಸಲು ಕ್ಷೇತ್ರದಲ್ಲಿ ದಿನಾಂಕ 16.05.2008 ರಂದು 211 ಮತಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 65.69 ಮತದಾರರಿದ್ದರು. ಚುನಾವಣೆಯಲ್ಲಿ 90,971 ಪುರುಷ ಹಾಗೂ 89,398 ಮಹಿಳಾ ಮತದಾರರಿದ್ದರು. ಆದರೆ ಈ ಪೈಕಿ 62,039 ಪುರುಷ ಹಾಗೂ 56,110 ಸ್ತ್ರೀಯರು ತಮ್ಮ ಹಕ್ಕು ಚಲಾಯಿಸಿದರು. ಹಾಗಾಗಿ 1,18,275 ಮತಗಳನ್ನು ಗಣನೆಗೆ ತೆಗೆದುಕೊಂಡರು. ಇದರಲ್ಲಿ 327 ಅಂಚೆ ಮತಗಳು ಸೇರಿವೆ. ಮತ ಎಣಿಕೆ ಕಾರ್ಯ ದಿನಾಂಕ 25–05–2008ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ 7 ಅಭ್ಯರ್ಥಿಗಳು ಕಣದಲ್ಲಿದ್ದರು. ಇದರಲ್ಲಿ 5 ಅಭ್ಯರ್ಥಿಗಳು ರಾಜಕೀಯ ಪಕ್ಷಗಳಿಂದ ಮತ್ತು ಇಬ್ಬರು ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧೆ ಮಾಡಿದ್ದರು. ಮಾಜಿ ಸಚಿವ ತಿಪ್ಪೇಸ್ವಾಮಿ ಅವರು ಬಿ.ಜೆ.ಪಿ.ಯಿಂದ ಹಾಗೂ ಮತ್ತೋರ್ವ ಮಾಜಿ ಲೋಕಸಭಾ ಸದಸ್ಯ ಶಶಿಕುಮಾರ್ ಅವರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಪಿ. ತಿಪ್ಪೇಸ್ವಾಮಿ(ಪಿ.ಟಿ) ಅವರು ಜೆ.ಡಿ(ಎಸ್) ಪಕ್ಷದಿಂದ ಸ್ಪರ್ಧಿಸಿದರು. ಮಾಜಿ ಸಚಿವ ತಿಪ್ಪೇಸ್ವಾಮಿ ಅವರು ಬಿ.ಜೆ.ಪಿ.ಯನ್ನು ಪ್ರತಿನಿಧಿಸಿ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಶಶಿಕುಮಾರ್ ಅವರನ್ನು 289 ಮತಗಳಿಂದ ಸೋಲಿಸುವ ಮೂಲಕ 3ನೇ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದ್ದ ಮತದಾರರು ಈ ಬಾರಿ ಬಿ.ಜೆ.ಪಿ. ಪರ ಮತದಾನ ಮಾಡಿರುವುದನ್ನು ಗಮನಿಸಿದರೆ,

ಲಿಂಗಾಯತ ಸಮುದಾಯವು ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಜಾಗೃತವಾಗಿರುವಂತೆ ಈ ಕ್ಷೇತ್ರದಲ್ಲಿಯೂ ಸಹ ಒಗ್ಗಟ್ಟಾಗಿ ಯಡಿಯೂರಪ್ಪನವರ ಶಕ್ತಿಯನ್ನು ಬಲಪಡಿಸುವ ಪ್ರಯತ್ನ ಮಾಡಿತು. ಪ್ರತಿ ಚುನಾವಣೆಯಲ್ಲಿ ನಡೆದಂತೆ ಪರಿಶಿಷ್ಟ ಪಂಗಡ ಮತಗಳು ಸ್ಪರ್ಧಿಸಿದ ಅಭ್ಯರ್ಥಿಗಳ ನಡುವೆ ಹಲವಾರು ಕಾರಣಗಳಿಂದ ಹಂಚಿಕೆಯಾಗಿರುತ್ತವೆ. ಆದರೆ ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರ ಮತಗಳನ್ನು ಪಡೆದು 2ನೇ ಸ್ಥಾನಕ್ಕೆ ಬಂದು ಗೆಲ್ಲುವ ಪ್ರಯತ್ನದಲ್ಲಿ ವಿಫಲವಾಯಿತು. ಭಾರತದ ಸಂದರ್ಭದಲ್ಲಿ ಚುನಾವಣೆಗಳು ಹೆಚ್ಚಾಗಿ ಪಕ್ಷ ಆಧಾರಿತವಾಗಿ ನಡೆಯುವುದರಿಂದ ಮತದಾರ ಪಕ್ಷ ಆಧರಿಸಿ ಈ ಚುನಾವಣೆ ಭವಿಷ್ಯ ನಿರ್ಧರಿಸಿದ್ದಾನೆ.

ಈ ಚುನಾವಣೆಯು ಮೀಸಲುಕ್ಷೇತ್ರ ನೈಜ ರಾಜಕೀಯವನ್ನು ಪ್ರದರ್ಶಿಸಿತು. ಸಾಮಾನ್ಯವಾಗಿ ಮೀಸಲುಕ್ಷೇತ್ರಗಳಲ್ಲಿ ಯಾವ ಜಾತಿ ಅಥವಾ ಕೋಮು ಸಂಖ್ಯೆಯಲ್ಲಿ 2ನೇ ಸ್ಥಾನ ಪಡೆದಿರುತ್ತಾರೋ ಅವರೇ ನಿರ್ಣಾಯಕರು ಎಂಬ ಅಂಶ ಈ ಕ್ಷೇತ್ರದಲ್ಲಿ ಸಾಬೀತಾಯಿತು.

**ಕೋಷ್ಟಕ –3.13.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013**

ಒಟ್ಟು ಮತದಾರರು–1,88,758 ಪುರಸ್ಕೃತಗೊಂಡ ಮತಗಳು–1,47,776

ಚಲಾವಣೆಯಾದ ಮತಗಳು–1,47,968 ತಿರಸ್ಕೃತಗೊಂಡ ಮತಗಳು–192

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಟಿ. ರಘುಮೂರ್ತಿ | ಐಎನ್‌ಸಿ | 60,197 | 40.74 |
| 2 | ಕೆ. ಟಿ. ಕುಮಾರಸ್ವಾಮಿ | ಕೆಜೆಪಿ | 37,074 | 25.09 |
| 3 | ಪಿ. ತಿಪ್ಪೇಸ್ವಾಮಿ(ಪಿಟಿ) | ಜೆಡಿ(ಎಸ್) | 27,373 | 18.52 |
| 4 | ಜಿ.ಪಿ. ಜಯಪಾಲಯ್ಯ | ಬಿಜೆಪಿ | 12,981 | 8.78 |
| 5 | ಎಲ್. ನಾಗರಾಜು(ನಾಗಣ್ಣ) | ಬಿಎಸ್‌ಆರ್ | 4,233 | 2.86 |
| 6 | ಬಿ. ಹನುಮಂತರಾಯ | ಐಎನ್‌ಡಿ | 2,568 | 1.74 |
| 7 | ಪಿ. ಪಾಲಯ್ಯ | ಬಿಎಸ್‌ಪಿ | 998 | 0.68 |
| 8 | ದೀಪಾ ಸಿ. | ಎಸ್‌ಪಿ | 909 | 0.62 |
| 9 | ಲಕ್ಷ್ಮೀದೇವಿ | ಐಎನ್‌ಡಿ | 813 | 0.55 |
| 10 | ಎಂ. ಪಾಲಯ್ಯ | ಐಎನ್‌ಡಿ | 630 | 0.43 |
| | | **ಒಟ್ಟು** | **1,47,776** | **100** |

**Source:** Election Commission of India

**Note:** INC-Indian National Congress, KJP–Karnataka Jantha Paksha, JD(S)-Janata Dal (Secular), BJP-Bharathiya Janata Party, BSRCP–Basavara Shramikara Raitara Congress Party, IND Independent, SP–Samajwadi.

ರಾಜ್ಯದ 14ನೇ ವಿಧಾನಸಭೆಗೆ ಚಳ್ಳಕೆರೆ ಮೀಸಲು ಕ್ಷೇತ್ರದಲ್ಲಿ ದಿನಾಂಕ 05.05.2013ರಂದು 238 ಮತಕೇಂದ್ರಗಳಲ್ಲಿ ನಡೆಯಿತು. ಚುನಾವಣೆಯಲ್ಲಿ 95,933 ಪುರುಷ ಹಾಗೂ 92,825 ಮಹಿಳಾ ಮತದಾರರಿದ್ದರು. ಆದರೆ ಈ ಪೈಕಿ ಪುರುಷ ಹಾಗೂ ಸ್ತ್ರೀಯರು ಸೇರಿ 1,47,968 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಹಾಗಾಗಿ 1,47,776 ಮತಗಳನ್ನು ಗಣನೆಗೆ ತೆಗೆದುಕೊಂಡರು. ಇದರಲ್ಲಿ 1100 ಅಂಚೆ ಮತಗಳು ಸೇರಿವೆ. ಮತ ಎಣಿಕೆ ಕಾರ್ಯ ದಿನಾಂಕ 25–05–2013ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ 10 ಅಭ್ಯರ್ಥಿಗಳು ಕಣದಲ್ಲಿದ್ದರು. ಇದರಲ್ಲಿ 7 ಅಭ್ಯರ್ಥಿಗಳು ರಾಜಕೀಯ ಪಕ್ಷಗಳಿಂದ ಮತ್ತು ಮೂರು ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧೆ ಮಾಡಿದ್ದರು. ಈ ಚುನಾವಣೆಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಕೆಜೆಪಿ ಪಕ್ಷ ಮತ್ತು ಬಿ. ಶ್ರೀರಾಮುಲು ನೇತೃತ್ವದ ಬಿಎಸ್‌ಆರ್ ಕಾಂಗ್ರೆಸ್ ಪಕ್ಷಗಳು ಸ್ಥಾಪನೆಯಾಗಿ ಕಣದಲ್ಲಿದ್ದವು. ಟಿ. ರಘುಮೂರ್ತಿ ಯವರು ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದರೆ, ಕೆ.ಟಿ. ಕುಮಾರಸ್ವಾಮಿ ಕೆಜೆಪಿ ಪಕ್ಷದಿಂದ ಸ್ಪರ್ಧಿಸಿದರು. ಜನತಾದಳ (ಜಾತ್ಯತೀತ) ಪಕ್ಷದಿಂದ ಪಿ. ತಿಪ್ಪೇಸ್ವಾಮಿ ಎರಡನೇ ಬಾರಿಗೆ ಸ್ಪರ್ಧಿಸಿದರು. ಬಿಜೆಪಿ ಪಕ್ಷದಿಂದ ಜಿ.ಪಿ. ಜಯಪಾಲಯ್ಯ ಹಾಗೂ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಎಲ್. ನಾಗರಾಜು(ನಾಗಣ್ಣ) ಅವರು ಸ್ಪರ್ಧೆ ಮಾಡಿದ್ದರು. ಈ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಜಿ.ಪಿ. ಜಯಪಾಲಯ್ಯ ಮತ್ತು ಕೆಜೆಪಿ ಪಕ್ಷದ ಕೆ.ಟಿ. ಕುಮಾರಸ್ವಾಮಿ ಅವರ ನಡುವೆ ಮತಗಳು ಹಂಚಿಕೆಯಾಗಿದ್ದು ಕಾಂಗ್ರೆಸ್‌ನ ಟಿ. ರಘುಮೂರ್ತಿ ಅವರ ಗೆಲುವಿಗೆ ವರದಾನವಾಯಿತು ಎನ್ನಬಹುದು. ಟಿ. ರಘುಮೂರ್ತಿಯವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಕೆ.ಟಿ. ಕುಮಾರಸ್ವಾಮಿ ಅವರನ್ನು 23,123(15.65) ಮತಗಳ ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಗೆಲುವನ್ನು ಪಡೆದು ಚಳ್ಳಕೆರೆ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದರು.

**ಕೋಷ್ಟಕ –3.14.**

**ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018**

ಒಟ್ಟು ಮತದಾರರು–2,08,942 ಪುರಸ್ಕೃತಗೊಂಡ ಮತಗಳು–1,69,000

ಚಲಾವಣೆಯಾದ ಮತಗಳು–1,69,310 ತಿರಸ್ಕೃತಗೊಂಡ ಮತಗಳು–301

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಟಿ. ರಘುಮೂರ್ತಿ | ಐಎನ್‌ಸಿ | 72,874 | 43.12 |
| 2 | ಎಮ್. ರವೀಶ್ ಕುಮಾರ್ | ಜೆಡಿ(ಎಸ್) | 59,335 | 35.11 |
| 3 | ಕೆ. ಟಿ. ಕುಮಾರಸ್ವಾಮಿ | ಬಿಜೆಪಿ | 33,471 | 19.81 |
| 4 | ಕೆ.ಪಿ. ಭೂತಯ್ಯ | ಸ್ವರಾಜ್ | 1590 | 0.94 |
| 5 | ನೋಟಾ | ನೋಟಾ | 1730 | 1.02 |
| | | **ಒಟ್ಟು** | **1,69,000** | **100** |

**Source:** Election Commission of India

**Note:** INC-Indian National Congress, JD(S)-Janata Dal (Secular), BJP-Bharathiya Janata Party, SWJI–Swaraj. NOTA–None of the Above.

ರಾಜ್ಯದ 15ನೇ ವಿಧಾನಸಭೆಗೆ ಚಳ್ಳಕೆರೆ ಮೀಸಲುಕ್ಷೇತ್ರದಲ್ಲಿ ದಿನಾಂಕ 12.05.2018ರಂದು 254 ಮತಕೇಂದ್ರಗಳಲ್ಲಿ ನಡೆಯಿತು. ಚುನಾವಣೆಯಲ್ಲಿ 50.34ರಷ್ಟು ಪುರುಷ ಹಾಗೂ 49.65ರಷ್ಟು ಮಹಿಳಾ ಮತದಾರರಿದ್ದರು. ಆದರೆ ಈ ಪೈಕಿ ಪುರುಷ ಹಾಗೂ ಸ್ತ್ರೀಯರು ಸೇರಿ 1,69,310 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಹಾಗಾಗಿ 1,69,000 ಮತಗಳನ್ನು ಗಣನೆಗೆ ತೆಗೆದುಕೊಂಡರು. ಮತ ಎಣಿಕೆ ಕಾರ್ಯ ದಿನಾಂಕ 15–05–2018ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಕಣದಲ್ಲಿ 4 ಅಭ್ಯರ್ಥಿಗಳಿದ್ದರು. ಹಾಗಾಗಿ ನಾಲ್ವರು ಪಕ್ಷಗಳನ್ನು ಪ್ರತಿನಿಧಿಸಿದ್ದರು. ಹಾಲಿ ಶಾಸಕ ಟಿ. ರಘುಮೂರ್ತಿ ಅವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ಎಂ. ರವೀಶ್ ಕುಮಾರ್ ಜನತಾದಳ(ಜಾತ್ಯತೀತ) ಪಕ್ಷದಿಂದ ಸ್ಪರ್ಧಿಸಿದ್ದರೆ, ಕೆ.ಟಿ. ಕುಮಾರಸ್ವಾಮಿ ಕಳೆದ ಚುನಾವಣೆಯಲ್ಲಿ ಕೆಜೆಪಿ ಯಿಂದ ಸ್ಪರ್ಧೆ ಮಾಡಿದ್ದು ಈ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದರು ಹಾಗೂ ಕೆ.ಪಿ. ಭೂತಯ್ಯ ಸ್ವರಾಜ್ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ಚುನಾವಣೆಯಲ್ಲಿ ಮೇಲ್ಮುಖವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಹಾಗೂ ಜೆಡಿ(ಎಸ್) ಪಕ್ಷಗಳ ನಡುವೆ ನೇರಸ್ಪರ್ಧೆಯಂತೆ ಕಂಡುಬಂದರೂ, ಫಲಿತಾಂಶ ಮಾತ್ರ ಏಕಮುಖವಾಗಿತ್ತು. ಟಿ. ರಘುಮೂರ್ತಿ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಎಂ. ರವೀಶ್ ಕುಮಾರ್ ಅವರಿಗಿಂತ 13,539(8.09) ಅಧಿಕ ಮತಗಳ ಅಂತರದಿಂದ ಗೆಲುವು ಪಡೆದು ಸತತ 2ನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಈ ಚುನಾವಣಾ ಫಲಿತಾಂಶದ ಮೇಲೆ ರಘುಮೂರ್ತಿಯವರ ವೈಯಕ್ತಿಕ ವರ್ಚಸ್ಸು ಮತದಾರರ ಮೇಲೆ ಪರಿಣಾಮ ಬೀರಿ

ಕಾಂಗ್ರೆಸ್ ಈ ಕ್ಷೇತ್ರದಲ್ಲಿ ವಿಜಯದ ನಾಗಾಲೋಟ ಮುಂದುವರಿಸಿತು. ಬಿಜೆಪಿಯ ಮತ್ತು ಅದರ ಪ್ರತಿನಿಧಿ ಕೆ.ಟಿ. ಕುಮಾರಸ್ವಾಮಿ ಮತದಾರರನ್ನು ಓಲೈಸುವಲ್ಲಿ ವಿಫಲರಾಗಿ ಎದುರಾಳಿಗೆ ಪೈಪೋಟಿ ನೀಡದೆ ಪರಾಭವಗೊಂಡರು.

ಈ ಕ್ಷೇತ್ರದಲ್ಲಿ ಈಗ ವಾಲ್ಮೀಕಿ ಜನಾಂಗದವರ ಸಂಖ್ಯೆ ಹೆಚ್ಚಿದೆ. ಅಭ್ಯರ್ಥಿ ಆಯ್ಕೆಯಲ್ಲಿ ಅವರ ಪಾತ್ರವೇ ನಿರ್ಣಾಯಕ. ಪರಿಶಿಷ್ಟ ಪಂಗಡ ಮತಗಳೇ ನಿರ್ಣಾಯಕವಾಗಿರುವ ಮೀಸಲುಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಜಿದ್ದಾಜಿದ್ದಿನ ಹೋರಾಟ ನಿರೀಕ್ಷೆಯಿದೆ. ಈಗ ಪ್ರತ್ಯೇಕ ಲಿಂಗಾಯತ ಧರ್ಮ ಸ್ಥಾಪನೆಯ ಬೆನ್ನಲ್ಲಿ ಇಲ್ಲಿನ ಮತಬ್ಯಾಂಕ್ ಒಡೆದು ಹಂಚಿಹೋಗುವ ಸಾಧ್ಯತೆ ಹೆಚ್ಚಿದೆ. ಇನ್ನು ಅಂಕಿ–ಸಂಖ್ಯೆಯಲ್ಲಿ ಲಿಂಗಾಯತ ಜಾತಿಯವರು ಎರಡನೇ ಸ್ಥಾನದಲ್ಲಿದ್ದಾರೆ. ಆದರೆ ಈ ವರ್ಗದಿಂದ ಯಾವುದೇ ಪ್ರಭಾವಿ ನಾಯಕ ಹೊಮ್ಮಿಲ್ಲ. ಅಷ್ಟೇ ಅಲ್ಲ, ರಘುಮೂರ್ತಿ ಬಗ್ಗೆ ಈ ಸಮುದಾಯಕ್ಕೂ ಉತ್ತಮ ಅಭಿಪ್ರಾಯವಿರುವುದರಿಂದ ಲಿಂಗಾಯತರ ಬಹುಪಾಲು ಮಂದಿ ರಘುಮೂರ್ತಿ ಅವರ ಕಡೆಗೇ ಒಲವು ಹೊಂದಿರುವುದು ವಿಜಯಕ್ಕೆ ಕಾರಣವಾಯಿತೆಂದು ಹೇಳಬಹುದು.

### 3.5. ಮತದಾರರ ನಡವಳಿಕೆ

ಮತದಾನ ವರ್ತನೆಯನ್ನು ಇತಿಹಾಸದ ಹಿನ್ನೆಲೆಯಿಂದ ಕಾಣಬಹುದಾಗಿದೆ. ಇದು ಅತ್ಯಂತ ಪ್ರಾಚೀನವಾದುದ್ದು, ಇದು ಇತ್ತೀಚಿನ ಬೆಳವಣಿಗೆಯಲ್ಲ. ಬಹಳ ಪ್ರಾಚೀನ ವಿಧಾನವಾಗಿದೆ. ಈ ಪುರಾತನವಾದ ಹಿನ್ನೆಲೆಗೆ ಹಲವಾರು ಗ್ರಂಥಗಳು, ಪುಸ್ತಕಗಳು ಕಂಡುಬಂದಿವೆ. ಪ್ರಾಚೀನ ಕಾಲದಿಂದಲೂ ಮತದಾನದ ವರ್ತನೆಯನ್ನು ಕಾಣಬಹುದಾಗಿದೆ.

ಮತದಾನದ ವರ್ತನೆ ಎಂಬುದು ಪ್ರಾಚೀನಕಾಲದಿಂದಲೂ ಹಳ್ಳಿಗಳಲ್ಲಿ ಮುಖಂಡರ ಆಯ್ಕೆಯಿಂದ ಕಾಣಬಹುದು. ಜನರು ಮುಖಂಡರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಉತ್ತಮ ಗುಣ ನಡತೆ ಹೊಂದಿದವರನ್ನು ಆಯ್ಕೆ ಮಾಡುತ್ತಿದ್ದರು. ಹಳ್ಳಿಗಳಲ್ಲಿ ಜನಸಾಮಾನ್ಯರು ಒಂದು ಸಮಾಜದಲ್ಲಿ ಜೀವನ ನಡೆಸುವಾಗ ಆಗಿಂದಾಗ್ಗೆ ಕಲಹಗಳು, ಜಗಳಗಳು, ವಾದ–ವಿವಾದಗಳು, ದ್ವೇಷ ವೈಷಮ್ಯಗಳು ಸರ್ವೇ ಸಾಮಾನ್ಯವಾಗಿದೆ. ಅಂತಹ ಸಂದರ್ಭದಲ್ಲಿ ಉತ್ತಮ ಮುಖಂಡರನ್ನು ಇಲ್ಲದೇ ಜನರು ಒಂದು ಬಹುಮತದ ಒಪ್ಪಿಗೆಯ ಆಧಾರದ ಮೇಲೆ ಅವರನ್ನು ಆಯ್ಕೆ ಮಾಡುತ್ತಿದ್ದರು.

ಹೀಗೆ ಆಯ್ಕೆ ಮಾಡಿದ ಹಲವಾರು ಮುಖಂಡರು ತಮ್ಮ ಪರವಾಗಿ ಮುಖಂಡರಿಗೆ ಅಧಿಕಾರವನ್ನು ನೀಡುತ್ತಿದ್ದರು. ಯಾವುದೇ ನ್ಯಾಯ ತೀರ್ಮಾನ ಮಾಡುವಲ್ಲಿ ತಮ್ಮ ಪರವಾಗಿ ಮುಖಂಡರಿಗೆ ಅಧಿಕಾರವನ್ನು ನೀಡುತ್ತಿದ್ದರು. ಜನರೆಲ್ಲರೂ ಅವರ ಮಾತುಗಳನ್ನು ಕೇಳಿ ನಿರ್ಧಾರವನ್ನು ಒಪ್ಪಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ಮತದಾನದ ವರ್ತನೆಯ ಇತಿಹಾಸ ಪ್ರಾಚೀನ ಕಾಲದಲ್ಲಿತ್ತು ಎನ್ನಬಹುದು.

ಮತದಾನದ ವರ್ತನೆ ಎಂಬುದು ಇಂದು ರಾಜ್ಯಶಾಸ್ತ್ರದ ಒಂದು ಪ್ರಮುಖವಾದ ಅಧ್ಯಯನದ ವಿಷಯವಾಗಿ ಕಂಡುಬರುತ್ತದೆ. ಕಾರಣ ರಾಜಕೀಯ ಚಟುವಟಿಕೆಗಳನ್ನು ರಾಜ್ಯಶಾಸ್ತ್ರದ ಅಧ್ಯಯನದಲ್ಲಿ ನಡೆಸಿದಾಗ ಮತದಾನದ ವರ್ತನೆಯನ್ನು ತಿಳಿಯಬಹುದು. ಮತದಾನದ ವರ್ತನೆ ಎಂಬುದು ಇಂದು ಮತದಾನದ ನಮೂನೆಗೆ ಸಂಬಂಧಿಸಿದಂತೆ ಚುನಾವಣೆಯ ಅಂಕಿ–ಅಂಶಗಳು, ಚುನಾವಣೆಯ ದಾಖಲಾತಿ ಚುನಾವಣೆಯ ಕ್ರಮಬದ್ಧತೆಯನ್ನು ಸೂಚಿಸುತ್ತದೆ. ಈ ಶಬ್ದವು ರಾಜಕೀಯ ವರ್ತನೆಯ ಮೂಲಕ ಬಂದಿದೆ ಎನ್ನಬಹುದು. ಬಿಹೇವಿಯರ್ ಎಂಬ ಇಂಗ್ಲಿಷ್ ಪದದ ಕನ್ನಡ ಅನುವಾದವೇ "ವರ್ತನೆ" ಅಥವಾ "ನಡವಳಿಕೆ" ಇದನ್ನು ರಾಜ್ಯಶಾಸ್ತ್ರದಲ್ಲಿ ಮಾನವನ ವರ್ತನೆ, ಮಾನವನ ನಡವಳಿಕೆ ಎಂದು ಅರ್ಥೈಸಬಹುದಾಗಿದೆ.[18] ಮತದಾನದ ವರ್ತನೆಯು ಒಂದು ನಡವಳಿಕೆಯಾಗಿದೆ. ಅದು ಮತದಾರರ ಆಯ್ಕೆ, ಮತದಾರರ ಆದ್ಯತೆ, ಒಪ್ಪಂದಗಳು, ಕಾಳಜಿ ಮತ್ತು ಕಾರ್ಯಕ್ರಮಗಳು ಇತ್ಯಾದಿ. ವಿವಿಧ ಪ್ರಶ್ನೆಗಳ ಬಗ್ಗೆ ಹಲವು ಚುನಾವಣೆಗಳಲ್ಲಿ ಸ್ಪರ್ಧಿಸಿ ಹೋರಾಟ ನಡೆಸಿರುವುದು ಕಂಡುಬರುತ್ತದೆ.

ಮತದಾನದ ವರ್ತನೆಯು ಅಧಿಕಾರವನ್ನು ಪ್ರಾರಂಭಿಸುತ್ತಾ ಅಧಿಕಾರ ನಡೆಸಲು ಅನುವು ಮಾಡಿಕೊಡುತ್ತದೆ. ಇದೊಂದು ಏಕೈಕ ವಿಧಾನ ಅಥವಾ ಎಲ್ಲ ವ್ಯಕ್ತಿಗಳ ರಾಜಕೀಯ ಸನ್ನಿವೇಶಗಳಿಗೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿರುತ್ತದೆ. ವ್ಯಕ್ತಿಗಳು ಅಧಿಕಾರವನ್ನು ಪಡೆಯುವುದನ್ನು ಅಥವಾ ನೀಡುವುದನ್ನು ಹಲವಾರು ಸಂದರ್ಭಗಳಲ್ಲಿ ಎಂಬುದನ್ನು ಅವಲೋಕಿಸಿದಾಗ ಯಾವ ಮಾರ್ಗದಲ್ಲಿ ಅಧಿಕಾರವನ್ನು ಪಡೆಯಲಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಮತದಾನದ ವರ್ತನೆಯ ಬಗ್ಗೆ ಹೇಳುವುದಾದರೆ ಮತದಾನವು ಜನತೆಯ ಯಾವುದಾದರೂ ವಿಷಯ ಅಥವಾ ಅಭ್ಯರ್ಥಿಗಳ ಬಗ್ಗೆ ತಮ್ಮ ನಿರ್ಣಯಗಳನ್ನು

---

[18] Pady K.S. Tripathy P.P. Voting Behavior of Tribals in India, Kaniska publication, New Delhi, 1994, Pp. 1-2.

ಸೂಚಿಸಲು ಅನುವು ಮಾಡಿಕೊಡುವ ಒಂದು ಪ್ರಕ್ರಿಯೆ ಜನತಂತ್ರಗಳ ಚುನಾವಣೆಗಳಲ್ಲಿ ಮತದಾನ ಪ್ರಮುಖ ಅಂಶವಾಗಿದೆ.

ರಾಜಕೀಯ ತತ್ವಜ್ಞಾನಿಗಳು ಮತದಾನದ ನಡವಳಿಗಳ ಬಗ್ಗೆ ಸಿದ್ಧಾಂತದಲ್ಲಿ ವಿವರಿಸುವಲ್ಲಿ ಉದಾಸೀನತೆಯನ್ನು ತೋರಿರುವರೆಂದು ಹೇಳುವುದು ತಪ್ಪಾಗಲಾರದು. ಆದರೂ ರಾಜ್ಯ ಮತ್ತು ಸರ್ಕಾರದ ಬಗ್ಗೆ ಅವರು ಆಳವಾಗಿ ಅಧ್ಯಯನವನ್ನು ಮಾಡಿದ್ದಾರೆ ಮತ್ತು ರಾಜ್ಯಶಾಸ್ತ್ರಕ್ಕೆ ಗಣನೀಯ ಕೊಡುಗೆ ನೀಡಿ ಹಲವಾರು ವಿಷಯಗಳನ್ನು ತಿಳಿಸಿದ್ದಾರೆ. ಚುನಾವಣೆ ಮತ್ತು ಮತದಾನದ ವರ್ತನೆಗಳು ಅವರು ಕೇಂದ್ರೀಕರಿಸಿದ ವಿಷಯಗಳಾಗಿರಲಿಲ್ಲ. ಅಂದರೆ ಪುರಾತನ ಮತ್ತು ಮಧ್ಯಯುಗದಲ್ಲಿನ ರಾಜಕೀಯ ಚಿಂತಕರು ಮಾನವನ ಸ್ವಭಾವ ಮತ್ತು ವರ್ತನೆಗಳ ಬಗ್ಗೆ ಅಧ್ಯಯನ ನಡೆಸಿಲ್ಲವೆಂದು ಅರ್ಥವಲ್ಲ. ಅವರು ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಅಥವಾ ಗಮನವನ್ನು ಹರಿಸಿರಲಿಲ್ಲ. ಆದರೆ ಗ್ರೀಕ್ ತತ್ವಜಾನಿಗಳು ಮತದಾನದ ವಿಧಾನಗಳ ಬಗ್ಗೆ, ಮತದಾನದ ಅರ್ಥದ ಬಗ್ಗೆ ಮತ್ತು ಮತದಾನಕ್ಕೆ ಪ್ರೇರಣೆ ಬಗ್ಗೆ ಸರಳವಾದ ರೀತಿಯಲ್ಲಿ ಚರ್ಚೆಗಳನ್ನು ನಡೆಸಿದ್ದರು. ಅವರು ಹೆಚ್ಚಿನ ಅಂಶಗಳನ್ನು ಅರ್ಥೈಸಿಕೊಳ್ಳುವಲ್ಲಿ ಮತ್ತು ಮತ ಚಲಾಯಿಸುವಲ್ಲಿನ ಉತ್ತೇಜನವನ್ನು ಸಮಕಾಲೀನ ಗ್ರೀಕ್ ತತ್ವಜ್ಞಾನಿಗಳಿಂದ ಪ್ರಸ್ತುತದವರೆಗೆ ಪ್ರತಿಯೊಬ್ಬರು ಗಮನಿಸುವುದು ಸರ್ವ ಸಂಗತಿ ಆದುದರಿಂದ ಪ್ಲೇಟೋ 360 ಜನ ಕೌನ್ಸಿಲರನ್ನು ಚುನಾಯಿಸುವ ಪದ್ಧತಿಯನ್ನು ಪುನಃ ಸ್ಥಾಪಿಸಿದನು. ಆದರೆ ಅವನು ಮತದಾನದ ವರ್ತನೆಗಳ ನೈಜ ಸಿದ್ಧಾಂತವನ್ನು ಪ್ರಚಲಿತಪಡಿಸಲಿಲ್ಲ.

ಇನ್ನು ಕೆಲವೊಂದು ರಾಜಕೀಯ ಸಿದ್ಧಾಂತದಲ್ಲಿ ಮತದಾನದ ವರ್ತನೆಯ ವಿಚಾರಗಳು ತಿಳಿದುಬಂದಿದ್ದೆ ಅರಿಸ್ಟಾಟಲ್‌ನ ಜನ ಉತ್ತೇಜಕತೆಯ ವಿಶ್ಲೇಷಣೆಗಳು ಕಾಲ್ವಿನರ್‌ನ ಪ್ರಸಿದ್ಧ ಮನುವಿನ ವಿರೋಧ, ಎಡ್ಮಂಡ್ ಬರ್ಕ್‌ನ ರಾಜಕೀಯ ಪಕ್ಷಗಳ ಸಿದ್ಧಾಂತ, ರೂಸೋ ಅವರ ಸಾಮಾನ್ಯವಿಲ್, ಲಾಕ್ ಅವರ ಬಾಹುಳ್ಯ ಆಳ್ವಿಕೆ, ಬೆಂಥಾಮ್‌ನ ಸ್ಪಂದನೆ ಮತ್ತು ಪ್ರತಿಕ್ರಿಯೆ ಈ ಎಲ್ಲ ಉದಾಹರಣೆಗಳು ಮತದಾನದ ವರ್ತನೆಗಳ ಪ್ರಾಕ್‌ಕಲ್ಪನೆಯ ಮೇಲೆ ರಚನೆಯಾದ ವಿಚಾರಗಳಾಗಿವೆ. ಈ ಒಂದು ಅವಧಿಯಲ್ಲಿ ಮತದಾರರ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಬಹಳ ವಿರಳ ಅಧ್ಯಯನಗಳು ನಡೆದಿವೆ.[19]

---

[19] Sukhbir Sing. History of Political Thought, Volume-2, Postogi Publication, New Delhi, 1997, Pp- 11.

ಚಾರ್ಲ್ಸ್ ಇಮೇರಿಯಂ "ದ ನ್ಯೂ ಆಸ್ಪೆಕ್ಟ್ ಪಾಲಿಟಿಕ್ಸ್" ಗ್ರಂಥದಲ್ಲಿ ಮಾನವನ ರಾಜಕೀಯ ವರ್ತನೆಯನ್ನು ನೇರ ರಾಜಕೀಯದ ಅನುಭವಾತ್ಮಕ ನೆಲೆಯಿಂದ ಅಧ್ಯಯನ ಮಾಡುವಂತೆ ರಾಜಕೀಯ ವಿಜ್ಞಾನಿಗಳು ಕರೆ ನೀಡಿದ್ದರು. ಮಾನವ ಕುಟುಂಬ ಗುಂಪು ಮತದಾರನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ ಅವನ ಇಂಗಿತ, ಆಯಾ ಪ್ರಚೋದನೆ, ಅವನ ಮೌಖಿಕ ಪದ್ಧತಿ ಇತ್ಯಾದಿ ಚಟುವಟಿಕೆಗಳು ಮತದಾನದ ನಡೆವಳಿಕೆಗಳು ನಿರ್ಧರಿಸುತ್ತವೆ ಎಂದು ಹೇಳಬಹುದು. ಅಂದರೆ ಮಾನವನು ಆರ್ಥಿಕ ಮತ್ತು ರಾಜಕೀಯ ವರ್ತನೆಗೆ ವಿವೇಚನಾಶೀಲನಾಗಿರುತ್ತಾನೆ. ಅವರು ಕೆಲವೊಂದು ಸಂದರ್ಭಗಳಲ್ಲಿ ಮತದಾರನು ಅಸಂಬದ್ಧ ಶಕ್ತಿಗಳ ಪ್ರಭಾವಕ್ಕೆ ಒಳಗಾಗುತ್ತಾನೆ. ಅವುಗಳೆಂದರೆ ಕುಟುಂಬದಲ್ಲಿ ಮನೆಯ ಯಜಮಾನನ ನಿರ್ಧಾರ ಪ್ರಮುಖವಾಗಿರುತ್ತದೆ. ಮತದಾನ ವಿಚಾರದಲ್ಲಿ ಮತ್ತು ತಮ್ಮ ಜಾತಿಯನ್ನು ಅತ್ಯಂತ ಹೆಚ್ಚಿನ ಮಹತ್ವವನ್ನು ಮತದಾರನು ಗಣನೆಗೆ ತೆಗೆದುಕೊಳ್ಳುತ್ತಾನೆ. ಒತ್ತಡ ಗುಂಪುಗಳ ಒಂದು ಪ್ರಭಾವವು ಅವನ ಮೇಲೆ ಪ್ರಭಾವ ಬೀರುತ್ತದೆ. ಹಣ, ಹೆಂಡ, ಬಟ್ಟೆ ಮೊದಲಾದ ವಸ್ತುಗಳು ಮತದಾರನ ಮನಸ್ಸಿನ ಮೇಲೆ ಆಸಕ್ತಿ ಮೂಡಿಸಿ ಮತ ಚಲಾಯಿಸಲು ಮುಂದಾಗುತ್ತಾನೆ. ಇವೆಲ್ಲವುಗಳಿಗೆ ಕಾರಣವೆಂದರೆ ಅವನ ಮನಸ್ಸಿನ ಮೇಲೆ ಉಂಟಾದ ಒಂದು ಬದಲಾವಣೆ ಮತ್ತು ಅವನ ವರ್ತನೆಗಳು ಕಾರಣವಾಗಿರುತ್ತದೆ.

ನಡೆವಳಿಕೆಗಳ ಕ್ರಾಂತಿಯು 1950 ಮತ್ತು 1960ರಲ್ಲಿ ರಾಜ್ಯಶಾಸ್ತ್ರದಲ್ಲಿ ಗಣನೀಯ ಕ್ರಾಂತಿಯನ್ನು ಹೆಚ್ಚಿಸಿರುತ್ತದೆ. ಇದು ಹೊಸ ವ್ಯಾಪ್ತಿಯನ್ನು ನೀಡಿದ್ದು, ಜೀವಕಳೆ ತುಂಬಿದೆ ಮತ್ತು ರಾಜಕೀಯ ವರ್ತನೆಗಳ ಅಧ್ಯಯನಕ್ಕೆ ಎಡೆ ಮಾಡಿಕೊಟ್ಟಿದೆ. ಮತದಾನದ ವರ್ತನೆಗಳು ರಾಜಕೀಯ ವರ್ತನೆಗಳ ತಳಹದಿಯ ಮೇಲೆ ನಿಂತಿವೆ. ರಾಜಕೀಯ ವ್ಯಕ್ತಿ ಮತ್ತು ಪಕ್ಷವು ಬಹುಮತದ ಮೂಲಕ ಅಸ್ತಿತ್ವಕ್ಕೆ ಬರಲು ಮತ್ತು ಸರ್ಕಾರವನ್ನು ನಡೆಸಲು ಮತದಾನವು ಅತ್ಯಂತ ಪ್ರಮುಖವಾದದ್ದಾಗಿದೆ. ಈ ಒಂದು ಪ್ರಜಾ ಪ್ರಭುತ್ವಯುಗದಲ್ಲಿ ಈ ವರ್ತನೆಗಳು ಕಾಲಕ್ರಮೇಣ ನಿರ್ಧರಿತವಾಗಿ ಮುಂದುವರಿದು ಅವು ತ್ವರಿತಗತಿಯಿಂದ ರೂಪುಗೊಂಡು ಬೇರೆ ಬೇರೆ ಪ್ರಮಾಣದಲ್ಲಿವೆ. ಮತದಾನದ ವರ್ತನೆಗಳು ತುಂಬಾ ಮೂಲಭೂತವಾದವುಗಳೆಂದು ಆಯಾ ರಾಜಕೀಯ ನಡೆವಳಿಗಳಿಂದ ಕೂಡಿದವುಗಳೆಂದು ಹೇಳಲಾಗುತ್ತದೆ.

ಪ್ರಸ್ತುತ ಮತದಾನದ ವರ್ತನೆಗಳಲ್ಲಿನ ಪದಗಳಾದ ರಾಜಕೀಯ ಭಾಗವಹಿಸುವಿಕೆ, ರಾಜಕೀಯ ನೈಪುಣ್ಯತೆ ಮತ್ತು ರಾಜಕೀಯ ಪರಿಜ್ಞಾನ ಇವು ಹೊಸ ಮತ್ತು ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದವುಗಳಾಗಿವೆ. ಸಾಂಪ್ರದಾಯಿಕ ಶಬ್ದಕೋಶಾರ್ಥಗಳಿಗಿಂತ ಭಿನ್ನವಾದವುಗಳಾಗಿವೆ. ಇವು ನವೀನ ರಾಜಕೀಯ ವಿಶ್ಲೇಷಣೆಯಲ್ಲಿ ತುಂಬಾ ಪ್ರಚಲಿತವಾಗಿವೆ. ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಒಂದು ಮುಖ್ಯವಾದದ್ದಾಗಿದೆ. ಯು.ಎಸ್.ಎ.ಯಲ್ಲಿ ರಾಜಕೀಯದಲ್ಲಿ ಭಾಗವಹಿಸುವಲ್ಲಿ ಬಹಳ ಹೆಚ್ಚು ಲೆಕ್ಕವಿಲ್ಲದ ಪುಸ್ತಕಗಳು, ಪ್ರಬಂಧಗಳು ಮತ್ತು ಮತದಾನದ ವರ್ತನೆಗಳು ಪ್ರಚಲಿತವಾಗಿವೆ. 1900ರಿಂದಲೂ ಮತದಾನದ ವರ್ತನೆಗಳ ಬಗೆಗಿನ ಆಲೋಚನೆ ಬರವಣಿಗೆ ಮತ್ತು ಸಂಶೋಧನೆ ಮಂದಗತಿಯಲ್ಲಿತ್ತು. ಆದರೆ 1960ರ ತರುವಾಯ ಮತದಾರರ ನಡೆವಳಿಗಳ ಬಗೆಗಿನ ವಿವಿಧ ವಿಷಯಗಳು ಮತ್ತು ಅವುಗಳ ವ್ಯಾಪ್ತಿಯ ಬಗ್ಗೆ ಕ್ಷಿಪ್ರಗತಿಯಲ್ಲಿ ಕೆಲಸ ಕಾರ್ಯಗಳು ನಡೆದವು. ಅದರ ಫಲಿತಾಂಶವಾಗಿ ಮತದಾರರ ವರ್ತನೆಗಳು ಸಾಹಿತ್ಯದ ಗಾತ್ರದಲ್ಲಿ ಹೆಚ್ಚಳ ಉಂಟಾಯಿತಲ್ಲದೆ, ಅದು ಮಧ್ಯಂತರ ರಾಜಕೀಯ ವಿನ್ಯಾಸವನ್ನು ಮಾಡಲು, ಅನುಕರಣೆಗಳನ್ನು ಅನುಸರಿಸಲು, ರಾಜಕೀಯವಾಗಿ ಭಾಗವಹಿಸಲು ಸಹಾಯವಾಯಿತು. ಈ ರೀತಿಯಲ್ಲಿ ಮತದಾನ ವರ್ತನೆಯ ಅಧ್ಯಯನದ ಹಿನ್ನೆಲೆ ಹೊಂದಿದೆ. ಮತದಾನದ ವರ್ತನೆ ಎಂದರೆ ಮತದಾರನು ಮತ ಚಲಾಯಿಸುವ ಸಂದರ್ಭದಲ್ಲಿ ತನ್ನ ಪ್ರಜ್ಞೆ, ತಿಳುವಳಿಕೆಯನ್ನು ಅರಿತು ಅಭ್ಯರ್ಥಿಗೆ ಮತ ಚಲಾಯಿಸುವುದಾಗಿದೆ. ಮತದಾರ ತನ್ನ ಪರವಾಗಿ ಪ್ರತಿನಿಧಿಗೆ ಮತದಾನ ಮಾಡುವ ಮೂಲಕ ಅಧಿಕಾರವನ್ನು ನೀಡುವುದಾಗಿದೆ.

### 3.5.1. ಮತದಾನ ವರ್ತನೆಯ ವಿಶ್ಲೇಷಣೆ

ಚುನಾವಣೆಗೆ ಸಂಬಂಧಿಸಿದ ಮತದಾರರ ವರ್ತನೆಯು ವೈಯಕ್ತಿಕ ಆದ್ಯತೆಗಳ ರಚನೆ ಮತ್ತು ವ್ಯಕ್ತಪಡಿಸುವಿಕೆ ಸಂಬಂಧಪಟ್ಟಿದೆ. ಮತದಾರರ ವರ್ತನೆಗೆ ಸಂಬಂಧಿಸಿದಂತಹ ವಿಶ್ಲೇಷಣೆ 1913ರಲ್ಲಿ ಫ್ರಾನ್ಸಿನಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಪ್ರಾರಂಭವಾಯಿತು. ಜನರು ಅನೇಕ ಪರಿಸ್ಥಿತಿ ಮತ್ತು ಅಸಂಖ್ಯಾತ ಉದ್ದೇಶಗಳನ್ನಿಟ್ಟುಕೊಂಡು ಮತ ಚಲಾಯಿಸುತ್ತಾರೆಂದು ತೀರ್ಮಾನಿಸಲಾಯಿತು. ವರ್ಗ, ಗುಂಪು ಮತ್ತು ಸಾಮಾಜಿಕ ವರ್ಗವು ಮತದಾನದ ವರ್ತನೆಯನ್ನು ನಿರ್ಧರಿಸುವ ಒಂದು ಮುಖ್ಯ ಅಂಶ ಇಂಗ್ಲೆಂಡಿನ ಸಾಮಾಜಿಕ ವರ್ಗವು ಸಾಮಾನ್ಯವಾಗಿ ಕನ್ಸರ್‌ವೇಟಿವ್ ಪಕ್ಷಕ್ಕೆ ಮತ ಚಲಾಯಿಸಿದರೆ, ಕಾರ್ಮಿಕವರ್ಗ ಸಾಮಾನ್ಯವಾಗಿ ಕಾರ್ಮಿಕ ಪಕ್ಷಕ್ಕೆ ಮತ ಚಲಾಯಿಸುತ್ತದೆ.

ಸಂಯೋಜನೆಯ ಪ್ರಜ್ಞೆಯು ಮತದಾನದ ವರ್ತನೆಯ ಸ್ಥಿರತೆಯನ್ನು ಪರಿಚಯಿಸಿದರೂ ಪಕ್ಷದ ಹಿಡಿತವಿಲ್ಲದಿರುವಿಕೆಯು ಪ್ರತಿಯೊಂದನ್ನು ಪರಿಗಣಿಸುತ್ತದೆ. ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳಂತೆ ಭಾರತದಲ್ಲಿ ಚುನಾವಣೆಗಳು ಹೊಸದಾದ ಆಯಾಮವನ್ನು ಹೊಂದಿವೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ಕೆಲವು ರಾಷ್ಟ್ರಗಳಲ್ಲಿ ಭಾರತವು ದೀರ್ಘವಾದ ಪ್ರಜಾಪ್ರಭುತ್ವದ ಅನುಭವದ ರಾಷ್ಟ್ರಗಳಲ್ಲಿ ಒಂದಾಗಿದೆ. ಭಾರತದಲ್ಲಿ Center for the study of Developing Societies(CSDS) ಎಂಬ ಸಂಸ್ಥೆಯು ಚುನಾವಣಾ ಮಾದರಿಯನ್ನು ಮತ್ತು ಮತದಾನವರ್ತನೆಯ ಸಮೀಕ್ಷೆಗಳನ್ನು ಸಂಶೋಧನೆ ಮಾಡಿರುವುದನ್ನು ಕಾಣಬಹುದು.

ಭಾರತ ದೇಶದಲ್ಲಿ 1950 ಜನವರಿ 26ರ ಸಂವಿಧಾನದ ರಚನೆಯ ನಂತರ ಮತದಾರರು 1975ರಲ್ಲಿ ಜಾರಿಗೆ ಬಂದ ತುರ್ತುಪರಿಸ್ಥಿತಿಯನ್ನು ಹೊರತುಪಡಿಸಿ ಮತ್ತೆ ಯಾವುದೇ ಅಡಚಣೆಯಿಲ್ಲದೆ ಮತ ಚಲಾಯಿಸುತ್ತಿದ್ದಾರೆ. ಅದೇ ವೇಳೆಯಲ್ಲಿ ಪ್ರಜಾಪ್ರಭುತ್ವವನ್ನು ಒಂದು ಸ್ವರೂಪವಾಗಿ ಅಳವಡಿಸಿಕೊಂಡು ಇತರ ರಾಜ್ಯಗಳು ಅವುಗಳ ಪ್ರಯೋಜನ ಪಡೆದವು. ಆದ್ದರಿಂದ ಪ್ರಜಾಪ್ರಭುತ್ವದ ಉಳಿವು ಮತ್ತು ಇದರ ಯಶಸ್ವಿ ಕಾರ್ಯಾಚರಣೆಗಳು ಮುಂದುವರಿದ ವ್ಯವಸ್ಥೆ ಮತ್ತು ಚುನಾವಣಾ ಪ್ರಕ್ರಿಯೆಯ ಸ್ವಾಯತ್ತತೆಯಿಂದ ಸಾಧ್ಯವಾದುದೆಂದು ಹೇಳಬಹುದು.

ಭಾರತದಲ್ಲಿ ಚುನಾವಣಾ ಪ್ರಕ್ರಿಯೆಯು ಮತದಾರನಿಗೆ ಗಣನೀಯವಾದ ಕಾರ್ಯಾತ್ಮಕ ಪ್ರಾಮುಖ್ಯತೆಯನ್ನು ನೀಡಿದೆ. ಪ್ರತಿಯೊಬ್ಬ ಮತದಾರನು ತನಗೆ ಇಷ್ಟವಾದ ರೀತಿಯಲ್ಲಿ ಮತ ಚಲಾಯಿಸಲು ತನ್ನ ವಿವೇಚನೆಗೆ ಉತ್ತಮ ಎಂದು ತಿಳಿದುಬಂದ ಅಭ್ಯರ್ಥಿಗಳನ್ನು ಆರಿಸಲು ಸ್ವತಂತ್ರನಾಗಿರುತ್ತಾನೆ. ಆರ್ಥಿಕ, ಭಾವನಾತ್ಮಕ, ರಾಜಕೀಯ, ಸಾಮಾಜಿಕ ಮತ್ತು ಇತರೆ ಅಂಶಗಳ ಪ್ರೇರಣೆಯಿಂದಲೂ ಮತ ಚಲಾಯಿಸುವ ಸಾಧ್ಯತೆಗಳಿರುತ್ತವೆ. ಮತದಾರನು ತನ್ನ ಸ್ವಂತ ರಾಜಕೀಯ ಮತ್ತು ಸಾಮಾಜಿಕ ಆದ್ಯತೆಗಳನ್ನು ತಾನು ಮತ ಚಲಾಯಿಸುವಾಗ ಹೊಂದಿರುತ್ತಾನೆ.

ಕೆಲವು ವೇಳೆ ಅವನ ಆಯ್ಕೆಯು ಬೇರೆಯವರಿಂದಲೂ ನಿರ್ಧಾರವಾಗುತ್ತದೆ. ಹಿರಿಯರು, ಗೌರವಾನ್ವಿತ ವ್ಯಕ್ತಿಗಳು, ಪ್ರಭಾವಿ ನಾಯಕರು ಈ ನಾಯಕರ ನೀತಿನಿಯಮಗಳಿಗೆ ವಚನ ಬದ್ಧವಾಗಿರುವುದನ್ನು ಮತ್ತು ಪಕ್ಷಗಳ ಪ್ರಭಾವಕ್ಕೆ

ಒಳಗಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಮತದಾರನು ಯಾವುದೇ ರೀತಿಯ ಆತುರದ ನಿರ್ಧಾರವನ್ನು ಅಭ್ಯರ್ಥಿಗಳ ಆಯ್ಕೆಯಲ್ಲಿ ತೆಗೆದುಕೊಳ್ಳುವುದಿಲ್ಲ. ಮತದಾರನು ಪಕ್ಷದ ಧ್ಯೇಯಗಳು ಮತ್ತು ಪ್ರಚಾರಗಳಿಂದ ಪ್ರಭಾವಿತನಾಗಿರುತ್ತಾನೆ. ಮತದಾನದ ಆಯ್ಕೆ ಮತ್ತು ನಿರ್ಧಾರಗಳು ಪಕ್ಷದ ಕಾರ್ಯಸೂಚಿಯ ವಿಶ್ಲೇಷಣೆಯಿಂದ ಅಭ್ಯರ್ಥಿಗಳ ವ್ಯಕ್ತಿತ್ವ ಚುನಾವಣೆಯ ಸಮಯದಲ್ಲಿ ಮತದಾರರನ್ನು ಪ್ರಭಾವಿಸುವ ಅಂತಿಮ ಪರಿಸ್ಥಿತಿ ಮತ್ತು ಸಾಮಾನ್ಯ ಸಾರ್ವಜನಿಕ ಅಭಿಪ್ರಾಯಗಳಿಂದಲೂ ಸಹ ಪ್ರಭಾವಿತನಾಗುತ್ತಾನೆ.

ಚುನಾವಣಾ ಸಂದರ್ಭದಲ್ಲಿ ಮತದಾರನ ಮೇಲೆ ಧರ್ಮ, ಜಾತಿ, ಸಮೂಹ, ಭಾಷೆ, ಆಸ್ತಿ, ಹಣ ಇತರ ಆಮಿಷಗಳು ಹಾಗೂ ಪಕ್ಷದ ನೀತಿನಿಯಮಗಳಿಂದ ಪ್ರಭಾವಿತನಾಗುತ್ತಾನೆ. ರಾಜಕೀಯ ಪಕ್ಷಗಳು ಮತ್ತು ಗುಂಪುಗಳು ಅಧಿಕಾರಕ್ಕೆ ಬರಲು ಈ ಅಂಶಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ರಾಜಕಾರಣಿಗಳು ಅನೇಕ ವೇಳೆ ಸ್ವಪ್ರಯೋಜನಕ್ಕಾಗಿ ಜನರ ಮನೋಭಾವನೆಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ.

### 3.5.2. ಕರ್ನಾಟಕದಲ್ಲಿ ಚುನಾವಣಾ ವಿಶ್ಲೇಷಣೆ

ಕರ್ನಾಟಕದಲ್ಲಿ ಚುನಾವಣೆ ವಿಶ್ಲೇಷಣೆ ಮತದಾರರ ವರ್ತನೆಗೆ ಸಂಬಂಧಿಸಿದಂತೆ 1980ರ ನಂತರ ಇಂತಹ ಅಧ್ಯಯನಗಳು ಕಂಡುಬರುತ್ತವೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯದ ರಾಜಕೀಯ ಪಂಡಿತರು ಚುನಾವಣೆ ವರ್ತನೆಯ ಬಗ್ಗೆ ಹೆಚ್ಚು ಹೆಚ್ಚು ಆಸಕ್ತಿ ವಹಿಸುವುದು ಅವರು ಬರೆದಿರುವ ಲೇಖನಗಳು ಪುಸ್ತಕಗಳಿಂದ ತಿಳಿದುಬರುತ್ತದೆ. ಹಲವಾರು ರಾಜಕೀಯ ಚಿಂತಕರು ಈ ಒಂದು ಅಧ್ಯಯನವನ್ನು ಕೈಗೊಂಡು ತಮ್ಮದೇ ಆದ ರಾಜಕೀಯ ವರ್ತನೆಯ ಬಗ್ಗೆ ತಿಳಿಸಿರುವುದು ಕಂಡುಬರುತ್ತದೆ.

ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕೆ.ಹೆಚ್. ಚಲುವರಾಜು, ಆರ್.ಎಲ್.ಎಂ. ಪಾಟೀಲ್, ಸಂದೀಪ್‌ಶಾಸ್ತ್ರಿ ಇವರು "1983ರ ಕರ್ನಾಟಕದ ವಿಧಾನಸಭಾ ಚುನಾವಣೆಗಳು: ಚುನಾವಣಾ ಪೂರ್ವ ಒಂದು ಸಮೀಕ್ಷೆ" ಈ ವಿಷಯದ ಮೇಲೆ ಕರ್ನಾಟಕ ರಾಜ್ಯದಲ್ಲಿ ನಡೆದ 7ನೇ ವಿಧಾನಸಭಾ ಚುನಾವಣೆಯ ತರುವಾಯ ಸಮೀಕ್ಷೆ ಎಂಬ ವಿಷಯದ ಮೇಲೆ ಅಧ್ಯಯನ ಮಾಡುತ್ತಾರೆ.

1994ರಲ್ಲಿ ಡಾ. ಸಂದೀಪ್‌ಶಾಸ್ತ್ರಿ ಅವರು "ಟುವರ್ಡ್ಸ್ ಎಕ್ಸ್‌ಪ್ಲೈನಿಂಗ್ ದಿ ಓಟರ್ ಮ್ಯಾನ್‌ಡೇಟ್, ಅನಾಲಿಸಿಸ್ ಆಫ್ ದಿ ಕರ್ನಾಟಕ ಅಸೆಂಬ್ಲಿ ಎಲೆಕ್ಷನ್ಸ್ 1994" ಈ

ವಿಷಯದ ಮೇಲೆ ವಿಶ್ಲೇಷಣಾ ಅಧ್ಯಯನ ಕೈಗೊಂಡಿದ್ದಾರೆ. ಇದರಲ್ಲಿ 10ನೇ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಿದ್ದಾರೆ.[20] ಕರ್ನಾಟಕ ರಾಜ್ಯದ ವಿಧಾನಸಭೆ ಚುನಾವಣೆಯ ಫಲಿತಾಂಶ, ಪಕ್ಷಗಳ ಮತ್ತು ಪಕ್ಷೇತರರ ಕಾರ್ಯದಕ್ಷತೆ, ಸಾಮಾಜಿಕ ಗುಂಪುಗಳು ಮತ್ತು ಮಹಿಳೆಯರ ಪಾತ್ರ ಹಾಗೂ ದಕ್ಷತೆ ಸರ್ಕಾರದ ರಚನೆ ಈ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಿದ್ದಾರೆ. ಕರ್ನಾಟಕ ವಿಧಾನಸಭೆಗೆ ಸಂಬಂಧಿಸಿದಂತೆ 1983ರ 9ನೇ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಡಾ. ಸಂದೀಪ್‌ಶಾಸ್ತ್ರಿ ಮತ್ತು ಎಂ.ಜೆ. ವಿನೋದ್ ಅವರು "ಡೈನಾಮಿಕ್ಸ್ ಆಫ್ ಎಲೆಕ್ಟೋರಲ್ ಪಾಲಿಟಿಕ್ಸ್" 1989ರ ಸಾರ್ವತ್ರಿಕ ವಿಧಾನಸಭಾ ಚುನಾವಣೆ, ಒಂದು ಅಧ್ಯಯನ ವಿಷಯದ ಮೇಲೆ ವಿಶ್ಲೇಷಣೆ ಅಧ್ಯಯನ ಕೈಗೊಂಡಿದ್ದಾರೆ. ಕರ್ನಾಟಕದಲ್ಲಿ ಚುನಾವಣೆ ಹಾಗೂ ಮತದಾರರ ಮತದಾನದ ವರ್ತನೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ 1970ರ ನಂತರ ಅಧ್ಯಯನಗಳು ನಡೆದಿರುವುದು ಕಂಡುಬರುತ್ತವೆ.

1994ರ ಕರ್ನಾಟಕ ವಿಧಾನಸಭಾ ಚುನಾವಣೆಯ ವಿಶ್ಲೇಷಣೆಗೆ ಸಂಬಂಧಿಸಿದಂತೆ ಮತ್ತೊಂದು ಪ್ರಮುಖ ಅಧ್ಯಯನ ಎಂದರೆ ಡಾ.ಜೆ.ಎಸ್. ಸದಾನಂದ ಅವರು ಬರೆದಿರುವ 'ಕರ್ನಾಟಕ ಅಸೆಂಬ್ಲಿ ಎಲೆಕ್ಷನ್ 1994 ಫರ್‌ಫಾರ್ಮನ್ಸ್ ಆಫ್ ದಿ ಡಿಫರೆಂಟ್ ಸೋಶಿಯಲ್ ಗ್ರೂಪ್ಸ್' ಎಂಬ ಅಧ್ಯಯನದಲ್ಲಿ ಕಾಂಗ್ರೆಸ್ ಪಕ್ಷದ ಸೋಲಿಗೆ ಕಾರಣಗಳು ಮತ್ತು ಸಾಮಾಜಿಕ ಪ್ರಮುಖ 4 ವರ್ಗಗಳಾದ ಪ್ರಬಲ ಜನಾಂಗ ಲಿಂಗಾಯತ, ಒಕ್ಕಲಿಗ, ಪರಿಶಿಷ್ಟ ಜಾತಿ ಪಂಗಡಗಳು, ಮುಸ್ಲಿಂ ಮತ್ತು ಹಿಂದುಳಿದ ವರ್ಗಗಳು ಈ ವರ್ಗಗಳ ಪ್ರಾಮುಖ್ಯತೆ ಹಾಗೂ ಚುನಾವಣೆಗಳಲ್ಲಿ ಈ ವರ್ಗಗಳ ಪಾತ್ರ, ಕಾರ್ಯಾಚರಣೆ ಸಂಬಂಧಿಸಿದಂತೆ ವಿಶ್ಲೇಷಣೆ ನಡೆಸಿದ್ದಾರೆ.[21]

ಮತದಾನದ ವರ್ತನೆಯ ಬಗೆಗಿನ ಅಧ್ಯಯನಗಳಿಗಿಂತ ಚುನಾವಣೆಯ ಬಗೆಗಿನ ಹೆಚ್ಚಿನ ಆಸಕ್ತಿ ನೀಡಿರುವುದು ಕಾಣಬಹುದು. ಚುನಾವಣೆಯಲ್ಲಿ ಪಾಲ್ಗೊಳ್ಳಬಹುದಾದ ಪಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮುಖ್ಯವಾದದು. ಏಕೆಂದರೆ ಭಾರತದಂತಹ ಸಮಾಜದಲ್ಲಿ ವಿವಿಧ ಜಾತಿ, ಧರ್ಮ ಹಾಗೂ ಭಾಷೆಗಳಿಂದ ಕೂಡಿದ ಜನರು ಒಟ್ಟಾಗಿ ನೆಲೆಸಿರುತ್ತಾರೆ. ಸರ್ಕಾರಗಳು ಒಂದೊಂದು ಜಾತಿಯ ಜನರನ್ನು ಕ್ರೋಡೀಕರಿಸಿ ಆಯಾ ಅನುಕೂಲತೆಗೆ ತಕ್ಕಂತೆ ಒಂದೇ ಮೀಸಲಾತಿ ಅಡಿಯಲ್ಲಿ ಗುರುತಿಸಲಾಗಿದೆ. ಆದರೆ

---

[20] Sandeep Shastri, Towards explain the Voter's Mandate: An Analysis of the Karnataka Assembly Election, 1994, Pp-12.

[21] Sadananda J.S. Karnataka Assembly Election 1994 Performence of the Different Social Grops. Kvv Publication, 1995, Pp-14.

ವಾಸ್ತವವಾಗಿ ಭಾರತದಾದ್ಯಂತ ಸಮಾಜದಲ್ಲಿ ಒಂದೊಂದು ಜಾತಿಯಲ್ಲಿಯೇ ಒಳಪಂಗಡಗಳು ಅತ್ಯಂತ ಮುಖ್ಯ ಪಾತ್ರ ವಹಿಸುತ್ತವೆ.

ಚುನಾವಣಾ ಮತದಾನ ನಡೆವಳಿಕೆಯಲ್ಲಿ ಜನರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಅಂಶಗಳು ನಿರ್ಧಾರಕ ಅಂಶಗಳಾಗುತ್ತವೆ. ಮನಃಶಾಸ್ತ್ರಜ್ಞರು ಬದಲಾಯಿಸಬಹುದಾದ ನಿರ್ಧಾರಕ ಅಂಶಗಳನ್ನು 3 ರೀತಿಯಲ್ಲಿ ನೋಡುತ್ತಾರೆ.[22] ಅವುಗಳೆಂದರೆ,

1. **ಪಕ್ಷದಿಂದ ಗುರುತಿಸುವಿಕೆ(Party Identification**)
   ಅಭ್ಯರ್ಥಿಗಳನ್ನು ರಾಜಕೀಯ ಪಕ್ಷಗಳಿಂದ ಗುರುತಿಸುವುದರಿಂದ ಮತದಾರನು ಮಾನಸಿಕವಾಗಿ ರಾಜಕೀಯ ಪಕ್ಷದೊಳಗೆ ಸೇರಿಕೊಳ್ಳುತ್ತಾನೆ.
2. **ಅಭ್ಯರ್ಥಿ ಆಧಾರಿತವಾಗಿ(Candidate Orientation)** ಅಭ್ಯರ್ಥಿಗಳ ಸ್ವಂತ ವರ್ಚಸ್ಸಿನಿಂದ ಮತದಾರರು ಪ್ರಭಾವಿತರಾಗಿ ಮತ ನೀಡುವುದು.
3. **ವಿಷಯ ಆಧಾರಿತವಾಗಿ(Issue–Orientation)** ಪ್ರಚಲಿತ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮತದಾರನ ವರ್ತನೆಯನ್ನು ಗುರುತಿಸಬಹುದು.

ಮೇಲಿನ ಮತದಾನ ನಡೆವಳಿಕೆ ಅಂಶಗಳ ಆಧಾರದ ಮೇಲೆ ಭಾರತದ ಚುನಾವಣೆಗಳನ್ನು ಅಭ್ಯಸಿಸಿ ಮತದಾನದ ನಡೆವಳಿಕೆ ತಿಳಿಯಲು ಬಳಸಿದ ನಿರ್ಧಾರಕ ಅಂಶಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ. ಅವುಗಳೆಂದರೆ,

**ಅ. ಅಭ್ಯರ್ಥಿಯ ಆಧಾರಿತ ಮನೋಭಾವ**

ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಮತದಾರನ ವರ್ತನೆಯಲ್ಲಿ ಅಭ್ಯರ್ಥಿ ಆಧಾರಿತ ಮನೋಭಾವ ಕಡಿಮೆಯಿರುತ್ತದೆ. ಸ್ಥಳೀಯ ಚುನಾವಣೆಗಳಲ್ಲಿ ಮತದಾರನ ಮತ್ತು ಅಭ್ಯರ್ಥಿಗಳ ನಡುವೆ ಹತ್ತಿರದ ಸಂಬಂಧ ಮತ್ತು ಸಂಪರ್ಕ ಇರುವುದರಿಂದ ಯಾರು ತಮ್ಮ ಪ್ರತಿನಿಧಿಯಾಗಲು ಯೋಗ್ಯರು ಎಂಬುದು ನಿರ್ಧಾರವಾಗುತ್ತದೆ. ಅಭ್ಯರ್ಥಿ ಆಧಾರಿತ ಮತದಾನ ನಡೆವಳಿಯು ವಿಧಾನಸಭೆ ಚುನಾವಣೆಗಳಿಂದ ಸಂಸತ್ತಿನ ಚುನಾವಣೆಗಳಿಗೆ ಬಂದಿರುವುದನ್ನು 1971ರ ಚುನಾವಣೆಯಿಂದ ಗುರುತಿಸಬಹುದು. ಅಭ್ಯರ್ಥಿ ಆಧಾರಿತ ಮನೋಭಾವವು

---

[22] Goyal.O.P., Indian Political System, Wasami for Macamillian Indian Ltd., New Delhi, 1985, Pp-180.

ಪರೋಕ್ಷವಾಗಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಯಾರ ಪ್ರಬಲ ನಾಯಕತ್ವದೊಂದಿಗೆ ಪಕ್ಷ ಚುನಾವಣೆ ಎದುರಿಸುತ್ತದೆ ಎಂದು ಮತದಾರ ಗಮನಿಸಿ ಅನಂತರ ರಾಷ್ಟ್ರ ಅಥವಾ ರಾಜ್ಯ ನಾಯಕತ್ವವನ್ನು ಬಲಪಡಿಸಲು ಕ್ಷೇತ್ರದಲ್ಲಿ ಮತ ನೀಡುತ್ತಾನೆ. ಈ ವಾದಕ್ಕೆ ಸಮಂಜಸವಾಗಿರುವ 1971ರ ಲೋಕಸಭೆ ಚುನಾವಣೆಯಲ್ಲಿ ಯಾವ ವ್ಯಕ್ತಿ ಪ್ರಧಾನಮಂತ್ರಿ ಆಗುತ್ತಾನೆ ಎಂಬುದನ್ನು ಪ್ರಮುಖವಾಗಿ ಆಧರಿಸಿ ಕ್ಷೇತ್ರಗಳಲ್ಲಿ ಮತದಾನ ನಡೆದಿರುತ್ತದೆ. ಅದೇ 1977ರ ಲೋಕಸಭಾ ಚುನಾವಣೆಯಲ್ಲಿ ಮತದಾರರು ಆಡಳಿತಾರೂಢ ಪಕ್ಷದ ಸದಸ್ಯರ ಸಾಧನೆಗಳನ್ನು ನೋಡಿ ಆ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಲಿಲ್ಲ.[23] ಹಾಗಾಗಿ ಸರ್ಕಾರದ ವಿರುದ್ಧ ನಕಾರಾತ್ಮಕ ಮತದಾನ 1977ರ ಲೋಕಸಭೆ ಚುನಾವಣೆಯಿಂದ ಪ್ರಾರಂಭವಾಯಿತು. ಈ ಚುನಾವಣೆಯಲ್ಲಿ ಅಭ್ಯರ್ಥಿಗಳು ಜನರ ಆಶೋತ್ತರಗಳಿಗೆ ಪೂರಕವಾದ ಸಾಧನೆಯನ್ನು ಮಾಡಿದ್ದಾರೆಯೇ ಎಂಬ ಅಂಶ ಪ್ರಮುಖವಾಗಿ ಕೆಲಸ ಮಾಡಿದ್ದರಿಂದ ಆಡಳಿತ ಪಕ್ಷದ ಅಭ್ಯರ್ಥಿಗಳು ಪರಾಭವಗೊಂಡರು.

ಅಭ್ಯರ್ಥಿ ಆಧಾರಿತ ಮತದಾರನ ವರ್ತನೆಯಲ್ಲಿ ಮತ್ತೊಂದು ಪ್ರಮುಖ ವಿಷಯವೆಂದರೆ ಚಳುವಳಿಯ ಮೂಲಕವೂ ಸಹ ಅಭ್ಯರ್ಥಿಗಳು ಗುರುತಿಸಲ್ಪಡುತ್ತಾರೆ. ಅದು ಮತದಾರನ ವರ್ತನೆಯ ಮೇಲೆ ಪರಿಣಾಮ ಬೀರುವುದನ್ನು ಕಾಣಬಹುದು. 1952 ಮತ್ತು 1957ರ ಪ್ರಥಮ ಮತ್ತು ದ್ವಿತೀಯ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ವತಂತ್ರ ಹೋರಾಟದಲ್ಲಿ ಗುರುತಿಸಿಕೊಂಡು ಸಮುದಾಯದ ಒಳಿತಿಗಾಗಿ ನಿಸ್ವಾರ್ಥ ಸೇವೆ ಮಾಡಿದ್ದರಿಂದ ಅಭ್ಯರ್ಥಿಗಳು ಗೆಲುವು ಪಡೆದರು.[24] ಅದೇ ರೀತಿ 1977ರ ಚುನಾವಣೆಯಲ್ಲಿ ಜನತಾಪಕ್ಷದ ಅಭ್ಯರ್ಥಿಗಳು ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟದಿಂದ ತಮ್ಮೊಳಗಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬುದು ಬಿಂಬಿತವಾಗಿ ಅಭ್ಯರ್ಥಿಗಳು ಗೆಲುವು ಪಡೆದರು.

**ಆ. ಪಕ್ಷ ಆಧಾರಿತ ನಡೆವಳಿಕೆ**

Elder Sreld and Ahmand ಅವರ ಚುನಾವಣಾ ಅಧ್ಯಯನದ ಪ್ರಕಾರ ಭಾರತದಲ್ಲಿ ಪಕ್ಷ ಆಧಾರಿತ ಮತದಾನ ಹೆಚ್ಚಾಗಿರುತ್ತದೆ. ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದಾಗ 1967 ಮತ್ತು 1971 ಲೋಕಸಭೆ ಚುನಾವಣೆಯಲ್ಲಿ ಕ್ರಮವಾಗಿ ಶೇ.70

---

[23] Ibid, 181.

[24] Chube S.K. and Susheela kaushik(ed), Indian Democracy at the Turn of Century, 1998, P-101.

ಹಾಗೂ ಶೇ.47 ಮತದಾನ ನಡೆದಿದೆ ಎಂಬ ಅಂಶವನ್ನು ಆಧಾರವಾಗಿಟ್ಟು ಅವರು ಚರ್ಚಿಸಿದ್ದಾರೆ.

ಬ್ರಿಟನ್ ಮತ್ತು ಅಮೆರಿಕದಲ್ಲಿ ಪಕ್ಷ ಆಧರಿಸಿ ಮತದಾನ ನಡೆಯುವಷ್ಟು ಭಾರತದಲ್ಲಿ ನಡೆಯುವುದಿಲ್ಲ. ಆದರೂ ಸಹ ಚಿಂತಕರ ಅಧ್ಯಯನ ಹಲವಾರು ನ್ಯೂನತೆಗಳಿಂದ ಕೂಡಿದೆ. ಜಾತಿ ಆಧಾರಿತ ರಾಜಕೀಯ ಪಕ್ಷಗಳಿಂದ ಮತದಾನದ ವರ್ತನೆಯು ಭಾರತದಲ್ಲಿ ನಿರ್ಧಾರವಾಗುತ್ತದೆ ಎಂಬುದನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ.

**ಇ. ಸುದ್ದಿ ಆಧಾರಿತ ಮನೋಭಾವ**

ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ ಸುದ್ದಿಗಳು 3 ರೀತಿ ಚುನಾವಣೆಗಳಲ್ಲಿ ಮತದಾನದ ಮೇಲೆ ಪ್ರಭಾವ ಬೀರುತ್ತವೆ. ಅದರಲ್ಲಿ ಬಹು ಪ್ರಮುಖವಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯದಂತಹ ವಿಷಯಗಳನ್ನು ಕೇಂದ್ರೀಕರಿಸಿ ಮತದಾನದ ನಡವಳಿಕೆ ನಿರ್ಧಾರಿತವಾಗುತ್ತದೆ. ಸ್ಥಳೀಯ ಸುದ್ದಿಗಳು ತತ್‌ಕ್ಷಣದಲ್ಲಿ ಮತದಾರನಿಗೆ ಸುಲಭವಾಗಿ ಅರ್ಥವಾಗುವುದರಿಂದ ಸ್ಥಳೀಯ ಚುನಾವಣೆಯ ಮೇಲೆ ಮತದಾನ ಹೆಚ್ಚು ನಿರ್ಧಾರವಾಗುತ್ತದೆ. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಸುದ್ದಿಗಳಲ್ಲಿ ಪ್ರಮುಖ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯ ವಿಷಯಗಳನ್ನು ಆಧರಿಸಿರುವ ಸುದ್ದಿಗಳಿಂದ ಮತದಾರನ ವರ್ತನೆ ನಿರ್ಧಾರವಾಗುತ್ತದೆ. ಉದಾಹರಣೆಗೆ 1967ರ ಚುನಾವಣೆಯಲ್ಲಿ ಬೆಲೆ ಏರಿಕೆ ಪ್ರಮುಖ ವಿಷಯವಾಗಿತ್ತು. 1971ರ ಚುನಾವಣೆಯಲ್ಲಿ ಬಡತನ ನಿರ್ಮೂಲನೆ ಪ್ರಮುಖ ವಿಷಯವಾಗಿತ್ತು. 1977ರ ಚುನಾವಣೆಯಲ್ಲಿ ತುರ್ತುಪರಿಸ್ಥಿತಿ ವಿಚಾರ ಪ್ರಧಾನವಾಗಿತ್ತು. 1980ರ ಚುನಾವಣೆಯಲ್ಲಿ ಸುಭದ್ರ ಸರ್ಕಾರದ ವಿಷಯ ಮೂಲವಾಗಿತ್ತು. 1984ರ ಚುನಾವಣೆಯಲ್ಲಿ ಐಕ್ಯತೆ ಮತ್ತು ಸುಭದ್ರ ಸರ್ಕಾರ ಪ್ರಮುಖ ವಿಷಯ ವಸ್ತುವಾಗಿತ್ತು ಎಂಬ ಅಂಶಗಳನ್ನು ಮೇಲಿನ ಹೇಳಿಕೆಗೆ ಸಮರ್ಥನೆಯಾಗಿ ನೀಡಬಹುದು.

**ಈ. ಜಾತಿ**

ಮತದಾನ ನಡೆವಳಿಕೆ ನಿರ್ಧಾರಕದಲ್ಲಿ ಜಾತಿ ಪ್ರಮುಖ ಅಂಶ. ಚುನಾವಣಾ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳ ಆಯ್ಕೆಯಿಂದ ಪ್ರಾರಂಭವಾಗಿ ಚುನಾವಣೆಯ ಎಲ್ಲಾ ಲೆಕ್ಕಾಚಾರಗಳು ಜಾತಿಯನ್ನು ಆವರಿಸಿಕೊಂಡಿರುತ್ತದೆ. ಭಾರತದ ಸಂದರ್ಭದಲ್ಲಿ 1967ರ

ನಂತರದ ಚುನಾವಣೆಗಳು ಜಾತಿಯನ್ನು ನೋಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಯಿತು. ಪ್ರತಿ ಕ್ಷೇತ್ರಗಳಲ್ಲಿಯೂ ಸಹ ಯಾವುದೇ ಪ್ರಬಲ ಜಾತಿ ಯಾವ ಜಾತಿಯ ಜನಸಂಖ್ಯೆ ಎಷ್ಟಿದೆ, ಯಾವುದು ಕನಿಷ್ಠ ಮತ್ತು ಬಲಿಷ್ಠ ಜಾತಿ ಎಂಬ ಪ್ರಮುಖ ಅಂಶಗಳನ್ನು ಆಧಾರವಾಗಿಟ್ಟುಕೊಂಡು ರಾಜಕೀಯ ಪಕ್ಷಗಳು ಜಾತಿಯನ್ನು ತುಂಬ ಕುಶಲತೆಯಿಂದ ಬಳಸಿಕೊಳ್ಳುತ್ತವೆ. ಜಾತಿ ಎಂಬುದು ಮತದಾರನ ಅಂತರಾತ್ಮದಲ್ಲಿ ಹೆಚ್ಚು ಕೆಲಸ ಮಾಡುವ ಅಸ್ತ್ರವಾಗಿದೆ. ಇದು ಮತದಾರನ ಮೇಲೆ ಬೇರೆ ಎಲ್ಲಾ ನಿರ್ಧಾರಿತ ಅಂಶಗಳಿಗಿಂತ ಹೆಚ್ಚು ಕೆಲಸ ಮಾಡುತ್ತದೆ. ಪಕ್ಷದ ಮುಖಂಡರು ಜಾತಿಗೆ ಹೆಚ್ಚು ಒತ್ತುಕೊಡುವುದರಿಂದ ಕನಿಷ್ಠ ಜಾತಿಯ ಅಭ್ಯರ್ಥಿಗಳನ್ನು ಮತದಾರರು ತಿರಸ್ಕರಿಸುತ್ತಾರೆ. ಆದ್ದರಿಂದ ಪರಿಶಿಷ್ಟ ಪಂಗಡ ಆಭ್ಯರ್ಥಿಗಳು ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುವಲ್ಲಿ ವಿಫಲವಾಗಿದ್ದಾರೆ.

**ಊ. ಹಣ**

ಮತದಾನ ವರ್ತನೆ ನಿರ್ಧರಿಸುವ ಅಂಶಗಳಲ್ಲಿ ಹಣ ಬಹುಮುಖ್ಯ ಅಂಶ. ಮತದಾರನಿಗೆ ಹಣದ ಆಮಿಷ ಒಡ್ಡಿ ಆತನ ನಡೆವಳಿಕೆ ಬದಲಾಯಿಸಬಹುದಾಗಿದೆ. ಆದರೆ ಚುನಾವಣೆಗಳಲ್ಲಿ ಹಣವೇ ಎಲ್ಲವೂ ಆಗಿರಲು ಸಾಧ್ಯವಿಲ್ಲ. ಇತ್ತೀಚಿನ ಚುನಾವಣೆಗಳಲ್ಲಿ ಹಣ ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತದೆ. ಇದಕ್ಕೆ ಉದಾಹರಣೆಯಾಗಿ ಕರ್ನಾಟಕದಲ್ಲಿ 2008ರ ಮೇನಲ್ಲಿ ನಡೆದಿರುವ ವಿಧಾನಸಭಾ ಚುನಾವಣೆಯಲ್ಲಿ ಗಣಿ–ಧಣಿಗಳು ಹಣಬಲದ ಮೇಲೆ ಕರ್ನಾಟಕ ಚುನಾವಣೆ ರಾಜಕೀಯವನ್ನು ಬದಲಾಯಿಸಿದರು.

**3.5.3. ಮೀಸಲುಕ್ಷೇತ್ರಗಳ ಮತದಾನ ನಡೆವಳಿಕೆ**

ಮತದಾನ ನಿರ್ಧಾರಕ ಅಂಶಗಳ ಆಧಾರದ ಮೇಲೆ ಮೀಸಲುಕ್ಷೇತ್ರಗಳ ಮತದಾನ ವರ್ತನೆ ಇದಕ್ಕಿಂತ ಭಿನ್ನವಾಗಿರುವುದಿಲ್ಲ. ಪ್ರಮುಖ ಮತದಾನ ನಿರ್ಧಾರಕವಾದ ಜಾತಿ ಮೀಸಲುಕ್ಷೇತ್ರಗಳಲ್ಲಿ ನೇರವಾಗಿ ಭಾಗಿಯಾಗದೆ ಪರೋಕ್ಷವಾಗಿ ಕೆಲಸ ಮಾಡುತ್ತದೆ. ದಲಿತೇತರ ಮತದಾರರು ರಾಜ್ಯ ಅಥವಾ ದೇಶದಲ್ಲಿ ಚುನಾವಣೆ ನಾಯಕತ್ವ ಯಾರು ವಹಿಸಿಕೊಂಡಿರುತ್ತಾರೆ ಎಂದು ಗಮನಿಸಿ ಆ ಜಾತಿಯನ್ನು ಪ್ರತಿನಿಧಿಸುವ ಪಕ್ಷಗಳನ್ನು ಚುನಾಯಿಸುತ್ತಾರೆ. ದಲಿತ ಮತದಾರರು ಸ್ಥಳೀಯ ಸುದ್ದಿ, ಅಭ್ಯರ್ಥಿ ಪಕ್ಷ ಹಾಗೂ ಉಪಜಾತಿಯಂತಹ ನಿರ್ಧಾರಕ ಅಂಶಗಳ ಆಧಾರದ ಮೇಲೆ ದಲಿತರ ಮತಗಳು ನಿರ್ಧಾರವಾಗುತ್ತವೆ.

## 3.6. ಚಳ್ಳಕೆರೆ ಕ್ಷೇತ್ರದ ಮತದಾರರ ನಡವಳಿಕೆ

ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರ ಮತದಾನ ನಡೆವಳಿಕೆ ಗುರುತಿಸಲು ಕೆಳಕಂಡ ಪ್ರಶ್ನೆಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಶ್ನಾವಳಿಯ ಮೂಲಕ ಕೇಳಲಾಗಿತ್ತು. ಆ ಮತದಾರರಿಂದ ವ್ಯಕ್ತವಾದ ಉತ್ತರಗಳನ್ನು ಕೆಳಕಂಡ ಕೋಷ್ಟಕದ ಸಹಾಯದ ಮೂಲಕ ವಿಶ್ಲೇಷಿಸಲಾಗಿದೆ.


**ಕೋಷ್ಟಕ – 3.15.**

**ಮತದಾನ ಕುರಿತ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಮತದಾನ ಮಾಡಬೇಕು | 25 | 33.34 | 70 | 40 |
| 2 | ಮತದಾನ ಮಾಡಬಾರದು | 2 | 2.66 | 3 | 1.71 |
| 3 | ನನ್ನ ಹಕ್ಕು | 48 | 64 | 102 | 58.28 |
| 4 | ಏನು ಪ್ರಯೋಜನವಿಲ್ಲ | 0 | 0 | 0 | 0 |
| | | 75 | 100 | 175 | 100 |
| | **ಒಟ್ಟು** | | **75+175=** | | **250** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತದಾನ ಕುರಿತ ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.




### ಅಭಿಪ್ರಾಯಗಳು

ಕೋಷ್ಟಕದ ಅಂಕಿ ಅಂಶಗಳು ಸೂಚಿಸುವಂತೆ ಮತದಾನ ಮಾಡಬೇಕು ಎಂಬ ಸಕಾರಾತ್ಮಕ ಅಭಿಪ್ರಾಯವನ್ನು ಶೇ. 33.34 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ. 40.00 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ. ಹಾಗಾಗಿ ಸದರಿ ಫಲಿತಾಂಶದಿಂದ ಹೊರಹೊಮ್ಮುವ ಸಂಗತಿಯೇನೆಂದರೆ ಪರಿಶಿಷ್ಟ ಪಂಗಡ ವರ್ಗದ ಮತದಾರರಿಗಿಂತ

ಪರಿಶಿಷ್ಟ ಪಂಗಡೇತರ ಮತದಾರರಲ್ಲಿ ರಾಜಕೀಯಪ್ರಜ್ಞೆ ಹೆಚ್ಚಾಗಿದೆ ಎಂಬುದು ತಿಳಿದುಬರುತ್ತದೆ. ಮತದಾನ ಮಾಡಬಾರದು ಎನ್ನುವ ನಕಾರಾತ್ಮಕ ಅಭಿಪ್ರಾಯವನ್ನು ಶೇ. 02.66 ಪರಿಶಿಷ್ಟ ಪಂಗಡ, ಶೇ. 01.71 ಪರಿಶಿಷ್ಟ ಪಂಗಡೇತರ ಮತದಾರರು ಸೂಚಿಸಿದ್ದಾರೆ. ಎರಡು ವರ್ಗದಲ್ಲೂ ಕೂಡ ಚುನಾವಣೆಯ ಅವ್ಯವಹಾರಗಳಿಂದ ಮತದಾನದ ಬಗ್ಗೆ ನಿರಾಸಕ್ತಿ ಮೂಡಲು ಕಾರಣವಾಗಿದೆ ಎಂದು ಹೇಳಬಹುದು. ಮತದಾನ ನನ್ನ ಹಕ್ಕು ಎನ್ನುವ ಅಭಿಪ್ರಾಯವನ್ನು ಶೇ. 64.00 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ. 58.28 ಪರಿಶಿಷ್ಟ ಪಂಗಡೇತರ ಮತದಾರರು ಇದರ ಪರವಾಗಿದ್ದಾರೆ. ಎರಡು ವರ್ಗದಲ್ಲಿಯೂ ಸಹ ಶೇ. 55 ಮತದಾರರಿಗೆ ಮತದಾನ ನಮ್ಮ ಸಂವಿಧಾನಬದ್ಧ ಹಕ್ಕು ಎಂದು ತಿಳಿದುಕೊಂಡಿದ್ದಾರೆ. ಈ ನಿರ್ಣಯದಿಂದ ಚಳ್ಳಕೆರೆ ಮತದಾರರಲ್ಲಿ ಮತದಾನದ ಪ್ರಜ್ಞೆ ಹೆಚ್ಚಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಮತದಾನದಿಂದ ಏನೂ ಪ್ರಯೋಜನವಿಲ್ಲ ಎಂಬ ಅಭಿಪ್ರಾಯವನ್ನು ಎರಡು ವರ್ಗದವರು ನಕಾರಾತ್ಮಕ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಈ ಫಲಿತಾಂಶದಿಂದ ಎರಡು ವರ್ಗಗಳಲ್ಲೂ ಚುನಾವಣೆಯಲ್ಲಿ ಮತದಾನದ ಮಹತ್ವವನ್ನು ಗಮನಿಸಿ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಕ್ಷೇತ್ರಕಾರ್ಯದಲ್ಲಿ ಕಂಡುಕೊಳ್ಳಲಾಗಿದೆ.

**ಕೋಷ್ಟಕ –3.16.**

**ಮತದಾರರ ಮತ ಚಲಾವಣೆ ಅರ್ಹತೆಗಳನ್ನು ಕುರಿತು ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 58 | 77.34 | 102 | 58.29 |
| 2 | ಇಲ್ಲ | 2 | 2.66 | 23 | 13.14 |
| 3 | ಗೊತ್ತಿಲ್ಲ | 15 | 20 | 50 | 28.57 |
| | | 75 | 100 | 175 | 100 |
| ಒಟ್ಟು | | **75+175=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಶಿಕ್ಷಣ | 36 | 62.06 | 80 | 78.43 |
| 2 | ಪ್ರಜಾಪ್ರಭುತ್ವ ಚಿಂತನೆ | 22 | 37.93 | 19 | 18.62 |
| 3 | ತೆರಿಗೆ ಪಾವತಿದಾರ | 0 | 0 | 0 | 0 |
| 4 | ಗರಿಷ್ಠ ವಯೋಮಿತಿ | 0 | 0 | 3 | 2.94 |
| | | 58 | 100 | 102 | 100 |
| ಒಟ್ಟು | | **58+102=** | | | **160** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತ ಚಲಾವಣೆ ಅರ್ಹತೆಗಳನ್ನು ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಸದರಿ ಕೋಷ್ಟಕದ ಪ್ರಕಾರ ಮತದಾನಕ್ಕಾಗಿ ಸಂವಿಧಾನ ನಿಗದಿಪಡಿಸಿರುವ ಅರ್ಹತೆಗಳಿದ್ದರೆ ಸಾಕು ಇನ್ನಿತರ ಯಾವ ಅರ್ಹತೆಗಳ ಅವಶ್ಯಕತೆಯಿಲ್ಲ ಎನ್ನುವ ನಿಲುವನ್ನು ಶೇ. 02.66 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ. 13.14 ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಪಡಿಸಿದ್ದಾರೆ. ಅರ್ಹತೆಗಳ ಅವಶ್ಯಕತೆ ಇದೆ ಎನ್ನುವ ನಿಲುವನ್ನು ಶೇ. 77.34 ಪರಿಶಿಷ್ಟ ಪಂಗಡ ಹಾಗೂ ಶೇ. 58.29 ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಪಡಿಸಿದ್ದಾರೆ. ಅಂತೆಯೇ ಗೊತ್ತಿಲ್ಲ ಎನ್ನುವಂತಹ ನಿಲುವನ್ನು ಶೇ. 20.00 ಪರಿಶಿಷ್ಟ ಪಂಗಡ ಹಾಗೂ ಶೇ. 28.57 ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಪಡಿಸಿದ್ದಾರೆ.

ಮತ ಚಲಾಯಿಸಲು ಶಿಕ್ಷಣವನ್ನು ಮಾನದಂಡವಾಗಿ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರು ಕ್ರಮವಾಗಿ ಶೇ.62.06 ಮತ್ತು ಶೇ.78.43 ಮತದಾರರು ಹೊಂದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮತದಾನದ ಮೌಲ್ಯ ಹೆಚ್ಚಿಸಲು ಮತದಾನ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯ ಎನ್ನುವ ನಿಲುವನ್ನು ಮತದಾರರು ವ್ಯಕ್ತಪಡಿಸಿದ್ದಾರೆ. ಮತ ಚಲಾಯಿಸಲು ಪ್ರಜಾಪ್ರಭುತ್ವ ಚಿಂತನೆಗಳಿರಬೇಕು ಎಂದು ಶೇ.37.93 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.18.62 ಪರಿಶಿಷ್ಟ ಪಂಗಡೇತರ ಮತದಾರರು ಪ್ರತಿಕ್ರಿಯಿಸಿದ್ದಾರೆ. ಶೇ.19.31ಕ್ಕಿಂತ ಹೆಚ್ಚಿನ ಪರಿಶಿಷ್ಟ ಪಂಗಡ ಮತದಾರರು ಪ್ರಜಾಪ್ರಭುತ್ವ ಚಿಂತನೆಯನ್ನು ಬಯಸುತ್ತಾರೆ ಎಂಬುದು ಅಂಕಿ ಅಂಶಗಳಿಂದ ಸಾಬೀತಾಗುತ್ತದೆ. ಈ ಕುರಿತಾಗಿ ಕೆಲವು ಪ್ರಜ್ಞಾವಂತ ಮತದಾರರು ಭಾವೋದ್ವೇಗಕ್ಕೆ ಒಳಗಾಗಿ ಉತ್ತರಿಸಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಲಾಗಿದೆ. ಸ್ವತಂತ್ರಪೂರ್ವ ಭಾರತದಲ್ಲಿದ್ದ ಮತದಾನದ ಮಾನದಂಡಗಳಿರಬೇಕು ಎನ್ನುವ ವಿಷಯಕ್ಕೆ ಪೂರಕವಾಗುವ ಮತದಾನದ ಹಕ್ಕನ್ನು ನೀಡಲು ತೆರಿಗೆ ನಿಗದಿಪಡಿಸಬೇಕು ಎನ್ನುವುದಕ್ಕೆ ಎರಡು ವರ್ಗಗಳಲ್ಲಿ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಮತದಾನಕ್ಕೆ ಗರಿಷ್ಠ ವಯೋಮಿತಿ ನಿಗದಿಪಡಿಸಬೇಕು ಎನ್ನುವ ನಿಲುವಿಗೆ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರು ಕ್ರಮವಾಗಿ ಶೇ.0.00 ಮತ್ತು ಶೇ.02.94 ಮತದಾರರು ಬದ್ಧರಾಗಿದ್ದಾರೆ. ವೃದ್ಧರಿಗೆ ಸ್ವಂತ ಇಚ್ಚೆಗೆ ಅನುಸಾರವಾಗಿ ಇಂದಿನ ಪೀಳಿಗೆಯ ಮತದಾರರು ಮತದಾನ ಮಾಡಲು ಅವಕಾಶ ಕೊಡುವುದಿಲ್ಲ. ಇದರಿಂದ ಅವರ ಮತಗಳನ್ನು ಮಕ್ಕಳು ಅಥವಾ ಸಂಬಂಧಿಕರು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ.

**ಕೋಷ್ಟಕ – 3.17.**

**ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 58 | 77.34 | 141 | 80.57 |
| 2 | ಇಲ್ಲ | 9 | 12 | 19 | 10.85 |
| 3 | ಗೊತ್ತಿಲ್ಲ | 8 | 10.66 | 15 | 8.57 |
| | | 75 | 100 | 175 | 100 |
| **ಒಟ್ಟು** | | **75+175=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಶಿಕ್ಷಣ | 29 | 50 | 48 | 34.04 |
| 2 | ಸಮಾಜ ಸೇವೆ | 23 | 39.65 | 78 | 55.31 |
| 3 | ಚಳುವಳಿಗಾರರು | 3 | 5.17 | 9 | 6.38 |
| 4 | ರಾಜಕೀಯ ತರಬೇತಿ ಕೋರ್ಸು | 3 | 5.17 | 6 | 4.25 |
| | | **58** | **100** | **141** | **100** |
| **ಒಟ್ಟು** | | **58+141=** | | | **199** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತ ಚಲಾವಣೆ ಅರ್ಹತೆಗಳನ್ನು ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಸದರಿ ಕೋಷ್ಟಕದಲ್ಲಿ ಉಲ್ಲೇಖಿಸಿರುವ ಅಂಕಿ ಅಂಶಗಳ ಆಧಾರದ ಮೇಲೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಸೂಚಿತ ಅರ್ಹತೆಗಳನ್ನು ನಿಗದಿಪಡಿಸಬೇಕು ಎನ್ನುವ ನಿಲುವನ್ನು ಶೇ.77.34 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.80.57 ಪರಿಶಿಷ್ಟ ಪಂಗಡೇತರದವರು ಹೊಂದಿದ್ದಾರೆ. ಚುನಾವಣೆಗೆ ಸ್ಪರ್ಧಿಸುವ (ಪೌರತ್ವ ಮತ್ತು ಮತದಾರ ಅನ್ನುವ ಅರ್ಹತೆ ಬಿಟ್ಟು) ಅಭ್ಯರ್ಥಿಗಳಿಗೆ ಯಾವುದೇ ಅರ್ಹತೆಗಳನ್ನು ನಿಗದಿ ಪಡಿಸಬಾರದು ಎನ್ನುವ ನಿಲುವನ್ನು ಶೇ.12.00 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.10.85 ಪರಿಶಿಷ್ಟ ಪಂಗಡೇತರರು ಹೊಂದಿದ್ದಾರೆ. ಗೊತ್ತಿಲ್ಲ ಎನ್ನುವ ನಿಲುವನ್ನು ಶೇ.10.66 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.08.57 ಪರಿಶಿಷ್ಟ ಪಂಗಡೇತರದವರು ಹೊಂದಿದ್ದಾರೆ.

ಅಭ್ಯರ್ಥಿಗಳು ಶಿಕ್ಷಣ ಪಡೆಯಬೇಕು ಎಂದು ಶೇ.50.00 ಪರಿಶಿಷ್ಟ ಪಂಗಡ ಹಾಗೂ ಶೇ.34.04 ಪರಿಶಿಷ್ಟ ಪಂಗಡೇತರ ಮತದಾರರ ಅಪೇಕ್ಷೆಯಾಗಿದೆ. ಪರಿಶಿಷ್ಟ

ಪಂಗಡ ವರ್ಗದಲ್ಲಿ ಶೇ.15 ಹೆಚ್ಚಿನ ಮತದಾರರ ಅಭ್ಯರ್ಥಿಗಳಲ್ಲಿ ಶಿಕ್ಷಣವನ್ನು ಬಯಸುತ್ತಾರೆ. ಅಭ್ಯರ್ಥಿ ಪಡೆದಿರುವ ಶಿಕ್ಷಣದ ಆಧಾರದ ಮೇಲೆ ತಮ್ಮ ಪ್ರತಿನಿಧಿಯನ್ನು ಮತದಾರರು ಆಯ್ಕೆ ಮಾಡುತ್ತಾರೆ ಎಂದು ತಿಳಿಯುತ್ತದೆ. ಆದರೆ ಈ ಪ್ರಮಾಣ ಬಹಳ ಕಡಿಮೆ. ಅಭ್ಯರ್ಥಿಗಳು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರಬೇಕು ಎಂಬ ಅಭಿಪ್ರಾಯವನ್ನು ಶೇ.39.65 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.55.31 ಪರಿಶಿಷ್ಟ ಪಂಗಡೇತರ ಮತದಾರರು ಬಯಸುತ್ತಾರೆ. ಶೇ. 15 ಹೆಚ್ಚಿನ ಪರಿಶಿಷ್ಟ ಪಂಗಡದವರಿಗಿಂತ ಪರಿಶಿಷ್ಟ ಪಂಗಡೇತರ ಮತದಾರರು ಸಮಾಜ ಸೇವೆಯಿಂದ ಬಂದ ಅಭ್ಯರ್ಥಿಗಳನ್ನು ಅಪೇಕ್ಷೆ ಪಡುತ್ತಾರೆ. ಅಭ್ಯರ್ಥಿಗಳು ಚಳುವಳಿಯ ಮೂಲಕ ಬಂದವರಾಗಬೇಕು ಎಂದು ಶೇ.05.17 ಪರಿಶಿಷ್ಟ ಪಂಗಡ ಮತ್ತು ಶೇ.06.38 ಪರಿಶಿಷ್ಟ ಪಂಗಡೇತರರು ನಿರೀಕ್ಷೆ ಮಾಡುತ್ತಾರೆ. ಏಕೆಂದರೆ ಚಳುವಳಿಯಲ್ಲಿದ್ದವರಿಗೆ ಜನರ ಕಷ್ಟ ಸುಖಗಳ ಅರಿವಿರುತ್ತದೆ. ಅಲ್ಲದೆ ಸ್ಪಂದಿಸುವ ಮನೋಭಾವ ಚಳುವಳಿಯ ನಾಯಕರಲ್ಲಿ ಹೆಚ್ಚಾಗಿರುವುದರಿಂದ ಎರಡು ಗುಂಪಿನ ಮತದಾರರು ಚಳುವಳಿಯ ನಾಯಕರನ್ನು ಬಯಸುತ್ತಾರೆ ಎಂಬುದು ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದೆ. ರಾಜಕೀಯ ತರಬೇತಿ ಕೋರ್ಸುಗಳಲ್ಲಿ ಸಫಲರಾಗಿರುವ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸುವುದರಿಂದ ರಾಜಕೀಯ ಮೌಲ್ಯಗಳು ಉಳಿಯುತ್ತವೆ ಎಂಬ ಅಭಿಪ್ರಾಯವನ್ನು ಶೇ.5.17 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ. 4.25 ಪರಿಶಿಷ್ಟ ಪಂಗಡೇತರ ಮತದಾರರ ಬಯಕೆಯಾಗಿದೆ ಎಂಬುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ.


**ಕೋಷ್ಟಕ – 3.18.**

**ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಅಭ್ಯರ್ಥಿಯ ವ್ಯಕ್ತಿತ್ವ | 42 | 56 | 112 | 64 |
| 2 | ಪಕ್ಷದ ಕಾರ್ಯಕ್ರಮ | 28 | 37.34 | 53 | 30.28 |
| 3 | ಆಸೆ ಆಮಿಷಗಳಿಗೆ ಒಳಗಾಗಿ | 1 | 1.33 | 3 | 1.71 |
| 4 | ಕೌಟುಂಬಿಕ ಪರಂಪರೆ | 4 | 5.33 | 7 | 4 |
| | | **75** | **100** | **175** | **100** |
| | **ಒಟ್ಟು** | **75+1758=** | | | **250** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತದಾರ ಯಾವ ಅಂಶವನ್ನು ಆಧರಿಸಿ ಮತ ನೀಡುತ್ತಾನೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಅಭ್ಯರ್ಥಿಯ ವ್ಯಕ್ತಿತ್ವದ ಆಧಾರದ ಮೇಲೆ ಮತ ನಿರ್ಧರಿಸುವ ಮತದಾರರ ಸಂಖ್ಯೆ ಕ್ರಮವಾಗಿ ಪರಿಶಿಷ್ಟ ಪಂಗಡ ವರ್ಗ ಹಾಗೂ ಪರಿಶಿಷ್ಟ ಪಂಗಡೇತರರಲ್ಲಿ ಶೇ.56.00 ಮತ್ತು ಶೇ.64.00 ಮತದಾರರು ಈ ಅಭಿಪ್ರಾಯ ಹೊಂದಿದ್ದಾರೆ. ಇಲ್ಲಿ ಪರಿಶಿಷ್ಟ ಪಂಗಡದವರಿಗಿಂತ ಶೇ.8 ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಿ ನೋಡಿ ಮತದಾನ ಮಾಡುತ್ತಾರೆ. ಎರಡು ವರ್ಗದವರಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತದಾರರು ವ್ಯಕ್ತಿಯ ವ್ಯಕ್ತಿತ್ವಕ್ಕೆ ಮೊರೆ ಹೋಗಿದ್ದಾರೆ ಎನ್ನುವುದು ಮೇಲಿನ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಪಕ್ಷ ಹಾಗೂ ಪಕ್ಷದ ಕಾರ್ಯಕ್ರಮಗಳ ಆಧಾರದ ಮೇಲೆ ಶೇ.37.34 ಪರಿಶಿಷ್ಟ ಪಂಗಡ ಮತ್ತು ಶೇ.30.28 ಪರಿಶಿಷ್ಟ ಪಂಗಡೇತರ ಮತದಾರರು ಮತ ನೀಡುತ್ತಾರೆ. ಹಿಂದೆ ಪರಿಶಿಷ್ಟರಲ್ಲಿ ಪಕ್ಷ ನೋಡಿ ಮತ ನೀಡುವ ಪ್ರಮಾಣ ಹೆಚ್ಚಾಗಿತ್ತು. ಆದರೆ ಇಂದು ಮೀಸಲುವರ್ಗದಲ್ಲಿ ಪಕ್ಷ ನೋಡಿ ಮತ ನೀಡುವ ಪ್ರಮಾಣ ಕಡಿಮೆಯಾಗಿದೆ ಎನ್ನುವ ಅಂಕಿ ಅಂಶ ಕ್ಷೇತ್ರಕಾರ್ಯದಿಂದ ಹೊರಹೊಮ್ಮುತ್ತದೆ. ಹಾಗೆಯೇ ಪರಿಶಿಷ್ಟ ಪಂಗಡೇತರ ವರ್ಗದಲ್ಲಿ ಸಹ ಇದರ ಪ್ರಮಾಣ ಕಡಿಮೆಯಾಗಿರುವುದಕ್ಕೆ ಮತದಾರರ ಶಿಕ್ಷಣ ಮತ್ತು ವೈಚಾರಿಕತೆ ಕಾರಣ ಎಂದು ಗುರುತಿಸಲಾಗಿದೆ. ಆಸೆ ಆಮಿಷಗಳಿಗೆ ಒಳಗಾಗಿ ಮತ ನೀಡುವ ಪ್ರಮಾಣ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ವರ್ಗದಲ್ಲಿ ಕ್ರಮವಾಗಿ ಶೇ.5.33 ಹಾಗೂ ಶೇ.04.00 ಇದೆ. ಆದರೆ ಇಂದಿನ ಚುನಾವಣೆಯಲ್ಲಿ ಈ ಅಂಶ ಪ್ರಮುಖವಾಗಿ ಕೆಲಸ ಮಾಡಿ ಇನ್ನೂ ಹೆಚ್ಚಿನ ಪ್ರಮಾಣದ ಮತಗಳು ನಿರ್ಧಾರವಾಗುತ್ತವೆ ಎಂದು ಹೇಳಬಹುದು. ಕೌಟುಂಬಿಕ ಪರಂಪರೆಗೆ ಅನುಗುಣವಾಗಿ ಮತ ನೀಡುವ ಪ್ರಮಾಣ ಪರಿಶಿಷ್ಟ ಪಂಗಡದವರಲ್ಲಿ ಶೇ.05.33 ಹಾಗೂ ಪರಿಶಿಷ್ಟ ಪಂಗಡೇತರರಲ್ಲಿ ಶೇ.04.00 ಇದೆ. ಗ್ರಾಮೀಣ ಪ್ರದೇಶದ ಹಳೆ ತಲೆಮಾರಿನ ಪರಿಶಿಷ್ಟ ಮತದಾರರು ಮಾಜಿ ಪ್ರದಾನಿ ದಿವಂಗತ

ಇಂದಿರಾ ಗಾಂಧಿಯವರು ಜಾರಿಗೆ ತಂದ ಬಹಳ ಪ್ರಮುಖವಾದ ಭೂಸುಧಾರಣಾ ಕಾಯ್ದೆಯಾದ ಉಳುವವನೆ ಭೂಮಿ ಒಡೆಯ ಮತ್ತು ದೇಶದ ಬರಗಾಲವನ್ನು ಎದುರಿಸಿ ರೈತರ ಜೀವನಕ್ಕೆ ಇಂದಿರಾ ಗಾಂಧಿಯವರು ಆಸರೆಯಾದರು ಎಂದು ಅವರಿಂದ ಪ್ರಭಾವಿತರಾಗಿ ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಮತ ಚಲಾಯಿಸಿದ್ದಾರೆ. ಆದ್ದರಿಂದ ಪರಿಶಿಷ್ಟ ಮತದಾರರು ಕೌಟುಂಬಿಕ ಪರಂಪರೆಗೆ ಅನುಗುಣವಾಗಿ ಮತ ನೀಡುತ್ತಾರೆ ಎಂಬ ಅಭಿಪ್ರಾಯವನ್ನು ಒಪ್ಪಬಹುದು. ಈ ಪ್ರಮಾಣ ಇಂದು ಕಡಿಮೆಯಾಗಿದೆ.

**ಕೋಷ್ಟಕ – 3.19.**

**ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಅಭ್ಯರ್ಥಿಯ ವ್ಯಕ್ತಿತ್ವ | 42 | 56 | 112 | 64 |
| 2 | ಪಕ್ಷದ ಕಾರ್ಯಕ್ರಮ | 28 | 37.34 | 53 | 30.28 |
| 3 | ಆಸೆ ಆಮಿಷಗಳಿಗೆ ಒಳಗಾಗಿ | 1 | 1.33 | 3 | 1.71 |
| 4 | ಕೌಟುಂಬಿಕ ಪರಂಪರೆ | 4 | 5.33 | 7 | 4 |
| | | **75** | **100** | **175** | **100** |
| | **ಒಟ್ಟು** | **75+1758=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ರಾಜಕೀಯ ನಾಗರಿಕತೆ | 3 | 18.75 | 4 | 9.09 |
| 2 | ರಾಜಕೀಯ ನಾಯಕತ್ವದಲ್ಲಿ | 7 | 43.74 | 18 | 40.9 |
| 3 | ಜನತೆಯ ಮನೋಭಾವನೆ | 4 | 25 | 16 | 36.35 |
| 4 | ಚುನಾವಣೆ ಭಾಗವಹಿಸುವಿಕೆ | 2 | 12.05 | 6 | 13.63 |
| | | **16** | **100** | **44** | **100** |
| | **ಒಟ್ಟು** | **16+44=** | | | **60** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ರಾಜಕೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ಮತದಾರರ ನಡುವಿನ ವ್ಯತ್ಯಾಸ ಕುರಿತ ಅಭಿಪ್ರಾಯವಾಗಿರುತ್ತದೆ.

ಕೋಷ್ಟಕದ ಅಂಕಿ ಅಂಶಗಳ ಆಧಾರದ ಮೇಲೆ ಸಾಮಾನ್ಯ ಮತ್ತು ಮೀಸಲು ವಿಧಾನಸಭಾ ಕ್ಷೇತ್ರದ ನಡುವೆ ವ್ಯತ್ಯಾಸವಿದೆ ಎಂಬುದಕ್ಕೆ ಶೇ.21.33 ಪರಿಶಿಷ್ಟ ಪಂಗಡ ವರ್ಗದವರು ಹಾಗೂ ಶೇ.25.14 ಪರಿಶಿಷ್ಟ ಪಂಗಡೇತರದವರು ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ವ್ಯತ್ಯಾಸವಿಲ್ಲ ಎನ್ನುವುದಕ್ಕೆ ಶೇ.69.33 ಪರಿಶಿಷ್ಟ ಪಂಗಡ

ವರ್ಗದವರು ಹಾಗೂ ಶೇ.65.15 ಪರಿಶಿಷ್ಟ ಪಂಗಡೇತರದವರು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಗೊತ್ತಿಲ್ಲ ಎನ್ನುವುದನ್ನು ಶೇ. 9.33 ಪರಿಶಿಷ್ಟ ಪಂಗಡ ವರ್ಗದವರು ಹಾಗೂ ಶೇ.9.71 ಪರಿಶಿಷ್ಟ ಪಂಗಡೇತರದವರು ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ.

ಕೋಷ್ಟಕದ ಅಂಕಿ ಅಂಶಗಳ ಆಧಾರದ ಮೇಲೆ ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ಮತದಾರರ ರಾಜಕೀಯ ಸಂಸ್ಕೃತಿಯಲ್ಲಿ ಶೇ.18.75 ಪರಿಶಿಷ್ಟ ಪಂಗಡ ವರ್ಗದವರು ತಮ್ಮ ನಿಲುವನ್ನು ವ್ಯಕ್ತಪಡಿಸಿದರೆ, ಪರಿಶಿಷ್ಟ ಪಂಗಡೇತರದವರು ಶೇ.9.09 ಮತದಾರರು ಈ ನಿಲುವಿಗೆ ನಕಾರಾತ್ಮಕವಾಗಿದ್ದಾರೆ. ಕ್ಷೇತ್ರದ ನಾಯಕತ್ವದಲ್ಲಿ ವ್ಯತ್ಯಾಸವಿದೆ ಎಂದು ಶೇ.43.74 ಪರಿಶಿಷ್ಟ ಪಂಗಡ, ಶೇ.40.90 ಪರಿಶಿಷ್ಟ ಪಂಗಡೇತರ ಮತದಾರರು ಒಪ್ಪಿಕೊಳ್ಳುತ್ತಾರೆ. ಜೊತೆಗೆ ಪರಿಶಿಷ್ಟ ಪಂಗಡೇತರ ನಾಯಕತ್ವ ಪ್ರಬಲವಾಗಿರುತ್ತದೆ ಎಂದು ಕ್ಷೇತ್ರಕಾರ್ಯದಲ್ಲಿ ತಿಳಿಸಿದ್ದಾರೆ. ಪರಿಶಿಷ್ಟ ಪಂಗಡ ವರ್ಗ ಪರಿಶಿಷ್ಟ ಪಂಗಡೇತರರಿಗಿಂತ ಶೇ.3 ಹೆಚ್ಚಾಗಿ ಮತದಾರರು ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಒಪ್ಪಿಕೊಳ್ಳುತ್ತಾರೆ. ಪರಿಶಿಷ್ಟ ಪಂಗಡೇತರ ಮತದಾರರು ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪಿಕೊಳ್ಳುವ ಸ್ಥಿತಿ ಕಡಿಮೆ ಇದೆ ಎಂಬುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿರುತ್ತದೆ. ಮತದಾರರ ರಾಜಕೀಯ ಚಟುವಟಿಕೆಯ ಸಕ್ರಿಯ ಭಾಗವಹಿಸುವಿಕೆಯ ಆಧಾರದ ಮೇಲೆ ವ್ಯತ್ಯಾಸವನ್ನು ಶೇ.12.05 ಪರಿಶಿಷ್ಟ ಪಂಗಡ ವರ್ಗ ಗುರುತಿಸಿದ್ದಾರೆ. ಶೇ.13.63 ಪರಿಶಿಷ್ಟ ಪಂಗಡೇತರ ಮತದಾರರು ಇದಕ್ಕೆ ಪೂರಕವಾಗಿದ್ದಾರೆ. ಸಾಮಾನ್ಯ ಮತ್ತು ಮೀಸಲು ಮತದಾರರ ಮನೋಭಾವನೆಯಲ್ಲಿ ವ್ಯತ್ಯಾಸವಿರುತ್ತದೆ ಎಂಬ ಅಭಿಪ್ರಾಯವನ್ನು ಶೇ. 25.00 ಪರಿಶಿಷ್ಟ ಪಂಗಡ ವರ್ಗ, ಶೇ.36.35 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿರುತ್ತದೆ. ಸಾಮಾನ್ಯ ವರ್ಗದಲ್ಲಿ ಚುನಾವಣೆ ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮನಃಸ್ಥಿತಿ ಮೀಸಲುಕ್ಷೇತ್ರದಲ್ಲಿ ಇರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಒಟ್ಟಾರೆ ಮತದಾರರು ಮೀಸಲುಕ್ಷೇತ್ರದ ನಾಯಕತ್ವ ಪ್ರಬಲ ಎಂಬ ಅಭಿಪ್ರಾಯವನ್ನು ಹೆಚ್ಚಾಗಿ ವ್ಯಕ್ತ ಪಡಿಸಿದ್ದಾರೆ ಎಂಬುದನ್ನು ಕ್ಷೇತ್ರಕಾರ್ಯವು ದೃಢಪಡಿಸುತ್ತದೆ.

**ಕೋಷ್ಟಕ – 3.20.**

**ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 56 | 74.66 | 98 | 56 |
| 2 | ಇಲ್ಲ | 17 | 22.65 | 54 | 30.85 |
| 3 | ಗೊತ್ತಿಲ್ಲ | 2 | 2.66 | 23 | 13.14 |
| | | **75** | **100** | **175** | **100** |
| | **ಒಟ್ಟು** | **75+175=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಸಮಗ್ರ ಅಭಿವೃದ್ಧಿ | 36 | 64.28 | 77 | 78.57 |
| 2 | ಸಾಮಾಜಿಕ ಅಭಿವೃದ್ಧಿ | 5 | 8.92 | 8 | 8.16 |
| 3 | ಆರ್ಥಿಕ ಅಭಿವೃದ್ಧಿ | 4 | 7.14 | 3 | 3 |
| 4 | ಶೈಕ್ಷಣಿಕ ಅಭಿವೃದ್ಧಿ | 11 | 19.64 | 10 | 10.2 |
| | | **56** | **100** | **98** | **100** |
| | **ಒಟ್ಟು** | **75+175=** | | | **250** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಈ ಮೀಸಲುಕ್ಷೇತ್ರ ಜಿಲ್ಲೆಯ ಇತರ ಸಾಮಾನ್ಯ ಕ್ಷೇತ್ರಗಳಂತೆ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಮೀಸಲುಕ್ಷೇತ್ರ ಅಭಿವೃದ್ಧಿ ಹೊಂದಿದೆ ಎಂದು ಶೇ. 74.66 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.56 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ. ಮೀಸಲುಕ್ಷೇತ್ರ ಅಭಿವೃದ್ಧಿ ಹೊಂದಿಲ್ಲ ಎಂದು ಶೇ.22.65 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.30.85 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ. ಇನ್ನು ಮೀಸಲುಕ್ಷೇತ್ರ ಅಭಿವೃದ್ಧಿ ಕುರಿತು ಗೊತ್ತಿಲ್ಲ ಎಂದು ಶೇ.02.66 ಪರಿಶಿಷ್ಟ ಪಂಗಡ ವರ್ಗ ಮತ್ತು 13.14 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ.

ಈ ಅಭಿಪ್ರಾಯದ ಜೊತೆಗೆ ಕ್ಷೇತ್ರಕಾರ್ಯದಲ್ಲೂ ಸಹ ಕ್ಷೇತ್ರ ಅಭಿವೃದ್ಧಿಯಾಗಿರುವುದು ಸ್ಪಷ್ಟವಾಗುತ್ತದೆ. ಸಾಮಾನ್ಯ ಕ್ಷೇತ್ರಗಳಿಗೆ ಹೋಲಿಸಿದಾಗ ಮೀಸಲುಕ್ಷೇತ್ರ ಸಮಗ್ರವಾಗಿ ಅಭಿವೃದ್ಧಿಯಾಗಿದೆ ಎನ್ನುವ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ಮತದಾರರು ಕ್ರಮವಾಗಿ ಶೇ.64.28 ಹಾಗೂ ಶೇ.78.57 ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ಷೇತ್ರ ಸಾಮಾಜಿಕವಾಗಿ ಅಭಿವೃದ್ಧಿಯಾಗಿದೆ

ಎಂಬ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಶೇ.8.92 ಮತ್ತು ಶೇ. 8.16 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ. ಕ್ಷೇತ್ರ ಆರ್ಥಿಕವಾಗಿ ಅಭಿವೃದ್ಧಿಯಾಗಿದೆ ಎನ್ನುವ ಅಭಿಪ್ರಾಯವನ್ನು ಶೇ.7.14 ಪರಿಶಿಷ್ಟ ಪಂಗಡ ಮತ್ತು ಶೇ.3.06 ಪರಿಶಿಷ್ಟ ಪಂಗಡೇತರ ಮತದಾರರ ನಿರ್ಣಯವಾಗಿದೆ. ಕ್ಷೇತ್ರವು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಾಮಾನ್ಯ ಕ್ಷೇತ್ರಗಳಿಗಿಂತ ಮುಂಚೂಣಿಯಲ್ಲಿದೆ ಎಂಬ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ವರ್ಗ ಕ್ರಮವಾಗಿ ಶೇ.19.64 ಹಾಗೂ ಶೇ.10.20 ಮತದಾರರ ಅಭಿಪ್ರಾಯವಾಗಿದೆ.

ಸದರಿ ಫಲಿತಾಂಶದಿಂದ ಕ್ಷೇತ್ರ ಅಭಿವೃದ್ಧಿ ಹೊಂದಿದೆ ಎಂಬುದು ಮತದಾರರ ಅಭಿಪ್ರಾಯವಾಗಿರುತ್ತದೆ. ಜೊತೆಗೆ ಕ್ಷೇತ್ರಕಾರ್ಯದಿಂದಲೂ ಸಹ ಇದನ್ನು ಕಂಡುಕೊಳ್ಳಲಾಗಿದೆ.

## 3.7. ಮೊಳಕಾಲ್ಮೂರು ತಾಲ್ಲೂಕು ಹಾಗೂ ಮೀಸಲು ವಿಧಾನಸಭಾ ಕ್ಷೇತ್ರದ ಪರಿಚಯ

ಮೊಳಕಾಲ್ಮೂರು ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು. ಇದು ಕರ್ನಾಟಕ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡವನ್ನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ತಾಲ್ಲೂಕು ಕಸಬಾ, ದೇವಸಮುದ್ರ ಎಂಬ ಎರಡು ಹೋಬಳಿ ಹಾಗೂ 89 ಗ್ರಾಮಗಳನ್ನು ಒಳಗೊಂಡಿದೆ. ಚಿತ್ರದುರ್ಗ ಜಿಲ್ಲಾ ಕೇಂದ್ರದಿಂದ ಈಶಾನ್ಯ ದಿಕ್ಕಿನ 90 ಕಿ.ಮೀ. ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ಗ್ರಾಮ 13 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಭಾರತದಲ್ಲೇ ಮೊಳಕಾಲ್ಮೂರು ರೇಷ್ಮೆ ಸೀರೆಗೆ ಪ್ರಸಿದ್ಧಿ ಪಡೆದಿದೆ. ಬೃಹದಾಕಾರದ ಹೆಬ್ಬಂಡೆ ಗುಂಡುಗಳಿಂದ ಆವೃತಗೊಂಡು ಬೆಟ್ಟಗಳ ಸಾಲು ಇದೆ. ಸಿತಾಫಲಕ್ಕೆ ಪ್ರಸಿದ್ಧಿ ಪಡೆದಿದೆ.

ಮೊಳಕಾಲ್ಮೂರು ಎಂಬ ಹೆಸರು "ಮೊಳಕಾಲ್ಮುರು" ಎಂಬ ಜಲಸಸ್ಯದಿಂದ ಬಂದಿರಬಹುದು.[25] ಅಲ್ಲದೆ ಈ ಊರಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಕೋಟೆಯನ್ನು ವಶಪಡಿಸಿಕೊಳ್ಳಲು ಶತ್ರುಗಳು ಬಂದಾಗ ಕೋಟೆ ಕಾವಲಿಗಿರುವ ಸೈನಿಕರು ಅಲ್ಲಿನ ಕಡಿದಾದ ಹಾಸುಬಂಡೆಗಳ ಮೇಲೆ ಎಣ್ಣೆ ಹಾಗೂ ರಾಗಿಯನ್ನು ಸುರಿದಿದ್ದರಿಂದ ಶತ್ರು ಸೈನಿಕರು ಕಡಿದಾದ ಬಂಡೆಯನ್ನು ಹತ್ತಲಾಗದೇ ಜಾರಿಕೊಂಡು ಮೊಣಕಾಲು ಮುರಿಯುವಂತೆ ಬಿದ್ದಿದ್ದರಿಂದ ಈ ಊರಿಗೆ ಮೊಣಕಾಲುಮುರು–ಮೊಳಕಾಲ್ಮುರಿ,

[25] ಸೂರ್ಯನಾಥ ಯು. ಕಾಮತ್(ಸಂ), ಕರ್ನಾಟಕ ರಾಜ್ಯ ಗೆಸೆಟಿಯರ್, ಭಾಗ–3, ಪು.ಸಂ–581.

ನಂತರದ ದಿನಗಳಲ್ಲಿ ಮೊಳಕಾಲ್ಮೂರು ಎಂಬ ಹೆಸರು ಬಂದಿದೆಯೆಂಬ ಸ್ಥಳೀಯ ಐತಿಹ್ಯವಿದೆ. ಆದರೆ ಮೇಲಿನ ಹೇಳಿಕೆಗಳಿಗೆ ಯಾವುದೇ ರೀತಿಯ ಪುರಾತತ್ವೀಯ ಅಥವಾ ಸಾಹಿತ್ಯಿಕ ಆಧಾರಗಳಿಲ್ಲ. ಇಂದು ಮೊಳಕಾಲ್ಮೂರು ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದ್ದು, ಈ ತಾಲೂಕು ಜಿಲ್ಲೆಯ ಈಶಾನ್ಯ ಭಾಗದಲ್ಲಿ ಒಂಟೆ ಅಥವಾ ಜಿರಾಫೆಯ ಕತ್ತಿನಂತೆ ಉದ್ದಕ್ಕೆ ಚಾಚಿಕೊಂಡಿದೆ. ಇದರ ಪೂರ್ವಕ್ಕೆ ರಾಯದುರ್ಗ(ಆಂಧ್ರಪ್ರದೇಶದ ಅನಂತಪುರ ಜಿಲ್ಲೆ), ಪಶ್ಚಿಮಕ್ಕೆ ಕೂಡ್ಲಿಗಿ, ವಾಯುವ್ಯಕ್ಕೆ ಸಂಡೂರು, ಉತ್ತರಕ್ಕೆ ಬಳ್ಳಾರಿ, ದಕ್ಷಿಣಕ್ಕೆ ಚಳ್ಳಕೆರೆ ತಾಲೂಕುಗಳನ್ನು ತನ್ನ ಮೇರೆಯಾಗಿ ಹೊಂದಿದ್ದು, ಇದೊಂದು ಚಿಕ್ಕ ತಾಲೂಕಾಗಿದೆ. ಖ್ಯಾತ ಭೂಗರ್ಭಶಾಸ್ತ್ರ ಹಾಗೂ ಪುರಾತತ್ವಶಾಸ್ತ್ರಜ್ಞರಾದ ರಾಬರ್ಟ್ ಬ್ರೂಸ್‌ಫುಟ್ ಅವರು ಮೊಳಕಾಲ್ಮೂರು ತಾಲೂಕಿನ ಪರ್ವತ ಪ್ರದೇಶವನ್ನು ಅಧ್ಯಯನ ಮಾಡಿದ್ದಾರೆ.[26] ಮೇಲೆ ವಿವರಿಸಿದ(ಚಿತ್ರದುರ್ಗ) ಜಿಲ್ಲೆಯ ಎಲ್ಲಾ ಭೌಗೋಳಿಕ ಲಕ್ಷಣಗಳು ಇಲ್ಲಿಯೂ ಕಂಡುಬರುತ್ತಿದ್ದು, ಇಡೀ ತಾಲೂಕಿನ ತುಂಬ ಗ್ರಾನೈಟ್ ದುಂಡು ಶಿಲೆಯ ಗುಡ್ಡಗಳು ಹರಡಿಕೊಂಡಿವೆ. ಈ ತಾಲ್ಲೂಕಿನಲ್ಲಿ ಜಟಂಗ ಗುಡ್ಡ(3469 ಅಡಿಗಳು), ನುಂಕೆ ಗುಡ್ಡ(3022 ಅಡಿಗಳು), ಜೋಗಪ್ಪನ ಗುಡ್ಡ(2936 ಅಡಿಗಳು), ಸಂತೆ ಗುಡ್ಡ(2593 ಅಡಿಗಳು), ಬ್ರಹ್ಮಗಿರಿ(2347 ಅಡಿಗಳು)ಗಳು ಪ್ರಮುಖ ಗುಡ್ಡಗಳಾಗಿವೆ.[27] ಇವುಗಳಲ್ಲದೆ ಅಕ್ಕಮ್ಮನ ಗುಡ್ಡ, ಕೈಗುಡ್ಡ, ಮೊರ್ಲೂ ಬಂಡೆಗುಡ್ಡ, ವಿಭೂತಿ ಗುಡ್ಡ, ವೇರನ ಗುಡ್ಡ, ಗುಡ್ಡದಹಳ್ಳಿ ಗುಡ್ಡ, ಬೈರಾಪುರ ಗುಡ್ಡ, ನಾಗಸಮುದ್ರ ಗುಡ್ಡ, ರಂಗಯ್ಯನ ಗುಡ್ಡ, ಜಯಂತಿ ನಗರದ ಗುಡ್ಡ, ಮಲ್ಲಪ್ಪನ ಗುಡ್ಡ, ಕೂರಲುಗುಡ್ಡ, ಕೋನಸಾಗರ ಗುಡ್ಡಗಳು, ಈ ತಾಲೂಕಿನ ಇತರ ಗುಡ್ಡಗಳಾಗಿವೆ. ಹಾನಗಲ್ಲು ಮತ್ತು ಮಲ್ಲರವು ಗ್ರಾಮಗಳ ಸುತ್ತಮುತ್ತವಿರುವ ಗುಡ್ಡಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗ್ರಾನೈಟ್ ಶಿಲೆಯ ಗಣಿಗಾರಿಕೆ ಮಾಡಲಾಗುತ್ತಿದ್ದು, ತಾಲ್ಲೂಕಿನ ಇತರ ಭಾಗಗಳಲ್ಲಿಯೂ ಈ ಶಿಲೆಯ ಗಣಿಗಾರಿಕೆ ನಡೆಯುತ್ತಿದೆ. ಈ ಪ್ರದೇಶದಲ್ಲಿ ಗ್ರಾನೈಟ್ ಶಿಲೆಯ ಗಣಿಗಾರಿಕೆಯ ಸಂಪ್ರದಾಯವು ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತದಿಂದಲೇ ಆರಂಭಿಸಿರುವ ಸಾಧ್ಯತೆಗಳಿವೆ. ಏಕೆಂದರೆ ಈ ಸಂಸ್ಕೃತಿಯ ಜನರು ತಮ್ಮ ಸಮಾಧಿಗಳಿಗೆ ಬಳಸಿರುವ ಗ್ರಾನೈಟ್ ಶಿಲೆಯ ಚಪ್ಪಡಿಗಳಿಂದ ದೃಢಪಡಿಸಬಹುದು. ಬಳ್ಳಾರಿಯು ಈ ಪ್ರದೇಶಕ್ಕೆ ಹತ್ತಿರವಿರುವುದರಿಂದ ಹೆಚ್ಚು ಕಡಿಮೆ ಅಲ್ಲಿರುವಷ್ಟೇ ಬಿಸಿಲು–ತಾಪಮಾನವು ಇಲ್ಲಿಯೂ ಕಂಡುಬರುತ್ತದೆ. ಇಲ್ಲಿ ವಾರ್ಷಿಕವಾಗಿ ಸರಾಸರಿ ಸುಮಾರು 500ರಿಂದ 625 ಮಿ.ಮೀ.ಗಳಷ್ಟು ಮಳೆಯಾಗುತ್ತಿದ್ದು, ಮುಂಗಾರು ಮಳೆಯು ಕ್ಷೀಣಿಸಿ

---

[26] ಮೇಮಾಯಿರ್ಸ್ ಆಫ್ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ, ಸಂ XXV, ಪು.ಸಂ.– 67.

[27] ಗಿರಿಜ ಟಿ, ಪೂರ್ವೋಕ್ತ, ಪು–3, ಶ್ರೀ ಸತ್ಯನ್ ಬಿ.ಎನ್(ಸಂ), ಪೂರ್ವೋಕ್ತ, ಪು.ಸಂ.–7.

ಅಕ್ಟೋಬರ್‌ನಲ್ಲಿ ಹಿಂಗಾರು ಮಳೆಯು ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುತ್ತದೆ. ಈ ಪ್ರದೇಶದಲ್ಲಿ ಒಣಹವೆಗಳಿರುವುದರಿಂದ ಅಲ್ಲಲ್ಲಿ ಉರುವಲಿಗಾಗಿ ಉಪಯೋಗಿಸುವ ಕುರುಚಲು ಕಾಡಿದೆ. ಗುಡ್ಡಗಳ ಮಧ್ಯದ ಮೈದಾನ ಪ್ರದೇಶವು ವ್ಯವಸಾಯಯೋಗ್ಯ ಭೂಮಿಯಾಗಿದೆ. ಇಲ್ಲಿ ಕಪ್ಪು, ಕೆಂಪು, ಗರಸುಮಣ್ಣುಗಳು ಕಂಡುಬರುತ್ತಿದ್ದು, ಜೋಳ, ರಾಗಿ, ಮೆಕ್ಕೆಜೋಳ, ಸಜ್ಜೆ, ನವಣೆ, ದ್ವಿದಳ ಧಾನ್ಯಗಳು, ಶೇಂಗಾ, ಹತ್ತಿ, ಸೂರ್ಯಕಾಂತಿ, ಈರುಳ್ಳಿ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಬೊಮ್ಮನಕೆರೆಹಳ್ಳ, ಯರ್ರೇನಹಳ್ಳಿಹಳ್ಳ, ಹಾನಗಲ್ಲುಹಳ್ಳ, ಗುಂಡೇರಿ ಹಳ್ಳ, ಗಂಗಮ್ಮನಹಳ್ಳಗಳು ಇಲ್ಲಿ ಪ್ರಮುಖ ಹಳ್ಳಗಳಾಗಿವೆ. ಈ ಹಳ್ಳಗಳಿಗೆ ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿಕೊಂಡು ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಬಳಸಲಾಗುತ್ತದೆ. ಈ ಮೇಲಿನ ಹಳ್ಳಗಳಲ್ಲಿ ಕೆಲವೊಂದು ಚಿನ್ನಹಗರಿಯನ್ನು ಮತ್ತೆ ಕೆಲವೊಂದು ಹಳ್ಳಗಳು ವೇದಾವತಿ ನದಿಯನ್ನು ಸೇರುತ್ತವೆ. ಇವು ಮಳೆಗಾಲದಲ್ಲಿ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿಹೋಗುತ್ತಿವೆ. ಈ ಭಾಗದಲ್ಲಿ ಜೀವನದಿಗಳಾವುವು ಹರಿಯದಿದ್ದರೂ ಈಗಾಗಲೇ ಗಮನಿಸಿದಂತೆ ಚಿನ್ನಹಗರಿ ಮತ್ತು ವೇದಾವತಿ ನದಿಗಳು ಹರಿಯುತ್ತವೆ. ಚಿನ್ನಹಗರಿಯು ಮೊಳಕಾಲ್ಮೂರು ತಾಲ್ಲೂಕಿನ ಮಧ್ಯಭಾಗದಲ್ಲಿಯೂ ಮತ್ತು ವೇದಾವತಿಯು ಪೂರ್ವದ ಗಡಿಯಲ್ಲಿ ಹರಿಯುತ್ತವೆ. ಈ ಎರಡೂ ನದಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

### 3.7.1. ವೇದಾವತಿ ನದಿ

ಹಗರಿ ಎಂದು ಪರಿಚಿತವಾಗಿರುವ ಇದು ವೇದ ಮತ್ತು ಆವತಿಗಳೆಂಬ ಹೊಳೆಗಳು ಕಡೂರು ಬಳಿ ಕೂಡುವುದರಿಂದ ವೇದಾವತಿ ನದಿಯಾಗುತ್ತದೆ. ತುಂಗಾ ಭದ್ರಾನದಿಯ ಉಪನದಿಯಾದ ಇದು ಮೂಲತಃ ಪಶ್ಚಿಮಘಟ್ಟಗಳ ಬಾಬಾಬುಡನ್‌ಗಿರಿ ಶ್ರೇಣಿಯ ಮುಳ್ಳಯನಗಿರಿಯ ತಳಭಾಗದಲ್ಲಿ ಜನಿಸುತ್ತದೆ.[28] ಇದು ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿಯೂ ಹರಿದು ತುಂಗಭದ್ರಾ(ಬಳ್ಳಾರಿ ಜಿಲ್ಲೆ) ನದಿಯನ್ನು ಸೇರುತ್ತದೆ. ಇದರ ಒಟ್ಟು ಉದ್ದ 361 ಕಿ.ಮೀ.ಗಳಾಗಿದ್ದು. 23,498 ಚ.ಕಿ.ಮೀ. ವಿಸ್ತೀರ್ಣದಷ್ಟು ಜಲಾನಯನ ಪ್ರದೇಶವನ್ನು ಹೊಂದಿದೆ.[29] ಈ ನದಿಗೆ ಮಾರಿಕಣಿವೆ (ಹಿರಿಯೂರು ತಾಲ್ಲೂಕು) ಎಂಬಲ್ಲಿ "ವಾಣಿವಿಲಾಸ ಸಾಗರ" ವೆಂಬ ಜಲಾಶಯವನ್ನು ನಿರ್ಮಿಸಲಾಗಿದೆ.

---

[28] ಸೂರ್ಯನಾಥ ಯು, ಕಾಮತ್(ಸಂ) ಪೂರ್ವೋಕ್ತ, ಭಾಗ-1, ಪು.ಸಂ.-33.

[29] ಅದೇ.

### 3.7.2. ಚಿನ್ನಹಗರಿ

ಹುಲ್ಲೂರು ಶ್ರೀನಿವಾಸ ಜೋಯಿಸರು ಈ ನದಿಯನ್ನು "ಪಾಪವಿನಾಶಿನಿ" ಎಂದು ಸಂಬೋಧಿಸಿದ್ದಾರೆ.[30] ಇದನ್ನು ಚಿನ್ನಹಗರಿ(ಚಿನ್ನ ಎಂದರೆ ತೆಲುಗಿನಲ್ಲಿ ಚಿಕ್ಕದು ಎಂದರ್ಥ) ಜನ್ನಿಗಿಹಳ್ಳವೆಂದು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಈ ನದಿಯು ಮೂಲತಃ ಹೊಳಲ್ಕೆರೆ ತಾಲ್ಲೂಕಿನ ಓಬಳೇಶ್ವರ ದೇವರ ಗುಡ್ಡದಲ್ಲಿ ಹುಟ್ಟಿ ಚಿತ್ರಹಳ್ಳಿಯಿಂದ ಕಾತ್ರಾಳಕೆರೆಯ ಮೂಲಕ ಹರಿದು ಜಗಳೂರು ತಾಲ್ಲೂಕಿನ ಸಂಗೇನಹಳ್ಳಿ ಕೆರೆಯನ್ನು ತಲುಪುತ್ತದೆ. ಅಲ್ಲಿಂದ ಆಕನೂರು, ದೊಣೆಹಳ್ಳಿ, ಚಿಕ್ಕಮಲ್ಲನಹೊಳೆಯ ಮೂಲಕ ಹರಿದು ಕೂಡ್ಲಿಗಿ ತಾಲ್ಲೂಕಿನ ಕಲ್ಲಹಳ್ಳಿಯನ್ನು ತಲುಪಿ, ಅಲ್ಲಿಂದ ನೈರುತ್ಯ, ಈಶಾನ್ಯ ದಿಕ್ಕಿನಲ್ಲಿ ಹರಿಯುವಾಗ ಕೂಡ್ಲಿಗಿ ತಾಲ್ಲೂಕಿನ ಆಗ್ನೇಯ ಮತ್ತು ಪೂರ್ವದ ಗಡಿಯಾಗಿ, ಮೊಳಕಾಲ್ಮೂರು ತಾಲ್ಲೂಕಿನ ಪಶ್ಚಿಮದ ಗಡಿಯುದ್ದಕ್ಕೂ ಹರಿದು ರಂಗಯ್ಯನ ಗುಡ್ಡದ ಜಲಾಶಯವನ್ನು ಸೇರಿಕೊಳ್ಳುತ್ತದೆ. ಹೀಗೆ ಹರಿಯುವಾಗ ಕುಮತಿಯವರೆಗೆ ಜಿನ್ನಿಗಿಹಳ್ಳವೆಂದು ಅಲ್ಲಿಂದ ಮುಂದೆ ಚಿನ್ನಹಗರಿ ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಜಗಳೂರಿನಿಂದ ಹಿಡಿದು ಜರ್ಮಲಿ, ಗುಡೇಕೋಟೆಯವರೆಗೆ (ಹುದ್ದುಗಟ್ಟ), ಕಾನಾಮಡುಗು, ಆಲೂರು, ಹುಲಿಕೆರೆ, ಸಕಲಾಪುರದಹಟ್ಟಿ, ಖಾನಾಹೊಸಹಳ್ಳಿ, ಇಮ್ಮಡಾಪುರ, ಚಿಕ್ಕಜೋಗಿಹಳ್ಳಿ, ಕುರಿಹಟ್ಟಿ, ಬೀಮಸಮುದ್ರ, ಕಾಟ್ರಹಳ್ಳಿ ಕಡೆಯ ಅನೇಕ ಚಿಕ್ಕ ಚಿಕ್ಕ ಹಳ್ಳಗಳು ಈ ನದಿಗೆ ಬಂದು ಸೇರುತ್ತವೆ. ಅವುಗಳೆಂದರೆ ಕಳ್ಳರಹಳ್ಳ, ಉಪ್ಪಾರಹಳ್ಳ, ಹೆಂಡಕಟ್ಟುವವರಹಳ್ಳ, ಕುರಿಬೋರಯ್ಯನ ಹಳ್ಳ, ತಿಪ್ಪೇಹಳ್ಳಿ ಹಳ್ಳ, ಹೂಡೇಂ ಹಳ್ಳ, ಕುಮತಿಹಳ್ಳ ಅಥವಾ ಪೆದ್ದವಂಕ(ದೊಡ್ಡಹಳ್ಳ), ಮಾರವ್ವನಹಳ್ಳ, ಮರಳುಹಳ್ಳ(ಮರಲುವಂಕ)ಗಳು ಪ್ರಮುಖವಾದವು. ರಂಗಯ್ಯನ ಗುಡ್ಡದ ಜಲಾಶಯದಿಂದ ಸುಮಾರು 9000 ಎಕರೆಗಳಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ.[31] ಇದೊಂದು ಬಡನದಿ. ಮಳೆಗಾಲದಲ್ಲಿ ಮಳೆ ಬಂದರೆ ಮಾತ್ರ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿಹೋಗುತ್ತದೆ. ಒಟ್ಟು ಸುಮಾರು 129 ಕಿ.ಮೀ. ಹರಿಯುವ ಈ ನದಿಯ ಜಟಿಂಗರಾಮೇಶ್ವರ ಮತ್ತು ಬ್ರಹ್ಮಗಿರಿಗಳ ಮಧ್ಯೆ ವಿಶಾಲವಾಗಿ ಹರಿದು ವೇದಾವತಿ ನದಿಯನ್ನು ಸೇರುತ್ತದೆ.

ಈ ಪ್ರದೇಶದ ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿದೆ. ಇಲ್ಲಿಯೂ ಸಹ ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವಂತೆ ಗ್ರಾನೈಟ್ ಶಿಲೆಯ

---

[30] ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಸಂ–12, ಪು.ಸಂ.–202.

[31] ಗಿರಿಜ ಟಿ. ಪೂರ್ವೋಕ್ತ, ಪು.ಸಂ.–3.

ಗುಡ್ಡಗಳು ಹಾಗೂ ಕುರುಚಲು ಕಾಡು ಕಂಡುಬರುತ್ತದೆ. ಮುಂಗಾರು ಮಳೆಯು ಸಂಪೂರ್ಣವಾಗಿ ದುರ್ಬಲವಾಗುವ ಈ ಪ್ರದೇಶದಲ್ಲಿ ಹಿಂಗಾರು ಮಳೆಯು ಸ್ವಲ್ಪಮಟ್ಟಿಗೆ ಪ್ರಬಲಗೊಳ್ಳುತ್ತದೆ. ಇಲ್ಲಿ ವಾರ್ಷಿಕವಾಗಿ ಸರಾಸರಿ ಸುಮಾರು 500ರಿಂದ 625 ಮಿ.ಮೀ.ಗಳಷ್ಟು ಮಳೆಯಾಗುತ್ತದೆ. ಮೊಳಕಾಲ್ಮೂರು ತಾಲೂಕಿನ ಪಶ್ಚಿಮಕ್ಕಿರುವ ಕೂಡ್ಲಿಗಿ ತಾಲೂಕಿನ ಪರಿಸರವು ಹೆಚ್ಚು ಕಡಿಮೆ ಇದೇ ಪರಿಸರವನ್ನೇ ಹೋಲುತ್ತದೆ. ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪರ್ವತ ಶ್ರೇಣಿಗಳಿದ್ದು,[32] ಒಂದು ಕೂಡ್ಲಿಗಿಯ ಸುತ್ತಮುತ್ತ ಕಂಡುಬರುತ್ತದೆ. ಈ ಗುಡೇಕೋಟೆ ಪರ್ವತ ಶ್ರೇಣಿಯು ವಾಯುವ್ಯದ ಚೋರನೂರಿನಿಂದ ಆರಂಭವಾಗಿ ಆಗ್ನೇಯದ ಚಿನ್ನಹಗರಿಯವರೆಗೆ ಹಬ್ಬಿದೆ. ಇಲ್ಲಿಯೂ ಗ್ರಾನೈಟ್ ಶಿಲೆಯ ಗುಟ್ಟಗಳಲ್ಲದೆ ಅಲ್ಲಲ್ಲಿ ಕುರುಚಲು ಕಾಡು ಕಂಡು ಬರುತ್ತದೆ. ಇಲ್ಲಿ ಮಳೆಯು ಮೇಲೆ ತಿಳಿಸಿದ ಪ್ರಮಾಣದಲ್ಲಿ ಆಗುತ್ತದೆ. ಅಧ್ಯಯನ ಪ್ರದೇಶದ ವಾಯುವ್ಯಕ್ಕಿರುವ ಸಂಡೂರು ತಾಲೂಕಿನ ಪರಿಸರವು ಮೇಲೆ ವಿವರಿಸಿದ ಭೌಗೋಳಿಕ ಅಂಶಗಳಿಗಿಂತ ಭಿನ್ನವಾಗಿದೆ. ಸಂಡೂರಿನ ಪೂರ್ವ ಭಾಗದಲ್ಲಿರುವ ಪರ್ವತ ಶ್ರೇಣಿಯು ವಾಯುವ್ಯದಿಂದ ಆಗ್ನೇಯ ದಿಕ್ಕಿಗೆ(ದರೋಜಿ ಕೆರೆಯಿಂದ ಚಿನ್ನಹಗರಿ ನದಿಯವರೆಗೆ) ಹಬ್ಬಿಕೊಂಡಿದೆ. ಈ ಪ್ರದೇಶದಲ್ಲಿ ಮರಳುಮಿಶ್ರಿತ ಕೆಂಪು ಮಣ್ಣು ಮತ್ತು ಫಲವತ್ತಾದ ಮಣ್ಣು ಹರಡಿದೆ. ಗ್ರಾನೈಟ್, ಸಿಸ್ಟ್, ಸ್ಯಾಂಡ್‌ಸ್ಟೋನ್, ಜಾಸ್ಪರ್ ಮುಂತಾದ ಶಿಲೆಗಳು ಹಾಗೂ ಇಲ್ಲಿರುವ ಬೆಟ್ಟಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಮತ್ತು ತಾಮ್ರದ ಅದಿರಿನಿಂದ ಕೂಡಿದ ಶಿಲೆಗಳಿವೆ.[33] ಈ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಮಲೆನಾಡನ್ನು ಹೋಲುವ ಅರಣ್ಯವಿದೆ. ಇಲ್ಲಿ ವಾರ್ಷಿಕವಾಗಿ ಸರಾಸರಿ ಸುಮಾರು 574.9 ಮಿ.ಮೀ. ಮಳೆಯಾಗುತ್ತದೆ.

ಈಗಾಗಲೇ ಗಮನಿಸಿರುವಂತೆ ಒಂದು ಭಾಗದ ಪರಿಸರದಿಂದ ಇನ್ನೊಂದು ಭಾಗದ ಪರಿಸರವು ಭಿನ್ನತೆ ಅಥವಾ ವ್ಯತ್ಯಾಸದಿಂದ ಕೂಡಿರುತ್ತದೆ. ಒಂದು ಭಾಗದ ಪರಿಸರವು ಆದಿಮಾನವನಿಗೆ ಅನುಕೂಲಕರವಾಗಿದ್ದರೆ, ಇನ್ನೊಂದು ಭಾಗದ ಪರಿಸರವು ಪ್ರತಿಕೂಲಕರವಾಗಿರುತ್ತದೆ. ಅಂದರೆ ಒಂದು ಪ್ರದೇಶವು ಅವನ ಅವಶ್ಯಕತೆಗಳನ್ನು ಪೂರೈಸಿದರೆ, ಇನ್ನೊಂದು ಪರಿಸರದಲ್ಲಿ ಅವನ ಅವಶ್ಯಕತೆಗಳಿಗೆ ಕೊರತೆ ಇರುತ್ತದೆ.


[32] ಅಭಿಶಂಕರ್ ಕೆ.(ಸಂ), ಗ್ಯಾಸೆಟಿಯರ್ ಆಫ್ ಇಂಡಿಯಾ– ಮೈಸೂರು ಸ್ಟೇಟ್ ಬಳ್ಳಾರಿ ಡಿಸ್ಟ್ರಿಕ್ಟ್, ಪು.ಸಂ.–12.
[33] ಅದೇ, ಪು.ಸಂ.–134.

### 3.7.3. ವಿಸ್ತೀರ್ಣ ಮತ್ತು ಜನಸಂಖ್ಯೆ

ಚಿತ್ರದುರ್ಗ ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕಾದ ಮೊಳಕಾಲ್ಮೂರು ಒಟ್ಟು ವಿಸ್ತೀರ್ಣ 739.00 ಚದರ ಕಿ.ಮೀ. ಜನಸಂಖ್ಯೆಯಲ್ಲೂ ಸಹ ಜಿಲ್ಲೆಯಲ್ಲಿ 6ನೇ ಸ್ಥಾನ ಕಾಯ್ದುಕೊಂಡಿರುವ ಮೊಳಕಾಲ್ಮೂರು ತಾಲ್ಲೂಕಿನ ಒಟ್ಟು ಜನಸಂಖ್ಯೆ 1,41,284 ಯನ್ನು ಹೊಂದಿದೆ. ತಾಲ್ಲೂಕಿನಲ್ಲಿ 72,049 ಪುರುಷರು ಮತ್ತು 69,235 ಮಹಿಳೆಯರಿದ್ದಾರೆ. ಲಿಂಗಾನುಪಾತದಲ್ಲಿ ಪ್ರತಿ 1000 ಪುರುಷರಿಗೆ 961 ಮಹಿಳೆಯರಿದ್ದಾರೆ.[34] ಈ ತಾಲ್ಲೂಕಿನ 1,25,487 ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಮತ್ತು 15,797 ಜನ ನಗರಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ. ತಾಲ್ಲೂಕಿನಲ್ಲಿ 27,951 ಪರಿಶಿಷ್ಟ ಜಾತಿಯವರು ಮತ್ತು 52,908 ಪರಿಶಿಷ್ಟ ಪಂಗಡದವರು ಸೇರಿ ಒಟ್ಟು 80,859 ಜನರಿದ್ದಾರೆ. ಮೊಳಕಾಲ್ಮೂರು ಶೇ.37.4 ಪರಿಶಿಷ್ಟ ಪಂಗಡ ಜನಸಂಖ್ಯೆ ಹೊಂದಿ ಪ್ರಥಮ ಸ್ಥಾನದಲ್ಲಿದೆ. ಸಾಕ್ಷರತೆಯಲ್ಲಿ ಮೊಳಕಾಲ್ಮೂರು ತಾಲ್ಲೂಕು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗಿಂತ ಕಡಿಮೆ ಶೇ. 44.16 ಸಾಕ್ಷರತೆ ಹೊಂದಿದೆ.

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಇತಿಹಾಸ**

**ನಕ್ಷೆ–3.5.**
**ಮೊಳಕಾಲ್ಮೂರು ಮೀಸಲುಕ್ಷೇತ್ರದ ನಕ್ಷೆ**




---

[34] ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ 2017–18, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ, ಪು.ಸಂ.–32.

ಕರ್ನಾಟಕ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಪೈಕಿ ಮೊಳಕಾಲ್ಮೂರು ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರವು ಸಹ ಒಂದು. ಮೊಳಕಾಲ್ಮೂರು ಕ್ಷೇತ್ರವು ಮೈಸೂರು ರಾಜ್ಯದ ಎರಡನೇ ವಿಧಾನಸಭೆ 1962ರವರೆಗೆ ಏಕ–ಸದಸ್ಯ ಕ್ಷೇತ್ರವಾಗಿತ್ತು. ಒಬ್ಬರು ಸಾಮಾನ್ಯವರ್ಗಕ್ಕೆ ಸೇರಿದ ಅಭ್ಯರ್ಥಿ ಆಯ್ಕೆಯಾಗುತ್ತಿದ್ದರು. ನಂತರ 1962 ರಿಂದ ಚುನಾವಣಾ ಕಾಯ್ದೆ ಅನ್ವಯ ಮೂರನೇ ವಿಧಾನಸಭೆ 1962ರಿಂದ 12ನೇ ವಿಧಾನಸಭೆ 2008 ಏಪ್ರಿಲ್‌ವರೆಗೆ ಸಾಮಾನ್ಯಕ್ಷೇತ್ರವಾಗಿತ್ತು. ನಂತರ ನ್ಯಾಯಮೂರ್ತಿ ಕುಲದೀಪ್ ಸಿಂಗ್ ನೇತೃತ್ವದ ಕ್ಷೇತ್ರ ಪುನರ್‌ವಿಂಗಡಣಾ ವರದಿ ಅನ್ವಯ 13ನೇ ವಿಧಾನಸಭೆಯಿಂದ ಪರಿಶಿಷ್ಟ ಪಂಗಡದ ಮೀಸಲುಕ್ಷೇತ್ರವಾಗಿದೆ.

ಈ ವಿಧಾನಸಭಾ ಕ್ಷೇತ್ರದ ರಾಜಕೀಯ ಪ್ರಕ್ರಿಯೆಯನ್ನು ಮತ್ತು ಚುನಾವಣಾ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಹಿಂದೆ ನಡೆದಿರುವ ಚುನಾವಣೆಗಳ ಫಲಿತಾಂಶವನ್ನು ತಿಳಿಯುವುದು ಸೂಕ್ತ. ಆದ್ದರಿಂದ ಪ್ರಸ್ತುತ ಅಧ್ಯಾಯದಲ್ಲಿ ಮೈಸೂರು ರಾಜ್ಯದ ಪ್ರಥಮ ವಿಧಾನಸಭೆ ಚುನಾವಣೆ 1951–52ರಿಂದ ಕರ್ನಾಟಕದ 14ನೇ ವಿಧಾನಸಭೆ 2013ರವರೆಗೆ ಮೊಳಕಾಲ್ಮೂರು ಕ್ಷೇತ್ರದ ಚುನಾವಣೆ ಫಲಿತಾಂಶ ಅವಲೋಕಿಸಲಾಗಿದೆ.

**ಕೋಷ್ಟಕ –3.21.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1952**

ಒಟ್ಟು ಮತದಾರರು–40,168 ಪುರಸ್ಕೃತಗೊಂಡ ಮತಗಳು–27,647

ಚಲಾವಣೆಯಾದ ಮತಗಳು–27,647 ತಿರಸ್ಕೃತಗೊಂಡ ಮತಗಳು–ಇಲ್ಲ

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎ. ಭೀಮಪ್ಪ ನಾಯಕ | ಐಎನ್‌ಸಿ | 15,444 | 55.86 |
| 2 | ಎಸ್.ಹೆಚ್. ಬಸಣ್ಣ | ಐಎನ್‌ಡಿ | 12,203 | 44.14 |
| | | **ಒಟ್ಟು** | **27,647** | **100** |

**Source:** Election Commission of India

**Note:** INC-Indian National Congress, IND–Independent.

ಮೈಸೂರು ರಾಜ್ಯದ ಮೊದಲನೇ ವಿಧಾನಸಭೆಗೆ ಚುನಾವಣೆಯು ಮೊಳಕಾಲ್ಮೂರು ಕ್ಷೇತ್ರದಲ್ಲಿ 27.03.1952ರಂದು ನಡೆದು ಶೇ. 68.83ರಷ್ಟು ಮತದಾನವಾಯಿತು. ಚುನಾವಣಾ ಕಣದಲ್ಲಿ ಸಾಮಾನ್ಯ ವರ್ಗದ ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಕಣದಲ್ಲಿದ್ದರು. ಕಾಂಗ್ರೆಸ್‌ನ ಎ. ಭೀಮಪ್ಪ ನಾಯಕ ಮತ್ತು ಐಎನ್‌ಡಿಯಿಂದ ಎಸ್.ಹೆಚ್. ಬಸಣ್ಣ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಎ. ಭೀಮಪ್ಪ ನಾಯಕ ಅವರು 3,241(11.72) ಮತಗಳ

ಅಂತರದಿಂದ ಗೆಲುವು ಪಡೆದರು. ಈ ಚುನಾವಣೆಯ ಫಲಿತಾಂಶದ ಮೇಲೆ ಅವರ ವ್ಯಕ್ತಿತ್ವ ಕೆಲಸ ಮಾಡಿರುವುದರಿಂದ ಅವರ ಗೆಲವು ಸುಲಭವಾಗಿದೆ ಎಂದು ಹೇಳಬಹುದು. ಇಲ್ಲಿ ಮತದಾರ ಭಾಗಶಃ ಪಕ್ಷ ಮತ್ತು ವ್ಯಕ್ತಿ ನೋಡಿ ಮತ ನೀಡಿದ್ದಾನೆ ಎಂಬುದು ಇಲ್ಲಿಯ ಮತದಾನ ನಡವಳಿಕೆಯಲ್ಲಿ ಸ್ಪಷ್ಟವಾಗುತ್ತದೆ.

**ಕೋಷ್ಟಕ –3.22.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1957**

ಒಟ್ಟು ಮತದಾರರು–50,565 ಪುರಸ್ಕೃತಗೊಂಡ ಮತಗಳು–32,925

ಚಲಾವಣೆಯಾದ ಮತಗಳು–32,925 ತಿರಸ್ಕೃತಗೊಂಡ ಮತಗಳು–ಇಲ್ಲ

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎಸ್. ನಿಜಲಿಂಗಪ್ಪ | ಐಎನ್‌ಸಿ | 19,167 | 58.21 |
| 2 | ಜಿ. ವಿ. ಅಂಜನಪ್ಪ | ಪಿಎಸ್‌ಪಿ | 13,758 | 41.79 |
| | | **ಒಟ್ಟು** | **32,925** | **100** |

**Source:** Election Commission of India

**Note:** INC-Indian National Congress, PSP–Praja Socialist Party.

ಮೈಸೂರು ರಾಜ್ಯದ ಎರಡನೇ ವಿಧಾನಸಭೆಗೆ ಚುನಾವಣೆಯು ಮೊಳಕಾಲ್ಮೂರು ಕ್ಷೇತ್ರದಲ್ಲಿ 25.02.1957ರಂದು ನಡೆದು ಶೇ. 65.11ರಷ್ಟು ಮತದಾನವಾಯಿತು. ಚುನಾವಣಾ ಕಣದಲ್ಲಿ ಸಾಮಾನ್ಯ ವರ್ಗದ ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಕಣದಲ್ಲಿದ್ದರು. ಕಾಂಗ್ರೆಸ್‌ನ ಎಸ್. ನಿಜಲಿಂಗಪ್ಪ ಮತ್ತು ಪಿಎಸ್‌ಪಿ ಯಿಂದ ಅಂಜಿನಪ್ಪ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಎಸ್. ನಿಜಲಿಂಗಪ್ಪ ಅವರು 5,409 ಮತಗಳ ಅಂತರದಿಂದ ಗೆಲುವು ಪಡೆದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಯಶಸ್ವಿ ಸರ್ಕಾರ ನೀಡಿದ್ದರಿಂದ ಜಿ.ವಿ. ಅಂಜಿನಪ್ಪ ಅವರು ಸೋಲು ಅನುಭವಿಸಿದ್ದಾರೆ ಎಂದು ಹೇಳಬಹುದು.

**ಕೋಷ್ಟಕ –3.23.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1962**

ಒಟ್ಟು ಮತದಾರರು–58,104 ಪುರಸ್ಕೃತಗೊಂಡ ಮತಗಳು–38,574

ಚಲಾವಣೆಯಾದ ಮತಗಳು–41,282 ತಿರಸ್ಕೃತಗೊಂಡ ಮತಗಳು–2,708

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎಸ್.ಹೆಚ್. ಬಸಣ್ಣ | ಐಎನ್‌ಸಿ | 20,845 | 54.04 |
| 2 | ಜಿ. ವೀರಣ್ಣ | ಪಿಎಸ್‌ಪಿ | 15,041 | 38.99 |
| 3 | ಬಸವನಾಯ್ಕ | ಐಎನ್‌ಡಿ | 2,688 | 6.97 |
| | | **ಒಟ್ಟು** | **38,574** | **100** |

**Source:** Election Commission of India

**Note:** INC-Indian National Congress, PSP–Praja Socialist Party, IND–Independent.

ಮೊಳಕಾಲ್ಮೂರು ಕ್ಷೇತ್ರದ 3ನೇ ವಿಧಾನಸಭಾ ಚುನಾವಣೆ 19.02.1962ರಂದು ನಡೆದಿರುತ್ತದೆ. ಇದರಲ್ಲಿ ಮೂವರು ಆಕಾಂಕ್ಷಿಗಳು ಚುನಾವಣಾ ಕಣದಲ್ಲಿದ್ದರು. ಈ

ಆಕಾಂಕ್ಷಿಗಳು ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯನ್ನು ಎದುರಿಸಿದರು. ಈ ಚುನಾವಣೆಯಲ್ಲಿ ಮತದಾರರಿಂದ ಉತ್ತಮ ಪ್ರತಿಕ್ರಿಯೆಯಿಂದ ಶೇ.71.05ರಷ್ಟು ಮತದಾನವಾಗಿರುತ್ತದೆ. ಪರಿಶಿಷ್ಟ ಪಂಗಡದ ಮತದಾರರ ಚುನಾವಣೆ ಭಾಗವಹಿಸುವಿಕೆ ತೃಪ್ತಿಕರವಾಗಿದೆ. ಆದ್ದರಿಂದ ಹೆಚ್ಚು ಪ್ರಮಾಣದ ಮತದಾನ ದಾಖಲಾಗಿದೆ. ಸಾಮಾನ್ಯ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂಬ ಕಾರಣದಿಂದ ಅವರು ಚುನಾವಣಾ ರಾಜಕೀಯದಿಂದ ಸಾಮಾನ್ಯ ವರ್ಗದವರು ಸಕ್ರಿಯವಾಗಿ ಭಾಗವಹಿಸಿದ್ದಾರೆ. ಆದ್ದರಿಂದ ಕಳೆದ 2 ಚುನಾವಣೆಗಿಂತ ಈ ಬಾರಿ ಕಡಿಮೆ ಮತದಾನವಾಗಿರುತ್ತದೆ ಎಂದು ಹೇಳಬಹುದು. ಆಶಿಕ್ಷಿತ ಅಥವಾ ಶಿಕ್ಷಿತ ಮತದಾರರು ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದಾರೆ. ಜೊತೆಗೆ ಚುನಾವಣಾ ಕಣದಲ್ಲಿಯೂ ಸಹ ಪೈಪೋಟಿ ಕಂಡುಬಂದು ಕಾಂಗ್ರೆಸ್‌ನ ಎಸ್.ಹೆಚ್. ಬಸಣ್ಣ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಪಿಎಸ್‌ಪಿಯ ಜಿ. ವೀರಣ್ಣ ಅವರನ್ನು 5,804 ಮತಗಳ ಅಂತರದಿಂದ ಸೋಲಿಸಿ ಜಯ ಗಳಿಸಿದರು. ಹಾಗಾಗಿ ಕಾಂಗ್ರೆಸ್ ಪಕ್ಷವು ಈ ಕ್ಷೇತ್ರದಲ್ಲಿ ಮತ್ತೆ ಗೆಲುವು ಸಾಧಿಸಿತು. ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಮೊರೆ ಹೋಗಿದ್ದರಿಂದ ಕಾಂಗ್ರೆಸ್ ಗೆಲುವು ಸುಲಭವಾಯಿತು. ಆದ್ದರಿಂದ ಈ ಕ್ಷೇತ್ರದಲ್ಲಿ ಪಕ್ಷಾಧಾರಿತ ಮತದಾನ ನಡವಳಿಕೆ ಹೆಚ್ಚು ಕೆಲಸ ಮಾಡಿದೆ ಎಂಬ ತೀರ್ಮಾನಕ್ಕೆ ಬರಬಹುದು.

**ಕೋಷ್ಟಕ –3.24.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1967**

ಒಟ್ಟು ಮತದಾರರು–62,382 ಪುರಸ್ಕೃತಗೊಂಡ ಮತಗಳು–38,849

ಚಲಾವಣೆಯಾದ ಮತಗಳು–41,472 ತಿರಸ್ಕೃತಗೊಂಡ ಮತಗಳು–2623

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎಸ್. ಹೆಚ್. ಬಸಣ್ಣ | ಐಎನ್‌ಸಿ | 20,801 | 53.54 |
| 2 | ಕೆ. ಬಿ. ಒಬಯ್ಯ | ಪಿಎಸ್‌ಪಿ | 17,388 | 44.76 |
| 3 | ಸಿ.ಎಲ್. ರೆಡ್ಡಿ | ಐಎನ್‌ಡಿ | 660 | 1.7 |
| | | **ಒಟ್ಟು** | **38,849** | **100** |

**Source:** Election Commission of India

**Note:** INC-Indian National Congress, PSP-Praja Socialist Party, IND-Independent.

ನಾಲ್ಕನೇ ವಿಧಾನಸಭಾ ಚುನಾವಣೆ ದಿನಾಂಕ 21.02.1967ರಂದು ನಡೆದು ಮೊಳಕಾಲ್ಮೂರು ಕ್ಷೇತ್ರದಲ್ಲಿ ಶೇ. 66.48ರಷ್ಟು ಮತದಾನ ದಾಖಲಾಯಿತು. ಮೂರನೇ ವಿಧಾನಸಭೆಯಲ್ಲಿ ಗೆಲವು ಪಡೆದಿದ್ದ ಎಸ್.ಹೆಚ್. ಬಸಣ್ಣ ಕಾಂಗ್ರೆಸ್ ಪಕ್ಷದಿಂದ ಮತ್ತು ಕೆ.ಬಿ. ಓಬಳೇಶ್ ಅವರು ಮೊದಲ ಬಾರಿಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಸ್ಪರ್ಧೆಯಲ್ಲಿದ್ದರು. ಜೊತೆಗೆ ಸಿ.ಎಲ್. ರೆಡ್ಡಿ ಅವರು ಮೊದಲ ಬಾರಿಗೆ ಸ್ವತಂತ್ರ ಪಕ್ಷದಿಂದ

ಉಮೇದುವಾರರಾಗಿದ್ದರು. ಈ ಚುನಾವಣೆಯು ಹಾಲಿ ಶಾಸಕ ಎಸ್.ಹೆಚ್. ಬಸಣ್ಣ ಮತ್ತು ಕೆ.ಬಿ. ಓಬಳೇಶ್ ಅವರ ನಡುವೆ ನೇರಸ್ಪರ್ಧೆ ಕಂಡುಬಂದು ಅಂತಿಮವಾಗಿ ಎಸ್.ಹೆಚ್. ಬಸಣ್ಣ ಅವರು ಪ್ರತಿಸ್ಪರ್ಧಿ ಕೆ.ಬಿ. ಓಬಳೇಶ್ ಅವರ ವಿರುದ್ಧ 3,413(8.78) ಮತಗಳ ಅಂತರದಿಂದ ಗೆಲುವು ಪಡೆದರು. ಹಾಗಾಗಿ ಎಸ್.ಹೆಚ್. ಬಸಣ್ಣ ಈ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಗೆಲವು ಸಾಧಿಸಿದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಎಸ್.ಹೆಚ್. ಬಸಣ್ಣ ಈ ಬಾರಿಯೂ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ವಿಜಯ ಸಾಧಿಸಿದರು. ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಮೊರೆ ಹೋಗಿದ್ದರಿಂದ ಕಾಂಗ್ರೆಸ್ ಗೆಲುವು ಸುಲಭವಾಯಿತು.

**ಕೋಷ್ಟಕ –3.25.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1972**

ಒಟ್ಟು ಮತದಾರರು–71,709 | ಪುರಸ್ಕೃತಗೊಂಡ ಮತಗಳು–47,221

ಚಲಾವಣೆಯಾದ ಮತಗಳು–48,239 | ತಿರಸ್ಕೃತಗೊಂಡ ಮತಗಳು–1,018

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಪಾಟೇಲ್ ಪಾಪನಾಯಕ | ಐಎನ್‌ಸಿ | 28,038 | 59.38 |
| 2 | ಹೆಚ್.ಸಿ. ಬೋರಯ್ಯ | ಎನ್‌ಸಿಓ | 19,183 | 40.62 |
| | | ಒಟ್ಟು | **47,221** | **100** |

**Source:** Election Commission of India

**Note:** INC-Indian National Congress, NCO–Indian National Congress (Organization).

ಐದನೇ ವಿಧಾನಸಭಾ ಚುನಾವಣೆ ಮೊಳಕಾಲ್ಮೂರು ಕ್ಷೇತ್ರದಲ್ಲಿ ದಿನಾಂಕ 05.03.1972ರಂದು ನಡೆದು ಶೇ. 67.27ರಷ್ಟು ಮತದಾನ ದಾಖಲಾಯಿತು. ನಾಲ್ಕನೇ ವಿಧಾನಸಭೆಗಿಂತ ಶೇ.00.79ರಷ್ಟು ಮತದಾನ ಈ ಬಾರಿ ಚುನಾವಣೆಯಲ್ಲಿ ಹೆಚ್ಚಾಗಿದೆ. ಚುನಾವಣೆ ಸ್ಪರ್ಧೆಯಲ್ಲಿ ಹೊಸದಾಗಿ ಪಾಟೇಲ್ ಪಾಪನಾಯಕ ಮತ್ತು ಹೆಚ್.ಸಿ. ಬೋರಯ್ಯ ಅವರು ಮೊದಲ ಬಾರಿಗೆ ಸ್ಪರ್ಧೆಯಲ್ಲಿದ್ದರು. 1967ರಲ್ಲಿ ಕಾಂಗ್ರೆಸ್ ವಿಭಜನೆಯು ಈ ಕ್ಷೇತ್ರದ ಚುನಾವಣಾ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಹಾಗಾಗಿ ಪಾಟೇಲ್ ಪಾಪನಾಯಕ ಅವರು ಇಂದಿರಾ ನೇತೃತ್ವದ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡು ಆ ಪಕ್ಷವನ್ನು ಪ್ರತಿನಿಧಿಸಿದರು. ಹೆಚ್.ಸಿ. ಬೋರಯ್ಯ ಅವರು ನಿಜಲಿಂಗಪ್ಪ ಬಣದೊಂದಿಗೆ ಗುರುತಿಸಿಕೊಂಡು ಎನ್.ಸಿ.ಓ. ಪಕ್ಷವನ್ನು ಪ್ರತಿನಿಧಿಸಿದರು. ಈ ಬಾರಿಯ ಚುನಾಣೆಯಲ್ಲಿ ಪಾಟೇಲ್ ಪಾಪನಾಯಕ ಮತ್ತು ಹೆಚ್.ಸಿ. ಬೋರಯ್ಯ ನಡುವೆ ನೇರಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಪಾಟೇಲ್ ಪಾಪನಾಯಕ ಅವರು ತಮ್ಮ ಪ್ರತಿಸ್ಪರ್ಧಿ ಹೆಚ್.ಸಿ. ಬೋರಯ್ಯರವರನ್ನು 8,855(18.76) ಮತಗಳ

ಅಂತರದಿಂದ ಗೆಲುವನ್ನು ಸಾಧಿಸಿದರು. ರಾಜ್ಯ ರಾಜಕೀಯದಲ್ಲಿ ಸ್ವತಂತ್ರ ಪಕ್ಷದ ವರ್ಚಸ್ಸು ಕಡಿಮೆಯಾಗಿದ್ದರಿಂದ ಈ ಚುಣಾವಣೆಯಲ್ಲಿ ಸ್ವತಂತ್ರ ಪಕ್ಷಕ್ಕೆ ಮಹತ್ವ ಕೊಡಲಿಲ್ಲ. ಪಾಟೀಲ್ ಪಾಪನಾಯಕ ಅವರ ಗೆಲುವನ್ನು ಅವಲೋಕಿಸಿದಾಗ ಜನ ಭಾಗಶಃ ಇಂದಿರಾ ಕಾಂಗ್ರೆಸ್‌ನ ವರ್ಚಸ್ಸು ಈ ಚುನಾವಣೆಯಲ್ಲಿ ಹೆಚ್ಚು ಕೆಲಸ ಮಾಡಿದೆ ಎಂದು ತಿಳಿಯುತ್ತದೆ. ಹಾಗಾಗಿ ಹೆಚ್.ಸಿ. ಬೋರಯ್ಯ ಅವರ ಸೋಲು ಗಮನಿಸಿದಾಗ ಅವರಿಗೆ ಸಂದಿರುವ ಮತಗಳು ವ್ಯಕ್ತಿತ್ವಕ್ಕೆ ಸಿಕ್ಕಿದ ಮತಗಳು. ಅವರ ಪಕ್ಷದ ವರ್ಚಸ್ಸು ಕಡಿಮೆಯಾದ್ದರಿಂದ ಅವರಿಗೆ ಸೋಲುಂಟಾಯಿತು ಎಂದು ಹೇಳಬಹುದು.

**ಕೋಷ್ಟಕ –3.26.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1978**

ಒಟ್ಟು ಮತದಾರರು–79,751 ಪುರಸ್ಕೃತಗೊಂಡ ಮತಗಳು–59,994

ಚಲಾವಣೆಯಾದ ಮತಗಳು–61,389 ತಿರಸ್ಕೃತಗೊಂಡ ಮತಗಳು–1,395

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಪಾಟೇಲ್ ಪಾಪನಾಯಕ | ಐಎನ್‌ಸಿ(ಐ) | 30,316 | 50.53 |
| 2 | ಹೆಚ್. ಸಿ. ಬೋರಯ್ಯ | ಜೆಎನ್‌ಪಿ | 27,075 | 45.13 |
| 3 | ಪುಂಡರೀಕ್ಷಪ್ಪ | ಐಎನ್‌ಸಿ | 2,603 | 4.34 |
| | | **ಒಟ್ಟು** | **59,994** | **100** |

**Source:** Election Commission of India

**Note:** INC(I)-Indian National Congress (Indian), JNP-Janata Party, INC-Indian National Congress.

ಮೊಳಕಾಲ್ಮೂರು ಕ್ಷೇತ್ರದಲ್ಲಿ 6ನೇ ವಿಧಾನಸಭಾ ಚುನಾವಣೆಯು ದಿನಾಂಕ 25.02.1978ರಂದು 117 ಮತಕೇಂದ್ರಗಳಲ್ಲಿ ನಡೆಯಿತು. ಮೊಳಕಾಲ್ಮೂರು ಕ್ಷೇತ್ರದ ಇತಿಹಾಸದಲ್ಲಿ ಮೊದಲ ಬಾರಿಗೆ ಶೇ. 76.98ರಷ್ಟು ಮತದಾನ ಈ ಚುನಾವಣೆಯಲ್ಲಿ ದಾಖಲಾಯಿತು. ಸಾಮಾನ್ಯಕ್ಷೇತ್ರದ ಚುನಾವಣಾ ರಾಜಕೀಯದಲ್ಲಿ ಸಾಮಾನ್ಯವರ್ಗದ ಮತದಾರರು ಆಸಕ್ತಿದಾಯಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಈ ಕ್ಷೇತ್ರದಲ್ಲಿ ಎಲ್ಲರಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವಿರುವುದರಿಂದ ಯಾವ ಕೋಮಿನವರು ಬೇಕಾದರೂ ಚುನಾಯಿತರಾಗಲು ಅವಕಾಶವಿರುವುದರಿಂದ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರು ಸಕ್ರಿಯ ಭಾಗವಹಿಸುವಿಕೆ ಫಲವಾಗಿ ಹೆಚ್ಚಿನ ಪ್ರಮಾಣದ ಮತದಾನ ಈ ಬಾರಿ ದಾಖಲಾಗಿದೆ.

ಚುನಾವಣಾ ಕಣದಲ್ಲಿ ಹಾಲಿ ಶಾಸಕ ಪಾಟೇಲ್ ಪಾಪನಾಯಕ ಅವರು ಇಂದಿರಾ ಕಾಂಗ್ರೆಸ್ ಪಕ್ಷದಿಂದ ಹಾಗೂ ಹೆಚ್.ಸಿ. ಬೋರಯ್ಯ ಅವರು ಜನತಾಪಕ್ಷದಿಂದ ಮತ್ತು

ಪುಂಡರೀಕ್ಷಪ್ಪ ಅವರು ಪಕ್ಷೇತರ ಸ್ಪರ್ಧೆಯಲ್ಲಿದ್ದರು. ಪಾಟೀಲ್ ಪಾಪನಾಯಕ ಮತ್ತು ಹೆಚ್.ಸಿ. ಬೋರಯ್ಯ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಹೆಚ್.ಸಿ. ಬೋರಯ್ಯ ಅವರನ್ನು 3,241(5.44) ಮತಗಳ ಅಂತರದಿಂದ ಪಾಟೀಲ್ ಪಾಪನಾಯಕ ಅವರು ಸೋಲಿಸಿದರು. ಇದರಿಂದ ಜಯಪ್ರಕಾಶ್ ನಾರಾಯಣ ಅವರ ಜನತಾಪಕ್ಷ ಈ ಕ್ಷೇತ್ರದಲ್ಲಿ ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಆಡಳಿತಾರೂಢ ಕಾಂಗ್ರೆಸ್ ಮೇಲೆ ಮತದಾರನ ಒಲವು ಈ ಚುನಾವಣೆಯಲ್ಲಿಯೂ ವ್ಯಕ್ತವಾಗಿದೆ. 1977ರ ಕಾಂಗ್ರೆಸ್ ವಿಭಜನೆಯು ಸಹ ಕ್ಷೇತ್ರದ ಚುನಾವಣೆ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಈ ಚುನಾವಣೆಯಲ್ಲಿಯೂ ಮತದಾರ ಭಾಗಶಃ ಪಕ್ಷ ಮತ್ತು ವ್ಯಕ್ತಿ ಆಧಾರಿತ ಮತದಾನದಿಂದಾಗಿ ಇಂದಿರಾ ಕಾಂಗ್ರೆಸ್‌ನ ಪಾಟೀಲ್ ಪಾಪನಾಯಕ ಗೆಲುವು ಸಾಧಿಸಿದ್ದಾರೆ.

**ಕೋಷ್ಟಕ –3.27.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1983**

ಒಟ್ಟು ಮತದಾರರು–87,496 ಪುರಸ್ಕೃತಗೊಂಡ ಮತಗಳು–55,061

ಚಲಾವಣೆಯಾದ ಮತಗಳು–56,388 ತಿರಸ್ಕೃತಗೊಂಡ ಮತಗಳು–1,327

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಜಿ. ನಾಯಕ್ | ಐಎನ್‌ಸಿ | 27,659 | 50.23 |
| 2 | ಬಿ. ಎಂ. ತಿಪ್ಪೇಸ್ವಾಮಿ | ಜೆಎನ್‌ಪಿ | 19,220 | 34.91 |
| 3 | ರಾಜಣ್ಣ | ಐಎನ್‌ಡಿ | 7,503 | 13.63 |
| 4 | ಭಾಗೀರಥಿ ನಾಯಕ್ | ಐಎನ್‌ಡಿ | 527 | 0.96 |
| 5 | ಗುರುಬಸಪ್ಪ | ಐಎನ್‌ಡಿ | 152 | 0.28 |
| | | ಒಟ್ಟು | **55,061** | **100** |

**Source:** Election Commission of India

**Note:** INC-Indian National Congress, JNP-Janata Party, IND-Independent.

ಏಳನೇ ವಿಧಾನಸಭೆ ಚುನಾವಣೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 01.05.1983ರಂದು ಚುನಾವಣೆಯು 114 ಮತದಾನ ಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 767 ಮತದಾರರಿದ್ದರು. ಕ್ಷೇತ್ರದಲ್ಲಿ ಶೇ. 64.45ರಷ್ಟು ಮತದಾನ ದಾಖಲಾಯಿತು. ಹಿಂದಿನ ಚುನಾವಣೆಗಿಂತ ಈ ಬಾರಿ ಚುನಾವಣೆಯಲ್ಲಿ ಸರಾಸರಿ ಶೇ. 12.53ರಷ್ಟು ಕಡಿಮೆ ಮತದಾನವಾಗಿರುತ್ತದೆ.

ಮೊಳಕಾಲ್ಮೂರು ಚುನಾವಣೆಯ ಇತಿಹಾಸದಲ್ಲಿ ಮೊದಲ ಬಾರಿಗೆ 5 ಅಭ್ಯರ್ಥಿಗಳು ಸ್ಪರ್ಧೆ ಮಾಡಿರುವುದನ್ನು ಗಮನಿಸಬಹುದು. ಚುನಾವಣಾ ಕಣದಲ್ಲಿರುವ 5

ಆಕಾಂಕ್ಷಿಗಳು ಮೊದಲ ಬಾರಿಗೆ ಚುನಾವಣಾ ರಾಜಕೀಯಕ್ಕೆ ಬಂದವರು. ಕಾಂಗ್ರೆಸ್ ಪಕ್ಷದ ಎನ್.ಜಿ. ನಾಯಕ್ ಮತ್ತು ಜನತಾಪಕ್ಷದ ಬಿ.ಎಮ್. ತಿಪ್ಪೇಸ್ವಾಮಿ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟಿತು. ಅಂತಿಮವಾಗಿ ಎನ್.ಜಿ. ನಾಯಕ್ ಅವರು ಬಿ.ಎಮ್. ತಿಪ್ಪೇಸ್ವಾಮಿ ಅವರನ್ನು 8,439(15.32) ಮತಗಳ ಅಂತರದಿಂದ ಸೋಲಿಸಿ ರಾಜಕೀಯ ಜೀವನ ಪ್ರವೇಶಿಸಿದರು. ಹಾಗಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಗೆಲುವು ದಾಖಲಿಸಿತು.

ರಾಜ್ಯದ ಎಲ್ಲೆಡೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕಾರ್ಯವೈಖರಿಯಿಂದ ಬೇಸರಗೊಂಡಿದ್ದ ಮತದಾರರು ಪರ್ಯಾಯವಾಗಿ ರಾಜ್ಯಕ್ಕೆ ಉತ್ತಮ ಆಡಳಿತ ನೀಡಲು ಜನತಾಪಕ್ಷಕ್ಕೆ ಹೆಚ್ಚಿನ ಒಲವು ತೋರಿ ಪಕ್ಷದ ಗೆಲುವಿಗೆ ಸಾಕ್ಷಿಯಾದರು. ಇಲ್ಲಿಯ ಮತದಾರರು ರಾಜ್ಯದ ರಾಜಕೀಯದ ಆಗು–ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೆಚ್.ಸಿ. ಶಿವಶಂಕರಪ್ಪ ಅವರಿಗೆ ಮತ ನೀಡಿದರು ಎಂಬುದು ಅವರ ಗೆಲುವಿನ ಮೊದಲ ಕಾರಣವಾದರೆ ರಾಜ್ಯ ದಲಿತ ಸಂಘರ್ಷ ಸಮಿತಿ ಜನತಾಪಕ್ಷಕ್ಕೆ ಬೆಂಬಲ ನೀಡಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿ ಜನತಾಪಕ್ಷದ ಪರವಾಗಿ ಮತ ಯಾಚನೆ ಮಾಡಿ ದಲಿತ ಮತದಾರರನ್ನು ಪಕ್ಷದ ಕಡೆಗೆ ಸೆಳೆಯುವಲ್ಲಿ ಯಶಸ್ವಿ ಸಾಧಿಸಿತು. ಆದ್ದರಿಂದ ಜನತಾಪಕ್ಷದ ಪ್ರತಿನಿಧಿ ಹೆಚ್.ಸಿ. ಶಿವಶಂಕರಪ್ಪ ಅವರ ಗೆಲುವಿನ ದಾರಿ ಸುಲಭವಾಯಿತು ಎಂದು ಹೇಳಬಹುದು.

**ಕೋಷ್ಟಕ –3.28.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1985**

ಒಟ್ಟು ಮತದಾರರು–93,987 ಪುರಸ್ಕೃತಗೊಂಡ ಮತಗಳು–59,143

ಚಲಾವಣೆಯಾದ ಮತಗಳು–60,033 ತಿರಸ್ಕೃತಗೊಂಡ ಮತಗಳು–890

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಪೂರ್ಣ ಮುತ್ತಪ್ಪ | ಜೆಎನ್‌ಪಿ | 30,022 | 50.76 |
| 2 | ಎನ್.ಜಿ. ನಾಯಕ್ | ಐಎನ್‌ಸಿ | 29,121 | 49.24 |
| | | **ಒಟ್ಟು** | **59,143** | **100** |

**Source:** Election Commission of India

**Note:** JNP–Janata Party, INC-Indian National Congress.

ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್‌ಯೇತರ ಜನತಾ ಸಂಮಿಶ್ರ ಸರ್ಕಾರ ಆಂತರಿಕ ಭಿನ್ನಾಭಿಪ್ರಾಯಗಳಿಂದ ಅವಧಿ ಪೂರ್ಣಗೊಳಿಸಲಿಲ್ಲ. ಆದ್ದರಿಂದ ರಾಜ್ಯದ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯಿತು.

ರಾಜ್ಯದ 8ನೇ ವಿಧಾನಸಭಾ ಚುನಾವಣೆ ಮೊಳಕಾಲ್ಮೂರು ಕ್ಷೇತ್ರದಲ್ಲಿ ದಿನಾಂಕ 03.05.1985ರಂದು 135 ಮತಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಪ್ರತಿ ಮತಕೇಂದ್ರ 696 ಮತದಾರರನ್ನು ಹೊಂದಿತ್ತು. 47,632 ಪುರುಷ ಹಾಗೂ 46,355 ಮಹಿಳೆಯರು ಮತದಾನದ ಹಕ್ಕನ್ನು ಹೊಂದಿದ್ದರು. ಆದರೆ ಚಲಾವಣೆಯಾದ ಮತಗಳಲ್ಲಿ 33,072 ಪುರುಷರು ಮತ್ತು 26,961 ಮಹಿಳೆಯರು ತಮ್ಮ ಹಕ್ಕನ್ನು ಚಲಾಯಿಸಿದರು. ಹಾಗಾಗಿ ಈ ಚುನಾವಣೆಯಲ್ಲಿ ಶೇ. 63.87ರಷ್ಟು ಮತದಾನ ದಾಖಲಾಯಿತು. 890 ಮತಗಳು ತಿರಸ್ಕೃತಗೊಂಡವು. ಮತ ಎಣಿಕೆಯಲ್ಲಿ 59,143 ಮತಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು.

ರಾಷ್ಟ್ರೀಯ ಪಕ್ಷಗಳ ಇಬ್ಬರು ಪ್ರತಿನಿಧಿಗಳು ಚುನಾವಣಾ ಕಣದಲ್ಲಿದ್ದರು. ಮಾಜಿ ಶಾಸಕ ಎನ್.ಜಿ. ನಾಯಕ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಮತ್ತು ಮೊದಲ ಬಾರಿಗೆ ಸ್ಪರ್ಧಿಸಿದ್ದ ಪುರ್ನ ಮುತ್ತಪ್ಪ ಅವರು ಜನತಾಪಕ್ಷದಿಂದ ಸ್ಪರ್ಧಿಸಿದರು. ರಾಜ್ಯದ ರಾಜಕೀಯ ಪ್ರಭಾವವನ್ನು ಈ ಚುನಾವಣಾ ಫಲಿತಾಂಶದಲ್ಲಿ ಗುರುತಿಸಬಹುದು. 7ನೇ ವಿಧಾನಸಭೆ ಚುನಾವಣಾ ಫಲಿತಾಂಶದಿಂದ ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸೇತರ ಮತ್ತು ಸಂಮಿಶ್ರ ಸರ್ಕಾರ ರಚನೆಯಾಗಲು ಕಾರಣವಾಯಿತು. ಹೊಸದಾಗಿ ರಚನೆಯಾದ ಸಮ್ಮಿಶ್ರ ಸರ್ಕಾರ ತನ್ನ ಅವಧಿಯನ್ನು ಪೂರ್ಣಗೊಳಿಸಲು ಸನ್ನಿವೇಶಗಳು ಪೂರಕವಾಗಿಲ್ಲದೆ ಸರ್ಕಾರ ಬಿದ್ದುಹೋಯಿತು. ಜನತಾಸರ್ಕಾರದ ಪೂರ್ಣ ಅವಧಿಯ ಒಂದೇ ಸರ್ಕಾರದ ಆಡಳಿತ ನೋಡಲು ಮತದಾರರಿಗೆ ಸಾಧ್ಯವಾಗಲಿಲ್ಲ. ಅಲ್ಪ ಅವಧಿಯಲ್ಲಿ ಜನತಾಸರ್ಕಾರ ಕೈಗೊಂಡ ಕಾರ್ಯಕ್ರಮಗಳು 8ನೇ ವಿಧಾನಸಭೆ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿತು. ಚುನಾವಣೆ ಜನತಾಪಕ್ಷ V/S ಕಾಂಗ್ರೆಸ್ ಪಕ್ಷಗಳ ನಡುವೆ ನೇರ ಪೈಪೋಟಿ ಕಂಡುಬಂದರೂ ಫಲಿತಾಂಶ ಮಾತ್ರ ಜನತಾಪಕ್ಷದ ಪರವಿತ್ತು. ಆದ್ದರಿಂದ ಮತದಾರರು ಪುನಃ ಪಕ್ಷ ಆಧಾರಿತವಾಗಿ ಮತ ನೀಡಿದ್ದಾರೆ ಎಂದು ಹೇಳಬಹುದು. ಪುರ್ನ ಮುತ್ತಪ್ಪ ಮತ್ತು ಎನ್.ಜಿ. ನಾಯಕ್ ಅವರ ನಡುವೆ ನೇರಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಎನ್.ಜಿ. ನಾಯಕ್ ಅವರನ್ನು 901(1.52) ಮತಗಳ ಅಂತರದಿಂದ ಪುರ್ನ ಮುತ್ತಪ್ಪ ಅವರು ಸೋಲಿಸಿದರು. ಎರಡನೇ ಬಾರಿ ಗೆಲುವು ಪಡೆದಿದ್ದ ಕಾಂಗ್ರೆಸ್‌ಗೆ ಮತದಾರ ಕಡಿವಾಣ ಹಾಕಿದರು. ಕಾಂಗ್ರೆಸ್ ಪಕ್ಷದಿಂದ ಬೇಸತ್ತು ಮೊಳಕಾಲ್ಮೂರು ಮತದಾರರು ಪರ್ಯಾಯವಾಗಿ ಜನತಾಪಕ್ಷವನ್ನು ಆಯ್ದುಕೊಂಡರು.

**ಕೋಷ್ಟಕ –3.29.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1989**

ಒಟ್ಟು ಮತದಾರರು–1,21,791 ಪುರಸ್ಕೃತಗೊಂಡ ಮತಗಳು–80,218

ಚಲಾವಣೆಯಾದ ಮತಗಳು–84,894 ತಿರಸ್ಕೃತಗೊಂಡ ಮತಗಳು–4,676

| ಕ್ರ. ಸಂ | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಜಿ. ನಾಯಕ್ | ಐಎನ್‌ಸಿ | 40,802 | 50.86 |
| 2 | ಪೂರ್ಣ ಮುತ್ತಪ್ಪ | ಜೆಡಿ | 23,188 | 28.91 |
| 3 | ಎಸ್. ತಿಪ್ಪೇಸ್ವಾಮಿ | ಜೆಎನ್‌ಪಿ(ಜೆಪಿ) | 6,242 | 7.78 |
| 4 | ಈ. ನಾರಾಯಣರೆಡ್ಡಿ | ಕೆಆರ್‌ಎಸ್ | 5,295 | 6.6 |
| 5 | ಪಿ.ಎಂ. ಚಂದ್ರಶೇಖರ್ | ಬಿಜೆಪಿ | 2,784 | 3.47 |
| 6 | ನಾಗೇಂದ್ರಪ್ಪ | ಐಎನ್‌ಡಿ | 1,003 | 1.25 |
| 7 | ಬಿ.ಸಿ. ಬಸವರಾಜ | ಐಎನ್‌ಡಿ | 280 | 0.35 |
| 8 | ಡಿ. ರುದ್ರಪ್ಪ | ಐಎನ್‌ಡಿ | 266 | 0.33 |
| 9 | ಬಿ.ಟಿ. ಚಂದ್ರಶೇಖರ್ | ಐಎನ್‌ಡಿ | 207 | 0.26 |
| 10 | ರುದ್ರಮ್ಮ | ಐಎನ್‌ಡಿ | 151 | 0.19 |
| | | **ಒಟ್ಟು** | **80,218** | **100** |

**Source:** Election Commission of India

**Note:** JNP(JP)-Janata Party (JP), KRS–Karnataka Rajya Ryota Sangha, BJP-Bharathiya Janata Party, IND-Independent.

ರಾಜ್ಯದ 9ನೇ ವಿಧಾನಸಭೆಗೆ ನಡದ ಚುನಾವಣೆ ಮೊಳಕಾಲ್ಮೂರು ಕ್ಷೇತ್ರದಲ್ಲಿ ದಿನಾಂಕ 24.11.1989ರಂದು 161 ಮತಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 756 ಮತದಾರರಿದ್ದರು. ಈ ಚುನಾವಣೆಯಲ್ಲಿ 61,407 ಪುರುಷರು ಹಾಗೂ 60,384 ಮಹಿಳೆಯರು ಸೇರಿ 1,21,791 ಮತದಾರರು ಮತದಾನದ ಹಕ್ಕನ್ನು ಹೊಂದಿದ್ದರು. ಇವರಲ್ಲಿ 46,095 ಪುರುಷರು ಹಾಗೂ 38,799 ಮಹಿಳೆಯರು, ಒಟ್ಟು 84,894 ಜನ ತಮ್ಮ ಹಕ್ಕನ್ನು ಚಲಾಯಿಸಿದರು. ಇದರ ಪರಿಣಾಮವಾಗಿ 69.70ರಷ್ಟು ಮತದಾನ ದಾಖಲಾಯಿತು. ಇದರಲ್ಲಿ 4,676 ಮತಗಳು ತಿರಸ್ಕೃತಗೊಂಡು 80,218 ಮತಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಯಿತು.

ಚುನಾವಣಾ ಕಣದಲ್ಲಿ ಒಟ್ಟು 10 ಅಭ್ಯರ್ಥಿಗಳು ಇದ್ದದ್ದು ಕ್ಷೇತ್ರದ ಇತಿಹಾಸದಲ್ಲಿ ಮೊದಲ ಬಾರಿಯಾಗಿದೆ. ಹಾಗಾಗಿ ಐವರು ಪಕ್ಷಗಳನ್ನು ಪ್ರತಿನಿಧಿಸಿದರೆ, ಪಕ್ಷೇತರರಾಗಿ 5 ಜನರು ಸ್ಪರ್ಧಿಸಿದ್ದರು. ಚುನಾವಣೆಯ ಮತ್ತೊಂದು ವಿಶೇಷವೆಂದರೆ 10 ಅಭ್ಯರ್ಥಿಗಳ ಪೈಕಿ ಒಬ್ಬ ಮಹಿಳೆ ಸ್ಪರ್ಧೆಯಲ್ಲಿದ್ದರು. ಅವರೇ ರುದ್ರಮ್ಮ. ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಹಾಲಿ ಶಾಸಕ ಪೂರ್ಣ ಮುತ್ತಪ್ಪ ಹಾಗೂ ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎನ್.ಜಿ. ನಾಯಕ್ ಅವರು ಕಣದಲ್ಲಿದ್ದರು. 8ನೇ ವಿಧಾನಸಭೆ ಚುನಾವಣೆಯಲ್ಲಿ ಜನತಾಪಕ್ಷ ಸ್ಪಷ್ಟವಾದ

ಬಹುಮತ ನೀಡಿ ಸುಭದ್ರ ಸರ್ಕಾರ ಮತ್ತು ಆಡಳಿತ ನೀಡಲು ರಾಜ್ಯದ ಜನತೆ ಕಾಂಗ್ರೆಸ್ ಮೇಲಿನ ಬೇಸರದಿಂದ ನಕಾರಾತ್ಮಕ ಮತದಾನ ಮಾಡಿದ್ದರು. ಆದರೆ ಜನತಾಪಕ್ಷದ ಸದಸ್ಯರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಮೂಡಿ ಸರ್ಕಾರದ ಕೊನೆಯ ಅವಧಿಯಲ್ಲಿ ಜನತಾಪಕ್ಷ ಇಬ್ಭಾಗವಾಯಿತು. ಆದ್ದರಿಂದ ರಾಜ್ಯದ ಎಲ್ಲೆಡೆ ಪರ್ಯಾಯವಾಗಿ ಕಾಂಗ್ರೆಸ್ ಪಕ್ಷದ ಮೊರೆ ಹೋದನು. ಅದೇ ಬೆಳವಣಿಗೆ ಈ ಕ್ಷೇತ್ರದಲ್ಲಿಯೂ ಸಹ ನಡೆಯಿತು. ಹಾಗಾಗಿ ಸ್ಪರ್ಧೆಯಲ್ಲಿ ಕಾಂಗ್ರೆಸ್‌ನ ಎನ್.ಜಿ. ನಾಯಕ್ ಅವರ ಗೆಲುವು ಸುಲಭವಾಯಿತು. ಆದ್ದರಿಂದ ಪುನಃ ಕ್ಷೇತ್ರದ ಜನತೆ ಪಕ್ಷಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ ಎಂದು ಹೇಳಬಹುದು. ಈ ಬಾರಿ ಚುನಾವಣೆಯಲ್ಲಿ ಎನ್.ಜಿ. ನಾಯಕ್ ಅವರು ಹತ್ತಿರದ ಪ್ರತಿಸ್ಪರ್ಧಿ ಪುರ್ನ ಮುತ್ತಪ್ಪ ಅವರನ್ನು 17,614(21.95) ಮತಗಳ ಅಂತರದಿಂದ ಸೋಲಿಸಿದರು. ರಾಜ್ಯ ರಾಜಕೀಯದಲ್ಲಿ ನಡೆದ ಬೆಳವಣಿಗೆಗಳು ಕ್ಷೇತ್ರದ ಮೇಲೆ ಪರಿಣಾಮ ಬೀರಿರುವುದನ್ನು ಈ ಚುನಾವಣೆಯಲ್ಲಿ ಕಾಣಬಹುದು.

ಆಡಳಿತಾರೂಢ ಜನತಾಪಕ್ಷ ಆಂತರಿಕ ಭಿನ್ನಾಭಿಪ್ರಾಯಗಳಿಂದ ಒಡೆದು ಹೋಳಾಗಿ ಜನತಾಪಕ್ಷ(ಜೆ.ಪಿ.) ಮತ್ತು ಜನತಾದಳ ಎಂದು ಇಬ್ಭಾಗವಾಯಿತು. ಹಾಗಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಸ್ಪರ್ಧೆ ಇಲ್ಲದಂತಾಯಿತು. ಇದರ ಪರಿಣಾಮವಾಗಿ ಜನತಾಪಕ್ಷದ ಮತಗಳು ಸ್ಪರ್ಧಿಸಿದ್ದ ಜನತಾಪರಿವಾರದ ಅಭ್ಯರ್ಥಿಗಳ ಮಧ್ಯೆ ಹಂಚಿಕೆಯಾದವು. ಹಾಗಾಗಿ ಕಳೆದ ಬಾರಿ ಶಾಸಕರಾಗಿದ್ದ ಪುರ್ನ ಮುತ್ತಪ್ಪ ಅವರು ಪರಾಭವಗೊಂಡರು. ಕಾಂಗ್ರೆಸ್ ಕಳೆದ ಬಾರಿಯ ಸೋಲಿನ ಸೇಡನ್ನು ತೀರಿಸಿಕೊಂಡಿತು.

**ಕೋಷ್ಟಕ –3.30.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1994**

ಒಟ್ಟು ಮತದಾರರು–1,29,078 ಪುರಸ್ಕೃತಗೊಂಡ ಮತಗಳು–89,547

ಚಲಾವಣೆಯಾದ ಮತಗಳು–91,556 ತಿರಸ್ಕೃತಗೊಂಡ ಮತಗಳು–1,995

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಪೂರ್ಣ ಮುತ್ತಪ್ಪ | ಜೆಡಿ | 35,160 | 39.26 |
| 2 | ಎನ್. ವೈ. ಗೋಪಾಲಕೃಷ್ಣ | ಐಎನ್‌ಡಿ | 29,492 | 32.93 |
| 3 | ಪಿ. ರಾಮಕೃಷ್ಣರೆಡ್ಡಿ | ಬಿಜೆಪಿ | 10,058 | 11.23 |
| 4 | ಎನ್.ಜಿ. ನಾಯಕ್ | ಐಎನ್‌ಡಿ | 7,749 | 8.65 |
| 5 | ಇ. ನಾಗೇಂದ್ರಪ್ಪ | ಕೆಆರ್‌ಆರ್‌ಎಸ್ | 2,741 | 3.06 |
| 6 | ಕೆ. ಶಕುಂತಲಾ ಸ್ವಾಮಿ | ಕೆಸಿಪಿ | 2,518 | 2.81 |
| 7 | ಆರ್. ರಾಜಣ್ಣ | ಎಸ್‌ಪಿ | 852 | 0.95 |
| 8 | ಗೌಡರ ಪಾಪಮ್ಮ | ಐಎನ್‌ಡಿ | 381 | 0.43 |
| 9 | ಬಿ.ಟಿ. ಚಂದ್ರಶೇಖರ | ಐಎನ್‌ಡಿ | 206 | 0.23 |
| 10 | ಶಕುಂತಲಾ ಕೆ. ನಾಯಕ್ | ಐಎನ್‌ಡಿ | 114 | 0.13 |
| 11 | ಎಸ್. ಪಾಲಯ್ಯ | ಐಎನ್‌ಡಿ | 103 | 0.12 |
| 12 | ಗಂಗಮ್ಮ | ಐಎನ್‌ಡಿ | 83 | 0.09 |
| 13 | ಪಿ. ಸುಮಿತ್ರಮ್ಮ | ಐಎನ್‌ಡಿ | 63 | 0.07 |
| 14 | ವಿ. ನಾರಾಯಣ ಶೆಟ್ಟಿ | ಐಎನ್‌ಡಿ | 27 | 0.03 |
| | | **ಒಟ್ಟು** | **89,547** | **100** |

**Source:** Election Commission of India

**Note:** JD-Janata Dal, IND–Independent, BJP-Bharathiya Janata Party, KRRS-Karnataka Rajya Ryota Sangha, KCP–Karnataka Congress Party, SP–Samajwadi Party.

ರಾಜ್ಯದ 10ನೇ ವಿಧಾನಸಭೆಗೆ ಮೊಳಕಾಲ್ಮೂರು ಕ್ಷೇತ್ರದಲ್ಲಿ 26.11.1994ರಂದು ಚುನಾವಣೆ ನಡೆದು ಶೇ. 70.93ರಷ್ಟು ಮತದಾನ ದಾಖಲಾಯಿತು. ಹಿಂದಿನ ಚುನಾವಣೆಗಿಂತ ಶೇ. 1.23ರಷ್ಟು ಹೆಚ್ಚು ಮತದಾನ ಈ ಬಾರಿ ಆಗಿದೆ. ಮತದಾರರಲ್ಲಿ ರಾಜಕೀಯ ಆಸಕ್ತಿ ಹಿಂದಿನ ಚುನಾವಣೆಗಿಂತ ಈ ಚುನಾವಣೆಯಲ್ಲಿ ಹೆಚ್ಚಿದ್ದರಿಂದ ಹೆಚ್ಚು ಮತದಾನ ದಾಖಲಾಗಿದೆ ಎಂಬುದನ್ನು ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಲಾಗಿದೆ. ಈ ಬಾರಿ 14 ಸ್ಪರ್ಧಾಳುಗಳು ಕಣದಲ್ಲಿದ್ದರೂ ಸಹ ರಾಜಕೀಯ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರನ್ನು ಮತಪೆಟ್ಟಿಗೆಯತ್ತ ಕರೆತರುವಲ್ಲಿ ವಿಫಲವಾಗಿದ್ದಾರೆ.

ಚುನಾವಣಾ ಕಣದಲ್ಲಿ ಹಾಲಿ ಶಾಸಕ ಎನ್.ಜಿ. ನಾಯಕ್ ಅವರು ಕಾಂಗ್ರೆಸ್‌ನಿಂದ ಹಾಗೂ ಮಾಜಿ ಶಾಸಕರಾದ ಪೂರ್ಣ ಮುತ್ತಪ್ಪ ಜನತಾದಳದಿಂದ, ಪಿ. ರಾಮಕೃಷ್ಣ ರೆಡ್ಡಿ ಬಿಜೆಪಿಯಿಂದ ಮತ್ತು ಎನ್.ವೈ. ಗೋಪಾಲಕೃಷ್ಣ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದರು. ಚುನಾವಣೆಯು ಮಾಜಿ ಶಾಸಕ ಮತ್ತು ಪಕ್ಷೇತರ ಅಭ್ಯರ್ಥಿ ಎನ್.ವೈ.

ಗೋಪಾಲಕೃಷ್ಣ ಅವರ ನಡುವೆ ನೇರಸ್ಪರ್ಧೆ ಕಂಡುಬಂದು ಅಂತಿಮವಾಗಿ ಜನತಾದಳದ ಪುರ್ನ ಮುತ್ತಪ್ಪ ಅವರು ಹತ್ತಿರದ ಪ್ರತಿಸ್ಪರ್ಧಿ ಎನ್.ವೈ. ಗೋಪಾಲಕೃಷ್ಣ ಅವರನ್ನು 5,668(6.33) ಮತಗಳ ಅಂತರದಿಂದ ಸೋಲಿಸುವ ಮೂಲಕ ಎರಡನೇ ಬಾರಿಗೆ ಗೆಲುವು ಪಡೆದರು. ಈ ಫಲಿತಾಂಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ರಾಜ್ಯ ರಾಜಕೀಯದಲ್ಲಿ ಆದ ಬೆಳವಣಿಗೆಗಳು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿರುವುದು ಸ್ಪಷ್ಟವಾಗುತ್ತದೆ. 1989ರಲ್ಲಿ ವಿಭಜನೆ ಹೊಂದಿದ್ದ ಜನತಾಪಕ್ಷ ಆಂತರಿಕ ವೈಷಮ್ಯಗಳಿಂದ ಹೊರಬಂದು ಜನತಾದಳವಾಗಿ ಚುನಾವಣೆ ಎದುರಿಸಿದ್ದು ರಾಜ್ಯದಲ್ಲಿರುವ ಕ್ಷೇತ್ರಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಫಲಿತಾಂಶವನ್ನು ಬದಲಾಯಿಸಿತು. ಈ ಬಾರಿ ಪಕ್ಷೇತರ ಅಭ್ಯರ್ಥಿ ಎನ್.ವೈ. ಗೋಪಾಲಕೃಷ್ಣ ಅವರ ತೀವ್ರ ಸ್ಪರ್ಧೆಯಿಂದ ಎರಡನೇ ಸ್ಥಾನಕ್ಕೆ ಬಂದಿತು. ಅದೇ ರೀತಿ ಭಾರತೀಯ ಜನತಾಪಕ್ಷದ ಅಭ್ಯರ್ಥಿ ಪಿ. ರಾಮಕೃಷ್ಣ ರೆಡ್ಡಿ ಅವರ ತೀವ್ರ ಸ್ಪರ್ಧೆಯಿಂದ ಮೂರನೇ ಸ್ಥಾನಕ್ಕೆ ಬಂದಿತು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎನ್.ಜಿ. ನಾಯಕ್ ಅವರ ಸ್ಪರ್ಧೆಯಿಂದ ನಾಲ್ಕನೇ ಸ್ಥಾನಕ್ಕೆ ಬಂದಿತು. ಕ್ಷೇತ್ರದ ಮತದಾರರ ನಡವಳಿಕೆ ರಾಜ್ಯ ರಾಜಕೀಯದ ಬೆಳವಣಿಗೆಯನ್ನು ಗಮನಿಸಿ ಪಕ್ಷಕ್ಕೆ ಆದ್ಯತೆ ನೀಡುವ ಜೊತೆಗೆ, ಪಕ್ಷ ಆಧರಿಸಿ ಮತ ನೀಡಿದ್ದಾನೆ ಎಂದು ಹೇಳಬಹುದು.

**ಕೋಷ್ಟಕ –3.31.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮರು ಚುನಾವಣೆ ಫಲಿತಾಂಶ–1997**

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು |
|---|---|---|---|
| 1 | ಎನ್. ವೈ. ಗೋಪಾಲಕೃಷ್ಣ | ಐಎನ್‌ಸಿ | 51,916 |
| 2 | ಪಾಟೀಲ್ ಜಿ. ಎಂ. ತಿಪ್ಪೇಸ್ವಾಮಿ | ಜೆಡಿ | 39,809 |

**Source:** Election Commission of India

**Note:** INC-Indian National Congress, JD-Janata Dal.

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಪುರ್ನ ಮುತ್ತಪ್ಪ ಅವರು ಅಕಾಲಿಕ ಮರಣ ಹೊಂದಿದ್ದರಿಂದ ಆ ಸ್ಥಾನಕ್ಕೆ ಮೇ 31, 1997ರಂದು ಮಧ್ಯಂತರ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಕಾಂಗ್ರೆಸ್‌ನ ಎನ್.ವೈ. ಗೋಪಾಲಕೃಷ್ಣ ಅವರು ಪ್ರತಿಸ್ಪರ್ಧಿ ಪಾಟೀಲ್ ಜಿ.ಎಂ. ತಿಪ್ಪೇಸ್ವಾಮಿ ಅವರನ್ನು 12,107 ಮತಗಳ ಅಂತರದಿಂದ ಸೋಲಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಮೊಳಕಾಲ್ಮೂರಿನ ಮತದಾರರು ಪಕ್ಷ ಆಧಾರಿತವಾಗಿ ಮತ ನೀಡುವುದನ್ನು ಯಥಾವತ್ತಾಗಿ ಮುಂದುವರಿಸಿದ್ದು ಈ ಚುನಾವಣೆಯಲ್ಲಿ ಕಂಡುಬರುತ್ತದೆ.

**ಕೋಷ್ಟಕ –3.32.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–1999**

ಒಟ್ಟು ಮತದಾರರು–1,41,331 ಪುರಸ್ಕೃತಗೊಂಡ ಮತಗಳು–99,175

ಚಲಾವಣೆಯಾದ ಮತಗಳು–1,03,483 ತಿರಸ್ಕೃತಗೊಂಡ ಮತಗಳು–4,308

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರ ು |
|---|---|---|---|---|
| 1 | ಎನ್. ವೈ. ಗೋಪಾಲಕೃಷ್ಣ | ಐಎನ್‌ಸಿ | 44296 | 44.66 |
| 2 | ಪಾಟೀಲ್ ಜಿ. ಎಂ. ತಿಪ್ಪೇಸ್ವಾಮಿ | ಜೆಡಿ(ಯು) | 30,115 | 30.37 |
| 3 | ಪಾಟೀಲ್ ಜಿ. ಪಾಪನಾಯಕ | ಜೆಡಿ(ಎಸ್) | 12,896 | 13 |
| 4 | ಎಂ. ಜಯಣ್ಣ | ಬಿಎಸ್‌ಪಿ | 10,961 | 11.05 |
| 5 | ಡಿ. ಗಂಗಣ್ಣ | ಐಎನ್‌ಡಿ | 907 | 0.91 |
| | ಒಟ್ಟು | | **99,175** | **100** |

**Source:** Election Commission of India.

**Note:** INC-Indian National Congress, JD(U)-Janata Dal (United), JD(S)–Janata Dal (Secular), BSP–Bahujan Samaj Party, IND–Independent.

ರಾಜ್ಯದ 11ನೇ ವಿಧಾನಸಭೆಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 05.09.1999ರಂದು 184 ಮತ ಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ 70,965 ಪುರುಷ ಹಾಗೂ 70,366 ಮಹಿಳಾ ಮತದಾರರಿದ್ದರು. ಈ ಪೈಕಿ 55,308 ಪುರುಷ ಹಾಗೂ 48175 ಮಹಿಳೆಯರು ಮಾತ್ರ ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದರು. ಹಾಗಾಗಿ ಈ ಕ್ಷೇತ್ರದಲ್ಲಿ ಶೇ. 73.22 ಮತದಾನ ದಾಖಲಾಯಿತು. ಈ ಪೈಕಿ 4,262 ಮತಗಳು ತಿರಸ್ಕೃತಗೊಂಡಿದ್ದರಿಂದ 1,03,483 ಮತಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಯಿತು. ಮತ ಎಣಿಕೆ ಕಾರ್ಯವು ದಿನಾಂಕ 06.09.1999ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ ನಾಲ್ವರು ರಾಜಕೀಯ ಪಕ್ಷಗಳಿಂದ ಒಬ್ಬರು ಪಕ್ಷೇತರರಾಗಿ ಸ್ಪರ್ಧಿಸಿದ್ದರು. 1997ರ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದ ಎನ್.ವೈ. ಗೋಪಾಲಕೃಷ್ಣ ಅವರು 1999ರ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದರು. ಪಾಟೀಲ್ ಜಿ.ಎಮ್. ತಿಪ್ಪೇಸ್ವಾಮಿ ಅವರು ಜನತಾದಳ ಇಬ್ಭಾಗವಾಗಿದ್ದರಿಂದ ಸಂಯುಕ್ತ ಜನತಾದಳದಲ್ಲಿ ಗುರುತಿಸಿಕೊಂಡು ಆ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ಅದೇ ರೀತಿ ಪಾಟೇಲ್ ಜಿ. ಪಾಪನಾಯಕ ಅವರು ಜನತಾದಳ(ಜಾತ್ಯತೀತ) ಪಕ್ಷದಿಂದ ಸ್ಪರ್ಧಿಸಿದ್ದರೆ, ಎಂ. ಜಯಣ್ಣ ಅವರು ಬಿ.ಎಸ್.ಪಿ.ಯಿಂದ ಹಾಗೂ ಡಿ. ಗಂಗಣ್ಣ ಅವರು ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಕಾಂಗ್ರೆಸ್, ಜೆ.ಡಿ(ಯು), ಜೆ.ಡಿ(ಎಸ್) ಹಾಗೂ

ಬಿ.ಎಸ್.ಪಿ.ಗಳ ನಡುವೆ ಚತುರ್ಥ ಸ್ಪರ್ಧೆ ಸೃಷ್ಟಿಯಾಗಿತ್ತು. ಕೊನೆಗೆ ಎನ್.ವೈ. ಗೋಪಾಲಕೃಷ್ಣ ಅವರು ತಮ್ಮ ನಾಯಕತ್ವದ ವೈಯಕ್ತಿಕ ವರ್ಚಸ್ಸು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಸಂಯುಕ್ತ ಜನತಾದಳದ ಪಾಟೇಲ್ ಜಿ.ಎಮ್. ತಿಪ್ಪೇಸ್ವಾಮಿ ಅವರನ್ನು 14,181(14.29) ಮತಗಳ ಅಂತರದಿಂದ ಸೋಲಿಸುವ ಮೂಲಕ ಎರಡನೇ ಬಾರಿಗೆ ವಿಧಾನಸಭೆಯಲ್ಲಿ ಮೊಳಕಾಲ್ಮೂರನ್ನು ಪ್ರತಿನಿಧಿಸಿದರು. ರಾಜ್ಯದಲ್ಲಿ ಜನತಾದಳ ಇಬ್ಭಾಗವಾಗಿ ಜನತಾದಳ(ಸಂಯುಕ್ತ) ಮತ್ತು ಜನತಾದಳ(ಜಾತ್ಯತೀತ) ಎಂಬ 2 ಪಕ್ಷಗಳಾಯಿತು. ಇದು ಕಾಂಗ್ರೆಸ್‌ನ ಗೆಲುವಿಗೆ ಸಹಾಯಕವಾಯಿತು ಎಂದು ಹೇಳಬಹುದು.

ಮೊಳಕಾಲ್ಮೂರು ಮತದಾರ ಪಕ್ಷಕ್ಕೆ ಮಣೆ ಹಾಕಿ ಮತ ನೀಡಿದ್ದಾನೆ. ಹಾಗಾಗಿ ಮತದಾರರ ವರ್ತನೆ ಪಕ್ಷ ಆಧಾರಿತವಾಗಿತ್ತು ಎಂಬುದು ಈ ಚುನಾವಣೆಯಲ್ಲಿ ಸಾಬೀತಾಗಿದೆ.

**ಕೋಷ್ಟಕ –3.33.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2004**

ಒಟ್ಟು ಮತದಾರರು–1,61,671 ಪುರಸ್ಕೃತಗೊಂಡ ಮತಗಳು–1,13,963

ಚಲಾವಣೆಯಾದ ಮತಗಳು–1,14,091 ತಿರಸ್ಕೃತಗೊಂಡ ಮತಗಳು–128

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್. ವೈ. ಗೋಪಾಲಕೃಷ್ಣ | ಐಎನ್‌ಸಿ | 33,592 | 67184% |
| 2 | ಪಾಟೇಲ್ ಜಿ.ಎಂ. ತಿಪ್ಪೇಸ್ವಾಮಿ | ಜೆಡಿ(ಯು) | 27,155 | 54310% |
| 3 | ನಾಗರೆಡ್ಡಿ | ಜೆಪಿ | 23,982 | 47964% |
| 4 | ಎಂ. ಜಯಣ್ಣ | ಬಿಎಸ್‌ಪಿ | 16,581 | 33162% |
| 5 | ರಾಮದಾಸ್ ಬಿ. | ಜೆಡಿ(ಎಸ್) | 8,100 | 16200% |
| 6 | ಮಲ್ಲಯ್ಯ ಸ್ವಾಮಿ ಎನ್.ಆರ್. | ಐಎನ್‌ಡಿ | 1,305 | 26100% |
| 7 | ಪರಮೇಶ್ವರಪ್ಪ ಎ.ಟಿ. | ಕೆಎನ್‌ಡಿಪಿ | 1282 | 25640% |
| 8 | ಮೋಹನ್ ಎಂ.ಪಿ. | ಯುಎಸ್‌ವೈಪಿ | 1,026 | 20520% |
| 9 | ಲಕ್ಷ್ಮೀ ಪಿ.ವಿ. | ಪಿಪಿಓಐ | 940 | 18800% |
| | | **ಒಟ್ಟು** | **1,13,963** | **100** |

**Source:** Election Commission of India

**Note:** INC-Indian National Congress, JD(U)-Janata Dal (United), JP–Janata Party, BSP-Bahujan Samaj Party, JD(S)-Janata Dal (Secular), IND–Independent, KNDP-Kannada Nadu Party, USYP–Urs Samyuktha Party, PPOI–Pyramid party of India.

ರಾಜ್ಯದ 12ನೇ ವಿಧಾನಸಭೆಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ 20.04.2004ರಂದು 164 ಮತಕೇಂದ್ರಗಳಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ 82,221 ಪುರುಷ ಹಾಗೂ 80,450 ಮಹಿಳಾ ಮತದಾರರಿದ್ದರು. ಈ ಪೈಕಿ 59,688

ಪುರುಷ ಹಾಗೂ 54,141 ಮಹಿಳೆಯರು ಮಾತ್ರ ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದರು. ಹಾಗಾಗಿ ಈ ಕ್ಷೇತ್ರದಲ್ಲಿ ಶೇ. 70.57 ಮತದಾನ ದಾಖಲಾಯಿತು. ಈ ಪೈಕಿ 128 ಮತಗಳು ತಿರಸ್ಕೃತಗೊಂಡಿದ್ದರಿಂದ 1,14,091 ಮತಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಯಿತು. ಮತ ಎಣಿಕೆ ಕಾರ್ಯವು ದಿನಾಂಕ 13.05.2004ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಕ್ಷೇತ್ರದ ಚುನಾವಣೆ ಇತಿಹಾಸದಲ್ಲಿ ಮೊದಲ ಬಾರಿಗೆ 8 ರಾಜಕೀಯ ಪಕ್ಷಗಳು ತಮ್ಮ ಉಮೇದುದಾರರನ್ನು ಕಣಕ್ಕಿಳಿಸಿದವು. ಇದರ ಜೊತೆಗೆ ಒಬ್ಬ ಪಕ್ಷೇತರ ಅಭ್ಯರ್ಥಿ ಕಣದಲ್ಲಿದ್ದರು. ಕಳೆದ ಚುನಾವಣೆಯಲ್ಲಿ ಏರ್ಪಟ್ಟ ಚತುರ್ಥ ಸ್ಪರ್ಧೆ ಅದೇ 4 ಪಕ್ಷಗಳ ಆ ನಾಲ್ವರ ನಡುವೆ ಮರುಕಳಿಸಿತು. ಈ ಚುನಾವಣೆಯಲ್ಲಿ ಜನತಾದಳ(ಸಂಯುಕ್ತ) ಪಕ್ಷದ ಪಾಟೀಲ್ ಜಿ.ಎಮ್. ತಿಪ್ಪೇಸ್ವಾಮಿ, ಜನತಾಪಕ್ಷದ ನಾಗರೆಡ್ಡಿ, ಹಾಗೂ ಬಿ.ಎಸ್.ಪಿ.ಯ ಎಂ. ಜಯಣ್ಣ ಅವರ ನಡುವೆ ಮತಗಳು ಹಂಚಿಕೆಯಾಗಿದ್ದು ಕಾಂಗ್ರೆಸ್‌ನ ಎನ್.ವೈ. ಗೋಪಾಲಕೃಷ್ಣ ಅವರ ಗೆಲುವಿಗೆ ವರದಾನವಾಯಿತು ಎನ್ನಬಹುದು. ಎನ್.ವೈ. ಗೋಪಾಲಕೃಷ್ಣ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಪಾಟೀಲ್ ಜಿ.ಎಂ. ತಿಪ್ಪೇಸ್ವಾಮಿ ಅವರನ್ನು 6,437(5.56) ಮತಗಳ ಅಂತರದಿಂದ ಸೋಲಿಸಿ ಹ್ಯಾಟ್ರಿಕ್ ಗೆಲುವನ್ನು ಪಡದು ಮತ್ತೆ ವಿಧಾನಸಭೆ ಪ್ರವೇಶಿಸಿದರು.

**ಕೋಷ್ಟಕ –3.34.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2008**

ಒಟ್ಟು ಮತದಾರರು–1,92,601 ಪುರಸ್ಕೃತಗೊಂಡ ಮತಗಳು–1,38,495

ಚಲಾವಣೆಯಾದ ಮತಗಳು–1,38,510 ತಿರಸ್ಕೃತಗೊಂಡ ಮತಗಳು–15

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎನ್. ವೈ. ಗೋಪಾಲಕೃಷ್ಣ | ಐಎನ್‌ಸಿ | 51,402 | 37.11 |
| 2 | ಎಸ್. ತಿಪ್ಪೇಸ್ವಾಮಿ | ಬಿಜೆಪಿ | 46,326 | 33.45 |
| 3 | ಪಾಟೇಲ್ ಜಿ. ಎಂ. ತಿಪ್ಪೇಸ್ವಾಮಿ | ಜೆಡಿ(ಎಸ್) | 27,774 | 20.05 |
| 4 | ಸಣ್ಣ ಮಾರಣ್ಣ | ಐಎನ್‌ಡಿ | 2,938 | 2.12 |
| 5 | ಪಾಟೇಲ್ ಜಿ. ಪಾಪಣ್ಣನಾಯ್ಕ | ಸಿಪಿಐ | 2,732 | 1.97 |
| 6 | ಡಾ. ಎನ್. ಪಿ. ವೆಂಕಟೇಶ್ | ಬಿಎಸ್‌ಪಿ | 2,063 | 1,49 |
| 7 | ಪಿ. ಶಿವಣ್ಣ | ಎಸ್‌ಯುಪಿ | 1,160 | 0.84 |
| 8 | ಎನ್.ಆರ್. ಮಲ್ಲಯ್ಯ ಸ್ವಾಮಿ | ಐಎನ್‌ಡಿ | 911 | 0.66 |
| 9 | ಡಿ. ಮಹೇಶ್ ಕುಮಾರ್ | ಐಎನ್‌ಡಿ | 892 | 0.64 |
| 10 | ಎನ್. ಬೋರೇಗೌಡ | ಐಎನ್‌ಡಿ | 643 | 0.46 |
| 11 | ಎಸ್. ಚಂದ್ರಣ್ಣ | ಐಎನ್‌ಡಿ | 616 | 0.44 |
| 12 | ವೈ. ಬಿ. ಚಂದ್ರಶೇಖರ್ | ಐಎನ್‌ಡಿ | 523 | 0.38 |
| 13 | ಕೆ. ಎಸ್. ಪಾಪನಾಯಕ | ಯುಪಿ | 515 | 0.37 |
| | | **ಒಟ್ಟು** | **1,38,495** | **100** |

**Source:** Election Commission of India.

**Note:** INC-Indian National Congress, BJP-Bharathiya Janata Party, JD(S)-Janata Dal (Secular) IND–Independent, CPI–Communist Party of India, BSP-Bahujan Samaj Party, SUP–Swarna Yuga Party.

ರಾಜ್ಯದ 13ನೇ ವಿಧಾನಸಭೆಗೆ ಮೊಳಕಾಲ್ಮೂರು ಮೀಸಲುಕ್ಷೇತ್ರದಲ್ಲಿ ದಿನಾಂಕ 16.05.2008ರಂದು 203 ಮತಕೇಂದ್ರಗಳಲ್ಲಿ ನಡೆಯಿತು. ಪ್ರತಿ ಮತಕೇಂದ್ರದಲ್ಲಿ ಸರಾಸರಿ 949 ಮತದಾರರಿದ್ದರು. ಚುನಾವಣೆಯಲ್ಲಿ 96,995 ಪುರುಷ ಹಾಗೂ 95,606 ಮಹಿಳಾ ಮತದಾರರಿದ್ದರು. ಆದರೆ ಈ ಪೈಕಿ 71,932 ಪುರುಷ ಹಾಗೂ 66,387 ಸ್ತ್ರೀಯರು ತಮ್ಮ ಹಕ್ಕು ಚಲಾಯಿಸಿದರು. ಅಂಚೆ ಮತದಾನ 191 ಮತಗಳನ್ನು ಚಲಾಯಿಸಿದರು. ಹಾಗಾಗಿ 1,38,510 ಮತಗಳನ್ನು ಗಣನೆಗೆ ತೆಗೆದುಕೊಂಡರು. ಮತ ಎಣಿಕೆ ಕಾರ್ಯ ದಿನಾಂಕ 25–05–2008ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಅಖಾಡದಲ್ಲಿ 13 ಅಭ್ಯರ್ಥಿಗಳು ಕಣದಲ್ಲಿದ್ದರು. ಇದರಲ್ಲಿ 6 ಅಭ್ಯರ್ಥಿಗಳು ರಾಜಕೀಯ ಪಕ್ಷಗಳಿಂದ ಮತ್ತು ಏಳು ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧೆ

ಮಾಡಿದ್ದರು. ಹಾಲಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಕಾಂಗ್ರೆಸ್‌ನಿಂದ, ಎಸ್. ತಿಪ್ಪೇಸ್ವಾಮಿ ಅವರು ಭಾರತೀಯಜನತಾ ಪಕ್ಷದಿಂದ, ಪಾಟೇಲ್ ಜಿ.ಎಂ. ತಿಪ್ಪೇಸ್ವಾಮಿ ಅವರು ಜೆಡಿ(ಎಸ್)ನಿಂದ, ಪಾಟೇಲ್ ಜಿ. ಪಾಪನಾಯಕ್ ಅವರು ಸಿಪಿಐ ನಿಂದ, ಪಿ. ಶಿವಣ್ಣ ಅವರು ಎಸ್‌ಯುಪಿಯಿಂದ ಹಾಗೂ ಕೆ.ಎಸ್. ಪಾಪನಾಯಕ ಅವರು ಯುಪಿ ಪಕ್ಷದಿಂದ ಸ್ಪರ್ಧಿಸಿದ್ದರು. ಹಾಲಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಕಾಂಗ್ರೆಸ್ಸನ್ನು ಪ್ರತಿನಿಧಿಸಿ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಬಿಜೆಪಿಯ ಎಸ್. ತಿಪ್ಪೇಸ್ವಾಮಿ ಅವರನ್ನು 5,076 ಮತಗಳ ಹಂತರದಿಂದ ಸೋಲಿಸುವ ಮೂಲಕ ನಾಲ್ಕನೇ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದ್ದ ಮತದಾರರು ಈ ಬಾರಿಯೂ ಕಾಂಗ್ರೆಸ್ ಪರ ಮತದಾನ ಮಾಡಿರುವುದನ್ನು ಗಮನಿಸಬಹುದು.

**ಕೋಷ್ಟಕ –3.35.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2013**

ಒಟ್ಟು ಮತದಾರರು–2,07,158 ಪುರಸ್ಕೃತಗೊಂಡ ಮತಗಳು–1,64,413

ಚಲಾವಣೆಯಾದ ಮತಗಳು–1,64,510 ತಿರಸ್ಕೃತಗೊಂಡ ಮತಗಳು–97

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಪ್ರತಿನಿಧಿಸಿದ ಪಕ್ಷ | ಗಳಿಸಿದ ಮತಗಳು | ಶೇಕಡವಾರು |
|---|---|---|---|---|
| 1 | ಎಸ್. ತಿಪ್ಪೇಸ್ವಾಮಿ | ಬಿಎಸ್‌ಆರ್‌ಸಿಪಿ | 76,827 | 46.73 |
| 2 | ಎನ್. ವೈ. ಗೋಪಾಲಕೃಷ್ಣ | ಐಎನ್‌ಸಿ | 69,658 | 42.37 |
| 3 | ಡಾ. ಓಬಣ್ಣ ಪೂಜಾರ್ | ಜೆ.ಡಿ(ಎಸ್) | 4234 | 2.58 |
| 4 | ದಾಸರ ಕೀರ್ತಿ ಕುಮಾರ್ | ಬಿಜೆಪಿ | 3227 | 1.96 |
| 5 | ದ್ರಾಕ್ಷಾಯಣಮ್ಮ | ಕೆಜೆಪಿ | 1832 | 1.11 |
| 6 | ಸಣ್ಣ ಮಾರಣ್ಣ | ಐಎನ್‌ಡಿ | 1536 | 0.93 |
| 7 | ಪಾಟೇಲ್ ಜಿ ಪಾಪಣ್ಣನಾಯಕ | ಸಿ.ಪಿ.ಐ | 1438 | 0.87 |
| 8 | ಹೆಚ್. ರಾಮಣ್ಣ | ಬಿಎಸ್‌ಪಿ | 950 | 0.58 |
| 9 | ಎನ್. ಆರ್. ಮಲ್ಲಯ್ಯ ಸ್ವಾಮಿ | ಐಎನ್‌ಡಿ | 942 | 0.57 |
| 10 | ಹೆಚ್. ತಿಮ್ಮಯ್ಯ | ಐಎನ್‌ಡಿ | 899 | 0.55 |
| 11 | ಡಿ. ಟಿ. ಶ್ರೀನಿವಾಸ ನಾಯಕ | ಐಎನ್‌ಡಿ | 797 | 0.48 |
| 12 | ಜಿ.ಎಸ್ ಬಸಣ್ಣ | ಜೆ.ಡಿ (ಯು) | 557 | 0.34 |
| 13 | ಎಸ್. ಚಂದ್ರಣ್ಣ | ಐಎನ್‌ಡಿ | 542 | 0.33 |
| 14 | ಡಿ. ಬೋರಯ್ಯ | ಐಎನ್‌ಡಿ | 496 | 0.3 |
| 15 | ಡಿ. ದೊಡ್ಡ ಬೋರಯ್ಯ | ಐಎನ್‌ಡಿ | 478 | 0.29 |
| | | **ಒಟ್ಟು** | **1,64,413** | **100** |

**Source:** Election Commission of India

**Note:** BSRCP–Basavara Shramikara Raitara Congress Party, INC-Indian National Congress, JD(S)-Janata Dal (Secular), BJP-Bharathiya Janata Party, KJP–Karnataka Jantha Paksha, CPI–Communist Party of India, BSP - Bahujan Samaj Party, IND–Independent, JD(U) Janata Dal (United).

ರಾಜ್ಯದ 14ನೇ ವಿಧಾನಸಭೆಗೆ ಮೊಳಕಾಲ್ಮೂರು ಮೀಸಲುಕ್ಷೇತ್ರದಲ್ಲಿ ದಿನಾಂಕ 05.05.20013 ರಂದು 265 ಮತಕೇಂದ್ರಗಳಲ್ಲಿ ನಡೆಯಿತು. ಚುನಾವಣೆಯಲ್ಲಿ 1,06,334 ಪುರುಷ ಹಾಗೂ 1,00,824 ಮಹಿಳಾ ಮತದಾರರಿದ್ದರು. ಅಂದರೆ 2,07,158 ಮತದಾರರನ್ನು ಹೊಂದಿತ್ತು ಆದರೆ ಪುರುಷ ಹಾಗೂ ಸ್ತ್ರೀಯರು ಸೇರಿ 1,64,510 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಮತ ಎಣಿಕೆ ಕಾರ್ಯ ದಿನಾಂಕ 25–05–2013ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಕಣದಲ್ಲಿ 15 ಅಭ್ಯರ್ಥಿಗಳು ಇದ್ದದ್ದು ಇತಿಹಾಸದಲ್ಲಿ ಮೊದಲ ಬಾರಿಯಾಗಿದೆ. ಹಾಗಾಗಿ ಎಂಟು ಜನ ಪಕ್ಷಗಳನ್ನು ಪ್ರತಿನಿಧಿಸಿದರೆ, ಪಕ್ಷೇತರರಾಗಿ 7 ಜನರು ಸ್ಪರ್ಧಿಸಿದ್ದರು ಕಾಂಗ್ರೆಸ್ ಪಕ್ಷದಿಂದ ಸತತ 4 ಬಾರಿ ಜಯ ಗಳಿಸಿದ್ದ ಹಾಲಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಈ ಬಾರಿಯೂ ಕಾಂಗ್ರೆಸ್ ನಿಂದ ಸ್ಪರ್ಧೆ ಮಾಡಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಎಸ್. ತಿಪ್ಪೇಸ್ವಾಮಿ ಈ ಬಾರಿ ಬಿಎಸ್ಆರ್ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿದ್ದರು. ಜೆಡಿ(ಎಸ್) ಪಕ್ಷದಿಂದ ಡಾ. ಓಬಣ್ಣ ಪೂಜಾರ್, ಬಿಜೆಪಿಯಿಂದ ದಾಸರ ಕೀರ್ತಿ ಕುಮಾರ್, ಕೆಜೆಪಿಯಿಂದ ದ್ರಾಕ್ಷಾಯಣಮ್ಮ, ಸಿಪಿಐನಿಂದ ಪಾಟೇಲ್ ಜಿ. ಪಾಪಣ್ಣನಾಯಕ ಮತ್ತು ಬಿಎಸ್‌ಪಿಯಿಂದ ಹೆಚ್. ರಾಮಣ್ಣ ಅವರು ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ಬಿಎಸ್ಆರ್ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ನೇರಸ್ಪರ್ಧೆ ಸೃಷ್ಟಿಯಾಯಿತು. ಕೊನೆಗೆ ಎಸ್. ತಿಪ್ಪೇಸ್ವಾಮಿ ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎನ್.ವೈ. ಗೋಪಾಲಕೃಷ್ಣ ಅವರನ್ನು 7,169 (4.36) ಮತಗಳ ಅಂತರದಿಂದ ಸೋಲಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆಯಲ್ಲಿ ಮೊಳಕಾಲ್ಮೂರು ಕ್ಷೇತ್ರವನ್ನು ಪ್ರತಿನಿಧಿಸಿದರು. ರಾಜ್ಯದಲ್ಲಿ ಬಿಜೆಪಿಯಿಂದ ಹೊರಬಂದು ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಕೆಜೆಪಿ ಮತ್ತು ಬಿ. ಶ್ರೀರಾಮುಲು ನೇತೃತ್ವದಲ್ಲಿ ಬಿಎಸ್ಆರ್ ಕಾಂಗ್ರೆಸ್ ಪಕ್ಷಗಳು ಸ್ಥಾಪನೆಯಾದವು. ಈ ಕ್ಷೇತ್ರದಲ್ಲಿ ಬಿ. ಶ್ರೀರಾಮುಲು ಅವರ ವರ್ಚಸ್ಸು ಮತ್ತು ನಾಯಕತ್ವದ ಅಲೆಯಿಂದ ಬಿಎಸ್ಆರ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಸ್. ತಿಪ್ಪೇಸ್ವಾಮಿ ಗೆಲುವು ಪಡೆಯಲು ಸಾಧ್ಯವಾಯಿತು ಎಂದು ಹೇಳಬಹುದು.

ಮೊಳಕಾಲ್ಮೂರು ಮತದಾರ ಪಕ್ಷಕ್ಕೆ ಮಣೆ ಹಾಕದೆ ವ್ಯಕ್ತಿಯ ನಾಯಕತ್ವವನ್ನು ಗುರುತಿಸಿ ಮತ ನೀಡಿದ್ದಾನೆ. ಹಾಗಾಗಿ ಮತದಾರರ ವರ್ತನೆ ವ್ಯಕ್ತಿ ಆಧಾರಿತವಾಗಿತ್ತು ಎಂಬುದು ಈ ಚುನಾವಣೆಯಲ್ಲಿ ಸಾಬೀತಾಗಿದೆ.

**ಕೋಷ್ಟಕ –3.36.**

**ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶ–2018**

ಒಟ್ಟು ಮತದಾರರು–2,31,151 ಪುರಸ್ಕೃತಗೊಂಡ ಮತಗಳು–1,92,549

ಚಲಾವಣೆಯಾದ ಮತಗಳು–1,92,621 ತಿರಸ್ಕೃತಗೊಂಡ ಮತಗಳು–72

| **ಕ್ರ. ಸಂ.** | **ಅಭ್ಯರ್ಥಿಯ ಹೆಸರು** | **ಪ್ರತಿನಿಧಿಸಿದ ಪಕ್ಷ** | **ಗಳಿಸಿದ ಮತಗಳು** | **ಶೇಕಡವಾರ ು** |
|---|---|---|---|---|
| 1 | ಬಿ. ಶ್ರೀ ರಾಮುಲು | ಬಿಜೆಪಿ | 84,018 | 43.63 |
| 2 | ಡಾ. ಬಿ ಯೋಗೇಶ್ ಬಾಬು | ಐಎನ್‌ಸಿ | 41,973 | 21.8 |
| 3 | ಎಸ್. ತಿಪ್ಪೇಸ್ವಾಮಿ | ಐಎನ್‌ಡಿ | 41,152 | 21.37 |
| 4 | ಪಾಟೀಲ್ ಜಿ. ಎಂ. ತಿಪ್ಪೇಸ್ವಾಮಿ | ಜೆಡಿ(ಎಸ್) | 15,262 | 7.93 |
| 5 | ಎಸ್. ಚಂದ್ರಣ್ಣ | ಐಎನ್‌ಡಿ | 3,223 | 1.67 |
| 6 | ಕೆ. ರಾಘವೇಂದ್ರ | ಪಿಪಿಓಐ | 1,427 | 0.74 |
| 7 | ಎಸ್. ಪಿ. ರಾಜು | ಐಎನ್‌ಡಿ | 1366 | 0.71 |
| 8 | ಡಿ. ಹೆಚ್. ಪರಮೇಶ್ವರಪ್ಪ | ಐಎನ್‌ಡಿ | 842 | 0.44 |
| 9 | ಪಿ. ಸುಮಲತಾ | ಎಐಎಮ್‌ಇಪಿ | 799 | 0.41 |
| 10 | ಎಸ್. ಚಂದ್ರಣ್ಣ | ಐಎನ್‌ಡಿ | 725 | 0.38 |
| 11 | ನೋಟಾ | ನೋಟಾ | 1361 | 0.71 |
| | | **ಒಟ್ಟು** | **1,92,549** | **100** |

**Source:** Election Commission of India

**Note:** BJP-Bharathiya Janata Party, INC-Indian National Congress, IND–Independent, JD(S)-Janata Dal (Secular), PPOI-Pyramid Party of India, AIMEP–All India Mahila Empowerment Party, NOTA–None of the Above.

ರಾಜ್ಯದ 15ನೇ ವಿಧಾನಸಭೆಗೆ ಮೊಳಕಾಲ್ಮೂರು ಮೀಸಲುಕ್ಷೇತ್ರದಲ್ಲಿ ದಿನಾಂಕ 12.05.2018ರಂದು 279 ಮತಕೇಂದ್ರಗಳಲ್ಲಿ ನಡೆಯಿತು. ಚುನಾವಣೆಯಲ್ಲಿ 1,17,038 ಪುರುಷ ಹಾಗೂ 1,14,112 ಮಹಿಳಾ ಮತದಾರರಿದ್ದರು. ಅಂದರೆ 2,31,151 ಮತದಾರರನ್ನು ಹೊಂದಿತ್ತು. ಆದರೆ ಪುರುಷ ಹಾಗೂ ಸ್ತ್ರೀಯರು ಸೇರಿ 1,92,621 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಮತ ಎಣಿಕೆ ಕಾರ್ಯ ದಿನಾಂಕ 25–05–2018ರಂದು ನಡೆದು ಅದೇ ದಿನ ಫಲಿತಾಂಶ ಪ್ರಕಟವಾಯಿತು.

ಚುನಾವಣಾ ಕಣದಲ್ಲಿ 10 ಅಭ್ಯರ್ಥಿಗಳಿದ್ದರು. ಹಾಗಾಗಿ ಐವರು ಪಕ್ಷಗಳನ್ನು ಪ್ರತಿನಿಧಿಸಿದ್ದರೆ, ಉಳಿದ ಐವರು ಪಕ್ಷೇತರರಾಗಿ ಪ್ರತಿನಿಧಿಸಿದ್ದರು. ಮಹಿಳಾ ಮತದಾರರು ಹೆಚ್ಚು ಕಡಿಮೆ ಪುರುಷರ ಮತದಾರರಷ್ಟೇ ಇರುವ ಈ ಕ್ಷೇತ್ರದಲ್ಲಿ ಈಗಿರುವ ಶಾಸಕ ತಿಪ್ಪೇಸ್ವಾಮಿ ಅವರು ಬಿಎಸ್‌ಆರ್ ಪಕ್ಷದಿಂದ ಸ್ಪರ್ಧಿಸಿದ್ದರು. ಆದರೆ ಬಿಎಸ್‌ಆರ್ ಪಕ್ಷ ಬಿಜೆಪಿಯಲ್ಲಿ ವಿಲೀನವಾಗಿದ್ದರಿಂದಾಗಿ ಅವರೀಗ ಬಿಜೆಪಿ ಬೆಂಬಲಿತ ಶಾಸಕರಷ್ಟೆ. ಹಾಗಾಗಿ

ಸರಿಯಾದ ಅನುದಾನವಿಲ್ಲದೆ ಕ್ಷೇತ್ರಕ್ಕೆ ಏನನ್ನೂ ಮಾಡಿಲ್ಲ ಎನ್ನಲಾಗುತ್ತಿದೆ. ಇದು ಅರ್ಥವಾಗದ ಜನತೆ ಇವರ ಬಗ್ಗೆ ಕೊಂಚ ಅಸಮಾಧಾನ ಹೊಂದಿದ್ದಾರೆ ಎನ್ನಲಾಗುತ್ತಿದೆ.

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಧುಮುಕಲು ಹಾಲಿ ಜಿಲ್ಲಾ ಪಂಚಾಯತ್ ಸದಸ್ಯ ಡಾ. ಯೋಗೇಶ್ ಬಾಬು ಮತ್ತು ಇದೇ ಕ್ಷೇತ್ರದ ಹಳೇ ಹುಲಿ ಎನ್.ವೈ. ಗೋಪಾಲಕೃಷ್ಣ ಅವರ ನಡುವೆ ಜಿದ್ದಾಜಿದ್ದಿ ಬಿದ್ದು, ಕೊನೆಗೆ ಡಾ. ಯೋಗೇಶ್ ಬಾಬು ಕಾಂಗ್ರೆಸ್ ಟಿಕೆಟ್ ಪಡೆಯಲು ಯಶಸ್ವಿಯಾದರು. ಅದೇ ರೀತಿ ಹಾಲಿ ಶಾಸಕ ಎಸ್. ತಿಪ್ಪೇಸ್ವಾಮಿ ಬಿಜೆಪಿಯಿಂದ ಬಂಡಾಯವೆದ್ದು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದರು. ಭಾರತೀಯ ಜನತಾಪಕ್ಷದಿಂದ ಬಿ. ಶ್ರೀರಾಮುಲು ಸ್ಪರ್ಧಿಸಿದ್ದರು. ಜನತಾದಳ(ಜಾತ್ಯತೀತ) ಪಕ್ಷದಿಂದ ಪಾಟೀಲ್ ಜಿ.ಎಂ. ತಿಪ್ಪೇಸ್ವಾಮಿ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಮೇಲ್ಮುಖವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಹಾಗೂ ಪಕ್ಷೇತರ ಅಭ್ಯರ್ಥಿ ಎಸ್. ತಿಪ್ಪೇಸ್ವಾಮಿ ಅವರ ನಡುವೆ ತ್ರಿಕೋನ ಸ್ಪರ್ಧೆಯಂತೆ ಕಂಡುಬಂದರೂ ಫಲಿತಾಂಶ ಮಾತ್ರ ಏಕಮುಖವಾಗಿತ್ತು. ಬಿ. ಶ್ರೀರಾಮುಲು ಅವರು ತಮ್ಮ ಹತ್ತಿರದ ಪ್ರತಿಸ್ಪರ್ಧಿ ಡಾ. ಯೋಗೇಶ್ ಬಾಬು ಅವರಿಗಿಂತ 42,045(21.83) ಅಧಿಕ ಮತಗಳ ಅಂತರದಿಂದ ಗೆಲುವು ಪಡೆದು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದರು. ಈ ಚುನಾವಣಾ ಫಲಿತಾಂಶದ ಮೇಲೆ ಬಿ. ಶ್ರೀರಾಮುಲು ಅವರ ವೈಯಕ್ತಿಕ ವರ್ಚಸ್ಸು ಮತ್ತು ರಾಜಕೀಯ ನಾಯಕತ್ವ ಮತದಾರರ ಮೇಲೆ ಪರಿಣಾಮ ಬೀರಿ ಬಿಜೆಪಿ ಈ ಕ್ಷೇತ್ರದಲ್ಲಿ ಗೆಲುವನ್ನು ಪಡೆಯಿತು. ಕಾಂಗ್ರೆಸ್‌ನ ಪ್ರತಿನಿಧಿ ಡಾ. ಯೋಗೇಶ್ ಬಾಬು ಮತ್ತು ಪಕ್ಷೇತರ ಅಭ್ಯರ್ಥಿ ಎಸ್. ತಿಪ್ಪೇಸ್ವಾಮಿ ಮತದಾರರನ್ನು ಓಲೈಸುವಲ್ಲಿ ವಿಫಲರಾಗಿ ಎದುರಾಳಿಗೆ ಪೈಪೋಟಿ ನೀಡದೆ ಪರಾಭವಗೊಂಡರು.

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಧುಮುಕಲು ಹಾಲಿ ಜಿಪಂ ಸದಸ್ಯ ಡಾ. ಯೋಗೇಶ್ ಬಾಬು ಪ್ರಯತ್ನಿಸಿದ್ದಾರೆ. ಆದರೆ ಇದೇ ಕ್ಷೇತ್ರದ ಹಳೇ ಹುಲಿ ಎನ್.ವೈ. ಗೋಪಾಲಕೃಷ್ಣ ಅವರು ಈ ಬಾರಿ ತಮ್ಮ ಸ್ವಕ್ಷೇತ್ರಕ್ಕೆ ಮರಳಲು ಇಚ್ಛಿಸಿದ್ದರೂ ಅವರಿಗೆ ಹಿನ್ನಡೆಯಾಯಿತು.

## 3.8. ಮೊಳಕಾಲ್ಮೂರು ಮೀಸಲುಕ್ಷೇತ್ರದ ಮತದಾನ ನಡೆವಳಿಕೆ


**ಕೋಷ್ಟಕ –3.37.**

**ಮತದಾನ ಕುರಿತ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಮತದಾನ ಮಾಡಬೇಕು | 22 | 29.33 | 46 | 26.28 |
| 2 | ಮತದಾನ ಮಾಡಬಾರದು | 0 | 0 | 2 | 1.14 |
| 3 | ನನ್ನ ಹಕ್ಕು | 51 | 68 | 127 | 72.57 |
| 4 | ಏನು ಪ್ರಯೋಜನವಿಲ್ಲ | 2 | 2.66 | 0 | 0 |
| | | **75** | **100** | **75** | **100** |
| | **ಒಟ್ಟು** | **75+175=** | | | **250** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತದಾನ ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಸದರಿ ಕೋಷ್ಟಕದ ಅಂಕಿ ಅಂಶಗಳು ಮತದಾನದ ಬಗೆಗಿನ ಮತದಾರರ ಅಭಿಪ್ರಾಯವನ್ನು ಸೂಚಿಸುತ್ತವೆ. ಮತದಾನ ಮಾಡಬೇಕು ಎನ್ನುವ ಸಕಾರಾತ್ಮಕ ಅಭಿಪ್ರಾಯವನ್ನು ಶೇ.29.33 ಪರಿಶಿಷ್ಟ ಪಂಗಡ ಮತ್ತು ಶೇ.26.28 ಪರಿಶಿಷ್ಟ ಪಂಗಡೇತರ ಮತದಾರರ ಪ್ರತಿಕ್ರಿಯೆ ಆಗಿರುತ್ತದೆ. ಎರಡು ವರ್ಗಗಳ ತೌಲನಿಕ ಅಧ್ಯಯನದಲ್ಲಿ ಪರಿಶಿಷ್ಟ ಪಂಗಡ ವರ್ಗದಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಾಗಿದೆ ಎಂದು ತಿಳಿಯುತ್ತದೆ. ಮತದಾನ ಮಾಡಬಾರದು ಎಂಬ ನಕಾರಾತ್ಮಕ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಶೇ.1.33 ಮತ್ತು ಪರಿಶಿಷ್ಟ ಪಂಗಡೇತರ ಶೇ.1.44 ಮತದಾರರು ಹೊಂದಿದ್ದಾರೆ. ಇಂದಿನ ಚುನಾವಣೆ ಅವಾಂತರಗಳಿಂದ ಬೇಸರಗೊಂಡು ಮತದಾರರು ಈ ತೀರ್ಮಾನಕ್ಕೆ ಬಂದಿದ್ದಾರೆಂದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿರುತ್ತದೆ. ಮತದಾರರು ಪ್ರಶ್ನಾವಳಿಗೆ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ಕೆಲವರು ಮತದಾನ ಕುರಿತಾಗಿ ಭಾವೋದ್ವೇಗಕ್ಕೆ ಒಳಗಾಗಿ ಈ ಉತ್ತರ

ನೀಡಿದರು ಎಂದು ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿದೆ. ಮತದಾನ ಮೌಲ್ಯಯುತ ಮತ್ತು ಅದು ನನ್ನ ಹಕ್ಕು ಎನ್ನುವ ಅಭಿಪ್ರಾಯವನ್ನು ಶೇ.66.66 ಪರಿಶಿಷ್ಟ ಪಂಗಡ ಹಾಗೂ ಶೇ.72 ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಪಡಿಸಿದ್ದಾರೆ. ಇದರಿಂದ ಮತದಾನ ಮೌಲ್ಯಯುತ ಮತ್ತು ಅದು ನನ್ನ ಹಕ್ಕು ಎಂಬ ಸಾಂವಿಧಾನಿಕ ಪ್ರಜ್ಞೆ ಪರಿಶಿಷ್ಟ ಪಂಗಡದವರಿಗಿಂತ ಪರಿಶಿಷ್ಟ ಪಂಗಡೇತರದವರಲ್ಲಿ ಶೇ.5 ಹೆಚ್ಚಾಗಿದೆ. ಕ್ಷೇತ್ರದ ಮತದಾರರಲ್ಲಿ 69ಕ್ಕಿಂತ ಹೆಚ್ಚಿನ ಮತದಾರರು ಮತದಾನ ಕುರಿತು ಜಾಗೃತಿ ಹೊಂದಿದ್ದಾರೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಮತದಾನದಿಂದ ಏನೂ ಪ್ರಯೋಜನವಿಲ್ಲ ಎಂಬ ನಕಾರಾತ್ಮಕ ಪ್ರಕ್ರಿಯೆಯನ್ನು ಪರಿಶಿಷ್ಟ ಪಂಗಡ ವರ್ಗದ ಶೇ.2.66 ಹಾಗೂ ಪರಿಶಿಷ್ಟ ಪಂಗಡೇತರರ ಶೇ.0.57 ಮತದಾರರಲ್ಲಿ ಮಾತ್ರ ವ್ಯಕ್ತವಾಗಿದೆ.

ಒಟ್ಟಾರೆ ಮೊಳಕಾಲ್ಮೂರು ಕ್ಷೇತ್ರದ ಪರಿಶಿಷ್ಟ ಪಂಗಡ ಮತದಾರರಲ್ಲಿ ಮತದಾನ ಜಾಗೃತಿ ಮೂಡಿಸಿದೆ. ಮತದಾನ ನನ್ನ ಸಾಂವಿಧಾನಾತ್ಮಕ ಹಕ್ಕು ಎನ್ನುವ ಪರಿಭಾವನೆ ಅವರಲ್ಲಿದೆ ಎನ್ನುವುದು ಸದರಿ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

**ಕೋಷ್ಟಕ – 3.38.**

**ಮತದಾನದ ಅರ್ಹತೆಗಳನ್ನು ಕುರಿತು ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 63 | 84 | 123 | 70.28 |
| 2 | ಇಲ್ಲ | 0 | 0 | 16 | 9.14 |
| 3 | ಗೊತ್ತಿಲ್ಲ | 12 | 16 | 36 | 20.57 |
| | | **75** | **100** | **175** | **100** |
| | **ಒಟ್ಟು** | **75+175=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಶಿಕ್ಷಣ | 51 | 80.95 | 105 | 85.36 |
| 2 | ಪ್ರಜಾಪ್ರಭುತ್ವ ಚಿಂತನೆ | 12 | 19.04 | 16 | 13 |
| 3 | ತೆರಿಗೆ ಪಾವತಿದಾರ | 0 | 0 | 0 | 0 |
| 4 | ಗರಿಷ್ಠ ವಯೋಮಿತಿ | 0 | 0 | 2 | 1.62 |
| | | 63 | 100 | 123 | 100 |
| | **ಒಟ್ಟು** | **63+123** | | | **186** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಮತ ಚಲಾಯಿಸಲು ಅರ್ಹತೆಗಳಿರಬೇಕಾ ಎಂಬುದನ್ನು ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಕೋಷ್ಟಕದ ಅಂಕಿ–ಅಂಶಗಳ ಆಧಾರದ ಮೇಲೆ ಸಂವಿಧಾನ ನಿಗದಿಪಡಿಸಿರುವ ಅರ್ಹತೆಗಳನ್ನು ಬಿಟ್ಟು ಬೇರೆ ಯಾವ ಅರ್ಹತೆಗಳ ಅವಶ್ಯಕತೆ ಮತದಾರನಿಗಿಲ್ಲ ಎನ್ನುವುದು ಶೇ.5.33 ಪರಿಶಿಷ್ಟ ಪಂಗಡ ಮತದಾರರಲ್ಲಿ ಶೇ.9.14 ಪರಿಶಿಷ್ಟ ಪಂಗಡೇತರ ವರ್ಗದ ಅಭಿಪ್ರಾಯವಾಗಿದೆ. ಪರಿಶಿಷ್ಟ ಪಂಗಡದವರಿಗಿಂತ ಪರಿಶಿಷ್ಟ ಪಂಗಡೇತರ ಮತದಾರರಲ್ಲಿ ಶೇ.3.81 ಮತದಾರರಿಗೆ ಬೇರೆ ಯಾವ ಮಾನದಂಡಗಳನ್ನು ಮತದಾನ ಮಾಡಲು ನಿರ್ಧರಿಸಬಾರದು ಎಂಬ ನಿಲುವು ಆ ವರ್ಗದ್ದಾಗಿರುತ್ತದೆ. ಸಂವಿಧಾನ ನಿಗದಿಪಡಿಸಿರುವ ಅರ್ಹತೆಗಳನ್ನು ಬಿಟ್ಟು ಬೇರೆ ಅರ್ಹತೆಗಳ ಅವಶ್ಯಕತೆ ಮತದಾರನಿಗೆ ಇದೆ ಎಂಬುದು ಶೇ.78.66 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.78.66 ಪರಿಶಿಷ್ಟ ಪಂಗಡೇತರ ವರ್ಗದ ಅಭಿಪ್ರಾಯವಾಗಿದೆ. ಗೊತ್ತಿಲ್ಲ ಎನ್ನುವ ನಿಲುವು ಶೇ.16.00 ಪರಿಶಿಷ್ಟ ಪಂಗಡ ಮತ್ತು ಶೇ.20.57 ಪರಿಶಿಷ್ಟ ಪಂಗಡೇತರ ವರ್ಗದ ಅಭಿಪ್ರಾಯವಾಗಿದೆ.

ಮತದಾನಕ್ಕೆ ಶಿಕ್ಷಣವನ್ನು ಅರ್ಹತೆಯಾಗಿ ಪರಿಗಣಿಸಬೇಕೆಂಬ ಆಶಯವನ್ನು ಶೇ.83.05 ಪರಿಶಿಷ್ಟ ಪಂಗಡ ವರ್ಗ ಮತ್ತು ಶೇ.85.36 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ. ಪರಿಶಿಷ್ಟ ಪಂಗಡೇತರರು ಹೆಚ್ಚಿನ ಶಿಕ್ಷಿತರಾಗಿರುವ ಕಾರಣದಿಂದ ಪರಿಶಿಷ್ಟ ಪಂಗಡದವರಿಗಿಂತ ಹೆಚ್ಚಿನ ಶೇ.2 ಮತದಾರರು ಮತದಾರನಿಗೆ ಶಿಕ್ಷಣ ಬಯಸುತ್ತಾರೆ ಎಂಬ ಸಂಗತಿ ಅಧ್ಯಯನದಿಂದ ತಿಳಿದುಬಂದಿದೆ. ಮೌಲ್ಯ ಆಧಾರಿತ ಮತದಾನದ ನಡವಳಿಕೆ ಶಿಕ್ಷಿತ ವರ್ಗದಲ್ಲಿ ನಿರೀಕ್ಷಿಸಬಹುದೆಂಬ ಅಭಿಪ್ರಾಯ ಎರಡು ವರ್ಗಗಳದ್ದಾಗಿರುತ್ತದೆ. ಮತದಾರರಿಗೆ ಪ್ರಜಾಪ್ರಭುತ್ವ ಚಿಂತನೆಗಳಿದ್ದರೆ ನ್ಯಾಯಸಮ್ಮತ ಮತದಾನ ನಡೆಯುತ್ತದೆ ಎಂದು ಶೇ.15.25 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ13.00 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅದೇ ರೀತಿ ತೆರಿಗೆ ಪಾವತಿ ಮಾಡುವವರಿಗೆ ಮತದಾನದ ಹಕ್ಕನ್ನು ನೀಡಬೇಕು ಎಂಬುದನ್ನು ಪರಿಶಿಷ್ಟ ಪಂಗಡ ವರ್ಗ ಮತ್ತು ಪರಿಶಿಷ್ಟ ಪಂಗಡೇತರ ವರ್ಗ ಎರಡು ವರ್ಗಗಳು ಸಂಪೂರ್ಣವಾಗಿ ನಿರಾಕರಿಸಿವೆ. ಗರಿಷ್ಠ ವಯೋಮಿತಿ ನಿಗದಿ ಕುರಿತು ಶೇ.1.69 ಪರಿಶಿಷ್ಟ ಪಂಗಡ ಹಾಗೂ ಶೇ1.62 ಪರಿಶಿಷ್ಟ ಪಂಗಡೇತರ ಮತದಾರರು ಈ ಅಭಿಪ್ರಾಯದ ಪರವಾಗಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ಸಾಬೀತಾಗುತ್ತದೆ.

**ಕೋಷ್ಟಕ – 3.39.**

**ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 54 | 72 | 139 | 79.42 |
| 2 | ಇಲ್ಲ | 11 | 14.66 | 12 | 6.85 |
| 3 | ಗೊತ್ತಿಲ್ಲ | 10 | 13.33 | 24 | 13.71 |
| | | 75 | 100 | 175 | 100 |
| | **ಒಟ್ಟು** | **75+175=** | | | **250** |

ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಶಿಕ್ಷಣ | 30 | 54.54 | 62 | 44.6 |
| 2 | ಸಮಾಜಸೇವೆ | 22 | 40 | 69 | 49.64 |
| 3 | ಚಳುವಳಿಗಾರರು | 2 | 3.6 | 6 | 4.31 |
| 4 | ರಾಜಕೀಯ ತರಬೇತಿ ಕೋರ್ಸು | 1 | 1.8 | 2 | 1.43 |
| | | **55** | **100** | **139** | **100** |
| | **ಒಟ್ಟು** | **54+139=** | | | **194** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅರ್ಹತೆ ಕುರಿತು ಮತದಾರರ ಪ್ರತಿಕ್ರಿಯೆಯನ್ನು ತಿಳಿಸುತ್ತದೆ.

ಸದರಿ ಕೋಷ್ಟಕದಲ್ಲಿ ನಮೂದಿಸಿರುವ ಅಂಕಿ ಅಂಶಗಳ ಪ್ರಕಾರ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಅರ್ಹತೆಗಳನ್ನು ನಿಗದಿಪಡಿಸಬೇಕು ಎಂಬ ಅಭಿಪ್ರಾಯವನ್ನು ಶೇ. 72.00 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.79.42 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರು ಪೂರಕವಾಗಿದ್ದಾರೆ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಯಾವ ಅರ್ಹತೆಗಳನ್ನು ನಿಗದಿಪಡಿಸುವುದು ಬೇಡ, ಪ್ರಸ್ತುತ ವ್ಯವಸ್ಥೆ ಸರಿಯಾಗಿದೆ ಎಂಬ ಅಭಿಪ್ರಾಯವನ್ನು ಶೇ.14.66 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.6.85 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರ ನಿಲುವಾಗಿದೆ. ಇನ್ನು ಗೊತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಶೇ.13.33 ಪರಿಶಿಷ್ಟ ಪಂಗಡ ಹಾಗೂ ಶೇ.13.71 ಪರಿಶಿಷ್ಟ ಪಂಗಡ ಮತದಾರರು ತಿಳಿಸಿದ್ದಾರೆ.


ಅಭ್ಯರ್ಥಿಗಳು ಕನಿಷ್ಠ ಶಿಕ್ಷಣ ಪಡೆದಿರಬೇಕು ಎಂಬುದು ಶೇ.54.54 ಪರಿಶಿಷ್ಟ ಪಂಗಡ ಹಾಗೂ ಶೇ.44.60 ಪರಿಶಿಷ್ಟ ಪಂಗಡೇತರ ಮತದಾರರ ನಿರ್ಧಾರವಾಗಿದೆ. ಹಾಗಾಗಿ ಕ್ಷೇತ್ರದ ಶೇ.49.57 ಮತದಾರರು ಅಭ್ಯರ್ಥಿಗಳಿಗೆ ಶಿಕ್ಷಣದ ಅವಶ್ಯಕತೆಯನ್ನು ಬಯಸುತ್ತಾರೆ ಎಂದು ಕೋಷ್ಟಕದ ಸಹಾಯದಿಂದ ಮೇಲಿನ ಅಧ್ಯಯನ ನಿರೂಪಿಸಿದೆ. ಅಭ್ಯರ್ಥಿಗಳು ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿರಬೇಕು ಎಂದು ಶೇ.40.00 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.49.64 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ. ಪರಿಶಿಷ್ಟ ಪಂಗಡ ವರ್ಗಕ್ಕಿಂತ ಪರಿಶಿಷ್ಟ ಪಂಗಡೇತರ ವರ್ಗದಲ್ಲಿ ಶೇ.9 ಹೆಚ್ಚಿನ ಮತದಾರರ ಅಪೇಕ್ಷೆಯಾಗಿದೆ ಎಂಬುದನ್ನು ಕ್ಷೇತ್ರಕಾರ್ಯದಿಂದ ಗುರುತಿಸಲಾಗಿದೆ. ಅದೇ ರೀತಿ ಅಭ್ಯರ್ಥಿಗಳಾಗುವವರು ಚಳುವಳಿಗಳಲ್ಲಿ ಗುರುತಿಸಿಕೊಂಡಿರಬೇಕು ಎಂದು ಶೇ.3.6 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.4.31 ಪರಿಶಿಷ್ಟ ಪಂಗಡೇತರ ಮತದಾರರ ಅಭಿಲಾಷೆಯಾಗಿದೆ. ಅಭ್ಯರ್ಥಿಗಳು ರಾಜಕೀಯ ಶಿಕ್ಷಣ ಪಡೆಯಲು ತರಬೇತಿ ಕೋರ್ಸುಗಳಲ್ಲಿ ತೇರ್ಗಡೆಯಾಗಿರಬೇಕು ಎಂದು ಶೇ.1.8 ಪರಿಶಿಷ್ಟ ಪಂಗಡ ಹಾಗೂ ಶೇ.1.43 ಪರಿಶಿಷ್ಟ ಪಂಗಡೇತರ ಮತದಾರರು ಬಯಸುತ್ತಾರೆ.

ಒಟ್ಟಾರೆಯಾಗಿ ಮೊಳಕಾಲ್ಮೂರು ಭಾಗಶಃ ಮತದಾರರು ಅಭ್ಯರ್ಥಿಗಳಲ್ಲಿ ಶಿಕ್ಷಣವನ್ನು ಮತ್ತು ಸಮಾಜ ಸೇವೆಯನ್ನು ಬಯಸುತ್ತಾರೆ ಎಂಬುದನ್ನು ಸದರಿ ಕೋಷ್ಟಕವು ಸ್ಪಷ್ಟಪಡಿಸುತ್ತದೆ.

**ಕೋಷ್ಟಕ – 3.40.**
**ಮತದಾನ ನಿರ್ಧಾರದ ಬಗ್ಗೆ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಅಭ್ಯರ್ಥಿಯ ವ್ಯಕ್ತಿತ್ವ | 34 | 45.33 | 99 | 56.57 |
| 2 | ಪಕ್ಷದ ಕಾರ್ಯಕ್ರಮ | 34 | 45.33 | 60 | 34.28 |
| 3 | ಆಸೆ ಆಮಿಷಗಳಿಗೆ ಒಳಗಾಗಿ | 1 | 1.33 | 2 | 1.14 |
| 4 | ಕೌಟುಂಬಿಕ ಪರಂಪರೆ | 6 | 8 | 14 | 8 |
| **ಒಟ್ಟು** | | **75** | **100** | **175** | **100** |
| | | **75+175=** | | **250** | |

**ಮೂಲ:** ಕ್ಷೇತ್ರಕಾರ್ಯ
**ಟಿಪ್ಪಣಿ:** ಮತದಾರರು ಯಾವುದರ ಆಧಾರದ ಮೇಲೆ ಮತ ನೀಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ವ್ಯಕ್ತಿಯ ವ್ಯಕ್ತಿತ್ವ ನೋಡಿ ಮತ ನಿರ್ಧರಿಸುವುದಕ್ಕೆ ಶೇ.45.33 ಪರಿಶಿಷ್ಟ ಪಂಗಡ ವರ್ಗ ಹಾಗೂ ಶೇ.56.57 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರು ಸಮ್ಮತಿಸಿದ್ದಾರೆ. ಸಾಮಾನ್ಯವಾಗಿ ಮೀಸಲು ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡೇತರ ಮತದಾರರೊಂದಿಗೆ ಯಾವ ಅಭ್ಯರ್ಥಿ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಾನೆಯೋ ಅವನಿಗೆ ಮತ ನೀಡುವ ಪ್ರಕ್ರಿಯೆ ಪರಿಶಿಷ್ಟ ಪಂಗಡೇತರರಲ್ಲಿ ಕ್ರಿಯಾಶೀಲವಾಗಿರುತ್ತದೆ. ಈ ರೀತಿಯ ಮತ ನಿರ್ಧಾರದಲ್ಲಿ 2008–13ರ ಚುನಾವಣೆಗಳ ಫಲಿತಾಂಶ ಇದಕ್ಕೆ ಸಾಕ್ಷಿಯಾಗುತ್ತದೆ. ಅದರಂತೆ ಪರಿಶಿಷ್ಟ ಪಂಗಡದವರಲ್ಲಿ ವ್ಯಕ್ತಿ ಆಧರಿಸಿ ಮತ ನೀಡುವುದು ಒಂದು ಉತ್ತಮ ರಾಜಕೀಯ ಬೆಳವಣಿಗೆ ಎಂಬ ಸಂಗತಿಯು ಅಧ್ಯಯನದಿಂದ ಹೊರಹೊಮ್ಮುತ್ತದೆ. ಅಂತೆಯೇ ಪಕ್ಷದ ಆಧಾರದ ಮೇಲೆ ಮತ ನೀಡುವವರು ಪರಿಶಿಷ್ಟ ಪಂಗಡ ವರ್ಗದಲ್ಲಿ ಶೇ. 45.33 ಹಾಗೂ ಪರಿಶಿಷ್ಟ ಪಂಗಡೇತರ ವರ್ಗದಲ್ಲಿ 34.28 ಮತದಾರರಿದ್ದಾರೆ. ಪ್ರಸ್ತುತದಲ್ಲಿಯೂ ಸಹ ಪಕ್ಷ ಆಧರಿಸಿ ಮತ ನಿರ್ಧರಿಸುವ ವ್ಯವಸ್ಥೆಗೆ ಪರಿಶಿಷ್ಟ ಪಂಗಡದವರು ಅಂಟಿಕೊಂಡಿರುವುದನ್ನು ಗಮನಿಸಿದರೆ ರಾಜಕೀಯ ವೈಚಾರಿಕತೆಯ ಕೊರತೆ ಪರಿಶಿಷ್ಟ ಪಂಗಡದವರಲ್ಲಿ ಹೆಚ್ಚಾಗಿದೆ ಎಂಬುದು ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದ ಫಲಿತಾಂಶವಾಗಿದೆ. ಹಣ, ವಸ್ತು, ಮದ್ಯ ಇತರೆ ಆಸೆ–ಆಮಿಷಗಳಿಗೆ ಒಳಗಾಗಿ ಮತ ನೀಡುವವರು ಪರಿಶಿಷ್ಟ ಪಂಗಡ ವರ್ಗದಲ್ಲಿ ಶೇ. 1.33 ಹಾಗೂ ಪರಿಶಿಷ್ಟ ಪಂಗಡೇತರರು ಶೇ. 1.14 ಮಾತ್ರ ಇದ್ದಾರೆ. ಆದರೆ ವಾಸ್ತವವಾಗಿ ಮತದಾನದ ಮೇಲೆ ಈ ಅಂಶ ಹೆಚ್ಚಾಗಿ ಕೆಲಸ ಮಾಡುತ್ತದೆ. ಆದರೆ ಸಂದರ್ಶನಾರ್ಥಿಗಳು ಈ ವಿಚಾರದಲ್ಲಿ ಸತ್ಯವನ್ನು ಸಂಪೂರ್ಣವಾಗಿ ಮರೆ ಮಾಚಲು ಯತ್ನಿಸಿದ್ದಾರೆ ಎಂಬುದನ್ನು

ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಲಾಗಿದೆ. ಅಗೋಚರ ಅಂಶವಾದ ಕೌಟುಂಬಿಕ ಪರಂಪರೆಗೆ ಅನುಗುಣವಾಗಿ ಮತ ನಿರ್ಧರಿಸುವ ಪ್ರಮಾಣ ಕ್ರಮವಾಗಿ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಪಂಗಡೇತರ ಮತದಾರರಲ್ಲಿ ಶೇ. 8 ಮತ್ತು ಶೇ. 8 ಕಂಡುಬರುತ್ತದೆ. ಇಲ್ಲಿ ಎರಡು ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ ಇರುವುದನ್ನು ಸದರಿ ಕೋಷ್ಟಕ ಸಾಬೀತು ಪಡಿಸುತ್ತದೆ.

ಒಟ್ಟಾರೆ ಮೊಳಕಾಲ್ಮೂರು ಕ್ಷೇತ್ರದಲ್ಲಿ ಭಾಗಶಃ ಪರಿಶಿಷ್ಟ ಪಂಗಡೇತರ ಮತದಾರರು ವ್ಯಕ್ತಿಗೆ ಪ್ರಾಶಸ್ತ್ಯ ಕೊಡುತ್ತಾರೆ. ಅಂತೆಯೇ ಭಾಗಶಃ ಪರಿಶಿಷ್ಟ ಪಂಗಡದವರು ಪಕ್ಷಕ್ಕೆ ಮನ್ನಣೆ ನೀಡುತ್ತಾರೆ ಎಂಬುದು ಸಾಮಾನ್ಯ ಹಾಗೂ ಮೀಸಲುವರ್ಗದ ಮತದಾರರ ನಡೆವಳಿಕೆಯಾಗಿದೆ.

**ಕೋಷ್ಟಕ – 3.41.**

**ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ವ್ಯತ್ಯಾಸ ಕುರಿತು ಮತದಾರರ ಪ್ರತಿಕ್ರಿಯೆ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 24 | 32 | 54 | 30.85 |
| 2 | ಇಲ್ಲ | 36 | 48 | 97 | 55.42 |
| 3 | ಗೊತ್ತಿಲ್ಲ | 15 | 20 | 24 | 13.71 |
| | | **75** | **100** | **175** | **100** |
| | **ಒಟ್ಟು** | **75+175=** | | | **250** |

ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ರಾಜಕೀಯ ನಾಗರಿಕತೆ | 2 | 8.33 | 6 | 11.11 |
| 2 | ರಾಜಕೀಯ ನಾಯಕತ್ವದಲ್ಲಿ | 10 | 41.66 | 8 | 14.81 |
| 3 | ಜನತೆಯ ಮನೋಭಾವನೆ | 2 | 8.33 | 16 | 29.62 |
| 4 | ಚುನಾವಣೆ ಭಾಗವಹಿಸುವಿಕೆ | 10 | 41.66 | 24 | 44.44 |
| | | **24** | **100** | **54** | **100** |
| | **ಒಟ್ಟು** | **24+54=** | | | **78** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ರಾಜಕೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ಮತದಾರರ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ.

ಸದರಿ ಕೋಷ್ಟಕದ ಪ್ರಕಾರ ರಾಜಕೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮೀಸಲು ಮತ್ತು ಸಾಮಾನ್ಯ ಕ್ಷೇತ್ರಗಳ ಮತದಾರರಲ್ಲಿ ಭಿನ್ನತೆ ಇದೆ ಎಂದು ಶೇ.32.00 ಪರಿಶಿಷ್ಟ

ಪಂಗಡ ಮತ್ತು 30.85 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎರಡು ವರ್ಗಗಳಲ್ಲಿಯೂ ಸರಾಸರಿ ಶೇ.31 ಮತದಾರರು ರಾಜಕೀಯ ಪ್ರಕ್ರಿಯೆಯಲ್ಲಿ ವ್ಯತ್ಯಾಸವಿದೆ ಎಂಬುದು ಅಧ್ಯಯನದಿಂದ ಹೊರಹೊಮ್ಮಿದ ಮಾಹಿತಿ. ಮೀಸಲು ಮತ್ತು ಸಾಮಾನ್ಯಕ್ಷೇತ್ರಗಳ ಮತದಾರರಲ್ಲಿ ಯಾವುದೇ ಭಿನ್ನತೆ ಇಲ್ಲ ಎಂದು ಶೇ.48.00 ಪರಿಶಿಷ್ಟ ಪಂಗಡ ಮತ್ತು ಶೇ.55.42 ಪರಿಶಿಷ್ಟ ಪಂಗಡೇತರ ವರ್ಗದ ಮತದಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎರಡು ವರ್ಗಗಳಲ್ಲಿಯೂ ಸರಾಸರಿ ಶೇ.51 ಮತದಾರರು ರಾಜಕೀಯ ಪ್ರಕ್ರಿಯೆಯಲ್ಲಿ ವ್ಯತ್ಯಾಸವಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬಂದ ಮಾಹಿತಿ. ಹಾಗೆಯೇ ಗೊತ್ತಿಲ್ಲ ಎನ್ನುವ ನಿಲುವನ್ನು ಶೇ.20.00 ಪರಿಶಿಷ್ಟ ಪಂಗಡ ಹಾಗೂ ಶೇ.13.71 ಪರಿಶಿಷ್ಟ ಪಂಗಡೇತರ ಮತದಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂತೆಯೇ ಸಾಮಾನ್ಯ ಹಾಗೂ ಮೀಸಲುಕ್ಷೇತ್ರದ ನಡುವಿನ ಭಿನ್ನತೆಯನ್ನು ರಾಜಕೀಯ ನಾಗರಿಕತೆ ಹಿನ್ನೆಲೆಯಲ್ಲಿ ವ್ಯತ್ಯಾಸ ಗುರುತಿಸುವುದರ ಪೈಕಿ ಶೇ. 8.33 ಪರಿಶಿಷ್ಟ ಪಂಗಡ ಹಾಗೂ ಶೇ. 11.11 ಪರಿಶಿಷ್ಟ ಪಂಗಡೇತರ ಮತದಾರರಿದ್ದಾರೆ. ಮೀಸಲುಕ್ಷೇತ್ರದ ಮತದಾರರು ರಾಜಕೀಯ ನಾಗರಿಕತೆಯಲ್ಲಿ ಹಿಂದೆ ಇದ್ದಾರೆ ಎಂದು ಕಂಡುಕೊಳ್ಳಲಾಗಿದೆ. ಈ ಅಂಶವನ್ನು ಸಾಮಾನ್ಯ ಮತ್ತು ಮೀಸಲುಕ್ಷೇತ್ರದ ನಡುವಿನ ಭಿನ್ನತೆಯನ್ನು ರಾಜಕೀಯ ನಾಯಕತ್ವದ ಹಿನ್ನೆಲೆಯಲ್ಲಿ ಶೇ.41.66 ಪರಿಶಿಷ್ಟ ಪಂಗಡ ಮತ್ತು ಶೇ.14. ಪರಿಶಿಷ್ಟ ಪಂಗಡೇತರ ಮತದಾರರು ನೋಡುವ ಮೂಲಕ ಮೀಸಲುಕ್ಷೇತ್ರ ಪ್ರಬಲ ನಾಯಕತ್ವ ಹೊಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜನತೆಯ ಮನೋಭಾವನೆಯಲ್ಲೂ ವ್ಯತ್ಯಾಸಗಳು ಕಂಡುಬರುತ್ತವೆ ಎಂದು ಶೇ.08.33 ಪರಿಶಿಷ್ಟ ಪಂಗಡ ಮತ್ತು ಶೇ.29.62 ಪರಿಶಿಷ್ಟ ಪಂಗಡೇತರ ಮತದಾರರು ಗುರುತಿಸಿದ್ದಾರೆ. ಅದೇ ರೀತಿ ರಾಜಕೀಯ ಮತ್ತು ಚುನಾವಣೆಯಲ್ಲಿ ಭಾಗವಹಿಸುವಿಕೆಯ ಆಧಾರದ ಮೇಲೆ ಭಿನ್ನತೆ ಗುರುತಿಸಿರುವ ಮತದಾರರ ಪೈಕಿ ಪರಿಶಿಷ್ಟ ಪಂಗಡ ವರ್ಗ ಶೇ.41.66 ಮತ್ತು ಪರಿಶಿಷ್ಟ ಪಂಗಡೇತರ ವರ್ಗದ ಶೇ.44.44 ಮತದಾರರು ಇದ್ದಾರೆ.

ಪರಿಶಿಷ್ಟ ಪಂಗಡದವರು ಈ ಕುರಿತು ಪ್ರತಿಕ್ರಿಯಿಸುತ್ತಿರುವ ಸಂದರ್ಭದಲ್ಲಿ ಪರಿಶಿಷ್ಟ ಪಂಗಡೇತರರಲ್ಲಿ ಮನಃಪೂರ್ವಕವಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿದ್ದಾರೆ.

**ಕೋಷ್ಟಕ – 3.42.**
**ಕ್ಷೇತ್ರದ ಅಭಿವೃದ್ಧಿ ಕುರಿತು ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 22 | 29.33 | 36 | 20.57 |
| 2 | ಇಲ್ಲ | 44 | 58.66 | 121 | 69.14 |
| 3 | ಗೊತ್ತಿಲ್ಲ | 9 | 12 | 18 | 10.28 |
| | | **75** | **100** | **175** | **100** |
| | **ಒಟ್ಟು** | **75+175=** | | | **250** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಸಮಗ್ರ ಅಭಿವೃದ್ಧಿ | 12 | 54.54 | 16 | 44.44 |
| 2 | ಸಾಮಾಜಿಕ ಅಭಿವೃದ್ಧಿ | 4 | 18.18 | 12 | 33.33 |
| 3 | ಆರ್ಥಿಕ ಅಭಿವೃದ್ಧಿ | 2 | 9.9 | 0 | 0 |
| 4 | ಶೈಕ್ಷಣಿಕ ಅಭಿವೃದ್ಧಿ | 4 | 18.18 | 8 | 22.22 |
| | | **22** | **100** | **36** | **100** |
| | **ಒಟ್ಟು** | **22+36** | | | **58** |

**ಮೂಲ:** ಕ್ಷೇತ್ರಕಾರ್ಯ
**ಟಿಪ್ಪಣಿ:** ಜಿಲ್ಲೆಯ ಇತರ ಸಾಮಾನ್ಯಕ್ಷೇತ್ರಗಳಂತೆ ಈ ಮೀಸಲುಕ್ಷೇತ್ರದ ಅಭಿವೃದ್ಧಿ ಕುರಿತಂತೆ ಮತದಾರರ ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸುತ್ತದೆ.

ಸದರಿ ಕೋಷ್ಟಕದ ಆಧಾರದ ಮೇಲೆ ಕ್ಷೇತ್ರ ಅಭಿವೃದ್ಧಿ ಹೊಂದಿದೆ ಎಂದು ಶೇ.29.33 ಪರಿಶಿಷ್ಟ ಪಂಗಡ ಹಾಗೂ ಶೇ.20.57 ಪರಿಶಿಷ್ಟ ಪಂಗಡೇತರ ಮತದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ, ಅಂತೆಯೇ ಕ್ಷೇತ್ರ ಯಾವುದೇ ರಂಗದಲ್ಲಿಯೂ ಅಭಿವೃದ್ಧಿ ಹೊಂದಿಲ್ಲ ಎಂದು ಶೇ.58.66 ಪರಿಶಿಷ್ಟ ಪಂಗಡ ಹಾಗೂ ಶೇ.69.14 ಪರಿಶಿಷ್ಟ ಪಂಗಡೇತರರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಕ್ಷೇತ್ರಕಾರ್ಯದ ಸಹಾಯದಿಂದ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಭಾಗಶಃ ಮಾತ್ರ ಸಾಧನೆ ಮಾಡಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಗೊತ್ತಿಲ್ಲ ಎನ್ನುವ ನಿಲುವನ್ನು ಶೇ.12.00 ಪರಿಶಿಷ್ಟ ಪಂಗಡ ಹಾಗೂ ಶೇ.10.28 ಪರಿಶಿಷ್ಟ ಪಂಗಡೇತರ ಮತದಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರವು ಎಲ್ಲಾ ರಂಗಗಳಲ್ಲಿಯೂ ಅಭಿವೃದ್ಧಿ ಹೊಂದಿದೆ ಎಂದು ಶೇ.54.54 ಪರಿಶಿಷ್ಟ ಪಂಗಡ ಮತ್ತು ಶೇ.44.44 ಪರಿಶಿಷ್ಟ ಪಂಗಡೇತರ ಮತದಾರರು ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ಷೇತ್ರದ ಕೆಲವು ಪ್ರದೇಶಗಳು ಮಾತ್ರ ಅಭಿವೃದ್ಧಿಯ ಪಥದಲ್ಲಿವೆ. ಹಾಗಾಗಿ ಆ ಪ್ರದೇಶಕ್ಕೆ ಸೇರಿದ ಮತದಾರರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂಬುದು ಅಧ್ಯಯನದಿಂದ ಹೊರಬಂದ ಫಲಿತಾಂಶವಾಗಿದೆ. ಕ್ಷೇತ್ರ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದೆ ಎಂದು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರು ಕ್ರಮವಾಗಿ ಶೇ.33.33 ಮತ್ತು ಶೇ.18.18 ಮತದಾರರು ತಿಳಿಸಿದ್ದಾರೆ. ಕ್ಷೇತ್ರದ ಆರ್ಥಿಕ ಅಭಿವೃದ್ಧಿ ಕುರಿತಾಗಿ ಶೇ.9.90 ಪರಿಶಿಷ್ಟ ಪಂಗಡ ವರ್ಗದ ಮತ್ತು ಶೇ.5.55 ಪರಿಶಿಷ್ಟ ಪಂಗಡೇತರ ಮತದಾರರು ತಿಳಿಸಿದ್ದಾರೆ. ಕ್ಷೇತ್ರ ಶೈಕ್ಷಣಿಕ ಅಭಿವೃದ್ಧಿಯಾಗಿದೆ ಎಂಬ ಸಕಾರಾತ್ಮಕ ಅಭಿಪ್ರಾಯವನ್ನು ಶೇ.18.18 ಪರಿಶಿಷ್ಟ ಪಂಗಡ ಹಾಗೂ ಶೇ.16.66 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ.

ಒಟ್ಟಾರೆ ಈ ಫಲಿತಾಂಶದಿಂದ ಮೊಳಕಾಲ್ಮೂರು ಮೀಸಲುಕ್ಷೇತ್ರವು ಅಭಿವೃದ್ಧಿಯನ್ನು ಸಾಧಿಸಿಲ್ಲ ಎಂಬ ನಿಲುವು ಮತದಾರರಿಂದ ವ್ಯಕ್ತವಾಗಿದೆ. ಅಭಿವೃದ್ಧಿಯ ಆಯಾಮಗಳು ಭಿನ್ನವಾಗಿರುವುದರಿಂದ ಎಲ್ಲ ಆಯಾಮಗಳಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವ ಅವಶ್ಯಕತೆಯನ್ನು ಅಧ್ಯಯನ ಒತ್ತಿ ಹೇಳುತ್ತದೆ.

ಈ ರೀತಿಯಾಗಿ ಎರಡು ಮೀಸಲು ವಿಧಾನಸಭಾ ಕ್ಷೇತ್ರಗಳ ಇತಿಹಾಸವನ್ನು 1952ರ ಪ್ರಥಮ ಚುನಾವಣೆಯಿಂದ ಪ್ರಾರಂಭಿಸಿ 2013ರ 14ನೇ ವಿಧಾನಸಭಾ ಚುನಾವಣೆವರೆಗೆ ಫಲಿತಾಂಶವನ್ನು ಸವಿಸ್ತಾರವಾಗಿ ವಿಶ್ಲೇಷಿಸಲಾಗಿದೆ. ಮತದಾರ ಪ್ರಭುಗಳು ಯಾವ ರೀತಿಯಲ್ಲಿ ಮತದಾನದ ಬಗ್ಗೆ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರ ನಡೆವಳಿಕೆ ಯಾವ ರೀತಿ ಇದೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಸಾಕಾರಗೊಳಿಸುವುದರೊಂದಿಗೆ ಈ ಅಧ್ಯಾಯ ಕೊನೆಗೊಳ್ಳುತ್ತದೆ.

# ಅಧ್ಯಾಯ–4

## ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರ ನಾಯಕತ್ವ

ನಾಯಕತ್ವವು ಮಾನವ ಸಮಾಜದ ಅವಿಭಾಜ್ಯ ಅಂಗವಾಗಿದೆ. ಮಾನವನ ಪ್ರತಿಯೊಂದು ಸಂಘಟನೆಯಲ್ಲಿ ಒಂದಿಲ್ಲೊಂದು ಕಾರಣಕ್ಕೆ ನಾಯಕತ್ವ ಅವಶ್ಯಕವೆನಿಸುತ್ತದೆ. ನಾಯಕತ್ವವೆಂಬ ಸಾಧನವಿಲ್ಲದೆ ಮಾನವರ ಚಟುವಟಿಕೆಗಳನ್ನು ಸಂಘಟಿಸುವುದು ಹಾಗೂ ಮುನ್ನಡೆಸಿಕೊಂಡು ಹೋಗುವುದು ಕಠಿಣವಾದದ್ದಾಗಿದೆ. ಎಲ್ಲ ಬಗೆಯ ಸಂಘ, ಸಂಸ್ಥೆಗಳ ವೈಜ್ಞಾನಿಕ ಕಾರ್ಯನಿರ್ವಹಣೆಗೆ ಪರಿಣಾಮಕಾರಿಯಾದ ನಾಯಕತ್ವ ಬೇಕು.

ರಾಜಕೀಯ ವ್ಯವಸ್ಥೆಯಲ್ಲಿ ನಾಯಕತ್ವವು ವಿಶೇಷವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.[1] ಆದ್ದರಿಂದಲೇ ನಾಯಕತ್ವವು ಇಚ್ಛಿತ ಗುರಿಗಳನ್ನು ಸಾಧಿಸಲು ಜನಸಮೂಹದ ಚಟುವಟಿಕೆಗಳನ್ನು ನಿರ್ದೇಶಿಸಲು, ನಿಯಂತ್ರಿಸಲು ಹಾಗೂ ಸಂಯೋಜಿಸಲು ಅವಶ್ಯಕವಾಗಿದೆ. ಎಲ್ಲ ಬಗೆಯ ಯೋಜನೆಗಳ, ಕಾರ್ಯಕ್ರಮಗಳ ಹಾಗೂ ಪ್ರತಿಯೊಂದು ಸಂಘಟನೆಗಳ ಯಶಸ್ಸಿಗೆ ನಾಯಕತ್ವ ಮೂಲಾಧಾರವಾಗಿದೆ. ನಾಯಕರಾದವರಿಗೆ ಸಮಾಜದಲ್ಲಿ ತಮ್ಮದೇ ಆದ ಬಲವಿದ್ದು, ಇನ್ನೊಬ್ಬರಿಗೆ ಅದು ಅನುಕರಣೀಯವಾಗಿದೆ ಎನ್ನಬಹುದು.

ನಾಯಕತ್ವದ ಮಹತ್ವವು ನಮ್ಮ ದೇಶದಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಹೆಚ್ಚಾಗಿದ್ದು, ಇದಕ್ಕೆ ನಾವು ಪ್ರಜಾಪ್ರಭುತ್ವ ಮಾದರಿಯ ಸರ್ಕಾರವನ್ನು ಒಪ್ಪಿಕೊಂಡಿದ್ದು ಒಂದು ಕಾರಣವಾದರೆ, ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ನಾಯಕತ್ವದ ಅವಶ್ಯಕತೆ ಇಂದು ಎದ್ದು ಕಾಣುತ್ತಿರುವುದು ಇನ್ನೊಂದು ಕಾರಣವಾಗಿದೆ. ಬರ್ನಾಡ್ ಅವರು "ನಾಯಕತ್ವ ಎಂಬ ಜವಾಬ್ದಾರಿ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಅವಶ್ಯಕತೆ ಹೆಚ್ಚಾಗುತ್ತಿದೆ ಎಂಬ ಮಾತನ್ನು ಸ್ಪಷ್ಟ ವಿಚಾರಗಳಲ್ಲಿ ತಿಳಿಯಪಡಿಸಿದ್ದಾರೆ."[2] ನಗರ ಹಾಗೂ ಗ್ರಾಮೀಣ ಅಭಿವೃದ್ಧಿಯ ಕೆಳಹಂತದಲ್ಲಿ ಜನರನ್ನು ಸಂಘಟಿಸುವ ಕಾರ್ಯವನ್ನು ನಾಯಕರು ಮಾಡಬೇಕಾಗುವುದು. ಪ್ರಜಾಪ್ರಭುತ್ವದ ಯಶಸ್ಸು ಹಾಗೂ ಅಭಿವೃದ್ಧಿ ಕಾರ್ಯಗಳ ಸಾಧನೆಯು, ಗ್ರಾಮಮಟ್ಟದ ನಾಯಕತ್ವದಿಂದ ಸಾಧ್ಯವಾಗುತ್ತದೆ.

[1] David Easten, The Political System, Alfred A Knopt Inc, New York, 1953, Page No. 130.
[2] Bernard Chester, Functions Of the Executive quoted in Bhagawan Vishnoo Bhushan Vidya, Public Administration, S. Chand & Company, New Delhi, 1986, Page No.176.

ಆಧುನಿಕ ರಾಷ್ಟ್ರಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಸದೃಢವಾಗಿ ಬೆಳೆದು ಜಾಗತಿಕ ರಂಗದಲ್ಲಿ ತಲೆ ಎತ್ತಿ ನಿಲ್ಲಲು ಉತ್ತಮ ನಾಯಕತ್ವ ಅವಶ್ಯಕವಾಗಿ ಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಜನರನ್ನು ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಸಂಘಟಿತ ಸೂಕ್ತ ಮಾರ್ಗದರ್ಶನಗಳನ್ನು ನೀಡುತ್ತ ಮುನ್ನಡೆಸಲು ನಾಯಕರು ಬೇಕು. ಆದರೆ ನಾಯಕತ್ವ ಎಂದರೇನು? ಯಾರು ನಾಯಕರು ಎಂದು ಅರ್ಥೈಸುವುದು ಸುಲಭಸಾಧ್ಯವಲ್ಲ.

**4.1. ನಾಯಕತ್ವದ ಅರ್ಥ**

ಶಬ್ದಕೋಶದ ಅರ್ಥದ ಅನ್ವಯ Leadership ಎಂಬ ಇಂಗ್ಲಿಷ್ ಪದವು Lead ಎಂಬ ಪದದಿಂದ ರೂಪಿತವಾಗಿದ್ದು, ಅದರ ಅರ್ಥ ಮುಂದಾಳತ್ವ ವಹಿಸುವುದು, ಪ್ರಮುಖ ಸ್ಥಾನ ಪಡೆಯುವುದು, ಅಧಿಕಾರ ಉಳ್ಳವನಾಗಿರುವುದು ಎಂಬ ಅಂಶಗಳನ್ನು ಸೂಚಿಸುತ್ತದೆ. ನಾಯಕತ್ವದ ಅರ್ಥವನ್ನು ಸಮಾಜ ವಿಜ್ಞಾನಿಗಳು ವಿವಿಧ ಪ್ರಕಾರಗಳಲ್ಲಿ ವ್ಯಾಖ್ಯಾನಿಸಿದ್ದಾರೆ.[3]

ಸಾಮಾನ್ಯ ಅರ್ಥದಲ್ಲಿ ನಾಯಕತ್ವವನ್ನು ಶ್ರೇಷ್ಠ ಅಧಿಕಾರ ಸ್ಥಾನ ಅಥವಾ ಸಾಮಾಜಿಕ ಶ್ರೇಷ್ಠತೆ ಎಂದು ಕರೆಯಬಹುದು. ನಾಯಕತ್ವವೆಂದರೆ ಜನರ ಮೇಲೆ ಪ್ರಭಾವ ಬೀರುವ ಅಥವಾ ಸಾಮರ್ಥ್ಯವಾಗಿದೆ. ಅದರಂತೆ ನಾಯಕತ್ವವು ಒಬ್ಬ ಶ್ರೇಷ್ಠ ವ್ಯಕ್ತಿ ಹಲವು ಸಾಮೂಹಿಕ ಹಿತಾಸಕ್ತಿಗಳಿಗಾಗಿ ಜನಸಮುದಾಯದ ಮೇಲೆ ಪ್ರಭಾವ ಬೀರುವ ಕ್ರಿಯೆಯಾಗಿದೆ.[4]

ಈ.ಎಸ್. ಬೋರ್ಗಾದಾಸರ ಪ್ರಕಾರ "ನೂರಾರು ಜನರ ಮೇಲೆ ವಿಶೇಷ ಪ್ರಭಾವ ಬೀರುವ ಪರಿಣತ ವ್ಯಕ್ತಿಯೇ ನಾಯಕ."[5] ನಾಯಕತ್ವವು ಬೌದ್ಧಿಕತೆಯನ್ನು ಉತ್ತೇಜನಗೊಳಿಸುವ ವ್ಯವಸ್ಥೆಯಾಗಿದೆ.[6] ನಾಯಕನು ಸಾಮಾನ್ಯ ಜನರಲ್ಲಿ ಅಸಾಮಾನ್ಯನಾಗಿ ಜನರ ಮನಸ್ಸನ್ನು ಉತ್ತೇಜನಗೊಳಿಸುವ ಅವರು ಸಾಮೂಹಿಕ ಜವಾಬ್ದಾರಿಗಳಿಗೆ ಸ್ಪಂದಿಸುವಂತೆ ಮಾಡುವ ವ್ಯಕ್ತಿಯಾಗಿದ್ದಾನೆ.

---

[3] Jennings E.E. An Anatomy of Leadership, Harper & Company,New York, 1960, Pp.- 31.

[4] Bhagawan Vishnoo Bhushan Vidya, Public Administration, S Chand & Company, New Delhi. Pp.- 214.

[5] Borgadas, Leadership and Leadership, Ashish Publishing House, New Delhi, 1979, Pp.- 149.

[6] Taylor J, How to Select and Develop Leaders, McGraw Hill Book Company, London, 1962, Pp.- 6.

ಸಿ.ಕೆ. ಅಲೆನ್ ಅವರ ಪ್ರಕಾರ "ಸಾಮೂಹಿಕ ಗುರಿಗಳನ್ನು ಸಾಧಿಸಲು ಜನರನ್ನು ಸಹಕರಿಸುವಂತೆ ಮಾಡಲು ಇರುವ ವ್ಯವಸ್ಥೆಯೇ ನಾಯಕತ್ವವಾಗಿದೆ."[7]

ಓರ್ವೆ ಟೀಡ್ ಅವರು "ಜನರು ಬಯಸುವ ಗುರಿಗಳನ್ನು ಮುಟ್ಟಲು ಅವರ ಸಹಕಾರ ಪಡೆಯಲು ಬೀರುವ ಪ್ರಭಾವದ ಕ್ರಿಯೆಯನ್ನು ನಾಯಕತ್ವ ಎಂದು ಕರೆದಿದ್ದಾರೆ."[8]

ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿದಾಗ ನಿಜವಾದ ನಾಯಕತ್ವವನ್ನು ಸೇವೆಯ ಮೂಲಕ ಗುರುತಿಸಲಾಗುವುದು. ಆದರೆ ಪ್ರಭುತ್ವವನ್ನು ತೋರುವ ಮೂಲಕ ಅಲ್ಲ[9] ಎಂಬುದು ಕಂಡುಬರುತ್ತದೆ. ನಾಯಕನು ಕೆಲವೊಮ್ಮೆ ತಟಸ್ಥನಾಗಿದ್ದು, ಇತರರನ್ನು ಕೆಲಸಕ್ಕೆ ತೊಡಗಲು ಪ್ರೋತ್ಸಾಹಿಸುತ್ತಾನೆ. ಜನರು ತಮ್ಮ ಬಲವನ್ನು ಪಡೆದುಕೊಳ್ಳಲು ನಾಯಕನು ಕೇಂದ್ರ ಬಿಂದುವಾಗಿರುತ್ತಾನೆ.

"ನಾಯಕತ್ವವು ಮಾನವೀಯ ಸಂಬಂಧಗಳನ್ನು ಬೆಸೆಯುವ ಕ್ರಿಯೆಯಾಗಿದ್ದು ಅದನ್ನು ಗುರಿಗಳು ಅಥವಾ ಉದ್ದೇಶಗಳ ಆಧಾರದ ಮೇಲೆ ಒಳ್ಳೆಯದು ಹಾಗೂ ಕೆಟ್ಟದ್ದು ಎಂದು ನಿರ್ಣಯಿಸಲಾಗುತ್ತದೆ.[10] ನಾಯಕತ್ವವೆಂಬುದು ಒಬ್ಬನು ಬೇರೊಬ್ಬರನ್ನು ಒಂದು ರೀತಿಯಲ್ಲಿ ವರ್ತಿಸುವಂತೆ ಹಾಗೂ ವರ್ತಿಸದಂತೆ ಮನವೊಲಿಸುವ ಸಾಧನವಾಗಿದೆ. ಕೆಲವೊಂದು ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಮಾನವರಲ್ಲಿಯ ಸೃಜನಶೀಲತೆಯನ್ನು ತೋರ್ಪಡಿಸಲು ಇರುವ ಮಾರ್ಗವಾಗಿದೆ.[11]

ಒಟ್ಟಿನಲ್ಲಿ ನಾಯಕರು ತಮ್ಮ ಖಾಸಗಿ ಇಲ್ಲವೆ ಸಾರ್ವಜನಿಕ ಜೀವನದಲ್ಲಿ ಅನೇಕ ವಿಧದಲ್ಲಿ ಬೇರೊಬ್ಬರಿಗೆ ಮಾರ್ಗದರ್ಶನ ನೀಡುತ್ತಾರೆ. ಉಪದೇಶಿಸುತ್ತಾರೆ, ಬೋಧನೆ ಮಾಡುತ್ತಾರೆ ಹಾಗೂ ಪ್ರಭಾವ ಬೀರುತ್ತಾರೆ.

ಮೇಲಿನ ಎಲ್ಲಾ ವ್ಯಾಖ್ಯೆಗಳನ್ನು ಹಾಗೂ ಅರ್ಥಗಳನ್ನು ಗಮನಿಸಿದಾಗ ನಾಯಕತ್ವವು ಸಂಕೀರ್ಣತೆಯ ಚಮತ್ಕಾರಿಕ ವ್ಯವಸ್ಥೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಜನರು

---

[7] Allen C.K, Law and Orders, quoted in Bhagawan Vishnoo Bhushan vidya, Opcit, Pp.- 177.

[8] Orway Tead, The Art of Leadership, McGraw Hill company, New York, 1935, Pp.-20.

[9] Ibid, Pag No 8.

[10] Blakely R.J, Strategies of Leadership in Human Relations, Thomas Nelson & Sons Company, New York. 1954, Pp.-148.

[11] Orway Tead, , The Art of Administration, McGraw Hill Company, New York, 1951, Pp.-35.

ಹೊಂದಿರುವ ಪೂರ್ವನಿರ್ಧಾರಿತ ಗುರಿಗಳನ್ನು ಸಾಧಿಸಲು ಜನರಿಗೆ ನಿರ್ದೇಶನ ನೀಡುವುದನ್ನು, ಅವರನ್ನು ಸಂಘಟಿಸುವ ಪ್ರಯತ್ನವನ್ನು ನಾಯಕತ್ವವು ಒಳಗೊಂಡಿರುತ್ತದೆ. ನಾಯಕತ್ವವು ಸಮಾಜದಲ್ಲಿ ಒಂದು ವಿಶಿಷ್ಟ ಸ್ಥಾನಮಾನ ಮತ್ತು ಅಧಿಕಾರ ಸ್ಥಾನ ಪಡೆಯುವ ಪ್ರತೀಕವಾಗಿದೆ.

ರಾಜಕೀಯ ವಿದ್ವಾಂಸರಲ್ಲಿ ನಾಯಕತ್ವದ ಗುಣಲಕ್ಷಣಗಳ ಬಗ್ಗೆ ಒಮ್ಮತದ ಅಭಿಪ್ರಾಯಗಳು ಮೂಡಿಬಂದಿಲ್ಲ. ಕೆಲವರು ನಾಯಕತ್ವವು ಹುಟ್ಟುಗುಣ ಎಂದು ಹೇಳಿದರೆ, ಇನ್ನೂ ಕೆಲವರು ನಾಯಕತ್ವವು ಆಯಾ ಸಮಯ, ಸಂದರ್ಭಕ್ಕೆ ತಕ್ಕಂತೆ ಬೆಳೆಸಿಕೊಳ್ಳುವ ಗುಣ ಎನ್ನುತ್ತಾರೆ. ಹೀಗೆ ನಾಯಕತ್ವವು ಕೆಲವರಲ್ಲಿ ಹುಟ್ಟಿನೊಂದಿಗೆ ಬೆಳೆದ ಗುಣವಾಗಿದ್ದರೆ, ಬೇರೆಯವರಲ್ಲಿ ಕಠಿಣ ಶ್ರಮ, ಸತತ ಪ್ರಯತ್ನಗಳಿಂದ ಸಂಪಾದಿಸಿದ್ದಾಗಿರುತ್ತದೆ.

ವಿದ್ವಾಂಸರು ಮಾಡಿದ ವರ್ಗೀಕರಣದ ಪ್ರಕಾರ ನಾಯಕತ್ವದಲ್ಲಿ ಮೂರು ಬಗೆಯ ಸಿದ್ಧಾಂತಗಳಿವೆ.

1. ವಿಶಿಷ್ಟ ಗುಣ ಸಿದ್ಧಾಂತ – Trait Theory
2. ವರ್ತನ ಸಿದ್ಧಾಂತ – Behavioral Theory
3. ಸನ್ನಿವೇಶ ಸಿದ್ಧಾಂತ – Situational Theory

ಈ ಮೇಲಿನ ಸಿದ್ಧಾಂತಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**1. ವಿಶಿಷ್ಟ ಗುಣ ಸಿದ್ಧಾಂತ(Trait Theory)**

ಈ ಸಿದ್ಧಾಂತದ ಪ್ರಕಾರ, ರಾಜಕೀಯ ನಾಯಕರ ನಾಯಕತ್ವವು ಅವರು ವೈಯಕ್ತಿಕವಾಗಿ ಹೊಂದಿರುವ ವಿಶಿಷ್ಟತೆಗಳಿಂದ ಹೊರಹೊಮ್ಮುತ್ತದೆ. ವಿಶಿಷ್ಟವಾದ ವ್ಯಕ್ತಿತ್ವವು ನಾಯಕತ್ವ ಬೆಳವಣಿಗೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ಈ ಸಿದ್ಧಾಂತದ ಪ್ರಕಾರ ವಿಶಿಷ್ಟವಾದ ಗುಣಗಳನ್ನು ಹೊಂದಿರುವ ನಾಯಕರು ಮಾನಸಿಕವಾಗಿ ಉತ್ತಮವಾದ ಸ್ಥಿತಿಯಲ್ಲಿದ್ದು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ಆದರೆ ಎಲ್ಲಾ ವ್ಯಕ್ತಿಗಳಿಗೂ ಒಂದೇ ತೆರೆನಾದ ವಿಶಿಷ್ಟ ಗುಣಗಳಿರುವುದಿಲ್ಲ. ವಿಶಿಷ್ಟ ಗುಣಗಳಿರುವವರು ಮಾತ್ರ ಸಮರ್ಥ ನಾಯಕರಾಗುತ್ತಾರೆ. ಸೈದ್ಧಾಂತಿಕ ದೃಷ್ಟಿಕೋನದ ಮೂಲಕ ನೋಡಲಾಗಿ ವಿಶಿಷ್ಟ ಗುಣಗಳಿರುವವರು ನಾಯಕರಾಗುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಎಫ್. ಲೂಥನ್ಸ್‌ರ ಪ್ರಕಾರ "ಪ್ರಾಚೀನ ಸಿದ್ಧಾಂತಗಳು, ವಿಶೇಷವಾಗಿ ಪ್ರಾಚೀನ ಗ್ರೀಕ್ ಮತ್ತು ರೋಮನ್ನರ ಪ್ರಕಾರ

ನಾಯಕರು ಜನ್ಮತಃ ನಾಯಕರಾಗೇ ಹುಟ್ಟುತ್ತಾರೆ. ಅವರನ್ನು ಸೃಷ್ಟಿಸಲಾಗುವುದಿಲ್ಲ."[12] ಅದರಂತೆ ಡೆಸ್‌ಲಾರ ಅವರ ಪ್ರಕಾರ "ಕೆಲವು ನಾಯಕರನ್ನು ಅವರಲ್ಲಿರುವ ವಿಶಿಷ್ಟ ಗುಣ ಲಕ್ಷಣಗಳಿಂದಾಗಿ ಮಹಾನ್ ನಾಯಕರೆಂದು ಗುರುತಿಸಲಾಗುತ್ತದೆ."[13]

ವೊರ್ಚೆಲ್ ಮತ್ತು ಕೂಪರ್ ಅವರ ಹೇಳಿಕೆಯಂತೆ "ವಿಶಿಷ್ಟ ಗುಣ ಸಿದ್ಧಾಂತದಲ್ಲಿ ನಾಯಕತ್ವ ಸ್ಥಾನದಲ್ಲಿ 5 ಜನರಿದ್ದು, ಇವರು ತಮ್ಮ ಅಪರೂಪದ ಗುಣಗಳಿಂದಾಗಿ ನಾಯಕತ್ವ ಸ್ಥಾನಕ್ಕೆ ಅರ್ಹರಾಗಿರುತ್ತಾರೆ"[14] ಎಂದಿದ್ದಾರೆ. ನಾಯಕರು ಈ ಎಲ್ಲಾ ಗುಣಗಳನ್ನು ತಮ್ಮ ಇಚ್ಛಾಶಕ್ತಿಯಿಂದ ಬೆಳೆಸಿಕೊಳ್ಳುವುದು ಸಾಧ್ಯವಿದೆ. ವಿಶಿಷ್ಟ ಗುಣ ಸಿದ್ಧಾಂತದ ಸಂಶೋಧಕರಾದ ಸರ್ ಫ್ರಾನ್ಸಿಸ್ ಗಾಲ್ಟನ್ ಅವರು ನಡೆಸಿದ ಸಂಶೋಧನೆಯ ಪ್ರಕಾರ ನಾಯಕತ್ವ ಗುಣಗಳು ಅನುವಂಶಿಕವಾಗಿರುತ್ತವೆ. ಗಾಲ್ಟನ್ ಅವರು ಇದನ್ನು ಕುಟುಂಬದ ಜೈವಿಕ ಲಕ್ಷಣಗಳೆಂದು ಪರಿಗಣಿಸಿದ್ದಾರೆ. ಗಾಲ್ಟನ್ ಕಂಡುಕೊಂಡಂತೆ "ಕೆಲವು ಕುಟುಂಬಗಳಲ್ಲಿ ತಲೆತಲಾಂತರದಿಂದಲೂ ಸೈನಿಕ ನಾಯಕರು ಅಥವಾ ನ್ಯಾಯವಾದಿಗಳಾಗಿದ್ದರು. ಇದು ಉತ್ತಮ ಕುಟುಂಬ ವ್ಯವಸ್ಥೆಯಲ್ಲಿ ಮಾತ್ರ ಕಂಡುಬಂದಿದೆ. ಕಾಲಾನಂತರದಲ್ಲಿ ಈ ಯಾವ ನಿಯಮಗಳು ಇಲ್ಲದಿದ್ದರೂ ಕೆಲವರು ನಾಯಕರಾಗಿ ಬೆಳೆದುಬಂದಿದ್ದಾರೆ."[15]

**2. ವರ್ತನ ಸಿದ್ಧಾಂತ(Behavioral Theory)**

ಉತ್ತಮ ನಾಯಕ ಎನಿಸಿಕೊಳ್ಳುವವರು ಸಮಯ, ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ಹೇಗೆ ವರ್ತಿಸುತ್ತಾರೆ ಎಂಬುದನ್ನು ವರ್ತನಾಸಿದ್ಧಾಂತ ತಿಳಿಸುತ್ತದೆ.

"ಪ್ರತಿಯೊಬ್ಬ ಯಶಸ್ವಿ ನಾಯಕನು ತನ್ನದೇ ಆದ ಕಾರ್ಯಶೈಲಿಯ ಮೂಲಕ ಸಮಾಜದ ಗುರಿ ಸಾಧನೆಗಾಗಿ ಕಾರ್ಯ ಮಾಡುತ್ತಾನೆ. ಇದನ್ನು ನಾಯಕತ್ವ ಶೈಲಿ ಎಂದು ಕರೆಯುತ್ತಾರೆ. ಜನರನ್ನು ಕೆಲಸಕ್ಕೆ ಹುರಿದುಂಬಿಸುತ್ತಾನೆ ಹಾಗೂ ತಾನು ಮಾದರಿಯಾಗುವಂತೆ ನಡೆದುಕೊಳ್ಳುತ್ತಾನೆ."[16]

---

[12] Luthans F., Organizational Behaviour, 5th edition, McGraw Hill Book Company, Singapore, 1989, Pp.- 457.
[13] Gobbaragumpi D.A., Impact of Political Leadership on Economic Development : A Case Study Of Shri K.H. Patil, Unpublished Ph.D. Thesis Submitted to Karnataka University, Dharwad, 2003, Pp.-127.
[14] Ibid., Pp.- 132.
[15] Galton F., Hereditary Genius: An Inquiry Into its Law and Consequences, MacMillan Company, New York, 1962, Pp.- 21.
[16] Szilagyi A.D. and Wallace M. J., Op.cit, Pp.- 283.

ನಾಯಕನು ಸದಾಕಾಲ ಒಂದೇ ಬಗೆಯ ಕಾರ್ಯಶೈಲಿಗಳನ್ನು ಅನುಸರಿಸದೇ ಬೇರೆ ಬೇರೆ ಸಮಯ ಹಾಗೂ ಸಂದರ್ಭಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾನೆ. ಅವನ ವ್ಯಕ್ತಿತ್ವವು, ಶಿಕ್ಷಣ, ಅನುಭವ, ಪರಿಸರದ ಪ್ರಭಾವಗಳನ್ನು ಅವಲಂಬಿಸಿದೆ. ಎಂ.ಸಿ. ಗಿನ್ನಿಸ್‌ರ ಪ್ರಕಾರ "ಅತ್ಯಂತ ಪರಿಣಾಮಕಾರಿಯಾಗಿ ವರ್ತಿಸುವುದು ಉತ್ತಮ ನಾಯಕತ್ವದ ತಳಹದಿಯಾಗಿದೆ."[17]

ಪ್ರಜಾಪ್ರಭುತ್ವ ಶೈಲಿ ನಾಯಕತ್ವವನ್ನು ಜನರು ಹೆಚ್ಚು ವಿರೋಧ ಇಲ್ಲದೆ ಒಪ್ಪಿಕೊಂಡು ಅದರ ಅನುಯಾಯಿಗಳಾಗುತ್ತಾರೆ. ಸದ್ವರ್ತನೆಯುಳ್ಳ ನಾಯಕರನ್ನು ಅವರ ಅನುಯಾಯಿಗಳು ತೃಪ್ತಭಾವದಿಂದ ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಾರೆ. ಅದೇ ತೆರನಾಗಿ "ನಾಯಕರು ತಮ್ಮ ಅನುಯಾಯಿಗಳನ್ನು ಮಾನವೀಯ ಅನುಕಂಪದಿಂದ ಕಂಡು ಅವರ ಸಮಸ್ಯೆಗಳಿಗೆ ಸ್ಪಂದಿಸಿದಾಗ ಹೆಚ್ಚು ಯಶಸ್ವಿಯಾಗಲು ಸಾಧ್ಯವಾಗುತ್ತದೆ. ನಾಯಕರಾದವರು ಅನುಯಾಯಿಗಳಿಂದ ಅಪೇಕ್ಷಿಸುವ ಆದರ್ಶಗಳನ್ನು ಸ್ವತಃ ತಾವೇ ಅಳವಡಿಸಿಕೊಂಡು ಅವರಿಗೆ ಮಾದರಿಯಾಗಬೇಕು ಮತ್ತು ಸ್ವಚ್ಛ ಮನಸ್ಸಿನಿಂದ ದುಡಿಯಬೇಕು. ಒಟ್ಟಿನಲ್ಲಿ ನಾಯಕನು ತನ್ನ ಕ್ರಿಯಾಶೀಲ ವರ್ತನೆಯಿಂದ ತನ್ನ ಅನುಯಾಯಿಗಳಿಗೆ ಆದರ್ಶಪ್ರಾಯನಾಗಿರಬೇಕು."[18]

### 3. ಸನ್ನಿವೇಶ ಸಿದ್ಧಾಂತ(Situational Theory)

ನಾಯಕತ್ವವನ್ನು ಅಧ್ಯಯನ ಮಾಡುವಲ್ಲಿ ಸನ್ನಿವೇಶ ಸಿದ್ಧಾಂತವು ಮಹತ್ವದ್ದಾಗಿದೆ. ಉತ್ತಮ ನಾಯಕರ ನಿರ್ಮಾಣದಲ್ಲಿ ಸಮಯ, ಸಂದರ್ಭ, ಸನ್ನಿವೇಶ ಮಹತ್ವದ ಪಾತ್ರವನ್ನು ವಹಿಸುತ್ತವೆಂದು ಸನ್ನಿವೇಶ ಸಿದ್ಧಾಂತವು ವಿವರಿಸುತ್ತದೆ. ರಾಜಕೀಯ ನಾಯಕರು ಸಮಾಜ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದಾರೆ. ನಾಯಕರಿಲ್ಲದೆ ಉತ್ತಮ ಸಮಾಜ ವ್ಯವಸ್ಥೆಯ ನಿರ್ಮಾಣವು ಸಾಧ್ಯವಿಲ್ಲ. ಲೂಥನ್ಸ್‌ರ ಪ್ರಕಾರ "ಸನ್ನಿವೇಶ ಸಿದ್ಧಾಂತವು ಜರ್ಮನ್ ಬಾಷೆಯ Zeitgeis ಎಂಬ ಪದದಿಂದ ರೂಪಿತಗೊಂಡಿದ್ದು, ಅದರ ಅರ್ಥವು ಸಮಯ, ಸ್ಫೂರ್ತಿ ಎಂದಾಗುತ್ತದೆ."[19] "ಒಂದು ವಿಶಿಷ್ಟವಾದ ಸಮಯ ಹಾಗೂ ಸನ್ನಿವೇಶವು ನಾಯಕರನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ."[20]

---

[17] Mc Ginnie and C. Elliott, Social Behaviour, Hangton Mifflin Company, USA, 1970, Pp.-228.

[18] William, Great Political Thinkers, IBH Publishing Company, New Delhi, 1975, Pp.- 28.

[19] Luthans F., Organizational Behaviour, 5th edition McGraw Hill Book Company, Singapore, 1989, Pp.- 456.

[20] Szilagyi A.D. and Wallace A. J., Op.cit, Pp.- 287-288.

ನಾಯಕತ್ವದ ಮೇಲೆ ಮನಶಾಸ್ತ್ರಜ್ಞರು ಹಾಗೂ ರಾಜಕೀಯ ವಿದ್ವಾಂಸರು ಹಲವಾರು ಸಂಶೋಧನೆಗಳನ್ನು ಮಾಡಿದಾಗ ಕಂಡುಬಂದಿರುವ ಅಂಶವೆಂದರೆ, ಸನ್ನಿವೇಶವು ವಿಶಿಷ್ಟ ಬಗೆಯ ನಾಯಕರು ಹೊರಹೊಮ್ಮಲು ಹಾಗೂ ಅವರು ಜನಪ್ರಿಯವಾಗಿ ಸಮಾಜದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಲು ಸಹಕಾರಿಯಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಎಲ್ಲಾ ಸಮಯ ಹಾಗೂ ಸನ್ನಿವೇಶ ನಾಯಕರಿಗೆ ಅನುಕೂಲಕರವಾಗಿರುತ್ತದೆಂದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಒಂದು ಸಮಯದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ನಾಯಕರು, ಬೇರೊಂದು ಸಮಯದಲ್ಲಿ ಯಶಸ್ವಿಯಾಗದಿರಬಹುದು. ಆ ಸಂದರ್ಭದಲ್ಲಿ ನಾಯಕರಿಗೆ ಸಮಯ ಪೂರಕವಾಗಿರುವುದಿಲ್ಲ.

ಮ್ಯಾಕ್ ಗೌ ಮತ್ತು ಕೂಪರ್ ಅವರ ಪ್ರಕಾರ "ಒಂದು ವಿಶಿಷ್ಟ ಸಂದರ್ಭದಲ್ಲಿ ಜನಸಮೂಹವು ತನ್ನ ಬೇಡಿಕೆಗಳ ಈಡೇರಿಕೆಗಾಗಿ ಸಮರ್ಥ ವ್ಯಕ್ತಿಯೊಬ್ಬನ ಸಹಕಾರವನ್ನು ಒಬ್ಬ ನಾಯಕನಾಗಿ ನಿರ್ವಹಿಸಲು ಮುಂದೆ ಬರುತ್ತಾನೆ. ಹೀಗೆ ಸಮಯ ಅವನನ್ನು ನಾಯಕನನ್ನಾಗಿ ರೂಪಿಸುತ್ತದೆ."[21]

ನಾಯಕರು ಒಂದು ವಿಶಿಷ್ಟವಾದ ಸನ್ನಿವೇಶದಲ್ಲಿ ಜನರ ಬೇಡಿಕೆಗಳನ್ನು, ಅವರ ದೌರ್ಬಲ್ಯಗಳನನ್ನು ಹಾಗೂ ಅವರನ್ನು ಮುನ್ನಡೆಸಿಕೊಂಡು ಹೋಗಬಲ್ಲ ಅವಶ್ಯಕತೆಯನ್ನು ಸೂಕ್ಷ್ಮವಾಗಿ ಗುರುತಿಸುತ್ತಾರೆ. ಇವೆಲ್ಲ ಸಂದರ್ಭಗಳ ಲಾಭ ಪಡೆದು ನಾಯಕರಾಗುತ್ತಾರೆಂಬುದು ಸನ್ನಿವೇಶ ಸಿದ್ಧಾಂತ ಕಂಡುಕೊಂಡ ವಿಷಯವಾಗಿದೆ.

ವರ್ತನಾ ಸಿದ್ಧಾಂತವಾದಿಗಳ ಪ್ರಕಾರ ಒಂದು ಸನ್ನಿವೇಶದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ನಾಯಕನ ಉತ್ತಮವಾದ ವರ್ತನೆ ಅವನನ್ನು ಶ್ರೇಷ್ಠನನ್ನಾಗಿ ಮಾಡುತ್ತದೆ. ಪರಿಣಾಮಕಾರಿಯಾದ ನಾಯಕತ್ವವು ಸಮಾಜದ ಸನ್ನಿವೇಶ, ನಾಯಕ ಹಾಗೂ ಅವನನ್ನು ಅನುಸರಿಸುವ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆಂದು ಸನ್ನಿವೇಶ ಸಿದ್ಧಾಂತ ಹೇಳುತ್ತದೆ.

[21] Cooper J.B. and Mc Gaugh, Leadership Integrating Principles of Social Psychology in Leadership, Penguin Book Ltd., Baltimore, 1969, Pp.- 247.

ಫ್ರೆಡ್ರಿಕ್ ಫಿಡ್ಲರರ ಪ್ರಕಾರ "ನಾಯಕನಿಗೆ ಬಹಳ ಅನುಕೂಲಕರ ಸನ್ನಿವೇಶವೆಂದರೆ ನಾಯಕನ ಸ್ಥಾನಮಾನ ಅಧಿಕಾರ ಶ್ರೇಷ್ಠವಾಗಿರಬೇಕು. ಅವನ ಯೋಜನೆಗಳು ಸ್ಪಷ್ಟವಾಗಿರಬೇಕು ಹಾಗೂ ನಾಯಕನು ಜನರ ಜೊತೆಗೆ ಉತ್ತಮವಾದ ಸಂಬಂಧಗಳನ್ನು ಹೊಂದಿರಬೇಕು."[22]

ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ನಾಯಕರು ತಮ್ಮ ನಾಯಕತ್ವ ಜವಾಬ್ದಾರಿಗಳನ್ನು ಜನರ ಸಹಕಾರದೊಂದಿಗೆ ಬೆಳೆಸಿಕೊಳ್ಳಬೇಕಾಗುತ್ತದೆ. ಓರ್ವೆ ಟೀಡ್ ಅವರು "ನಾಯಕತ್ವದ ಬೆಳವಣಿಗೆಗೆ ಸನ್ನಿವೇಶದ ಜೊತೆಗೆ ಈ ಕೆಳಗಿನ ಹತ್ತು ಅಂಶಗಳು ಸಹಾಯಕವಾಗುತ್ತವೆ ಎನ್ನುತ್ತಾರೆ.

1. ದೈಹಿಕ ಬಲ
2. ಉದ್ದೇಶ ಮತ್ತು ನಿರ್ದೇಶನದ ಪ್ರಜ್ಞೆ
3. ಉತ್ಸಾಹ
4. ಸ್ನೇಹಗುಣ ಹಾಗೂ ಲಕ್ಷ್ಯ ವಹಿಸುವಿಕೆ
5. ಐಕ್ಯ ಭಾವನೆ
6. ತಾಂತ್ರಿಕ ಪರಿಣತಿ
7. ಜಾಣತನ
8. ಬೋಧನಾ ಕೌಶಲ್ಯ
9. ಬಟವಾಡೆ ಮಾಡುವುದು
10. ನಂಬಿಕೆಗಳು"[23]

ರಾಜಕೀಯ ನಾಯಕತ್ವದ ಮೇಲೆ ನಡೆಸಲಾದ ಹಲವಾರು ಸಂಶೋಧನೆಗಳಿಂದ ಕಂಡುಬಂದಿರುವ ಅಂಶವೆಂದರೆ ನಾಯಕತ್ವದ ಯಶಸ್ಸು, ನಾಯಕನ ಆದರ್ಶಗಳು, ದೃಷ್ಟಿಕೋನ ಹಾಗೂ ನಂಬಿಕೆಗಳನ್ನು ಅವಲಂಬಿಸಿರುತ್ತದೆ.

ನಾಯಕತ್ವದ ಎಲ್ಲಾ ಬಗೆಯ ಸಿದ್ಧಾಂತಗಳನ್ನು ಹಾಗೂ ದೃಷ್ಟಿಕೋನಗಳನ್ನು ಗಮನಿಸಿದಾಗ ಶೇಫಾಲಿ ಕಾಲಿಯಾ ಅವರು ವಿವರಿಸುವಂತೆ "ನಾಯಕತ್ವವು ಯಶಸ್ವಿಯಾಗಬೇಕಾದರೆ ನಾಯಕರಲ್ಲಿ ಧೈರ್ಯ, ಉತ್ತಮವಾದ ಹಿನ್ನೆಲೆ, ಶುದ್ಧ ಹಸ್ತ,

[22] Fiedler F.E., A Theory of Leadership Effectiveness, McGraw Hill Company, New YoRk, 1967, Pp.- 268.
[23] Orway Tead, The Art Of Leadership, Op.cit, Pp.- 20.

ಸೂಕ್ಷ್ಮಸ್ವಭಾವ ಹಾಗೂ ಜವಾಬ್ದಾರಿಗಳಿರಬೇಕು."[24] ಜಾನ್ ಮಿಲೆಟ್ ಹಾಗೂ ಸ್ಟಾಗಡಿಲ್‌ರ ಪ್ರಕಾರ "ಯಶಸ್ವಿ ನಾಯಕನಿಗೆ ಸುಂದರ ವ್ಯಕ್ತಿತ್ವ, ಬುದ್ಧಿವಂತಿಕೆ, ಶಾಂತಗುಣ, ದೂರದೃಷ್ಟಿತ್ವ ಹಾಗೂ ಉತ್ಸಾಹದಿಂದ ಜನಹಿತ ಕಾರ್ಯಗಳಿಗೆ ಮುನ್ನುಗ್ಗುವ ಸ್ವಭಾವಗಳಿರಬೇಕು."[25]

### 4.2. ಚಳ್ಳಕೆರೆ ಶಾಸಕರ ಪರಿಚಯ ಮತ್ತು ಕೊಡುಗೆಗಳು

ರಾಜ್ಯ ರಾಜಕೀಯದಲ್ಲಿ ಪರಿಶಿಷ್ಟ ಪಂಗಡ ನಾಯಕರ ಪಾತ್ರವನ್ನು ತಿಳಿಯಲು ಚಳ್ಳಕೆರೆ ಕ್ಷೇತ್ರದ 13 ಮತ್ತು 14 ನೇ ವಿಧಾನಸಭೆಗಳಲ್ಲಿ ಗೆದ್ದಂತಹ ಶಾಸಕರ ಕಿರುಪರಿಚಯ ಮತ್ತು ಕೊಡುಗೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

#### 4.2.1. ಶ್ರೀ ತಿಪ್ಪೇಸ್ವಾಮಿ

ಒಬ್ಬ ಸಾಧಕನ ಹಿಂದೆ ಕಷ್ಟಕಾರ್ಪಣ್ಯಗಳ, ಶೋಚನೀಯ ಘಟನೆಗಳ, ರೋಚಕ ಬಡತನ, ಸಮಾಜದ ನಿರ್ಲಕ್ಷ್ಯತೆ ಅನೇಕ ಅವಮಾನಗಳ ಸರಮಾಲೆಯ ಅನುಭವ, ತನ್ನಲ್ಲಿ ಏನಾದರೂ ಸಾಧಿಸಬೇಕೆಂಬ ಅಚಲವಾದ ಛಲ, ಗುರಿ, ಕಠಿಣ ಪರಿಶ್ರಮ, ಸಂಕಲ್ಪ ಎಂತಹ ಸಾಮಾನ್ಯನನ್ನು ದೊಡ್ಡಸ್ಥಾನಕ್ಕೆ ಕೈ ಹಿಡಿದು ನಡೆಸಿಕೊಂಡು ಹೋಗುತ್ತದೆ. ಈಗ ನಾನು ಹೇಳಲು ಹೊರಟಿರುವುದು ಇಂತಹ ಮಹಾನ್ ಸಾಧನೆಯನ್ನು ಸಾಧಿಸಿರುವ ಸಮಾಜಕ್ಕೆ ತಾವು ನಿಸ್ವಾರ್ಥ ಸೇವೆಯನ್ನು ಮಾಡಿ ಬದುಕಿರುವಾಗಲೆ ದಂತಕಥೆಯಾಗಿದೆ.

ಚಿತ್ರದುರ್ಗ ಜಿಲ್ಲೆ ಸದಾ ಬರಗಾಲದಿಂದ ಮಳೆಬಾರದ ಬೆಂಗಾಡು. ಮುಗಿಲಮಳೆಯನ್ನು ನಂಬಿ ಬದುಕು ಹಸನಾಗುವುದೆಂದು ಬಿತ್ತಿದ ನೆಲಗಡಲೆಯ ವರ್ಷಪೂರ್ತಿ ರೈತಣ್ಣನ ಗಂಜಿಗೆ ಆಧಾರ ಕೈಕೊಟ್ಟ ಮಳೆ ರೈತ ಕುಟುಂಬಕ್ಕೆ ಬಿಸಿಲಿನಿಂದ ಕಾದ ಬಾಣಲಿಗೆ ನೂಕಿದಂತಹ ದುರ್ಭರ ನರಕದ ಜೀವನ. ಇಂತಹ ದುರ್ಗದ ಜಿಲ್ಲೆಯ ಚಳ್ಳಕೆರೆಯು ರಾಜ್ಯದಲ್ಲಿಯ ಅತ್ಯಂತ ಕಡಿಮೆ ಮಳೆಬೀಳುವ ತಾಲ್ಲೂಕು ಎಂಬ ಕೀರ್ತಿಯ ಕಿರೀಟವನ್ನು, ದುರಂತದ ಛಾಯೆಯನ್ನು ಹೊತ್ತ ಊರು. ಇಲ್ಲಿ ಅನೇಕ ಸಾಹಿತಿಗಳು, ನಾಟಕಕಾರರು, ಜನಪದಕಾರರು, ಕವಿಗಳು ಹೀಗೆ ಕನ್ನಡದ ಕಂಪನ್ನು ಕೊಟ್ಟ ತಾಲ್ಲೂಕು. ಹಾಗೆಯೇ ರಾಜಕಾರಣಕ್ಕೆ ಭೀಮಪ್ಪನಾಯಕ, ಮಸಿಯಪ್ಪ, ಬಿ. ಎಲ್. ಗೌಡ, ಶಿವಶಂಕರಮೂರ್ತಿ, ಎನ್. ಜಯಣ್ಣ ಇತ್ತೀಚಿನ ಡಿ. ಸುಧಾಕರ್, ರಘುಮೂರ್ತಿ ಅಂತಹವರು ಶಾಸಕರಾಗಿದ್ದ ವಿಧಾನಸಭಾ ಕ್ಷೇತ್ರ ಇದಾಗಿದೆ. ಚಳ್ಳಕೆರೆಯ ತಾಲ್ಲೂಕಿನಲ್ಲಿ

[24] Shefali Kalia, Good Governance and Development, New Century Publications, New Delhi, 2004, Pp.- 1.

[25] Stogdill R., "Personal Factors Associated with Leadership", A Survey of Literature, Journal of Psychology, Vol. 25, 1948, Pp. 35-71.

ಪರಿಶಿಷ್ಟವರ್ಗ(ನಾಯಕ ಜನಾಂಗ), ಪರಿಶಿಷ್ಟ ಜಾತಿ, ಯಾದವರು ಅತಿಹೆಚ್ಚು ಜನಸಂಖ್ಯೆಯನ್ನು ಹೊಂದಿರುವರು.

**1. ತಿಪ್ಪೇಸ್ವಾಮಿಯವರ ಬಾಲ್ಯಜೀವನ**

ಚಳ್ಳಕೆರೆ ನಗರದಲ್ಲಿರುವ ಕಾಟಪ್ಪನಹಟ್ಟಿಯ ಬಡ ನಾಯಕ ಜನಾಂಗದ ಎಲೆಬೋರಮ್ಮ ಕಾರ್ಖಾನೆ ಬೋರಯ್ಯ ದಂಪತಿಗಳ 5 ಜನ ತುಂಬುಸಂಸಾರದಲ್ಲಿ ಕೊನೆಯ ಮಗನಾಗಿ ಹುಟ್ಟಿದವರು ತಿಪ್ಪೇಸ್ವಾಮಿ. ಅವರ ಬಾಲ್ಯದಲ್ಲಿ ಕಡುಬಡತನದ ಬದುಕು. ತಾಯಿ ಬೋರಮ್ಮ ವೀಳ್ಯದ ಎಲೆಯನ್ನು ಬುಟ್ಟಿಯಲ್ಲಿ ಹೊತ್ತು ಮಾರಿ ಬಂದ ಆದಾಯದಲ್ಲಿ ಬದುಕಿನ ಬಂಡಿ ನೂಕಬೇಕಾಗಿತ್ತು. ತಂದೆಯವರು ಮಂಡಕ್ಕಿ ಭಟ್ಟಿಯಲ್ಲಿ(ಚಿರುಮುರಿ) ಶ್ರಮದ ಕೆಲಸ. ಬಾಲಕನಾದ ತಿಪ್ಪೇಸ್ವಾಮಿಯವರು ತಾಯಿ ಜೊತೆ ಬೀದಿಬೀದಿ ಅಲೆದು ಕಷ್ಟಪಡುವುದನ್ನು ಸ್ವತಃ ಅನುಭವಿಸಿ ತಾಯಿಯ ಕಷ್ಟ, ತಂದೆಯ ಶ್ರಮ, ಚುರುಕಾದ ಬಾಲಕನಿಗೆ ತನ್ನ ತಂದೆ–ತಾಯಿಯ ಬದುಕಿನ ಹೋರಾಟ, ಅವರ ತಾಳ್ಮೆ, ವ್ಯಾವಹಾರಿಕ ಜಾಣ್ಮೆ ತುಂಬುಸಂಸಾರವನ್ನು ಸಾಕಿಸಲುಹಿದ ಬಾಲಕ ತಿಪ್ಪೇಸ್ವಾಮಿಯಲ್ಲಿ ಛಲದ ಗುರಿಯು ಮೂಡಿರುವುದು ಆಶ್ಚರ್ಯವೇನಲ್ಲ. ಹೀಗೆ ಕಷ್ಟದಲ್ಲಿ ಬಾಲ್ಯ ಮುಗಿಸಿ ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿ ಸದಾ ಕ್ರಿಯಾಶೀಲ ಗೆಳೆಯರ ತಂಡ ಕಟ್ಟಿ ಕ್ರೀಡೆ, ಡ್ರಾಮಗಳನ್ನು ತನ್ನ ನಾಯಕತ್ವದಲ್ಲಿ ಆಯೋಜಿಸಿ ಎಲ್ಲಾ ಸ್ಪರ್ಧೆಯಲ್ಲಿಯೂ ಪ್ರಥಮ ಸ್ಥಾನ ಪಡೆಯುತ್ತಾ ಉತ್ಸಾಹಿಯುವಕರಾಗಿದ್ದರು. ಜೀವನೋಪಾಯಕ್ಕಾಗಿ ಮಂಡಕ್ಕಿಭಟ್ಟಿ, ಇಟ್ಟಿಗೆ ಭಟ್ಟಿಗಳನ್ನು ನಡೆಸುತ್ತ ಶ್ರಮದ ಬದುಕನ್ನು ನಡೆಸುವ ಕಾಯಕಯೋಗಿಯಾಗಿದ್ದ ಮಾದರಿ ಯುವಕರಾಗಿದ್ದರು. ಆಗತಾನೆ ಚಳ್ಳಕೆರೆಯ ವಿಧಾನಸಭೆಗೆ ಆಯ್ಕೆಯಾಗಿದ್ದ ಬಿ.ಎಲ್. ಗೌಡರು ಶಾಸಕರಾಗಿದ್ದರು. ಇನ್ನು ಕಾಟಪ್ಪನಹಟ್ಟಿಯಲ್ಲಿ ರಾಜಮದಕರಿನಾಯಕರ ವಂಶಸ್ಥರಾದ, ಪುರಸಭೆಯ ಮಾಜಿ ಅಧ್ಯಕ್ಷರಾದ ರಾಜಪರಶುರಾಮನಾಯಕರು ಯುವಕ ತಿಪ್ಪೇಸ್ವಾಮಿ ಅವರ ಸಂಘಟನೆಯ ಚತುರತೆ, ಪಾದರಸದಂತಹ ಹುಡುಗನ ಚಲನವಲನವನ್ನು ಗುರುತಿಸಿ, ಸ್ಥಳೀಯ ಪುರಸಭೆಯ ಚುನಾವಣೆಯಲ್ಲಿ 1ನೇ ಬ್ಲಾಕ್‌ನಿಂದ ಸ್ಪರ್ಧಿಸುವಂತೆ ಕರೆದು ಹೇಳಿದಾಗ ಮೊದಲು ನಿರಾಕರಿಸಿ ಆ ಮೇಲೆ ಹಿರಿಯರ ಮಾತನ್ನು ಗೌರವಿಸಿ ಸ್ಪರ್ಧಿಸಿ ಗೆದ್ದರು. ಅದೇ ಅವಧಿಯಲ್ಲಿ ಚಿಕ್ಕವಯಸ್ಸಿನ ಪುರಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು.

**2. ರಾಜಕೀಯ ಜೀವನ**

ತಿಪ್ಪೇಸ್ವಾಮಿ ಅವರು ಆಕಸ್ಮಿಕವಾಗಿ ರಾಜಕೀಯಕ್ಕೆ ಪ್ರವೇಶಿಸಿದರು. 1974ರಲ್ಲಿ ಮೊದಲ ಬಾರಿಗೆ ಮುನ್ಸಿಪಾಲಿಟಿ ಕೌನ್ಸಿಲರ್ ಆಗುವುದರ ಮೂಲಕ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದರು. ರಾಜಕೀಯ ಪಕ್ಷಗಳೊಂದಿಗೆ ಒಡನಾಟ ಇಟ್ಟುಕೊಂಡು 1982ರಲ್ಲಿ ಚಳ್ಳಕೆರೆ ತಾಲೂಕು ಜನತಾಪಕ್ಷದ ಅಧ್ಯಕ್ಷರಾದರು. 1985ರಲ್ಲಿ ಎಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಜನತಾಪಕ್ಷದಿಂದ ಶಾಸಕರಾಗಿ ಚಳ್ಳಕೆರೆ ಕ್ಷೇತ್ರದಿಂದ ಆಯ್ಕೆ ಆಗಿದ್ದರು. ನಂತರ 1989ರಲ್ಲಿ ಎಚ್.ಡಿ. ದೇವೇಗೌಡರ ಸಮಾಜವಾದಿ ಜನತಾಪಕ್ಷದೊಂದಿಗೆ ರಾಜ್ಯದಾದ್ಯಂತ ಪ್ರವಾಸ ಮಾಡಿದರು. ತಿಪ್ಪೇಸ್ವಾಮಿ ಅವರ ಬಡತನ, ಕೊಟ್ಟಿಗೆ ಮನೆ ನೋಡಿದ ಎಚ್.ಡಿ. ದೇವೇಗೌಡರು "ತಿಪ್ಪೇಸ್ವಾಮಿ ನಿಮ್ಮ ಈ ಸಣ್ಣ ಮನೆಯಲ್ಲಿ ಕಂಬಳಿ ಹಾಸಿ ನನ್ನನ್ನು ಕೂರಿಸಿ ಸತ್ಕರಿಸಿದ್ದೀರಿ, ನೀನು ನನ್ನೊಂದಿಗೆ ಸದಾ ಇದೇ ಬಗೆಯ ಸ್ನೇಹ, ಸಹಕಾರ ಮತ್ತು ನಿಷ್ಠೆಯನ್ನು ಇಟ್ಟುಕೊಂಡರೆ ದೊಡ್ಡ ಮನೆಯನ್ನು ನಾನೇ ಕಟ್ಟಿಸಿಕೊಡುವೆನು. ನೀನು ಚಿಂತಿಸಬೇಡ" ಎಂದು ಧೈರ್ಯ ಹೇಳಿ ಜನಾಂಗದ ಹಾಗೂ ಪಕ್ಷದ ಸಂಘಟನೆಯಲ್ಲಿ ತೊಡಗುವಂತೆ ಎಚ್.ಡಿ. ದೇವೇಗೌಡರು ಸಲಹೆ ನೀಡಿದರು.

1994ರ ವಿಧಾನಸಭೆ ಚುನಾವಣೆಯಲ್ಲಿ ಜನತಾದಳದಿಂದ ಸ್ಪರ್ಧಿಸಿ ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆ ಆದರು. ಆಗ ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ತಿಪ್ಪೇಸ್ವಾಮಿ ಅವರಿಗೆ ಅಬಕಾರಿ ಖಾತೆಯನ್ನು ಕೊಡಲಾಯಿತು. ಎಚ್.ಡಿ. ದೇವೇಗೌಡರು ಪ್ರಧಾನಿಯಾಗಿ ನವದೆಹಲಿಗೆ ತೆರಳಿ ಅಧಿಕಾರ ವಹಿಸಿಕೊಂಡಾಗ ಜೂನ್ 1, 1996ರಲ್ಲಿ ಜೆ.ಎಚ್. ಪಟೇಲರು ಕರ್ನಾಟಕದ ಮುಖ್ಯಮಂತ್ರಿ ಆದರು. ಆಗ ತಿಪ್ಪೇಸ್ವಾಮಿ ಅವರು ಸಣ್ಣ ನೀರಾವರಿ ಹಾಗೂ ಅಂತರ್ಜಲ ಖಾತೆಯನ್ನು ನಿರ್ವಹಿಸಿದರು. ಜೊತೆಗೆ ಚಿತ್ರದರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಜನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದ್ದು ಗಮನಾರ್ಹ. ಶಾಸಕರಾಗಿ ಚಳ್ಳಕೆರೆ ಕ್ಷೇತ್ರದಲ್ಲಿ ಸದಾ ಬರಗಾಲ ಮತ್ತು ಬಡತನಕ್ಕೆ ಕಾರಣವಾದ ಸಂಗತಿಗಳನ್ನು ಹುಡುಕುತ್ತಾ ಸಮಸ್ಯೆಗೆ ಪರಿಹಾರ ಹುಡುಕುತ್ತಿದ್ದರು. ರಸ್ತೆ, ಕುಡಿಯುವ ನೀರು, ಆಶ್ರಯಮನೆ, ಶಾಲಾಕಟ್ಟಡ, ಸಮುದಾಯ ಭವನ, ಸರ್ಕಾರಿ ಕಚೇರಿಯ ಕಟ್ಟಡಗಳನ್ನು ನಿರ್ಮಿಸಿದ್ದು ಸತ್ಯ. ಹಾಗೆಯೇ ವಾಲ್ಮೀಕಿ ಸಮುದಾಯಕ್ಕೆ ವಾಲ್ಮೀಕಿ ಸಮುದಾಯ ಭವನ, ಕಲ್ಯಾಣ ಮಂಟಪಗಳನ್ನು ನಿರ್ಮಿಸಿದ್ದರು. ಪರಿಶಿಷ್ಟ ಜಾತಿಯವರಿಗೆ ಅಂಬೇಡ್ಕರ್ ಭವನ, ಹಿಂದುಳಿದವರಿಗೆ ದೇವರಾಜು ಅರಸು ಭವನ ನಿರ್ಮಾಣ ಮಾಡಿದ್ದು ಗಮನಾರ್ಹವಾಗಿದೆ.

ಅಬಕಾರಿ ಸಚಿವರಾದಾಗ ಅನೇಕ ಸಮಸ್ಯೆ, ಸವಾಲುಗಳನ್ನು ಎದುರಿಸಿದರು. ಅಬಕಾರಿ ಸುಂಕ, ಕರ್ನಾಟಕದಲ್ಲಿ ಸಾರಾಯಿಯನ್ನು ನಿಷೇಧಿಸುವ ಪ್ರಯತ್ನಗಳು ನಡೆದವು. ರಾಜ್ಯ ಹಾಗೂ ದೇಶದಾದ್ಯಂತ ಅಬಕಾರಿ/ಮಾದಕವಸ್ತು/ಧೂಮಪಾನ ಮೊದಲಾದ ಕೆಟ್ಟ ಚಟಗಳಿಗೆ ದಾಸರಾದ ಜನರನ್ನು ಮುಕ್ತಗೊಳಿಸಲು ಮಠಾಧೀಶರು ಹಾಗೂ ಬುದ್ಧಿಜೀವಿಗಳಿಂದ ಸಲಹೆಗಳನ್ನು ಪಡೆದುಕೊಂಡಿದ್ದರು. ನವದೆಹಲಿಯಲ್ಲಿ ನಡೆದ ಅಬಕಾರಿ ನೀತಿ ಕುರಿತು ಸಭೆಗಳಲ್ಲಿ ಭಾಗವಹಿಸಿ ರಾಜ್ಯದ ಪರ ಮಾಹಿತಿ ನೀಡಿದ್ದರು.

ಎರಡನೇ ಬಾರಿ ಸಚಿವರಾದಾಗ ಜೆ.ಎಚ್. ಪಟೇಲ್ ಸಂಪುಟದಲ್ಲಿ ಸಂಪುಟದರ್ಜೆ ಮಂತ್ರಿಯಾಗಿ ಸಣ್ಣ ನೀರಾವರಿ ಇಲಾಖೆ ಮತ್ತು ಅಂತರ್ಜಲ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದರು. ಬರಡು ಪ್ರದೇಶ, ಬಯಲುಸೀಮೆಯಲ್ಲಿ ಮಳೆಯಾಗುವುದು ಅಪರೂಪ, ಅಂಥ ಪ್ರದೇಶಗಳನ್ನು ಆಯ್ದುಕೊಂಡು ಸಣ್ಣ ಸಣ್ಣ ಕೆರೆಗಳ ನಿರ್ಮಾಣ, ನೀರು ತುಂಬಿಸುವ ಯೋಜನೆ, ಕಾಲುವೆಗಳ ನಿರ್ಮಾಣ ಹಾಗೂ ನೀರಾವರಿಗೆ ಒಣಭೂಮಿಯನ್ನು ಹಸಿರುಗೊಳಿಸಿದ್ದು ಇವರ ಸಾಧನೆಯಾಗಿದೆ. ರಾಣಿಕೆರೆ, ಹಿರೇಕೆರೆ ಮೊದಲಾದ ಗ್ರಾಮೀಣ ಭಾಗದ ಕೆರೆಗಳನ್ನು ಜೀರ್ಣೋದ್ಧಾರ ಮಾಡಿ ನೀರು ಸಂಗ್ರಹಿಸಲು ಪ್ರೋತ್ಸಾಹಿಸಿದರು. 2008ರಲ್ಲಿ ಬಿ.ಜೆ.ಪಿ. ಪಕ್ಷದಿಂದ ಶಾಸಕರಾಗಿ ಆಯ್ಕೆಯಾದರು. ಆಗ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದು, ಕರುಣಾಕರರೆಡ್ಡಿ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದರು. ಅನಾರೋಗ್ಯದ ಕಾರಣ ತಿಪ್ಪೇಸ್ವಾಮಿಯವರು ಮಂತ್ರಿ ಸ್ಥಾನವನ್ನು ಬಯಸಲಿಲ್ಲ. ಪರಿಶಿಷ್ಟ ಪಂಗಡದವರೇ ಆದ ಬಿ. ಶ್ರೀರಾಮುಲು, ಬಾಲಚಂದ್ರ ಜಾರಕಿಹೊಳಿ, ಶಿವನಗೌಡನಾಯಕ, ರಾಜೂಗೌಡ, ಎಸ್.ವಿ. ರಾಮಚಂದ್ರ ಮೊದಲಾದವರು ಬಿ.ಜೆ.ಪಿ. ಪಕ್ಷದಿಂದ ಸಾಕಷ್ಟು ಪ್ರಯೋಜನ ಪಡೆದುಕೊಂಡರು. ಯಾವುದೇ ಕಪಟತನ, ಸುಳ್ಳು ಇಲ್ಲದೇ, ಪ್ರಾಮಾಣಿಕತೆ ಮತ್ತು ಸಜ್ಜನ ರಾಜಕಾರಣಿಯಾದ ತಿಪ್ಪೇಸ್ವಾಮಿಯವರು ಎಲ್ಲಾ ಬಗೆಯ ಕುಟಿಲತೆ, ವಂಚನೆ, ಅಧಿಕಾರದಾಹ, ಮೋಸ ಹೀಗೆ ಕೆಟ್ಟ ರಾಜಕಾರಣಿಗಳನ್ನು ಕಂಡು ದುಃಖವನ್ನು ಅನುಭವಿಸುತ್ತಿದ್ದರು.

### 3. ಸಮುದಾಯದಲ್ಲಿ ಜಾಗೃತಿ ಮೂಡಿಸಿದ ಮಹಾನುಭಾವ

ಅನೈಕ್ಯತೆ, ಅಜ್ಞಾನ, ಅನಕ್ಷರತೆಯಿಂದ ಬಳಲುತ್ತಿದ್ದ ಪರಿಶಿಷ್ಟ ಪಂಗಡ ಸಮಾಜವನ್ನು ಒಂದೇ ವೇದಿಕೆಯಲ್ಲಿ ತರುವಂಥ ಪ್ರಯತ್ನ ಮಾಡಿದರು. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಜನಜಾಗೃತಿ ಮೂಡಿಸಿದರು. ಇವರೊಂದಿಗೆ ಜಗಳೂರು

ಶಾಸಕರಾಗಿದ್ದ ಎಂ. ಬಸಪ್ಪ, ಮೊಳಕಾಲ್ಮೂರು ಶಾಸಕರಾಗಿದ್ದ ಪೂರ್ಲಮುತ್ತಪ್ಪ, ಕೂಡ್ಲಿಗಿಯ ಮಾಜಿ ಶಾಸಕ ಎನ್.ಟಿ. ಬೊಮ್ಮಣ್ಣ ಮೊದಲಾದವರೊಂದಿಗೆ ಪ್ರವಾಸ ಮಾಡಿ ಕಾರ್ಯಕ್ರಮಗಳನ್ನು ರೂಪಿಸಿದರು. ವಾಲ್ಮೀಕಿ ಜಯಂತಿಗಳಲ್ಲಿ ತಿಪ್ಪೇಸ್ವಾಮಿ ಅವರು ಏಕಲವ್ಯನಂತೆ ಹೆಬ್ಬೆರಳು ಕೊಡಬೇಡಿ, ಆಧುನಿಕ ದ್ರೋಣಾಚಾರ್ಯರು ಇಂದಿಗೂ ಇದ್ದಾರೆ ಎಂದು ಭಾಷಣದಲ್ಲಿ ತಿಳಿಸುತ್ತಿದ್ದರು. ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಧಾರವಾಡ, ಹಾವೇರಿ, ದಾವಣಗೆರೆ, ರಾಣೆಬೆನ್ನೂರು, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಮೊಳಕಾಲ್ಮೂರು, ಜಗಳೂರು ಹೀಗೆ ನಾನಾ ಭಾಗಗಳಲ್ಲಿ ವಾಲ್ಮೀಕಿ ಜಯಂತಿಗಳಲ್ಲಿ ಭಾಗವಹಿಸಿ ಜನಪ್ರಿಯ ಭಾಷಣ ಮಾಡುತ್ತಿದ್ದರು.

**4. ರಾಜಕಾರಣಿಗಳ ಒಡನಾಟ**

ತಿಪ್ಪೇಸ್ವಾಮಿಯವರಿಗೆ ಹೇಳಿಕೊಳ್ಳುವಂಥ ಗಾಡ್‌ಫಾದರ್ ಯಾರೂ ಇರಲಿಲ್ಲ. ಎಚ್.ಡಿ. ದೇವೇಗೌಡರನ್ನು ಮಾತ್ರ ತಮ್ಮ ಆರಾಧ್ಯ ನಾಯಕನಂತೆ ಗೌರವಿಸುತ್ತಿದ್ದರು. ತಿಪ್ಪೇಸ್ವಾಮಿ ಅವರೆಂದರೆ ದೇವೇಗೌಡರಿಗೆ ಎಲ್ಲಿಲ್ಲದ ಪ್ರೀತಿ, ಅಭಿಮಾನವಿತ್ತು. ಏಕೆಂದರೆ ಬ್ರಾಹ್ಮಣ(ಹೆಗಡೆ) ಗುಂಪಿನಲ್ಲಿ ಕೆಲವು ನಾಯಕರಿದ್ದರೆ, ಶೂದ್ರವರ್ಗದ ನಾಯಕರಲ್ಲಿ ಎಚ್.ಡಿ. ದೇವೇಗೌಡರನ್ನು ತಿಪ್ಪೇಸ್ವಾಮಿ ಹಿಂಬಾಲಿಸುತ್ತಿದ್ದರು. ತಿಪ್ಪೇಸ್ವಾಮಿಯವರಿಗೆ ಬಿ.ಎಲ್. ಗೌಡ ಬಿಟ್ಟ ನಂತರ ಎಸ್. ನಿಜಲಿಂಗಪ್ಪ, ಎಚ್. ಏಕಾಂತಯ್ಯ, ಡಿ. ಮಂಜುನಾಥ, ಕೆ.ಎಚ್. ರಂಗನಾಥ, ಅಶ್ವತ್ಥರೆಡ್ಡಿ, ಜೆ.ಎಚ್. ಪಟೇಲ್, ಎಂ.ಪಿ. ಪ್ರಕಾಶ್, ವಿ.ಎಸ್. ಉಗ್ರಪ್ಪ, ವೈ. ನೆಟ್ಟಕಲ್ಲಪ್ಪ, ಎನ್.ಟಿ. ಬೊಮ್ಮಣ್ಣ ಮೊದಲಾದವರಿದ್ದರು.

ಚಳ್ಳಕೆರೆಯಲ್ಲಿ ಮೀಸಲಾತಿಗೆ ಮೊದಲು ಡಿ. ಸುಧಾಕರ್ ಶಾಸಕರಾಗಿ ಆಯ್ಕೆಯಾದಾಗ ತಿಪ್ಪೇಸ್ವಾಮಿ ಸೋಲುಂಡರು. ಹಾಗೆಯೇ 2008ರಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಾಯಿತು. ಆ ಸಂದರ್ಭದಲ್ಲಿ ಚಲನಚಿತ್ರ ನಟ ಶಶಿಕುಮಾರ್ ಎದುರು ಸೋಲುತ್ತಾರೆ ಎಂದು ಭಾವಿಸಲಾಗಿತ್ತು. ಜನಾಂಗದ ಸೇವಕನನ್ನು ಜನ ಜಯಶೀಲರನ್ನಾಗಿ ಮಾಡಿದರು. ಬಳ್ಳಾರಿಯಲ್ಲಿ 1999ರ ನಂತರ(2001–02ರಲ್ಲಿ) ಲೋಕಸಭೆಯ ಉಪಚುನಾವಣೆಗೆ ಸೋನಿಯಾಗಾಂಧಿ ರಾಜೀನಾಮೆ ನೀಡಿದಾಗ ನಡೆದ ಚುನಾವಣೆಯಲ್ಲಿ ಜೆ.ಡಿ(ಎಸ್)ನಿಂದ ನಿಂತು ಸೋತರೂ ಬಳ್ಳಾರಿಯಲ್ಲಿ ತಮ್ಮ ಸಾಮರ್ಥ್ಯವನ್ನು ಬಲಪಡಿಸಿಕೊಂಡಿದ್ದರು. 2013ರ ವಿಧಾನಸಭಾ ಚುನಾವಣೆಯಿಂದ ದೂರವಿದ್ದು ಮಗ ಕೆ.ಟಿ. ಕುಮಾರಸ್ವಾಮಿಗೆ ರಾಜಕೀಯ ಪ್ರವೇಶ ನೀಡಿದರು.

## 5. ವಾಲ್ಮೀಕಿ ಗುರುಪೀಠ

ದಿನಾಂಕ 09.02.1998ರಂದು ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ವಾಲ್ಮೀಕಿ ಗುರುಪೀಠವನ್ನು ಸ್ಥಾಪಿಸಲು ಸಂಕಲ್ಪ ಮಾಡಿಕೊಂಡ ತಿಪ್ಪೇಸ್ವಾಮಿಯವರು 1995ರಿಂದ ಆರಂಭಿಸಿ 1998ರವರೆಗೆ ತಮ್ಮ ಜನಜಾಗೃತಿ ಯಾತ್ರೆಯನ್ನು ಮುಗಿಸಿದರು. ಬೆಂಗಳೂರಿನಿಂದ ಬೀದರ್‌ವರೆಗೆ, ವಿಜಾಪುರ ಧಾರವಾಡದಿಂದ ಮೈಸೂರು ಚಾಮರಾಜನಗರದವರೆಗೆ ವಾಲ್ಮೀಕಿ ಗುರುಪೀಠವನ್ನು ಸ್ಥಾಪಿಸಲು ಯುವಪಡೆಯನ್ನು ಕಟ್ಟಿದರು. ಹಾಗೆಯೇ ಮುಖಂಡರು, ರಾಜಕಾರಣಿಗಳು, ಸಮಾಜ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ತರುವಂತಹ ಪ್ರಯತ್ನ ಮಾಡಿದರು. ದಾವಣಗೆರೆ ನಗರದ ಪ್ರೊ. ಎ. ಲಿಂಗಪ್ಪ, ಎಂ. ಬಸಪ್ಪ, ಹೂವಿನಮಡು ಶೇಖರಪ್ಪ ಮೊದಲಾದವರೊಂದಿಗೆ ಚರ್ಚಿಸಿ, ರಾಜನಹಳ್ಳಿ ಸಮೀಪ ಜಮೀನನ್ನು ಖರೀದಿಸಿ ಮಠ ಮಾಡಲು ಪ್ರೋತ್ಸಾಹಿಸಿದರು. ವಾಲ್ಮೀಕಿ ಮಠ ಅಥವಾ ಗುರುಪೀಠಕ್ಕೆ ಅನುಕೂಲವಾಗುವಂತಹ ಧರ್ಮದರ್ಶಿ ಮಂಡಳಿಯನ್ನು ರಚಿಸಿ, ಆ ಮೂಲಕ ಕಾರ್ಯಯೋಜನೆಗಳನ್ನು ಪೂರೈಸಿದರು. ಪ್ರತಿ ವರ್ಷ ವಾಲ್ಮೀಕಿ ಜಯಂತಿ ಕಾರ್ಯಕ್ರಮಗಳನ್ನು ಗುರುಪೀಠದಲ್ಲಿ ನಡೆಸಲು ಯುವಪಡೆಯನ್ನು ಕಟ್ಟಿದರು. ಹಾಗೆಯೇ ಗುರುಪೀಠದ ಆಶ್ರಯದಲ್ಲಿ ಗುರುಕುಲಶಾಲೆ, ಪ್ರೌಢಶಾಲೆ, ಐಟಿಐ ಕಾಲೇಜುಗಳಲ್ಲದೆ ಮೆಡಿಕಲ್ ಕಾಲೇಜು ಸ್ಥಾಪಿಸುವ ಯೋಜನೆ ತಿಪ್ಪೇಸ್ವಾಮಿಯವರಿಗಿತ್ತು. ಇಂದಿಗೂ ಗುರುಪೀಠದ ಆವರಣದಲ್ಲಿ ಗಿಡ ಮರಗಳನ್ನು ನೆಟ್ಟು ಅಚ್ಚ ಹಸಿರು ವಾತಾವರಣವನ್ನು ಮಾಡಲಾಗಿದೆ. ಕಲ್ಯಾಣ ಮಂಟಪವನ್ನು ನಿರ್ಮಿಸಿ ಸಮುದಾಯದ ಮದುವೆಗಳನ್ನು ಇಲ್ಲಿಯೇ ಮಾಡಬೇಕೆಂದು ತಿಳಿಸುತ್ತಿದ್ದರು.

## 6. ಚಳ್ಳಕೆರೆ ತಿಪ್ಪೇಸ್ವಾಮಿಯವರು ಶಾಸಕರಾಗಿ ಮತ್ತು ಮಂತ್ರಿಗಳಾಗಿ ಮಾಡಿದ ಸಾಧನೆಗಳು

### ಮೀಸಲಾತಿಗಾಗಿ ಹೋರಾಟ

ತಿಪ್ಪೇಸ್ವಾಮಿಯವರು ನಾಯಕ ಬುಡಕಟ್ಟಿಗೆ ಮಾತ್ರ ಪರಿಶಿಷ್ಟ ವರ್ಗ(ಎಸ್.ಟಿ.)ದ ಸೌಲಭ್ಯಗಳನ್ನು ಪರ್ಯಾಯ ಪದಗಳಿಗೆ ವಿಸ್ತರಿಸಲು ಹೋರಾಟ ಮಾಡಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿರುವ ನಾಯಕ(ಮ್ಯಾಸನಾಯಕ)ರು ಎಸ್.ಟಿ. ಸೌಲಭ್ಯ ಪಡೆಯುತ್ತಿದ್ದರು. ಹಾಗೆಯೇ ರಾಜ್ಯದ ಗೋಕಾಕ್, ವಿರಾಜಪೇಟೆಗಳಲ್ಲಿ ಮೀಸಲು ಸೌಲಭ್ಯಗಳನ್ನು ಪಡೆಯುತ್ತಿದ್ದರು. ಇಲ್ಲಿ ಗಮನಿಸುವ ಸಂಗತಿ ಯೆಂದರೆ ಕರ್ನಾಟಕದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ 52 ಬುಡಕಟ್ಟುಗಳಿವೆ. ಅವುಗಳಲ್ಲಿ ನಾಯಕ ಬುಡಕಟ್ಟು ಬಹುದೊಡ್ಡ ಪಂಗಡವಾಗಿತ್ತು. 1991ರಲ್ಲಿ ಸನ್ಮಾನ್ಯ ಎಚ್.ಡಿ. ದೇವೇಗೌಡರ ಮೂಲಕ ವಿ.ಪಿ. ಸಿಂಗ್,

ಚಂದ್ರಶೇಖರ್ ಪ್ರಧಾನಿಗಳಾಗಿದ್ದಾಗ ನಾಯಕ ಬುಡಕಟ್ಟಿನ ಪರ್ಯಾಯ ಪದಗಳಾದ ಬೇಡ, ವಾಲ್ಮೀಕಿ, ನಾಯಕ ಮಕ್ಕಳನ್ನು ಎಸ್.ಟಿ. ಗೆ ಸೇರಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡು ಗೆಜೆಟ್ ಪ್ರಕಟಿಸಿತು. ಆಗ ಬಳ್ಳಾರಿ ಜಿಲ್ಲೆಯ ವಾಲ್ಮೀಕಿ, ಉತ್ತರ ಕರ್ನಾಟಕದ ಬೇಡ, ವಾಲ್ಮೀಕಿಗಳು ಈ ಸೌಲಭ್ಯವನ್ನು ಪಡೆದುಕೊಂಡವಷ್ಟೆ, ಆದರೆ ಶೇಕಡ ಪ್ರಮಾಣ ಹೆಚ್ಚಾಗಲಿಲ್ಲ. ಕೇಂದ್ರ ಸರ್ಕಾರ ಕೊಡುವ ಎಸ್.ಟಿ.ಗೆ 7.5 ಮೀಸಲು ಪ್ರಮಾಣ ರಾಜ್ಯಕ್ಕೂ ವಿಸ್ತರಿಸಬೇಕೆಂದು ಹೋರಾಟಗಳು ನಡೆಯುತ್ತಿವೆ.

ಅಂದು ಜಾತಿಭೇದ ಮರೆತು ಯಾವುದೇ ಒಳಪಂಗಡಗಳ ಪೂರ್ವಗ್ರಹ ಇಲ್ಲದೇ ತಿಪ್ಪೇಸ್ವಾಮಿ ಯವರು ನಾಯಕ ಬುಡಕಟ್ಟಿಗೆ ಹೆಗಲು ಕೊಟ್ಟು ದುಡಿದರು. ಅದೇ ನಾಯಕರು ತಿಪ್ಪೇಸ್ವಾಮಿಯನ್ನು, ಎಚ್.ಡಿ. ದೇವೇಗೌಡರನ್ನು ಮರೆತರು. ತಿಪ್ಪೇಸ್ವಾಮಿ ಅವರಿಗೆ ಯಾವುದೇ ಸಂಕುಚಿತ ಮನೋಭಾವನೆ ಇರಲಿಲ್ಲ, ದೂರ ದೃಷ್ಟಿ ಇತ್ತು. ಎಲ್ಲಾ ವಾಲ್ಮೀಕಿ ನಾಯಕರು ಒಂದಾಗುತ್ತಾರೆ. ಒಗ್ಗಟ್ಟಿನಿಂದ ಇರುತ್ತಾರೆ ಎಂಬ ಕನಸು ಇತ್ತು. ಅವರು ಹೋರಾಡಿದ ಫಲದಿಂದ ಇಂದು ಬಳ್ಳಾರಿಯಲ್ಲಿ ಶ್ರೀರಾಮುಲು, ಗೋಕಾಕಿನಲ್ಲಿ ಜಾರಕಿಹೊಳಿ, ಸುರಪುರ, ದೇವದುರ್ಗದಲ್ಲಿ ನಾಯಕರು ರಾಜಕೀಯದಲ್ಲಿ ಸಿಂಹಪಾಲು ಪಡೆಯಲು ಸಾಧ್ಯವಾಯಿತು. ಇವರೆಲ್ಲರು ಒಮ್ಮೆ ಎಚ್.ಡಿ. ದೇವೇಗೌಡರಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ. ಏಕೆಂದರೆ ಹಿಂದುಳಿದ ವರ್ಗ(ಬಿ.ಟಿ.)ದಲ್ಲಿದ್ದ ವಾಲ್ಮೀಕಿಗಳು ತಾವು ನಾಯಕರಿಂದ ಭಿನ್ನ ಎಂದು ಕಳೆದ ಹತ್ತು ವರ್ಷಗಳಲ್ಲಿ ಆದಿವಾಸಿಗಳು, ಗಿರಿಜನರಾದ ಮ್ಯಾಸನಾಯಕರನ್ನು ಪ್ರವರ್ಗ–1ರಲ್ಲಿ ಸೇರ್ಪಡೆಗೊಳಿಸಿದ್ದಾರೆ. ಇದೇ ಬಾಲಚಂದ್ರ ಜಾರಕಿಹೊಳಿ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದರು. ಅನಂತರ ಬೇಡ ನಾಯಕರು ಬಹುಪಾಲು ಬಿ.ಜೆ.ಪಿ. ಮೂಲಕ ಶ್ರೀರಾಮುಲುಗೆ ಮತ್ತು ಕಾಂಗ್ರೆಸ್ ಮೂಲಕ ಜಾರಕಿಹೊಳಿಗೆ ನಿಷ್ಠೆಯನ್ನು ಪ್ರದರ್ಶಿಸಿದರು. ಏನೂ ಹಣ ಮಾಡದ, ಶ್ರೀಮಂತರಲ್ಲದ ತಿಪ್ಪೇಸ್ವಾಮಿಯನ್ನು ವಾಲ್ಮೀಕಿ ನಾಯಕರು ಮೂಲೆಗುಂಪು ಮಾಡಿದರು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ(2008–2011) ಬಿ.ಜೆ.ಪಿ. ಶಾಸಕರಾಗಿ ಚಳ್ಳಕೆರೆ ತಿಪ್ಪೇಸ್ವಾಮಿಯನ್ನು ಸಚಿವರನ್ನಾಗಿ ಮಾಡಲಿಲ್ಲ. ಅಂದು ಶ್ರೀರಾಮುಲು, ಬಾಲಚಂದ್ರ ಜಾರಕಿಹೊಳಿ, ರಾಜೂಗೌಡ, ಶಿವನಗೌಡ ನಾಯಕರು ಅತ್ಯಂತ ಕಿರಿಯರೂ ಮಂತ್ರಿ ಪದವಿಗಳನ್ನು ಅನುಭವಿಸಿದರು. ವಿಕೃತ ರಾಜಕಾರಣ ಮಾಡಿದರು. ಸನ್ಮಾನ್ಯ ತಿಪ್ಪೇಸ್ವಾಮಿ ಇದರ ಗೋಜಿಗೆ ಹೋಗಲಿಲ್ಲ. ಗಾಢವಾಗಿ ನಂಬಿದ್ದ ಎಚ್.ಡಿ. ದೇವೇಗೌಡರನ್ನೇ ತಿಪ್ಪೇಸ್ವಾಮಿ ತೊರೆದು ಸ್ಥಳೀಯ ರಾಜಕೀಯ ಒತ್ತಡಕ್ಕೆ ಮಣಿದು ಬಿ.ಜೆ.ಪಿ.ಗೆ ಬಂದು ಯಡಿಯೂರಪ್ಪನವರ ಕೈ ಬಲಪಡಿಸಿದರು. ತಿಪ್ಪೇಸ್ವಾಮಿಯವರು ಅನಾರೋಗ್ಯ

ಪೀಡಿತರಾದಾಗ ಯಡಿಯೂರಪ್ಪನವರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಆಗ ಯಾವುದೇ ನಾಯಕ ಜನಾಂಗದ ಮುಖಂಡರೂ ಸಹಾಯಕ್ಕೆ ಬರಲಿಲ್ಲ. ಈ ಕೊರಗಿನಿಂದಲೇ ತಿಪ್ಪೇಸ್ವಾಮಿ ನೆಲ ಹಿಡಿದರು. ಎಲ್ಲಾ ಕಾರ್ಯಕ್ರಮಗಳಿಂದ ತನ್ನನ್ನು ಅಲಕ್ಷಿಸುವ ಸೂಚನೆಗಳಿದ್ದ ಕಾರಣ ತಾವು ಎಲ್ಲಿಗೂ ಹೋಗುತ್ತಿರಲಿಲ್ಲ.

ಮೀಸಲಾತಿಯನ್ನು ಎಲ್ಲರಿಗೂ ಬರುವಂತೆ ಮಾಡಿ ಸಂಭ್ರಮಿಸಿದರು. ಆ ಸಂದರ್ಭದಲ್ಲಿ ಇವರಿಗೆ ಎಲ್ಲಿಲ್ಲದ ಗೌರವ/ಹೊಗಳಿಕೆ/ಸನ್ಮಾನಗಳಾದವು. ನಂತರ ಇವರನ್ನು ಆ ವ್ಯಾಪ್ತಿಯಿಂದ ದೂರ ಇಟ್ಟರು. ತಿಪ್ಪೇಸ್ವಾಮಿಯವರಿಗೆ ಸಾಯುವ ಮುನ್ನ ತಾನು ತಪ್ಪನ್ನು ಮಾಡಿದೆ ಎಂಬ ಅರಿವಾಯಿತು. ಏಕೆಂದರೆ ತನ್ನದೇ ಆದ ಸಮುದಾಯ ಮೀಸಲಾತಿಯಿಂದ ವಂಚಿತವಾಗಿ ಪ್ರವರ್ಗ–1ರಲ್ಲಿರುವಾಗ ತನ್ನದಲ್ಲದವರಿಗೆ ಮೀಸಲಾತಿ ನೀಡಿದ್ದರಿಂದ ಆದ ಪ್ರಬಲ ಒತ್ತಡ/ಮಾನಸಿಕ ನೋವು/ ಜನರ ಹೋರಾಟ ಪ್ರತಿಕ್ರಿಯೆಗಳು ತುಂಬಾ ನೋವುಂಟು ಮಾಡಿದ್ದವು. ಹಾಗಾಗಿ ಇವರು ನಾಯಕ ಜನಾಂಗಕ್ಕೆ ದ್ರೋಹ ಮಾಡಿಲ್ಲ. ಆದರೆ ನಾಯಕರು ತಿಪ್ಪೇಸ್ವಾಮಿಯವರಿಗೆ ದ್ರೋಹ ಮಾಡಿಸಿದರೆಂದು ಅಭಿಪ್ರಾಯಿಸಬಹುದಾಗಿದೆ. ಈ ಕಾರಣವಾಗಿ ತಿಪ್ಪೇಸ್ವಾಮಿಯವರು ಊರುನಾಯಕ ಮತ್ತು ಮ್ಯಾಸನಾಯಕರ ನಡುವೆ ಮದುವೆ ಸಂಬಂಧ ಮಾಡಿದರೂ ಯಶಸ್ವಿಯಾಗಲಿಲ್ಲ.

ಎರಡನೆಯದು ವಾಲ್ಮೀಕಿ ಗುರುಪೀಠವನ್ನು ಮಾಡುವಾಗ ಎಲ್ಲರೂ ತಿಪ್ಪೇಸ್ವಾಮಿಗೆ ಬೆಂಬಲ ಕೊಟ್ಟರು. ಸ್ವತಃ ಇವರೇ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿದರು. ಮಠ ಆರಂಭವಾದ ಕೆಲವೇ ವರ್ಷಗಳಲ್ಲಿ ತಿಪ್ಪೇಸ್ವಾಮಿಯವರನ್ನು ಮೂಲೆಗುಂಪು ಮಾಡಲಾಯಿತು. ತಿಪ್ಪೇಸ್ವಾಮಿಗೆ ದೂರದೃಷ್ಟಿ ಇತ್ತು. ಸಂಕುಚಿತ ವ್ಯಕ್ತಿಗಳು ಮಠದಲ್ಲಿ ಅಧಿಕಾರ ಪಡೆದಾಗ ವಿಶೇಷವಾಗಿ ಮುಂದುವರಿದ/ಶ್ರೀಮಂತ ವ್ಯಕ್ತಿಗಳು ಬುಡಕಟ್ಟು ಗ್ರಾಮೀಣ ಜನರನ್ನು ಮ್ಯಾಸನಾಯಕರನ್ನು ವಾಲ್ಮೀಕಿ ಗುರುಪೀಠದಿಂದ ದೂರ ಇಡುವ ಹುನ್ನಾರ ನಡೆಯಿತು. ಸ್ವಾಮಿಗಳ ಸಾನ್ನಿಧ್ಯ ಹೊಸ ಸ್ವಾಮಿಗಳ ನೇಮಕದಲ್ಲಿ ಹೊಸ ನಾಯಕರ ಕಾರುಬಾರು ನಡೆಯಿತು. ಹಾಗಾಗಿ ಎಲ್ಲಾ ಉಗಮಕ್ಕೆ ತಿಪ್ಪೇಸ್ವಾಮಿ ಬೇಕಾಗಿಲ್ಲ, ಒಳ್ಳೆಯದಕ್ಕೆ ಅವರನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ.

**ಮದಕರಿ ಪ್ರತಿಮೆ**

ಚಿತ್ರದುರ್ಗ ನಗರದ ದೀಪಕ್ ಬುಕ್‌ಸ್ಟಾಲ್ ಸರ್ಕಲ್ಲನ್ನು ಮದಕರಿ ಸರ್ಕಲ್ ಎಂದು ನಾಮಕರಣ ಮಾಡಿ ರಾಜಾವೀರ ಮದಕರಿನಾಯಕರ ಪ್ರತಿಮೆಯನ್ನು ಸ್ಥಾಪಿಸಲು ತಿಪ್ಪೇಸ್ವಾಮಿಯವರು ಸಾಕಷ್ಟು ಶ್ರಮಿಸಿದರು. 1997ರಲ್ಲಿ ಈ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಲು ಜಿಲ್ಲಾಡಳಿತ, ಸಮಾಜ ಮುಖಂಡರು, ಅಧಿಕಾರಿಗಳು ಎಲ್ಲರೂ ಕೈ ಜೋಡಿಸಿದ ಕಾರಣ ಯಶಸ್ವಿಯಾಗಿದ್ದು ಶ್ಲಾಘನೀಯ ನಾಯಕ ಬುಡಕಟ್ಟಿನ ಚರಿತ್ರೆಯನ್ನು ಸದಾ ಸ್ಮರಿಸುವಂತೆ ಚಿತ್ರದುರ್ಗ ನಗರದಲ್ಲಿ ಈ ಪ್ರತಿಮೆ ಸಂಕೇತವೆಂಬಂತಿದೆ.

**ತಿಪ್ಪೇಸ್ವಾಮಿ ದುರ್ಗದ ಭಗೀರಥ**

ತಿಪ್ಪೇಸ್ವಾಮಿ ಅವರು ಮೂರನೇ ಬಾರಿಗೆ ಭಾರತೀಯ ಜನತಾಪಕ್ಷದ ಶಾಸಕರಾಗಿ ಆಯ್ಕೆಯಾಗಿ ಬಂದ ಮೇಲೆ ಮುಖ್ಯಮಂತ್ರಿ ಯಡಿಯೂರಪ್ಪನವರ ಆತ್ಮೀಯ ಬಳಗದ ಹಿರಿಯ ನಾಯಕರಾದರು. ತಾವು ಹುಟ್ಟಿ ಬೆಳೆದ ಚಿತ್ರದುರ್ಗ ಜಿಲ್ಲೆಗೆ ಶಾಶ್ವತವಾದ ಜನರಿಗೆ ಮತ್ತು ರೈತರಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ರೂಪಿಸಿದರು. ಬರಡುನಾಡು ಅತಿ ಕಡಿಮೆ ಮಳೆ ಬೀಳುವ ಜಿಲ್ಲೆ, ಬರಿ ಒಣ ಬೆದ್ದಲು ಬೇಸಾಯವನ್ನು, ಮಳೆ ಆಧಾರಿತ ಕೃಷಿಯನ್ನು ನಂಬಿ ಬದುಕುವ ರೈತರು ತುತ್ತು ಅನ್ನಕ್ಕೂ ಹೋರಾಟದ ಬದುಕು ಸಾಗಿಸುವ ಸ್ಥಿತಿಯನ್ನು ತಾವು ಬಾಲ್ಯದಿಂದಲೂ ಕಂಡಿದ್ದರು. ಅವರು ಅನುಭವಿಸಿದ ಕಷ್ಟಗಳು ನನ್ನ ಜಿಲ್ಲೆಯ ಜನರಿಗೆ ಬರಬಾರದು ಎಂದು ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರ ಕಾಲದಿಂದಲೂ ನೆನೆಗುದಿಗೆ ಬಿದ್ದಿ "ಭದ್ರಾ ಮೇಲ್ದಂಡೆ ಯೋಜನೆಯನ್ನು ಯಡಿಯೂರಪ್ಪನವರ ಮುಂದೆ ಪ್ರಸ್ತಾಪಿಸಿದರು. ಅವರು ಹಠಬಿಡದ ಭಗೀರಥನಂತೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ಬರುವಂತೆ ಮಾಡಿದರು. ಈ ಯೋಜನೆಗೆ ಭೂಮಿಪೂಜೆ ಮಾಡಿಸಿ 5,000 ಸಾವಿರ ಕೋಟಿ ರೂಪಾಯಿಗಳ ಮುಂಗಡ ಹಣವನ್ನು ಮಂಜೂರು ಮಾಡಿಸಿದರು. ಆಧುನಿಕ ಕಾಲದ ಭಗೀರಥ ತಿಪ್ಪೇಸ್ವಾಮಿ ಅವರು ಚಿತ್ರದುರ್ಗದ ಜನರ ಮನಸ್ಸಿನಲ್ಲಿ ಎಂದೂ ಮರೆಯದ ಮಾಣಿಕ್ಯವಾಗಿದ್ದಾರೆ.

**ಚಳ್ಳಕೆರೆಗೆ ವೇದಾವತಿ(ಮಾರಿಕಣಿವೆ) ನೀರು**

ಜಗದೀಶಶೆಟ್ಟರ್ ಮುಖ್ಯಮಂತ್ರಿಗಳಾಗಿದ್ದಾಗ ಮಾರಿಕಣಿವೆಯಿಂದ ಚಳ್ಳಕೆರೆ ನಗರಕ್ಕೆ ವೇದಾವತಿ ನೀರನ್ನು ಕೊಡುವಂತೆ ಮಾಡಿ ಕುಡಿಯುವ ನೀರಿಗೆ ಪರದಾಡುತ್ತಿದ್ದ ಚಳ್ಳಕೆರೆ ಜನರಿಗೆ ಕುಡಿಯುವ ನೀರಿನ ಯೋಜನೆ ಮತ್ತು ಹೊಸ ಪೈಪ್ ಲೈನನ್ನು ಮಂಜೂರು ಮಾಡಿಸಿ ಉದ್ಘಾಟನೆಯನ್ನು ಮಾಡಿದ ಕೀರ್ತಿ ಶ್ರೀ ತಿಪ್ಪೇಸ್ವಾಮಿಯವರಿಗೆ ಸಲ್ಲಬೇಕು.

**ಸರ್ಕಾರಿ ಕಾರ್ಯಕ್ರಮಗಳು**

ಶಿಸ್ತಿನ ಸಿಪಾಯಿಯಂತೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ತಿಪ್ಪೇಸ್ವಾಮಿ ಅವರು ಭಾಗವಹಿಸುತ್ತಿದ್ದರು. ಗಣರಾಜ್ಯೋತ್ಸವ, ಮಹಾವೀರ ಜಯಂತಿ, ದೇವರದಾಸಿಮಯ್ಯ ಜಯಂತಿ, ಬಸವ ಜಯಂತಿ, ಅಂಬೇಡ್ಕರ್ ಜಯಂತಿ, ಶಂಕರ ಜಯಂತಿ, ಕಾರ್ಮಿಕರ ದಿನಾಚರಣೆ, ರಂಜಾನ್ ಆಚರಣೆ, ಸ್ವಾತಂತ್ರ್ಯ ದಿನಾಚರಣೆ, ಬಕ್ರೀದ್, ಕೃಷ್ಣ ಜಯಂತಿ, ಶಿಕ್ಷಕರ ದಿನಾಚರಣೆ, ಮೊಹರಂ ಕೊನೆ ದಿನ, ಗಾಂಧಿ ಜಯಂತಿ, ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿ ಹೀಗೆ ಸರ್ಕಾರಿ ಆಚರಣೆ ಹಬ್ಬ ಹರಿದಿನಗಳಲ್ಲಿ ಇವರು ಶುಭ್ರವಾದ ಉಡುಪು ತೊಟ್ಟು ಗಂಭೀರವಾಗಿ ಭಾಷಣ ಮಾಡುತ್ತಿದ್ದರು. ಇವರ ವಿಚಾರಗಳು ವಿದ್ಯಾವಂತರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿದ್ದವು. ಸರ್ಕಾರಿ ಸಭೆ, ಸಮಾರಂಭ ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಚಾರಗಳನ್ನು ತಿಳಿಸುತ್ತಿದ್ದರು. ಸಭೆ ಗಾಂಭೀರ್ಯ, ಜವಾಬ್ದಾರಿಯುತ ನಡೆ ನುಡಿ ಎಲ್ಲವೂ ಪಾರದರ್ಶಕವಾಗಿದ್ದವು.

**ಸಾಹಿತಿ, ಕಲಾವಿದರು**

ತಿಪ್ಪೇಸ್ವಾಮಿ ಅವರಿಗೆ ಸಾಹಿತಿ, ಕಲಾವಿದರೆಂದರೆ ತುಂಬಾ ಪ್ರೀತಿ. ಅವರನ್ನು ಕರೆಯಿಸಿಕೊಂಡು ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದರು. ಚಳ್ಳಕೆರೆ ತಾಲೂಕಿನ ದೇವರ ಮರಿಕುಂಟೆ ಗ್ರಾಮದಲ್ಲಿ ಗ್ರಾಮೀಣ ಸಾಹಿತ್ಯ ಪರಿಷತ್ತು ಕಟ್ಟಿ, ವನಸುಮ ಎಂಬ ಪತ್ರಿಕೆ ತಂದವರು ತಿಪ್ಪಣ್ಣ ಬಿ. ಮರಿಕುಂಟೆಯವರು. ಇವರು ಹಿಂದೆ ವಾಲ್ಮೀಕಿ ಜನಾಂಗದ ಸಮಾವೇಶ ನಡೆದಾಗ "ಮೇಲುದುರ್ಗ" ಎಂಬ ಸ್ಮರಣ ಸಂಚಿಕೆ ತಂದಿದ್ದರು. ಇವರು ತಿಪ್ಪೇಸ್ವಾಮಿಯವರೊಂದಿಗೆ ಸದಾ ಇರುತ್ತಿದ್ದರು. ಹಾಗೆಯೇ ದೊಡ್ಡ ಉಳ್ಳಾರ್ಥಿ ಗ್ರಾಮದ ಆರ್. ಯರಗುಂಟಯ್ಯ ನಾಯಕ ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದು, ಮಾಜಿ ಶಾಸಕ ಪಟೇಲ್ ಪಾಪನಾಯಕರ ಪುತ್ರಿಯನ್ನು ವಿವಾಹವಾಗಿದ್ದರು. ಇವರು ಸಿನಿಮಾ ಮತ್ತು ನಾಯಕ ಜನಾಂಗದ ಬಗ್ಗೆ ಅಪಾರ ಮಾಹಿತಿ ಹೊಂದಿದ್ದರು. ಆಗಾಗ ತಿಪ್ಪೇಸ್ವಾಮಿ ಯವರನ್ನು ಭೇಟಿ ಮಾಡಿ ಕಟ್ಟೆಮನೆ, ಗುಡಿಕಟ್ಟೆ, ಮನೆದೇವರುಗಳ, ನಾಯಕ ಬುಡಕಟ್ಟು ಅಭಿವೃದ್ಧಿ ಮತ್ತು ಭವಿಷ್ಯದ ಬಗ್ಗೆ ಚರ್ಚಿಸುತ್ತಿದ್ದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕರು, ನಾಯಕ ಜನಾಂಗದ ಹೋರಾಟಗಾರರಾಗಿದ್ದ ಡಾ. ತೇಜಸ್ವಿ ಕಟ್ಟೀಮನಿ ಅವರು ತಿಪ್ಪೇಸ್ವಾಮಿ ಅವರೊಂದಿಗೆ ಬಾಂಧವ್ಯ ಹೊಂದಿದ್ದರು. ವಾಲ್ಮೀಕಿ ಗುರುಪೀಠ ಸ್ಥಾಪಿಸುವಲ್ಲಿ ಕಟ್ಟೀಮನಿ ಅವರು ವಿಶೇಷ ಕಾಳಜಿ ವಹಿಸಿ ತಿಪ್ಪೇಸ್ವಾಮಿಯವರಿಗೆ ಉತ್ತರ ಕರ್ನಾಟಕ ಸುತ್ತಿಸಿ ಜನಜಾಗೃತಿ ಮಾಡಿದರು. ತಿಪ್ಪೇಸ್ವಾಮಿಯವರಿಗೆ ಚಿತ್ರದುರ್ಗದ ಖ್ಯಾತ ಸಾಹಿತಿ ಬಿ.ಎಲ್. ವೇಣು, ಇತಿಹಾಸ

ಸಂಶೋಧಕ ಬಿ. ರಾಜಶೇಖರಪ್ಪ, ಜನಪದತಜ್ಞ ಡಾ. ಮಿರಾಸಾಬಿಹಳ್ಳಿ ಶಿವಣ್ಣ, ಇತಿಹಾಸಕಾರ ಪ್ರೊ. ಲಕ್ಷ್ಮಣ್ ತೆಲಗಾವಿ, ಬೆಳಗೆರೆ ಕೃಷ್ಣಶಾಸ್ತ್ರಿ ಹೀಗೆ ಅನೇಕ ಸಾಹಿತಿಗಳ ಒಡನಾಟವಿತ್ತು.

ಖ್ಯಾತ ಸಾಹಿತಿ, ಸಂಶೋಧಕಿಯಾದ ಡಾ. ಕಮಲಾ ಹಂಪನಾ ಅವರು ತಿಪ್ಪೇಸ್ವಾಮಿಯವರ ಆಹ್ವಾನದ ಮೇರೆಗೆ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಉಪಸಂಸ್ಕೃತಿ ಮಾಲೆಯಲ್ಲಿ ಮ್ಯಾಸನಾಯಕರನ್ನು ಕುರಿತು ಅಧ್ಯಯನ ಮಾಡಿದ ಖ್ಯಾತ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು ಅವರನ್ನು ಗೌರವದಿಂದ ಕಾಣುತ್ತಿದ್ದರು. ಹಾಗೆಯೇ ಪ್ರೊ. ಬರಗೂರು ರಾಮಚಂದ್ರಪ್ಪ, ಸುಕನ್ಯಾ ಮಾರುತಿ, ಡಾ. ರಂಗರಾಜ ವನದುರ್ಗ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಎಸ್.ಎಂ. ಮುತ್ತಯ್ಯ, ಡಾ. ಸಿ.ಬಿ. ಅನ್ನಪೂರ್ಣಮ್ಮ, ದಿ. ಸಾಣಿಕೆರೆ ಸಣ್ಣೋಬಯ್ಯ ಮೊದಲಾದವರು ತಿಪ್ಪೇಸ್ವಾಮಿ ಅವರೊಂದಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವಿಚಾರ ವಿನಿಮಯ ಮಾಡಿಕೊಂಡದ್ದು ಗಮನಾರ್ಹ ಸಂಗತಿಯಾಗಿದೆ.

**ಮದುವೆ ಕಾರ್ಯಕ್ರಮಗಳು**

ಕರ್ನಾಟಕ ರಾಜ್ಯದಲ್ಲಿ ಸಮುದಾಯದ ಮದುವೆಗಳು ಎಲ್ಲಿಯೇ ಜರುಗಲಿ ತಿಪ್ಪೇಸ್ವಾಮಿ ಅವರು ಕಡ್ಡಾಯವಾಗಿ ಭಾಗವಹಿಸುತ್ತಿದ್ದರು. ಏಕೆಂದರೆ ಇವರಿಗೆ ಗುತ್ತಿಗೆದಾರರು, ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು, ಬಂಧು ಬಳಗದವರು ಸಾಕಷ್ಟು ಜನ ಇದ್ದರು. ಹಳ್ಳಿ, ಪಟ್ಟಣ, ನಗರಗಳಲ್ಲಿ ಬಡವ–ಶ್ರೀಮಂತ ಎನ್ನುವ ಭೇದ ಭಾವವಿಲ್ಲದೆ ಭಾಗವಹಿಸುತ್ತಿದ್ದರು.

**ಅಜಾತಶತ್ರು**

ತಿಪ್ಪೇಸ್ವಾಮಿ ಅವರು ಎಲ್ಲಾ ಜಾತಿಯ ಮತ್ತು ಪಕ್ಷದ ಕಾರ್ಯಕರ್ತರನ್ನು ಬಹು ಪ್ರೀತಿಯಿಂದ ಕಾಣುತ್ತಿದ್ದರು. ವಾಲ್ಮೀಕಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ, ಚಿತ್ರದುರ್ಗ, ವಾಲ್ಮೀಕಿ ಕಲ್ಯಾಣ ಮಂಟಪ, ಚಳ್ಳಕೆರೆ, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಬೆಂಗಳೂರು, ಮೊದಲಾದವುಗಳನ್ನು ಸ್ಥಾಪಿಸುವ ಉದ್ದೇಶ ತಿಪ್ಪೇಸ್ವಾಮಿ ಅವರಿಗೆ ಇತ್ತು.

**ಸಚಿವರಾಗಿದ್ದಾಗಿನ ಸಾಧನೆಗಳು**

1. ಮಾರಿಕಣಿವೆ ಹತ್ತಿರ ವೇದಾವತಿ ನದಿಗೆ 2 ಚೆಕ್ ಡ್ಯಾಂ ನಿರ್ಮಾಣ ಮಾಡಿದ್ದು ಇವರ ಅವಧಿಯಲ್ಲಿ.
2. ಗರಣಿಗೆ ನೀರು ಹರಿಸಲು ಚಳ್ಳಕೆರೆಯ ಗಂಜಿಗುಂಟೆ, 1 ಹಾಗೂ ವಿಶ್ವೇಶ್ವರಪುರ 1 ಈಗೆ ಎರಡು ಕಡೆ ಚೆಕ್ ಡ್ಯಾಂ ನಿರ್ಮಾಣ ಮಾಡಿದ್ದು.
3. ಕರ್ನಾಟಕ ರಾಜ್ಯಾದ್ಯಂತ ಸೇರಿ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಕೆರೆಗಳಿಗೆ ಹೂಳು ಎತ್ತಿಸಿ ಅಂತರ್ಜಲ ಅಭಿವೃದ್ಧಿಪಡಿಸಿದ್ದು.
4. ಚಳ್ಳಕೆರೆ ನಗರದಲ್ಲಿ ಕುಡಿಯುವ ನೀರಿನ ಅಭಾವದಿಂದ ತತ್ತರಿಸುತ್ತಿರುವಾಗ ಹೂವಿನ ಹಳ್ಳದಲ್ಲಿ ಬೋರ್ ಕೊರೆಸಿ ಅಲ್ಲಿಂದ ಪೈಪ್‌ಗಳನ್ನು ಅಳವಡಿಸಿ ಅಂಬೇಡ್ಕರ್‌ನಗರ, ಜನತಾ ಕಾಲೋನಿ, ಗಾಂಧಿ ನಗರಗಳಿಗೆ ನೀರು ಕೊಟ್ಟು ಜೀವಜಲ ಕೊಟ್ಟ ಮಹನೀಯ.
5. ಚಳ್ಳಕೆರೆಯ ಕರೆಕಲ್ ಕೆರೆಯಲ್ಲಿ ಬೋರ್ ಕೊರೆಸಿ ಪೈಪ್‌ಗಳನ್ನು ಅಳವಡಿಸಿ ಚಿತ್ರಯ್ಯನ ಹಟ್ಟಿ, ಸೂಜಿಮಲ್ಲೇಶ್ವರನಗರ, ವೆಂಕಟೇಶ್ವರನಗರ, ಕಾಟಪ್ಪನಹಟ್ಟಿ, ಹಳೇ ನಗರ, ರಹೀಂ ನಗರ, ಶಾಂತಿನಗರಕ್ಕೆ ಕುಡಿಯುವ ನೀರನ್ನು ಕೊಟ್ಟಿದ್ದು ಇವರು ಶಾಸಕರು, ಮಂತ್ರಿಗಳಾಗಿದ್ದಾಗಿನ ಸಾಧನೆಗಳು.
6. ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಹಳ್ಳಿ ಹಳ್ಳಿಗಳಲ್ಲಿ ಮಿನಿಟ್ಯಾಂಕ್‌ಗಳನ್ನು ನಿರ್ಮಿಸಿ ಕುಡಿಯುವ ನೀರನ್ನು ಕೊಟ್ಟಿದ್ದು.
7. ಚಳ್ಳಕೆರೆಯಲ್ಲಿ ಹೌಸಿಂಗ್ ಬೋರ್ಡ್ ಸೈಟ್ ನಿರ್ಮಾಣಕ್ಕೆ ಅನುಮತಿ ಕೊಡಿಸಿದ್ದು ಇಂದು ಬಡವರಿಗೆ ಸೈಟ್ ದೊರೆಯುವುದಕ್ಕೆ ಕಾರಣಕರ್ತರಾಗಿದ್ದಾರೆ.
8. ಅತಿ ಹೆಚ್ಚು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಎಸ್.ಸಿ.–ಎಸ್.ಟಿ. ಸಮುದಾಯಗಳ ರೈತರಿಗೆ ಯೋಜನೆ ದೊರಕಿಸುವಂತೆ ಮಾಡಿದ್ದು ಇವರು ಶಾಸಕರಾಗಿದ್ದಾಗ.
9. ಚಳ್ಳಕೆರೆ ಮುನಿಸಿಪಲ್ ಕಾಲೇಜನ್ನು 1985ರಲ್ಲಿ ಮೊದಲ ಬಾರಿಗೆ ಇವರು ಶಾಸಕರಾಗಿದ್ದಾಗ ಸರ್ಕಾರಿ ಕಾಲೇಜು ಆಗಿ ಸರ್ಕಾರದಿಂದ ಸೌಲಭ್ಯಗಳು ದೊರೆಯುವಂತೆ ಮಾಡಿದ ಹೆಗ್ಗಳಿಕೆ ಕೀರ್ತಿಯು ಇವರಿಗೆ ಸಲ್ಲುತ್ತದೆ.
10. ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಸಂತೆ ಮೈದಾನದಲ್ಲಿ ಆಗಬೇಕೆಂದು ಮುನಿಸಿಪಾಲಿಟಿಯಲ್ಲಿ ರೇಜಲ್ಯೂಷನ್ ಪಾಸ್ ಮಾಡಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿದ್ದು.

11. ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋಗೆ ಯಡಿಯೂರಪ್ಪನವರ ಮುಖಾಂತರ ಮಂಜೂರಾತಿಯನ್ನು ತಂದದ್ದು ಘಟಕ ಚಳ್ಳಕೆರೆಗೆ ಬರಲು ಇವರೇ ಕಾರಣ.
12. ಚಳ್ಳಕೆರೆಯ ಹೃದಯ ಭಾಗದ ನೆಹರು ಸರ್ಕಲ್‌ಗೆ ಸಿಗ್ನಲ್ ಲೈಟ್ ಅಳವಡಿಸಿದ್ದು, ಇವುಗಳು ಸೇರಿ ಚಳ್ಳಕೆರೆ ಅಭಿವೃದ್ಧಿಗೆ ಇವರು ಶಾಸಕರಾಗಿ, ಮಂತ್ರಿಗಳಾಗಿದ್ದಾಗ ಆ ಕಾಲದಲ್ಲಿ ಸರ್ಕಾರದ ಅನುದಾನಗಳ ಆಧಾರದಲ್ಲಿ ಚಳ್ಳಕೆರೆ ನಗರ, ಚಳ್ಳಕೆರೆ ಗ್ರಾಮೀಣ ಭಾಗಗಳ ಮೂಲಭೂತ ಸೌಕರ್ಯಗಳನ್ನು ನ್ಯಾಯಯುತವಾಗಿ ತಮ್ಮ ವ್ಯಾಪ್ತಿಯಲ್ಲಿ ಪ್ರಾಮಾಣಿಕವಾಗಿ ಮಾಡಿರುವ ಹಿರಿಯ ರಾಜಕಾರಣಿ ಜನನಾಯಕ ತಿಪ್ಪೇಸ್ವಾಮಿಯವರೆಂದರೆ ಅತಿಶಯೋಕ್ತಿಯಾಗುವುದಿಲ್ಲ.
13. ಚಳ್ಳಕೆರೆಯಲ್ಲಿ ಕಲ್ಯಾಣ ಮಂಟಪ ಸ್ಥಾಪನೆ ಮಾಡಿದ್ದು ಸಾಧನೆಯೇ ಸರಿ.
14. ವಿಶ್ವವೇ ಮೆಚ್ಚುವಂತಹ ಬಾಬು ಅಣು ಸಂಶೋಧನಾ ಕೇಂದ್ರ, ಡಿಆರ್‌ಡಿಒ ಮತ್ತು ಐಐಎಸ್‌ಸಿ ಕೇಂದ್ರಗಳ ಸ್ಥಾಪನೆಗೆ ಅವಶ್ಯವಿರುವ ಭೂಮಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಈ ಕೇಂದ್ರಗಳಿಗೆ ಹಸ್ತಾಂತರ ಮಾಡಿಸುವಲ್ಲಿ ಸಫಲರಾದರು.

**ಗೌರವ, ಸನ್ಮಾನ, ಪ್ರಶಸ್ತಿಗಳು**

ಗಿರಿಜನರಾದ ಮ್ಯಾಸನಾಯಕರು ಹಾಗೂ ಊರನಾಯಕರಿಗೆ ಮದುವೆ, ಊಟೋಪಚಾರಗಳ ಸಂಬಂಧಗಳಿರುತ್ತಿರಲಿಲ್ಲ. ಇಂಥ ಸಮಸ್ಯೆಗಳನ್ನು ಅರಿತು ಬೇರ್ಪಟ್ಟ ಕಂದರವನ್ನು ಒಟ್ಟುಗೂಡಿಸಿ ಮಾನವೀಯ ಮೌಲ್ಯಗಳ ಸೇತುವೆಯನ್ನು ನಿರ್ಮಿಸಿದರು. 1995ರಲ್ಲಿ ಬಳ್ಳಾರಿ, 1996ರಲ್ಲಿ ಕಮಲಾಪುರದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ, 2002ರಿಂದ 2006ರವರೆಗೆ ನಡೆದ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ವಾಲ್ಮೀಕಿ ಜಯಂತಿಗಳಲ್ಲಿ ತಿಪ್ಪೇಸ್ವಾಮಿಯವರಿಗೆ ಸನ್ಮಾನ ಮಾಡಲಾಗಿದೆ. ವಾಲ್ಮೀಕಿವಾಣಿ ಪತ್ರಿಕೆ ವತಿಯಿಂದ 1998ರಲ್ಲಿ ಮಹಾರಾಜ ಮದಕರಿ ನಾಯಕ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿಯಲ್ಲಿ ಸನ್ಮಾನ ಮಾಡಿದರು.

ಕರ್ನಾಟಕ ರಾಜ್ಯ ಸರ್ಕಾರ ಬೆಂಗಳೂರಿನಲ್ಲಿ 2017ರ **"ವಾಲ್ಮೀಕಿಶ್ರೀ"** ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿ ಗೌರವಿಸಿತು. ಇದೇ ಸಂದರ್ಭದಲ್ಲಿ ಬೆಂಗಳೂರಿನ ವಾಲ್ಮೀಕಿ ತಪೋವನದ ಉದ್ಘಾಟನೆಯಲ್ಲಿ ತಿಪ್ಪೇಸ್ವಾಮಿ ಯವರನ್ನು ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವರಾದ ಎಚ್. ಆಂಜನೇಯ ಅವರು ನೆನಪಿನ ಕಾಣಿಕೆ 5 ಲಕ್ಷ ರೂ. ಚೆಕ್ ಕೊಟ್ಟು ಶಾಲು ಹೊದಿಸಿ ಸನ್ಮಾನಿಸಿದರು.

**ಮಾಜಿ ಸಚಿವ ತಿಪ್ಪೇಸ್ವಾಮಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ**

ಪ್ರಸಕ್ತ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಮಾಜಿ ಸಚಿವ ತಿಪ್ಪೇಸ್ವಾಮಿಯವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು 5 ಲಕ್ಷ ರೂಪಾಯಿ ಪ್ರಶಸ್ತಿ ಮೊತ್ತ ಹಾಗೂ ಫಲಕವನ್ನು ಒಳಗೊಂಡಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಪ್ರಶಸ್ತಿ ಕೋರಿ 26 ಅರ್ಜಿಗಳು ಬಂದಿದ್ದವು. 26 ಅರ್ಜಿಗಳಲ್ಲಿ ಎರಡು ಅರ್ಜಿಗಳನ್ನು ವಯೋಮಾನದ ಕಾರಣದಿಂದ ತಿರಸ್ಕರಿಸಲಾಯಿತು. ಇನ್ನುಳಿದ 24 ಅರ್ಜಿಗಳಲ್ಲಿ ಅವರ ಅನುಭವ, ಸಾಧನೆ, ಬುಡಕಟ್ಟು ಜನರ ಸೇವೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಯನ್ನು ಆಧರಿಸಿ ಮಾಜಿ ಸಚಿವ ತಿಪ್ಪೇಸ್ವಾಮಿ ಅವರನ್ನು ಸಮಿತಿ ಸರ್ವಾನುಮತದಿಂದ ಆಯ್ಕೆ ಮಾಡಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ "ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಈ ಬಾರಿ ವೈಶಿಷ್ಟ್ಯಪೂರ್ಣವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ" ಎಂದರು. ಪ್ರತಿ ವರ್ಷ ವಾಲ್ಮೀಕಿ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ಸರ್ಕಾರ ನೀಡುತ್ತಾ ಬಂದಿದೆ. ಈ ಬಾರಿ ಅಕ್ಟೋಬರ್ 5ರಂದು ನಡೆದ ರಾಜ್ಯಮಟ್ಟದ ವಾಲ್ಮೀಕಿ ಜಯಂತಿ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪುರಸ್ಕೃತರಿಗೆ 5.00 ಲಕ್ಷ ರೂ. ನಗದು ಹಾಗೂ ಫಲಕ ನೀಡಿ ಸನ್ಮಾಸಿದರು.

**ಆಧ್ಯಾತ್ಮ ಚಿಂತನೆ**

ತಿಪ್ಪೇಸ್ವಾಮಿ ಅವರು ಮೂಲತಃ ಆಧ್ಯಾತ್ಮ ಕ್ಷೇತ್ರದವರಲ್ಲ. ಆಕಸ್ಮಿಕವಾಗಿ ಕುಟುಂಬದ ದಾಂಪತ್ಯ ಸಮಸ್ಯೆಯಿಂದ ಆಧ್ಯಾತ್ಮ, ಧಾರ್ಮಿಕತೆಗೆ ವಾಲಿದರು. ಕಷ್ಟಪಟ್ಟು ದುಡಿದು ಕೂಡಿಟ್ಟ ಸಂಪತ್ತಿನ ಬುತ್ತಿಯನ್ನು ತಮಗೆ ಗೊತ್ತಾಗದಂತೆ ಯಾರೋ ಅಪಹರಿಸಿದಾಗ ತಿಪ್ಪೇಸ್ವಾಮಿಯವರಿಗೆ ಜಗತ್ತೇ ಕಳಚಿದಂತೆ ಜೀವನವೇ ಮುಗಿಯಿತು ಎಂಬ ಲೆಕ್ಕಾಚಾರಕ್ಕೆ ಬಂದಿದ್ದರು. ಆ ಕಾರಣದಿಂದ ಧರ್ಮಪತ್ನಿಯನ್ನೇ 15–20 ವರ್ಷಗಳ ಕಾಲ ದೂರ ಮಾಡಿಕೊಂಡರು. ಮಕ್ಕಳ ಮಂಗಳಕಾರ್ಯ, ಚುನಾವಣೆ ಬಂದಾಗ ಪತ್ನಿ ಸ್ವ ಇಚ್ಛೆಯಿಂದ ಬರುತ್ತಿದ್ದರಷ್ಟೆ ಆದರೆ ತಿಪ್ಪೇಸ್ವಾಮಿ ಅವರಿಗೆ ಹೊಸಮನೆ 10 ಕೋಟಿ ಖರ್ಚು ಮಾಡಿ ಕಟ್ಟಿಸಿದರೂ ನೆಮ್ಮದಿ ಇರಲಿಲ್ಲ. ವಾಸ್ತು ದೋಷ ಕಾರಣ ಎಂದು ಬಾಡಿಗೆ ಮನೆಯಲ್ಲಿದ್ದರು.

ಕೊನೆ ಕಾಲದಲ್ಲಿ ಕಾಟಪ್ಪನಹಟ್ಟಿಯಲ್ಲಿ ಮನೆ ಕಟ್ಟಿಸಿ ವಾರ್ಧಕ್ಯದ ದಿನಗಳನ್ನು ಕಳೆದರು. ಆಗಾಗ ಹಿರಿಯೂರಿನ ನಿವೃತ್ತ ಬ್ಯಾಂಕ್ ಮ್ಯಾನೇಜರ್ ರಾಜೇಂದ್ರಪ್ರಸಾದ್‌ರೊಂದಿಗೆ ಈ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರು. ಹಾಗೆಯೇ ಕುಲದೈವ, ಕಿಲಾರಿಗಳು, ದಾಸಯ್ಯಗಳು, ಪೂಜಾರಿಗಳು, ಮ್ಯಾಸನಾಯಕರ ಸಂಸ್ಕೃತಿಯನ್ನು ತುಂಬಾ ಪ್ರೀತಿಸುತ್ತಿದ್ದರು.

**ಕುಟುಂಬದಲ್ಲಿ ಏರು–ಪೇರು**

ತಿಪ್ಪೇಸ್ವಾಮಿಯವರಿಗೆ ಸಾವಿರಾರು ಜನ ಬಂಧುಬಳಗವಿದ್ದರೂ ಕೆಲವರನ್ನು ಮಾತ್ರ ಅವರು ಇಷ್ಟಪಡುತ್ತಿದ್ದರು. ಚಿತ್ರದುರ್ಗ ತಾಲೂಕಿನ ಹುಣಸೆಕಟ್ಟೆ ಗ್ರಾಮದಲ್ಲಿ ತಿಪ್ಪೇಸ್ವಾಮಿಯವರು ಮದುವೆ ಆಗಿದ್ದರು. ತನ್ನ ಅಣ್ಣ ಬಂಧುಬಳಗದೊಂದಿಗೆ ಕಾಟಪ್ಪನಹಟ್ಟಿಯಲ್ಲಿ ಕಂಟ್ರಾಕ್ಟ್ ಕೆಲಸ, ರಾಜಕಾರಣದೊಂದಿಗೆ ಕುಟುಂಬವನ್ನು ನಿಭಾಯಿಸುವ ಜವಾಬ್ದಾರಿಯುತ ವ್ಯಕ್ತಿಯಾಗಿದ್ದರು. ಇವರಿಗೆ ಎರಡು ಕುಡಿಗಳು ಕೆ.ಟಿ ಕುಮಾರಸ್ವಾಮಿ ಮತ್ತು ಕೆ.ಟಿ. ಭವ್ಯ. ಇಬ್ಬರಿಗೂ ಮದುವೆಯಾಗಿದೆ. ಕುಮಾರಸ್ವಾಮಿಯೇ ಕಳೆದ 6–7 ವರ್ಷಗಳಿಂದ ಕುಟುಂಬದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ತಿಪ್ಪೇಸ್ವಾಮಿಯವರು ಕಳೆದ 7–8 ವರ್ಷಗಳಿಂದ ಅನಾರೋಗ್ಯಕ್ಕೊಳಗಾದಾಗ ಬಂಧು ಹಿತೈಷಿಗಳು ಮಗ ಕೆ.ಟಿ. ಕುಮಾರಸ್ವಾಮಿಗೆ ಪಟ್ಟ ಕಟ್ಟಿದರೂ ಯಶಸ್ವಿಯಾಗಲಿಲ್ಲ. ಭರವಸೆಯ ಬೆಳಕು ಮೂಡಿಸಬೇಕಾದ ಯುವಕ ಕುಟುಂಬದ ನಿರ್ವಹಣೆಯಲ್ಲಿ ಸ್ವಲ್ಪ ಯಡವಟ್ಟನ್ನುಂಟು ಮಾಡಿಕೊಂಡರು. ಹೀಗೆ ತಾಯಿ ಒಂದು ಕಡೆ, ತಂದೆ ಒಂದು ಕಡೆ ಇರುವ ಸಮಸ್ಯೆಯನ್ನು ಅರಿತ ಕೆ.ಟಿ. ಕುಮಾರಸ್ವಾಮಿ ಧೈರ್ಯವಾಗಿ ಎಲ್ಲವನ್ನು ಜಾಣ್ಮೆಯಿಂದ ಎದುರಿಸುತ್ತಿದ್ದರು.

ತಿಪ್ಪೇಸ್ವಾಮಿಯವರು ಬಂಧುಬಳಗದಲ್ಲಿ ವಿವಾಹ ಕಾರ್ಯಗಳು ಮಾಡಿದಾಗ ಕೆಲವರು ಒಂದಾದರೂ, ಇನ್ನೂ ಕೆಲವರು ದೂರವಾಗಿ ಉಳಿದುರು. ತಿಪ್ಪೇಸ್ವಾಮಿ ಅವರು ವಿಶಾಲವಾಗಿ ಆಲೋಚಿಸಿದ  ಊರುನಾಯಕರಾದ ಎನ್.ವೈ. ಹನುಮಂತಪ್ಪನ ತಮ್ಮನ ಮಗನಿಗೆ ತಮ್ಮ ದೊಡ್ಡಣ್ಣನ ಮೊಮ್ಮಗಳನ್ನು ಮದುವೆ ಮಾಡಿಕೊಟ್ಟರು. ಇದು ಅವರ ವಿಶಾಲ ಮನೋಭಾವನೆಯನ್ನು ತೋರಿಸುತ್ತದೆ.

**ಮಾಜಿ ಸಚಿವ ತಿಪ್ಪೇಸ್ವಾಮಿ ವಿಧಿವಶ**

ಕರ್ನಾಟಕ ರಾಜ್ಯದ ಹಿರಿಯ ರಾಜಕಾರಣಿ, ರಾಜ್ಯ ವಾಲ್ಮೀಕಿ ಸಮುದಾಯದ ಅಗ್ರಗಣ್ಯ ಮುಖಂಡ, ಮಾಜಿ ಸಚಿವ ರಾಜ್ಯದ 2016–17ನೇ ಸಾಲಿನ ಶ್ರೀವಾಲ್ಮೀಕಿ ಪ್ರಶಸ್ತಿ ವಿಜೇತ, ರಾಜನಹಳ್ಳಿ ಶ್ರೀವಾಲ್ಮೀಕಿ ಗುರುಪೀಠ ಸಂಸ್ಥಾಪಕ, ರಾಜ್ಯದ ಎಸ್ಟಿ ಜನಾಂಗಕ್ಕೆ

ಮೀಸಲಾತಿ ಸೌಲಭ್ಯ ಕೊಡಿಸುವಲ್ಲಿ ಯಶಸ್ವಿಯಾದ ತಿಪ್ಪೇಸ್ವಾಮಿ(77) ದಿನಾಂಕ–08–08–2018 ಬೆಳಿಗ್ಗೆ ಸುಮಾರು 7 ರ ಸಮಯದಲ್ಲಿ ಬೆಂಗಳೂರಿನ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಕಳೆದ ಕೆಲವು ತಿಂಗಳುಗಳಿಂದ ಮೆದುಳಿನ ಕಾಯಿಲೆಯಿಂದ ನರಳುತ್ತಿದ್ದರು. ಇವರು 2015ರಲ್ಲಿ ಬೈಪಾಸ್ ಸರ್ಜರಿಗೆ ಒಳಗಾಗಿದ್ದು, ಹೃದಯದಲ್ಲಿ ಅಳವಡಿಸಿದ್ದ ಕೃತಕ ಯಂತ್ರದಿಂದ ಇವರ ಉಸಿರಾಟ ನಡೆಯುತ್ತಿತ್ತು, ಜುಲೈ 31ರಂದು ಮನೆಯಲ್ಲೇ ಬೆಳಗಿನ ಸಮಯದಲ್ಲಿ ಇವರ ಮೆದುಳಿನ ಬಲಭಾಗಕ್ಕೆ ಪಾರ್ಶ್ವವಾಯು ಹೊಡೆದ ಹಿನ್ನೆಲೆಯಲ್ಲಿ ಕುಸಿದ ಬಿದ್ದ ಇವರು ಪ್ರಜ್ಞೆ ಕಳೆದುಕೊಂಡರು, ಕೂಡಲೇ ಇವರನ್ನು ಬೆಂಗಳೂರಿನ ಕೊಲಂಬಿಯಾ ಆಸ್ಪತ್ರೆಗೆ ದಾಖಲಿಸಿದ್ದು, 9 ದಿನಗಳ ಸಾವು ಬದುಕಿನ ಹೋರಾಟ ನಡೆಸಿದ ಇವರು ಕೊನೆಗೂ ಬದುಕುಳಿಯಲಿಲ್ಲ. ಆದರೆ, ಇವರು ಮಾಡಿದ ಸರ್ವಶ್ರೇಷ್ಠ ಕಾರ್ಯಗಳು ವಾಲ್ಮೀಕಿ ಸಮುದಾಯಕ್ಕೆ ಹೊಸ ಆಧುನಿಕ ಸ್ಪರ್ಶ ನೀಡಿದ್ದವು. ಎಲ್ಲಾ ಸಮುದಾಯಗಳ ಪ್ರೀತಿ ಹಾಗೂ ಗೌರವವನ್ನು ಸಂಪಾದಿಸಿದ್ದ ತಿಪ್ಪೇಸ್ವಾಮಿ ತಮ್ಮ ರಾಜಕೀಯ ಜೀವನದಲ್ಲಿ ಅಗಾಧವಾದ ಸಾಧನೆಗಳನ್ನು ಮಾಡಿದ್ದರು, ಇವರ ದೂರದೃಷ್ಟಿಯ ಫಲವಾಗಿ ಇಂದು ರಾಜ್ಯದ ನಾಯಕ ಸಮುದಾಯ ವಿಶೇಷ ಮೀಸಲಾತಿಯನ್ನು ಪಡೆದಿದೆ. ವಾಲ್ಮೀಕಿ ಜಯಂತಿಯನ್ನು ಸಹ ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸುವಲ್ಲಿ ಇವರ ಪಾತ್ರ ಅತ್ಯಂತ ಮಹತ್ವಪೂರ್ಣವಾದದ್ದು.

### 4.2.2. ಶ್ರೀ ಟಿ. ರಘುಮೂರ್ತಿ

ಶ್ರೀಯುತ ಟಿ. ರಘುಮೂರ್ತಿ ಚಿತ್ರದುರ್ಗ ಜಿಲ್ಲೆಯ ತುರುವನೂರಿನ ಕಪ್ಪು ಕೆಂಪು ಮಿಶ್ರಿತ ಫಲವತ್ತಾದ ಗಂಡುಭೂಮಿ ಸಮೃದ್ಧ ಪ್ರದೇಶವಾದ ರಾಜಕೀಯ ಕಲಿಗಳ ಜನ್ಮಸ್ಥಳವಾದ ಕಡಬನಕಟ್ಟೆಯಲ್ಲಿ ಜನಿಸಿದರು. ಇದು ಅನೇಕ ರಾಜಕೀಯ ಮುಖಂಡರುಗಳಿಗೆ ಜನ್ಮಸ್ಥಳವಾಗಿದೆ. ಇಲ್ಲಿನ ಬಲಾಢ್ಯ ಕೋಮಿನ ರಾಜಕೀಯ ಧುರೀಣರಾದ ದಿ. ಮಾಜಿ ಮಂತ್ರಿಗಳಾದ ಅಶ್ವತ್ಥರೆಡ್ಡಿಯವರು, ಚಿತ್ರದುರ್ಗ ಜನಪ್ರಿಯ ಶಾಸಕರಾದ ತಿಪ್ಪಾರೆಡ್ಡಿಯಂತಹ ರಾಜಕೀಯ ಕಲಿಗಳಿಗೆ ಜನ್ಮ ನೀಡಿದ ಭೂಮಿ. ರಘುಮೂರ್ತಿಯವರೂ ಸಹ ಈ ಗಂಡುಭೂಮಿಯಿಂದಲೇ ರಾಜಕೀಯ ಪ್ರವೇಶ ಮಾಡಿದರು. ಇಲ್ಲಿನ ರಾಜಕಾರಣಿಗಳಿಗೆ ಸದಾ ಯಶಸ್ಸು ಸಿಕ್ಕಿದೆ. ರಘುಮೂರ್ತಿಯವರ ತಂದೆಯವರು ಶ್ರೀಯುತ ತಳವಾರ ತಿಪ್ಪಯ್ಯ ಸಹ ರಾಜಕೀಯ ಮುಖಂಡರು. 1975ರ ದಶಕದಲ್ಲಿ ಈ ಭಾಗದ ಅನೇಕ ಬಡ ರೈತರನ್ನು ಕಟ್ಟಿಕೊಂಡು ನಿರಂತರವಾಗಿ ಭೂಮಿಯ ಹಕ್ಕಿಗಾಗಿ ಹೋರಾಟ ಮಾಡಿದವರು. ರೈತ ಮುಖಂಡರೂ ಹೌದು, ರಾಜಕೀಯ ಮುಖಂಡರೂ ಹೌದು. ಈ ಭಾಗದ ಜನರಿಗೆ ಭೂಮಿಯ ಹಕ್ಕನ್ನು ಕೊಡಿಸಲು ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಿದವರು. ಸುದೀರ್ಘವಾಗಿ ಹೋರಾಟ ಮಾಡಿ ಈ ಭಾಗದ ರೈತರಿಗೆ ಭೂಮಿಯ ಹಕ್ಕನ್ನು ಕೊಡಿಸಿದ ಮಹಾನ್ ನಾಯಕರು. ಇವರ ಸೇವೆಯನ್ನು ಪರಿಗಣಿಸಿ ಈ ಭಾಗದ ಜನ ಇವರನ್ನು ಗ್ರಾಮಪಂಚಾಯಿತಿ ಅಧ್ಯಕ್ಷರನ್ನಾಗಿ ಮಾಡಿದರು. ಈ ಅವಧಿಯಲ್ಲಿ ಅನೇಕ ಜನಪರ ಕೆಲಸಗಳನ್ನು ಮಾಡಿದ ತಿಪ್ಪಯ್ಯನವರಿಗೆ ರಾಜಕೀಯವಾಗಿ ನೆಲೆಯೂರಲು ಕಾರಣವಾಯಿತು. ಅನೇಕ ವರ್ಷಗಳ ಕಾಲ ರಾಜಕೀಯದಲ್ಲಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರು. ಹಾಲಿ ಶಾಸಕರಾದ ರಘುಮೂರ್ತಿಯವರನ್ನು ಸಮುದಾಯದಲ್ಲಿ ಒಬ್ಬ ದೊಡ್ಡ ಅಧಿಕಾರಿಯನ್ನಾಗಿ ಮಾಡಬೇಕೆಂದು ಕನಸು ಕಂಡವರು. ಉನ್ನತ ಶಿಕ್ಷಣವನ್ನು ಕೊಡಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ರಘುಮೂರ್ತಿಯವರು ಬಿ.ಇ. ಶಿಕ್ಷಣ ಮುಗಿಸಿ ಅಲ್ಪಕಾಲದಲ್ಲಿಯೇ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಕೆಲಸಕ್ಕೆ ತಿಲಾಂಜಲಿ ಕೊಟ್ಟು ರಾಜಕೀಯ ಪ್ರವೇಶ ಮಾಡಿದರು. ರಾಜಕೀಯ ಇವರಿಗೆ ಹೊಸದೇನಾಗಿರಲಿಲ್ಲ ಶ್ರೀಯುತರ ತಂದೆಯವರು ಅನೇಕ ವರ್ಷಗಳ ಕಾಲ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. ಆದ್ದರಿಂದ ಇವರಿಗೆ ರಾಜಕೀಯ ಪ್ರವೇಶ ಮಾಡಲು ಅನುಕೂಲವಾಯಿತು. ಮುಂದೆ ಚಳ್ಳಕೆರೆ ಕ್ಷೇತ್ರವನ್ನು ತಮ್ಮ ರಾಜಕೀಯ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು 4 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಹಳ್ಳಿ ಹಳ್ಳಿ ಸುತ್ತಿ ಎಲ್ಲಾ ಸಮುದಾಯದ ಯುವ ನಾಯಕರನ್ನು ಸಂಪರ್ಕಿಸಿ ಪಕ್ಷ ಸಂಘಟನೆ

ಮಾಡಿದರು. ಕ್ಷೇತ್ರದಲ್ಲಿ ಒಂದು ದೊಡ್ಡ ಯುವಕರ ಪಡೆಯನ್ನೇ ಕಟ್ಟಿದರು. ಪ್ರತಿ ಗ್ರಾಮದಲ್ಲಿ ಹೊಸದಾಗಿ ಕಾರ್ಯಕರ್ತರನ್ನು ಹುಟ್ಟು ಹಾಕಿ ಕ್ಷೇತ್ರದಲ್ಲಿ ಅವಸಾನದ ಅಂಚಿನಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಭದ್ರವಾಗಿ ಕಟ್ಟಿ ಬೆಳೆಸಿದರು. ಇವರ ಸಂಘಟನಾ ಚಾತುರ್ಯವನ್ನು ಕಂಡ ರಾಷ್ಟ್ರ ಮತ್ತು ರಾಜ್ಯ ನಾಯಕರು ಚಳ್ಳಕೆರೆ ಮೀಸಲುಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟರು. ಸುಮಾರು 22 ಸಾವಿರ ಮತಗಳಿಂದ ಗೆದ್ದು ಇಡೀ ಕ್ಷೇತ್ರವನ್ನು ಸುತ್ತಿ ಜನರ ಆಶೀರ್ವಾದ ಪಡೆದ ಧೀಮಂತ ನಾಯಕ.

ಚಳ್ಳಕೆರೆ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಟಿ. ರಘುಮೂರ್ತಿ ಅವರಿಗೆ ಇತ್ತೀಚೆಗೆ ಕರ್ನಾಟಕ ಸರ್ಕಾರವು "ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ" ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಇಂತಹ ವ್ಯಕ್ತಿಯ ಪರಿಚಯವನ್ನು ನಾವಿಲ್ಲಿ ನೋಡಬಹುದು.

**ಜನನ:–** ಶಾಸಕರಾದ ಶ್ರೀ ರಘುಮೂರ್ತಿಯವರು ಟಿ. ತಿಪ್ಪಯ್ಯ ಮತ್ತು ಬಸಮ್ಮ ದಂಪತಿಗಳ ಐದು ಜನ ಮಕ್ಕಳಲ್ಲಿ ದ್ವಿತೀಯ ಪುತ್ರರಾಗಿ ದಿನಾಂಕ–10–06–1963ರಲ್ಲಿ ಚಿತ್ರದುರ್ಗ ಜಿಲ್ಲೆಯ ತುರುವನೂರು ಹೋಬಳಿಯ ಕಡಬನಕಟ್ಟೆಯಲ್ಲಿ ಜನಿಸಿದರು.

**ವಿದ್ಯಾಭ್ಯಾಸ:–** ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಡಬನಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಡೆದು, ಪ್ರೌಢಶಿಕ್ಷಣವನ್ನು ತುರುವನೂರಿನಲ್ಲಿ ಮುಗಿಸಿ, ನಂತರ ಪದವಿಪೂರ್ವ ಶಿಕ್ಷಣವನ್ನು ಚಿತ್ರದುರ್ಗ ನಗರದ ವಿಜ್ಞಾನ ಕಾಲೇಜಿನಲ್ಲಿ ಮುಗಿಸಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ತಮ್ಮ ಇಂಜಿನಿಯರಿಂಗ್ ಶಿಕ್ಷಣವನ್ನು ದಾವಣಗೆರೆ ನಗರದಲ್ಲಿನ ಯು.ಬಿ.ಡಿ.ಟಿ. ಕಾಲೇಜಿನಲ್ಲಿ ಸಿವಿಲ್ ವಿಭಾಗದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು.

**ನೌಕರಿ:–** ಮೈಸೂರು ಜಿಲ್ಲೆಯ ಭೂಸೇನಾ ನಿಗಮದ ಇಲಾಖೆಯಲ್ಲಿ ಸರ್ಕಾರಿ ಸೇವೆಯನ್ನು ಆರಂಭಿಸಿದ ಇವರು ಮೊದಲಿಗೆ ಸಹಾಯಕ ಅಭಿಯಂತರರಾಗಿ ಸೇವೆ ಸಲ್ಲಿಸಿ ಬಡ್ತಿಯನ್ನು ಪಡೆದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದರು.

**ರಾಜಕೀಯ:–** ಶ್ರೀಯುತ ಟಿ. ರಘುಮೂರ್ತಿಯವರ ತಂದೆಯವರಾದ ಶ್ರೀ ತಿಪ್ಪಯ್ಯನವರು ಭೂ ಹಿಡುವಳಿದಾರರ ಪರವಾಗಿ 1975–76ನೇ ಸಾಲಿನಲ್ಲಿ ಸುದೀರ್ಘವಾಗಿ ಹೋರಾಟ ಮಾಡಿದರು. ತುರುವನೂರು ಗ್ರಾಮದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಿ

ಸುಮಾರು 200 ಕುಟುಂಬಗಳಿಗೆ ಭೂಸ್ವಾಧೀನ ಹಕ್ಕುಪತ್ರವನ್ನು ಕೊಡಿಸಿದರು. ಇದನ್ನು ಕಂಡ ರಘುಮೂರ್ತಿಯವರಿಗೆ ರಾಜಕೀಯದಲ್ಲಿದ್ದರೆ ಹಲವಾರು ಕುಟುಂಬಗಳಿಗೆ ನೆರವಾಗುವ ದೃಷ್ಟಿಯಿಂದ ಸರ್ಕಾರಿ ನೌಕರಿಗೆ ಸ್ವಯಂ ನಿವೃತ್ತಿ ಪಡೆದು 2013ರಲ್ಲಿ ರಾಜಕೀಯ ಪ್ರವೇಶಿಸಿದ್ದಾರೆ. ದಿನಾಂಕ–08–05–2013ರಂದು ಚಳ್ಳಕೆರೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ವತಿಯಿಂದ ಮೊದಲ ಬಾರಿಗೆ ಸ್ಪರ್ಧಿಸಿ ಚಳ್ಳಕೆರೆಯ 14ನೇ ವಿಧಾನಸಭಾ ಶಾಸಕರಾಗಿ ಆಯ್ಕೆಯಾಗಿರುವುದು ಇತಿಹಾಸ.

**ಶ್ರೀಯುತ ಟಿ. ರಘುಮೂರ್ತಿಯವರು ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಮಾಡಿದ ಸಾಧನೆಗಳು**

**1. ಚಳ್ಳಕೆರೆಯಲ್ಲಿ ವಿಶಾಲ ರಸ್ತೆಗಳು ಸಂಚಾರ ಸರಾಗ**

ಸಾರ್ವಜನಿಕರ ಮೂಲಭೂತ ಅವಶ್ಯಕತೆಗಳಲ್ಲಿ ರಸ್ತೆಗಳು ಪ್ರಮುಖವಾಗಿವೆ. ಶಾಸಕ ಟಿ. ರಘುಮೂರ್ತಿಯವರು ಸಿವಿಲ್ ಇಂಜಿನಿಯರ್ ಆಗಿರುವುದರಿಂದಾಗಿ ಚಳ್ಳಕೆರೆ ನಗರದ ರಸ್ತೆಗಳು ಇಡೀ ಜಿಲ್ಲೆಗೆ ಮಾದರಿಯಾಗಿವೆ. ಜಿಲ್ಲೆಯ ಯಾವುದೇ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸಲು ಸಾಧ್ಯವಾಗಿಲ್ಲದ ರೀತಿಯಲ್ಲಿ ನಗರದ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಮುಂದಿನ 50 ವರ್ಷಗಳ ದೂರದೃಷ್ಟಿಯನ್ನು ಹೊಂದಿರುವ ರಸ್ತೆಗಳನ್ನು ಶಾಸಕರು ಅಭಿವೃದ್ಧಿಪಡಿಸಿರುವುದನ್ನು ಗಮನಿಸಿದರೆ ಅವು ಮೈಸೂರು ನಗರದ ರಸ್ತೆಗಳನ್ನು ಹೋಲುತ್ತಿವೆ.

ಜಿಲ್ಲಾ ಕೇಂದ್ರ ಹಿಂದುಳಿದಿದೆ ಎಂದು ಸರಕಾರದ ಗಮನ ಸೆಳೆಯಲು ಚಿತ್ರದುರ್ಗ ಮುರುಘಾ ಶರಣರ ನೇತೃತ್ವದಲ್ಲಿ ಕೆಲ ತಿಂಗಳ ಹಿಂದೆ ಪ್ರತಿಭಟನೆ ನಡೆಸಿದ್ದರು. ಆ ಸಂದರ್ಭದಲ್ಲಿ ಶರಣರು ಚಿತ್ರದುರ್ಗ ರಸ್ತೆಗಳು ಮತ್ತು ಚಳ್ಳಕೆರೆಯ ವಿಶಾಲ ರಸ್ತೆಯನ್ನು ಹೋಲಿಕೆ ಮಾಡಿ ಮೆಚ್ಚುಗೆಯ ನುಡಿಗಳನ್ನಾಡಿದ್ದು ಇಲ್ಲಿ ಸ್ಮರಿಸಬಹುದು. ನಗರದ ಘಟಾನುಘಟಿ ಮುಖಂಡರು, ವಾಣಿಜ್ಯೋದ್ಯಮಿಗಳ ವಿರೋಧ ಲೆಕ್ಕಿಸದೆ ರಸ್ತೆ ವಿಸ್ತರಣೆಯನ್ನು ಶಾಸಕರು ಕೈಗೊಂಡಿದ್ದಾರೆ. ಮತಬ್ಯಾಂಕ್‌ಗಳನ್ನು ಲೆಕ್ಕ ಹಾಕದೆ, ವಿರೋಧವಿದ್ದರೂ ಇಡೀ ಕ್ಷೇತ್ರದ ಜನರಿಗೆ ಉಪಯೋಗವಾಗುವ ರಸ್ತೆ ವಿಸ್ತರಣೆ ಕೈಗೊಂಡಿದ್ದಾರೆ. ಹೀಗಾಗಿ ಇದೀಗ ಸುಂದರ ಹಾಗೂ ವಿಶಾಲವಾದ ರಸ್ತೆಗಳು ಎಲ್ಲರ ಗಮನ ಸೆಳೆದಿವೆ.

ಅನೇಕ ನಗರಗಳ ಪ್ರಮುಖ ರಸ್ತೆಗಳು ಕಿರಿದಾಗಿದ್ದು, ಜನರಿಗೆ ಬಹಳ ತೊಂದರೆಯನ್ನುಂಟು ಮಾಡುತ್ತಿದ್ದವು. ಇವುಗಳನ್ನು ವಿಸ್ತರಣೆ ಮಾಡಲು ನೂರಾರು ಅಡ್ಡಿ ಆತಂಕಗಳಿದ್ದರಿಂದ ಯಾರೊಬ್ಬರೂ ಕೈಹಾಕಿರಲಿಲ್ಲ. ಶಾಸಕರ ಇಚ್ಛಾಶಕ್ತಿಯಿಂದ ನಗರದಲ್ಲಿ ನಿರ್ಮಾಣವಾದ ದ್ವಿಪಥ–ತ್ರಿಪಥ ರಸ್ತೆಗಳಾಗಿದ್ದು ಕೆಲಸಗಳು ರಾಜಧಾನಿಗೂ ಮುಟ್ಟಿದೆ. ಈ ರಸ್ತೆಗಳನ್ನು ನೋಡಿದ ಜಿಲ್ಲೆಯ ಸಾರ್ವಜನಿಕರು ಚಳ್ಳರೆಕೆಯಲ್ಲಿ ಆಗಿದ್ದು, ನಮ್ಮೂರಲ್ಲೂ ಯಾಕಾಗಲ್ಲ ಎಂದು ಸಂಬಂಧಪಟ್ಟವರ ಮೇಲೆ ಅಸಮಾಧಾನಗೊಂಡಿದ್ದು ಉಂಟು.

**2. ಡಬಲ್ ಬೈಪಾಸ್ ರಸ್ತೆ**

ನಗರದಲ್ಲಿ ಚಿತ್ರದುರ್ಗ ಪಾವಗಡದ ದ್ವಿಪಥ ರಸ್ತೆಯ ಜತೆಗೆ ನಗರದ ಹೊರವಲಯದಲ್ಲಿರುವ ಜಗಲೂರಜ್ಜನ ದೇವಾಲಯ ಬಳಿ ಪ್ರವಾಸಿ ತಾಣವಾಗಿ ಮಾಡಬೇಕೆಂದು ಶ್ರೀರಂಗಪಟ್ಟಣ–ಬೀದರ್ ರಾಷ್ಟ್ರೀಯ ಹೆದ್ದಾರಿ ಸಂಪರ್ಕದಿಂದ ದ್ವಿಪಥ ರಸ್ತೆ ಮಾಡಿಸಿದರು. ಹಾಗೆಯೇ ಇದೇ ಹೆದ್ದಾರಿಯಿಂದ ಎಂಜಿನಿಯರಿಂಗ್ ಕಾಲೇಜಿಗೆ ಹೋಗಲು 1.25 ಕಿ.ಮೀ. ದೂರವನ್ನು 1.80 ಕೋಟಿ ರೂ. ಖರ್ಚುಮಾಡಿ ಡಬಲ್ ರಸ್ತೆಗಳನ್ನಾಗಿ ಮಾಡಿಸಿದರು. ಶಾಸಕರು ಸ್ವತಃ ಎಂಜಿನಿಯರ್ ಆಗಿದ್ದ ಕಾರಣ ಇದಕ್ಕಾಗಿ ಬಹಳಷ್ಟು ಶ್ರಮ ವಹಿಸಿ ಕೆಲಸ ಮಾಡಿದ್ದರಿಂದ ಸ್ವಲ್ಪ ದಿನಗಳಲ್ಲಿ ವಿಶಾಲವಾದ ರಸ್ತೆ ನಿರ್ಮಾಣವಾಗಿವೆ.

ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿರುವುದರಿಂದ ವಾಹನಗಳ ದಟ್ಟಣೆ ನಿವಾರಣೆ ಮಾಡಲು ರಿಂಗ್ ರೋಡ್ ಮಾಡುವ ಚಿಂತನೆ ನಡೆಸಿದ್ದಾರೆ. ಮೊದಲ ಹಂತವಾಗಿ ಒಂದು ಕಡೆ ಬೈಪಾಸ್ ಮಂಜೂರಾತಿ ನೀಡುವಂತೆ ಶಾಸಕರು ಕಳೆದ ಮೂರುವರೆ ವರ್ಷದಿಂದ ಬೇಡಿಕೆ ಸಲ್ಲಿಸುತ್ತಾ ಬಂದ ಪ್ರತಿಫಲವಾಗಿ ಬೈಪಾಸ್ ರಸ್ತೆ ಮಂಜೂರಾಗಿದೆ.

**3. ರಸ್ತೆ ವಿಸ್ತರಣೆ**

ಉಡುಪಿ ಜಿಲ್ಲೆಯ ಕುಮಟಾದಿಂದ ಆಂಧ್ರಪ್ರದೇಶದ ಪೆನುಗೊಂಡದ ಕಡಮಡಗಿಯ ಹೆದ್ದಾರಿಯನ್ನು ಸಂಪರ್ಕಿಸಲು ಜಿಲ್ಲೆಯ ಭೀಮಸಮುದ್ರದಿಂದ ತಾಲೂಕಿನ ಗಡಿ ಗ್ರಾಮ ಸಿದ್ಧೇಶ್ವರನದುರ್ಗದವರೆಗೆ 33 ಕೋಟಿ ರೂ. ವೆಚ್ಚದಲ್ಲಿ 7 ಮೀಟರ್ ರಸ್ತೆ ವಿಸ್ತರಣೆ ಮಾಡಿಸಿದ್ದಾರೆ. ಈ ಸಂದರ್ಭದಲ್ಲಿ ನಗರದ ಜನರ ಮತ್ತು ವಾಹನಗಳ ದಟ್ಟಣೆಯಾಗುತ್ತಿರುವುದನ್ನು ಕಂಡ ಶಾಸಕರು ಭವಿಷ್ಯದ ದೃಷ್ಟಿಯಿಂದ ಸರಕಾರದಿಂದ

ರಸ್ತೆಗಾಗಿ 8 ಕೋಟಿ ಹಣ ಬಿಡುಗಡೆಗೊಳಿಸಲು ನೆರವಾಗಿದ್ದಾರೆ. ನಗರಸಭೆ ನಿರ್ಮಾಣಕ್ಕೆ 3 ಕೋಟಿ ರೂ.ಗಳನ್ನು ಮಾಡಿಸಿದ್ದಾರೆ. ರಸ್ತೆ ಮಧ್ಯೆ ಡಿವೈಡರ್ ನಿರ್ಮಿಸಲು 50 ಲಕ್ಷ ರೂ. ಅನುದಾನವನ್ನು ಬಳಸಿಕೊಂಡು ಚಿತ್ರದುರ್ಗ ಟೋಲ್ ಗೇಟ್‌ನಿಂದ ಸರಕಾರಿ ಪ್ರಥಮದರ್ಜೆ ಕಾಲೇಜಿನವರೆಗೆ 12 ಮೀಟರ್ ರಸ್ತೆಯನ್ನು ಮಾಡಿಸಿದ್ದಾರೆ. ಅಲ್ಲಿಂದ ಪಾವಗಡ ರಸ್ತೆಯವರೆಗೆ 12.5 ಮೀಟರ್ ರಸ್ತೆ ಮಾಡಿ 2.5 ಮೀಟರ್‌ನಲ್ಲಿ ಪಾದಚಾರಿ ಮತ್ತು ಚರಂಡಿ ನಿರ್ಮಾಣ ಮಾಡಿದ್ದರಿಂದ ಇಂದು ಚಳ್ಳಕೆರೆಗೆ ದ್ವಿಪಥ ರಸ್ತೆಗಳ ಭಾಗ್ಯ ಸಿಕ್ಕಿದೆ. ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿದಾಗ ಇತರರಿಗೆ ಪ್ರೇರಣೆಯಾಗುವುದು ಎಂಬಂತೆ ಚಳ್ಳಕೆರೆಯಲ್ಲಿನ ವಿಶಾಲ ರಸ್ತೆಗಳ ನಿರ್ಮಾಣದ ನಂತರ ಚಿತ್ರದುರ್ಗ, ಹಿರಿಯೂರಿನಲ್ಲೂ ಈ ಗಾಳಿ ಬೀಸುತ್ತಿದೆ. ಅಲ್ಲಿಯೂ ವಿಶಾಲ ರಸ್ತೆಗಳ ನಿರ್ಮಾಣಕ್ಕೆ ಮುಂದಾಗುತ್ತಿರುವುದು ಅಲ್ಲಿನ ಸಾರ್ವಜನಿಕರಲ್ಲಿ ಆಸೆ ಚಿಗುರೊಡೆಯುತ್ತಿದೆ. ಆದ್ದರಿಂದಲೆ ರಘುಮೂರ್ತಿಯವರನ್ನು ರಸ್ತೆಗಳ ರಾಜ ಎನ್ನುವವರಿದ್ದಾರೆ.

**4. ತಾಲ್ಲೂಕು ಕೇಂದ್ರಕ್ಕೆ ಎಂಜಿನಿಯರಿಂಗ್ ಕಾಲೇಜು ಭಾಗ್ಯ**

ಜಿಲ್ಲಾ ಕೇಂದ್ರದಲ್ಲಿ ಇಲ್ಲದ ಸರಕಾರಿ ಎಂಜಿನಿಯರಿಂಗ್ ಕಾಲೇಜನ್ನು ತಾಲ್ಲೂಕು ಕೇಂದ್ರದಲ್ಲಿ ಸ್ಥಾಪಿಸುವಲ್ಲಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಯಶಸ್ವಿಯಾಗಿದ್ದಾರೆ. ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರ ಮನವೊಲಿಸುವಲ್ಲಿ ಶಾಸಕರ ಪಾತ್ರ ದೊಡ್ಡ ಪ್ರಮಾಣದಲ್ಲಿದೆ. ವಿದ್ಯಾವಂತ ಹಾಗೂ ಎಂಜಿನಿಯರಿಂಗ್ ಪದವೀಧರರಾದ ಶಾಸಕರು ತಮ್ಮ ವಿಧಾನಸಭಾ ಕ್ಷೇತ್ರಕ್ಕೆ ಎಂಜಿನಿಯರಿಂಗ್ ಕಾಲೇಜು ದೊರಕಿಸುವುದರಲ್ಲಿ ದೊಡ್ಡ ಪ್ರಮಾಣದ ಪ್ರಯತ್ನ ಹಾಗೂ ಲಾಬಿಯನ್ನು ಮಾಡಿದ್ದಾರೆ. ತಮ್ಮ ಕ್ಷೇತ್ರದ ಜನರ ಅಭಿವೃದ್ಧಿಗಾಗಿ ಶ್ರಮಿಸುವುದರಲ್ಲಿ ಸದಾ ತೊಡಗಿಸಿಕೊಂಡಿರುವ ಅವರು ಒಬ್ಬ ಇಂಜಿನಿಯರ್ ಶಾಸಕರಾದರೆ ಕ್ಷೇತ್ರದಲ್ಲಿ ನೂರಾರು ಇಂಜಿನಿಯರ್‌ಗಳನ್ನು ಸೃಷ್ಟಿಸುವ ಕಾಲೇಜು ಸ್ಥಾಪಿಸಿರುವುದು ವಿಶೇಷವಾಗಿದೆ. ತಾಲ್ಲೂಕಿನಲ್ಲಿ ರಾಷ್ಟ್ರಮಟ್ಟದ ವೈಜ್ಞಾನಿಕ ಸಂಸ್ಥೆಗಳು ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ಭವಿಷ್ಯದ ದೃಷ್ಟಿಯಲ್ಲಿಟ್ಟುಕೊಂಡು ಶಾಸಕರು ತಾಂತ್ರಿಕ ಶಿಕ್ಷಣಕ್ಷೇತ್ರಕ್ಕೆ ಅತಿ ಹೆಚ್ಚಿನ ಆದ್ಯತೆ ನೀಡಿದ್ದಾರೆ. ನಗರದ ಎತ್ತರ ಪ್ರದೇಶದ ಕೆರೆಯ ಹಿಂಭಾಗದ ಸುಂದರವಾದ 15 ಎಕರೆ ವಿಶಾಲ ಪ್ರದೇಶದಲ್ಲಿ ಒಟ್ಟು 61 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾಲೇಜು ಬರುವ ಜೂನ್‌ನಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾಂರಭಿಸುವುದರಿಂದ ಸ್ಥಳೀಯವಾಗಿ ಗ್ರಾಮೀಣ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದು ಸಾಧ್ಯವಾಗಲಿದೆ. ಇದೇ ಕಾಲೇಜಿನಲ್ಲಿ ಸೀಟ್ ದೊರೆತಲ್ಲಿ ರಾಜ್ಯದ ನಾನಾ ಮೂಲೆಗಳಿಗೆ ಅಲೆದಾಡುವ ಬದಲು ಸ್ವಂತ ಸ್ಥಳದಲ್ಲಿ ಕಲಿಯುವ ಅವಕಾಶ ದೊರೆಯಲಿದೆ. ಬಾಡಿಗೆ ಕಟ್ಟಡದಲ್ಲಿ

ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಒಪ್ಪದ ಶಾಸಕರು ಕಟ್ಟಡ ನಿರ್ಮಾಣದ ನಂತರ ಕಾಲೇಜು ಆರಂಭಿಸಲು ಚಿಂತನೆ ನಡೆಸಿದ್ದಾರೆ. ಆಧುನಿಕ ಮಾದರಿಯಲ್ಲಿ ಸ್ವಂತ ಕಾಲೇಜು ಕಟ್ಟಡ ನಿರ್ಮಿಸಲಾಗುತ್ತಿದೆ. ನಾಯಕನಹಟ್ಟಿ ರಸ್ತೆಯ ಕರೆಕಲ್ ಕೆರೆ ಪ್ರದೇಶದ 15 ಎಕರೆ ವಿಶಾಲ ಪ್ರದೇಶದಲ್ಲಿ ಕಾಲೇಜು ನಿರ್ಮಾಣ ಕಾಮಗಾರಿ ಭರದಿಂದ ಆರಂಭಗೊಂಡಿದೆ. ಇದಕ್ಕಾಗಿ ರಾಷ್ಟ್ರೀಯ ಹೆದ್ದಾರಿಯ 150ಎ ಯಿಂದ ದ್ವಿಪಥ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ ರಾಷ್ಟ್ರೀಯ ಹೆದ್ದಾರಿಯಿಂದ ಕೂಗಳತೆಯಲ್ಲಿ ಕಾಲೇಜು ನಿರ್ಮಾಣವಾಗುತ್ತಿರುವುದು ವಿಶೇಷವಾಗಿದೆ.

ಕಾಲೇಜು ಕಟ್ಟಡವನ್ನು ಮೂರು ಬ್ಲಾಕ್‌ಗಳಾಗಿ ವಿಂಗಡಿಸಿದ್ದು, ಎ ಬ್ಲಾಕ್‌ನಲ್ಲಿ ಮೂರು ಮಹಡಿ ಕಟ್ಟಡ ಮತ್ತು ಬಿ–ಸಿ ಬ್ಲಾಕ್‌ಗಳಲ್ಲಿ ಎರಡು ಮಹಡಿಗಳ ಕಟ್ಟಡವಿರುವುದು. ಎರಡು ಮಹಿಳಾ ಹಾಸ್ಟೆಲ್, ಒಂದು ಪುರುಷರ ಹಾಸ್ಟೆಲ್ ಕಟ್ಟಡ ಕೂಡ ನಿರ್ಮಾಣವಾಗುತ್ತಿದೆ. ಮೊದಲ ಹಂತದಲ್ಲಿ ಸಿವಿಲ್, ಕಂಪ್ಯೂಟರ್ ಸೈನ್ಸ್, ಮೆಕಾನಿಕಲ್, ಎಲೆಕ್ಟ್ರಿಕಲ್ ಹೀಗೆ ನಾಲ್ಕು ತಾಂತ್ರಿಕ ಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುತ್ತಿದೆ. 10 ವರ್ಕ್‌ಶಾಪ್‌ಗಳನ್ನು ತೆರೆಯಲಾಗುತ್ತಿದೆ. ಕಾಲೇಜು ಮುಂಭಾಗದಲ್ಲಿ ಜಾಗ ಬಿಟ್ಟು ಸುಂದರ ಉದ್ಯಾನವನ ನಿರ್ಮಾಣ ಮಾಡಲಾಗುತ್ತಿದೆ. ಕಾಲೇಜು ಕ್ಯಾಂಪಸ್‌ಗೆ ಹೊಂದಿಕೊಂಡಂತೆ 220 ಎಕರೆ ವಿಸ್ತೀರ್ಣದ ಕರೇಕಲ್ ಕೆರೆಯಿದೆ. ಕೆರೆ ಹಾಗೂ ಕಾಲೇಜು ಒಂದರ ಪಕ್ಕದಲ್ಲಿ ಒಂದು ಇದೆ. ಇದರಿಂದ ಇಡೀ ಕಾಲೇಜು ಕ್ಯಾಂಪಸ್ ಸುತ್ತಮುತ್ತ ಸುಂದರವಾದ ಪ್ರವಾಸಿ ತಾಣದಂತೆ ಗೋಚರಿಸಲಿದೆ.

**5. ಎಂಜಿನಿಯರಿಂಗ್ ಕಾಲೇಜು ಜೊತೆಗೆ ಕೆರೆ ಅಭಿವೃದ್ಧಿ**

ಎಂಜಿನಿಯರಿಂಗ್ ಕಾಲೇಜಿನ ಮುಂಭಾಗದಲ್ಲಿರುವ ಕೆರೆ ಸುಂದರವಾಗಿ ಕಾಣಬೇಕು ಎನ್ನುವುದು ಶಾಸಕರ ಆಶಯವಾಗಿದೆ. ಇದಕ್ಕೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಶಾಸಕರು 2.50 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಯೋಜನೆ ರೂಪಿಸಿ ಇಡೀ ಕೆರೆ ಏರಿಯ ಪುನರ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಕೆರೆ ಏರಿಯನ್ನು ವಿಸ್ತರಣೆಗೊಳಿಸಿದ್ದಾರೆ. ವಿದ್ಯಾರ್ಥಿಗಳು ಮತ್ತು ವಾಯುವಿಹಾರಿಗಳಿಗೆ 4 ಕಿ.ಮೀ. ವಿಸ್ತೀರ್ಣದ ಕೆರೆಯನ್ನು ತಾಣವಾಗುವಂತೆ ಯೋಜನೆ ರೂಪಿಸಿದ್ದಾರೆ. ಕೆರೆಯ ಪುನರ್ ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿದೆ. ಹೆಸರೇ ಸೂಚಿಸುವಂತೆ ಕರೆಕಲ್ ಕೆರೆ ಏರಿಯಲ್ಲಿ ದುಂಡನೆಯ ದೊಡ್ಡ ಕಲ್ಲುಗಳಿದ್ದು, ಇವುಗಳಿಗೆ ಬಣ್ಣ, ಬಣ್ಣದ ಆಕಾರಗಳನ್ನು ನೀಡಿ ಕೆರೆಯನ್ನು ಮತ್ತಷ್ಟು ಸುಂದರಗೊಳಿಸಲಾಗುತ್ತಿದೆ. ಈ ಮಾರ್ಗದಲ್ಲೇ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುವ ದಾರಿಯಲ್ಲಿ ಮೆರುಗು ನೀಡುವ ಸನ್ನಿವೇಶ ಸೃಷ್ಟಿಯಾಗಲಿದೆ. ಅಲ್ಲದೇ ಭದ್ರಾ ನೀರು ಬಂದ

ನಂತರ ಸದಾ ಕೆರೆಯನ್ನು ತುಂಬಿಸುವ ಚಿಂತನೆ ಶಾಸಕರ ಮನದಲ್ಲಿದ್ದು, ಇದು ಈಡೇರಿದಲ್ಲಿ ಮೈಸೂರಿನ ಕುಕ್ಕರಹಳ್ಳಿಯ ಕೆರೆ ನೆನಪಾಗಬಹುದು. ಈ ಕೆರೆ ದಂಡೆ ಮೇಲೆ ಕುಳಿತು ಸಾಹಿತ್ಯ ಬರೆಯುತ್ತಿದ್ದ ರಾಷ್ಟ್ರಕವಿ ಕುವೆಂಪು ಅವರಂತೆ ನಮ್ಮ ವಿದ್ಯಾರ್ಥಿಗಳು ಸುಂದರ ಕೆರೆಯ ತಾಣದಲ್ಲಿ ತಾಂತ್ರಿಕ ಶಿಕ್ಷಣ ಪಡೆದು ವೈಜ್ಞಾನಿಕ ಕ್ಷೇತ್ರದಲ್ಲಿ ಸಾಧನೆ ಮಾಡುವಂತಾಗಲಿ ಎಂಬುದು ಶಾಸಕರ ಆಶಯವಾಗಿದೆ.

**6. ಉಣ್ಣೆ ನೂಲು ಘಟಕ ಲೋಕಾರ್ಪಣೆ**

ದೇಶ ಕಾಯುವ ಸೈನಿಕರನ್ನು ಬೆಚ್ಚಗಿಡುವ ಬ್ಯಾರಕ್ ಬ್ಲಾಂಕೆಟ್ ಉಣ್ಣೆ ನೂಲು ತಯಾರಿಕೆ ಘಟಕ 1.5 ಕೋಟಿ ವೆಚ್ಚದಲ್ಲಿ ಡಿಸೆಂಬರ್ 27, 2017ರಂದು ಲೋಕಾರ್ಪಣೆಗೊಂಡಿದೆ. ಜಮ್ಮು, ಕಾಶ್ಮೀರ, ನೇಪಾಳ ಗಡಿಗಳಲ್ಲಿ ಉಷ್ಣಾಂಶ ಶೂನ್ಯಕ್ಕಿಂತ ಕಡಿಮೆ ಇರುತ್ತದೆ. ಇಂಥ ಕೊರೆಯುವ ಚಳಿಯಲ್ಲಿ ಯೋಧರನ್ನು ಬೆಚ್ಚಗಿಡಲು ನಮ್ಮ ಜಿಲ್ಲೆಯ ಕಂಬಳಿಗಳು ಮುಂದಿನ ದಿನಗಳಲ್ಲಿ ಸೈನ್ಯ ಸೇರಲಿವೆ ಎನ್ನುವುದು ಹೆಮ್ಮೆಯ ವಿಷಯವಾಗಿದೆ.

ಚಳ್ಳಕೆರೆ ನಗರದಲ್ಲಿ 1.25 ಕೋಟಿ ವೆಚ್ಚದಲ್ಲಿ ಆರಂಭಿಸಲಾಗಿರುವ ಕಂಬಳಿ ನೂಲು ತಯಾರಿಕೆ ಘಟಕದ ಉದ್ಘಾಟನೆ ಹಾಗೂ 2 ಕೋಟಿ ವೆಚ್ಚದ ಕಂಬಳಿ ಬ್ಯಾಂಕ್ ಸಂಕೀರ್ಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ. ದಕ್ಷಿಣ ಭಾರತದಲ್ಲೇ ಅತಿ ದೊಡ್ಡ ಕಂಬಳಿ ಮಾರುಕಟ್ಟೆ ಚಳ್ಳಕೆರೆಯಲ್ಲಿದ್ದು, ಪ್ರತಿ ಭಾನುವಾರ ಸಂತೆ ನಡೆಯುತ್ತದೆ. ಐಐಎಸ್ಸಿ, ಡಿಆರ್‌ಡಿಓ, ಇಸ್ರೋ, ಬಾರ್ಕ್ ಸಂಸ್ಥೆಗಳ ಸ್ಥಾಪನೆಯಿಂದ ದೇಶದ ಭೂಪಟದಲ್ಲಿ ಚಳ್ಳಕೆರೆ ಗುರುತಿಸಿಕೊಂಡಿದ್ದು, ಉತ್ತರ ಭಾರತದ ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನಗಳ ಮೂರು ಕಡೆ ಮಾತ್ರ ಉಣ್ಣೆ ತಯಾರಿಕೆ ಘಟಕಗಳಿವೆ. ಇದರ ಜೊತೆಗೆ ಚಳ್ಳಕೆರೆಯಲ್ಲಿ ನಾಲ್ಕನೇ ಘಟಕವಾಗಿ ಆರಂಭಗೊಂಡಿದೆ.

ಇಲ್ಲಿನ ಕಂಬಳಿ ದೇಶದಲ್ಲೇ ಪ್ರಸಿದ್ಧ. ದೀರ್ಘ ಬಾಳಿಕೆ, ಮಾಸದ ಬಣ್ಣ, ನಯವಾದ ನೇಯ್ಗೆ, ದೊಡ್ಡಗಾತ್ರ ವಿಶೇಷವಾಗಿದೆ. ಕರಾವಳಿ, ಮಲೆನಾಡು ಹಾಗೂ ಬೇರೆ ರಾಜ್ಯಗಳಿಂದಲೂ ಇಲ್ಲಿ ಕಂಬಳಿಗೆ ಬೇಡಿಕೆ ಇದೆ. ನಮ್ಮ ಪ್ರದೇಶದ ಕಂಬಳಿಗಳು ದೇಶ ಕಾಯುವ ಸೈನಿಕರನ್ನು ಕಾಯುತ್ತಿರುವುದು ಜಿಲ್ಲೆಯ ಜನರಿಗೆ ಸಂತಸದ ಹಾಗೂ ಹೆಮ್ಮೆಯ ವಿಚಾರವಾಗಿದೆ. ಇತ್ತೀಚಿನ ಬ್ಲಾಂಕೆಟ್, ಉಲ್ಲನ್ ಯುಗದಲ್ಲಿ ಕಂಬಳಿಗೆ ಬೇಡಿಕೆ ಕಡಿಮೆಯಿದ್ದರೂ ಪ್ರತಿ ಮನೆಯಲ್ಲಿಯೂ ಕಂಬಳಿ ಅಸ್ತಿತ್ವ ಹೊಂದಿದೆ.

ನೇಕಾರರ ಸಾಂದ್ರತೆಯಲ್ಲಿ ಬಾಗಲಕೋಟೆ ಪ್ರಥಮ, ಬೆಳಗಾವಿ ದ್ವಿತೀಯ, ಚಿತ್ರದುರ್ಗ ತೃತೀಯ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಎಂಟು ಸಾವಿರ ನೇಕಾರರಿದ್ದು, 78 ನೇಕಾರ ಸಂಘಗಳಿವೆ. 1,860 ರೇಷ್ಮೆ ಕುಟುಂಬಗಳಲ್ಲಿ ಬಹುತೇಕರು ಮೊಳಕಾಲ್ಮೂರು ಭಾಗದವರು. 5,650 ಉಣ್ಣೆ ನೇಕಾರರಲ್ಲಿ ಬಹುತೇಕರು ಚಳ್ಳಕೆರೆಯಲ್ಲಿದ್ದಾರೆ. ರಾಜ್ಯದಲ್ಲಿ ರೇಷ್ಮೆ ಸೀರೆಗೆ ಮೊಳಕಾಲ್ಮೂರು ಹೆಸರಾಗಿದೆ. ಚಳ್ಳಕೆರೆ ಕಂಬಳಿಯಲ್ಲಿ ದಕ್ಷಿಣ ಭಾರತದಲೇ ಖ್ಯಾತಿ ಪಡೆದಿದೆ.

ಈ ಹಿಂದೆ ಇಲ್ಲಿನ ಉಣ್ಣೆಯನ್ನು ಹರಿಯಾಣ, ಪಾಣಿಪತ್‌ನಲ್ಲಿರುವ ಬ್ಲಾಂಕೆಟ್ ಘಟಕಗಳಿಗೆ ಕಳಿಸಿಕೊಡುತ್ತಿದ್ದರು. ಭಾರತೀಯ ಸೈನ್ಯಕ್ಕೆ ವರ್ಷಕ್ಕೆ 5ರಿಂದ 7 ಲಕ್ಷ ಬ್ಲಾಂಕೆಟ್ ಅವಶ್ಯ. ಹಾಗಾಗಿ ನೇಕಾರರಿಗೆ ನಿರಂತರ ಉದ್ಯೋಗ ದೊರೆಯುವುದರಲ್ಲಿ ಅನುಮಾನವಿಲ್ಲ ಎಂದು ಹೇಳಬಹುದು.

### 7. ಉದ್ಯೋಗಮೇಳ ಮೂಲಕ ಆಸರೆ

ಉದ್ಯೋಗ ಇಂದಿನ ಎಲ್ಲಾ ಜನರ ನಿರೀಕ್ಷೆ ಹಾಗೂ ಆದಾಯದ ಮೂಲವಾಗಿದೆ. ಇನ್ನು ವಿದ್ಯಾವಂತರಿಗೆ ಜೀವನಕ್ಕೆ ಒಂದು ಉದ್ಯೋಗ ದೊರೆತರೆ ಸಾಕು ಎನ್ನುವ ತವಕ. ತಾವು ನೌಕರಿ ಸಿಗುವುದಕ್ಕಿಂತಲೂ ಮುಂಚೆ ಒಬ್ಬ ನಿರುದ್ಯೋಗಿಯಾಗಿ ಅಲೆದಾಡಿದ ಸಮಸ್ಯೆಯನ್ನು ಶಾಸಕ ಟಿ. ರಘುಮೂರ್ತಿ ಅರ್ಥ ಮಾಡಿಕೊಂಡಿದ್ದಾರೆ. ಹೀಗಾಗಿ ಅವರ ಕನಸಿನ ಕೂಸಾದ ಉದ್ಯೋಗ ಮೇಳವನ್ನು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಆಯೋಜಿಸಿ ಯುವಜನರ ಕಣ್ಮಣಿಯಾಗಿದ್ದಾರೆ. ಉದ್ಯೋಗಮೇಳದಲ್ಲಿ ನೂರಾರು ನಿರುದ್ಯೋಗಿಗಳಿಗೆ ಜೀವನಮಾರ್ಗವನ್ನು ಹುಡುಕಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಕಾಟಾಚಾರದ ಸರಕಾರಿ ಕಾರ್ಯಕ್ರಮದಂತೆ ಇದನ್ನು ಆಯೋಜಿಸಿದ್ದಲ್ಲ, ಬದಲಾಗಿ ಅತ್ಯಂತ ಶಿಸ್ತುಬದ್ಧವಾಗಿ ಫಲಿತಾಂಶ ದೊರೆಯುವ ರೀತಿಯಲ್ಲಿ ಆಯೋಜಿಸಿದ್ದರು. ಉದ್ಯೋಗಮೇಳದಲ್ಲಿ ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಒಡೆತನದ ಬೃಹತ್ ಕಂಪನಿಗಳು ಆಗಮಿಸಿದ್ದು ವಿಶೇಷವಾಗಿತ್ತು. ಬೃಹತ್ ಉದ್ಯೋಗ ಮೇಳದಲ್ಲಿ 127 ಕಂಪನಿಗಳು ಮತ್ತು 10 ಸಾವಿರ ಉದ್ಯೋಗ ಅಕಾಂಕ್ಷಿಗಳು ಒಂದೆಡೆ ಸೇರಿದ್ದು, ಜಿಲ್ಲೆಯಲ್ಲಿ ದಾಖಲೆಯಾಗಿದೆ. ಸರಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಆವರಣದಲ್ಲಿ ಜಿಲ್ಲಾಮಟ್ಟದ ಬೃಹತ್ ಉದ್ಯೋಗಮೇಳ ಅಂಗವಾಗಿ 127 ಕಂಪನಿಗಳು ಭಾಗವಹಿಸಿದ್ದವು. ಮೇಳದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಎಂಜನಿಯರಿಂಗ್ ಹಾಗೂ ಐಟಿಐ, ಜೆಓಸಿಗಳಲ್ಲದೆ ವಿಕಲಚೇತನರಿಗೂ ಅವಕಾಶ ಒದಗಿಸಲಾಗಿತ್ತು. ಮೇಳದಲ್ಲಿ ಭಾಗವಹಿಸಿದ್ದ 8,765 ಜನರಲ್ಲಿ

140 ವಿಕಲಚೇತನರು ಭಾಗವಹಿಸಿದ್ದರು. ಇದರಲ್ಲಿ 8 ಕಿವುಡ ಹಾಗೂ ಮೂಗರಿಗೂ ಉದ್ಯೋಗ ದೊರೆತಿದ್ದು ವಿಶೇಷವಾಗಿತ್ತು. ಬರಕ್ಕೆ ನಿರಂತರವಾಗಿ ತುತ್ತಾಗುವ ಸದಾ ಬರದಿಂದ ಮಳೆ–ಬೆಳೆಯಿಲ್ಲದೆ ಬಡತನವಿದ್ದು, ಪಶುಪಾಲನೆ ಮತ್ತು ಕೂಲಿಯಿಂದ ಜೀವನ ನಡೆಸುತ್ತಿದ್ದು, ಬಡತನದಲ್ಲೇ ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದಾರೆ. ನಂತರ ಅವರಿಗೆ ಉದ್ಯೋಗವೂ ಇಲ್ಲದೇ ಹೊಲಗಳಲ್ಲಿ ಕೆಲಸವೂ ಮಾಡಲು ಆಗದೇ ಹಳ್ಳಿಗಳಲ್ಲಿ ನಿರುದ್ಯೋಗಿಗಳಾಗಿ ಸುತ್ತಾಡುತ್ತಿರುವವರಿಗೆ ಒಂದು ನೆಲೆ ಕಲ್ಪಿಸಬೇಕೆಂದು ಶಾಸಕರು ಕಳೆದ ವರ್ಷ ಆಯೋಜಿಸಿದ್ದ ಉದ್ಯೋಗಮೇಳ ಸಾವಿರಾರು ಮಂದಿಗೆ ಕಂಪನಿಗಳಲ್ಲಿ ಉದ್ಯೋಗಭಾಗ್ಯಕ್ಕೆ ನೆರವಾಗುವ ಮೂಲಕ ಇತರರಿಗೆ ಪ್ರೇರಣೆ ನೀಡಿದ್ದಾರೆ.

**8. ಹಳ್ಳಿಯ ಜನರಿಗೆ ಶಾಶ್ವತ ಸಿಹಿನೀರು**

ಫ್ಲೋರೈಡ್ ನೀರು ಕುಡಿದು ಜನರು ಹತ್ತು ಹಲವು ರೋಗಗಳಿಗೆ ತುತ್ತಾಗುತ್ತಿದ್ದರಿಂದ ಶಾಸಕರು ಶುದ್ಧ ನೀರಿನ ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಈ ಕ್ಷೇತ್ರದ ವ್ಯಾಪ್ತಿಯ ಹಳ್ಳಿಗಳಲ್ಲಿ 200ಕ್ಕೂ ಹೆಚ್ಚು ಶುದ್ದ ನೀರಿನ ಘಟಕಗಳು ಮತ್ತು ಚಳ್ಳಕೆರೆ ನಗರದಲ್ಲಿ ವಾರ್ಡ್‌ಗೊಂದು ಶುದ್ಧ ಕುಡಿವ ನೀರಿನ ಘಟಕ ತೆರೆಯುವ ಮೂಲಕ ಶುದ್ಧ ನೀರು ಕುಡಿಯುವಂತೆ ಮಾಡಿದ್ದಾರೆ. ಚಳ್ಳಕೆರೆ, ಮೊಳಕಾಲ್ಮೂರು, ಪಾವಗಡ ಈ ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಅಂತರ್ಜಲ ಪಾತಾಳ ಸೇರಿದ್ದರಿಂದ ನೂರಾರು ಅಡಿ ಆಳಕ್ಕೆ ಬೋರು ಕೊರೆದು ಜನರಿಗೆ ನೀರು ಕೊಡುತ್ತಿರುವ ಕಾರಣ ಫ್ಲೋರೈಡ್ ನೀರೇ ಜನರಿಗೆ ಜೀವಜಲವಾಗಿದೆ. ಈ ನೀರು ಕುಡಿದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಈ ಸಮಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರಾಜ್ಯದ ಎಲ್ಲ ಹಳ್ಳಿಗಳಲ್ಲಿ ಶುದ್ಧ ನೀರಿನ ಘಟಕ ನಿರ್ಮಾಣ ಮಾಡಲು ಮುಂದಾಗಿದ್ದರಿಂದ ಶಾಸಕರು ಈ ಬಗ್ಗೆ ವಿಶೇಷ ಕಾಳಜಿ ವಹಿಸಿ ಪ್ರತಿಯೊಂದು ಹಳ್ಳಿಯಲ್ಲೂ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಕಂಕಣ ತೊಟ್ಟು ಕೋಟಿಗಟ್ಟಲೆ ಹಣ ತಂದು ಶುದ್ಧ ನೀರಿನ ಘಟಕ ನಿರ್ಮಿಸಿದ್ದರಿಂದ ಕ್ಷೇತ್ರದ ಜನ ಶುದ್ಧ ನೀರು ಕುಡಿಯುವ ನೀರಿನ ಭಾಗ್ಯ ಪಡೆದಿದ್ದಾರೆ. ಪದೇ ಪದೇ ಈ ಭಾಗದಲ್ಲಿ ಭೀಕರ ಬರಗಾಲ ಶವರಿಸುತ್ತಿರುವ ಹಿನ್ನೆಲೆಯಲ್ಲಿ ಕೊಳವೆಬಾವಿ ಕೊರೆಸಿದರೂ ಜೀವಜಲದ ಬದಲು ಮಣ್ಣು ಕಕ್ಕುತ್ತಿರುವ ಕೊಳವೆ ಬಾವಿಗಳಿವೆ. ಅದೃಷ್ಟಕ್ಕೆ ಸಿಕ್ಕ ನೀರಿನಲ್ಲಿ ಫ್ಲೋರೈಡ್ ಇದ್ದುದರಿಂದ ಶುದ್ಧ ನೀರಿನ ಘಟಕಗಳಿಗೆ ಮತ್ತಷ್ಟು ಬಲ ತುಂಬಲು 2,250 ಕೋಟಿ ರೂ. ವೆಚ್ಚದಲ್ಲಿ ತುಂಗಭದ್ರಾ ಡ್ಯಾಂ ಹಿನ್ನೀರು ತರುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ. ಇದರಿಂದ ಶಾಶ್ವತವಾಗಿ ಹಳ್ಳಿಯ ಜನರಿಗೆ ಸಿಹಿನೀರು ಸಿಗುವುದು.

**9. ವೇದಾವತಿಗೆ 3 ಬ್ಯಾರೇಜ್**

ಚಿತ್ರದುರ್ಗ ಜಿಲ್ಲೆಯ ಜೀವನದಿ ವೇದಾವತಿಗೆ 39 ಕೋಟಿ ರೂ. ವೆಚ್ಚದಲ್ಲಿ 3 ಕಡೆ ಬ್ಯಾರೇಜ್ ನಿರ್ಮಾಣಕ್ಕೆ ಶಾಸಕರು ಮಂಜೂರಾತಿ ಮಾಡಿಸಿದ್ದು, ಪರಶುರಾಂಪುರ, ಬೊಂಬೆರಹಳ್ಳಿ, ಚೌಳೂರು ಬಳಿಯ ನದಿಯಲ್ಲಿ ಹೊಸದಾಗಿ ಬ್ಯಾರೇಜ್ ನಿರ್ಮಿಸಲಾಗುತ್ತಿದೆ. ಈ ವರ್ಷ ಸಾಕಷ್ಟು ಮಳೆ ಬಂದ ಹಿನ್ನೆಲೆಯಲ್ಲಿ ವೇದಾವತಿ ನದಿ ಮೈದುಂಬಿ ಹರಿದಿದ್ದಲ್ಲದೆ ತಾಲೂಕಿನ ವ್ಯಾಪ್ತಿಯಲ್ಲಿನ ನಾಗಗೊಂಡನಹಳ್ಳಿ–ವೃಂದವನಹಳ್ಳಿ ಸಮೀಪದ ಎರಡು ಬ್ಯಾರೇಜ್‌ಗಳು ಭರ್ತಿಯಾದವು. ಇದರ ಹೆಚ್ಚುವರಿ ನೀರು ಆಂಧ್ರದ ಬೋರನತಿಪ್ಪೆ ಡ್ಯಾಂ ಸೇರಿತ್ತು. ಈ ನೀರನ್ನು ತಡೆಯಲು ನದಿಗೆ ಅಡ್ಡಲಾಗಿ ಹೊಸದಾಗಿ 3 ಬ್ಯಾರೇಜ್ ಕಟ್ಟುವುದರಿಂದ ಬರ ಪ್ರದೇಶದ ರೈತರಿಗೆ ಅನುಕೂಲವಾಗುವುದೆಂದು ಶಾಸಕರು ಸಂಬಂಧಪಟ್ಟ ಸಚಿವರಿಗೆ ಈ ಬಗ್ಗೆ ಮನವರಿಕೆ ಮಾಡಿದ್ದರಿಂದ 39 ಕೋಟಿ ರೂ.ಗಳ 3 ಬ್ಯಾರೇಜ್ ಭಾಗ್ಯ ಸಿಕ್ಕಿದೆ. ಮುಂದಿನ ದಿನಗಳಲ್ಲಿ 5 ಬ್ಯಾರೇಜ್ ಲಭ್ಯವಾಗುವ ಹಿನ್ನೆಲೆಯಲ್ಲಿ ನದಿ ದಂಡೆಯ ಉದ್ದಕ್ಕೂ ಅಂತರ್ಜಲ ವೃದ್ಧಿಗಾಗಿ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ವೇದಾವತಿ ನದಿಗೆ 2.5 ಟಿಎಂಸಿ ನೀರನ್ನು ಹರಿಸುವ ಉದ್ದೇಶ ಹೊಂದಲಾಗಿದೆ. ಇದರಿಂದ ನದಿ ಪಾತ್ರದಲ್ಲಿನ ಕೃಷಿ ಚಟುವಟಿಕೆಗೆ, ಜನ, ಜಾನುವಾರು, ಪಕ್ಷಿಗಳಿಗೆ ಅನುಕೂಲವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಚಳ್ಳಕೆರೆ ತಾಲ್ಲೂಕಿನ 9 ಕೆರೆಗಳಿಗೆ ಮಾತ್ರ ನೀರುಣಿಸುವ ಯೋಜನೆ ರೂಪಿಸಲಾಗಿತ್ತು. ಶಾಸಕರ ಪ್ರಯತ್ನದಿಂದ 51 ಕೆರೆಗಳು ನೀರಿನ ಭಾಗ್ಯ ಕಾಣುತ್ತಿವೆ. ಬರಗಾಲದಿಂದ ತತ್ತರಿಸುತ್ತಿರುವ ಇಲ್ಲಿನ ಕೆರೆಗಳಿಗೆ ಭದ್ರಾ ನದಿಯ ನೀರು ಹರಿಯಲಿದೆ. ಕಾಮಗಾರಿ ನಿಧಾನಗತಿಯಲ್ಲಿದ್ದರೂ ಇಂದಲ್ಲ, ನಾಳೆ ಇಲ್ಲಿನ ಕೆರೆಗಳಿಗೆ ನೀರು ಹರಿಯುವ ವಿಶ್ವಾಸ ಮೂಡಿದೆ.

**10. ರಾಣೀಕೆರೆ ಫೀಡರ್ ಚಾನಲ್**

ರಾಣೀಕೆರೆ ಫೀಡರ್ ಚಾನಲ್ ದುರಸ್ತಿಯಿಲ್ಲದೆ ಅನೇಕ ವರ್ಷಗಳಿಂದ ಇದ್ದು ಇಲ್ಲವಾಗಿತ್ತು. ಶಾಸಕರು ಈ ಕೆರೆಗೆ ನೀರು ಹರಿಸಬೇಕೆಂದು ನಿರ್ಧರಿಸಿ 27 ಕೋಟಿ ರೂ. ವೆಚ್ಚದಲ್ಲಿ ಚಾನಲ್‌ಗೆ ಕಾಯಕಲ್ಪ ನೀಡಿದ ಫಲವಾಗಿ ಈ ವರ್ಷ ರಾಣೀಕೆರೆಗೆ ಮಳೆ ನೀರು ಹರಿಯಿತು.

**11. ಬರಗಾಲದಲ್ಲಿ ದನಕರುಗಳಿಗೆ ಕೊರತೆಯಾಗಲಿಲ್ಲ ಮೇವು**

ಮಳೆಯಿಲ್ಲದೆ ಸತತ ಬರದಿಂದ ಕಂಗೆಟ್ಟ ರೈತರ ಜಾನುವಾರಗಳಿಗೆ ಅತಿ ಹೆಚ್ಚಿನ 8 ಗೋಶಾಲೆಗಳನ್ನು ತೆರೆಸಿ ಸತತ 10 ತಿಂಗಳು ನಡೆಯುವಂತೆ ಮಾಡಿದರು. ಮೇವಿನ ಕೊರತೆ ಮತ್ತು ಮೇವು ಸರಬರಾಜು ಮಾಡಿದ ಗುತ್ತಿಗೆದಾರರಿಗೆ ಹಣ ನೀಡದೆ ಇದ್ದ ಗೋಶಾಲೆಗಳಲ್ಲಿ ಮೇವಿನ ಸಮಸ್ಯೆ ನೀಗಿಸಲು ಸರಕಾರದ ಮಟ್ಟದಲ್ಲಿ ಒತ್ತಡ ಹಾಕಿ ಅನುದಾನ ಬಿಡುಗಡೆಗೊಳಿಸಿದರು. ಗುತ್ತಿಗೆದಾರರ ಮನವೊಲಿಸಿ ಬೇಸಿಗೆಯಲ್ಲಿ ರೈತರಿಗೆ ಶಾಸಕರು ಆಶಾಕಿರಣವಾಗಿದ್ದಾರೆ.

ಜಿಲ್ಲೆಯಲ್ಲಿ ಅತಿ ದೊಡ್ಡ ಗೋಶಾಲೆಯನ್ನು ಶಾಸಕರು ಅತ್ಯಂತ ಸುಸಜ್ಜಿತವಾಗಿ ನಿರ್ವಹಿಸಿದರು. ದಾವಣಗೆರೆ, ಜಗಳೂರಿನ ಜಾನುವಾರುಗಳು ಸಹ ಇಲ್ಲಿ ನೆಲೆ ನಿಂತ ಕಾರಣ 15 ಸಾವಿರ ರಾಸುಗಳು ತುರುವನೂರು ಗೋಶಾಲೆಯಲ್ಲಿ ಆಶ್ರಯ ಪಡೆದಿದ್ದವು. ಪ್ರತಿ ನಿತ್ಯ 70 ಲೋಡ್‌ನಷ್ಟು ಮೇವು ಈ ಗೋಶಾಲೆ ಒಂದಕ್ಕೆ ರಾಸುಗಳಿಗೆ ವಿತರಣೆಯಾಗುತ್ತಿತ್ತು. ಪ್ರತಿ ವಾರಕ್ಕೊಮ್ಮೆ ಗೋಶಾಲೆಯನ್ನು ಖುದ್ದಾಗಿ ವೀಕ್ಷಿಸಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಮೂರು ಸಾವಿರಕ್ಕೂ ಹೆಚ್ಚು ರೈತರು ಗೋಶಾಲೆಯ ನಿರ್ವಹಣೆಗೆ ಶ್ರಮಿಸಿದ ಶಾಸಕರು ಹಾಗೂ ಜಿಲ್ಲಾಡಳಿತವನ್ನು ಬೃಹತ್ ಸಭೆಯಲ್ಲಿ ಸನ್ಮಾನಿಸಿದ್ದು ವಿಶೇಷವಾಗಿತ್ತು. ರೈತರು ಶಾಸಕರು, ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳನ್ನು ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿ ಸಂಭ್ರಮಿಸಿ ಅಭಿನಂದಿಸಿದ್ದರು.

**12. ಗುಂಡಿಗಳಿಗೆ ಮುಕ್ತಿ**

244 ಕೋಟಿಯಲ್ಲಿ ಎಲ್ಲಾ ಇಲಾಖೆಯಿಂದ ಪ್ರತಿಯೊಂದು ಹಳ್ಳಿಯ ಪ್ರಮುಖ ರಸ್ತೆಗಳ ಡಾಂಬರ್ ನಿರ್ಮಾಣ ಮಾಡಲಾಗಿದೆ. ಈಗ ಮಾಡಿರುವ ಸಿಸಿ ರಸ್ತೆಗಳನ್ನು ಬಿಟ್ಟು 50 ಕೋಟಿಯ ಸಿಸಿ ರಸ್ತೆಗೆ ಚಾಲನೆ ನೀಡಲಾಗಿದೆ. ತುರುವನೂರು ಗ್ರಾಮದಲ್ಲಿ ಎಲ್ಲ ರಸ್ತೆಗಳು ಹಾಳಾಗಿದ್ದವು. ಆದರೆ ಇದೀಗ ಗ್ರಾಮದಲ್ಲಿನ ಪ್ರತಿ ರಸ್ತೆಯು ಕಾಂಕ್ರೀಟ್ ರಸ್ತೆಯಾಗಿದೆ. ಹೀಗಾಗಿ ಗ್ರಾಮವು ಸುಂದರ ರಸ್ತೆಗಳಿಂದ ಕಂಗೊಳಿಸುತ್ತಿದೆ. ಸುಮಾರು 6 ಕೋಟಿ ವೆಚ್ಚದಲ್ಲಿ ಎಲ್ಲ ರಸ್ತೆಗಳು ಕಾಂಕ್ರೀಟ್ ರಸ್ತೆಗಳಾಗಿವೆ.

**13. ಮಹಿಳಾ ಸಬಲೀಕಣ**

ಮಹಿಳಾ ಸಬಲೀಕರಣದ ಸದುದ್ದೇಶದಿಂದ ತಾಲ್ಲೂಕಿನ ಸ್ತ್ರೀಶಕ್ತಿ ಮಹಿಳಾ ಸಂಘಗಳಿಗೆ ಸಹಾಯಧನ ಹಾಗೂ ಸಾಲ ಸೌಲಭ್ಯ, ಗುಡಿಸಿಲುಮುಕ್ತ ಯೋಜನೆಗೆ ಕ್ಷೇತ್ರದಲ್ಲಿ 10 ಸಾವಿರ ಮನೆಗಳನ್ನು ನಿರ್ಮಿಸಲಾಗಿದೆ. ಹಳ್ಳಿಗೊಂದು 10ರಿಂದ 15 ಲಕ್ಷ ವೆಚ್ಚದ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ. ಗೊಲ್ಲರಹಟ್ಟಿಗಳಿಗೆ ಸಮುದಾಯ ಭವನಗಳಿಂದ ಆಯಾ ಗ್ರಾಮದವರ ಸಭೆ, ಸಾಂಸ್ಕೃತಿಕ, ಶುಭ ಕಾರ್ಯಗಳಿಗೆ ಅನುಕೂಲವಾಗುತ್ತಿದೆ. 5 ಹಳ್ಳಿಗಳನ್ನು ಗ್ರಾಮವಿಕಾಸ ಯೋಜನೆಯಲ್ಲಿ ಆಯ್ಕೆ ಮಾಡಿ 8 ಕೋಟಿ ಕಾಮಗಾರಿ ಪೂರ್ಣಗೊಂಡಿದ್ದು, ಮತ್ತೆ 4 ಹಳ್ಳಿಗಳಿಗೆ 4 ಕೋಟಿ ಮಂಜೂರಾಗಿದೆ. ಎಲ್ಲ ಹಳ್ಳಿಗಳಿಗೂ ವಿದ್ಯುತ್ ಕಲ್ಪಿಸಲು 20 ಕೋಟಿ ರೂ. ಅನುದಾನದಿಂದ ನಿರಂತರ ಜ್ಯೋತಿ ಸೌಲಭ್ಯ, ಹಳ್ಳಿಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಯಾಗಿದೆ.

**14. ವಿದ್ಯಾರ್ಥಿಗಳು ಪೋಷಕರ ಜೊತೆ ಸಂವಾದ**

ತಾನು ತಾಂತ್ರಿಕ ಶಿಕ್ಷಣ ಪಡೆದರೆ ಸಾಲದು, ಕ್ಷೇತ್ರದ ಪ್ರತಿಯೊಬ್ಬ ವಿದ್ಯಾರ್ಥಿಯು ಉನ್ನತ ಶಿಕ್ಷಣ ಪಡೆಯಬೇಕೆಂಬುದು ಶಾಸಕ ಟಿ. ರಘುಮೂರ್ತಿ ಶಿಕ್ಷಣರಂಗಕ್ಕೆ ಜಿಲ್ಲೆಯಲ್ಲೆ ಅತಿ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಶಿಕ್ಷಣಕ್ಕಾಗಿ ಮೂಲ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಕ್ರೀಡೆ, ಸಾಂಸ್ಕೃತಿಕ, ಇತರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸಾಕಷ್ಟು ಪ್ರೋತ್ಸಾಹ ಧನಸಹಾಯವನ್ನು ಮಾಡಿದ್ದಾರೆ. ಸರಕಾರಿ ಶಾಲೆಗಳಲ್ಲಿ ಫಲಿತಾಂಶ ಹೆಚ್ಚಿಸಲು ಕ್ಷೇತ್ರದ ಎಲ್ಲ ಪ್ರೌಢಶಾಲೆಗಳ ಮಕ್ಕಳಿಗೆ ವಿಶೇಷ ಸಂಚಿಕೆಗಳನ್ನು ಕೊಡಿಸಿದ್ದಾರೆ. ಸರಕಾರಿ ಪಿಯುಸಿಯಲ್ಲಿ ಫಲಿತಾಂಶ ಹೆಚ್ಚಿಸಲು ರಜಾ ದಿನಗಳಲ್ಲಿ ಇಡೀ ತಾಲ್ಲೂಕಿನ ಕಾಲೇಜುಗಳ ಎಸ್ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳ ಸಮಯದಲ್ಲಿ ಹಳ್ಳಿಯಿಂದ ಬಂದ ನೂರಾರು ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಊಟ ಕೊಡಿಸಿದ್ದಾರೆ. ಕಾಲೇಜಿಗೆ ಗೈರು ಹಾಜರಾಗುತ್ತಿದ್ದ ಮಕ್ಕಳು ಮತ್ತು ಪೋಷಕರನ್ನು ಕರೆಸಿ ಬುದ್ಧಿವಾದ ಹೇಳಲು ತಾವೇ ಶಿಕ್ಷಕರಾಗಿ ಪಾಠ ಮಾಡಿದ್ದಲ್ಲದೆ, ಉಪನ್ಯಾಸಕರು ಯಾವ ರೀತಿ ಪಾಠ ಮಾಡುವರೆಂದು ಆಂಗ್ಲ ಮತ್ತು ಸೈನ್ಸ್ ತರಗತಿಗಳಲ್ಲಿ ಕುಳಿತು ಪಾಠವನ್ನು ಕೇಳುವ ಮೂಲಕ ಶಿಕ್ಷಣದ ಮೇಲೆ ತಮಗಿರುವ ಅಪಾರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ.

## 15. ಶಿಥಿಲ ಕಟ್ಟಡಗಳ ಜಾಗದಲ್ಲಿ ಹೈಟೆಕ್ ಕಟ್ಟಡ

ಶಾಸಕ ಟಿ. ರಘುಮೂರ್ತಿಯವರ ಮುಂದಾಲೋಚನೆಯಿಂದ ಬ್ರಿಟಿಷರ ಕಾಲದ ಕಟ್ಟಡಗಳ ಜಾಗದಲ್ಲಿ ಹೊಸ ಕಟ್ಟಡಗಳು ತಲೆ ಎತ್ತುತ್ತಿವೆ. ಹಳೇ ತಾಲ್ಲೂಕು ಕಛೇರಿಗೆ ಬದಲಾಗಿ ಬ್ರಿಟಿಷರ ಕಾಲದಲ್ಲಿ ಕಟ್ಟಿದ ಹಳೆ ಕಟ್ಟಡ ತೆರವುಗೊಳಿಸಿ 9 ಕೋಟಿಯಲ್ಲಿ ಮಿನಿವಿಧಾನಸೌಧ ನಿರ್ಮಿಸಲಾಗಿದೆ. ಲೋಕೋಪಯೋಗಿ ಕಛೇರಿ ಸ್ವಾತಂತ್ರ್ಯ ಪೂರ್ವದ್ದಾಗಿದ್ದು, 1.20 ಕೋಟಿಯಲ್ಲಿ ಹೊಸ ಕಛೇರಿ ಕಟ್ಟಿಸಲಾಗಿದೆ. ಈ ಹಿಂದೆ ಪಾವಗಡ ರಸ್ತೆಯಲ್ಲಿದ್ದ ಪುರಸಭೆ ಕಛೇರಿಯನ್ನು ಹಿಂದಿನ ಟೌನ್ ಹಾಲ್, ನಂತರ ಸರಕಾರಿ ಕಾಲೇಜು ನಡೆಯುತ್ತಿದ್ದ ಕಟ್ಟಡಕ್ಕೆ ಶಿಫ್ಟ್ ಆಯಿತು. ನಂತರ ಪುರಸಭೆಯಿಂದ ನಗರಸಭೆಯಾಗಿ ಬಡ್ತಿ ಪಡೆಯಿತು. ಹೀಗಾಗಿ 5 ಕೋಟಿಯಲ್ಲಿ ಹೊಸ ಕಛೇರಿ, ತಾಲ್ಲೂಕು ಪಂಚಾಯಿತಿಯಲ್ಲಿ ಸಾಮಾನ್ಯ ಸಭೆ, ಕೆಲವೊಂದು ಕಛೇರಿಗಾಗಿ 1.10 ಕೋಟಿಯಲ್ಲಿ ಹೊಸ ಕಛೇರಿ, ಹಳೆ ಲ್ಯಾಂಡ್ ಆರ್ಮಿಗೆ 1 ಕೋಟಿಗೂ ಅಧಿಕ ವೆಚ್ಚದಲ್ಲಿ ಉಪನಿರ್ದೇಶಕ ಹೊಸ ಕಛೇರಿ ಕಟ್ಟಿಸಲಾಗಿದೆ. 2 ವರ್ಷಗಳಿಂದ ಕೃಷಿ ಉಪನಿರ್ದೇಶಕ ಕಛೇರಿ ಪ್ರಾರಂಭವಾಗಿದ್ದು, ಇದಕ್ಕಾಗಿ 1.32 ಕೋಟಿಯಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಚಳ್ಳಕೆರೆಯ ಕುದಾಪುರ ಮತ್ತು ದೊಡ್ಡಉಳ್ಳಾರ್ತಿ ಕಾವಲುಗಳಲ್ಲಿ ಐಐಎಸ್ಸಿ, ಡಿಆರ್‌ಡಿಒ, ಬಾರ್ಕ್, ಇಸ್ರೋದಂತಹ ವೈಜ್ಞಾನಿಕ ಸಂಸ್ಥೆಗಳು ನೆಲೆ ನಿಲ್ಲುತ್ತಿರುವುದರಿಂದ ದೇಶದ ನಾನಾ ಕಡೆಯಿಂದ ಗಣ್ಯರು, ವಿಜ್ಞಾನಿಗಳು, ಪ್ರವಾಸಿಗರು ಬಂದು ಹೋಗುವ ಸ್ಥಳವಾಗುತ್ತಿರುವುದರಿಂದ ಹಳೆ ಪ್ರವಾಸಿ ಮಂದಿರ ಬಳಿ 3 ಕೋಟಿ ವೆಚ್ಚದಲ್ಲಿ ಸುಸಜ್ಜಿತವಾದ ಪ್ರವಾಸಿ ಮಂದಿರ ಕಟ್ಟಲಾಗಿದೆ.

## 16. ತಾಯಿ, ಮಗುವಿನ ಪ್ರತ್ಯೇಕ ಆಸ್ಪತ್ರೆ

ಚಿತ್ರದುರ್ಗ ಮತ್ತು ಚಳ್ಳಕೆರೆಯಲ್ಲಿ ಹೊಸದಾಗಿ ತಾಯಿ ಮತ್ತು ಮಗುವಿಗಾಗಿಯೇ ಪ್ರತ್ಯೇಕ ಆಸ್ಪತ್ರೆಯನ್ನು ಸರಕಾರ ತೆರೆಯುತ್ತಿದ್ದು, ಚಳ್ಳಕೆರೆಯಲ್ಲಿ ಶೀಘ್ರವೇ ಕಾರ್ಯಾರಂಭ ಮಾಡುವ ಹಂತದಲ್ಲಿದೆ. 6.20 ಕೋಟಿ ವೆಚ್ಚದಲ್ಲಿ 300 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಕಟ್ಟಡ ಪೂರ್ಣಗೊಳ್ಳುವ ಹಂತಕ್ಕೆ ಬರುತ್ತಿದೆ. ಈ ಆಸ್ಪತ್ರೆಯ ನಿರ್ಮಾಣದ ಉದ್ದೇಶ ತಾಯಿ ಮತ್ತು ಮಗುವಿನ ಮರಣ ತಪ್ಪಿಸುವುದಾಗಿದೆ. ಗರ್ಭಿಣಿಯಿಂದ ಹಿಡಿದು ಬಾಣಂತಿಯವರೆಗೆ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದು. ಹೆರಿಗೆಗಾಗಿ ಮುಂದಿನ ದಿನಗಳಲ್ಲಿ ಬಡವರು ಚಿತ್ರದುರ್ಗಕ್ಕೆ ಹೋಗುವುದು ತಪ್ಪುವುದು. ಇಲ್ಲಿಯೇ ಶಸ್ತ್ರಚಿಕಿತ್ಸೆ ನಡೆಸಿ ಹೆರಿಗೆ ಮಾಡಿಸಲಾಗುತ್ತದೆ. ತಾಯಿ ಮತ್ತು ಮಗುವಿನ ಆರೋಗ್ಯ ತಪಾಸಣೆಗಾಗಿ ಸ್ತ್ರೀರೋಗತಜ್ಞ, ಮಕ್ಕಳ ವೈದ್ಯ, ಅರವಳಿಕೆ ತಜ್ಞ ಹಾಗೂ ಹೃದಯರೋಗ ತಜ್ಞರನ್ನು ಈ ಆಸ್ಪತ್ರೆಗೆ ನಿಯೋಜಿಸಲಾಗಿದೆ. ಹುಟ್ಟಿದ ಮಗುವಿನ ಆರೋಗ್ಯದಲ್ಲಿ ಸಮಸ್ಯೆಯಿದ್ದಲ್ಲಿ ತೀವ್ರ ನಿಗಾ

ಘಟಕದಲ್ಲಿಟ್ಟು ಚಿಕಿತ್ಸೆ ನಿಡುವ ಸೌಲಭ್ಯ ಒದಗಿಸಲಾಗುತ್ತಿದೆ. ಮಳೆ ಬೆಳೆಯಿಲ್ಲದೆ ಈ ಭಾಗದಲ್ಲಿ ಬಡತನವಿರುವ ಕಾರಣ ಬಹುತೇಕರು ಸರಕಾರಿ ಆಸ್ಪತ್ರೆಯನ್ನೇ ಆಶ್ರಯಿಸುತ್ತಿದ್ದಾರೆ. ಚಳ್ಳಕೆರೆ ಸರಕಾರಿ ಆಸ್ಪತ್ರೆಗೆ ನಿತ್ಯ ನೂರಾರು ರೋಗಿಗಳು ಬರುತ್ತಾರೆ. ಹೆರಿಗೆ ಸಂದರ್ಭದಲ್ಲಿ ಅನೇಕ ಕಾರಣಗಳಿಂದ ಚಿತ್ರದುರ್ಗ ಇಲ್ಲವೇ ಖಾಸಗಿ ಆಸ್ಪತ್ರೆಗಳ ಮೊರೆ ಹೋಗಬೇಕಾಗುತ್ತದೆ. ಸರಕಾರಿ ಆಸ್ಪತ್ರೆ ಹಿಂಭಾಗದಲ್ಲಿ ಸುಸಜ್ಜಿತವಾದ ಎರಡು ಅಂತಸ್ತಿನ ಕಟ್ಟಡ ನಿರ್ಮಾಣವಾಗಿದೆ.

**17. ಮಿನಿ ವಿಧಾನ ಸೌಧ**

ಸೋರುತ್ತಿರುವ ಹಳೆಯ ಕಟ್ಟಡ ಕಿರಿದಾದ ಜಾಗ, ಈಗಲೋ ಆಗಲೋ ಬಿದ್ದು ಹೋಗುವುದಕ್ಕೆ ಸಿದ್ಧವಾಗಿರುವ ಮೇಲ್ಚಾವಣಿ ಇವೆಲ್ಲವುಗಳಿಗಿಂತ ಹೆಚ್ಚಾಗಿ ಈ ಕಟ್ಟಡ ನಿರ್ಮಾಣಗೊಂಡಿದ್ದು 1896ರಲ್ಲಿ, ಅಂದ ಹಾಗೆ ಈ ಕಟ್ಟಡವೇ ಚಳ್ಳಕೆರೆ ತಾಲೂಕು ಕಛೇರಿ. ಈಗಾಗಲೇ ಚಳ್ಳಕೆರೆಯಲ್ಲಿ ಹೊಸ ವಿಭಾಗಿಯ ಕಛೇರಿ ಆರಂಭಕ್ಕೆ ಸರಕಾರ ಒಪ್ಪಿಗೆ ನೀಡಿದೆ. ಹೀಗಾಗಿ ಹಳೆಯ ಕಟ್ಟಡದ ಜಾಗದಲ್ಲಿ ಬೃಹತ್ ಮಿನಿ ವಿಧಾನಸೌಧ ನಿರ್ಮಾಣವಾಗುತ್ತಿದೆ. ಶಾಶಕ ಟಿ. ರಘುಮೂರ್ತಿಯವರ ದೂರದೃಷ್ಟಿಯ ಫಲವಾಗಿ ನೂತನ ಮಿನಿ ವಿಧಾನಸೌಧ 9 ಕೋಟಿ ವೆಚ್ಚದಲ್ಲಿ ತಲೆ ಎತ್ತಿದೆ. ಸರಕಾರ ಹೊಸ ತಾಲೂಕು ಕಂದಾಯ ಉಪವಿಭಾಗ, ಕೃಷಿ ಉಪನಿರ್ದೇಶಕ ಕಛೇರಿಗಳನ್ನು ಹೊಸದಾಗಿ ಘೋಷಣೆ ಮಾಡಿತು. ಆದರೆ ಅಸ್ತಿತ್ವಕ್ಕೆ ಬಂದು ಮೂರು ವರ್ಷ ಕಳೆದರೂ ಕಟ್ಟಡವಿಲ್ಲದೆ ಆಡಳಿತ ನಡೆಸಲು ತೀವ್ರ ಸಮಸ್ಯೆಯಾಗುವುದನ್ನು ಮನಗಂಡ ಶಾಸಕರು ಕಂದಾಯ ಉಪವಿಭಾಗ ಘೋಷಣೆ ಮಾಡುವ ಮುನ್ನವೇ ಹೈಟೆಕ್ ಆದ ಮಿನಿವಿಧಾನ ಸೌಧ ಕಟ್ಟಿಸುತ್ತಿರುವುದು ದೂರದೃಷ್ಟಿಗೆ ಸಾಕ್ಷಿಯಾಗಿದೆ ಎಂದು ಹೇಳಬಹುದು.

ಸರ್ಕಾರ ರಾಜ್ಯದಲ್ಲಿ ಹೊಸದಾಗಿ 11 ಕಂದಾಯ ಉಪವಿಭಾಗ ಕಛೇರಿಗಳನ್ನು ಪ್ರಾರಂಭ ಮಾಡುವ ಘೋಷಣೆಯಲ್ಲಿ ಚಳ್ಳಕೆರೆಯು ಒಂದಾಗಿದ್ದು, ಬಹು ವರ್ಷಗಳ ಬೇಡಿಕೆಯೂ ಆಗಿತ್ತು. ಇದರಿಂದ ರೈತರ ಅನೇಕ ಸಮಸ್ಯೆಗಳಿಗೆ ಚಿತ್ರದುರ್ಗಕ್ಕೆ ಹೋಗುವುದು ತಪ್ಪುವುದಲ್ಲದೆ ಹಣ ಮತ್ತು ಸಮಯ ಎರಡೂ ಉಳಿಯುವುದು.

ಕಂದಾಯ ಉಪವಿಭಾಗದಿಂದ ಹಕ್ಕು ಬದಲಾವಣೆ, ಪೋಡಿದುರಸ್ತಿ, ಪಹಣಿ ತಿದ್ದುಪಡಿ, ಭೂ ಸ್ವಾಧೀನ, ಭೂಸುಧಾರಣೆ ಕಾಯ್ದೆ ನ್ಯಾಯಾಲಯ ಪ್ರಕರಣಗಳು, ಕಂದಾಯ ಅಪೀಲು, ಭೂಪರಿವರ್ತನೆ, ಚುನಾವಣೆಗಳು ಹಾಗೂ ಆಡಳಿತಾತ್ಮಕ

ಮಂಜೂರಾತಿಗಳು ಹೀಗೆ ಹತ್ತು ಹಲವು ಪ್ರಯೋಜನಗಳು ಚಳ್ಳಕೆರೆಯಲ್ಲಿ ದೊರೆಯಲಿವೆ. 1896ರ ಆಂಗ್ಲರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಿದ ಹಳೆ ತಾಲ್ಲೂಕು ಕಛೇರಿಯನ್ನು ನಿರ್ಮಿಸಲಾಗಿತ್ತು. ಅದರ ಪಕ್ಕದಲ್ಲಿ ಮತ್ತೊಂದು ಹೊಸ ಕಟ್ಟಡ ನಿರ್ಮಿಸಲಾಗಿದೆ. 16 ವರ್ಷಗಳ ಹೊಸ ಕಟ್ಟಡದ ಮೇಲ್ಭಾಗದಲ್ಲಿ ಮತ್ತೊಂದು ಅಂತಸ್ತನ್ನು ನಿರ್ಮಿಸುವ ಯೋಚನೆಯಿತ್ತು. ಆದರೆ ಈಗಿರುವ ಕಟ್ಟಡ ಅಷ್ಟೇನೂ ಉತ್ತಮವಾಗಿಲ್ಲ. ಹೀಗಾಗಿ ಹೊಸ ಮಿನಿ ವಿಧಾನಸೌಧ ನಿರ್ಮಿಸುವ ತೀರ್ಮಾನಕ್ಕೆ ಶಾಸಕರು ಬಂದಿದ್ದಾರೆ.

ತಾಲ್ಲೂಕಿಗೆ ಸಂಬಂಧಪಟ್ಟ ಅನೇಕ ಕಛೇರಿಗಳು ನಗರದ ಒಂದೊಂದು ದಿಕ್ಕಿನಲ್ಲಿದ್ದು, ರೈತರಿಗೆ, ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಕಛೇರಿಗಳನ್ನು ಹುಡುಕುವುದು ಕಷ್ಟವಾಗಿದೆ. ಸಮಾಜ ಕಲ್ಯಾಣ, ಎಸ್‌ಟಿ ಕಲ್ಯಾಣಾಧಿಕಾರಿ ಕಛೇರಿ, ರೇಷ್ಮೆ, ಕಾರ್ಮಿಕ, ಬಿಸಿಎಂ, ಅಬಕಾರಿ, ಶಿಶು ಅಭಿವೃದ್ಧಿ, ಮೀನುಗಾರಿಕೆ ಇಲಾಖೆಗಳು ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸುತ್ತಿವೆ. ಸಾರ್ವಜನಿಕರು ಅಧಿಕಾರಿಗಳನ್ನು ಸಂಪರ್ಕಿಸಲು ಪರದಾಡುವಂತಾಗಿದೆ. ಆದ್ದರಿಂದ ಹಳೇ ತಾಲೂಕು ಕಛೇರಿಯ ಕಟ್ಟಡವನ್ನು ದುರಸ್ತಿಗೊಳಿಸಬೇಕು. ನಂತರ ಬಾಡಿಗೆ ಕಟ್ಟಡದಲ್ಲಿರುವ ಕಛೇರಿಗಳನ್ನು ಇಲ್ಲಿಗೆ ಸ್ಥಳಾಂತರಿಸುವುದರಿಂದ ಸರಕಾರ ನೀಡುವ ಬಾಡಿಗೆ ಹಣ ಉಳಿಯುತ್ತದೆ. ಜತೆಗೆ ಒಂದೇ ಸೂರಿನಡಿ ಸೇವೆಗಳು ದೊರೆಯಲಿವೆ ಎಂಬುದು ಶಾಸಕರ ಅಭಿಪ್ರಾಯವಾಗಿದೆ.

**18. ಮೂರು ತಾಲೂಕುಗಳಿಗೆ ಕೇಂದ್ರ**

ಹೊಸ ಕಂದಾಯ ವಿಭಾಗ ಅಸ್ತಿತ್ವಕ್ಕೆ ಬಂದ ನಂತರ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು ತಾಲೂಕುಗಳಿಂದ 3,70,133 ಹೆಕ್ಟೇರ್ ಪ್ರದೇಶ ಇದಕ್ಕೆ ಒಳಪಡುವುದು. 2011ರ ಜನಗಣತಿ ಪ್ರಕಾರ 7,93,335 ಲಕ್ಷ ಜನಸಂಖ್ಯೆ ಹೊಂದಿದೆ. ಮೊಳಕಾಲ್ಮೂರು ಮತ್ತು ಹಿರಿಯೂರು ಮಧ್ಯವಿರುವ ಚಳ್ಳಕೆರೆಯನ್ನು ಕಂದಾಯ ಉಪವಿಭಾಗ ತೆರೆಯಲು ಸೂಕ್ತವಾಗಿರುವುದಲ್ಲದೆ ಭೌಗೋಳಿಕ ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ಎರಡನೇ ದೊಡ್ಡ ತಾಲೂಕು ಆಗಿದೆ. ಎಸಿ ಕಛೇರಿ ಆರಂಭವಾಗುವುದರಿಂದ ಆಂಧ್ರ ಗಡಿಯ ಮೊಳಕಾಲ್ಮೂರಿನ ಭಾಗದವರು ಚಿತ್ರದುರ್ಗಕ್ಕೆ ಹೋಗಲು 115 ಕಿ.ಮೀ. ದೂರದ ಪ್ರಯಾಣಕ್ಕೆ ಬ್ರೇಕ್ ಬೀಳುವುದು. ಚಳ್ಳಕೆರೆಯಲ್ಲಿ ಕೆಲ ಮುಖ್ಯ ಕಛೇರಿಗಳು ಆರಂಭವಾಗಿರುವುದು ಆ ಭಾಗದ ರೈತರಿಗೆ ತುಂಬ ಅನುಕೂಲವಾಗುವುದು.

| ಚಳ್ಳಕೆರೆ ಕಂದಾಯ ಉಪವಿಭಾಗ | | |
|---|---|---|
| ತಾಲೂಕು | ಭೌಗೋಳಿಕ ವಿಸ್ತೀರ್ಣ(ಹೆ) | ಜನಸಂಖ್ಯೆ(ಲ) |
| ಚಳ್ಳಕೆರೆ | 1,94,380 | 3,696,267 |
| ಹಿರಿಯೂರು | 1,02,027 | 2,86,494 |
| ಮೊಳಕಾಲ್ಮೂರು | 73,726 | 1,40,574 |

**19. 10 ಎಕರೆ ಪ್ರದೇಶದಲ್ಲಿ ತಲೆ ಎತ್ತಲಿದೆ ಕ್ರೀಡಾಂಗಣ**

ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಚಳ್ಳಕೆರೆ ನಗರದಲ್ಲಿ 10 ಎಕರೆ ಪ್ರದೇಶದಲ್ಲಿ 5 ಕೋಟಿ ರೂ.ಗಳ ವೆಚ್ಚದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲು ಶಾಸಕ ಟಿ. ರಘುಮೂರ್ತಿ ಮುಂದಾಗಿದ್ದಾರೆ. ಉತ್ತಮ ಕ್ರೀಡಾಪಟುಗಳು ತಾಲೂಕು, ಜಿಲ್ಲೆಯನ್ನು ಪ್ರತಿನಿಧಿಸಬೇಕು ಎಂದು ಬಾಷಣ ಮಾಡಿದರೆ ಸಾಲದು ಇದಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ಕ್ರೀಡಾಪಟುಗಳಿಗೆ ಒದಗಿಸಬೇಕು ಎಂಬುದು ಶಾಸಕರ ನೈಜ ಕಾಳಜಿಯಾಗಿದೆ. ಈ ನಿಟ್ಟಿನಲ್ಲಿ ಶಾಸಕರು ಕಾರ್ಯಪ್ರವೃತ್ತರಾಗಿದ್ದಾರೆ. 5 ಕೋಟಿ ವೆಚ್ಚದ ಕ್ರೀಡಾಂಗಣಕ್ಕೆ ಈಗಾಗಲೇ ಸರಕಾರ 50 ಲಕ್ಷ ರೂ. ಬಿಡುಗಡೆ ಮಾಡಿದೆ. ನಗರದ ಸೋಮಗುದ್ದು ರಸ್ತೆಯ ನ್ಯಾಯಾಲಯ ಮತ್ತು ಸ್ಮಶಾನಗಳ ಮಧ್ಯದಲ್ಲಿ ಕ್ರೀಡಾಂಗಣಕ್ಕೆ ಜಾಗ ನಿಗದಿಪಡಿಸಲಾಗಿತ್ತು. ಅದು ಕ್ರೀಡೆಗೆ ಸೂಕ್ತವಾದ ಸ್ಥಳವಾಗಿಲ್ಲ ಮತ್ತು ಸಣ್ಣದಾಗಿರುವ ಕಾರಣ ಪಾಳು ಬಿದ್ದಿದೆ. ದಶಕದಿಂದ ಚಿತ್ರದುರ್ಗ ರಸ್ತೆಯ ಸರಕಾರಿ ಪದವಿ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರಕ್ಕೆ ಒಳಪಡುವ ಜಾಗದಲ್ಲಿ ಚಿಕ್ಕ ಪ್ರಮಾಣದ ಕ್ರೀಡಾಂಗಣವಿದೆ. ಇದು ಕ್ರೀಡೆಗಿಂತ ಹೆಚ್ಚಾಗಿ ವಾಯುವಿಹಾರಿಗಳಿಗಾಗಿ ಬಳಕೆಯಾಗುತ್ತಿದೆ. ಹೀಗಾಗಿ ಕ್ರೀಡಾಪಟುಗಳಿಗಾಗಿಯೇ ಪ್ರತ್ಯೇಕ ನಿರ್ಮಾಣಕ್ಕೆ ಶಾಸಕರು ನಿರ್ಧರಿಸಿದ್ದಾರೆ. ಹೊಸ ಮಾದರಿಯಲ್ಲಿ ಕ್ರೀಡಾಂಗಣ ನಿರ್ಮಿಸಲು ರೂಪಿಸಿರುವ ನೀಲನಕ್ಷೆಯಲ್ಲಿ ಆಡಳಿತ ಕಛೇರಿ, ಕಟ್ಟಡದ ಮೊದಲ ಭಾಗದಲ್ಲಿ ಪ್ರವೇಶ ಮಾರ್ಗ, ಸ್ವಾಗತಗಾರರ ಕೊಠಡಿ, ಆಡಳಿತ ಕೊಠಡಿ, ಉಗ್ರಾಣ ಕೊಠಡಿ, ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕವಾಗಿ ತಲಾ ಎರಡು ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಶೇಂಗಾದಿಂದ ಒಂದಾನೊಂದು ಕಾಲದಲ್ಲಿ ಎಣ್ಣೆನಗರಿ, ಎರಡನೇ ಬಾಂಬೆ ಎಂಬ ಹೆಸರು ಗಳಿಸಿದ್ದ ಚಳ್ಳಕೆರೆ ಸೈನ್ಸ್ ಸಿಟಿಯಾಗಿ ವಿಶ್ವ ಭೂಪಟ ಸೇರಿಕೊಂಡಿದೆ. ಹೀಗಾಗಿ ದೇಶ, ವಿದೇಶಿ ವಿಜ್ಞಾನಿಗಳು, ಇತರ ಗಣ್ಯರು ಚಳ್ಳಕೆರೆಗೆ ಬಂದು ಹೋಗುವುದರಿಂದ ಮುಂದೆ ಕ್ರೀಡೆಗೂ ಅವಕಾಶ ಸಿಗುವುದರಿಂದ ಶಾಸಕರು ಕ್ರೀಡಾಂಗಣ ನಿರ್ಮಿಸಲು ಎಲ್ಲರ ಸಹಕಾರ ಬೇಕೆಂಬುದು ಕ್ರೀಡಾಪಟುಗಳ ನಿರೀಕ್ಷೆಯಾಗಿದೆ. ಇತ್ತ ಪೋಷಕರು ತಮ್ಮ ಮಕ್ಕಳ ಕನಸು ನನಸಾಗಲಿದೆ ಎಂದು ಸಾರ್ವಜನಿಕರು ಸಂತೋಷ ವ್ಯಕ್ತಪಡಿಸಿದ್ದಾರೆ.

**20. ಎಲ್ಲ ಸಮುದಾಯಗಳಿಗೂ ಭವನಗಳು**

ನಗರದಲ್ಲಿ 12 ಕೋಟಿ ವೆಚ್ಚದಲ್ಲಿ 8 ಸಮುದಾಯ ಭವನಗಳ ನಿರ್ಮಾಣ ಅಂತಿಮ ಹಂತದಲ್ಲಿದೆ. 3 ಕೋಟಿ ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ, 3.4 ಕೋಟಿ ವೆಚ್ಚದಲ್ಲಿ ಜಗಜೀವನರಾಂ ಭವನ, 2 ಕೋಟಿ ವೆಚ್ಚದಲ್ಲಿ ಕನಕಭವನ, 1 ಕೋಟಿ ವೆಚ್ಚದಲ್ಲಿ ಸೇವಾಲಾಲ್ ಭವನ, 62 ಲಕ್ಷ ರೂ. ವೆಚ್ಚದಲ್ಲಿ ಯಾತ್ರಿ ನಿವಾಸ್, ತಲಾ 25 ಲಕ್ಷ ವೆಚ್ಚದಲ್ಲಿ ಉಪ್ಪಾರ ಹಾಗೂ ಈಡಿಗ ಸಮುದಾಯ ಭವನಗಳು ನಿರ್ಮಾಣಗೊಳ್ಳುತ್ತಿವೆ.

ವಾಲ್ಮೀಕಿ, ಜಗಜೀವನರಾಂ, ಕನಕ, ಶ್ರೀಕೃಷ್ಣ ಸಮುದಾಯ ಭವನಗಳು ಖಾಸಗಿ ಕಲ್ಯಾಣ ಮಂಟಪಗಳಿಗಿಂತ ಹೈಟೆಕ್ ಮಾದರಿಯಲ್ಲಿ ನಿರ್ಮಾಣವಾಗುತ್ತಿವೆ. ಶ್ರೀ ಜಗಲೂರಜ್ಜ ಸ್ವಾಮಿ ದೇವಾಲಯ ಬಳಿ ವಿವಾಹಗಳು, ಹರಕೆ ಹೊತ್ತ ಭಕ್ತರು ಪರುವು ಇತರ ಕಾರ್ಯಗಳನ್ನು ನಡೆಸುತ್ತಾರೆ. ಈ ಹಿನ್ನೆಲೆಯಲ್ಲಿ ಶಾಸಕರು ಈ ಪುಣ್ಯಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವಾಗಿ ಮಾಡುವ ಉದ್ದೇಶದೊಂದಿಗೆ 3 ಕೋಟಿ ವೆಚ್ಚದಲ್ಲಿ ವಾಲ್ಮೀಕಿ ಭವನ ನಿರ್ಮಿಸಿದ್ದಾರೆ. ಜೊತೆಗೆ 62 ಲಕ್ಷ ರೂ. ವೆಚ್ಚದಲ್ಲಿ ಯಾತ್ರಿ ನಿವಾಸ್ ನಿರ್ಮಾಣಗೊಂಡಿದೆ. ನಗರದ ಚಿತ್ರದುರ್ಗ ಮುಖ್ಯರಸ್ತೆ ಮುಖವಾಗಿ 3.40 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಜಗಜೀವನರಾಂ ಭವನ ನಿತ್ಯ ರಸ್ತೆಯಲ್ಲಿ ಸಂಚರಿಸುವ ಜನರನ್ನು ತನ್ನತ್ತ ಸೆಳೆಯುತ್ತಿದೆ. ಇದರ ಸಮೀಪವೇ 2 ಕೋಟಿ ವೆಚ್ಚದಲ್ಲಿ ಕನಕ ಸಮುದಾಯ ಭವನ, ಪಕ್ಕದಲ್ಲೇ 1.5 ಕೋಟಿಯಲ್ಲಿ ಬೋವಿ ಸಮುದಾಯ ಭವನ, 2 ಕೋಟಿ ವೆಚ್ಚದಲ್ಲಿ ಶ್ರೀ ಕೃಷ್ಣ ಭವನ, ಪಕ್ಕದಲ್ಲಿ 1 ಕೋಟಿ ವೆಚ್ಚದಲ್ಲಿ ಸೇವಾಲಾಲ್ ಭವನ, 25 ಲಕ್ಷದಲ್ಲಿ ಈಡಿಗ ಸಮುದಾಯ ಭವನ, 25 ಲಕ್ಷದಲ್ಲಿ ಉಪ್ಪಾರ ಸಮುದಾಯ ಭವನಗಳನ್ನು ಕಟ್ಟಿಸುವ ಮೂಲಕ ಆಯಾ ಸಮುದಾಯದವರು ಸಭೆ, ಸಮಾರಂಭಗಳು, ಶುಭ ಕಾರ್ಯಗಳನ್ನು ನಡೆಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ.

**21. ಅಂತ್ಯಸಂಸ್ಕಾರಕ್ಕೆ 150 ಹಳ್ಳಿಗಳಲ್ಲಿ ಸ್ಮಶಾನ**

ರಾಜ್ಯ ಸರಕಾರ ಜನರಿಗೆ ಅನೇಕ ಭಾಗ್ಯಗಳನ್ನು ನೀಡುತ್ತಿದೆ. ಆದರೆ ಚಳ್ಳಕೆರೆ ಶಾಸಕರಾದ ಟಿ. ರಘುಮೂರ್ತಿಯವರು ಮರಣ ಹೊಂದಿದವರನ್ನು ನೆಮ್ಮದಿಯಿಂದ ಅಂತ್ಯಸಂಸ್ಕಾರ ಮಾಡಲೆಂದು 150 ಹಳ್ಳಿಗಳಿಗೆ ಸ್ಮಶಾನಭಾಗ್ಯ ಕಲ್ಪಿಸುವುದರೊಂದಿಗೆ ಎಲ್ಲಾ ಶಾಸಕರಿಗಿಂತ ಭಿನ್ನವಾಗಿದ್ದಾರೆ. ಹಳ್ಳಿಗಳ ಊರಾಚೆಯಿರುವ ಸ್ಮಶಾನಗಳೆಂದರೆ ನಿರ್ಲಕ್ಷ್ಯಕ್ಕೆ ಒಳಗಾದ ಸ್ಥಳಗಳಿದ್ದಂತೆ. ಇವುಗಳ ಅಭಿವೃದ್ಧಿಗೆ ಅಧಿಕಾರಿಗಳು ಮನಸ್ಸು ಮಾಡುವುದು ಕಷ್ಟ. ಇನ್ನು ರಾಜಕಾರಣಿಗಳಂತೂ ಬಲು ದೂರ. ಆದರೆ ಚಳ್ಳಕೆರೆ ಶಾಸಕರು ಇದಕ್ಕೆ ತದ್ವಿರುದ್ಧ.

ಅವುಗಳನ್ನು ಶಾಂತಿಧಾಮ–ಮುಕ್ತಿಧಾಮಗಳೆಂದು ವಿಶೇಷ ಆಸಕ್ತಿ ವಹಿಸಿ ಹಳ್ಳಿಗೊಂದು ಸ್ಮಶಾನ–ಆಶ್ರಯ ಬಡಾವಣೆಗಳ ನಿರ್ಮಾಣ ಮಾಡುವ ಇಂತಹ ಕೆಲಸಗಳು ಇತರರಿಗೆ ಮಾದರಿಯಾಗಿದೆ. ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಸ್ಮಶಾನಗಳನ್ನು ಅಭಿವೃದ್ಧಿಪಡಿಸಿದ ಒಬ್ಬ ಪಿಡಿಓಗೆ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ನೀಡುವುದಾಗಿ ತಾಲೂಕಿನ ಎಲ್ಲ ಪಿಡಿಓ ಗಳಿಗೆ ಪ್ರೇರಣೆ ನೀಡಿದ್ದಾರೆ.

**22. ಸ್ಮಶಾನದಲ್ಲೆ ಸಭೆ**

ಪ್ರತಿ ಗ್ರಾಮ, ಹಟ್ಟಿ, ತಾಂಡ ಹಾಗೂ ಜನವಸತಿ ಪ್ರದೇಶಗಳಲ್ಲಿ ವಾಸ ಮಾಡುವ ಜನಸಂಖ್ಯೆಗೆ ಅನುಗುಣವಾಗಿ ಸರಕಾರಿ ಭೂಮಿಯಲ್ಲಿ ಸ್ಮಶಾನ ನಿರ್ಮಾಣ ಮಾಡಲು ತೊಡಗಿದ್ದಾರೆ. ಸ್ಮಶಾನದಲ್ಲಿ ಬೆಳೆದ ಗಿಡಗಂಟಿಗಳನ್ನು ತೆಗೆದು, ರಸ್ತೆ ಮಾಡಿ, ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಲು ಶಾಸಕರು ಹಳ್ಳಿಗೊಂದು ಆಶ್ರಯ ಬಡಾವಣೆ ಮತ್ತು ಸ್ಮಶಾನಗಳಿರಬೇಕೆಂದು ಒತ್ತಡ ಮಾಡಿದ್ದಾರೆ. ಇದರ ಜೊತೆಗೆ ಅಭಿವೃದ್ಧಿಪಡಿಸಿದ ಸ್ಮಶಾನದಲ್ಲಿ ಒಮ್ಮೆ ಸಭೆಯನ್ನು ನಡೆಸೋಣ ಎಂಬ ಅವರ ದೃಢ ಮನಸ್ಸು ಮೆಚ್ಚುವಂತಾದ್ದಾಗಿದೆ. ಜನಸಂಖ್ಯೆ ಹೆಚ್ಚಿದಂತೆಲ್ಲ ಮೂಲ ಸೌಲಭ್ಯಗಳ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಅದೇ ರೀತಿ ಗ್ರಾಮೀಣ ಭಾಗದ ಸ್ಮಶಾನಗಳನ್ನು ಒತ್ತುವರಿ ಮಾಡಿಕೊಂಡು ಹುಲ್ಲು ಬಣವೆ, ನಿವೇಶನಗಳನ್ನು ಮಾಡಿಕೊಂಡು ಮನುಷ್ಯ ಸತ್ತ ಮೇಲೆ ಶವಸಂಸ್ಕಾರ ಮಾಡಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾಯಕಲ್ಪ ನೀಡಲು ನರೇಗಾ ಯೋಜನೆ ರುದ್ರಭೂಮಿಗಳ ಅಭಿವೃದ್ಧಿಗೆ ವರದಾನವಾಗಿದ್ದು, ಒಂದೊಂದು ಮುಕ್ತಿದಾಮಗಳನ್ನು ಮೂರು ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ. ಆಯಾ ಗ್ರಾಮ ಪಂಚಾಯಿತಿಯವರು ಅಭಿವೃದ್ಧಿಪಡಿಸಿದ ಸ್ಮಶಾನಗಳಿಗೆ ಶಾಸಕರ ಸಲಹೆಯಂತೆ ಮುಕ್ತಿಧಾಮ, ಮುಕ್ತಿವನ ಎಂದು ನಾಮಫಲಕ ಹಾಕಿದ್ದಾರೆ.

ಸ್ಮಶಾನಭಾಗ್ಯದ ಗ್ರಾಮಗಳು: ಪರಶುರಾಂಪುರ, ದೊಡ್ಡೇರಿ, ಬೊಮ್ಮಸಮುದ್ರ, ಭರಮಸಾಗರ, ಡಿ. ಉಪ್ಪಾರಹಟ್ಟಿ, ದೇವರಮರಿಕುಂಟೆ, ವಡೇರಹಳ್ಳಿ, ಯಲಗಟ್ಟೆ, ಬೆಳಗೆರೆ, ನಾರಾಯಣಪುರ, ಗೊರ್ಲತ್ತು, ಹುಲಿಕುಂಟೆ, ಬುಡ್ನಹಟ್ಟಿ, ನಗರಂಗೆರೆ, ಸಿದ್ಧಾಪುರ, ನನ್ನಿವಾಳ, ಗೊರ್ಲಕಟ್ಟೆ, ಸೋಮಗುದ್ದು, ಗೋಪನಹಳ್ಳಿ, ಚಿಕ್ಕೇನಹಳ್ಳಿ, ಕಮ್ಮತ್‌ಮರಿಕುಂಟೆ, ಚನ್ನಮ್ಮನಾಗತಿಹಳ್ಳಿ, ಹಾಲಿಗೊಂಡನಹಳ್ಳಿ, ಪುರ್ಲೇಹಳ್ಳಿ, ಚೌಲೂರು, ಸೂರನಹಳ್ಳಿ, ದೊಡ್ಡಚೆಲ್ಲೂರು, ದೊಡ್ಡಬೀರನಹಳ್ಳಿ, ಚಿಕ್ಕಚೆಲ್ಲೂರು, ಪಿ. ಮಹದೇವಪುರ, ಕ್ಯಾದಿಗುಂಟೆ, ಗೌರಿಪುರ, ನಾಗಪ್ಪನಹಳ್ಳಿ ಗೇಟ್ ಹೀಗೆ ಹಳ್ಳಿಗಳ ಸಂಖ್ಯೆ ಬೆಳೆಯುತ್ತಿದೆ. ಅನೇಕ ಬಡ

ಕುಟುಂಬಗಳಲ್ಲಿ ಬದುಕಿದ್ದಾಗ ಚಿಕ್ಕದೊಂದು ಸೂರು ಕಟ್ಟಿಕೊಳ್ಳಬೇಕೆಂಬ ಕನಸು ನನಸಾಗಿಲ್ಲ. ಸತ್ತಾಗಾದರೂ ನೆಮ್ಮದಿಯಿಂದ ಮಣ್ಣಾಗಲು ಸ್ಮಶಾನಗಳಿಲ್ಲದೆ ಆರು-ಮೂರಡಿ ಜಾಗವೂ ಇಲ್ಲದಂತಹ ಎಷ್ಟೋ ಹಳ್ಳಿಗಳ ನೋವಿನ ಕತೆ-ವ್ಯಥೆಗೆ ಮುಕ್ತಿ ಕಾಣಿಸಲು ಶಾಸಕರು ಸದಾ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಾ ಪ್ರೋತ್ಸಾಹ ತುಂಬಿದ್ದಾರೆ.

**23. ಸಂತ್ರಸ್ತ ಕುಟುಂಬಗಳಿಗೆ ಮನೆ**

ಕರೇಕಲ್ ಕೆರೆಯಂಗಳದಲ್ಲಿರುವ ಅಲೆಮಾರಿ ಮತ್ತು ಬೂದಿಹಳ್ಳಿ ಸಂತ್ರಸ್ತ ಕುಟುಂಬಗಳಿಗೆ 10 ಎಕರೆ ಜಾಗದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಲಿಡ್ಕರ್ ನಿಗಮದಿಂದ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಕೊಳಚೆ ನಿರ್ಮೂಲನಾ ಮಂಡಳಿಯಿಂದ 56 ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ನಗರ, ಮದಕರಿ ನಗರ, ಸೂಜಿಮಲ್ಲೇಶ್ವರನಗರದಲ್ಲಿ 1127 ಮನೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ನಗರೋತ್ಪನ್ನ ಯೋಜನೆಯಲ್ಲಿ 25 ಕೋಟಿ ರೂ. ಹಾಗೂ ವಿಶೇಷ ಅನುದಾನದಲ್ಲಿ 3 ಕೋಟಿ ರೂ. ಒಟ್ಟು 28 ಕೋಟಿಯಲ್ಲಿ ನಗರದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ.

**24. ವಾಣಿವಿಲಾಸ ಸಾಗರದಿಂದ ಬರದ ನಾಡಿಗೆ ಹರಿದಳು ಗಂಗೆ**

ವಾಣಿವಿಲಾಸ ಸಾಗರದಿಂದ ಚಳ್ಳಕೆರೆ ನಗರಕ್ಕೆ ಸಂಪೂರ್ಣ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ಜಾರಿಗೊಳಿಸುವಲ್ಲಿ ಶಾಸಕ ಟಿ. ರಘುಮೂರ್ತಿ ಯಶಸ್ವಿಯಾಗಿದ್ದಾರೆ. ಕೊಳವೆಬಾವಿ ನೀರನ್ನೇ ಆಶ್ರಯಿಸಿದ್ದರಿಂದ ಸತತ ಮಳೆಯಿಲ್ಲದೆ ಕುಡಿಯುವ ನೀರಿಗೆ ಪರದಾಡುವ ಪರಿಸ್ಥಿತಿ ಉಂಟಾಗಿತ್ತು. ಆದರೆ ಶಾಸಕರ ವಿಶೇಷ ಕಾಳಜಿಯಿಂದಾಗಿ ನಗರದ ನಾಗರಿಕರಿಗೆ ವಾಣಿವಿಲಾಸ ಸಾಗರದ ನೀರು ಪೂರೈಕೆ ಯೋಜನೆ ಜಾರಿಯಾಗಿದೆ. 173 ಕೋಟಿ ರೂ. ವೆಚ್ಚದ ಯೋಜನೆಯನ್ನು ನಗರ ನೀರು ಸರಬರಾಜು ಮಂಡಳಿಯವರು ಕಾಮಗಾರಿ ನಡೆಸಿದ್ದು, ವಿವಿ ಸಾಗರದಿಂದ ಪೈಪ್‌ಲೈನ್ ಮೂಲಕ ನೀರನ್ನು ತರಲಾಗಿದೆ. ವಿವಿ ಸಾಗರದಿಂದ ಚಳ್ಳಕೆರೆ ನಗರ, ಡಿಆರ್‌ಡಿಒ, ಐಐಎಸ್ಸಿ, ಬಾರ್ಕ್ ವೈಜ್ಞಾನಿಕ ಸಂಸ್ಥೆಗಳು ಹಾಗೂ ಮಾರ್ಗ ಮಧ್ಯದ 18 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆ ಯೋಜನೆಯ ಅನೇಕ ಅಡ್ಡಿ ಆತಂಕಗಳ ನಡುವೆ ಕಾಮಗಾರಿ ನಡೆಸಲಾಗಿತ್ತು. ಶಾಸಕರ ಶ್ರಮದಿಂದ ಕೊನೆಗೂ ಚಳ್ಳಕೆರೆಗೆ ನೀರು ಸರಬರಾಜು ಮೂಲಕ ಹಲವಾರು ವರ್ಷಗಳ ಕನಸು ನನಸಾಗಿದೆ.

ನಗರದ 60 ಸಾವಿರ ಜನಸಂಖ್ಯೆಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿತ್ತು. ಇಲ್ಲಿನ ಕೊಳವೆ ಬಾವಿಗಳೇ ಜನರ ದಾಹ ತೀರಿಸಬೇಕಿತ್ತು. ಹಾಗಾಗಿ ಮಳೆಯಿಲ್ಲದೆ ಕೊಳವೆಬಾವಿಗಳು ಮಣ್ಣು ಕಕ್ಕುತ್ತಿದ್ದರಿಂದ ಕಳೆದ ಮೂರ್‍ನಾಲ್ಕು ತಿಂಗಳಿಂದ ಅನೇಕ ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಕಾಡುತ್ತಿತ್ತು. ವಾಣಿವಿಲಾಸ ಸಾಗರದ ನೀರು ಬಂದಿರುವುದು ಜನರು ನಿಟ್ಟುಸಿರು ಬಿಡುವಂತೆ ಆಗಿದೆ.

ಈ ಯೋಜನೆಯು 90 ಕಿ.ಮೀ. ದೂರ ಹೊಂದಿದ್ದು, ವಾಣಿವಿಲಾಸ ಸಾಗರದಿಂದ ಹಿರಿಯೂರಿಗೆ ಮೊದಲು ನೀರು ಪೈಪ್‌ಲೈನ್ ಮೂಲಕ ಬಂದು ಅಲ್ಲಿಂದ ಹಿರಿಯೂರು ಸಮೀಪದ ಚಳ್ಳಕೆರೆ ರಸ್ತೆಯಲ್ಲಿ ಬರುವ ನೂರಮೂರು ಕ್ರಾಸ್ ಬಳಿ ಟ್ಯಾಂಕ್ ನಿರ್ಮಿಸಲಾಗಿದೆ. ಅಲ್ಲಿಂದ 33 ಕಿ.ಮೀ. ದೂರವಿರುವ ಚಳ್ಳಕೆರೆಯ ನೀರು ಸಂಗ್ರಹ ಘಟಕಕ್ಕೆ ಬರುವ ವ್ಯವಸ್ಥೆ ಮಾಡಲಾಗಿದೆ. ಚಳ್ಳಕೆರೆ ವಾರಿಯಾರ್ಸ್ ಶಾಲೆಯ ಬಳಿ 22 ಲಕ್ಷ ಲೀಟರ್ ಸಾಮರ್ಥ್ಯದ ಜಲ ಶುದ್ಧೀಕರಣ ಘಟಕವನ್ನು ಸ್ಥಾಪಿಸಲಾಗಿದೆ. ಇಲ್ಲಿಂದ ನಗರಕ್ಕೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗಿದೆ.

### 25. ತುಂಗಭದ್ರಾ ಹಿನ್ನೀರು ಶೀಘ್ರ ಲಭ್ಯ

ರಾಜ್ಯ ಸರಕಾರ ಚಳ್ಳಕೆರೆ, ಪಾವಗಡ, ಕೂಡ್ಲಿಗಿ, ಮೊಳಕಾಲ್ಮೂರು ಮೀಸಲುಕ್ಷೇತ್ರಗಳಿಗೆ ತುಂಗಭದ್ರಾ ಹಿನ್ನೀರಿನಿಂದ ಕುಡಿಯುವ ನೀರು ಪೂರೈಸುವ ಯೋಜನೆ ರೂಪಿಸಿದೆ. ಈ ಯೋಜನೆಯಲ್ಲಿ ಚಳ್ಳಕೆರೆ ತಾಲೂಕಿನ ತುರುವನೂರು ಹೋಬಳಿಯನ್ನು ಸೇರಿಸುವಲ್ಲಿ ಶಾಸಕರು ಸಫಲರಾಗಿದ್ದಾರೆ. ಹೀಗಾಗಿ ಮುಂದಿನ ಒಂದು ವರ್ಷದಲ್ಲಿ ತುಂಗಭದ್ರಾ ಹಿನ್ನೀರಿನ ಕುಡಿಯುವ ನೀರು ತುರುವನೂರು ಹೋಬಳಿಯ ಜನರಿಗೆ ಲಭ್ಯವಾಗಲಿದೆ. ಮುಂದಿನ ತಿಂಗಳು ಚಳ್ಳಕೆರೆ ಅಥವಾ ಬಳ್ಳಾರಿಯಲ್ಲಿ 2250 ಕೋಟಿ ವೆಚ್ಚದ ಈ ಬೃಹತ್ ಯೋಜನೆಗೆ ಚಾಲನೆ ದೊರೆಯಲಿದೆ.

### 26. ಶೈಕ್ಷಣಿಕ ವಲಯಕ್ಕೆ ಉದಾರ ಅನುದಾನ

ಚಳ್ಳಕೆರೆ ತಾಲ್ಲೂಕು ಒಂದು ಕಾಲದಲ್ಲಿ ಆಯಿಲ್ ಸಿಟಿ ಎಂದು ಗುರುತಿಸಿಕೊಂಡಿತ್ತು. ಮಳೆಯ ಕೊರತೆ, ವ್ಯಾಪಾರ, ವ್ಯವಹಾರದಲ್ಲಿ ನಿರಂತರ ನಷ್ಟದಿಂದ ಎಣ್ಣೆ ಗಿರಣಿಗಳು ಬಾಗಿಲು ಮುಚ್ಚಿವೆ. ಕಾಲಚಕ್ರ ಉರುಳಿದಂತೆ ಎಣ್ಣೆ ನಗರಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ. ತಾಲೂಕಿಗೆ ನಾಲ್ಕು ವೈಜ್ಞಾನಿಕ ಸಂಸ್ಥೆಗಳ ಆಗಮನದಿಂದ ಆಯಿಲ್ ಸಿಟಿ ಇದೀಗ ಸೈನ್ಸ್ ಸಿಟಿಯಾಗಿ ಪರಿವರ್ತನೆಯಾಗುತ್ತಿರುವ ಚಳ್ಳಕೆರೆ ಈಗಾಗಲೇ ವಿಶ್ವ

ಭೂಪಟದಲ್ಲಿ ಗುರುತಿಸಿಕೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಶಾಸಕರು ಶಿಕ್ಷಣರಂಗಕ್ಕೆ ಬಹಳ ಪ್ರಾಮುಖ್ಯತೆ ನೀಡಿದ್ದಾರೆ. ಪ್ರಾಥಮಿಕ, ಪ್ರೌಢ ಶಿಕ್ಷಣ ಸೇರಿದಂತೆ ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ.

45 ಕೋಟಿ ರೂ. ವೆಚ್ಚದಲ್ಲಿ ಮೂರು ಇಂದಿರಾ ವಸತಿಶಾಲೆಗಳ ಆರಂಭಿಸುವಲ್ಲಿ ಶಾಸಕರು ಯಶಸ್ವಿಯಾಗಿದ್ದಾರೆ. ಸೋಮಗುದ್ದು ರಸ್ತೆಯಲ್ಲಿರುವ ಎಸ್ಸಿ ಮತ್ತು ಎಸ್‌ಟಿ ವರ್ಗಗಳ ಹಾಸ್ಟೆಲ್‌ಗೆ 96 ಲಕ್ಷ ರೂ. ವೆಚ್ಚದ ಕೊಠಡಿ ನಿರ್ಮಿಸಲಾಗಿದೆ. ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ಒಳಾಂಗಣ ಸಭಾಂಗಣ ನಿರ್ಮಿಸಲಾಗಿದೆ. 1.32 ಕೋಟಿ ರೂ. ವೆಚ್ಚದ ಎಂಟು ಕೊಠಡಿಗಳನ್ನು ನಿರ್ಮಿಸಲಾಗಿದೆ. ಪಾವಗಡ ರಸ್ತೆಯಲ್ಲಿ 3.80 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಆಂಗ್ಲ ಮಾಧ್ಯಮ ಆದರ್ಶ ವಿದ್ಯಾಲಯ ಕಟ್ಟಲಾಗಿದೆ. ಅದರ ಹಿಂಭಾದಲ್ಲಿ 2.19 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಬಾಲಕಿಯರ ಹಾಸ್ಟೆಲ್ ರೂಪಿಸಲಾಗಿದೆ. ಐಟಿಐ ಕಾಲೇಜಿನಲ್ಲಿ ಎರಡು ಹೊಸ ಕೋರ್ಸ್‌ಗಳನ್ನು ತೆರೆಯಲು 94 ಲಕ್ಷ ರೂ.ನಲ್ಲಿ ನೂತನ ಕಟ್ಟಡ ನಿರ್ಮಿಸಲಾಗಿದೆ. 1400 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವ ನಗರದಲ್ಲಿನ ಸರಕಾರಿ ಪದವಿಪೂರ್ವ ಕಾಲೇಜಿಗೆ ಸ್ವಂತ ಸೂರಿಲ್ಲದೆ ಬೇರೊಂದು ಕಟ್ಟಡದಲ್ಲಿ ನಡೆಯುವುದನ್ನು ತಪ್ಪಿಸಲು ಪ್ರಥಮದರ್ಜೆ ಕಾಲೇಜಿಗೆ ಸೇರಿದ ಮೂರು ಎಕರೆ ಜಾಗವನ್ನು ಮಂಜೂರಾಗಿ ಪಡೆದು 1.80 ಕೋಟಿ ರೂ. ಅನುದಾನ ಒದಗಿಸುವ ಮೂಲಕ ಕಾಯಕಲ್ಪ ನೀಡಿದ್ದಾರೆ. ಶತಮಾನ ಪೂರೈಸಿರುವ ಬಿಸಿ ನೀರು ಮುದ್ದಪ್ಪ ಸರಕಾರಿ ಪ್ರೌಢಶಾಲೆಯನ್ನು ಹೈಟೆಕ್ ಮಾದರಿಯಲ್ಲಿ ಮರು ನಿರ್ಮಾಣ ಮಾಡುವ ಉದ್ದೇಶದಿಂದ 4 ಕೋಟಿ ರೂ. ಮಂಜೂರಾಗಿದೆ. ಈಗಾಗಲೇ 36 ಲಕ್ಷ ರೂ.ಗಳಲ್ಲಿ ಮೂರು ಹೊಸ ಕೊಠಡಿಗಳು ನಿರ್ಮಾಣಗೊಂಡಿವೆ. ಹೆಗ್ಗೆರೆ ತಾಯಮ್ಮ ಸರಕಾರಿ ಪ್ರೌಢಶಾಲೆ ಹೆಚ್ಚುವರಿ ಕೊಠಡಿಗಳಿಗೆ 70 ಲಕ್ಷಕ್ಕೂ ಹೆಚ್ಚು ಅನುದಾನ ಮಂಜೂರು ಮಾಡಿಸುವಲ್ಲಿ ಶ್ರಮಿಸಿದ್ದಾರೆ.

ಪಾವಗಡ ರಸ್ತೆಯ ಹಳೆ ರೇಷ್ಮೆ ಇಲಾಖೆ 4 ಎಕರೆ ಜಾಗದಲ್ಲಿ 20 ಕೋಟಿ ವೆಚ್ಚದಲ್ಲಿ 5 ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದೆ. ದೇವರಾಜ ಅರಸು ಭವನ, ಬಿಸಿಎಂ ಕಛೇರಿಯನ್ನು ಕಟ್ಟುವ ಚಿಂತನೆಯಿದೆ.

**27. ತುರುವನೂರು**

ಜಿಲ್ಲೆಯಲ್ಲಿ ಅತಿ ದೊಡ್ಡ ಗ್ರಾಮಪಂಚಾಯಿತಿ ಎಂದು ಪ್ರಸಿದ್ಧವಾಗಿರುವ ತುರುವನೂರು ಹೋಬಳಿಯಲ್ಲಿ ಶಾಸಕ ಟಿ. ರಘುಮೂರ್ತಿ ಶಾಲೆ, ಕಾಲೇಜು ಸೇರಿದಂತೆ ಹೋಬಳಿಯ ಸರ್ವತೋಮುಖ ಪ್ರಗತಿಗೆ ಭಾರೀ ಕೊಡುಗೆ ನೀಡಿದ್ದಾರೆ. ಸರಕಾರಿ ಪದವಿ ಕಾಲೇಜಿನಲ್ಲಿ ಕಲಾ ಹಾಗೂ ವಾಣಿಜ್ಯ ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ. ಹೊಸ ಕಟ್ಟಡಕ್ಕೆ ಹಣ ಮಂಜೂರಾಗಿದೆ. ಶೀಘ್ರದಲ್ಲಿ ನೂತನ ಕಟ್ಟಡ ನಿರ್ಮಾಣವಾಗಲಿದೆ. 15 ಕೋಟಿ ರೂ. ವೆಚ್ಚದ ಮೊರಾರ್ಜಿ ವಸತಿಶಾಲೆ ನಿರ್ಮಾಣವಾಗಲಿದೆ.

**28. ನಗರದ ಮಧ್ಯದಲ್ಲಿಯೇ ನನಸಾದ ಹೈಟೆಕ್ ಬಸ್ ನಿಲ್ದಾಣ ಕನಸು**

ರಾಜ್ಯದ ಅತಿ ಉದ್ದದ ಬೀದರ್–ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿಯು ಚಳ್ಳಕೆರೆಯ ಮೂಲಕ ಹಾದು ಹೋಗುತ್ತದೆ. ಪ್ರತಿ ದಿನ ನೂರಾರು ಪ್ರಯಾಣಿಕರು ಬಂದು ಹೋಗುತ್ತಾರೆ. ಇಂತಹ ಪ್ರಮುಖ ಕೇಂದ್ರದಲ್ಲಿ ವ್ಯವಸ್ಥಿತ ಬಸ್ ನಿಲ್ದಾಣ ಇಲ್ಲ ಎಂಬ ಕೊರಗು ಇನ್ನಿಲ್ಲ. ನಗರದಲ್ಲಿ 12.25 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಸಾರಿಗೆ ನಿಲ್ದಾಣ ನಿರ್ಮಾಣಗೊಂಡು ಉದ್ಘಾಟನೆಯಾಗಿದೆ.

ಸಂತೆ ಮೈದಾನದಲ್ಲಿ ಬಸ್ ನಿಲ್ದಾಣಕ್ಕೆ ಶಾಸಕರಾದ ಟಿ. ರಘುಮೂರ್ತಿಯವರು ಮುಂದಾದಾಗ ತರಕಾರಿ ಮಾರಲು ಜಾಗವಿಲ್ಲದಂತೆ ಮಾಡುತ್ತಾರೆಂದು ವ್ಯಾಪಾರಿಗಳು ಸಂಘರ್ಷಕ್ಕೆ ಮುಂದಾದರು. ಎಲ್ಲ ವಿರೋಧಗಳನ್ನು ಸರಿಪಡಿಸಿ ಕಾಮಗಾರಿಗೆ ಅಕ್ಟೋಬರ್ 16, 2015ರಂದು ಚಾಲನೆ ಸಿಗುವಂತೆ ಮಾಡಿದ್ದಲ್ಲದೆ ವ್ಯಾಪಾರಿಗಳಿಗೆ ಉತ್ತಮ ಸೌಲಭ್ಯ ಕಲ್ಪಿಸಲು ನೀಡಿದ್ದ ಭರವಸೆಯಂತೆ ನಗರಸಭೆಯ ಹಳೇ ಉದ್ಯಾನವನದ ಪ್ರಕೃತಿಯ ಮಡಿಲಲ್ಲಿ ವ್ಯಾಪಾರ ನಡೆಸುವಂತೆ 50 ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತವಾದ ಸಂತೆ ಜಾಗ ನಿರ್ಮಿಸಲಾಗಿದೆ. ಶೌಚಾಲಯ, ಕುಡಿವ ನೀರಿನ ವ್ಯವಸ್ಥೆ ಕಲ್ಪಿಸಿದ್ದರಿಂದ ಅಂತಿಮವಾಗಿ ತಕರಾರು ತೆಗೆದಿದ್ದ ವ್ಯಾಪಾರಿಗಳೇ ಶಾಸಕರನ್ನು ಕರೆಯಿಸಿ ಸನ್ಮಾನ ಮಾಡಿದರು. ಅನೇಕ ಅಡ್ಡಿ ಆತಂಕಗಳ ನಡುವೆ ಲೋಕಾರ್ಪಣೆಗೊಳ್ಳುತ್ತಿರುವ ಸಾರಿಗೆ ನಿಲ್ದಾಣದಿಂದ ಸಾರ್ವಜನಿಕರು ಸಂತೋಷಗೊಂಡಿದ್ದಾರೆ.

**29. ಹೊಸ ಶೈಲಿಯ ನಿಲ್ದಾಣ**

ಸರಕಾರದ ಕಟ್ಟಡಗಳೆಂದರೆ ಇಡೀ ರಾಜ್ಯದಲ್ಲಿ ಬಹುತೇಕ ಒಂದೇ ರೀತಿಯಲ್ಲಿ ಕಟ್ಟುವುದನ್ನು ಕಾಣಬಹುದು. ಮೊದಲಿಗೆ ಇಲ್ಲಿಯೂ ಅದೇ ರೀತಿ ನಿರ್ಮಿಸಲು ಅಧಿಕಾರಿಗಳು ಅಣಿಯಾಗಿದ್ದರು. ಇದನ್ನು ಒಪ್ಪದ ಶಾಸಕರಾದ ಟಿ. ರಘುಮೂರ್ತಿಯವರು ತಾವು ಶಿಕ್ಷಣ ಪಡೆದ ಎಂಜಿನಿಯರರಿಂದ ಸ್ಫೂರ್ತಿಗೊಂಡು ಹೊಸ ಶೈಲಿಯನ್ನು ಅಳವಡಿಸಿದ್ದಾರೆ. ಚಳ್ಳಕೆರೆ ಸಾರಿಗೆ ನಿಲ್ದಾಣ ದಾವಣಗೆರೆ ಸಾರಿಗೆ ವಿಭಾಗದಲ್ಲಿದೆ. ಇದು ಸುತ್ತಮುತ್ತಲಿನ ಜಿಲ್ಲೆಗಳಲ್ಲೆ ವಿಭಿನ್ನತೆಗೆ ಸಾಕ್ಷಿಯಾಗಿದೆ.

ನಗರಸಭೆ ಸುಪರ್ದಿಯಲ್ಲಿದ್ದ ಎರಡು ಎಕರೆ ಸಂತೆ ಮೈದಾನ ಜಾಗವನ್ನು ಸಾರಿಗೆ ಇಲಾಖೆ 4.35 ಕೋಟಿ ರೂ. ಹಣ ಕೊಟ್ಟು ಖರೀದಿಸಲಾಯಿತು. 8 ಕೋಟಿ ರೂ. ವೆಚ್ಚದಲ್ಲಿ 2335 ಚ.ಮೀ.ನಲ್ಲಿ ನೆಲ ಮತ್ತು ಮೊದಲ ಮಹಡಿಯಲ್ಲಿ ಹೊಸ ಮಾದರಿಯ ಹೋಟೆಲ್ ನಿರ್ಮಿಸಿದ್ದಾರೆ. ಒಮ್ಮೆಲೆ ನಾನಾ ಕಡೆ ಸಂಚಾರಿಸುವ 11 ಬಸ್‌ಗಳ ನಿಲುಗಡೆಗೆ 5200 ಚ.ಮೀ.ನಲ್ಲಿ ಕಾಂಕ್ರೀಟ್‌ನಿಂದ ವಿಶಾಲವಾದ ಪ್ಲಾಟ್ ಫಾರಂ ನಿರ್ಮಿಸಲಾಗಿದೆ. 26 ವಾಣಿಜ್ಯ ಮಳಿಗೆಗಳು, ಪ್ರಯಾಣಿಕರಿಗಾಗಿ ಬ್ಯಾಂಕ್ ಎಟಿಎಂ, ಸಹಾಯವಾಣಿ ಕೊಠಡಿ, ಮಹಿಳಾ ವಿಶ್ರಾಂತಿ ಕೊಠಡಿ, ಪಾಸ್ ಕೌಂಟರ್, ಎಸಿ ರೂಂ, ಶೌಚಾಲಯ ಹೀಗೆ ಎಲ್ಲ ವ್ಯವಸ್ಥೆಗಳಿವೆ. ಇನ್ನು ಡಿಪೋ ವ್ಯವಸ್ಥಾಪಕರು ಆವರಣದಲ್ಲೇ ವಾಸವಿರುವಂತೆ ಮಾಡಲು 50 ಲಕ್ಷ ರೂ. ವೆಚ್ಚದಲ್ಲಿ ವಸತಿಗೃಹ ಕೂಡ ನಿರ್ಮಾಣ ಮಾಡಲಾಗುತ್ತಿದೆ. ಡಿಪೋದ ಆವರಣವನ್ನು ಕಾಂಕ್ರೀಟ್‌ನಿಂದ ನಿರ್ಮಿಸಲು 2 ಕೋಟಿ ರೂ. ಅನುದಾನವನ್ನು ಡಾ. ನಂಜುಂಡಪ್ಪ ಹಿಂದುಳಿದ ಅಭಿವೃದ್ಧಿ ಆಯೋಗದಿಂದ ಬಳಸಿಕೊಂಡಿದ್ದಾರೆ.

**30. ನಗರದ ಮಧ್ಯೆಯೇ ಈಡೇರಿದ ಕನಸು**

ಚಳ್ಳಕೆರೆಯಲ್ಲಿ ಸಾರಿಗೆ ನಿಲ್ದಾಣ ಅನೇಕ ವರ್ಷಗಳ ಕನಸಾಗಿತ್ತು. ಆದರೆ ಜಾಗದ ಸಮಸ್ಯೆಯಿಂದ ಮೂರ್‍ನಾಲ್ಕು ಶಾಸಕರ ಅವಧಿಯಲ್ಲಿ ಮುನ್ನೆಲೆಗೆ ಬಂದರೂ ಸಹ ಕಾರ್ಯಗತವಾಗಲಿಲ್ಲ. ಸಂತೆ ಮೈದಾನ ನೀಡಲು ಸಮಸ್ಯೆಗಳು ಎದುರಾಗುತ್ತಿದ್ದರಿಂದ ಬಳ್ಳಾರಿ ರಸ್ತೆಯಲ್ಲಿ ನಿರ್ಮಾಣ ಮಾಡುವ ಚಿಂತನೆ ನಡೆಸಲಾಗಿತ್ತು. ಆದರೆ ದೂರವಾಗುವ ಕಾರಣ ಪ್ರಯಾಣಿಕರು ಅಲ್ಲಿಗೆ ಹೋಗುವುದಿಲ್ಲ. ಮತ್ತೆ ರಸ್ತೆ ಬದಿಯಲ್ಲಿ ಹತ್ತಿ ಇಳಿಯುವ ಕಸರತ್ತು ನಡೆಸುವರು. ರಾತ್ರಿ ವೇಳೆ ಬರುವವರಿಗೆ ತೊಂದರೆಯಾಗುವುದು ಎಂದು ಕೈಬಿಡಲಾಯಿತು. ನಂತರ ಲೋಕೋಪಯೋಗಿ ಇಲಾಖೆಯನ್ನು ಸ್ಥಳಾಂತರ ಮಾಡಿಸಿ ಅಲ್ಲಿ ನಿಲ್ದಾಣ ಮಾಡಬೇಕೆಂದು ಚರ್ಚೆಗಳು ನಡೆದವು.

ಹೀಗೆ ವರ್ಷಗಳೇ ಉರುಳಿಹೋದವು. ನಗರದ ಹೃದಯಭಾಗವಲ್ಲದೇ ಶ್ರೀರಂಗಪಟ್ಟಣ–ಬೀದರ್ ಹೆದ್ದಾರಿಗೆ ಹೊಂದಿಕೊಂಡಿರುವ ನಗರಸಭೆಯ ಭಾಗವಾಗಿದ್ದ ಸಂತೆಮೈದಾನದಲ್ಲಿ ಸಾರಿಗೆ ನಿಲ್ದಾಣವಾದರೆ ರಾತ್ರಿ ಸಮಯದಲ್ಲೂ ಒಂಟಿ ಮಹಿಳಾ ಪ್ರಯಾಣಿಕರು ಸಮಸ್ಯೆಯಿಲ್ಲದೆ ಮನೆಗೆ ಹೊಗಬಹುದೆಂದು ರೈತ ಬಣ ಹೋರಾಟ ನಡೆಸಿತ್ತು. ಇದಕ್ಕೆ ವಿರುದ್ಧವಾಗಿ ಇನ್ನೊಂದು ಬಣ ತರಕಾರಿ ಮಾರಲು ಸ್ಥಳವಿರುವುದಿಲ್ಲ ಎಂದು ವಿರೋಧ ಮಾಡುತ್ತಿತ್ತು. ನೆಲೆ ಕಳೆದುಕೊಳ್ಳುವ ಭೀತಿಯಲ್ಲಿದ್ದ ಸಣ್ಣ ವ್ಯಾಪಾರಿಗಳು ಜಾಗವನ್ನು ಬಿಡುವುದಿಲ್ಲವೆಂದು ಪಟ್ಟು ಹಿಡಿದು ಹೋರಾಟ ನಡೆಸಿದರು. ಆದರೆ ಶಾಸಕರಾದ ಟಿ. ರಘುಮೂರ್ತಿ ಯವರು ಗಟ್ಟಿ ನಿರ್ಧಾರ ಮಾಡಿ ಸಂತೆ ಜಾಗವೇ ಸಾರಿಗೆ ಜಾಗಕ್ಕೆ ಸೂಕ್ತವಾಗಿದೆ. ಸಾವಿರಾರು ಪ್ರಯಾಣಿಕರಿಗೆ ಅನುಕೂಲವಾಗುವುದು. ವ್ಯಾಪಾರಿಗಳಿಗೆ ಪಕ್ಕದಲ್ಲೇ ಇರುವ ನಗರಸಭೆ ಹಳೇ ಜಾಗದಲ್ಲಿ ಸುಸಜ್ಜಿತವಾದ ವ್ಯವಸ್ಥೆ ಮಾಡಲಾಗುವುದೆಂದು ವ್ಯಾಪಾರಿಗಳನ್ನು ಮತ್ತು ಒಂದು ರೈತ ಬಣವನ್ನು ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದರಿಂದ ಇಡೀ ತಾಲೂಕಿನ ಜನರಿಗೆ ಹೈಟೆಕ್ ಸಾರಿಗೆ ನಿಲ್ದಾಣ ಸಿಗುವಂತಾಗಿದೆ.

**31. ಸೂಪರ್ ಬಜಾರ್**

ಸಾರಿಗೆ ನಿಲ್ದಾಣಕ್ಕೆ ನಗರಸಭೆ 4.35 ಕೋಟಿ ರೂ.ಗೆ ಜಾಗ ಕೊಟ್ಟಿದ್ದರಿಂದ ಬಂದ ಹಣವನ್ನು ನಗರಸಭೆಗೆ ಮತ್ತಷ್ಟು ಆದಾಯ ಬರುವಂತೆ ಮಾಡಲು ಶಾಸಕರು ಸಾರಿಗೆ ನಿಲ್ದಾಣದ ಮುಂಭಾಗದಲ್ಲಿ ಡಾಂಬರ್ ರಸ್ತೆ ನಿರ್ಮಿಸಿ ನಗರಸಭೆಗೆ ಇನ್ನೂ ಉಳಿಸಿಕೊಂಡಿರುವ ಜಾಗದಲ್ಲಿ ಸೂಪರ್ ಬಜಾರ್ ನಿರ್ಮಿಸಲು ಸಾರಿಗೆ ಇಲಾಖೆ ನೀಡಿರುವ ಹಣ ಮೀಸಲಿಡಿಸಿದ್ದಾರೆ. ನೂತನ ಸಾರಿಗೆ ನಿಲ್ದಾಣ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ. ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳ ಬಸ್ಸುಗಳು ಇಲ್ಲಿಯೇ ಸಂಚರಿಸುತ್ತವೆ. ಬೆಂಗಳೂರು, ತುಮಕೂರು, ಕೋಲಾರ, ಮೈಸೂರು ಜಿಲ್ಲೆಗಳಿಗೆ ಸಂತೆಮೈದಾನದಲ್ಲಿ ನಿಲ್ದಾಣವಾದರೆ ನಗರ ಸುತ್ತು ಹಾಕುವುದು ತಪ್ಪುತ್ತದೆ. ಒಂದು ರೀತಿಯಲ್ಲಿ ಚಳ್ಳಕೆರೆ ಹೈಟೆಕ್ ಸಾರಿಗೆ ನಿಲ್ದಾಣ ಹೆಬ್ಬಾಗಿಲಿನಂತಿದೆ.

**32. ಜಾನಪದ ಕಲೆಗಳ ತವರೂರಲ್ಲಿ ಸುಸಜ್ಜಿತ ರಂಗಮಂದಿರ**

ಜಾನಪದ ರಂಗಭೂಮಿ, ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳ ತವರೂರಾಗಿರುವ ಚಳ್ಳಕೆರೆಯಲ್ಲೊಂದು ಸುಸಜ್ಜಿತ ರಂಗಮಂದಿರದ ಕೊರತೆ ಎದ್ದು ಕಾಣುತ್ತಿತ್ತು. ನಗರದಲ್ಲಿ ನೃತ್ಯ ನಿಕೇತನ, ಭಜನಾ ಮಂಡಳಿಗಳು ಸೇರಿದಂತೆ ನಾನಾ ಸಾಹಿತ್ಯ, ಸಾಂಸ್ಕೃತಿಕ ಸಂಸ್ಥೆಗಳಿವೆ. ಆದರೆ ಇವುಗಳಿಗೆ ಸೂಕ್ತವಾದ ವೇದಿಕೆಗಳ ಕೊರತೆ ಕಾಡುತ್ತಿತ್ತು. ಭವ್ಯವಾದ ರಂಗಮಂದಿರದ ಕನಸು ಶಾಸಕರಿಂದ ನನಸಾಗಿದ್ದು, ಮುಂದಿನ ದಿನಗಳಲ್ಲಿ ನಿರಂತರವಾಗಿ ಸಾಹಿತ್ಯ, ಸಂಸ್ಕೃತಿಗಳ ಕಲರವ ಮೊಳಗಲಿದೆ. ನಗರದ ಬಿಸಿನೀರು ಮುದ್ದಪ್ಪ ಪ್ರೌಢಶಾಲಾ ಮೈದಾನದಲ್ಲಿ ಚಿತ್ರದುರ್ಗ ಮುಖ್ಯ ರಸ್ತೆಗೆ ಮುಖ ಮಾಡಿ ನಿಂತಿರುವ ಒಂದು ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ರಂಗಮಂದಿರ ಕಲಾಸಕ್ತರನ್ನು ತನ್ನತ್ತ ಸೆಳೆಯುತ್ತಿದೆ.

**33. ಮೇಕಪ್, ಸ್ನಾನ, ಶೌಚಗೃಹ**

ಹೊಸ ರಂಗಮಂದಿರದ ಹೊರಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ರಾಷ್ಟ್ರೀಯ ಹಬ್ಬಗಳ ಆಚರಣೆಗೆ ಸುಸಜ್ಜಿತವಾದ ವಿಶಾಲವಾದ ವೇದಿಕೆಯನ್ನು ನಿರ್ಮಿಸಲಾಗಿದೆ. ಒಳಾಂಗಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ರಂಗಸಜ್ಜಿಕೆ, ಕಲಾವಿದರು ಮೇಕಪ್ ಮಾಡಿಕೊಳ್ಳಲು ಸ್ನಾನ ಮತ್ತು ಶೌಚಾಲಯಗಳ ಕೊಠಡಿ ಹೀಗೆ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಬುಡಕಟ್ಟು ಸಮುದಾಯಗಳ ಹತ್ತು ಹಲವು ವೈವಿಧ್ಯಮಯ ಆಕರ್ಷಣೀಯ ಜಾನಪದ ಕಲಾಪ್ರಕಾರಗಳ ತವರೂರೆನಿಸಿದ ಇಲ್ಲಿ ಕಲೆಯನ್ನೇ ಜೀವನಾಧಾರವನ್ನಾಗಿಸಿಕೊಂಡು ಬದುಕುತ್ತಿರುವ ಬಹಳಷ್ಟು ಜನ ಕಲಾವಿದರಿದ್ದಾರೆ. ರಂಗಭೂಮಿಯನ್ನು ನೆಚ್ಚಿಕೊಂಡು ಆ ಕ್ಷೇತ್ರದಲ್ಲಿ ಕ್ರಾಂತಿಯನ್ನೆಬ್ಬಿಸಿದ ಸಿ.ಜಿ.ಕೆ.ಯವರಂಥ ರಂಗತಜ್ಞರ ಜನ್ಮಭೂಮಿ ಚಳ್ಳಕೆರೆಯಾಗಿದೆ.

ಕಲಾವಿದರ ಪ್ರತಿಭಾ ಪ್ರದರ್ಶನಕ್ಕೆ ಯೋಗ್ಯವೆನಿಸಿದ ರಂಗಮಂದಿರವಿರಲಿಲ್ಲ. ಹಿಂದೆ ಊರಿನ ಜನ ಸಮುದಾಯಕ್ಕೆ ಉಪಯೋಗಕರವಾಗಲಿ ಎಂದು ಟೌನ್‌ಹಾಲ್‌ಗಳನ್ನು ನಿರ್ಮಿಸುವ ಹಾಗೆ ಚಳ್ಳಕೆರೆಯಲ್ಲಿಯೂ ಒಂದು ಟೌನ್‌ಹಾಲ್ ಇತ್ತು. ಆದರೆ ಎಂದೂ ಅದು ಕಲಾವಿದರಿಗೆ, ಕಲಾ ಪ್ರದರ್ಶನಗಳಿಗೆ ಸಿಗುತ್ತಿರಲಿಲ್ಲ. ಬಹಳಷ್ಟು ಕಾಲ ಆ ಕಟ್ಟಡದಲ್ಲಿ ಕಾಲೇಜೊಂದನ್ನು ನಡೆಸಲಾಗುತ್ತಿತ್ತು. ಅನಂತರ ಅದು ಪುರಸಭೆ ಕಾರ್ಯಾಲಯವಾಗಿ ಮಾರ್ಪಾಡಾಯಿತು. ಕಲಾವಿದರ, ಸಾಹಿತ್ಯಾಸಕ್ತರ ಕೂಗಿಗೆ ಯಾರೂ ಕಿವಿಗೊಡಲಿಲ್ಲ. ಊರಲ್ಲೊಂದು ಸುಸಜ್ಜಿತ ರಂಗಮಂಟಪವಿದ್ದರೆ ಅದು ರಾಜಕಾರಣಿಗಳಿಗೂ, ಕಲೆ ಸಾಹಿತ್ಯ, ಸಾಂಸ್ಕೃತಿಕ ಕಲಾಸಕ್ತ ಜನರಿಗೂ, ಮಠ ಮಾನ್ಯಗಳ ಸ್ವಾಮಿಜೀಗಳಿಗೂ, ಆಧ್ಯಾತ್ಮಿಕ ಧಾರ್ಮಿಕ

ಪ್ರವಚನಕಾರರಿಗೂ ಸುಸಜ್ಜಿತ ರಂಗಮಂದಿರದ ಸೌಲಭ್ಯವಿಲ್ಲದೆ ಸಭೆ ಸಮಾರಂಭಗಳಿಗಾಗಿ ಜನರು ಕಲ್ಯಾಣ ಮಂಟಪಗಳನ್ನು ಆಶ್ರಯಿಸಬೇಕಾಗಿತ್ತು. ದುಬಾರಿ ಬಾಡಿಗೆ ತೆತ್ತು ಹೋದರೂ ಅಲ್ಲಿ ವ್ಯವಸ್ಥೆಗಳು ಕಲಾ ಪ್ರದರ್ಶನಕ್ಕೆ ಸೂಕ್ತ ವಿಶಾಲ ವೇದಿಕೆ, ಧ್ವನಿವರ್ಧಕಗಳ ವ್ಯವಸ್ಥೆ, ರಂಗದ ಮೇಲಿನವರು ಆಡುವ ಮಾತುಗಳು ಸಭಿಕರಿಗೆ ಸ್ಪಷ್ಟವಾಗಿ ಕೇಳುವುದಿಲ್ಲ. ಬಿಸಿನೀರು ಮುದ್ದಪ್ಪ ಪ್ರೌಢಶಾಲಾ ಮೈದಾನದಲ್ಲಿರುವ ಕಲ್ಲು ಮಣ್ಣಿನಲ್ಲಿ ಕಟ್ಟಿರುವ ಒಂದು ಕಟ್ಟೆಯನ್ನೇ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಕನ್ನಡರಾಜ್ಯೋತ್ಸವಗಳಂತೆ ಸರಕಾರಿ ಸಮಾರಂಭಗಳು, ರಾಜಕೀಯ ಮಹೋದಯರ ಸಾರ್ವಜನಿಕರ ಸಭೆ, ಸಮಾರಂಭಗಳು ನಡೆಯುತ್ತಿದ್ದವು. ಬಯಲುರಂಗಮಂದಿರಕ್ಕೆ ಸುಣ್ಣಬಣ್ಣ ಹಾಗೂ ನಿರ್ವಹಣೆಯಿಲ್ಲದೆ ಶೀಟುಗಳ ಬಾಗಿಲುಗಳು ಕಿತ್ತುಹೋಗಿ ಬಯಲುರಂಗಮಂದಿರ ಅನೈತಿಕ ಚಟುವಟಿಕೆಗಳ ತಾಣವಾಗಿತ್ತು. ಕಾಯಕಲ್ಪ ನೀಡದೆ ಇರುವುದರ ಬಗ್ಗೆ ಅನೇಕ ಸಾಹಿತಿಗಳು, ಕವಿಗಳು, ನಾಟಕ ಕಲಾವಿದರಲ್ಲಿ ಇದ್ದ ಬೇಸರ ಹೊಸ ರಂಗಮಂದಿರ ಕಂಡು ಅವರ ಕಲಾ ಪ್ರತಿಭೆ ಮತ್ತೆ ಅರಳುವಂತೆ ಶಾಸಕರು ಮಾಡಿರುವುದು ಅವರಲ್ಲಿರುವ ಆಸಕ್ತಿಯನ್ನು ತೋರಿಸುತ್ತದೆ.

ನಾಡಿನ ಸಾಹಿತ್ಯಲೋಕದಲ್ಲಿ ದೊಡ್ಡ ಹೆಸರು ಮಾಡಿದ್ದ ಚಳ್ಳಕೆರೆ ತಾಲೂಕಿನ ತರಾಸು ಹೆಸರನ್ನು ಚಿತ್ರದುರ್ಗದಲ್ಲಿರುವ ರಂಗಮಂದಿರಕ್ಕೆ ಇಟ್ಟ ರೀತಿಯಲ್ಲಿ ಚಳ್ಳಕೆರೆಯ ರಂಗಮಂದಿರಕ್ಕೂ ಸೂಕ್ತವಾದ ಮೇರು ವ್ಯಕ್ತಿ ಅಥವಾ ಕವಿಗಳ ಹೆಸರನ್ನು ನಾಮಕರಣ ಮಾಡುವ ಮೂಲಕ ಸಾಹಿತ್ಯಲೋಕಕ್ಕೆ ಮತ್ತಷ್ಟು ಶಕ್ತಿ ತುಂಬುವ ಕೆಲಸವನ್ನು ಶಾಸಕರು ಮಾಡುವರು ಎಂಬ ವಿಶ್ವಾಸ ಕಲಾಸಕ್ತರಲ್ಲಿದೆ.

**34. ಪ್ರಶಸ್ತಿ**

ದಿನಾಂಕ 15-09-2017ರಂದು ಬೆಂಗಳೂರಿನ ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ "ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ" ನೀಡಿ ಗೌರವಿಸಲಾಗಿದೆ.

ಒಟ್ಟಿನಲ್ಲಿ ರಾಜ್ಯದ 224 ಕ್ಷೇತ್ರಗಳ ಶಾಸಕರಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರಕ್ಕೆ ಸು. 600 ಕೋಟಿ ರೂ.ಗಳಿಗೂ ಅಧಿಕ ಅನುದಾನವನ್ನು ಮಂಜೂರು ಮಾಡಿಸಿದ ಏಕೈಕ ಶಾಸಕರೆಂಬ ಹೆಗ್ಗಳಿಕೆ ಇವರದು. ಉದಾಹರಣೆಗೆ ಚಳ್ಳಕೆರೆ ನಗರದಲ್ಲಿ ನಿರ್ಮಾಣವಾಗುತ್ತಿರುವ "ಮಿನಿ ವಿಧಾನಸೌಧ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್,

ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ಅಜ್ಜನಗುಡಿ ದೇವಸ್ಥಾನದ ಬಳಿ ನಿರ್ಮಾಣವಾಗಿರುವ ವಾಲ್ಮೀಕಿ ಭವನ, ಚಿತ್ರದುರ್ಗ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಜಗಜೀವನರಾಂ ಭವನ, ಮಕ್ಕಳ 100 ಹಾಸಿಗೆಯುಳ್ಳ ಆಸ್ಪತ್ರೆ, ನಗರದಲ್ಲಿ ವಿಶಾಲವಾದ ರಸ್ತೆಗಳ ಅಗಲೀಕರಣ, ಶಾಸಕರ ಅನುದಾನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಎಲ್ಲಾ ಜನಾಂಗದವರಿಗೆ ಸಮುದಾಯ ಭವನ, ಚಳ್ಳಕೆರೆ ನಗರದ ಸಾರ್ವಜನಿಕರಿಗೆ ವಾಣಿ ವಿಲಾಸ ಸಾಗರದಿಂದ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ" ಮುಂತಾದ ಕಾರ್ಯಕ್ರಮಗಳನ್ನು ಕಲ್ಪಿಸಿದ ಹೆಗ್ಗಳಿಕೆ ಶ್ರೀಯುತರಿಗೆ ಸಲ್ಲುತ್ತದೆ. ಚಳ್ಳಕೆರೆ ಇತಿಹಾಸದಲ್ಲಿ ಹಿಂದೆಂದು ಕಂಡು ಕೇಳರಿಯದ ಅಭಿವೃದ್ಧಿಯ ಸಾಧನೆಗಳನ್ನು ಮಾಡಿರುವ ಶಾಸಕರೆಂಬ ಹೆಗ್ಗಳಿಕೆ ಇವರದ್ದಾಗಿದೆ. ಅವರು ಸಾರ್ವಜನಿಕ ವಲಯದಲ್ಲಿ ಅಜರಾಮರರಾಗಿದ್ದಾರೆ.

**ಶ್ರೀ ಟಿ. ರಘುಮೂರ್ತಿ ಶಾಸಕರ ಕುರಿತು ಜನಸಾಮಾನ್ಯರು ಕಂಡಂತೆ ಅಭಿಪ್ರಾಯಗಳ ಸಂಗ್ರಹಣೆ**

1. **ಎಸ್.ಹೆಚ್ ಸೈಯದ್,** ಪ್ರಗತಿಪರ ಚಳುವಳಿಗಾರರು, ಮಾಜಿ ಪಟ್ಟಣ ಪಂಚಾಯ್ತಿ ಸದಸ್ಯರು, ಚಳ್ಳಕೆರೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಸಮಗ್ರ ಅಭಿವೃದ್ಧಿ ಕ್ಷೇತ್ರವೆಂದೇ ಜನಸಾಮಾನ್ಯರ ಮಾತು. ಇದಕ್ಕೆಲ್ಲಾ ಕಾರಣ ನಮ್ಮ ಜನಪ್ರಿಯ ಶಾಸಕರು. ಯಾರು ಏನೇ ಹೇಳಲಿ ನನ್ನ ಅಭಿಪ್ರಾಯದ ಪ್ರಕಾರ ಜಿಲ್ಲೆಯಲ್ಲಿ ಚಳ್ಳಕೆರೆ ಸರ್ವಾಂಗೀಣ ಅಭಿವೃದ್ಧಿ ಹೊಂದಿದೆ. ಅವರು ಮತದಾರರ ಬಳಿ ನೇರ ಸಂಪರ್ಕವನ್ನಿಟ್ಟುಕೊಂಡ ಜಿಲ್ಲೆಯ ಮೊದಲ ಶಾಸಕರೆಂದರೆ ತಪ್ಪಾಗಲಾರದು. ರಸ್ತೆಗಳ ರಾಜ ಎಂದು ಅವರು ಕರೆಸಿಕೊಂಡಿದ್ದಾರೆ. ಜನರಿಗೆ ಅವಶ್ಯಕವಾದ ಕುಡಿಯುವ ನೀರನ್ನು ಶಾಶ್ವತವಾಗಿ ನೀಡಿದ್ದಾರೆ. ಇದಕ್ಕಾಗಿ ಅವರನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ನಗರದ ರಸ್ತೆ ಅಗಲೀಕರಣದಲ್ಲಿ ರಾಜಕಾರಣ ಮಾಡದೆ ನಗರಸಭೆ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಗಲೀಕರಣ ಮಾಡಿದ್ದಾರೆ. ಅನೇಕ ವ್ಯಾಪಾರಿಗಳು ವಿರೋಧಿಸಿದರೂ ಕಠಿಣ ನಿಲುವನ್ನು ತಾಳಿ ಅಭಿವೃದ್ಧಿ ನಡೆಸಿದ್ದಾರೆ. ಸಂತೆಮೈದಾನ, ಹೊಸ ಕೆ.ಎಸ್.ಆರ್.ಟಿ.ಸಿ. ನಿಲ್ದಾಣ, ಮಿನಿ ವಿಧಾನಸೌಧ, ಪ್ರತಿಸಮುದಾಯಗಳಿಗೆ ಸಮುದಾಯ ಭವನ, ರೈತರಿಗೆ ಗಂಗಾಕಲ್ಯಾಣ, ನೇರ ಸಾಲ, ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಅನೇಕ ಸಮಸ್ಯೆಗಳನ್ನು ಶಾಸಕರು ಬಗೆಹರಿಸಿದ್ದಾರೆ. ಕೆರೆಗಳಿಗೆ ನೀರು ತರಲು ಭದ್ರಾಮೇಲ್ದಂಡೆ ಪ್ರಾಧಿಕಾರದಿಂದ ಸರ್ವೇ ಕೆಲಸ ಮಾಡಿಸಿದ್ದಾರೆ. ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ನೇರವಾಗಿ ಮತದಾರರಲ್ಲಿ ಸಂಪರ್ಕವನ್ನಿಟ್ಟುಕೊಂಡಿದ್ದಾರೆ. ನಗರಕ್ಕೆ ಅವಶ್ಯಕವಾದ ಕ್ರೀಡಾಂಗಣ ಮಂಜೂರು ಮಾಡಿಸಿದ್ದಾರೆ. ಅವರು ಅಭಿವೃದ್ಧಿಯ ಹರಿಕಾರರೇ

ಸರಿ. ಆದರೆ ಕೆಲವು ಸಮಸ್ಯೆಗಳನ್ನು ಶ್ರೀಯುತರು ಪರಿಹರಿಸಲು ವಿಫಲವಾಗಿದ್ದಾರೆ. ಸರ್ಕಾರಿ ಕಛೇರಿಗಳಲ್ಲಿ ತಂತ್ರಗಾರಿಕೆ ಮಾಡಿ ಬಡ ಜನತೆಯನ್ನು ಸುಲಿಗೆ ಮಾಡುವ ಅಧಿಕಾರಿಗಳ ಮೇಲೆ ಶ್ರೀಯುತರು ಕ್ರಮ ಕೈಗೊಂಡಿಲ್ಲ. ಬಹಳ ವರ್ಷಗಳಿಂದ ಆಸ್ಪತ್ರೆ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಸುದೀರ್ಘವಾಗಿ ಕೆಲಸ ಮಾಡುತ್ತಿರುವವರ ಬಗ್ಗೆ ಕಾಳಜಿ ವಹಿಸಬೇಕಾಗಿತ್ತು. 1987ರಿಂದ ನಗರದ ನಿವೇಶನಗಳ ಹಂಚಿಕೆಯಾಗಿಲ್ಲ, ಅಕ್ರಮ/ಸಕ್ರಮದವರಿಗೆ ಹಕ್ಕು ಪತ್ರ ಸಿಕ್ಕಿಲ್ಲ. ನೆನೆಗುದಿಗೆ ಬಿದ್ದಿದೆ. ಇದನ್ನು ಬಗೆಹರಿಸಲು ಪ್ರಯತ್ನಿಸುತ್ತಿಲ್ಲ. ಹೌಸಿಂಗ್ ಬೋರ್ಡ್ ನಿವೇಶನಗಳನ್ನು ಹಂಚಲು ವಿಳಂಬ ಮಾಡಿದ್ದು, ಸರ್ಕಾರಿ ಜಾಗದಲ್ಲಿ ಮನೆ ನಿರ್ಮಿಸಿಕೊಂಡವರಿಗೆ ಪರಿಹಾರ ನೀಡುವಲ್ಲಿ ಶ್ರೀಯುತರು ಹಿಂದಿನ ರಾಜಕಾರಣಿಗಳನ್ನೇ ಅನುಸರಿಸಿ ಸಮಸ್ಯೆಗಳನ್ನು ಜೀವಂತವಾಗಿಟ್ಟಿದ್ದಾರೆ. ಬರಪೀಡಿತ ಈ ಕ್ಷೇತ್ರದಲ್ಲಿ ಇನ್ನೂ ಅನೇಕ ಅಭಿವೃದ್ಧಿಯ ಕೆಲಸಗಳನ್ನು ಮಾಡಿ ಇನ್ನೊಂದು ವರ್ಷದಲ್ಲಿ ವೈದ್ಯಕೀಯ ಕಾಲೇಜು ತರಬೇಕೆಂದು ಮನವಿ ಮಾಡುತ್ತೇನೆ. ನನ್ನ ಅಭಿಪ್ರಾಯದ ಪ್ರಕಾರ ಅವರೊಬ್ಬ ಅಭಿವೃದ್ಧಿಯ ಹರಿಕಾರ, ಹಸನ್ಮುಖಿ ರಾಜಕಾರಣಿ. ಯಾರನ್ನೂ ವಿರೋಧಿಸದೇ ರಾಜಕಾರಣ ಮಾಡಿ ಅಜಾತಶತ್ರುವಿನಂತೆ ತೋರಿಸಿದ್ದಾರೆ.

2. **ಪಿ. ತಿಪ್ಪೇಸ್ವಾಮಿ,** ನಾಟಕ ಅಕಾಡಮಿ ರಾಜ್ಯ ಸದಸ್ಯರು

ಸೂರ್ಯ ಹುಟ್ಟುವಾಗಲೇ ಪ್ರಜ್ವಲಿಸುವುದು:– ಚಳ್ಳಕೆರೆ ಕ್ಷೇತ್ರದ ಜನಪ್ರಿಯ ಶಾಸಕರಾದ ರಘುಮೂರ್ತಿ ನಾನು ಕಂಡಂತೆ ಒಬ್ಬ ಸಭ್ಯ ಸರಳ ರಾಜಕಾರಣಿ, ಶಿಕ್ಷಣವಂತರು. ಸೂರ್ಯ ಉದಯಿಸುವಾಗ ಪ್ರಜ್ವಲಿಸಿ ಕಾಣಿಸುತ್ತಾನೆ. ಆಗತಾನೇ ರಾಜಕೀಯ ಕ್ಷೇತ್ರದ ಶ್ರೀಯುತರು ಬಂದಿದ್ದಾರೆ. 5 ವರ್ಷಗಳಲ್ಲಿ ಏನು ಮಾಡಬೇಕೋ ಅದನ್ನು ಕ್ಷೇತ್ರಕ್ಕೆ ಮತದಾರರಿಗೆ ಮಾಡಿದ್ದಾರೆ. 40–50 ವರ್ಷಗಳ ಇತಿಹಾಸ ನೋಡಿದಾಗ 5 ವರ್ಷಗಳ ಸಾಧನೆ ಮೆಚ್ಚುವಂತದ್ದೇ. ಅದಕ್ಕೆ ರಘುಮೂರ್ತಿಯವರನ್ನು ಮುಂಜಾನೆಯ ಸೂರ್ಯನಿಗೆ ಹೋಲಿಸಬಹುದು. ಸೂರ್ಯ ಹುಟ್ಟುವ ಸಮಯದಲ್ಲಿ ಪ್ರಜ್ವಲಿಸುವ ಬೆಳಕಿನಂತೆ ಅವರು ಮಾಡಿದ ಪ್ರತಿಯೊಂದು ಕೆಲಸಗಳು ನಗರದ ಬೀದಿಗಳಲ್ಲಿ ಬೆಳಗುತ್ತಿವೆ. ನೂರಾರು ಕೋಟಿ ಹಣವನ್ನು ಕ್ಷೇತ್ರಕ್ಕೆ ತಂದು ದಿನನಿತ್ಯ ಜನಪರ ಕೆಲಸಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಕೆ.ಎಸ್.ಆರ್.ಟಿ.ಸಿ. ನಿಲ್ದಾಣ, ಹೊಸ ಸಂತೆ ಮೈದಾನ, ಇಂಜಿನಿಯರಿಂಗ್ ಕಾಲೇಜು, ಎಸಿ ಕಛೇರಿ, ಪ್ರವಾಸ ಮಂದಿರ, ರಂಗಮಂದಿರ, ನಿರುದ್ಯೋಗ ಯುವಕರಿಗೆ ಉದ್ಯೋಗಮೇಳ, ಪ್ರತಿ ಗ್ರಾಮಗಳಲ್ಲಿ ಸಿಸಿ ರಸ್ತೆ, ಸಮುದಾಯ ಭವನಗಳು, ನಗರದ ರಾಜಬೀದಿಯಲ್ಲಿ ಅಂಬೇಡ್ಕರ್ ಪ್ರತಿಮೆ, ವಾಲ್ಮೀಕಿ ಪ್ರತಿಮೆ, ಜಗಜೀವನರಾಂ ಪ್ರತಿಮೆ,

ನೆಹರೂ ಪ್ರತಿಮೆ ಅನೇಕ ಜನಪ್ರಿಯ ಕೆಲಸಗಳನ್ನು ಮಾಡಿ ಜನಪ್ರಿಯ ನಾಯಕರಾಗಿದ್ದಾರೆ. ನಗರದಲ್ಲಿ ಶಾಸಕರ ಭವನವನ್ನು ನಿರ್ಮಿಸಿದ್ದಾರೆ. ಕ್ರೀಡಾಪ್ರೇಮಿಗಳಿಗೆ ಕ್ರೀಡಾಂಗಣ, ಜಗಳೂರಜ್ಜನ ದೇವಸ್ಥಾನದ ಹತ್ತಿರ ವಾಲ್ಮೀಕಿ ಭವನ, ಹೀಗೆ ಸೂರ್ಯನಷ್ಟೇ ನಮ್ಮ ಕಣ್ಣಿ ಮುಂದೆ ಅವರು ಮಾಡಿದ ಕೆಲಸಗಳು ಪ್ರಜ್ವಲಿಸುತ್ತಾ ಇವೆ. ಅವರು ಒಬ್ಬ ಜನಪ್ರಿಯ ಶಾಸಕ ಎಂಬುದರಲ್ಲಿ ಎರಡು ಮಾತಿಲ್ಲ.

3. **ಕೆ.ಪಿ ಭೂತಯ್ಯ,** ರಾಜ್ಯ ರೈತ ಮುಖಂಡರು, ಚಳ್ಳಕೆರೆ

ಜನ ಮರೆಯಲಾರದಂತಹ ಕೆಲಸಗಳನ್ನು ಮಾಡಿ ಇತಿಹಾಸ ನಿರ್ಮಿಸಿದ್ದಾರೆ:- ಚಳ್ಳಕೆರೆ ಶಾಸಕರಿಗೆ ಅಭಿವೃದ್ಧಿ ಕೆಲಸಗಳಲ್ಲಿ ಬದ್ಧತೆಯಿದೆ. ಶಾಶ್ವತ ಕೆಲಸಗಳನ್ನು ಇಲಾಖೆಗಳಿಂದ ಮಾಡಿಸಿರುವುದು ಒಂದು ಉತ್ತಮವಾದ ಬೆಳವಣಿಗೆ. ಸರ್ವಾಂಗೀಣ ಪ್ರಗತಿ ಕಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಮುಖ ಸಮಸ್ಯೆಗಳಾದ ಬಗರ್‌ಹುಕುಂ ಹಕ್ಕುಪತ್ರ ನೀಡುವಲ್ಲಿ ಶ್ರೀಯುತರು ವಿಫಲವಾಗಿದ್ದಾರೆ. ಹಣವಿಲ್ಲದೆ ಜನಸಾಮಾನ್ಯರ ಕೆಲಸಗಳು ಆಗುತ್ತಿಲ್ಲ. ಇದರಿಂದ ಗೊತ್ತಾಗುತ್ತದೆ.  ಅಧಿಕಾರಿಗಳು ಅವರ ಮಾತು ಕೇಳುತ್ತಿಲ್ಲ ಎಂದು. ಮರಳುದಂಧೆ ದಾಸೋಹದಂತೆ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ಇದನ್ನು ಮಟ್ಟ ಹಾಕುವಲ್ಲಿ ಶಾಸಕರು ವಿಫಲವಾಗಿದ್ದಾರೆ. ಅಭಿವೃದ್ಧಿಯ ವಿಚಾರದಲ್ಲಿ ಜಿಲ್ಲೆಯ ಇತರೆ ಶಾಸಕರಿಗಿಂತ ಹೆಚ್ಚು ಕೆಲಸ ಮಾಡಿ ತೋರಿಸಿದ್ದಾರೆ. ರೈತರ ಕಷ್ಟಗಳನ್ನು ಅರಿತು ಗೋಶಾಲೆ ತೆರೆದು ರೈತರ ಮನಸ್ಸು ಗೆದ್ದಿದ್ದಾರೆ. ಜನ ಮರೆಯಲಾಗದಂತಹ ಕೆಲಸ ಮಾಡಿ ಇತಿಹಾಸ ನಿರ್ಮಿಸಿದ್ದಾರೆ. ಉದ್ಯೋಗಮೇಳ ಮಾಡಿ ವಿದ್ಯಾವಂತರ ಮನ ಗೆದ್ದಿದ್ದಾರೆ. ಕ್ರೀಡಾಂಗಣಕ್ಕೆ 50 ಕೋಟಿ ಹಣ ತಂದು ಕ್ರೀಡಾಭಿಮಾನಿಗಳಿಗೆ ಹತ್ತಿರವಾಗಿದ್ದಾರೆ. ಆದರೆ ಅಧಿಕಾರಿಗಳ ಹಿಡಿತ ಸಾಧಿಸಲು ಶ್ರೀಯುತರು ವಿಫಲವಾಗಿದ್ದಾರೆ. ಮುಂದೆ ಎಲ್ಲವೂ ಸರಿ ಹೋಗಬಹುದೆಂಬ ನಂಬಿಕೆ ನನಗಿದೆ.

4. **ಓಬಳೇಶ್,** ಜಿಲ್ಲಾ ಪಂಚಾಯ್ತಿ ಸದಸ್ಯರು, ತಳಕು.

ನಾನು ರಘುಮೂರ್ತಿಯವರನ್ನು ರಾಜಕೀಯವಾಗಿ ಬಹಳ ಪ್ರೀತಿಸುತ್ತೇನೆ:- ನಾನು ರಾಜಕೀಯ ಕ್ಷೇತ್ರದಲ್ಲಿ ಅಷ್ಟೇನೂ ಪರಿಣಿತನಲ್ಲ. ಆದರೆ ಒಬ್ಬ ರಾಜಕೀಯ ವ್ಯಕ್ತಿ, ಅವರ ಗುಣ ಸಾಮರ್ಥ್ಯವನ್ನು ತಿಳಿಯುವಷ್ಟು ಅರಿವು ನನಗಿದೆ. ರಾಜಕೀಯ ಕ್ಷೇತ್ರದಲ್ಲಿ ಯಾರೂ ಪರಿಣಿತರಲ್ಲ ಎಂಬುದನ್ನು ನಾನು ಅರಿಯಬಲ್ಲೆ. ಒಬ್ಬ ವ್ಯಕ್ತಿ ಮಾಡುವ ಕೆಲಸ, ಅಭಿವೃದ್ಧಿ, ಆಡಳಿತದ ವೈಖರಿ ಕಾಲಕ್ರಮೇಣ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರಿಗೆ ತಿಳಿಯುತ್ತದೆ. ಶ್ರೀಯುತರು ಒಂದು ಕಾಲದಲ್ಲಿ ಬಿ.ಇ. ಪದವಿ ಪಡೆದು ಉನ್ನತ

ಅಧಿಕಾರಿಯಾಗಿ ಸೇವೆ ಸಲ್ಲಿಸಿ ರಾಜಕೀಯ ಕ್ಷೇತ್ರಕ್ಕೆ ಬಂದು ಜನಪ್ರಿಯ ಶಾಸಕರಾಗಿ ಜನರ ಮನಸ್ಸಿಗೆ ಹತ್ತಿರವಾಗಿದ್ದಾರೆ. ಅದೇಕೋ ರಾಜಕೀಯ ಅವರನ್ನು ಎಳೆದು ತಂದಿದೆ. ಅತಿ ಕಡಿಮೆ ಅವಧಿಯಲ್ಲಿ ನಗರವನ್ನು ಜನ ನಿಂತು ನೋಡುವಂತೆ ಅಭಿವೃದ್ಧಿಪಡಿಸಿದಾರೆ. ನನ್ನ ಅನಿಸಿಕೆಯ ಪ್ರಕಾರ ಪಕ್ಷಭೇದವಿಲ್ಲದ ಜಾತಿಭೇದವಿಲ್ಲದ ಸರಳತೆಗೆ ಹೆಸರಾದ ಶಾಸಕರು ಮೌನ ಅಭಿವೃದ್ಧಿಕಾರರು. ನಗರವನ್ನು ಸುಂದರವಾಗಿ ನಿರ್ಮಿಸಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇವರು ದಿಟ್ಟ ಹೆಜ್ಜೆ ಇಟ್ಟಿರುವುದು ಸ್ವಾಗತಾರ್ಹ. ನನಗೆ ಅಪಾರವಾದ ಪ್ರೀತಿ ಇದೆ. ಚಳ್ಳಕೆರೆ ಕ್ಷೇತ್ರದ ಜನತೆ ಹೇಳುವಂತೆ ಮುಂದಿನ ದಿನಗಳಲ್ಲಿ ಇವರೇ ಶಾಸಕರಾಗಿ ಬರುತ್ತಾರೆ ಎಂದು ಮಾತನಾಡುತ್ತಾರೆ. ಅಷ್ಟರ ಮಟ್ಟಿಗೆ ಕ್ಷೇತ್ರದ ಜನರ ಹೃದಯ ಗೆದ್ದಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಅನೇಕ ರಾಜಕಾರಣಿಗಳ ವಿರೋಧದ ನಡುವೆ ಪಕ್ಷವನ್ನು ಸಂಘಟಿಸಿ ಶಾಸಕರಾದರು. ಅಧಿಕಾರಕ್ಕಿಂತ ಪಕ್ಷ ಮುಖ್ಯ ಎಂಬ ಸಿದ್ಧಾಂತದವರು. ರಾಜಕೀಯ ಎಂದ ಮೇಲೆ ಪರ ವಿರೋಧ ಇದ್ದೇ ಇರುತ್ತೆ, ಅದನ್ನು ಮೌನವಾಗಿ ಮೆಚ್ಚಿ ರಾಜಕೀಯ ಮಾಡುತ್ತಾ ಬಂದಿದ್ದಾರೆ. ಅನೇಕ ಯುವಕರು ರಾಜಕಾರಣಕ್ಕೆ ಬರಬೇಕಾದರೆ ರಘುಮೂರ್ತಿಯವರಂತೆ ರಾಜಕೀಯ ನಾಯಕರ ಆಶೀರ್ವಾದ ಬೇಕು. ನಿಷ್ಠೆ ಪ್ರಾಮಾಣಿಕತೆಗೆ ಸದಾ ಬೆಂಬಲ ನೀಡುವ ವ್ಯಕ್ತಿಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ.

5. **ಡಿ.ಕೆ ಕಾಟಯ್ಯ,** ಸಮುದಾಯದ ಹಿರಿಯರು, ಚಳ್ಳಕೆರೆ

ಜಿಲ್ಲೆಯ ಜನಪ್ರಿಯ ಶಾಸಕರು ಎಂದರೆ ತಪ್ಪಾಗಲಾರದು:- ಚಳ್ಳಕೆರೆ ನಗರದಲ್ಲಿ ಸಾಕಷ್ಟು ಕೆಲಸಗಳು ಆಗಬೇಕಿದೆ. ಅವುಗಳನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ. ಸಮುದಾಯವನ್ನು ಎಂದೂ ಕೈ ಬಿಡಬೇಡಿ, ಸಮುದಾಯದಿಂದ ನೀವು ಶಾಸಕರಾಗಿದ್ದೀರಿ ಎಂದು ಮನವರಿಕೆ ಮಾಡಿದ್ದೇನೆ. ಅವರೊಬ್ಬ ಅಭಿವೃದ್ಧಿಯ ಕನಸುಗಾರ. ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನವನ್ನು ತಂದು ಕೆಲಸ ಮಾಡಿಸುವುದು ಅಷ್ಟು ಸುಲಭದ ಮಾತಲ್ಲ. 40 ವರ್ಷ ಆಡಳಿತ ನಡೆಸಿದ ಶಾಸಕರು ಎದೆ ಮುಟ್ಟಿ ನೋಡಿಕೊಳ್ಳಬೇಕು. ಅವರನ್ನು ಅಭಿವೃದ್ಧಿಯಲ್ಲಿ ಹಿಂದಿಕ್ಕಲು ಮುಂದೆ ಬರುವ ಶಾಸಕರು ಕನಸು ಕಾಣಬೇಕಷ್ಟೆ. ಅಭಿವೃದ್ಧಿಯ ಇನ್ನೊಂದು ಹೆಸರೇ ರಘುಮೂರ್ತಿಯವರು.

### 4.3. ಮೊಳಕಾಲ್ಮೂರು ಶಾಸಕರ ಪರಿಚಯ ಮತ್ತು ಕೊಡುಗೆಗಳು

ರಾಜ್ಯ ರಾಜಕೀಯದಲ್ಲಿ ಪರಿಶಿಷ್ಟ ಪಂಗಡ ನಾಯಕರ ಪಾತ್ರವನ್ನು ತಿಳಿಯಲು ಮೊಳಕಾಲ್ಮೂರು ಕ್ಷೇತ್ರದ 13 ಮತ್ತು 14ನೇ ವಿಧಾನಸಭೆಯಲ್ಲಿ ಗೆದ್ದಂತಹ ಶಾಸಕರ ಕಿರುಪರಿಚಯ ಮತ್ತು ಕೊಡುಗೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

#### 4.3.1. ಶ್ರೀಯುತ ಎನ್.ವೈ. ಗೋಪಾಲಕೃಷ್ಣ

ಸೋಲಿಲ್ಲದ ಸರದಾರ ಚತುರ ರಾಜಕಾರಣಿ ಎಂದೇ ಪ್ರಸಿದ್ಧರಾದ ಶ್ರೀ ಎನ್.ವೈ. ಗೋಪಾಲಕೃಷ್ಣ ಅವರು ದಿನಾಂಕ 01.07.1952ರಲ್ಲಿ ಮೊಳಕಾಲ್ಮೂರು ತಾಲ್ಲೂಕಿನ, ರಾಂಪುರದಲ್ಲಿ ಜನಿಸಿದರು. ಇವರ ತಂದೆ ಯಲ್ಲಪ್ಪ ತಾಯಿ ಯಲ್ಲಮ್ಮ. ಶ್ರೀಯುತರು ಚಿಕ್ಕ ವಯಸ್ಸಿನಲ್ಲೇ ತುಂಬ ಚೂಟಿಯಾಗಿದ್ದರೆಂಬುದನ್ನು ರಾಂಪುರ ಗ್ರಾಮದಿಂದ ಹಿರಿಯರಿಂದ ತಿಳಿಯಲಾಗಿದೆ. ಇವರು ತಮ್ಮ ಪ್ರಾಥಮಿಕ, ಮಾಧ್ಯಮಿಕ, ಪದವಿ ಪೂರ್ವ ಶಿಕ್ಷಣವನ್ನು ರಾಂಪುರದಲ್ಲೇ ಮುಗಿಸಿದರು. ನಂತರ ಪದವಿ ಮತ್ತು ಎಂ.ಬಿ.ಎ ಪದವಿಯನ್ನು ಪಡೆದರು. ಇವರು ವಾಲ್ಮೀಕಿ ನಾಯಕ ಜನಾಂಗಕ್ಕೆ ಸೇರಿದವರಾಗಿದ್ದಾರೆ. 1997ರಲ್ಲಿ ವಿಧಾನಸಭೆಗೆ ಆಯ್ಕೆಯಾಗುವ ಮುನ್ನ ಅನೇಕ ಸಂಘಟನೆಗಳಲ್ಲಿ, ಹೋರಾಟಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡಿದ್ದಾರೆ. 11.5.1986ರಂದು ಶ್ರೀಮತಿ ಗಾಯಿತ್ರಿ ಅವರನ್ನು ವಿವಾಹವಾದರು. ಶ್ರೀಯುತರು ಸರಳತೆ, ಬುದ್ಧಿ ಜೀವಿ ಆಗಿದ್ದರಿಂದ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ, ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ ಒಂದು ಬಾರಿ ಹಾಗೂ ಪ್ರಸ್ತುತ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ರಾಜಕೀಯ ಸ್ಥಾನಮಾನವನ್ನು ಹೊಂದಿರುತ್ತಾರೆ.

#### ಸ್ಥಾನಮಾನಗಳು

ಶ್ರೀಯುತ ಎನ್.ವೈ. ಗೋಪಾಲಕೃಷ್ಣ ಅವರು ರಾಜಕೀಯವಾಗಿ ಸಾಕಷ್ಟು ಜನಪ್ರಿಯರಾದವರು. ಇವರು ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನಗಳು ಅಲಂಕರಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. 1997–1999ರವರೆಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆಯಾದರು. ನಂತರ 1999–2004ರವರೆಗೆ ಅದೇ ವಿಧಾನಸಭಾ ಕ್ಷೇತ್ರದಿಂದ ಮರು ಆಯ್ಕೆಯಾಗಿದ್ದರು, ತದನಂತರ 2004–2007ರವರೆಗೆ ಮತ್ತೆ ಅದೇ ಕ್ಷೇತ್ರದಿಂದ ಮೂರನೇ ಬಾರಿಗೆ ಆಯ್ಕೆಯಾಗಿ ಸೈ ಎನಿಸಿಕೊಂಡಿದ್ದರು. 2005–2007ರವರೆಗೆ ಕರ್ನಾಟಕ ವಿಧಾನಸಭೆಯ

ಉಪಸಭಾಧ್ಯಕ್ಷರಾಗಿಯೂ ಕೂಡ ಕಾರ್ಯವನ್ನು ನಿರ್ವಹಿಸಿದ್ದಾರೆ. 2008–2013ರವರೆಗೆ ಇದೇ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಆಯ್ಕೆಯಾಗಿದ್ದರು.

ಶ್ರೀಯುತರು ಓದುವುದು, ಸಾರ್ವಜನಿಕ ಸೇವೆಗಳಲ್ಲಿ ತೊಡಗಿಸಿಕೊಳ್ಳುವುದು, ಕಾರ್ಯಕ್ರಮಗಳ ಆಯೋಜನೆ ಮತ್ತು ವಿಭಿನ್ನ ಸಂಘಟನಾ ಕೌಶಲ್ಯವನ್ನು ಹೊಂದಿದ್ದಾರೆ. ಕರ್ನಾಟಕ ಮತ್ತು ಭಾರತದಲ್ಲಷ್ಟೇ ಅಲ್ಲದೇ ವಿದೇಶಿ ಪ್ರವಾಸ ಅದರಲ್ಲಿ ಚೀನಾ ಪ್ರವಾಸ(4 ರಾಜ್ಯಗಳು), ಯುರೋಪ್(12 ರಾಜ್ಯಗಳು)ನಲ್ಲಿ ಭಾಗವಹಿಸಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಶ್ರಮಿಸಿದ್ದಾರೆ. "ರಸ್ತೆಗಳ ಅಭಿವೃದ್ಧಿಯ ಹರಿಕಾರ" ಎಂದು ಸಾರ್ವಜನಿಕರು ಅಭಿಪ್ರಾಯ ಪಡುತ್ತಾರೆ.

**ಮೊಳಕಾಲ್ಮೂರು ಶಾಸಕರಾಗಿ ಎನ್.ವೈ. ಗೋಪಾಲಕೃಷ್ಣ ಅವರ ಕೊಡುಗೆಗಳು**

ಶ್ರೀಯುತ ಎನ್.ವೈ. ಗೋಪಾಲಕೃಷ್ಣ ಅವರು ಒಳ್ಳೆಯ ಶಿಕ್ಷಣವನ್ನು ಪಡೆದಿದ್ದರಿಂದ ಪ್ರಚಲಿತ ವಿಧ್ಯಮಾನಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಹೊಂದಿರುವುದರ ಜೊತೆಗೆ ಸರಳತೆ, ಜ್ಞಾನ, ಸಜ್ಜನಿಕೆಗೆ ಹೆಸರಾದವರು. ಮೂಲತಃ ಇವರು ಗ್ರಾಮೀಣ ಪ್ರದೇಶದಲ್ಲಿ ಜನಿಸಿದ್ದರಿಂದ ಗ್ರಾಮೀಣ ಬಡಜನರ ಸಮಸ್ಯೆಗಳನ್ನು ಅರಿತುಕೊಂಡಿದ್ದಾರೆ. ಹಾಗಾಗಿ 17–18 ವರ್ಷಗಳ ಕಾಲ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಸಾಕಷ್ಟು ಬೆಳವಣಿಗೆಗೆ ಕಾರಣಿಭೂತರಾಗಿದ್ದಾರೆ. ಎಲ್ಲಾ ಜನಾಂಗಗಳ ಶ್ರೇಯಸ್ಸು ಬಯಸಿದ್ದರು

ಮೂಲತಃ ನಾಯಕ ಜನಾಂಗದ ಶಾಸಕರಾಗಿರುವ ಎನ್.ವೈ. ಗೋಪಾಲಕೃಷ್ಣ ಅವರು ಕೇವಲ ವಾಲ್ಮೀಕಿ ನಾಯಕ ಜನಾಂಗಕ್ಕೆ ಅಷ್ಟೇ ಶ್ರೇಯಸ್ಸನ್ನು ಬಯಸದೇ ಸಾಮೂಹಿಕವಾಗಿ ಎಲ್ಲಾ ಜನಾಂಗಗಳ ಶ್ರೇಯಸ್ಸನ್ನು ಬಯಸುವುದು ನನ್ನ ಇಚ್ಛೆ. ಏಕೆಂದರೆ ಸರ್ವಧರ್ಮ ಸಮನ್ವಯ ರಾಷ್ಟ್ರ ರಾಜ್ಯವಾಗಿರುವುದರಿಂದ ಎಲ್ಲಾ ಜಾತಿ ಮತ್ತು ಧರ್ಮಗಳನ್ನು ಸಮಾನವಾಗಿ ಕಾಣಬೇಕಾಗಿದೆ. ಆ ನಿಟ್ಟಿನಲ್ಲಿ ಎಲ್ಲಾ ಜನಾಂಗಗಳ ಅಭಿವೃದ್ಧಿಯಾಗಬೇಕಿದೆ ಎಂದು ಅದ್ಬುತವಾಗಿ ಪ್ರತಿಕ್ರಿಯಿಸಿದ್ದಾರೆ.

**1. ನಾಯ್ಕನಹಟ್ಟಿ ಹೋಬಳಿಯ ಅಭಿವೃದ್ಧಿಯ ಹರಿಕಾರ**

ಶ್ರೀಯುತರ ಅವಧಿಯಲ್ಲಿ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅತಿ ಹೆಚ್ಚು ಇರುವುದನ್ನು ಗಮನಿಸಿ ಸುಮಾರು 50ಲಕ್ಷದ ವೆಚ್ಚದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಹಾಗೂ 1 ಎಕರೆ ಜಮೀನನ್ನು ಕೊಡಿಸಿದ್ದು ಇವರ ಅದ್ಬುತ

ಕೊಡುಗೆಗಳಲ್ಲಿ ಒಂದಾಗಿದೆ. ತದ ನಂತರ ಪೋಲಿಸ್ ಠಾಣೆ ನಿರ್ಮಿಸಿದ್ದು ಇವರ ಅವಧಿಯಲ್ಲಿ ಎಂಬುದು ಗಮನಕ್ಕೆ ತಂದಿದ್ದಾರೆ. ಇದರ ಜೊತೆಗೆ ಸಾಕಷ್ಟು ಆರೋಗ್ಯ ಇಲಾಖೆಯಲ್ಲಿ ಸುಧಾರಣೆಗಳು ಮಾಡಿರುವುದು ತಿಳಿದು ಬರುತ್ತದೆ.

ನಂತರ ಸರ್ಕಾರಿ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟ ಕೀರ್ತಿಯು ಸಹ ಇವರದ್ದು. ಅದರ ಪಕ್ಕದಲ್ಲಿಯೇ ನಿರೀಕ್ಷಣಾ ಮಂದಿರವನ್ನು(ಐಬಿ) ಸ್ಥಾಪಿಸಿದ್ದು, ಚಿಕ್ಕಕೆರೆ ಅಭಿವೃದ್ಧಿ, ಕಟ್ಟೆ ಅಭಿವೃದ್ಧಿ, ರಸ್ತೆಗಳ ನಿರ್ಮಾಣ, ನಾಯ್ಕನಹಟ್ಟಿ–ಚಳ್ಳಕೆರೆ ಮಾರ್ಗ ರಸ್ತೆ ಅಭಿವೃದ್ಧಿ ಹಾಗೂ ನಾಯ್ಕನಹಟ್ಟಿ–ಹಾಯ್ಕಲ್ ರಸ್ತೆ ಅಭಿವೃದ್ಧಿ, ಮುಸ್ಟೂರ್ ರಸ್ತೆಯ ಅಭಿವೃದ್ಧಿಯೂ ಇವರ ಆಡಳಿತಾವಧಿಯಲ್ಲಿ ಕಂಡುಬರುತ್ತದೆ. ಹಾಗಾಗಿ ನಾಯ್ಕನಹಟ್ಟಿಯ ಅಭಿವೃದ್ಧಿ ಹರಿಕಾರರಾಗಿ ಕಾಣಿಸುತ್ತಾರೆ.

## 2. ಮೊಳಕಾಲ್ಮೂರು ತಾಲ್ಲೂಕನ್ನು ಮುಖ್ಯ ವಾಹಿನಿಗೆ ತಂದ ಶಾಸಕರು

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ತಾಲ್ಲೂಕು ಎನಿಸಿಕೊಂಡಿರುವ ಮೊಳಕಾಲ್ಮೂರು ತುಂಬಾ ಅಸ್ತವ್ಯಸ್ಥವಾಗಿತ್ತು. ಇಂತಹ ಸನ್ನಿವೇಶದಲ್ಲಿ ಶಾಸಕರಾಗಿ ಆಯ್ಕೆಯಾದ ಇವರು ಅಭಿವೃದ್ಧಿಯ ದೃಷ್ಟಿಯನ್ನಿಟ್ಟುಕೊಂಡು ಸರಿಯಾದ ಕ್ರಮಗಳನ್ನು ತೆಗೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಸುಮಾರು 25 ಲಕ್ಷ ರೂ.ಗಳನ್ನು ಇವರ ಆಡಳಿತದಲ್ಲಿ ಮೀಸಲಿಟ್ಟಿದ್ದರು. ಹಾಗೆಯೇ ಹಾನಗಲ್ ನಿಂದ ರಾಯದುರ್ಗದವರೆಗೆ ಜೋಡಿ ಮಾರ್ಗದ ನಿರ್ಮಾಣ, ಸರ್ಕಾರಿ ಪದವಿ ಪೂರ್ವ ಕಾಲೇಜ್ ಸ್ಥಾಪನೆ ಹಾಗೂ ಬಸ್ಸು ನಿಲ್ದಾಣವನ್ನು ನಿರ್ಮಾಣ ಮಾಡಿಸಿ ಕೊಟ್ಟಿದ್ದು ವಿಶೇಷವಾಗಿದೆ. ಈ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದರ ಜೊತೆಗೆ ಮೊಳಕಾಲ್ಮೂರು ತಾಲ್ಲೂಕನ್ನು ಮುಖ್ಯವಾಹಿನಿಗೆ ತರುವಲ್ಲಿ ಇವರ ಪಾತ್ರ ಬಹು ಮುಖ್ಯವಾದದ್ದು.

## 3. ಶಿಕ್ಷಣಕ್ಷೇತ್ರದಲ್ಲಿಯೂ ಸೈ ಎನಿಸಿಕೊಂಡವರು

ಎನ್.ವೈ. ಗೋಪಾಲಕೃಷ್ಣ ಅವರು ಶಾಸಕರಾಗಿದ್ದ ಸಂದರ್ಭದಲ್ಲಿ ಸುಮಾರು ಕಾಲೇಜುಗಳನ್ನು ಆರಂಭಿಸಿದ್ದು, ಅಲ್ಲದೇ ಅನೇಕ ರೀತಿಯ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಬಡ ಯುವ ಜನರಿಗೆ ಶಿಕ್ಷಣ ಕೊಡಿಸುವಲ್ಲಿ ಅಪಾರವಾಗಿರುವಂತಹ ಪಾತ್ರ ವಹಿಸಿದ್ದಾರೆ. ತದ ನಂತರ ತಿಂಗಳಿಗೊಮ್ಮೆ ಕ್ಷೇತ್ರದಲ್ಲಿರುವ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಭೇಟಿನೀಡಿ ಮಕ್ಕಳ ಕುಶಲೋಪರಿಯನ್ನು ವಿಚಾರಿಸುತ್ತಿದ್ದು ವಿಶೇಷ. ಈ ನಿಟ್ಟಿನಲ್ಲಿ ಎಷ್ಟೊ

ಬಡಮಕ್ಕಳಿಗೆ ವಿಶೇಷ ಹಾಗೂ ಉಚಿತಶಿಕ್ಷಣ ಕೊಡಿಸುವುದರ ಮೂಲಕ ಶಿಕ್ಷಣಕ್ಷೇತ್ರದಲ್ಲಿಯೂ ಸೈ ಎನಿಸಿಕೊಂಡಿರುವುದು ಅವರ ವಿಶೇಷತೆಗೆ ಕಾರಣವಾಗಿದೆ.

**4. ವಾಲ್ಮೀಕಿ ನಾಯಕ ಸಮುದಾಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಬುದ್ಧಿಜೀವಿ**

ತಮ್ಮ ಸಮುದಾಯದ ಬಗ್ಗೆ ಹಾಗೂ ಅದರ ಏಳ್ಗೆಯ ಬಗ್ಗೆ ಅಪಾರವಾಗಿರುವಂತಹ ಕಾಳಜಿಯನ್ನು ಹೊಂದಿದ್ದರು. ಹಾಗಾಗಿ ಹೋಬಳಿಗಳಲ್ಲಿ ಸುಮುದಾಯ ಭವನಗಳನ್ನು ಸ್ಥಾಪಿಸುವುದರ ಮೂಲಕ ಸಮಾಜದ ಬಗ್ಗೆ ಅಪಾರವಾದಂತಹ ಅಭಿವೃದ್ಧಿಗೆ ಶ್ರಮಮಿಸಿದ ನಾಯಕರೆಂದರೆ ತಪ್ಪಾಗಲಾರದು.

**5. ವಾಲ್ಮೀಕಿ ಪ್ರಶಸ್ತಿಯ ಆಯ್ಕೆಸಮಿತಿ ರಚನೆಗೆ ಶಿಫಾರಸ್ಸು**

ಪ್ರತಿ ವರ್ಷ ಕರ್ನಾಟಕ ಸರ್ಕಾರದ ಕಡೆಯಿಂದ ನಾಯಕ ಸಮುದಾಯದಲ್ಲಿ ಅಪಾರ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಗುರುತಿಸಿ ಅವರಿಗರ ವಾಲ್ಮೀಕಿ ಪ್ರಶಸ್ತಿ ನೀಡುತ್ತಿದ್ದು, ಯಾವ ಆಧಾರದ ಮೇಲೆ ಕೊಡುತ್ತಿದ್ದಾರೆ? ನಮ್ಮ ಸಮುದಾಯದಲ್ಲಿ ಅನೇಕ ಬುದ್ಧಿಜೀವಿಗಳಿದ್ದಾರೆ. ಜೊತೆಗೆ ವೈದ್ಯರು, ಪ್ರಾಧ್ಯಾಪಕರು ಇದ್ದಾರೆ. ಇಂತವರ ಸೇವೆಯನ್ನು ಪರಿಗಣಿಸುವ ಒಂದು ಸಮಿತಿ ರಚಿಸಬೇಕು. ಆ ಸಮಿತಿ ಯಾರಿಗೆ ಶಿಫಾರಸ್ಸು ಮಾಡುತ್ತದೋ ಅಂತವರಿಗೆ ಪ್ರಶಸ್ತಿ ನೀಡುವುದು ಸೂಕ್ತ ಎಂದು ಶಿಫಾರಸ್ಸು ಮಾಡಿದರು.

**6. ಸಮುದಾಯದ ಸಂಘಟನೆಯು ಇನ್ನು ಬಲಗೊಳ್ಳಬೇಕಿದೆ**

ಎನ್.ವೈ. ಗೋಪಾಲಕೃಷ್ಣ ಅವರ ದೃಷ್ಟಿಯಲ್ಲಿ ಸಮುದಾಯದವರ ಸಂಘಟನೆಗಳು ಕೇವಲ ಕೆಲವು ವ್ಯಕ್ತಿಗಳ ಹಿಡಿತದಲ್ಲಿಯೇ ಆದ್ದರಿಂದ ಎಲ್ಲರೂ ಸಂಘಟನೆಯ ಮಹತ್ವವನ್ನು ಅರಿಯಬೇಕು. ನಮ್ಮ ಸಮುದಾಯದ ಸಂಘಟನೆಯು ಇನ್ನೂ ಹೆಚ್ಚು ಬಲಗೊಳ್ಳಬೇಕಿದೆ ಎಂದು ಪ್ರತಿಕ್ರಿಸಿರುವುದು ವಿಶೇಷ. ಇದರ ಜೊತೆಗೆ ಎಲ್ಲರೂ ಶಿಕ್ಷಣವಂತರಾಗಬೇಕು. ನಂತರ ಸಂಘಟನೆ ರೂಪಿಸಿ ತಮಗೆ ಬೇಕಾಗಿರುವ ಬೇಡಿಕೆಯನ್ನು ಹೋರಾಟದ ಮೂಲಕ ನೆರೆವೇರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಂಘಟನೆಗಳು ಕಾರ್ಯ ಪ್ರವೃತ್ತಿ ಆಗಬೇಕಿದೆ.

## ಎನ್.ವೈ. ಗೋಪಾಲಕೃಷ್ಣರವರ ಬಗ್ಗೆ ಸಾರ್ವಜನಿಕರ ಅಭಿಪ್ರಾಯ

1. **ಬಂಗಾರಯ್ಯ,** ಬೋಸೆದೇವರಹಟ್ಟಿ, ಕಾಂಗ್ರೆಸ್ ಹಿರಿಯ ಮುಖಂಡರು

ಬುದ್ಧಿಜೀವಿ ಎನ್.ವೈ.ಜಿ:- ಎನ್.ವೈ ಗೋಪಾಲಕೃಷ್ಣ ರವರು ತುಂಬಾ ಬುದ್ಧಿಜೀವಿ, ಸರಳತೆಗೆ ಹೆಸರಾದವರು, ರಾಜಕೀಯದಲ್ಲಿ ತುಂಬಾ ಅನುಭವವಿರುವ ವ್ಯಕ್ತಿ ಹಾಗೂ ಸೌಮ್ಯ ಸ್ವಭಾವದವರು ಇವರು ನಮ್ಮ ಕ್ಷೇತ್ರದಲ್ಲಿ ಸುಮಾರು 19-20 ವರ್ಷಗಳ ಕಾಲ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವರ ಆಡಳಿತದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಕ್ಷೇತ್ರವು ಕಂಡಿದೆ. ರಸ್ತೆಗಳ ಡಾಂಬಾರಿಕರಣ, ಸಮುದಾಯ ಭವನಗಳ ನಿರ್ಮಾಣ, ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನರಿಗೆ ಒಳ್ಳೆಯ ಆಡಳಿತಗಾರನಾಗಿದ್ದರು.

2. **ಮುನ್ನಾಸಾಬ್,** ಕಾಂಗೆಸ್ ಮುಖಂಡರು, ನಾಯ್ಕನಹಟ್ಟಿ

ನಿರಂತರ ಜ್ಯೋತಿ ತಂದು ಕೊಟ್ಟ ಭಾಗ್ಯವಂತ:- ಎನ್.ವೈ ಗೋಪಾಲಕೃಷ್ಣ ಅವರು ಸತತವಾಗಿ ಸುಮಾರು ಎರಡು ದಶಕಗಳ ಕಾಲ ಕ್ಷೇತ್ರದಲ್ಲಿ ಹಿಡತ ಸಾಧಿಸಿದ್ದರು. ಮುಖ್ಯವಾಗಿ ರಸ್ತೆ ಜೋಡಣೆ, ಡಾಂಬಾರಿಕರಣಕ್ಕೆ ಒತ್ತು ಕೊಟ್ಟರು. ದಿನದ 24 ಗಂಟೆ ನಿರಂತರ ವಿದ್ಯುತ್ ಕಲ್ಪಿಸಿದ್ದು ಇವರ ಬಹುದೊಡ್ಡ ಕೊಡುಗೆಯಾಗಿದೆ.

3. **ತಿಪ್ಪೇಸ್ವಾಮಿ,** ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯರು, ಎನ್. ಮಹದೇವಪುರ

ಲೋಕೋಪಯೋಗಿ ಕ್ಷೇತ್ರದ ಅಭಿವೃದ್ಧಿ ಹರಿಕಾರ:- ಶ್ರೀಯುತ ಎನ್.ವೈ ಗೋಪಾಲಕೃಷ್ಣ ಅವರು ನಾಲ್ಕು ಬಾರಿ ಮೊಳಕಾಲ್ಮೂರು ವಿಧಾನಸಭೆಗೆ ಆಯ್ಕೆಗೊಂಡಿದ್ದು ವಿಶೇಷ. ಇವರ ಆಡಳಿತದ ಅವಧಿಯಲ್ಲಿ ರಸ್ತೆ ಜೋಡಣೆ ಮತ್ತು ಡಾಂಬರೀಕರಣಗೊಂಡಿದ್ದು ವಿಶೇಷ. ಲೋಕೋಪಯೋಗಿ ಕ್ಷೇತ್ರದ ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಸರಳ ಸಜ್ಜಿನಿಕೆ, ಬುದ್ಧಿಜೀವಿ ರಾಜಕಾರಣಿ.

4. **ಕಾಕಿ ಸೂರಯ್ಯ,** ಮುಖಂಡರು, ಓಬಯ್ಯನಹಟ್ಟಿ

ಸಚಿವನಾಗುವ ಕನಸು ಕನಸಾಗಿಯೇ ಉಳಿಯಿತು:- ಸುಧೀರ್ಘ ರಾಜಕೀಯ ಕ್ಷೇತ್ರದಲ್ಲಿ ಛಾಪನ್ನು ಮೂಡಿಸಿದ ಎನ್.ವೈ ಗೋಪಾಲಕೃಷ್ಣ ಅವರಿಗೆ ಸಚಿವ ಸ್ಥಾನ ಸಿಗಬೇಕಿತ್ತು. ಆದರೆ ಕಾರಣಾಂತರಗಳಿಂದ ಸಚಿವರಾಗುವ ಕನಸು ಕನಸಾಗಿಯೇ ಉಳಿದಿವೆ. ರಾಜಕೀಯದಲ್ಲಿ ತುಂಬಾ ಬುದ್ಧಿಜೀವಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದರು.

5. **ಕಾಟಯ್ಯ,** ಗ್ರಾಮಪಂಚಾಯ್ತಿ ಸದಸ್ಯರು, ಮಲ್ಲೂರಹಳ್ಳಿ

ಎನ್.ವೈ ಗೋಪಾಲಕೃಷ ಅವರ ಅವಧಿಯಲ್ಲಿ ನಾಯ್ಕನಹಟ್ಟಿಯಲ್ಲಿ ಆಸ್ಪತ್ರೆ, ಐಬಿ, ಪೊಲೀಸ್ ಠಾಣೆ ನಿರ್ಮಾಣ ಮಾಡುವಲ್ಲಿ ಅವರ ಪಾತ್ರ ಅನನ್ಯವಾಗಿದೆ ಎಂದಿದ್ದಾರೆ.

### 4.3.2. ಎಸ್. ತಿಪ್ಪೇಸ್ವಾಮಿ

ಜನಪ್ರಿಯ ಶಾಸಕರೆಂದರೆ ಖ್ಯಾತರಾಗಿದ್ದ ಶ್ರೀ ಎಸ್. ತಿಪ್ಪೇಸ್ವಾಮಿಯವರು 12.11.1949ರಲ್ಲಿ ನೇರಲಗುಂಟೆ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಸಣ್ಣ ಸೂರಯ್ಯ, ತಾಯಿ ಪಾಪಮ್ಮ. ಇವರು ತಮ್ಮ ಪ್ರೌಢಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲೇ ಮುಗಿಸಿದರು. ನಂತರ ಪದವಿಪೂರ್ವ ಶಿಕ್ಷಣವನ್ನು ಚಳ್ಳಕೆರೆ ನಗರದಲ್ಲಿ ಮುಗಿಸಿದ್ದು, ಪದವಿ ಮತ್ತು ಬಿ.ಇಡಿ. ಪದವಿಯನ್ನು ಪಡೆದು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. ಸುಮಾರು ವರ್ಷಗಳ ಕಾಲ ಶಿಕ್ಷಕಸೇವೆಯನ್ನು ಸಲ್ಲಿಸಿದ ಶ್ರೀಯುತರು ಸ್ವಯಂ ನಿವೃತ್ತಿಯನ್ನು ಪಡೆದು ರಾಜಕೀಯದಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು.

#### ರಾಜಕೀಯಕ್ಕೆ ಪ್ರವೇಶ

ಗ್ರಾಮೀಣ ಪ್ರದೇಶದಲ್ಲಿನ ಜನರ ನೋವುಗಳಿಗೆ ಸ್ಪಂಧಿಸಿದ ರಾಜಕಾರಣಿಗಳ ವಿರುದ್ಧ ಶಿಕ್ಷಕರಿದ್ದಾಗಲೇ ಹಲವಾರು ರೀತಿಯ ಆಕ್ರೋಶ, ಸಂಘಟನೆ ಹಾಗೂ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು. ಕೊನೆಗೂ ತಮ್ಮ ಶಿಕ್ಷಕ ಸ್ಥಾನಕ್ಕೆ ರಾಜೀನಾಮೆ ಕೊಡುವುದರ ಮೂಲಕ ರಾಜಕೀಯಕ್ಕೆ ಪ್ರವೇಶ ಮಾಡಿದರು. ನಂತರ ಗ್ರಾಮಪಂಚಾಯಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ತಾಲ್ಲೂಕುಪಂಚಾಯಿತಿ ಸದಸ್ಯರಾಗಿ ಮತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಕೊನೆಗೆ 2008ರಲ್ಲಿ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಭಾರತೀಯ ಜನತಾ ಪಕ್ಷದಿಂದ ಸ್ಪರ್ಧಿಸಿ ಸೋಲನ್ನು ಅನುಭವಿಸಿದರು. ನಂತರ ಅದೇ ಕ್ಷೇತ್ರದಿಂದ 2013ರ ವಿಧಾನಸಭಾ ಚುನಾವಣೆಯಲ್ಲಿ ಬಿ.ಎಸ್.ಆರ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಜಯವನ್ನು ಸಾಧಿಸಿದರು. ಇವರು ಸರಳ, ಸಜ್ಜನಿಕೆ, ರಾಜಕಾರಣಿ ಎಂದೇ ಖ್ಯಾತರಾದರು.

#### ಕುಟುಂಬದ ಹಿನ್ನೆಲೆ

ಶ್ರೀಯುತ ಎಸ್. ತಿಪ್ಪೇಸ್ವಾಮಿ ಅವರು ಸಣ್ಣ ಸೂರಯ್ಯ ಮತ್ತು ಪಾಪಮ್ಮನವರ ಮೊದಲನೇ ಮಗನಾಗಿ ಜನಿಸಿದರು. ಇವರಿಗೆ ನಾಲ್ಕು ಜನ ತಮ್ಮಂದಿರು ಇದ್ದರು. ಇವರೇ ಹಿರಿಯವರಾದ್ದರಿಂದ ಸಂಪೂರ್ಣ ಕುಟುಂಬದ ನಿರ್ವಹಣೆ ಇವರ ಮೇಲೆ ಇತ್ತು. ಎಸ್. ಮುತ್ತಯ್ಯ ಐ.ಎಫ್.ಎಸ್., ಎಸ್. ಮಂಜುನಾಥ, ಪ್ರಾಧ್ಯಾಪಕರು, ಎಸ್. ಚಂದ್ರಣ್ಣ

ಎಸ್.ಎ.ಟಿ ಲಾರಿ ಮಾಲೀಕರು ಹಾಗೂ ದಡ್ಡಯ್ಯ, ಗ್ರಾಮಪಂಚಾಯಿತಿ ಸದಸ್ಯರು ಇದ್ದಾರೆ. ಇವರಿಗೆ ಇಬ್ಬರು ಮಕ್ಕಳು ಹಾಗೂ ಇಬ್ಬರು ಮೊಮ್ಮಕ್ಕಳು ಇದ್ದಾರೆ.

**ವಿವಾಹ**

ಶ್ರೀಯುತರು ತಮ್ಮ ಸೋದರಿ ಸಂಬಂಧಿಗಳಲ್ಲಿ ಬೋಸೆದೇವರಹಟ್ಟಿಯ ಗ್ರಾಮದಲ್ಲಿ ಓಬಮ್ಮ ಎಂಬುವವರನ್ನು ವಿವಾಹವಾದರು. ದಾಂಪತ್ಯ ಜೀವನವು ಅನೋನ್ಯವಾಗಿತ್ತು. ಇವರಿಗೆ ಒಂದು ಗಂಡು ಹಾಗೂ ಮತ್ತೊಂದು ಹೆಣ್ಣು ಮಕ್ಕಳಿದ್ದಾರೆ. ಆದರೆ ಇವರ ಧರ್ಮಪತ್ನಿ ಹಾಗೂ ಹೆಣ್ಣು ಮಗಳು ಶ್ರೀಯುತರನ್ನು ಅಗಲಿದ್ದಾರೆ. ಆಗಾಗಿ ಶ್ರೀಯುತರು ಸರಳತೆ, ಸಜ್ಜನಿಕೆಗೆ ಹೆಸರಾಗಿ ಗ್ರಾಮೀಣ ಸೊಗಡಿನ ಸ್ವಭಾವವನ್ನು ಅನುಸರಿಸುತ್ತಿದ್ದಾರೆ.

**ಆಸಕ್ತಿಯ ವೃತ್ತಿ**

ಇವರು ಮೂಲತಃ ರೈತ ಕುಟುಂಬದಲ್ಲಿ ಜನಿಸಿದ ಇವರು ವ್ಯವಸಾಯ ಕುಟುಂಬದ ಕಸುಬಾಗಿದ್ದರಿಂದ ವ್ಯವಸಾಯವೆಂದರೆ ಇವರಿಗೆ ತುಂಬಾ ಆಸಕ್ತಿ, ಜೊತೆಗೆ ಶಿಕ್ಷಕರಾಗಿ ಪಾಠ ಪ್ರವಚನ ನೀಡುವುದು, ನಾಟಕ ರಂಗ ಕ್ಷೇತ್ರದಲ್ಲಿ ಅಭಿನಯ ಹಾಗೂ ರಾಜಕೀಯ ಸೇವೆಯಲ್ಲಿ ಆಸಕ್ತಿ ಇಷ್ಟೂ ಅಲ್ಲದೆ ಸಮಾಜಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡರು. ಸದ್ಯ ಶ್ರೀಯುತರು 2019ನೇ ವಿಧಾನಸಭಾ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡು ತಮ್ಮ ಸ್ವಗ್ರಾಮದಲ್ಲಿಯೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಶ್ರೀಯುತ ಎಸ್. ತಿಪ್ಪೇಸ್ವಾಮಿಯವರು ಮೊಳಕಾಲ್ಮೂರು ವಿಧಾನಸಭಾಕ್ಷೇತ್ರದ ಶಾಸಕರಾಗಿ ಮಾಡಿದ ಸಾಧನೆಗಳು**

**1. ಶಾಸಕ ತಿಪ್ಪೇಸ್ವಾಮಿ ಬರೀ ರಾಜಕಾರಣಿಯಲ್ಲ ಈ ನಾಡಿನ ಸಾಂಸ್ಕೃತಿಕ ದೊರೆ**

ಚಿತ್ರದುರ್ಗ ಜಿಲ್ಲೆ ಪ್ರಾಕೃತಿಕವಾಗಿ ಸತತ ಬರದ ಬವಣೆಗೆ ತುತ್ತಾದರೂ ಸಾಂಸ್ಕೃತಿಕವಾಗಿ ತನ್ನದೇ ಆದ ಸೇವೆಯನ್ನು ನಾಡಿಗೆ ನೀಡುತ್ತಾ ಬಂದಿದೆ. ಬುಡಕಟ್ಟು ಸಂಸ್ಕೃತಿಯ ತೊಟ್ಟಿಲು ಎಂಬ ಹೆಗ್ಗಳಿಕೆಗೆ ಪಾತ್ರವಾದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು ಮತ್ತು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕುಗಳು ಸತತ ಬರದ ಭೀಕರ ಜ್ವಾಲೆಯಲ್ಲಿ ಬೆಂದರೂ ತಮ್ಮ ಸಾಂಸ್ಕೃತಿಕ ಜಾನಪದ ಶ್ರೀಮಂತಿಕೆಯಿಂದ ನಾಡಿನ ಗಮನ ಸೆಳೆದಿದೆ. ಜಾನಪದ ಕಲೆಗಳಾದ ಕೋಲಾಟ, ಸೋಬಾನೆ ಪದ, ಲಾವಣಿ ಪದ, ಭಜನೆ ಪದ, ಸಾಂಸ್ಕೃತಿಕ ಕಲೆಗಳಾದ ಯಕ್ಷಗಾನ, ಬಯಲಾಟ, ಪೌರಾಣಿಕ ಐತಿಹಾಸಿಕ ಸಾಮಾಜಿಕ

ನಾಟಕಗಳಿಂದ ತನ್ನ ಕಲಾಶ್ರೀಮಂತಿಕೆಯನ್ನು ಉಳಿಸಿಕೊಂಡು ರೂಢಿಸಿಕೊಂಡು ಬಂದಿದೆ. ಬುಡಕಟ್ಟು ಸಂಸ್ಕೃತಿಯ ಎತ್ತಿನ ಹಬ್ಬ, ಮುತ್ತಯ್ಯಗಳ ಹಬ್ಬ, ಎಡೆಕಟ್ಟಿನ ಹಬ್ಬ, ಗುಗ್ಗರಿ ಹಬ್ಬಗಳ ಮೂಲಕ ತನ್ನ ಧಾರ್ಮಿಕ ಶ್ರದ್ಧೆಯನ್ನು ನಾಗರಿಕ ಜಗತ್ತಿಗೆ ಸಾರುತ್ತಾ ಬಂದಿದೆ. ಹಾಗೆಯೇ ಜಗಳೂರು ಪಾಪನಾಯಕ, ಗಾದಿ ಪಾಲನಾಯಕರಂಥಹ ಧಾರ್ಮಿಕ ಸಂತರನ್ನು ಈ ಜಗತ್ತಿಗೆ ನೀಡಿದೆ. ಬುಡಕಟ್ಟು ಸಂಸ್ಕೃತಿಯ ನಾಯಕ ಜನಾಂಗ ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಆಧುನಿಕ ನಾಗರಿಕತೆಯ ವೇಗಕ್ಕೆ ತಕ್ಕಂತೆ ಬದಲಾಗದಿರಬಹುದು. ಆದರೆ ದೈವಭಕ್ತಿಯಲ್ಲಿ, ದೇಶಸೇವೆಯಲ್ಲಿ, ಪ್ರಕೃತಿ ಜೊತೆಯಲ್ಲಿನ ಹೊಂದಾಣಿಕೆಯಲ್ಲಿ, ಗುರುಭಕ್ತಿಯಲ್ಲಿ ತನ್ನದೇ ಆದ ವಿಭಿನ್ನ ವಿಶೇಷತೆಯನ್ನು ಉಳಿಸಿಕೊಂಡು ಬಂದಿದೆ. ಶಿವನಿಗೆ ಎರಡು ಕಣ್ಣುಗಳನ್ನು ನೀಡಿದ ಬೇಡರ ಕಣ್ಣಪ್ಪ ತನ್ನ ಮುಗ್ಧ ನಿಷ್ಕಲ್ಮಶ ನಿಷ್ಕಳಂಕ ನಿರ್ಮಲ ಶುದ್ಧ ಭಕ್ತಿಯನ್ನು ಜಗತ್ತಿಗೆ ಸಾರಿದ್ದಾನೆ. ಗುರುಭಕ್ತಿಗೆ ಹೆಬ್ಬೆರಳನ್ನೇ ನೀಡಿದ ಬೇಡ ಏಕಲವ್ಯ, ಮೊಟ್ಟಮೊದಲ ಮಹಾಕಾವ್ಯವನ್ನು ರಚಿಸಿದಂತಹ ಮಹರ್ಷಿ ವಾಲ್ಮೀಕಿ, ಗುಹ, ಶಬರಿ, ವಿಜಯನಗರದ ಸಂಸ್ಥಾಪಕರಾದ ಅಕ್ಕ–ಬುಕ್ಕರು, ಕುಮಾರರಾಮ, ಸಿಂಧೂರಲಕ್ಷ್ಮಣ, ಚಿತ್ರದುರ್ಗದ ವೀರ ಮದಕರಿಗಳು, ಹಡಗಲಿಯ ರಾಮಕ್ಕ ಮತ್ತು ಬೇಡರು, ಎಲ್.ಜಿ ಹಾವನೂರ್, ತಿಪ್ಪೇಸ್ವಾಮಿ, ಶ್ರೀರಾಮುಲು, ಸತೀಶ್ ಜಾರಕಿಹೊಳಿ ಇನ್ನೂ ಅನೇಕ ಮಹಾನುಭಾವರು ಈ ನಾಡಿಗೆ ಸಮಾಜಕ್ಕೆ ಅಮೂಲ್ಯವಾದ ಸೇವೆ ಮಾಡುತ್ತಾ ಸಮುದಾಯಕ್ಕೆ ಹೆಮ್ಮೆ ತಂದುಕೊಟ್ಟಿದ್ದಾರೆ. ಇಂತಹ ಮಹಾನ್ ನಾಯಕರು; ದೇಶಪ್ರೇಮಿಗಳು, ಸ್ವಾತಂತ್ರ್ಯ ಪ್ರೇಮಿಗಳ ಸಾಲಿನಲ್ಲಿ ಗುರುತಿಸಿಕೊಳ್ಳುವ ಸಾಮರ್ಥ್ಯ, ಜನಾಂಗದ ಮೇಲೆ ಅಪಾರವಾದ ಪ್ರೀತಿ ಕಾಳಜಿಯುಳ್ಳ ಒಬ್ಬ ನಾಯಕರಿದ್ದಾರೆ. ಅವರು ಬೇರೆ ಯಾರೂ ಅಲ್ಲ, ಮೊಳಕಾಲ್ಮೂರು ಕ್ಷೇತ್ರದ ಜನಪ್ರಿಯ ಶಾಸಕರೆಂದೇ ಮನೆ ಮಾತಾಗಿರುವ ಶ್ರೀಯುತ ತಿಪ್ಪೇಸ್ವಾಮಿಯವರು. ಖಂಡಿತ ಇವರೊಬ್ಬ ಬರೀ ರಾಜಕಾರಣಿಯಲ್ಲ, ಈ ನಾಡಿನ ಸಾಂಸ್ಕೃತಿಕ ರಾಯಭಾರಿ, ದೀನ ದಲಿತರ ಗೆಳೆಯ ಅಭಿವೃದ್ಧಿಯ ಕನಸುಗಾರ. ಈ ನಾಡನ್ನು ಮುನ್ನಡೆಸುವ ಧೀಮಂತ ನಾಯಕ. ಜನರ ಮಧ್ಯೆ ಸದಾ ವಾಸಿಸುವ ಈ ನಾಯಕ ಬಡವರು, ಕೂಲಿಕಾರರು, ಬೇಸಾಯಗಾರರು, ಪಶು ಸಂಗೋಪನೆ, ಕುರಿ ಸಾಕುವವರು, ಅಲ್ಪಸಂಖ್ಯಾತ ದಲಿತರು ಹಿಂದುಳಿದವರು ಎಂದು ಭೇದಭಾವ ತೊರದವರು. ಬುಡಕಟ್ಟು ಸಂಸ್ಕೃತಿಯ ನಾಯಕ ಜನಾಂಗವೇ ಹೆಚ್ಚಿರುವ, ಜೀವನೋಪಾಯಕ್ಕಾಗಿ ಯಾವ ಮೂಲ ನೀರಾವರಿ ಕೈಗಾರಿಕಾ ಸೌಕರ್ಯವೂ ಇಲ್ಲದ, ಬರದ ನಾಡೆಂದೇ ಕರ್ನಾಟಕದ ಭೂಪಟದಲ್ಲಿ ಗುರುತಿಸಿಕೊಂಡಿರುವ ಮೊಳಕಾಲ್ಮೂರು ವಿಧಾನಸಭಾ ಶಾಸಕರಾಗಿ,ಜನಪ್ರಿಯತೆಯನ್ನು ಪಡೆದಿದ್ದಾರೆ. ಕ್ಷೇತ್ರದ ಅಭಿವೃದ್ಧಿಯ ಜೊತೆಗೆ

ಸಾಂಸ್ಕೃತಿಕ ಉತ್ಸವ ಜಾತ್ರೆ ನಾಟಕಗಳಿಂದ ಈ ಭಾಗದ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಈ ಭಾಗದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕರ್ನಾಟಕ ಉದ್ದಗಲಕ್ಕೂ ಸಾರುತ್ತಿದ್ದಾರೆ. ಶಾಸಕರಾದ ಮರುವರ್ಷವೇ ದಿನಾಂಕ 17–10–2010 ರಿಂದ 21–10–2014ರವರೆಗೆ ಬಿಜಿ ಕೆರೆಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸಹಕಾರದೊಂದಿಗೆ ಜಿಲ್ಲಾ ನಾಟಕೋತ್ಸವವನ್ನು ಏರ್ಪಡಿಸಿ ಉತ್ತಮ ನಾಟಕಗಳ ಪ್ರದರ್ಶನದೊಂದಿಗೆ ಕ್ಷೇತ್ರದ ಎಲ್ಲಾ ಕಲಾವಿದರನ್ನು ಗೌರವಿಸಿ ಸನ್ಮಾನಿಸಿದ ಹೆಗ್ಗಳಿಕೆ ಶ್ರೀಯುತ ತಿಪ್ಪೇಸ್ವಾಮಿಯವರಿಗೆ ಸಲ್ಲುತ್ತದೆ. ಚಿತ್ರದುರ್ಗ ಜಿಲ್ಲೆಯ ಕಲಾವಿದರ ಸಂಘದ ಅಧ್ಯಕ್ಷರಾಗಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದಾರೆ. ಸುಮಾರು 25 ವರ್ಷಗಳ ನಂತರ ನಾಯಕನಹಟ್ಟಿಯಲ್ಲಿ ವಡ್ನಳ್ಳಿ ಮಾರಮ್ಮನ ಜಾತ್ರೆಯನ್ನು ಎಲ್ಲಾ ಜನಾಂಗದ ಮುಖಂಡರನ್ನು ಒಂದುಗೂಡಿಸಿ ಯಾರಲ್ಲೂ ಭಿನ್ನಾಭಿಪ್ರಾಯ ಬರದಂತೆ ನಾಯಕತ್ವ ವಹಿಸಿ ವಿಜೃಂಭಣೆಯಿಂದ ಆಚರಿಸಿ ಮೊಳಕಾಲ್ಮೂರು ಕ್ಷೇತ್ರದ ಧಾರ್ಮಿಕ ಪರಂಪರೆಯನ್ನು ನಾಡಿಗೆ ಪರಿಚಯಿಸಿದ್ದಾರೆ. ಸುಮಾರು ನಾಲ್ಕು ವರ್ಷಗಳ ನಂತರ ಬುಡಕಟ್ಟು ಜನಾಂಗದ ತವರಾದ ಕಂಪಳದೇವರ ಹಟ್ಟಿಯಲ್ಲಿ(ಚಿಕ್ಕುಂತಿ) ದಿನಾಂಕ 02–12–2016ರಿಂದ 11–12–2016ರವರೆಗೆ ಎಡೆಕಟ್ಟಿನ ಹಬ್ಬವನ್ನು ಏರ್ಪಡಿಸಿ ಲಕ್ಷಾಂತರ ಭಕ್ತಾದಿಗಳಿಗೆ ಶ್ರೀಮನ್ ನಾರಾಯಣನ ಮುತ್ತಿನ ಕಾಲ್ಚೆಂಡಿನ ದರ್ಶನಭಾಗ್ಯ ಲಭಿಸುವಂತೆ ಮಾಡಿದ್ದಾರೆ. ಜೀವನಪೂರ್ತಿ ಪಶುಪಾಲನೆಯಲ್ಲಿ ತೊಡಗಿ ದೇವರ ಎತ್ತುಗಳನ್ನೇ ದೈವವೆಂದು ತಿಳಿದ ನಾಯಕ ಜನಾಂಗದ ಕಿಲಾರಿಗಳ ವಿಶಿಷ್ಟ ಆಚರಣೆ, ನಿಯಮ, ಜೀವನಶೈಲಿಯನ್ನು ಧಾರ್ಮಿಕ ಶ್ರದ್ಧೆಯನ್ನು ಆ ಮೂಲಕ ಜಗತ್ತಿಗೆ ಪರಿಚಯಿಸಿದ್ದಾರೆ. ನಂತರ ಮುತ್ತಯ್ಯಗಳ ಹಬ್ಬವನ್ನು ತುಮಕೂರ್ಲಹಳ್ಳಿಯ ಬಳಿ ಆಚರಿಸಿ ಬುಡಕಟ್ಟು ಜನಾಂಗದ ಸಂಪ್ರದಾಯವನ್ನು ನಾಡಿಗೆ ಸಾರಿದ್ದಾರೆ. ಇಂತಹ ಸಾಂಸ್ಕೃತಿಕ ಉತ್ಸವಗಳ ನಾಯಕತ್ವ ವಹಿಸಿದ್ದ ತಿಪ್ಪೇಸ್ವಾಮಿಯವರು ಅದ್ಭುತ ಕಲಾವಿದರು. ನಾಡು ಕಂಡ ಅದ್ಭುತ ಕಲಾಪ್ರೇಮಿಗಳು, ಸಾಹಿತಿಗಳು, ಸಮಾಜದ ಚಿಂತಕರು. ನಮ್ಮ ದೇಶದ ಕಲೆಗೂ ರಾಜಕೀಯಕ್ಕೂ ಬಹು ನಿಕಟವಾದ ಸಂಬಂಧವಿದೆ. ಅದೆಷ್ಟೋ ಕಲಾವಿದರು ರಾಜಕೀಯ ಪ್ರವೇಶ ಮಾಡಿ ಶಾಸಕರಾಗಿ, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ ದೇಶಸೇವೆ ಮಾಡುತ್ತಲೇ ತಮ್ಮ ಕಲಾ ಪ್ರೇಮವನ್ನು ಮೆರೆದಿದ್ದಾರೆ. ಮುಖ್ಯಮಂತ್ರಿ ಚಂದ್ರು, ಅನಂತನಾಗ್, ಅಂಬರೀಶ್, ಜಗ್ಗೇಶ್, ಉಮಾಶ್ರೀ, ತಾರಾ, ಜಯಮಾಲ. ದೇಶದ ಅತಿ ಬುದ್ಧಿವಂತ ರಾಜಕಾರಣಿಯೆಂದು ಹೆಸರಾದ ರಾಮಕೃಷ್ಣ ಹೆಗ್ಗಡೆಯವರು ಕಲಾದೇವಿಯ ಆರಾಧಕರೇ. ಆಂಧ್ರಪ್ರದೇಶದ ಎನ್.ಟಿ. ರಾಮರಾವ್, ಚಿರಂಜೀವಿ, ರೋಜ. ತಮಿಳುನಾಡಿನ ಎಂ.ಜಿ. ರಾಮಚಂದ್ರನ್, ಜಯಲಲಿತ ಇವರೆಲ್ಲಾ ಕಲಾವಿದರಾಗಿ ರಾಜಕೀಯದಲ್ಲಿ ಉನ್ನತ ಸ್ಥಾನ

ಪಡೆದರೂ ತಮ್ಮ ಕಲಾಬದುಕನ್ನು ಮುಂದುವರಿಸಿದಂತಹ ಕಲಾಪ್ರೇಮಿಗಳು. ಆದರೆ ಅವರೆಲ್ಲಾ ಸೀಮಿತ ಪ್ರೇಕ್ಷಕರೆದುರು ಥಿಯೇಟರುಗಳಲ್ಲಿ ಅಭಿನಯಿಸಿ ತಮ್ಮ ಕಲಾ ಸೇವೆ ಮಾಡಿದ್ದಾರೆ. ಆದರೆ ಶಾಸಕರಾದ ತಿಪ್ಪೇಸ್ವಾಮಿಯವರದು ಅಪ್ಪಟ ಗ್ರಾಮೀಣ ಪ್ರತಿಭೆ. 40 ವರ್ಷಗಳಿಂದ ಯಕ್ಷಗಾನದಲ್ಲಿ ಅರ್ಜುನ, ಕೀಚಕ, ದುರ್ಯೋಧನ, ರಾವಣ ಹಾಗೂ ಸಾಮಾಜಿಕ ನಾಟಕಗಳ ಖಳನಾಯಕ, ಪೌರಾಣಿಕ ನಾಟಕದ ದೇವಿ ಮಹಾತ್ಮೆಯ ರಕ್ತ ಬೀಜಾಸುರ, ರಕ್ತರಾತ್ರಿ, ಅಭಿಮನ್ಯು, ಅವರೇ ರಚಿಸಿದ ಅಹಿರಾವಣ ಇನ್ನೂ ಅನೇಕ ನಾಟಕಗಳನ್ನು ಬಯಲು ರಂಗಮಂದಿರಗಳಲ್ಲಿ ಅಸಂಖ್ಯಾತ ಪ್ರೇಕ್ಷಕರೆದುರು ಅಭಿನಯಿಸಿ ಅಪಾರ ಜನಮೆಚ್ಚಿಗೆ ಪಡೆದ ಹವ್ಯಾಸಿ ರಂಗಭೂಮಿ ಅದ್ಭುತ ಕಲಾವಿದರು. ಅದಾದ ನಾಲ್ಕೈದು ತಿಂಗಳುಗಳ ಬಳಿಕ 2016ರಲ್ಲಿ ನೇರಲಗುಂಟೆ ತಮ್ಮ ಸ್ವಗ್ರಾಮದಲ್ಲಿ "ರಂಗ ಪರಿಸರ" ಏರ್ಪಡಿಸಿ 2 ದಿನಗಳ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದು ಮತ್ತೊಂದು ಸಾಧನೆಯ ವಿಶೇಷವೇ ಸರಿ.

ಇಷ್ಟೇ ಅಲ್ಲದೆ ಕ್ಷೇತ್ರದ ಕಲಾವಿದರನ್ನು ಗುರುತಿಸಿ ಹಂಪಿ ಉತ್ಸವದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ ಅತ್ಯುತ್ತಮ ಪಾತ್ರ ನಿರ್ವಹಣೆಯಲ್ಲಿಯೂ ಸೈ ಎನಿಸಿಕೊಂಡವರು. ಶಿವಾರ್ಜುನರ ಯುದ್ಧ, ಕೋಲಾಟ ಮತ್ತು ಬೇಡರ ಕಣ್ಣಪ್ಪ ಅಂತಹ ಸಾಂಸ್ಕೃತಿಕ ಹಿನ್ನೆಲೆಯ ನಾಟಕಗಳನ್ನು ನಿರ್ದೇಶಿಸಿ ಉತ್ತಮ ಪ್ರದರ್ಶನಕ್ಕೆ ಸೂತ್ರಧಾರಿಗಳಾಗಿ ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ದಿನಾಂಕ 01–03–2017ರಂದು ಹನುಮಂತನಹಳ್ಳಿಯಲ್ಲಿ ಕುರುಕ್ಷೇತ್ರದಲ್ಲಿ ದುರ್ಯೋಧನನ ಪಾತ್ರ ವಹಿಸಿ ತಮ್ಮ ಅಮೋಘ ನಟನಾಕೌಶಲ್ಯದಿಂದ ಅಲ್ಲಿ ನೆರೆದಿದ್ದ 30 ಸಾವಿರಕ್ಕಿಂತ ಹೆಚ್ಚು ಜನರಲ್ಲಿ ರೋಮಾಂಚನ ಮೂಡಿಸಿದರು. ಜಗಳೂರು ಶಾಸಕರಾದ ಪಿ. ರಾಜೇಶ್, ಚಳ್ಳಕೆರೆ ಶಾಸಕರಾದ ಟಿ. ರಘುಮೂರ್ತಿ, ಬಳ್ಳಾರಿ ನಗರದ ಮಾಜಿ ಶಾಸಕರಾದ ಸೋಮಶೇಖರ ರೆಡ್ಡಿ, ರಾಯದುರ್ಗ ಶಾಸಕರು ಹಾಗೂ ಮಾದಾರ ಚೆನ್ನಯ್ಯ ಸ್ವಾಮಿಗಳು, ಜಿಲ್ಲಾ ರಕ್ಷಣಾಧಿಕಾರಿಗಳಾದ ರಂಗರಾಜನ್, ಅನೇಕ ಮಾಧ್ಯಮ ಪ್ರತಿನಿಧಿಗಳು ಕ್ಷೇತ್ರದ ಅನೇಕ ಗಣ್ಯರು ಹಾಜರಿದ್ದು ತಿಪ್ಪೇಸ್ವಾಮಿಯವರ ಅಭಿನಯನವನ್ನು, ಅವರ ಕಲಾಪ್ರೇಮವನ್ನು ಮುಕ್ತಕಂಠದಿಂದ ಪ್ರಶಂಸಿಸಿ ಅಭಿನಂದನೆಗಳ ಸುರಿಮಳೆ ಸುರಿಸಿ, ಶುಭ ಕೋರಿ ಹಾರೈಸಿದರು. ಇಂತಹ ಅಸಾಮಾನ್ಯ ವ್ಯಕ್ತಿಯನ್ನು ಪ್ರೋತ್ಸಾಹಿಸುವುದು, ಬೆಂಬಲಿಸುವುದು ಸರ್ಕಾರ ಮತ್ತು ಸಮಾಜದ ಕರ್ತವ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾಂಸ್ಕೃತಿಕ ಲೋಕದ ಜೀವಾಳವಾದ ಈ ಅದ್ಭುತ ಶಾಸಕರನ್ನು ಹವ್ಯಾಸಿ ರಂಗಭೂಮಿಯ "ಕಲಾರತ್ನ"

ಪ್ರಶಸ್ತಿ ನೀಡಿ ಪುರಸ್ಕರಿಸಿ ಗೌರವಿಸಬೇಕಾದ ಜವಾಬ್ದಾರಿ ಈ ನಾಡಿನ ಕಲಾಪ್ರೇಮಿಗಳಿಗೆ ಇರಬೇಕಿದೆ. ಆಧುನಿಕ ನಾಗರಿಕತೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವ ಜನತೆ ಇವರ ಮಾರ್ಗದರ್ಶನದಲ್ಲಿ ನಡೆಯಬೇಕಿದೆ. ಭಾರತದ ಶ್ರೀಮಂತ ಜಾನಪದ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಮೈಗೂಡಿಸಿಕೊಳ್ಳಬೇಕಿದೆ. ನೂತನ ತಂತ್ರಜ್ಞಾನದ ಸುಳಿಗೆ ಸಿಲುಕಿ ಮೊಬೈಲ್, ಟಿ.ವಿ., ಕಂಪ್ಯೂಟರ್ ಲೋಕದಲ್ಲಿ ಮುಳುಗಿ ನಮ್ಮ ಸಂಸ್ಕೃತಿ ಸಂಸ್ಕಾರ ಸಂಪ್ರದಾಯಗಳನ್ನು ಮರೆತಿರುವ ನಾಡಿನ ಯುವಜನತೆಗೆ ತಿಪ್ಪೇಸ್ವಾಮಿಯವರ ಸರಳವಾಗಿ ಬದುಕಿ ಉನ್ನತವಾಗಿ ಆಲೋಚಿಸುವ ಮಾದರಿಯ ಸರಳ ಬದುಕು ಆದರ್ಶವಾಗಬೇಕಿದೆ. ಉಚ್ಚ ಶ್ರೇಣಿಯ ಜನರ ಸ್ನೇಹಕ್ಕಿಂತಲೂ ಸಾಮಾನ್ಯ ವರ್ಗದ ಬಡವರ, ಕೂಲಿಕಾರರ, ರೈತ ಸ್ನೇಹವಲಯದಲ್ಲಿ ಬದುಕಿನ ಅರ್ಥ ಕಂಡ ಈ ನೈಜ ಗುಣದ ನಾಯಕರ ಸೇವೆ ಮುಂದೆಯೂ ಮೊಳಕಾಲ್ಮೂರು ಕ್ಷೇತ್ರದ ಜನರ ಪಾಲಿಗಿರಲಿ. ಆ ಮೂಲಕ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಭಾರತದ ಶಕ್ತಿಯಾದ ಸಾಂಸ್ಕೃತಿಕ ಪರಂಪರೆ ಮುಂದಿನ ಪೀಳಿಗೆಯ ಸ್ವತ್ತಾಗಲಿ ಅದಕ್ಕಾಗಿ ಕ್ಷೇತ್ರದ ಮತದಾರ ಬಂಧುಗಳು ಮುಂದಿನ ಚುನಾವಣೆಯಲ್ಲಿ ಹಿಂದೆ ಆಡಳಿತ ನಡೆಸಿದ ಮುಂದೆ ಬರಬಹುದಾದ ನಾಯಕರ ಗುಣ ನಡತೆ ಅಭಿರುಚಿಗಳ ಜೊತೆ ಇವರ ಗುಣ ನಡತೆಗಳ ತುಲನೆ ಮಾಡಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲಿ ಎಂದು ಹಾರೈಸೋಣ.

## 2. ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಲ್ಲಿ ಎಸ್. ತಿಪ್ಪೇಸ್ವಾಮಿಯವರ ಪಾತ್ರ

ಮೂಲತಃ ಶಿಕ್ಷಕರಾಗಿದ್ದು, ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದ ಶ್ರೀಯುತರು ಅಭಿವೃದ್ಧಿಯ ಮೂಲ ನೀರಾವರಿ ಎಂದು ಮನಗಂಡಿದ್ದರು. ಹಾಗಾಗಿಯೇ ಭದ್ರಾ ಮೇಲ್ದಂಡೆ ಯೋಜನೆಯಂತಹ ಬೃಹತ್ ಯೋಜನೆಯನ್ನು ಕ್ಷೇತ್ರದಲ್ಲಿ ಜಾರಿಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಮಾನ್ಯ ಶ್ರೀ ಸಿದ್ದರಾಮಯ್ಯ ನವರು ಮುಖ್ಯಮಂತ್ರಿಯಾಗಿದ್ದಾಗ ಖುದ್ದಾಗಿ ಹಲವು ಬಾರಿ ಭೇಟಿ ಮಾಡಿದ್ದರು. ಅದರ ಫಲವಾಗಿ ಇತಿಹಾಸದಲ್ಲಿಯೇ ಪ್ರಥಮ ಹೆಜ್ಜೆಯಾಗಿ ಈ ಮೊಳಕಾಲ್ಮೂರು ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಕೆರೆಗಳನ್ನು ತುಂಬಿಸುವ ಸಲುವಾಗಿ ಮುಖ್ಯಮಂತ್ರಿಯವರ ಕಡೆಯಿಂದ ಅಂಕಿತವನ್ನು ಹಾಕಿಸಿದ್ದರು. ಈ ಯೋಜನೆಯನ್ನು ಜಾರಿಗೆ ತರುವಲ್ಲಿ ಬಹು ಮುಖ್ಯ ಪಾತ್ರ ವಹಿಸಿ ಜನಪ್ರಿಯ ಶಾಸಕರಾದರು. ಇದರಿಂದ ಅಭಿವೃದ್ಧಿಯ ಹರಿಕಾರರಾದರೆಂದು ಕ್ಷೇತ್ರದ ಜನತೆ ಇಂದಿಗೂ ಉದ್ಗರಿಸುತ್ತಾರೆ.

**3. ಜನಾಂಗೀಯ ತಾರತಮ್ಯ ನಿರ್ಮೂಲನೆಯಲ್ಲಿ ಶಾಸಕರ ಪಾತ್ರ**

ನಿಜಕ್ಕೂ ಜನಾಂಗೀಯ ತಾರತಮ್ಯಗಳು ಸಮುದಾಯ ಅಥವಾ ಸಮಾಜಗಳನ್ನು ಕೆಟ್ಟದಾಗಿ ಪರಿವರ್ತಿಸುತ್ತಿವೆ. ಎಲ್ಲರೂ ಸಮಾನರು, ನಾವೆಲ್ಲರೂ ಒಂದೇ, ಜಾತಿ, ಮತ, ಧರ್ಮ ಬೇರೆ ಬೇರೆಯಾದರೂ ಸಾಮಾಜಿಕವಾಗಿ ಎಲ್ಲರೂ ಒಂದೇ ಎಂದು ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು ಶ್ರೀ ಎಸ್. ತಿಪ್ಪೇಸ್ವಾಮಿಯವರು ಎಂದರೆ ತಪ್ಪಾಗುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಪ್ರಬಲರಾಗಬೇಕಾಗಿದೆ. "ಸಂಘಟನೆಯು ಎಲ್ಲಾ ಶಕ್ತಿಯ ಮೂಲ," ಹಾಗಾಗಿ ಸಂಘಟನೆಗಳನ್ನು ಮಾಡಿಕೊಳ್ಳಬೇಕಿದೆ. ಅದರ ಮೂಲಕ ಸಮಾಜದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರು ಮುಂದೆ ಬರಬೇಕಾಗಿದೆ. ಈ ಸಮುದಾಯಗಳು ಅಭಿವೃದ್ಧಿಯನ್ನು ಹೊಂದಬೇಕಾಗಿದೆ ಯೆಂದು ಹಲವಾರು ಭಾಷಣಗಳಲ್ಲಿ ಛಾಪನ್ನು ಮೂಡಿಸಿದ್ದಾರೆ.

**4. ಧಾರ್ಮಿಕ ಕ್ಷೇತ್ರದ ಬುತ್ತಿಯಾಗಿ ಎಸ್. ತಿಪ್ಪೇಸ್ವಾಮಿ**

ಮಾನ್ಯ ಎಸ್. ತಿಪ್ಪೇಸ್ವಾಮಿಯವರು ಧಾರ್ಮಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸಿದವರು. ಶ್ರೀಯುತರು ನೂರಾರು ವರ್ಷಗಳಿಂದ ನಾಯಕ ಸಮುದಾಯ ಆಚರಿಸುವ ಹಬ್ಬಗಳಲ್ಲಿ ವಡ್ನಳ್ಳಿ ಮಾರಮ್ಮ ಒಂದು ಅದ್ಭುತ ಜಾತ್ರೆ. ಇದು ಸಮುದಾಯದಲ್ಲಿ ಕೆಲವು ವ್ಯಕ್ತಿಗಳಿಂದ ಸ್ಥಗಿತಗೊಂಡಿತ್ತು. ಎಲ್ಲಾ ಸಮುದಾಯದವರನ್ನು ಸಂಪರ್ಕಿಸಿ ತಿದ್ದಿ ಬುದ್ಧಿಹೇಳಿ 2016ರಲ್ಲಿ ವಡ್ನಳ್ಳಿ ಮಾರಮ್ಮ ಜಾತ್ರೆಯನ್ನು ಅದ್ದೂರಿಯಾಗಿ ನೆರವೇರಿಸಿ, ಸಂಪೂರ್ಣ ಖರ್ಚನ್ನು ಅವರೇ ಭರಿಸಿ, ಜನರ ಮನಸ್ಸಿನಲ್ಲಿ ಮನೆ ಮಾಡುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು.

ಶ್ರೀಶೈಲ ಎತ್ತುಗಳ ಹಬ್ಬ ಕೂಡ ವ್ಯಕ್ತಿಗಳ ವೈಮನಸ್ಸಿನಿಂದ ಸ್ಥಗಿತಗೊಂಡಿತ್ತು. ಎಲ್ಲರನ್ನು ಕೂರಿಸಿ ಸಮುದಾಯದ ಬೆಳವಣಿಗೆ ಬಗ್ಗೆ ತಿಳಿ ಹೇಳಿ ಶ್ರೀಶೈಲ ಎತ್ತುಗಳ ಜಾತ್ರೆಯನ್ನು 2017ರಲ್ಲಿ ಅದ್ದೂರಿಯಾಗಿ ನೆರವೇರಿಸುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು. "ಎಡಕಟ್ಟಿನ ಹಬ್ಬ" ಕೂಡ ಬುಡಕಟ್ಟು ಸಂಸ್ಕೃತಿಯನ್ನು ಬೆಳೆಸುವ ಹಾಗೂ ಉಳಿಸುವ ಸಂಪ್ರದಾಯದ ಹಬ್ಬವಾಗಿದೆ. ಇದೂ ಕೂಡ ಸುಮಾರು ವರ್ಷಗಳಿಂದ ಸ್ಥಗಿತಗೊಂಡಿತ್ತು. ಇಂತಹ ಹಬ್ಬವನ್ನು ಸರಿದಾರಿಗೆ ತಂದು ಎಡಕಟ್ಟಿನ ಹಬ್ಬವನ್ನು

ವಿಜೃಂಭಣೆಯಿಂದ ನೆರೆವೇರಿಸುವಲ್ಲಿ ಶಾಸಕರ ಪಾತ್ರ ಅಪಾರವಾದುದ್ದಾಗಿದೆ ಎಂದರೆ ತಪ್ಪಾಗುವುದಿಲ್ಲ. ಇನ್ನೂ ಅನೇಕ ಹಬ್ಬ ಆಚರಣೆಗಳನ್ನು ಮಾಡಿ ಬುಡಕಟ್ಟು ಸಂಸ್ಕೃತಿಯನ್ನು ಬೆಳೆಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರಿಂದ ಧಾರ್ಮಿಕ ಕ್ಷೇತ್ರದ ಬುತ್ತಿಯಾಗಿ ಪವಾಡವೆಂಬಂತೆ ಕ್ಷೇತ್ರದ ಜನತೆಯಿಂದ ಕರೆಸಿಕೊಂಡವರು. ಇದು ಕೂಡ ಅವರ ಸಾಧನೆಯನ್ನು ತೋರಿಸುತ್ತದೆ.

**5. ದಲಿತ ರಾಜಕಾರಣ ಕುರಿತು**

ಇದರ ವಿಷಯವಾಗಿ ಮಾನ್ಯ ಶಾಸಕರಲ್ಲಿ ನಾವು ಚರ್ಚಿಸಿದಾಗ ಇದುವರೆಗೂ ಕರ್ನಾಟಕ ರಾಜಕೀಯದಲ್ಲಿ ಒಬ್ಬ ದಲಿತ ಮುಖ್ಯಮಂತ್ರಿಯನ್ನು ಕಂಡಿಲ್ಲ. ಆಯ್ಕೆಯಾಗುವ ಎಲ್ಲಾ ಸಾಮರ್ಥ್ಯಗಳಿದ್ದರೂ ಇವತ್ತು ದಲಿತ ಸಮಾಜದವರನ್ನು ಮುಖ್ಯಮಂತ್ರಿ ಮಾಡುವಲ್ಲಿ ಮೀನಮೇಷ ಎಣಿಸುತ್ತಿದ್ದಾರೆ. ಇದು ಬದಲಾಗಬೇಕಿದೆ. ಮಲ್ಲಿಕಾರ್ಜುನ ಖರ್ಗೆಯವರಿಗೆ ಸಾಕಷ್ಟು ಅನುಭವವಿದೆ ಹಾಗೂ ಹಿರಿಯ ಕೇಂದ್ರ ರಾಜಕಾರಣಿ ಹೌದು. ಅಂತಹವರನ್ನು ಯಾಕೆ ಜನ ಆಯ್ಕೆ ಮಾಡುತ್ತಿಲ್ಲ. ಮತ್ತೆ ಕೆಪಿಸಿಸಿ ಅಧ್ಯಕ್ಷರಾದ ಡಾ. ಜಿ. ಪರಮೇಶ್ವರ ಅವರನ್ನು ಉಪಮುಖ್ಯಮಂತ್ರಿ ಮಾಡಿ ದಲಿತರಿಗೆ ನ್ಯಾಯ ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ. ಅವರಿಗೂ ಮುಖ್ಯಮಂತ್ರಿಯಾಗುವ ಎಲ್ಲಾ ಸಾಮರ್ಥ್ಯಗಳಿವೆ. ಇನ್ನೂ ಅನೇಕ ನಾಯಕರು ಇದ್ದಾರೆ. ಈ ತಾರತಮ್ಯ ಬದಲಾಗಬೇಕಿದೆ ಎಂದು ಶಾಸಕರು ಮನವರಿಕೆ ಮಾಡಿದರು.

ರಾಜ್ಯದಲ್ಲಿ ಮೀಸಲುಕ್ಷೇತ್ರಗಳಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಆಯ್ಕೆ ಯಾಗುತ್ತಿದ್ದಾರೆ. ಇವರಿಗೆ ಮೀಸಲುಕ್ಷೇತ್ರಗಳಿಲ್ಲದಿದ್ದರೆ ರಾಜಕೀಯ ಸ್ಥಾನಮಾನದಲ್ಲಿ ನಮ್ಮ ಸಮುದಾಯಗಳು ಇನ್ನೂ ಕೆಳಮಟ್ಟದಲ್ಲಿರುತ್ತಿದ್ದವು. ಮೀಸಲುಕ್ಷೇತ್ರದಿಂದಾದರೂ ಒಂದಿಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ರಾಜಕೀಯವಾಗಿ ಸದೃಢರಾಗಲು ಅವಕಾಶವಾಗುತ್ತಿದೆ ಎಂದು ಹೇಳ ಬಹುದು. ಇನ್ನೂ ಮೀಸಲಾತಿಯನ್ನು ಹೆಚ್ಚು ಮಾಡುವುದರ ಮೂಲಕ ಪರಿಶಿಷ್ಟ ಪಂಗಡಕ್ಕೆ ನ್ಯಾಯ ಒದಗಿಸಬೇಕಿದೆ. ಇಡೀ ರಾಜ್ಯದಲ್ಲಿಯೇ 7ನೇ ದೊಡ್ಡ ಸಮುದಾಯ ನಮ್ಮದಾಗಿರುವುದರಿಂದ ಇನ್ನೂ ಹೆಚ್ಚು ಅವಕಾಶಗಳು ನೀಡಬೇಕಾಗಿದೆಯೆಂದು ಮನವರಿಕೆ ಮಾಡಿಕೊಟ್ಟರು. ಪರಿಶಿಷ್ಟ ಪಂಗಡದ ಒಳಪಂಗಡಗಳಲ್ಲಿ ಅನೇಕ ಪಂಗಡಗಳಿಗೆ ಎಲ್ಲವನ್ನು ಸಮಾನವಾಗಿ ಸ್ವೀಕರಿಸುತ್ತೇವೆ ಹಾಗೂ ಸ್ವಾಗತಿಸುತ್ತೇವೆಂದು ಪ್ರತಿಕ್ರಿಯಿಸಿದ್ದು ವಿಶೇಷವಾಗಿತ್ತು.

ಇವತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಏನಾದರೂ ಕರ್ನಾಟಕದಲ್ಲಿ ದೊರಕಿದ್ದೇ ಆದರೆ ಅದು ಚಳ್ಳಕೆರೆ ತಾಲ್ಲೂಕಿನ ಬಂಗಾರ ಹಟ್ಟಿಯ ಹಿರಿಯರಿಂದ ಎಂದು ತಿಳಿಸಿದರು. "ಹೆಣ್ಣು ಮಕ್ಕಳು ಕುಪ್ಪಸ ಚೆಲ್ಲಾರ ಧರಿಸಿ ಕೇಂದ್ರ ಸರ್ಕಾರದ ಗಮನ ಸೆಳೆಯಲು ದೆಹಲಿಗೆ ಹೋದಾಗ ಅಂದು ಪ್ರಧಾನಮಂತ್ರಿ ಗಳಾಗಿದ್ದವರು ಚಂದ್ರಶೇಖರ್. ಇವರನ್ನು ಗಮನಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಆದೇಶ ನೀಡಿದ್ದರು. ಅವರನ್ನು ನಾವು ಇಂದು ಸ್ಮರಿಸಬೇಕಿದೆ. ಅದರಿಂದ ಸರ್ಕಾರದ ಸವಲತ್ತುಗಳನ್ನು ಸ್ವೀಕರಿಸುತ್ತಿದ್ದೇವೆ. ಜೊತೆಗೆ ಪರಿಶಿಷ್ಟ ಪಂಗಡದವರು ಮತ್ತಷ್ಟು ಬಲಾಢ್ಯವಾಗಿ ಹೊರಹೊಮ್ಮಲು ಸಹಾಯಕವಾಗಿದೆಯೆಂದು ತಿಳಿಸಿಕೊಟ್ಟಿದ್ದು ವಿಶೇಷವಾಗಿದೆ. ಪರಿಶಿಷ್ಟ ಪಂಗಡದವರಲ್ಲಿ ಸಾಕಷ್ಟು ಒಳಪಂಗಡಗಳಿದ್ದು ಓಟು ಹೊಡೆಯುವ ಸಂಭವ ಏನಾದರೂ ಇದೆಯೇ ಎಂದು ಕೇಳಿದಾಗ ಮಾನ್ಯ ಶಾಸಕರು ಆ ತರಹ ಯಾವುದೇ ನಿದರ್ಶನಗಳಿಲ್ಲ. ಅವರವರಿಗೆ ಯಾರು ಇಷ್ಟ ಬರುತ್ತಾರೋ ಅವರನ್ನು ಜನ ಆಯ್ಕೆ ಮಾಡುತ್ತಾರೆ. ಸಂವಿಧಾನದಲ್ಲಿ ಜನರ ಅಭಿಪ್ರಾಯವೇ ಅಂತಿಮವಾಗಿರುತ್ತದೆ. ಆನರ ತೀರ್ಮಾನಕ್ಕೆ ರಾಜಕೀಯ ಪ್ರತಿನಿಧಿಗಳು ಬದ್ಧವಾಗಿರಬೇಕಿದೆ ಎಂದು ವಿವರಿಸಿದರು.

ಕರ್ನಾಟಕದಲ್ಲಿಯೇ 7ನೇ ದೊಡ್ಡ ಸಮುದಾಯವಾದ ನಮ್ಮಲ್ಲಿ ಒಗ್ಗಟ್ಟಿನ ಕೊರತೆ ಇದೆ. ಹೊಸ ಸಂಘಟನಾ ಕೌಶಲ್ಯಗಳು, ಸಂಘಟನೆಗಳು, ಯುವಕರು, ವಿದ್ಯಾವಂತರು ಮುಂದೆ ಬರಬೇಕು. ಸಮಾಜ ಕಟ್ಟುವಲ್ಲಿ ಪ್ರತಿಯೊಬ್ಬರು ದುಡಿಯಬೇಕು. ಹಾಗಿದ್ದಲ್ಲಿ ಮಾತ್ರ ನಾಯಕ/ಪರಿಶಿಷ್ಟ ಪಂಗಡ ಸಮುದಾಯ ಬಲಾಢ್ಯವಾಗಿ ಬೆಳೆಯಲು ಸಾಧ್ಯವಾಗುತ್ತದೆಂದು ತಿಳಿಸಿದರು.

## 6. ಶಿಕ್ಷಣಕ್ಷೇತ್ರದ ರೂವಾರಿಯಾಗಿ ಎಸ್. ತಿಪ್ಪೇಸ್ವಾಮಿ

ಇವರು ಮೂಲತಃ ಶಿಕ್ಷಣ, ಶಿಕ್ಷಕ ವೃತ್ತಿಯ ಹಿನ್ನೆಲೆಯಿಂದ ಬಂದಿದ್ದರಿಂದ ಅವರಿಗೆ ಶಿಕ್ಷಣದ ಬಗ್ಗೆ ಚೆನ್ನಾಗಿ ಮನವರಿಕೆಯಾಗಿತ್ತು. ಅವರು ಅಭಿವೃದ್ಧಿಯ ಕೀಲಿಕೈ ಶಿಕ್ಷಣ ಎಂದು ನಂಬಿದ್ದರು. ಹಾಗಾಗಿಯೇ ಸುಮಾರು 5 ಮೊರಾರ್ಜಿ ದೇಸಾಯಿ ಶಾಲೆಗಳನ್ನು ತಮ್ಮ ಶಾಲೆಗಳ ತಮ್ಮ ಆಡಳಿತದ ಅವಧಿಯಲ್ಲಿ ಸ್ಥಾಪಿಸಿದರು. ಮೊಳಕಾಲ್ಮೂರಿನಲ್ಲಿ ಐಟಿಐ ಕಾಲೇಜನ್ನು ಸ್ಥಾಪಿಸುವುದರ ಮೂಲಕ ವೃತ್ತಿಪರ ಕೋರ್ಸ್‌ನ್ನು ಪಡೆಯಲು ಸಹಕಾರ ನೀಡಿದರು. ಇಷ್ಟೇ ಅಲ್ಲದೆ ಅನೇಕ ಶಿಕ್ಷಕರನ್ನು ಗುರ್ತಿಸಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹಲವಾರು ವಿದ್ಯಾರ್ಥಿನಿಲಯಗಳಿಗೆ ಅನುದಾನವನ್ನು ಒದಗಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಅದೂ ಅಲ್ಲದೇ ಅನೇಕ ಕ್ಷೇತ್ರಗಳಲ್ಲಿ

ಶಿಕ್ಷಣದ ಬಗ್ಗೆ ಕಾರ್ಯಾಗಾರಗಳು, ಸಮ್ಮೇಳನಗಳನ್ನು ನಡೆಸುವಲ್ಲಿ ಪಾತ್ರ ವಹಿಸಿ ಕ್ರೀಡಾಪಟುಗಳಿಗೆ ಕೂಡ ಪ್ರೋತ್ಸಾಹ ನೀಡಿರುವುದು ವಿಶೇಷ ಸಂಗತಿ.

ಒಟ್ಟಾರೆ ಕಾಮಗಾರಿಗಳ ನೇತಾರರಾಗಿ ಮೊಳಕಾಲ್ಮೂರು ಕ್ಷೇತ್ರವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯುವಲ್ಲಿ ಶಾಸಕರ ಪಾತ್ರ ಅಪಾರವಾಗಿದೆ.

- ಆಡಳಿತ ಕಟ್ಟಡವಿಲ್ಲದೇ ಇದ್ದ ಮೊಳಕಾಲ್ಮೂರು ಪಟ್ಟಣಕ್ಕೆ ಮಿನಿ ವಿಧಾನ ಸೌಧ ನಿರ್ಮಿಸಿದ ಹಿರಿಮೆ ಮಾನ್ಯ ಶಾಸಕ ತಿಪ್ಪೇಸ್ವಾಮಿಯವರಿಗೆ ಸಲ್ಲಲೇಬೇಕು.
- 5 ಮೊರಾರ್ಜಿ ದೇಸಾಯಿ ಶಾಲೆಗಳ ಸ್ಥಾಪನೆ.
- ತುಂಗಭದ್ರಾ ಹಿನ್ನೀರು ತರುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದವರು. ಕೇವಲ ಮೊಳಕಾಲ್ಮೂರು ಕ್ಷೇತ್ರಕ್ಕೆ ಅಷ್ಟೇ ಅಲ್ಲದೇ ಚಳ್ಳಕೆರೆ, ಪಾವಗಡ, ಕೂಡ್ಲಿಗಿ ಕ್ಷೇತ್ರಗಳೂ ಕೂಡ ಅದರ ಪ್ರಯೋಜನ ಪಡೆಯಲಿವೆ.
- ಅಂಗವಿಕಲರಿಗೆ ಸುಮಾರು 1200 ಜನರಿಗೆ ದ್ವಿಚಕ್ರವಾಹನಗಳನ್ನು ಒದಗಿಸಿಕೊಟ್ಟಿದ್ದು ಇವರ ಸಾಧನೆಯೇ ಸರಿ.
- Old age pencion scheme ಕೂಡ ಸಾಕಷ್ಟು ಹಿರಿಯರಿಗೆ ಮಾಡಿಸಿಕೊಟ್ಟಿದ್ದೇವೆ ಎಂದು ನುಡಿದರು.
- ಬಳ್ಳಾರಿಯಿಂದ ಹಿರಿಯೂರುವರೆಗೆ ಚಥುಷ್ಪಥ ಕೂಡ ನನ್ನ ಅವಧಿಯಲ್ಲಿ ಅನುಮೋದನೆ ಆಗಿದ್ದು ಎಂದರು.
- ಸುಮಾರು 50 ಲಕ್ಷ ವೆಚ್ಚದಲ್ಲಿ ತಳಕು ಗ್ರಾಮದಲ್ಲಿ ವಾಲ್ಮೀಕಿ ಭವನ ನಿರ್ಮಾಣ.
- ನಾಯಕನಹಟ್ಟಿಯಲ್ಲಿ 50 ಲಕ್ಷದಲ್ಲಿ ವಾಲ್ಮೀಕಿ ಭವನ ನಿರ್ಮಾಣವಾಗಿದೆ.
- ಪರಿಶಿಷ್ಟ ಪಂಗಡದವರಿಗಾಗಿ ನಾಯಕನಹಟ್ಟಿಯಲ್ಲಿ 50 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಿದ್ದೇವೆ.
- ಕೆ.ಇ.ಬಿ. ಉಪವಿಭಾಗಗಳನ್ನು ನೇರಲಗುಂಟೆ, ಹಿರೇಹಳ್ಳಿ, ನಾಗಸಮುದ್ರ ಗ್ರಾಮಗಳಲ್ಲಿ ಸ್ಥಾಪಿಸಿದ್ದಾರೆ.
- 1.50 ಕೋಟಿ ವೆಚ್ಚದಲ್ಲಿ ಮೊಳಕಾಲ್ಮೂರು ಪಟ್ಟಣದಲ್ಲಿ ಕೆ.ಇ.ಬಿ. ವಿಭಾಗಗಳನ್ನು ನವೀಕರಿಸಿ ಆಧುನೀಕರಿಸಿದೆ.
- 2000 ಕೋಟಿ ವೆಚ್ಚದಲ್ಲಿ ಎಸ್.ಸಿ./ಎಸ್.ಟಿ. ಅನುದಾನದಲ್ಲಿ ತುಂಗಭದ್ರಾ ಹಿನ್ನೀರು ಕಾಲುವೆ ನಿರ್ಮಾಣ ಆಗುತ್ತಿದೆ.

- ಎಲ್ಲಾ ಹಳ್ಳಿಗಳಲ್ಲಿಯೂ ಡಾಂಬರೀಕರಣ ರಸ್ತೆಗಳನ್ನು ಮಾಡಿಸಿದ್ದಾರೆ.
- ಅಷ್ಟೇ ಅಲ್ಲದೇ ಕೋಟಿಗಳ ವೆಚ್ಚದಲ್ಲಿ ಸಿಮೆಂಟ್ ರೋಡ್ ನಿರ್ಮಾಣ ಮಾಡಿದ್ದಾರೆ.

ಇನ್ನೂ ಅನೇಕ ರೀತಿಯ ಕಾಮಗಾರಿಗಳನ್ನು ಜಾರಿಗೊಳಿಸುವುದರ ಮೂಲಕ ಪರಿಶಿಷ್ಟ ಪಂಗಡದ ಮೀಸಲುಕ್ಷೇತ್ರವಾದ ಮೊಳಕಾಲ್ಮೂರಿಗೆ ಅಭಿವೃದ್ಧಿಯ ಹರಿಕಾರರಾಗಿ ಯೋಜನೆಗಳ ರೂವಾರಿಯಾಗಿ, ಶಿಕ್ಷಣದಕ್ಷೇತ್ರದ ನಿರ್ಮಾಪಕರಾಗಿ ಶ್ರೀ ಎಸ್. ತಿಪ್ಪೇಸ್ವಾಮಿಯವರು ಕಾಣಿಸುತ್ತಾರೆ. ಹಾಗಾಗಿ ಇವರ ಆಡಳಿತದಲ್ಲಿ ನಿರೀಕ್ಷೆಗೆ ಮೀರಿ ಅಭಿವೃದ್ಧಿ ಹೊಂದಿರುವುದು. ಇವರ ಕರ್ತವ್ಯದಕ್ಷತೆ ನಿದರ್ಶನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಹಾಗಾಗಿ ವಿಭಿನ್ನ ಕ್ಷೇತ್ರದಲ್ಲಿಯೂ ಭಿನ್ನ ಭಿನ್ನವಾಗಿ ಗುರುತಿಸಿದ ಶ್ರೀಯುತರು ಪ್ರಸ್ತುತ ಅಧಿಕಾರವಿಲ್ಲದಿದ್ದರೂ ಸಾಮಾಜಿಕ ಕಾಳಜಿಯನ್ನು ಹೊಂದಿದ್ದಾರೆಂದು ಹೇಳಲು ಇಚ್ಛೆ ಪಡಬೇಕಿದೆ. ವಿಭಿನ್ನ ವ್ಯಕ್ತಿತ್ವ ಇದ್ದುದರಿಂದ ಆಡಳಿತವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿಯೂ ವಿಭಿನ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಮೊಳಕಾಲ್ಮೂರಿನ ಸರ್ವ ಅಭಿವೃದ್ಧಿಯ ಜನಕರಾಗಿ ಹೊರಹೊಮ್ಮಿರುವುದು ವಿಶೇಷದ ಸಂಗತಿಯಾಗಿದೆ.

### 7. ಎಸ್. ತಿಪ್ಪೇಸ್ವಾಮಿಗೆ ನಾಟಕ ಅಕಾಡೆಮಿ ಪ್ರಶಸ್ತಿ

ಮಾಜಿ ಶಾಸಕ ಎಸ್. ತಿಪ್ಪೇಸ್ವಾಮಿ ಅವರಿಗೆ ಗ್ರಾಮೀಣ ರಂಗಭೂಮಿ ವಿಭಾಗದಲ್ಲಿ 2019–20ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಲಭಿಸಿದೆ. ಎಸ್. ತಿಪ್ಪೇಸ್ವಾಮಿ ಕೃಷಿ ಕುಟುಂಬದಲ್ಲಿ ಜನಿಸಿ 9ನೇ ವರ್ಷದಿಂದಲೇ ಹಾಡುಗಾರಿಕೆ, ನಾಟಕ, ಮೂಡಲಪಾಯ, ದೊಡ್ಡಾಟದಂತಹ ಕಲೆಯನ್ನು ಮೈಗೂಡಿಸಿಕೊಂಡು ಬೆಳೆದವರು. ಇವರು ವೃತ್ತಿಯಲ್ಲಿ ಶಿಕ್ಷಕರಾಗಿ ಶಾಲಾಮಕ್ಕಳಿಗೆ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆ ನಾಟಕ ಕಲಿಸುವ ಪರಿಪಾಠವನ್ನು ಬೆಳೆಸಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಬಯಲಾಟವನ್ನು ಜನಪ್ರಿಯಗೊಳಿಸಿದ್ದರು. ಹಾಗೆಯೇ ಗ್ರಾಮಪಂಚಾಯಿತಿ ತಾಲ್ಲೂಕು ಪಂಚಾಯಿತಿ ಸೇರಿ ಹಂತ ಹಂತವಾಗಿ ರಾಜಕೀಯದಲ್ಲಿ ತಮ್ಮ ಛಾಪು ಮೂಡಿಸುತ್ತಾ 2013ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮೊಳಕಾಲ್ಮೂರು ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಶಾಸಕರಾದರೂ ಕಲೆಯ ಮೇಲಿನ ಗೀಳು ಕಡಿಮೆಯಿಲ್ಲದಂತೆ ಕ್ಷೇತ್ರದಾದ್ಯಂತ ನಾಟಕ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡಿದ್ದಾರೆ.

**ಎಸ್. ತಿಪ್ಪೇಸ್ವಾಮಿ ಕುರಿತು ಸಾರ್ವಜನಿಕ ಅಭಿಪ್ರಾಯ**

1. **ಎಂ.ಬಿ. ಬೋರಯ್ಯ,** ಗ್ರಾಮಪಂಚಾಯಿತಿ ಸದಸ್ಯರು/ರಂಗ ಕಲಾವಿದರು, ನೇರಲಗುಂಟೆ

ಶ್ರೀ ಎಸ್ ತಿಪ್ಪೇಸ್ವಾಮಿಯವರು 2013 ರಿಂದ 18ರವರೆಗೆ ವಿಧಾನಸಭಾ ಸದಸ್ಯರಾಗಿ ಕಾರ್ಯನಿರ್ವಹಣಾ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿ ಅದ್ದೂರಿಯಾಗಿ ಯಶಸ್ವಿಗೊಳಿಸಿದವರು. ಶ್ರೀಯುತರು ಈ ಕ್ಷೇತ್ರಕ್ಕೆ ಸಾಂಸ್ಕೃತಿಕ ದೊರೆ ಎಂದೇ ಕರೆಯಬಹುದು.

2. **ನಾಗರಾಜ್ ಓ,** ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆ

ಸಾಮಾನ್ಯರಿಗೂ ಲಭ್ಯವಿದ್ದ ರಾಜಕಾರಣಿ:– ಶ್ರೀಯುತರು ನಿಜಕ್ಕೂ ಸರಳತೆ, ಗ್ರಾಮೀಣ ಸೊಗಡಿನಲ್ಲಿಯೇ ತಮ್ಮ ಜನರ ಮನವನ್ನು ಗೆಲ್ಲುವಂತಹ ಕೌಶಲ್ಯ ಹೊಂದಿದ್ದವರು. ಸಾಮಾನ್ಯ ಜನರ ಸಮಸ್ಯೆಗಳನ್ನು ಆಲಿಸುತ್ತಾ ಅವರೊಡನೆ ಬೆರೆತವರು, ಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಇವರ ಪಾತ್ರ ಬಹುಮುಖ್ಯ.

3. **ಕೆ.ಟಿ. ತಿಪ್ಪೇಸ್ವಾಮಿ,** ತಾಲ್ಲೂಕು ಪಂಚಾಯಿತಿ ಸದಸ್ಯರು, ಚಳ್ಳಕೆರೆ.

ಸಮುದಾಯದ ಒಗ್ಗೂಡಿಸುವಿಕೆ ತಿಪ್ಪೇಸ್ವಾಮಿಯವರ ಪಾತ್ರ ಅನಂತ:– ಶ್ರೀಯುತರು ಅನೇಕ ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ದೇವಾಲಯದ ಆಚರಣೆ, ಹಬ್ಬಗಳನ್ನು ಆಚರಿಸಿದ್ದು, ಸಮುದಾಯದ ಜನರ ನಡುವೆ ಪ್ರೀತಿ, ವಿಶ್ವಾಸ ಗೆದ್ದಂತಹ ರಾಜಕಾರಣಿ. ಉದಾಹರಣೆಗೆ ವಡ್ಡನಹಳ್ಳಿ ಮಾರಮ್ಮ ಜಾತ್ರೆ.

4. **ರಂಗಪ್ಪ,** ಮುಖಂಡರು, ಕಾಟ್ಟವ್ವನಹಳ್ಳಿ.

ಶಾಶ್ವತ ಕುಡಿಯುವ ನೀರು ಒದಗಿಸಿಕೊಟ್ಟ ಪುಣ್ಯಾತ್ಮ:– ಶ್ರೀಯುತರು ನಾಯಕನಹಟ್ಟಿ ಹೋಬಳಿಯಲ್ಲಿ ಪ್ರತಿವರ್ಷ ಜಾತ್ರೆ ನಡೆಯುವುದೇ ವಿಶೇಷ. ಆ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಯಾತ್ರಾರ್ತಿಗಳು ಅನುಭವಿಸುತ್ತಿದ್ದರು ಅದನ್ನು ನಿವಾರಿಸಿ ನಾಯಕನಹಟ್ಟಿ ಹೋಬಳಿಯಲ್ಲಿ ಶಾಶ್ವತ ಕುಡಿಯುವ ನೀರಿನ ಪರಿಹಾರವನ್ನು ನೀಡದ ಪುಣ್ಯಾತ್ಮ ಎಂದರೆ ತಪ್ಪಾಗಲಾರದು.

5. **ಕುಮಾರ ಡಿ.ಬಿ.,** ಅತಿಥಿ ಉಪನ್ಯಾಸಕರು, ಮನ್ನೆಕೋಟೆ.

ಶ್ರೀ ಎಸ್. ತಿಪ್ಪೇಸ್ವಾಮಿಯವರು ಕ್ಷೇತ್ರಾದ್ಯಂತ ಅನೇಕ ಸಮುದಾಯ ಭವನಗಳ ನಿರ್ಮಾಣ ಮಾಡಿ ಕ್ಷೇತ್ರ ಅಭಿವೃದ್ಧಿಗಾಗಿ ಕಾರಣೀಭೂತರಾಗಿದ್ದರು ಹಾಗೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಿದ ಮಹಾನುಭಾವರಾಗಿದ್ದಾರೆ.

**4.4. ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರದ ಮತದಾರರ ದೃಷ್ಟಿಯಲ್ಲಿ ಶಾಸಕರ ನಾಯಕತ್ವ**


ಪರಿಶಿಷ್ಟ ಪಂಗಡ ನಾಯಕತ್ವದ ತಾತ್ವಿಕ ಚಿಂತನೆಯ ಆಧಾರದ ಮೇಲೆ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲುಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದ ರಾಜಕೀಯ ನಾಯಕತ್ವ ಯಾವ ತತ್ವ ಸಿದ್ಧಾಂತಗಳ ನೆಲೆಗಟ್ಟಿನ ಮೇಲೆ ರೂಪಗೊಂಡಿದೆ ಎಂದು ಅವಲೋಕಿಸಲಾಗಿದೆ. ಹಾಗೆಯೇ ಮತದಾರರು ನಾಯಕತ್ವದ ಪರಿಕಲ್ಪನೆಯನ್ನು ಅರ್ಥೈಸಿಕೊಂಡಿರುವ ಆಧಾರದ ಮೇಲೆ ಮೀಸಲುಕ್ಷೇತ್ರದ ಶಾಸಕರ ನಾಯಕತ್ವ ಹೊರಹೊಮ್ಮುತ್ತದೆ. ಆದ್ದರಿಂದ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ಮತದಾರರಿಗೆ ಪ್ರತ್ಯೇಕವಾಗಿ ನಾಯಕತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಪ್ರಶ್ನಾವಳಿಯ ಮುಖೇನ ಮತದಾರರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಕೆಳಕಂಡ ಕೋಷ್ಟಕಗಳ ಆಧಾರದ ಮೇಲೆ ಮತದಾರರಿಂದ ಹೊರಹೊಮ್ಮಿದ ಅಭಿಪ್ರಾಯಗಳನ್ನು ಕ್ರೋಢೀಕರಿಸುವ ಮೂಲಕ ಅಂಕಿ–ಅಂಶಗಳ ಸಹಾಯದಿಂದ ಉದ್ದೇಶಿತ ಕ್ಷೇತ್ರಗಳ ಶಾಸಕರ ಪರಿಶಿಷ್ಟ ಪಂಗಡ ನಾಯಕತ್ವವನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡಲಾಗಿದೆ

**ಕೋಷ್ಟಕ–4.1.**
**ಮತದಾರರ ದೃಷ್ಟಿಯಲ್ಲಿ ನಾಯಕರನ್ನು ಕುರಿತ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಪರಿಶಿಷ್ಟ ಪಂಗಡ | ಪರಿಶಿಷ್ಟ ಪಂಗಡೇತರ | ಪರಿಶಿಷ್ಟ ಪಂಗಡ | ಪರಿಶಿಷ್ಟ ಪಂಗಡೇತರ |
| 1 | ರಾಜಕೀಯದವರು | 20 | 38 | 22 | 82 |
| 2 | ಚಳುವಳಿ ಮುಂದಾಳು | 8 | 21 | 12 | 12 |
| 3 | ಜನಾಂಗದ ಮುಂದಾಳು | 13 | 7 | 12 | 24 |
| 4 | ಸಮಾಜ ಸೇವಕ | 34 | 109 | 29 | 57 |
| | | **75** | **175** | **75** | **175** |
| **ಒಟ್ಟು** | | **250+250=** | | | **500** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಚಳ್ಳಕೆರೆ ಮತ್ತು ಮೊಳಲಾಲ್ಮೂರು ಕ್ಷೇತ್ರದ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ಮತದಾರರ ದೃಷ್ಟಿಕೋನದಲ್ಲಿ ನಾಯಕರು ಯಾರು ಎಂಬುದನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಕೋಷ್ಟಕದ ಅಂಕಿ–ಅಂಶಗಳ ಪ್ರಕಾರ ರಾಜಕೀಯದವರನ್ನು ನಾಯಕರು ಎಂದು ಸ್ವೀಕರಿಸುವ ಮನೋಭಾವವುಳ್ಳ ಚಳ್ಳಕೆರೆಯ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ಮತದಾರರು ಕ್ರಮವಾಗಿ ಶೇ. 26.66 ಹಾಗೂ ಶೇ. 21.74ರಷ್ಟಿದ್ದಾರೆ. ಹಾಗಾಗಿ ಕ್ಷೇತ್ರದ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರ ನಡುವೆ ಈ ರಾಜಕೀಯ ನಾಯಕತ್ವ ಒಪ್ಪಿಕೊಳ್ಳುವುದರಲ್ಲಿ ಶೇ.5 ವ್ಯತ್ಯಾಸ ಕಂಡುಬರುತ್ತದೆ. ಅದೇ ಮೊಳಕಾಲ್ಮೂರು ಕ್ಷೇತ್ರದಲ್ಲಿ ಶೇ. 29.33 ಪರಿಶಿಷ್ಟ ಪಂಗಡ ವರ್ಗದ ಮತದಾರರು ಈ ನಿಲುವಿನ ಪರವಾಗಿದ್ದಾರೆ. ಅದೇ ಶೇ. 46.85 ಪರಿಶಿಷ್ಟ ಪಂಗಡೇತರ ಮತದಾರರು ಈ ಅಭಿಪ್ರಾಯಕ್ಕೆ ಬದ್ದರಾಗಿದ್ದಾರೆ. ಹಾಗಾಗಿ ಪರಿಶಿಷ್ಟ ಪಂಗಡದವರಿಗಿಂತ ಪರಿಶಿಷ್ಟ ಪಂಗಡೇತರ ಸಮುದಾಯದ ಶೇ. 17 ಮತದಾರರು ರಾಜಕೀಯ ನಾಯಕತ್ವ ಒಪ್ಪುತ್ತಾರೆ. ಎರಡು ಕ್ಷೇತ್ರಗಳ ಅಭಿಪ್ರಾಯವನ್ನು ತೌಲನಿಕ ದೃಷ್ಟಿಕೋನದಲ್ಲಿ ನೋಡಿದಾಗ ಚಳ್ಳಕೆರೆಗಿಂತ ಮೊಳಕಾಲ್ಮೂರು ಮತದಾರರು ಇದಕ್ಕೆ ಹೆಚ್ಚಿನ ಒಲವು ತೋರಿದ್ದಾರೆ. ಮೀಸಲು ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದವರೇ ಪ್ರತಿನಿಧಿಗಳಾಗಿ ಆಯ್ಕೆಯಾಗುವುದರಿಂದ ಸಾಮಾನ್ಯವಾಗಿ ಇದಕ್ಕೆ ಸಹಮತ ವ್ಯಕ್ತವಾಗುತ್ತದೆ ಎಂಬುದು ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದೆ. ಆದರೆ ಪರಿಶಿಷ್ಟ ಪಂಗಡೇತರರು ಶಾಸಕರಾಗಲು ಮೀಸಲುಕ್ಷೇತ್ರದಲ್ಲಿ ಅವಕಾಶ ಇಲ್ಲದಿರುವುದರಿಂದ ಸಾಮಾನ್ಯವಾಗಿ ಅವರಲ್ಲಿ ಪರಿಶಿಷ್ಟ ಪಂಗಡ ನಾಯಕತ್ವದ ಬಗ್ಗೆ ವಿರೋಧ ಭಾವನೆಯಿದೆ ಎಂದು ಹೇಳಬಹುದು.

ಚಳುವಳಿಯ ಮುಖಂಡರನ್ನು ನಾಯಕರೆಂದು ಒಪ್ಪಿಕೊಳ್ಳುವ ಮತದಾರರು ಚಳ್ಳಕೆರೆಯ ಶೇ. 10.66 ಪರಿಶಿಷ್ಟ ಪಂಗಡ ಮತ್ತು ಶೇ. 12 ಪರಿಶಿಷ್ಟ ಪಂಗಡೇತರ ಮತದಾರರು ಒಪ್ಪುತ್ತಾರೆ. ಅಂತೆಯೇ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಶೇ. 16 ಪರಿಶಿಷ್ಟ ಪಂಗಡ ಹಾಗೂ ಶೇ. 6.85 ಪರಿಶಿಷ್ಟ ಪಂಗಡೇತರ ಮತದಾರರು ಇದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. ಎರಡು ಕ್ಷೇತ್ರಗಳ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರ ಮನೋಭಾವನೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಆದರೆ ಪ್ರಸ್ತುತದ ಪರಿಶಿಷ್ಟ ಪಂಗಡ ಚಳುವಳಿ ನಾಯಕತ್ವ, ಭ್ರಷ್ಟಾಚಾರ, ಅವ್ಯವಹಾರದಲ್ಲಿ ಭಾಗಿಯಾಗಿರುವುದರಿಂದ ಚಳುವಳಿಯ ನಾಯಕತ್ವದ ಮೇಲಿನ ಭರವಸೆಯನ್ನು ಎರಡು ಕ್ಷೇತ್ರದ ಪರಿಶಿಷ್ಟ ಪಂಗಡದವರು ಕಳೆದುಕೊಂಡಿದ್ದಾರೆ ಎಂದು ಹೇಳಬಹುದು.

ಜನಾಂಗದ ಮುಂದಾಳನ್ನು ನಾಯಕರೆಂದು ಚಳ್ಳಕೆರೆಯ ಶೇ. 17.33 ಪರಿಶಿಷ್ಟ ಪಂಗಡ ಮತ್ತು ಶೇ. 4 ಪರಿಶಿಷ್ಟ ಪಂಗಡೇತರ ಮತದಾರರು ಈ ಆಯ್ಕೆಗೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಪ್ರತಿಯಾಗಿ ಮೊಳಕಾಲ್ಮೂರಿನಲ್ಲಿ ಶೇ. 16 ಪರಿಶಿಷ್ಟ ಪಂಗಡ ಮತದಾರರು ಹಾಗೂ ಶೇ. 13.71 ಪರಿಶಿಷ್ಟ ಪಂಗಡೇತರ ಮತದಾರರು ಈ ಆಯ್ಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ. ಈ ರೀತಿ ವ್ಯಕ್ತವಾದ ಅಭಿಪ್ರಾಯಗಳಿಂದ ಜನಾಂಗದ ಮುಂದಾಳನ್ನು ಮೀಸಲುಕ್ಷೇತ್ರಗಳ ಮತದಾರರು ನಾಯಕರೆಂದು ಒಪ್ಪಿಕೊಳ್ಳುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ನಾಯಕತ್ವದಲ್ಲಿ ಸಂಘಟನಾಶಕ್ತಿ ಬಹಳ ಮುಖ್ಯವಾಗಿದೆ ಎಂದು ಹೇಳಬಹುದು.

ಸಮಾಜ ಸೇವಕರನ್ನು ನಾಯಕರೆಂದು ಚಳ್ಳಕೆರೆಯ ಶೇ. 45.33 ಪರಿಶಿಷ್ಟ ಪಂಗಡ ಮತ್ತು ಶೇ. 62.22 ಪರಿಶಿಷ್ಟ ಪಂಗಡೇತರ ಮತದಾರರು ಒಪ್ಪಿಕೊಳ್ಳುತ್ತಾರೆ. ಮೊಳಕಾಲ್ಮೂರಿನ ಶೇ. 38.66 ಪರಿಶಿಷ್ಟ ಪಂಗಡ ಮತ್ತು ಶೇ. 32.57 ಪರಿಶಿಷ್ಟ ಪಂಗಡೇತರ ಮತದಾರರು ಈ ಆಯ್ಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ. ಎರಡು ಕ್ಷೇತ್ರಗಳಲ್ಲಿ ಸಮಾಜ ಸೇವಕರು ನಮ್ಮ ನಾಯಕರಾಗಬೇಕು ಎಂದು ಭಾಗಶಃ ಮತದಾರರು ತಿಳಿಸುತ್ತಾರೆ. ಚಳ್ಳಕೆರೆ ಕ್ಷೇತ್ರದಲ್ಲಿ ಈ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಮೊಳಕಾಲ್ಮೂರಿನಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರರಲ್ಲಿ ಅಷ್ಟು ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ. ಭಾಗಶಃ ಮತದಾರರು ಸಮಾಜ ಸೇವಕರನ್ನು ಒಪ್ಪುವುದು ಸಮಾಜ ಸೇವಕರ ನಿಸ್ವಾರ್ಥ ಸೇವೆಗೆ ಎಂದು ತಿಳಿದುಬರುತ್ತದೆ. ಸಮಾಜ ಸೇವಕರು ಸಮಸ್ಯೆಗಳಿಗೆ ಸ್ಪಂದಿಸುವುದರಿಂದ ಈ

ಆಯ್ಕೆಯನ್ನು ಮತದಾರರು ಒಪ್ಪಿಕೊಂಡಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ಸ್ಪಷ್ಟವಾಗುತ್ತದೆ.

**ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ**

ಚಳ್ಳಕೆರೆ ಮತ್ತು ಮೊಳಕಾಲ್ಮುರು ಮೀಸಲುಕ್ಷೇತ್ರಗಳ ಪರಿಶಿಷ್ಟ ಪಂಗಡ ನಾಯಕತ್ವವನ್ನು ಪರಿಶಿಷ್ಟ ಪಂಗಡೇತರ ಮತದಾರರು ನೋಡುವ ದೃಷ್ಟಿಕೋನ ತಿಳಿಯಲು ಪ್ರಶ್ನಾವಳಿಯಲ್ಲಿ ವಿಶೇಷವಾಗಿ ಪರಿಶಿಷ್ಟ ಪಂಗಡೇತರ ಮತದಾರರಿಗೆ ಕೆಲವು ಪ್ರಶ್ನೆ ಕೇಳಲಾಗಿದೆ. ಅವರಿಂದ ಹೊರಹೊಮ್ಮಿದ ಅಭಿಪ್ರಾಯಗಳನ್ನು ಅಂಕಿ–ಅಂಶಗಳ ಸಹಾಯದಿಂದ ಕೋಷ್ಟಕದಲ್ಲಿ ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.


**ಕೋಷ್ಟಕ– 4.2.**

**ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಕ್ಷೇತ್ರದ ಅಭಿವೃದ್ಧಿಗೆ ಕಟಿಬದ್ಧವಾಗಿರಬೇಕು | 93 | 53.14 | 82 | 46.85 |
| 2 | ಸ್ವಂತ ನಿರ್ಧಾರ ಕೈಗೊಳ್ಳಬೇಕು | 24 | 13.71 | 12 | 6.85 |
| 3 | ಮತದಾರರ ಜೊತೆ ಮುಕ್ತವಾಗಿ ಬೆರೆಯುವಂತಿರಬೇಕು | 26 | 14.85 | 24 | 13.71 |
| 4 | ಪ್ರಾಮಾಣಿಕ ವ್ಯಕ್ತಿಯಾಗಿರಬೇಕು | 32 | 18.28 | 57 | 32.57 |
| | | **175** | **100** | **175** | **100** |
| | **ಒಟ್ಟು** | **175+175=** | | | **350** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಪರಿಶಿಷ್ಟ ಪಂಗಡ ನಾಯಕತ್ವ ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಸದರಿ ಕೋಷ್ಟಕದ ಪ್ರಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಸದಾ ಶ್ರಮಿಸುವ ಶಾಸಕರನ್ನು ಮೀಸಲುಕ್ಷೇತ್ರಗಳ ಪರಿಶಿಷ್ಟ ಪಂಗಡೇತರ ಮತದಾರರು ಅಪೇಕ್ಷಿಸುತ್ತಾರೆ ಎಂಬ ಅಭಿಪ್ರಾಯಕ್ಕೆ ಚಳ್ಳಕೆರೆಯಲ್ಲಿ ಶೇ. 53.14 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 46.85 ಮತದಾರರು ಈ ಗುಂಪಿನ ಶಾಸಕರನ್ನು ಬಯಸುತ್ತಾರೆ. ಮೊಳಕಾಲ್ಮೂರಿಗಿಂತ ಚಳ್ಳಕೆರೆಯಲ್ಲಿ ಶೇ. 6ಕ್ಕಿಂತ ಹೆಚ್ಚಿನ ಮತದಾರರು ಶಾಸಕರಿಂದ ಕ್ಷೇತ್ರದ ಅಭಿವೃದ್ಧಿಯನ್ನು ನಿರೀಕ್ಷಿಸುತ್ತಾರೆ. ಶಾಸಕ ಟಿ. ರಘುಮೂತಿ ಅವರು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿ, ಚಳ್ಳಕೆರೆಯನ್ನು ರಾಜ್ಯದಲ್ಲಿಯೇ ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ ಎಂಬುದು ಕ್ಷೇತ್ರದ ಮತದಾರರಿಂದ ಹೊರಹೊಮ್ಮಿದೆ.

ಸ್ವಂತ ನಿರ್ಧಾರ ತೆಗೆದುಕೊಳ್ಳುವ ಪರಿಶಿಷ್ಟ ಪಂಗಡ ನಾಯಕರ ಪರವಾಗಿ ಚಳ್ಳಕೆರೆ ಮತ್ತು ಮೊಳಕಾಲ್ಮೂರಿನ ಪರಿಶಿಷ್ಟ ಪಂಗಡೇತರ ಮತದಾರರು ಕ್ರಮವಾಗಿ ಶೇ. 13.71 ಮತ್ತು ಶೇ. 6.85 ಅಪೇಕ್ಷೆ ಪಡುತ್ತಾರೆ. ಈ ಪ್ರಮಾಣ ಚಳ್ಳಕೆರೆ ಮತದಾರರಲ್ಲಿ ಹೆಚ್ಚಾಗಿದೆ. ಚಳ್ಳಕೆರೆಯಲ್ಲಿ ಸ್ವತಂತ್ರ ನಾಯಕತ್ವದ ಕೊರತೆ ಇರುವುದರಿಂದ ಮತದಾರರು ಈ ನಿಲುವು ತಾಳಿದ್ದಾರೆ ಎಂಬ ನಿರ್ಧಾರಕ್ಕೆ ಬರಬಹುದು. ಪ್ರತಿಯಾಗಿ ಮೊಳಕಾಲ್ಮೂರು ಕ್ಷೇತ್ರದಲ್ಲಿ ಇದನ್ನು ಒಪ್ಪಿಕೊಳ್ಳುವುದರ ಪ್ರಮಾಣ ಕಡಿಮೆ ಇದೆ. ಏಕೆಂದರೆ ಈವರೆಗೆ ಚುನಾಯಿತರಾದ ಶಾಸಕರಲ್ಲಿ ಕೆಲವರು ಸಮರ್ಥ ನಾಯಕತ್ವವಿದ್ದ ಕಾರಣದಿಂದ ಈ ಪ್ರಮಾಣ ಕಡಿಮೆಯಾಗಿದೆ.

ಪರಿಶಿಷ್ಟ ಪಂಗಡ ಶಾಸಕರು ಮತದಾರರ ಜೊತೆ ಮುಕ್ತವಾಗಿ ಬೆರೆಯಬೇಕು ಹಾಗೂ ಮತದಾರರಲ್ಲಿ ಯಾವುದೇ ಭೇದ-ಭಾವ ಮಾಡದೇ ಎಲ್ಲರನ್ನು ಸಮಾನವಾಗಿ ನೋಡುವ ಗುಣ ಹೊಂದಿರಬೇಕು ಎಂಬ ಅಭಿಪ್ರಾಯವನ್ನು ಕ್ರಮವಾಗಿ ಚಳ್ಳಕೆರೆ ಮತ್ತು ಮೊಳಕಾಲ್ಮೂರಿನಲ್ಲಿ ಕ್ರಮವಾಗಿ ಶೇ. 14.85 ಮತ್ತು ಶೇ. 13.71 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ.

ಸಾಮಾನ್ಯವಾಗಿ ನಾಯಕರಲ್ಲಿ ಪಕ್ಷ, ಪ್ರಾಂತ್ಯ, ಜಾತಿಯಂತಹ ಅಂಶಗಳ ಆಧಾರದ ಮೇಲೆ ಮತದಾರನಿಗೆ ಪ್ರಾಶಸ್ತ ಕೊಡುವುದು ಶಾಸಕರಿಗೆ ಪರಿಪಾಟವಾಗಿದೆ. ಆದ್ದರಿಂದ ಎರಡು ಕ್ಷೇತ್ರಗಳ ಮತದಾರರ ದೃಷ್ಟಿಕೋನದಲ್ಲಿ ಕಷ್ಟ-ಸುಖಗಳಿಗೆ ಸ್ಪಂದಿಸುವ ಶಾಸಕರ ನಾಯಕತ್ವವನ್ನು ಶೇ. 14 ಮತದಾರರು ನಿರೀಕ್ಷಿಸುತ್ತಾರೆ ಎಂಬುದನ್ನು ಕೋಷ್ಟಕದ ಸಹಾಯದಿಂದ ತಿಳಿದುಕೊಳ್ಳಲಾಗಿದೆ.

ಪರಿಶಿಷ್ಟ ಪಂಗಡ ಶಾಸಕರು ಪ್ರಾಮಾಣಿಕ ವ್ಯಕ್ತಿಗಳಾಗಿರಬೇಕು ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 18.28 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 32.57 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ. ಚಳ್ಳಕೆರೆಗಿಂತ ಮೊಳಕಾಲ್ಮೂರಿನಲ್ಲಿ ಶೇ. 14 ಹೆಚ್ಚಿನ ಮತದಾರರು ಪ್ರಾಮಾಣಿಕ ನಾಯಕತ್ವವನ್ನು ಅಪೇಕ್ಷೆ ಪಟ್ಟಿದ್ದಾರೆ. ಸಾಮಾನ್ಯವಾಗಿ ಶಾಸಕರು ಅವ್ಯವಹಾರ ಭ್ರಷ್ಟಚಾರದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಭಾಗಿಯಾಗುತ್ತಿರುವುದರಿಂದ ಜನಸಾಮಾನ್ಯರು ನಾಯಕತ್ವದ ಗುಣ ಲಕ್ಷಣಗಳಲ್ಲಿ ಒಂದಾದ ಈ ಅಂಶವನ್ನು ಅಪೇಕ್ಷೆ ಪಡುವುದು ಸಹಜವಾಗಿದೆ.


**ಕೋಷ್ಟಕ–4.3.**

**ಶಾಸಕರ ನಾಯಕತ್ವ ಗುಣ ಕುರಿತು ಪರಿಶಿಷ್ಟ ಪಂಗಡೇತರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಪರಿಶಿಷ್ಟ ಪಂಗಡದವರ ಹಿತಕ್ಕಾಗಿ ಹೋರಾಡಬೇಕು | 3 | 1.71 | 0 | 0 |
| 2 | ಪರಿಶಿಷ್ಟ ಪಂಗಡೇತರರಿಗೆ ಮಾತ್ರ ಸೌಕರ್ಯ ಒದಗಿಸಿಕೊಡಬೇಕು | 25 | 14.28 | 11 | 6.28 |
| 3 | ಎಲ್ಲಾ ಜಾತಿ ಮತ್ತು ಧರ್ಮದವರನ್ನು ಸಮಾನವಾಗಿ ಕಾಣಬೇಕು | 133 | 76 | 139 | 79.42 |
| 4 | ರಾಷ್ಟ್ರ ನಿರ್ಮಾಣದ ಗುಣ ಹೊಂದಿರಬೇಕು | 14 | 8 | 25 | 14.28 |
| | | **175** | **100** | **175** | **100** |
| **ಒಟ್ಟು** | | **175+175=** | | **350** | |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಶಾಸಕರ ನಾಯಕತ್ವ ಗುಣ ಕುರಿತಂತೆ ಪರಿಶಿಷ್ಟ ಪಂಗಡೇತರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಕೋಷ್ಟಕದ ಅಂಕಿ–ಅಂಶಗಳ ಪ್ರಕಾರ ಶಾಸಕರು ಪರಿಶಿಷ್ಟ ಪಂಗಡದವರ ಹಿತಕ್ಕಾಗಿ ಹೋರಾಡಬೇಕು ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 1.71 ಮತ್ತು ಮೊಳಕಾಲ್ಮೂರಿನಲ್ಲಿ ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ ಶೂನ್ಯವಾಗಿದೆ. ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಮೊದಲು ಶ್ರಮಿಸಬೇಕು ಎಂಬ ಮನೋಭೂಮಿಕೆ ಉಳ್ಳ ಮತದಾರರು ಬೆರಳೆಣಿಕೆಯಷ್ಟಿದ್ದಾರೆ. ಈ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿ ನಿರೀಕ್ಷಿಸುವವರು ಇಲ್ಲ ಎಂಬ ಅಂಶ ಕ್ಷೇತ್ರಕಾರ್ಯದಲ್ಲಿ ಗೋಚರವಾಗಿದೆ. ಆದ್ದರಿಂದ ಅಧ್ಯಯನವು ಪರಿಶಿಷ್ಟ ಪಂಗಡದವರ ಅಭಿಪ್ರಾಯವನ್ನು ಪುರಸ್ಕರಿಸುವುದಿಲ್ಲ. ಶಾಸಕರು ಪರಿಶಿಷ್ಟ ಪಂಗಡೇರರಿಗೆ ಮಾತ್ರ ಸೌಲಭ್ಯ ಒದಗಿಸಬೇಕು ಎಂಬ ಅಭಿಪ್ರಾಯವನ್ನು ಹೊಂದಿದವರು ಕ್ರಮವಾಗಿ ಚಳ್ಳಕೆರೆ ಶೇ. 14.28 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 6.28 ಮತದಾರರಿದ್ದಾರೆ. ಈ ಅಭಿಪ್ರಾಯವು ಅನಕ್ಷರಸ್ಥ ಮತ್ತು ಕನಿಷ್ಠ ಶಿಕ್ಷಣ ಪಡೆದ ಮತದಾರರ ಪ್ರತಿಕ್ರಿಯೆ.

ಎಲ್ಲಾ ಜಾತಿ ಮತ್ತು ಧರ್ಮದವರನ್ನು ಸಮಾನವಾಗಿ ಕಾಣುವ ಮನೋಭಾವವನ್ನು ಶಾಸಕರು ಹೊಂದಿರಬೇಕು ಎಂದು ಚಳ್ಳಕೆರೆ ಶೇ. 76 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 79.42 ಪರಿಶಿಷ್ಟ ಪಂಗಡೇತರ ಮತದಾರರು ತಮ್ಮ ಸಹಮತ ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಎರಡು ಕ್ಷೇತ್ರಗಳಲ್ಲಿಯೂ ಈ ರೀತಿಯ ಭಾವನೆ ಉಳ್ಳ ಪರಿಶಿಷ್ಟ ಪಂಗಡೇತರ ಮತದಾರರು ಶೇ. 77ಕ್ಕಿಂತ ಹೆಚ್ಚಾಗಿದ್ದಾರೆ. ಮೀಸಲುಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡ ನಾಯಕತ್ವ ರೂಪಗೊಳ್ಳಲು ಸಮಾಜ ಎಲ್ಲಾ ಜಾತಿಗಳ ಪಾತ್ರ ಇರುತ್ತದೆ. ಆದ್ದರಿಂದ ಎಲ್ಲರನ್ನು ಸಮಾನ ರೀತಿಯಲ್ಲಿ ನೋಡುವ ಮನೋಭಾವ ಶಾಸಕರಲ್ಲಿ ಇರಬೇಕೆಂಬ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದು. ಶಾಸಕರಲ್ಲಿ ರಾಷ್ಟ್ರ ನಿರ್ಮಾಣದ ಗುಣ ಇರಬೇಕೆಂದು ಅಪೇಕ್ಷೆ ಪಡುವ ಪರಿಶಿಷ್ಟ ಪಂಗಡೇತರ ಮತದಾರರು ಕ್ರಮವಾಗಿ ಚಳ್ಳಕೆರೆಯಲ್ಲಿ ಶೇ. 8 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 14.28 ರಷ್ಟಿದ್ದಾರೆ. ಶಾಸಕರು ಎಲ್ಲಾ ಜಾತಿ ಮತ್ತು ಧರ್ಮಗಳನ್ನು ಸಮಾನ ರೀತಿಯಲ್ಲಿ ನೋಡುವ ಜೊತೆಗೆ ರಾಷ್ಟ್ರ ನಿರ್ಮಾಣದ ಗುರಿಯನ್ನು ಮೀಸಲು ಶಾಸಕರು ಹೊಂದಿರಬೇಕೆಂಬ ಅಗತ್ಯತೆಯನ್ನು ಸಂಶೋಧನೆಯು ಒತ್ತಿ ಹೇಳುತ್ತದೆ.

**ಕೋಷ್ಟಕ– 4.4.**

**ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕಿರುವ ವ್ಯತ್ಯಾಸಗಳನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 38 | 21.71 | 36 | 20.57 |
| 2 | ಇಲ್ಲ | 106 | 60.57 | 82 | 46.85 |
| 3 | ಗೊತ್ತಿಲ್ಲ | 31 | 17.71 | 57 | 32.56 |
| | | **175** | **100** | **175** | **100** |
| **ಒಟ್ಟು** | | **175+175=** | | | **350** |

**ನಿಮ್ಮ ಉತ್ತರ ಹೌದು ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಜನ ಬೆಂಬಲದಲ್ಲಿ | 14 | 38.88 | 20 | 52.63 |
| 2 | ವ್ಯಕ್ತಿತ್ವದಲ್ಲಿ | 10 | 27.76 | 4 | 10.52 |
| 3 | ಜಾತಿ ಹಿನ್ನೆಲೆಯಲ್ಲಿ | 8 | 22.23 | 10 | 26.52 |
| 4 | ಪಕ್ಷ ನೀಡುವ ಸ್ಥಾನದಲ್ಲಿ | 4 | 11.12 | 4 | 10.52 |
| | | **36** | **100** | **38** | **100** |
| **ಒಟ್ಟು** | | **36+38=** | | | **74** |

**ಮೂಲ:** ಕ್ಷೇತ್ರ ಕಾರ್ಯ

**ಟಿಪ್ಪಣಿ:** ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕಿರುವ ವ್ಯತ್ಯಾಸಗಳನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕೂ ವ್ಯತ್ಯಾಸವಿದೆ ಎಂಬುದು ಚಳ್ಳಕೆರೆಯಲ್ಲಿ ಶೇ. 20.57 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 21.71 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ. ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವಕ್ಕೂ ಯಾವುದೇ ವ್ಯತ್ಯಾಸಗಳಿಲ್ಲ, ನಾಯಕತ್ವ ಎಂಬುದು ಎಲ್ಲರಿಗೂ ಒಂದೇ ಎನ್ನುವ ಮನೋಭಾವನೆಯನ್ನು ಹೊಂದಿರುವವರು ಚಳ್ಳಕೆರೆಯಲ್ಲಿ ಶೇ. 46.85 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 60.57 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ. ಚಳ್ಳಕೆರೆಗಿಂತ ಮೊಳಕಾಲ್ಮೂರಿನಲ್ಲಿ ಶೇ.13 ಹೆಚ್ಚಿನ ಮತದಾರರು ಈ ಅಭಿಪ್ರಾಯದ ಪರವಾಗಿದ್ದಾರೆ.

ನಾಯಕತ್ವ ಪರಿಕಲ್ಪನೆ ಅರ್ಥ ಮಾಡಿಕೊಂಡಿರುವ ಮತದಾರರು ಎರಡು ನಾಯಕತ್ವದ ನಡುವಿನ ಭಿನ್ನತೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಜಾತಿ ಆಧಾರಿತ ಸಮಾಜದಲ್ಲಿ ಪರಿಶಿಷ್ಟ ಪಂಗಡ ನಾಯಕರಿಗೂ ಮತ್ತು ಪ್ರಬಲ ಜಾತಿಯ ನಾಯಕರಿಗೂ ವ್ಯತ್ಯಾಸ ಕಂಡುಬರುತ್ತದೆ ಎಂಬ ವಾದವನ್ನು ಇಂದಿನ ರಾಜಕೀಯಕ್ಕೆ ಸಮರ್ಥನೆಯಾಗಿ ನೀಡಬಹುದು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸೂಕ್ಷ್ಮ ಬುದ್ಧಿವಂತ ಪರಿಶಿಷ್ಟ ಪಂಗಡೇತರ ಮತದಾರರು ತನ್ನ ಚಾಕಚಕ್ಯತೆಯಿಂದ ಸತ್ಯವನ್ನು ಮರೆಮಾಚುವ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಈ ಅಭಿಪ್ರಾಯವನ್ನು ಸಂಶೋಧನೆ ಬೆಂಬಲಿಸುವುದಿಲ್ಲ.

ಇನ್ನು ಗೊತ್ತಿಲ್ಲ ಎನ್ನುವ ಮನೋಭಾವನೆ ಚಳ್ಳಕೆರೆಯ ಶೇ. 32.56 ಮತ್ತು ಶೇ. 17.71 ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವಾಗಿದೆ.

ಜನ ಬೆಂಬಲದ ಆಧಾರದ ಮೇಲೆ ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವದಲ್ಲಿನ ಭಿನ್ನತೆಗಳನ್ನು ಚಳ್ಳಕೆರೆಯಲ್ಲಿ ಶೇ. 38.88 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 52.63 ಪರಿಶಿಷ್ಟ ಪಂಗಡೇತರ ಮತದಾರರು ಗುರುತಿಸುತ್ತಾರೆ. ಪರಿಶಿಷ್ಟ ಪಂಗಡೇತರರು ಈ ನಿಲುವನ್ನು ತಾಳಲು ಕಾರಣವೇನೆಂದರೆ ಜಾತಿ ಆಧಾರಿತ ಪ್ರಬಲ ಜಾತಿ ಮನಸ್ಸುಗಳು ಪರಿಶಿಷ್ಟ ಪಂಗಡ ನಾಯಕರನ್ನು ನಮ್ಮ ನಾಯಕರೆಂದು ಒಪ್ಪಲು ಸಿದ್ಧರಿರುವುದಿಲ್ಲ. ಇದಕ್ಕೆ ಪ್ರತಿಯಾಗಿ ಕೆಳಸ್ತರದ ಜಾತಿಯವರು ಪ್ರಬಲ ಜಾತಿಯ ನಾಯಕರೆಂದು ಒಪ್ಪಿಕೊಳ್ಳುತ್ತಾರೆ. ಮೇಲ್ವರ್ಗಕ್ಕೆ ಕೆಳಸ್ತರದ ಜಾತಿಯ ಮೇಲಿರುವ ಕೀಳರಿಮೆ ಹಾಗೂ ಕೆಳಸ್ತರದ ಜಾತಿಗೆ ಉನ್ನತವರ್ಗದ ಮೇಲಿರುವ ಮೇಲಿರಿಮೆ ಇದಕ್ಕೆ ಕಾರಣವಾಗಿದೆ. ಆದ್ದರಿಂದ ಪರಿಶಿಷ್ಟ ಪಂಗಡೇತರರು ಜನ ಬೆಂಬಲದ ಆಧಾರದ ಮೇಲೆ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ನಾಯಕತ್ವದಲ್ಲಿ ವ್ಯತ್ಯಾಸ ಗುರುತಿಸುತ್ತಾರೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಸಾಮಾನ್ಯ ಮತ್ತು ಪರಿಶಿಷ್ಟ ಪಂಗಡ ನಾಯಕತ್ವದ ವ್ಯಕ್ತಿತ್ವದಲ್ಲಿ ಭಿನ್ನತೆ ಗುರ್ತಿಸುವ ಮತದಾರರು ಚಳ್ಳಕೆರೆಯಲ್ಲಿ ಶೇ. 27.76 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 10.52ರಷ್ಟಿದ್ದಾರೆ. ಮೊಳಕಾಲ್ಮೂರಿಗಿಂತ ಚಳ್ಳಕೆರೆಯಲ್ಲಿ ಶೇ. 16 ಹೆಚ್ಚಿನ ಮತದಾರರು ಈ ಅಭಿಪ್ರಾಯದ ಪರವಾಗಿದ್ದಾರೆ. ಸಾಮಾನ್ಯವಾಗಿ ಮೀಸಲು ಕ್ಷೇತ್ರಗಳಲ್ಲಿ ಸ್ವಸಾಮರ್ಥ್ಯದ ಮೇಲೆ ನಾಯಕತ್ವ ರೂಪವಾಗದೆ ಪಕ್ಷ ಅಥವಾ ಪ್ರಬಲ ವ್ಯಕ್ತಿಗಳ ಆಶ್ರಯದಲ್ಲಿ ಅವಲಂಬಿತ ನಾಯಕತ್ವ ರೂಪಗೊಳ್ಳುತ್ತದೆ. ಆದರೆ ಈ ಅಂಶವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಜಾತಿಯ ಹಿನ್ನೆಲೆಯಲ್ಲಿ ನಾಯಕತ್ವದಲ್ಲಿ ವ್ಯತ್ಯಾಸ ಗುರುತಿಸುವವರು ಚಳ್ಳಕೆರೆಯಲ್ಲಿ ಶೇ. 22.33 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 26.31 ಪರಿಶಿಷ್ಟ ಪಂಗಡೇತರ ಮತದಾರರಿದ್ದಾರೆ. ಎರಡು ಕ್ಷೇತ್ರದಲ್ಲಿ ಈ ಮನಸ್ಸುಳ್ಳ ಮತದಾರರು ಸಮ ಪ್ರಮಾಣದಲ್ಲಿದ್ದಾರೆ. ಜಾತಿ ಆಧಾರಿತ ಸಮಾಜದಲ್ಲಿ ಜಾತಿಯ ಮೂಲಕವೇ ಎಲ್ಲವೂ ನಿರ್ಧರಿಸಲ್ಪಡುತ್ತದೆ. ಅಂತೆಯೇ ಪರಿಶಿಷ್ಟ ಪಂಗಡ ನಾಯಕತ್ವವು ಸಹ ನಿರ್ಧಾರವಾಗುತ್ತದೆ. ಕೆಳ ಸಮುದಾಯದಲ್ಲಿ ನಾಯಕತ್ವ ರೂಪಗೊಳ್ಳಲು ಕೆಲವರಿಗೆ ಜಾತಿ ಸಹಾಯಕವಾದರೆ, ಕೆಲವರಿಗೆ ಮಾರಕವಾಗಿದೆ. ಸಾಮಾನ್ಯವರ್ಗದ ನಾಯಕರಿಗೆ ಈ ಅಂಶ ಹೆಚ್ಚು ಅನುಕೂಲವಾಗುತ್ತದೆ. ಆದರೆ ಪರಿಶಿಷ್ಟ ಪಂಗಡದವರ ಸ್ವತಂತ್ರ ನಾಯಕತ್ವಕ್ಕೆ ಇದು ಮಾರಕವಾಗುತ್ತದೆ ಎಂಬ ನಿರ್ಧಾರಕ್ಕೆ ಬರಬಹುದು.

ರಾಜಕೀಯ ಪಕ್ಷಗಳು ನಾಯಕರಿಗೆ ನೀಡುವ ಸ್ಥಾನಮಾನಗಳ ಆಧಾರದ ಮೇಲೆ ನಾಯಕತ್ವ ನಿರ್ಧರಿಸುವ ಪರಿಶಿಷ್ಟ ಪಂಗಡೇತರರು ಚಳ್ಳಕೆರೆಯಲ್ಲಿ ಶೇ. 11.12 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 10.52 ಮತದಾರರಿದ್ದಾರೆ. ಜಾತಿಯ ಆಧಾರದ ಮೇಲೆ ರಾಜಕಾರಣದಲ್ಲಿ ಎಲ್ಲವೂ ನಿರ್ಧಾರವಾಗುತ್ತದೆ. ಉದಾಹರಣೆ:– ಚುನಾವಣೆಗೆ ಟಿಕೆಟ್ ನೀಡುವುದರಿಂದ ಮಂತ್ರಿಪದವಿ ಪಡೆಯುವವರೆಗೆ ಜಾತಿಯ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡೇತರರಿಗೆ ಸಚಿವ ಸ್ಥಾನಗಳು ದೊರೆಯುತ್ತವೆ. ಪರಿಶಿಷ್ಟ ಪಂಗಡ ನಾಯಕರು ಸ್ಥಾನಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದ್ದರೂ ಕೂಡ ಜಾತಿಯಿಂದಾಗಿ ಅನ್ಯಾಯವಾಗಿದೆ.

ಒಟ್ಟಾರೆಯಾಗಿ ರಾಜಕಾರಣದಲ್ಲಿ ಜಾತಿವ್ಯವಸ್ಥೆಯು ಪರಿಶಿಷ್ಟ ಪಂಗಡದವರ ರಾಜಕೀಯ ಪ್ರಾತಿನಿಧ್ಯತೆಗೆ ಧಕ್ಕೆಯಾಗಿ ಪರಿಣಮಿಸಿದೆ ಎಂದು ಪ್ರಸ್ತುತ ರಾಜಕಾರಣವನ್ನು ಆಧಾರವಾಗಿಟ್ಟು ಹೇಳಬಹುದು.


**ಕೋಷ್ಟಕ–4.5.**

**ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳ ಪಾತ್ರ ಕುರಿತು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ನಿಯಂತ್ರಿಸುತ್ತಾರೆ | 18 | 24 | 22 | 29.33 |
| 2 | ಪ್ರೋತ್ಸಾಹ ನೀಡುತ್ತಾರೆ | 13 | 17.33 | 15 | 20 |
| 3 | ತಟಸ್ಥ ಧೋರಣೆ | 3 | 4 | 3 | 4 |
| 4 | ತುಳಿಯುವ ಸ್ವಭಾವ | 41 | 54.66 | 35 | 46.66 |
| | | **75** | **100** | **75** | **100** |
| | **ಒಟ್ಟು** | **75+75=** | | | **150** |

**ಮೂಲ:** ಕಾರ್ಯಕ್ಷೇತ್ರ

**ಟಿಪ್ಪಣಿ:** ಸದರಿ ಪ್ರಶ್ನೆಯು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯವನ್ನು ಮಾತ್ರ ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಜಾತಿ ಆಧಾರಿತ ಸಮಾಜದಲ್ಲಿ ಜಾತ್ಯತೀತ ತತ್ವಗಳು ಬುಡಮೇಲಾಗಿ ರಾಜಕಾರಣದಲ್ಲಿ ಜಾತಿ ಪ್ರಧಾನ ಭೂಮಿಕೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡದ ನಾಯಕತ್ವದ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳು ಯಾವ ರೀತಿಯ ಪಾತ್ರ ನಿರ್ವಹಿಸುತ್ತವೆ ಎಂದು ತಿಳಿಯಲು ಪ. ಪಂ. ಮತದಾರರಿಗೆ ಪ್ರಶ್ನೆ ಮಾಡಿದ ಸಂದರ್ಭದಲ್ಲಿ ಅವರಿಂದ ಹೊರಹೊಮ್ಮಿದ ಅಭಿಪ್ರಾಯ ಹೀಗಿದೆ. ಪರಿಶಿಷ್ಟ ಪಂಗಡ ನಾಯಕತ್ವ ಬೆಳೆಯಲು ಅವಕಾಶ ನೀಡಿ ಅವರ ಮೇಲೆ ಹಿಡಿತ ಸಾಧಿಸಿ ಪರಿಶಿಷ್ಟ ಪಂಗಡ ನಾಯಕರನ್ನು ಕೈಗೊಂಬೆಗಳಾಗಿ ಮಾಡಿಕೊಂಡಿದ್ದಾರೆ ಎಂಬ ಈ ಅಭಿಪ್ರಾಯವನ್ನು ಶೇ. 24.00 ಮತ್ತು ಶೇ. 29.33

ಕ್ರಮವಾಗಿ ಚಳ್ಳಕೆರೆ, ಮೊಳಕಾಲ್ಮೂರು ಪರಿಶಿಷ್ಟ ಪಂಗಡ ಮತದಾರರು ಹೊಂದಿದ್ದಾರೆ. ಚಳ್ಳಕೆರೆಗಿಂತ ಮೊಳಕಾಲ್ಮೂರಿನಲ್ಲಿ ಶೇ. 5 ಹೆಚ್ಚಿನ ಮತದಾರರು ಇದರ ಪರವಾಗಿದ್ದಾರೆ. ಮೀಸಲುಕ್ಷೇತ್ರಗಳ ಚುನಾವಣಾ ರಾಜಕೀಯದಲ್ಲಿ ಇದು ಅಕ್ಷರಶಃ ಸಾಬೀತಾಗುತ್ತದೆ. ಪ್ರಬಲ ಜಾತಿಗಳು ತಮ್ಮ ತಾಳಕ್ಕೆ ಕುಣಿಯುವ ವ್ಯಕ್ತಿಯನ್ನು ಚುನಾವಣೆಯಲ್ಲಿ ಕಣಕ್ಕೆ ಇಳಿಸಿ ಆತನಿಗೆ ಪಕ್ಷದ ಟಿಕೆಟ್ ದೊರೆಯುವಂತೆ ಮಾಡಿ, ಹಣಕಾಸಿನ ನೆರವು ನೀಡುವುದರೊಂದಿಗೆ ಚುನಾವಣೆಯಲ್ಲಿ ಯಶಸ್ಸು ಪಡೆಯುತ್ತಾರೆ. ನಂತರ ತಮ್ಮ ಹಿತಾಸಕ್ತಿಗಳನ್ನು ಆತನ ಮೂಲಕ ಸಾಧಿಸಿ ಅವನನ್ನು ನಿಯಂತ್ರಿಸುತ್ತಾರೆ. ಇದರ ಮೂಲ ಉದ್ದೇಶವೆಂದರೆ ಸ್ವತಂತ್ರ ಪ. ಪಂ. ನಾಯಕನನ್ನು ಸೋಲಿಸುವ ಪ್ರಯತ್ನ ಮೀಸಲುಕ್ಷೇತ್ರಗಳಲ್ಲಿ ನಡೆಯುತ್ತಾ ಬಂದಿದೆ. ಇದಕ್ಕೆ ಉದಾಹರಣೆಯಾಗಿ ಲೋಕಸಭಾ ಚುನಾವಣೆಯಲ್ಲಿ 1951–52 ಹಾಗೂ ಉಪಚುನಾವಣೆ ಡಾ. ಬಿ. ಆರ್ ಅಂಬೇಡ್ಕರ್ ಅವರು ಮೀಸಲು ಕ್ಷೇತ್ರದಲ್ಲಿ ಅವರ ಸೋಲನ್ನು ಸಮರ್ಥನೆಯಾಗಿ ನೀಡಬಹುದು.

ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರೋತ್ಸಾಹ ನೀಡುತ್ತಾರೆ ಎಂದು ಚಳ್ಳಕೆರೆಯಲ್ಲಿ ಶೇ. 17.33 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 20.00 ಪರಿಶಿಷ್ಟ ಪಂಗಡ ಮತದಾರರು ಸೂಚಿಸಿದ್ದಾರೆ. ವಾಸ್ತವವಾಗಿ ಪ್ರಗತಿಪರ ಮತ್ತು ಜಾತ್ಯತೀತ ಮನಸ್ಸುಗಳುಳ್ಳ ಪರಿಶಿಷ್ಟ ಪಂಗಡೇತರರು ಮಾತ್ರ ತಮ್ಮ ಬೆಂಬಲ ನೀಡುತ್ತಾರೆ. ಆದರೆ ಈ ಪ್ರಮಾಣ ಕಡಿಮೆ ಎಂಬುದನ್ನು ಕ್ಷೇತ್ರಕಾರ್ಯದಿಂದ ತಿಳಿಯಲಾಗಿದೆ.

ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಗಳು ತಟಸ್ಥ ಧೋರಣೆ ಅನುಸರಿಸುತ್ತಾರೆ ಎಂದು ಚಳ್ಳಕೆರೆಯಲ್ಲಿ ಶೇ. 4 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 4 ಮತದಾರರ ಅಭಿಪ್ರಾಯವಾಗಿದೆ. ಸಾಮಾನ್ಯವಾಗಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇರುವ ಜಾತಿ ಮನಸ್ಸುಗಳು ಮಾತ್ರ ತಟಸ್ಥ ಧೋರಣೆ ಹೊಂದಿದ್ದಾರೆ ಎಂಬುದನ್ನು ಗುರುತಿಸಲಾಗಿದೆ.

**ಕೋಷ್ಟಕ– 4.6.**

**ಮೀಸಲುಕ್ಷೇತ್ರಗಳು ಪರಿಶಿಷ್ಟ ಪಂಗಡದವರಿಗೆ ರಾಜಕೀಯ ನಾಯಕತ್ವ ರೂಪಿಸುವಲ್ಲಿ ಸಹಕಾರಿಯಾಗಿವೆಯೇ ಎಂಬುದರ ಬಗ್ಗೆ ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 35 | 46.66 | 32 | 42.66 |
| 2 | ಇಲ್ಲ | 32 | 42.66 | 37 | 49.33 |
| 3 | ಗೊತ್ತಿಲ್ಲ | 8 | 10.66 | 6 | 8 |
| | | **75** | **100** | **75** | **100** |
| **ಒಟ್ಟು** | | **75+75=** | | | **150** |

**ಮೂಲ:** ಕಾರ್ಯಕ್ಷೇತ್ರ

**ಟಿಪ್ಪಣಿ:** ಸದರಿ ಪ್ರಶ್ನೆಯು ಪರಿಶಿಷ್ಟ ಪಂಗಡ ಮತದಾರರ ಅಭಿಪ್ರಾಯವನ್ನು ಮಾತ್ರ ಸ್ಪಷ್ಟಪಡಿಸುತ್ತದೆ.

ಪರಿಶಿಷ್ಟ ಪಂಗಡದವರಿಗೆ ರಾಜಕೀಯ ನಾಯಕತ್ವ ರೂಪಿಸುವಲ್ಲಿ ಮೀಸಲುಕ್ಷೇತ್ರಗಳು ಸಹಾಯಕವಾಗಿವೆ ಎಂಬ ಸಕಾರಾತ್ಮಕ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 46.66 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 42.66 ಪರಿಶಿಷ್ಟ ಪಂಗಡ ಮತದಾರರು ಹೊಂದಿದ್ದಾರೆ. ಎರಡು ಕ್ಷೇತ್ರಗಳಲ್ಲಿ ವ್ಯಕ್ತವಾದ ಅಭಿಪ್ರಾಯ ಗಮನಿಸಿದಾಗ ಸ್ವತಂತ್ರ ನಾಯಕತ್ವ ರೂಪಗೊಂಡಿರುವುದು ಕಾಣಬಹುದಾಗಿದೆ. ಇದಕ್ಕೆ ಸಮರ್ಥನೆಯಾಗಿ ಮತದಾರರು ಶಾಸಕರ ವ್ಯಕ್ತಿತ್ವ ವಿವರಿಸಿ ಸ್ವತಂತ್ರ ಮತ್ತು ಪ್ರಾಮಾಣಿಕ ನಾಯಕತ್ವಕ್ಕೆ ಸ್ವಾಭಿಮಾನಿ ತಿಪ್ಪೇಸ್ವಾಮಿ ಅವರ ಹೆಸರನ್ನು ಕ್ಷೇತ್ರಕಾರ್ಯದಲ್ಲಿ ಮತದಾರರು ಉಲ್ಲೇಖಿಸಿರುತ್ತಾರೆ. ಇದು ವಾಸ್ತವಿಕವಾಗಿ ಸತ್ಯ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಪರಿಶಿಷ್ಟ ಪಂಗಡ ನಾಯಕತ್ವ ರೂಪಗೊಳ್ಳಲು ಮೀಸಲುಕ್ಷೇತ್ರಗಳು ಸಹಾಯಕವಾಗಿಲ್ಲ ಎಂಬ ನಕಾರಾತ್ಮಕ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 42.66 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 49.33 ಮತದಾರರು ಹೊಂದಿದ್ದಾರೆ. ಏಕೆಂದರೆ ಪ್ರಬಲ ಪರಿಶಿಷ್ಟ ಪಂಗಡ ನಾಯಕತ್ವ ರೂಪಿತವಾಗದೇ ಇರಲು ಪರಿಶಿಷ್ಟ ಪಂಗಡದವರ ಒಗ್ಗಟ್ಟಿನ ಸಮಸ್ಯೆ ಮತ್ತು ಜಾತಿ ರಾಜಕೀಯ ದೊಡ್ಡ ಸವಾಲಾಗಿದೆ.

ಪರಿಶಿಷ್ಟ ಪಂಗಡ ನಾಯಕತ್ವ ರೂಪಗೊಳ್ಳಲು ಮೀಸಲುಕ್ಷೇತ್ರಗಳು ಸಹಾಯಕವಾಗಿವೆಯೋ ಎಂಬ ಪ್ರಶ್ನೆಗೆ ಗೊತ್ತಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 10.66 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 8 ಮತದಾರರು ಹೊಂದಿದ್ದಾರೆ.

**ಕೋಷ್ಟಕ– 4.7.**

**ಪರಿಶಿಷ್ಟ ಪಂಗಡದವರ ನಾಯಕತ್ವ ಒಪ್ಪುತ್ತೀರಾ ಎಂಬುದನ್ನು ಕುರಿತು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 146 | 83.42 | 137 | 78.28 |
| 2 | ಇಲ್ಲ | 21 | 12 | 32 | 18.28 |
| 3 | ಗೊತ್ತಿಲ್ಲ | 8 | 4.57 | 6 | 3.42 |
| | | **175** | **100** | **175** | **100** |
| | **ಒಟ್ಟು** | **175+175** | | | **350** |

**ನಿಮ್ಮ ಉತ್ತರ ಇಲ್ಲ ಎಂದಾದರೆ ಕಾರಣ ತಿಳಿಸಿ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ನಾಯಕತ್ವ ರಾಜಕೀಯ | 3 | 14.28 | 4 | 12.5 |
| 2 | ಪ್ರತಿನಿಧಿತ್ವ ರಾಜಕಾರಣ | 9 | 42.85 | 4 | 12.5 |
| 3 | ಸಮಸ್ಯೆ ಪರಿಹರಿಸುವಲ್ಲಿ ವಿಫಲತೆ | 8 | 38.09 | 15 | 46.87 |
| 4 | ಅಧಿಕಾರ ರಾಜಕಾರಣ | 1 | 4.76 | 9 | 28.12 |
| | | **21** | **100** | **32** | **100** |
| | **ಒಟ್ಟು** | **21+32=** | | | **53** |

**ಮೂಲ:** ಕ್ಷೇತ್ರಕಾರ್ಯ

**ಟಿಪ್ಪಣಿ:** ಸದರಿ ಪ್ರಶ್ನೆಯು ಪರಿಶಿಷ್ಟ ಪಂಗಡೇತರ ಅಭಿಪ್ರಾಯವನ್ನು ಮಾತ್ರ ಸ್ಪಷ್ಟ ಪಡಿಸುತ್ತದೆ.

ಮೇಲ್ಕಂಡ ಕೋಷ್ಟಕದ ಆಧಾರದ ಮೇಲೆ ನಾಯಕತ್ವವನ್ನು ಒಪ್ಪಿಕೊಳ್ಳುವ ವಿವೇಚನಾಶೀಲ ಪರಿಶಿಷ್ಟ ಪಂಗಡೇತರ ಮತದಾರರು ಚಳ್ಳಕೆರೆಯಲ್ಲಿ ಶೇ. 83.42 ಮೊಳಕಾಲ್ಮೂರಿನಲ್ಲಿ ಶೇ.78.28 ಮತದಾರರು ಜಾತ್ಯತೀತ ಮನೋಭಾವ ಉಳ್ಳವರಿದ್ದಾರೆ. ನಾಯಕತ್ವವನ್ನು ಜಾತಿಯ ಹಿನ್ನೆಲೆಯಲ್ಲಿ ನೋಡದೆ ಸಮರ್ಥ ಮತ್ತು ಪ್ರಾಮಾಣಿಕ ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾರೆ. ಮೊಳಕಾಲ್ಮೂರಿಗೆ ಹೋಲಿಸಿದಾಗ ಚಳ್ಳಕೆರೆಯು ಪ್ರಬಲ ಪರಿಶಿಷ್ಟ ಪಂಗಡ ನಾಯಕತ್ವದ ಹುಟ್ಟಿಗೆ ಕಾರಣವಾಗುವ ಜೊತೆಗೆ ಸಮರ್ಥ ಪರಿಶಿಷ್ಟ ಪಂಗಡ ನಾಯಕತ್ವವನ್ನು ರಾಜ್ಯ ರಾಜಕೀಯಕ್ಕೆ ನೀಡಿದೆ. ಆದ್ದರಿಂದ ಪರಿಶಿಷ್ಟ ಪಂಗಡೇತರರು ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾರೆ.

ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪಿಕೊಳ್ಳದಿರುವ ಪೂರ್ವಗ್ರಹಪೀಡಿತ ಜಾತಿ ಹಿಂದೂ ಮನಸ್ಸುಗಳು ಚಳ್ಳಕೆರೆಯಲ್ಲಿ ಶೇ. 12 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 18.28 ಪರಿಶಿಷ್ಟ ಪಂಗಡೇತರ ಮತದಾರರಿದ್ದಾರೆ. ಸಮರ್ಥ ನಾಯಕತ್ವ ಕೊಡುವಲ್ಲಿ ಪರಿಶಿಷ್ಟ

ಪಂಗಡದವರು ವಿಫಲವಾಗಿದ್ದಾರೆ. ಆದ್ದರಿಂದ ಪರಿಶಿಷ್ಟ ಪಂಗಡೇತರರು ಒಪ್ಪುವುದಿಲ್ಲ ಎಂಬುದನ್ನು ಅವರ ದೃಷ್ಟಿಕೋನದಿಂದ ತಿಳಿಯಲಾಗಿದೆ.

ಇನ್ನು ಗೊತ್ತಿಲ್ಲ ಎನ್ನುವ ನಿಲುವನ್ನು ಚಳ್ಳಕೆರೆಯಲ್ಲಿ ಶೇ. 4.57 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 3.42 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ.

ಪರಿಶಿಷ್ಟ ಪಂಗಡೇತರರು ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ತಿಳಿಯುವ ದೃಷ್ಟಿಯಿಂದ ದುರ್ಬಲ ನಾಯಕತ್ವಕ್ಕೆ ಸಂಬಂಧಿಸಿದ ಲಕ್ಷಣಗಳನ್ನು ನೀಡಿರುವುದಕ್ಕೆ ಪರಿಶಿಷ್ಟ ಪಂಗಡದವರಲ್ಲಿ ನಾಯಕತ್ವ ಗುಣದ ಕೊರತೆ ಇದೆ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 14.28 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 12.50 ಮತದಾರರು ಹೊಂದಿದ್ದಾರೆ. ಈ ಅಭಿಪ್ರಾಯ ಉಳ್ಳವರು ಮೊಳಕಾಲ್ಮೂರಿಗಿಂತ ಚಳ್ಳಕೆರೆಯಲ್ಲಿ ಶೇ. 1.78 ಹೆಚ್ಚಿನ ಮತದಾರರಿದ್ದಾರೆ ಎಂಬುದನ್ನು ಗುರ್ತಿಸಲಾಗಿದೆ. ಇದಕ್ಕೆ ಶಾಸಕರಲ್ಲಿ ಸಮರ್ಥ ನಾಯಕತ್ವದ ಕೊರತೆ ಹೆಚ್ಚಾಗಿರುವುದು ಒಂದು ಕಾರಣವಾಗಿದೆ.

ಪರಿಶಿಷ್ಟ ಪಂಗಡ ಪ್ರತಿನಿಧಿತ್ವ ರಾಜಕಾರಣದಲ್ಲಿ ಭಾಗಿಯಾಗಿರುವುದರಿಂದ ಪರಿಶಿಷ್ಟ ಪಂಗಡ ನಾಯಕತ್ವವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 42.85 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 12.50 ಮತದಾರರು ಹೊಂದಿದ್ದಾರೆ. ಮೊಳಕಾಲ್ಮೂರಿಗಿಂತ ಚಳ್ಳಕೆರೆಯಲ್ಲಿ ಶೇ. 30 ಹೆಚ್ಚಿನ ಪರಿಶಿಷ್ಟ ಪಂಗಡೇತರ ಮತದಾರರು ಇದನ್ನು ಒಪ್ಪುತ್ತಾರೆ.

ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿರುವುದರಿಂದ ಪರಿಶಿಷ್ಟ ಪಂಗಡ ನಾಯಕತ್ವ ದುರ್ಬಲವಾಗಿದೆ. ಆದ್ದರಿಂದ ಅವರ ನಾಯಕತ್ವದಲ್ಲಿ ನಂಬಿಕೆ ಇಲ್ಲ ಮತ್ತು ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಮತ್ತು ಮೊಳಕಾಲ್ಮೂರಿನಲ್ಲಿ ಕ್ರಮವಾಗಿ ಶೇ. 38.09 ಹಾಗೂ ಶೇ. 46.27 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ. ಇದರಲ್ಲಿ ಚಳ್ಳಕೆರೆಗಿಂತ ಮೊಳಕಾಲ್ಮೂರಿನಲ್ಲಿ ಶೇ. 8 ಹೆಚ್ಚಿನ ಮತದಾರರು ಈ ಕಾರಣವನ್ನು ಒಪ್ಪುತ್ತಾರೆ.

ಪರಿಶಿಷ್ಟ ಪಂಗಡ ನಾಯಕರು ಅಧಿಕಾರ ರಾಜಕೀಯಕ್ಕೆ ಅಂಟಿಕೊಂಡಿರುವುದರಿಂದ ಅವರ ನಾಯಕತ್ವವನ್ನು ಒಪ್ಪಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ.

4.76 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 28.12 ಮತದಾರರು ಹೊಂದಿದ್ದಾರೆ. ಕಾರಣ ಶಾಸಕರಲ್ಲಿ ಈ ರೀತಿಯ ನಡವಳಿಕೆಯನ್ನು ಮತದಾರರು ಗುರುತಿಸಿದ್ದಾರೆ.

**ಕೋಷ್ಟಕ–4.8.**

**ಶಾಸಕರು ಎಲ್ಲಾ ಜಾತಿ/ಧರ್ಮಗಳನ್ನು ಸಮಾನ ರೀತಿಯಲ್ಲಿ ನೋಡಿದ್ದಾರೆಯೇ ಎಂಬ ಕುರಿತು ಪರಿಶಿಷ್ಟ ಪಂಗಡೇತರರ ಅಭಿಪ್ರಾಯ**

| ಕ್ರ. ಸಂ. | ಆಯ್ಕೆಗಳು | ಚಳ್ಳಕೆರೆ | | ಮೊಳಕಾಲ್ಮೂರು | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಹೌದು | 148 | 84.57 | 132 | 75.42 |
| 2 | ಇಲ್ಲ | 12 | 6.85 | 31 | 17.71 |
| 3 | ನಿರ್ಧರಿಸಿಲ್ಲ | 9 | 5.14 | 8 | 4.57 |
| 4 | ಗೊತ್ತಿಲ್ಲ | 6 | 3.28 | 4 | 2.28 |
| | | **175** | **100** | **175** | **100** |
| | **ಒಟ್ಟು** | **175+175=** | | | **350** |

**ಮೂಲ:** ಕ್ಷೇತ್ರ ಕಾರ್ಯ

**ಟಿಪ್ಪಣಿ:** ಮೇಲ್ಕಂಡ ಪ್ರಶ್ನೆಯು ಪರಿಶಿಷ್ಟ ಪಂಗಡೇತರ ಮತದಾರರ ಅಭಿಪ್ರಾಯವನ್ನು ಮಾತ್ರ ಸ್ಪಷ್ಟಪಡಿಸುತ್ತದೆ.

ಕೋಷ್ಟಕದ ಅನ್ವಯ ಶಾಸಕರು ಎಲ್ಲಾ ಜಾತಿ / ಧರ್ಮದವರನ್ನು ಸಮಾನ ರೀತಿಯಲ್ಲಿ ಕಾಣುತ್ತಾರೆ ಎಂಬ ಅಭಿಪ್ರಾಯವನ್ನು ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರದಲ್ಲಿ ಕ್ರಮವಾಗಿ ಶೇ. 84.57 ಹಾಗೂ ಶೇ. 75.42 ಪರಿಶಿಷ್ಟ ಪಂಗಡೇತರ ಮತದಾರರು ಹೊಂದಿದ್ದಾರೆ. ಮೊಳಕಾಲ್ಮೂರಿಗಿಂತ ಚಳ್ಳಕೆರೆಯಲ್ಲಿ ಶೇ.9 ಹೆಚ್ಚಿನ ಮತದಾರರು ಶಾಸಕರು ಜಾತ್ಯತೀತ ಮನೋಭಾವ ಬೆಳೆಸಿಕೊಂಡಿದ್ದಾರೆ ಎಂಬ ಅಭಿಪ್ರಾಯ ಬಂದಿದೆ.

ಎಲ್ಲಾ ಜಾತಿ ಹಾಗೂ ಧರ್ಮೀಯರನ್ನು ಶಾಸಕರು ಸಮಾನವಾಗಿ ಪರಿಗಣಿಸುವುದಿಲ್ಲ ಎಂಬ ಪ್ರತಿಕ್ರಿಯೆಯನ್ನು ಚಳ್ಳಕೆರೆಯಲ್ಲಿ ಶೇ. 6.85 ಹಾಗೂ ಮೊಳಕಾಲ್ಮೂರಿನಲ್ಲಿ ಶೇ. 17.71 ಪರಿಶಿಷ್ಟ ಪಂಗಡೇತರರು ನೀಡುತ್ತಾರೆ. ಶಾಸಕರು ತಮ್ಮ ಜಾತಿಯವರಿಗೆ ಮೊದಲ ಆದ್ಯತೆ ನೀಡಿ ಸ್ವಜನಪಕ್ಷಪಾತ ಮಾಡುತ್ತಾರೆ ಎಂಬ ಅಭಿಪ್ರಾಯವನ್ನು ಹೊರಹಾಕಿದ್ದಾರೆ. ಅವರ ಗೆಲುವಿನಲ್ಲಿ ತಮ್ಮ ಪಾತ್ರವಿರುವುದನ್ನು ಮರೆತು ಏಕಮುಖವಾಗಿ ರಾಜಕಾರಣ ಮಾಡುತ್ತಿದ್ದಾರೆ ಎಂಬ ಪರಿಶಿಷ್ಟ ಪಂಗಡೇತರರ ಆರೋಪವನ್ನು ಕ್ಷೇತ್ರ ಕಾರ್ಯದಿಂದ ಕಂಡುಕೊಳ್ಳಲಾಗಿದೆ. ಈ ರೀತಿಯ ಮನೋಭಾವ ಉಳ್ಳ ಶಾಸಕರು ಚಳ್ಳಕೆರೆ ಕ್ಷೇತ್ರಕ್ಕಿಂತ ಮೊಳಕಾಲ್ಮೂರಿನಲ್ಲಿ ಶೇ. 10 ಹೆಚ್ಚಿನ ಮತದಾರರಿದ್ದಾರೆ.


ಶಾಸಕರ ವ್ಯಕ್ತಿತ್ವ ಯಾವ ಮಾದರಿಯದು ಎಂದು ನಿರ್ಧರಿಸಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆಯಲ್ಲಿ ಶೇ. 5.14 ಮತ್ತು ಮೊಳಕಾಲ್ಮೂರಿನಲ್ಲಿ ಶೇ. 4.57 ಮತದಾರರು "ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ" ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಮನೋಭಾವ ಉಳ್ಳ ಪರಿಶಿಷ್ಟ ಪಂಗಡೇತರ ಮತದಾರರು ಎರಡು ಕ್ಷೇತ್ರಗಳಲ್ಲಿ ಸಮಾನವಾಗಿದ್ದಾರೆ. ಈ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಂದರ್ಶನಾರ್ಥಿಯು ಸತ್ಯ ಹೇಳಲು ಹೆದರಿದ್ದಾರೆ ಎಂಬ ಅಂಶ ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿದೆ. ಶಾಸಕರು ಎಲ್ಲಾ ಜಾತಿ / ಧರ್ಮದವರನ್ನು ಯಾವ ರೀತಿ ನೋಡುತ್ತಾರೆಂದು ನಮಗೆ ಗೊತ್ತಿಲ್ಲ ಎಂಬ ಅಭಿಪ್ರಾಯವನ್ನು ಚಳ್ಳಕೆರೆ ಮತ್ತು ಮೊಳಕಾಲ್ಮೂರಿನಲ್ಲಿ ಕ್ರಮವಾಗಿ ಶೇ. 3.28 ಹಾಗೂ ಶೇ. 2.28 ಮತದಾರರು ತಿಳಿಸಿದ್ದಾರೆ. ಶಾಸಕರನ್ನು ಹತ್ತಿರದಿಂದ ಗಮನಿಸುವ ಪ್ರಮೇಯ ನಮಗೆ ಒದಗಿ ಬಂದಿಲ್ಲ. ಆದ ಕಾರಣ ಈ ಅಭಿಪ್ರಾಯಕ್ಕೆ ಮತದಾರ ಮೊರೆ ಹೋಗಿದ್ದಾರೆ ಎಂದು ಹೇಳಬಹುದು.

**ಕೋಷ್ಟಕ–4.9.**
**ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಚಳ್ಳಕೆರೆ ಕ್ಷೇತ್ರದ ಮತದಾರರ ಪ್ರತಿಕ್ರಿಯೆ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ತಿಪ್ಪೇಸ್ವಾಮಿ | 33 | 44 | 70 | 40 |
| 2 | ಟಿ. ರಘುಮೂರ್ತಿ | 37 | 49.33 | 103 | 58.85 |
| 3 | ಗೊತ್ತಿಲ್ಲ | 5 | 6.66 | 2 | 1.14 |
| | | **75** | **100** | **175** | **100** |
| | **ಒಟ್ಟು** | **75+175** | | | **250** |

**ಮೂಲ:** ಕ್ಷೇತ್ರ ಕಾರ್ಯ

**ಟಿಪ್ಪಣಿ:** ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮತದಾರರ ಅಭಿಪ್ರಾಯವು ಸ್ಪಷ್ಟಪಡಿಸುತ್ತದೆ.




**ಅಭಿಪ್ರಾಯಗಳು**

ಅತ್ಯಂತ ಪ್ರಭಾವಿ ಶಾಸಕರನ್ನು ಕುರಿತು ಕೇಳಲಾದ ಪ್ರಶ್ನೆಗೆ ವ್ಯಕ್ತವಾಗಿರುವ ಅಭಿಪ್ರಾಯವನ್ನು ಗಮನಿಸಿದರೆ ಎಂಟು, ಹತ್ತು ಮತ್ತು ಹದಿಮೂರನೇ ವಿಧಾನಸಭೆಗಳಲ್ಲಿ ಚಳ್ಳಕೆರೆಯನ್ನು ಪ್ರತಿನಿಧಿಸಿದ್ದ ತಿಪ್ಪೇಸ್ವಾಮಿ ಅವರು ಪ್ರಭಾವಿ ಹಾಗೂ ಸಮರ್ಥವಾದ ನಾಯಕತ್ವ ಹೊಂದಿದ್ದರು ಎಂದು ಪರಿಶಿಷ್ಟ ಪಂಗಡ ಶೇ. 44 ಹಾಗೂ ಪರಿಶಿಷ್ಟ ಪಂಗಡೇತರ ಶೇ. 40 ಮತದಾರರು ಒಪ್ಪಿಕೊಂಡಿದ್ದಾರೆ. ಈ ಅಭಿಪ್ರಾಯವು ಮೇಲಿನ ಶಾಸಕರ ನಾಯಕತ್ವವನ್ನು ಅವಲೋಕಿಸಿ ವಿಶ್ಲೇಷಿಸಿ ಮತದಾರರು ತೆಗೆದುಕೊಂಡ ಅಭಿಪ್ರಾಯವಾಗಿದೆ ಎಂಬ ಅಂಶ ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದೆ. ಪರಿಶಿಷ್ಟ ಪಂಗಡೇತರರಿಗಿಂತ ಪರಿಶಿಷ್ಟ ಪಂಗಡದವರು ಶೇ. 4 ಮತದಾರರು ತಿಪ್ಪೇಸ್ವಾಮಿ ಅವರನ್ನು ಪ್ರಭಾವಿ ಶಾಸಕರು ಎಂದು ಒಪ್ಪಿಕೊಳ್ಳುತ್ತಾರೆ. ತಿಪ್ಪೇಸ್ವಾಮಿ ಅವರು ಪರಿಶಿಷ್ಟ ಪಂಗಡದವರಿಗೆ ಆದ್ಯತೆ ನೀಡುವ ಮೂಲಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕ್ಷೇತ್ರದ ಸಮಸ್ಯೆಗಳ ಕುರಿತಾಗಿ ಸರ್ಕಾರದ ಗಮನ ಸೆಳೆದು ಜನ ಸಾಮಾನ್ಯರ ಬೇಡಿಕೆಗಳನ್ನು ಈಡೇರಿಸುತ್ತಿದ್ದರು ಎಂಬ ಅಭಿಪ್ರಾಯ ಕ್ಷೇತ್ರಕಾರ್ಯದಲ್ಲಿ ಮತದಾರರಿಂದ ಬಂದಿದೆ. ಆದ್ದರಿಂದ ಇವರನ್ನು ಪರಿಶಿಷ್ಟ ಪಂಗಡದವರು ಹೆಚ್ಚು ಒಪ್ಪಿಕೊಂಡಿದ್ದಾರೆ ಎಂಬ ಅಂಶ ತಿಳಿದು ಬಂದಿದೆ.

ಅದೇ ರೀತಿ ಹದಿನಾಲ್ಕನೇ ವಿಧಾನಸಭೆಯ ಶಾಸಕ ಟಿ. ರಘುಮೂರ್ತಿ ಅವರು ತಮ್ಮ ಅವಧಿಯಲ್ಲಿ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಯಾರೊಂದಿಗೂ ರಾಜಿ ಮಾಡಿಕೊಳ್ಳದೆ ಪ್ರಾಮಾಣಿಕ ಪ್ರಯತ್ನ ಮಾಡಿದರು, ಕ್ಷೇತ್ರದ ಅಭ್ಯುದಯಕ್ಕಾಗಿ ಹೋರಾಟ ಮಾಡುವ ಸಮರ್ಥ ನಾಯಕ ಎನಿಸಿಕೊಂಡವರೆಂದು ಪರಿಶಿಷ್ಟ ಪಂಗಡ ಶೇ. 49.33 ಹಾಗೂ ಪರಿಶಿಷ್ಟ ಪಂಗಡೇತರರು ಶೇ. 58.85 ಮತದಾರರು ಒಪ್ಪಿಕೊಂಡಿದ್ದಾರೆ.

ಅತ್ಯಂತ ಪ್ರಭಾವಿ ಶಾಸಕರನ್ನು ಕುರಿತು ಕೇಳಲಾದ ಪ್ರಶ್ನೆಗೆ ಗೊತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಗಮನಿಸಿದರೆ ಪರಿಶಿಷ್ಟ ಪಂಗಡ ಶೇ. 6.66 ಮತ್ತು ಪರಿಶಿಷ್ಟ ಪಂಗಡೇತರರು ಶೇ. 1.14 ಮತದಾರರು ತಿಳಿಸಿದ್ದಾರೆ.


**ಕೋಷ್ಟಕ– 4.10.**

**ಪ್ರಭಾವಿ ಶಾಸಕರು ಯಾರು ಎಂಬುದಕ್ಕೆ ಮೊಳಕಾಲ್ಮೂರು ಕ್ಷೇತ್ರದ ಮತದಾರರ ಪ್ರತಿಕ್ರಿಯೆ**

| ಕ್ರ. ಸಂ. | ಆಯ್ಕೆಗಳು | ಪರಿಶಿಷ್ಟ ಪಂಗಡ | | ಪರಿಶಿಷ್ಟ ಪಂಗಡೇತರ | |
|---|---|---|---|---|---|
| | | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| 1 | ಎನ್.ವೈ. ಗೋಪಾಲಕೃಷ್ಣ | 30 | 40 | 94 | 53.71 |
| 2 | ತಿಪ್ಪೇಸ್ವಾಮಿ ಎಸ್. | 38 | 50.66 | 77 | 44 |
| 3 | ಗೊತ್ತಿಲ್ಲ | 7 | 9.33 | 4 | 2.28 |
| | | **75** | **100** | **175** | **100** |
| | ಒಟ್ಟು | **75+175** | | | **250** |

**ಮೂಲ:** ಕ್ಷೇತ್ರ ಕಾರ್ಯ

**ಟಿಪ್ಪಣಿ:** ಪ್ರಭಾವಿ ಶಾಸಕರ ಕುರಿತು ಮತದಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.




### ಅಭಿಪ್ರಾಯಗಳು

ಮೊಳಕಾಲ್ಮೂರು ಮೀಸಲುಕ್ಷೇತ್ರದಿಂದ 13 ಮತ್ತು 14ನೇ ವಿಧಾನಸಭೆಯಲ್ಲಿ ಆಯ್ಕೆಯಾದ ಶಾಸಕರಲ್ಲಿ ಪ್ರಭಾವಿ ಶಾಸಕರು ಯಾರು ಎಂಬ ಪ್ರಶ್ನೆಗೆ ಮತದಾರರು ಸೂಚಿಸುವ ಅಭಿಪ್ರಾಯ ಮೇಲಿನಂತಿದೆ.

ಎನ್. ವೈ. ಗೋಪಾಲಕೃಷ್ಣ ಅವರು 13ನೇ ವಿಧಾನಸಭೆಯಲ್ಲಿ ಆಯ್ಕೆಯಾದ ಶಾಸಕ. ಇವರು ಬಲಿಷ್ಠ ಮತ್ತು ಸಮರ್ಥ ನಾಯಕತ್ವದಿಂದ ಗುರುತಿಸಿಕೊಂಡು ರಾಜ್ಯ ರಾಜಕೀಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಪ್ರಭಾವಿ ಶಾಸಕ ಹಾಗೂ ಪ್ರಾಮಾಣಿಕ ರಾಜಕಾರಣಿ ಎಂಬ ಹೆಸರು ಪಡೆದರೆಂದು ಪರಿಶಿಷ್ಟ ಪಂಗಡದ ಶೇ. 40.00 ಮತ್ತು ಪರಿಶಿಷ್ಟ ಪಂಗಡೇತರ ಶೇ. 53.71 ಮತದಾರರು ಒಪ್ಪಿಕೊಳ್ಳುತ್ತಾರೆ. ಕಾರಣವೆಂದರೆ ನಾಲ್ಕು ಬಾರಿ ಶಾಸಕರಾಗಿದ್ದ ಅವಧಿಯಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಸ್ವಾಭಿಮಾನದ

ರಾಜಕಾರಣದಿಂದ ಕ್ಷೇತ್ರ ಹಾಗೂ ರಾಜ್ಯದ ಗಮನ ಸೆಳೆದರು ಎಂಬುದು ಕ್ಷೇತ್ರಕಾರ್ಯದಿಂದ ಹಾಗೂ ಅಧ್ಯಯನದಿಂದಲೂ ಸಾಬೀತಾಗಿದೆ. ಮೊಳಕಾಲ್ಮೂರು ಬುದ್ಧಿವಂತ ಮತದಾರರು ಯಾವ ಶಾಸಕರನ್ನು ಪ್ರಭಾವಿ ಶಾಸಕರೆಂದು ಒಪ್ಪಿಕೊಳ್ಳದ ಮನೋಭಾವದವರು. ಆದರೂ ಸಹ ಎನ್. ವೈ. ಗೋಪಾಲಕೃಷ್ಣ ಅವರ ಪ್ರಾಮಾಣಿಕ ವ್ಯಕ್ತಿತ್ವವನ್ನು ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಪಂಗಡೇತರ ಮತದಾರರು ಭಾಗಶಃ ಒಪ್ಪಿಕೊಳ್ಳುತ್ತಾರೆ. ಆದರೆ ಚುನವಣಾ ರಾಜಕೀಯದಲ್ಲಿ ಕಳೆದ ಚುನಾವಣೆಯಲ್ಲಿ ತಿರಸ್ಕರಿಸಿರುವುದನ್ನು ಗಮನಿಸಿದರೆ ಜಾತಿ, ಹಣ, ಹೆಂಡ ಮುಂತಾದ ಆಮಿಷಗಳಿಗೆ ಬಲಿಯಾಗಿ ಮತದಾನ ಮಾಡುವ ಚಾಳಿಗೆ ಮತದಾರರು ಬಲಿಯಾಗಿದ್ದಾರೆ ಎಂಬುದು ಕ್ಷೇತ್ರಕಾರ್ಯ ಮತ್ತು ಅಧ್ಯಯನದಿಂದ ಹೊರಹೊಮ್ಮಿದ ಮಾಹಿತಿಯಾಗಿದೆ.

14ನೇ ವಿಧಾನಸಭಾ ಶಾಸಕ ತಿಪ್ಪೇಸ್ವಾಮಿ ಅವರು ಪ್ರಭಾವಿ ಶಾಸಕರಾಗಿ ತಮ್ಮ ಅಧಿಕಾರ ಅವಧಿಯಲ್ಲಿ ಅತ್ಯಂತ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರು ಕ್ರಮವಾಗಿ ಶೇ. 50.66 ಮತ್ತು ಶೇ. 44.00 ಮತದಾರರು ಒಪ್ಪಿಕೊಳ್ಳುತ್ತಾರೆ. ಈ ಪೈಕಿ ಪರಿಶಿಷ್ಟ ಪಂಗಡದವರು ಶೇ. 6 ಹೆಚ್ಚಿನ ಒಲವನ್ನು ತಿಪ್ಪೇಸ್ವಾಮಿ ಅವರ ಬಗ್ಗೆ ತೋರಿದ್ದಾರೆ. ಪರಿಶಿಷ್ಟ ಪಂಗಡದವರು ಇವರನ್ನು ಹೆಚ್ಚು ಸ್ವೀಕರಿಸುವುದನ್ನು ಗಮನಿಸಿದಾಗ ಇವರ ವೈಯಕ್ತಿಕ ವರ್ಚಸ್ಸಿಗಿಂತ ಬಿ.ಎಸ್.ಆರ್. ಕಾಂಗ್ರೆಸ್ ಪಕ್ಷದ ವರಿಷ್ಠ ಮಾಜಿ ಸಚಿವ ಶ್ರೀರಾಮುಲು ಅವರ ನಾಯಕತ್ವಕ್ಕೆ ಬೆಂಬಲ ಸೂಚಿಸಲು ಅವರ ನಿಷ್ಠಾವಂತ ಸೈನಿಕರಾದ ತಿಪ್ಪೇಸ್ವಾಮಿ ಅವರನ್ನು ಒಪ್ಪಿಕೊಂಡಿದ್ದಾರೆ ಎಂಬ ಅಭಿಪ್ರಾಯ ಕ್ಷೇತ್ರಕಾರ್ಯದಲ್ಲಿ ಪರಿಶಿಷ್ಟ ಪಂಗಡದವರಿಂದ ವ್ಯಕ್ತವಾಗಿದೆ. ಪರಿಶಿಷ್ಟ ಪಂಗಡೇತರರಲ್ಲಿಯು ಸಹ ತಿಪ್ಪೇಸ್ವಾಮಿಯವರ ಬಗ್ಗೆ ಇದೇ ಅಭಿಪ್ರಾಯ ವ್ಯಕ್ತವಾಗಿದೆ.

ಮೊಳಕಾಲ್ಮೂರು ಮೀಸಲುಕ್ಷೇತ್ರದ 13 ಮತ್ತು 14ನೇ ವಿಧಾನಸಭೆಯಲ್ಲಿ ಪ್ರಭಾವಿ ಶಾಸಕರು ಯಾರು ಎಂಬ ಪ್ರಶ್ನೆಗೆ ಗೊತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಪರಿಶಿಷ್ಟ ಪಂಗಡ ಶೇ. 9.33 ಹಾಗೂ ಪರಿಶಿಷ್ಟ ಪಂಗಡೇತರರು ಶೇ. 2.28 ಮತದಾರರು ವ್ಯಕ್ತಪಡಿಸಿದ್ದಾರೆ.

# ಅಧ್ಯಾಯ–5

## ವಿಧಾನಸಭೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರು

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ಪಾತ್ರ ಮಹತ್ತರವಾಗಿರುತ್ತದೆ. ಶಾಸನಸಭೆಯಲ್ಲಿ ಜನಪ್ರತಿನಿಧಿಗಳ ಸಕ್ರಿಯ ಭಾಗವಹಿಸುವಿಕೆ ಮೇಲೆ ಪ್ರಜಾಪ್ರಭುತ್ವದ ಯಶಸ್ಸು ನಿಂತಿರುತ್ತದೆ. ಆದ್ದರಿಂದ ಸಂವಿಧಾನಶಿಲ್ಪಿ ಡಾ. ಅಂಬೇಡ್ಕರ್ ಅವರು ಪ್ರಜಾಪ್ರತಿನಿಧಿಗಳ ಅರ್ಹತೆಯನ್ನು ಕುರಿತು ಭಗವಾನ್ ಗೌತಮಬುದ್ಧ ತಿಳಿಸಿದಂತೆ "ಜ್ಞಾನವಿಲ್ಲದ ಗುಣ ಬಹಳ ಅಪಾಯಕಾರಿ" ಎಂಬ ನುಡಿಯ ಆಧಾರದ ಮೇಲೆ ಪ್ರತಿನಿಧಿಗಳಿಗೆ ಜ್ಞಾನದೊಂದಿಗೆ ಗುಣ ಇರಬೇಕು ಎಂದು ಕಾನೂನುಮಂತ್ರಿಯಾಗಿದ್ದ ಸಂದರ್ಭದಲ್ಲಿ ಲೋಕಸಭೆಯಲ್ಲಿ ಪ್ರತಿಪಾದಿಸಿದರು.[1] ಇದು ಪ್ರತಿನಿಧಿತ್ವಕ್ಕೆ ಹೆಚ್ಚು ಅರ್ಥ ತಂದುಕೊಡುತ್ತದೆ. ಜನತೆ ಮತ್ತು ರಾಷ್ಟ್ರದ ಹಿತವನ್ನು ಕಾಪಾಡುವುದಕ್ಕೆ ಶಾಸನಸಭೆಯಲ್ಲಿ ಆರೋಗ್ಯಪೂರ್ಣ ಚರ್ಚೆ ಮಾಡುವ ಮೂಲಕ ಕಾರ್ಯ ನಿರ್ವಹಿಸಬೇಕಿದ್ದು ಪ್ರತಿನಿಧಿಗಳ ಆದ್ಯ ಕರ್ತವ್ಯ. ಆದ್ದರಿಂದ ಶಾಸಕರು ಅಥವಾ ಸಂಸದರು ಸದನದಲ್ಲಿ ಹಾಜರಿರುವ ಮೂಲಕ ಸಮಯ ಸಂದರ್ಭಕ್ಕೆ ಅನುಗುಣವಾಗಿ ಚಾಕಚಕ್ಯತೆಯಿಂದ ಮಾತನಾಡುವುದು ಬಹಳ ಮುಖ್ಯವಾಗಿದೆ.

ಆಡಳಿತ ರೂಢ ಸರ್ಕಾರ ಕಾನೂನು ಮತ್ತು ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಶಾಸಕರು/ಸಂಸದರು ತತ್ವ ಸಿದ್ಧಾಂತ ಹಾಗೂ ಬೌದ್ಧಿಕ ಶಕ್ತಿಯ ಪ್ರಭಾವವನ್ನು ಬೀರಿ ರಾಜ್ಯದ ಪ್ರಗತಿ ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕು. ಈ ಹಿನ್ನೆಲೆಯಲ್ಲಿ ಮೀಸಲುಕ್ಷೇತ್ರದ ಶಾಸಕರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಮೀಸಲು ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ತನ್ನ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸರ್ಕಾರ ರೂಪಿಸುವ ಕಾನೂನುಗಳು ಪರಿಶಿಷ್ಟರ ಏಳಿಗೆಗೆ ವಿರೋಧವಾಗಿರುವುದನ್ನು ಖಂಡಿಸಿ ಸರ್ಕಾರಗಳನ್ನು ಪರಿಶಿಷ್ಟರ ಪರವಾಗಿ ಯೋಜನೆಗಳನ್ನು ರೂಪಿಸುವಂತೆ ಒತ್ತಾಯ ಮಾಡಬೇಕಾಗುತ್ತದೆ. ಅಲ್ಲದೆ ಜಾರಿಯಲ್ಲಿರುವ ಯೋಜನೆಗಳು ಅನುಷ್ಠಾನಗೊಂಡಿವೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಪರಿಶಿಷ್ಟರ ಮೇಲೆ ದೌರ್ಜನ್ಯ, ಬಹಿಷ್ಕಾರಗಳು ನಡೆದರೆ ಅವುಗಳ ವಿರುದ್ಧ ಮೀಸಲು ಪ್ರತಿನಿಧಿಗಳು ಪಕ್ಷ ಭೇದ

[1] Dr. Babasaheb Ambedkar writings and Speeches, Vol.17, Part-2, Government of Maharashtra, 2003. Pp.-159.

ಮರೆತು ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು ಶಾಸಕರ ಆದ್ಯ ಕರ್ತವ್ಯ. ರಾಜ್ಯದ ಪ್ರಗತಿಗೆ ಪೂರಕವಾದ ಯೋಜನೆಗಳಿಗೆ ಬೆಂಬಲ ಸೂಚಿಸಿ, ರಾಜ್ಯಕ್ಕೆ ಮಾರಕವಾಗುವ ಯೋಜನೆಗಳನ್ನು ಸಭೆ ಒಳಗೆ ಹಾಗೂ ಹೊರಗೆ ಪ್ರತಿಭಟಿಸಿ ವಿರೋಧ ವ್ಯಕ್ತಪಡಿಸುವ ವಿವೇಚನೆಯನ್ನು ನಮ್ಮ ಪ್ರತಿನಿಧಿಗಳು ಹೊಂದಿರಬೇಕು.

ಈ ಹಿನ್ನೆಲೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲುಕ್ಷೇತ್ರದ ಶಾಸಕರು ತಮ್ಮ ಕರ್ತವ್ಯವನ್ನು ಹೇಗೆ ನಿರ್ವಹಿಸಿದ್ದಾರೆ ಎಂದು ತಿಳಿಯಲು 2008ರಿಂದ 2018ರವರೆಗಿನ Karnataka Legislative Assembly Debatesಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಅವುಗಳನ್ನು ಈ ಕೆಳಕಂಡಂತೆ ಮೂರು ದೃಷ್ಟಿಕೋನಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಅವುಗಳೆಂದರೆ,

1. ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ಚರ್ಚೆ
2. ಪರಿಶಿಷ್ಟರ ಹಿತರಕ್ಷಣೆ ಕುರಿತ ಚರ್ಚೆಗಳು
3. ರಾಜ್ಯದ ಪ್ರಮುಖ ವಿಷಯಗಳ ಮೇಲಿನ ಚರ್ಚೆ

## 5.1 . ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಮೇಲಿನ ಚರ್ಚೆ

ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲುಕ್ಷೇತ್ರಗಳ ಪ್ರತಿನಿಧಿಗಳು ಕ್ಷೇತ್ರಗಳ ಸಮಸ್ಯೆ ಹಾಗೂ ಅಭಿವೃದ್ಧಿಗಾಗಿ ವಿಧಾನಸಭೆಯ ಪ್ರಶ್ನೋತ್ತರ ಮತ್ತು ಗಮನ ಸೆಳೆಯುವ ವೇಳೆಯಲ್ಲಿ ಶಾಸಕರು ಕ್ಷೇತ್ರದ ಪರವಾಗಿ ಪ್ರಶ್ನೆ ಮಾಡಿ ಸದನದ ಹಾಗೂ ಸರ್ಕಾರದ ಗಮನ ಸೆಳೆದು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮಾಡಿದ ಪ್ರಾಮಾಣಿಕ ಪ್ರಯತ್ನಗಳನ್ನು ಕ್ರಮವಾಗಿ 13 ಮತ್ತು 14ನೇ ವಿಧಾನಸಭೆಯ(2008ರಿಂದ 2018) ರವರೆಗೆ ಉಲ್ಲೇಖಿಸಿ ಚರ್ಚಿಸಲಾಗಿದೆ.

### 5.1.1. ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಸಮಾವೇಶಗೊಂಡಿತು

ದಿನಾಂಕ 04.06.2008ರಂದು ಹಂಗಾಮಿ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಹಂಗಾಮಿ ಅಧ್ಯಕ್ಷರು ಮಾತನಾಡುತ್ತ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳೇ, ಗೌರವಾನ್ವಿತ ಮಂತ್ರಿಮಂಡಲದ

ಸದಸ್ಯರುಗಳೇ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೇ, ಜಾತ್ಯತೀತ ಜನತಾದಳದ ಶಾಸಕಾಂಗ ಪಕ್ಷದ ನಾಯಕರೇ, ಗೌರವಾನ್ವಿತ ಸದಸ್ಯರುಗಳೇ, ನೂತನವಾಗಿ ಈ ರಾಜ್ಯದ ಜನತೆಯ ಆಶೀರ್ವಾದವನ್ನು ಪಡೆದು ಈ ಗೌರವಾನ್ವಿತ 13ನೇ ವಿಧಾನಸಭೆಯ ಸದಸ್ಯರುಗಳಾಗಿರತಕ್ಕಂಥ ತಮ್ಮೆಲ್ಲರನ್ನು ಬಹಳ ಆತ್ಮೀಯವಾಗಿ ತುಂಬುಹೃದಯದಿಂದ ಸ್ವಾಗತಿಸುತ್ತೇನೆ. ತಮ್ಮೆಲ್ಲರಿಗೂ ಈ ಸಭೆಯಲ್ಲಿ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನವನ್ನು ಬೋಧಿಸುವುದನ್ನು ಗೌರವಾನ್ವಿತ ರಾಜ್ಯಪಾಲರು ನನ್ನ ಪಾಲಿಗೆ ವಹಿಸಿದ್ದಾರೆ. ಪ್ರಜಾಪ್ರಭುತ್ವ ಸ್ಥಾಪನೆಗೋಸ್ಕರ ಪ್ರಜಾಪ್ರಭುತ್ವದ ತತ್ವಗಳನ್ನು ಎತ್ತಿ ಹಿಡಿಯುವುದರಲ್ಲಿ ಸರ್ವ ತ್ಯಾಗಗಳನ್ನು ನಮ್ಮ ಹಿರಿಯರು ಮಾಡಿದ್ದಾರೆ. ಅವರ ಮಾರ್ಗದರ್ಶನ ನಮಗೆಲ್ಲರಿಗೂ ಆಗಬೇಕು ಎನ್ನುವುದು ನನ್ನ ಆಸೆ. ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಆ ಮಾರ್ಗವನ್ನು ಅನುಸರಿಸಬೇಕು. ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಎಂದು ಹಾರೈಸುತ್ತೇನೆ. ಇಷ್ಟು ಹೇಳಿ, ಇವತ್ತು ತಮಗೆಲ್ಲರಿಗೂ ಪ್ರಮಾಣವಚನ ಬೋಧಿಸುವುದಕ್ಕೆ ನಾನು ಸಂತೋಷಪಡುತ್ತೇನೆ ಎಂದರು. ಹಾಗೂ ಪ್ರಮಾಣವಚನ ಬೋಧಿಸತಕ್ಕಂಥ ವಿಷಯದಲ್ಲಿ ಕೆಲವು ನಿಯಮಾವಳಿಗಳಿವೆ. ಆ ನಿಯಮಾವಳಿಗಳನ್ನು ಪಾಲಿಸಬೇಕೆಂದು ತಮ್ಮಲ್ಲಿ ಕೇಳುತ್ತೇನೆ. ಮೊಟ್ಟಮೊದಲು ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣವಚನ ಸೀಕಾರ ಮಾಡಬೇಕು. ಅದಾದ ನಂತರ ವಿಧಾನಸಭಾ ಅಧ್ಯಕ್ಷ ಸ್ಥಾನಕ್ಕೆ ನಿಯೋಜಿತವಾದ ಶ್ರೀ ಜಗದೀಶ್ ಶೆಟ್ಟರ್ ಅವರು ಬರುತ್ತಾರೆ. ತದನಂತರ ವಿರೋಧ ಪಕ್ಷದಲ್ಲಿರುವ ಪ್ರಮುಖ ಪಕ್ಷದ ನಾಯಕರು ಮಂತ್ರಿಮಂಡಲದ ಸದಸ್ಯರುಗಳು, ಅಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸುವವರು ಮತ್ತು ಇತರೆ ಮಾನ್ಯ ಸದಸ್ಯರುಗಳು ಬರಬೇಕು. ಸದಸ್ಯರುಗಳ ಹೆಸರನ್ನು ಕಾರ್ಯದಶಿಯವರು ಕರೆದಾಗ ಅವರು ತಮ್ಮ ಸ್ಥಾನವನ್ನು ಬಿಟ್ಟು, ಕಾರ್ಯದರ್ಶಿಯವರ ಮೇಜಿನ ಬಲ ಭಾಗಕ್ಕೆ ಬಂದು ಸದಸ್ಯರು ಚುನಾಯಿತರಾದ ಬಗ್ಗೆ ನೀಡಿರತಕ್ಕ ಘೋಷಣಾಪತ್ರವನ್ನು ಕಾರ್ಯದರ್ಶಿಯವರಿಗೆ ತೋರಿಸತಕ್ಕದ್ದು. ಪ್ರಮಾಣವಚನ ಅಥವಾ ಪ್ರತಿಜ್ಞಾವಚನದ ಪ್ರತಿ ಮಾನ್ಯ ಸದಸ್ಯರಿಗೆ ನೀಡಲಾಗುವುದು. ಸದಸ್ಯರು ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸುವ ಸಮಯದಲ್ಲಿ ಅಧ್ಯಕ್ಷರ ಪೀಠಕ್ಕೆ ಅಭಿಮುಖವಾಗಿರುವುದು. ನಂತರ ಅಧ್ಯಕ್ಷ ಸ್ಥಾನದಲ್ಲಿರುವವರ ಬಳಿಗೆ ಹೋಗಿ ಅವರಿಗೆ ಹಸ್ತಲಾಘವವನ್ನು ಕೊಡುವುದು. ಸದಸ್ಯರು ಅಧ್ಯಕ್ಷ ಪೀಠದ ಹಿಂಬದಿಯಿಂದ ಮೇಜಿನ ಮತ್ತೊಂದು ಭಾಗಕ್ಕೆ ಬಂದು. ಅಲ್ಲಿರುವ ಸದಸ್ಯರ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡುವುದು. ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡಿದ ನಂತರ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು ಎಂದರು.

### 5.1.2. ಸದಸ್ಯರ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕಾರ

ಹದಿಮೂರನೇ ವಿಧಾನಸಭೆಯ ಹದಿಮೂರನೆಯ ಅಧಿವೇಶನದಲ್ಲಿ ದಿನಾಂಕ 04.06.2008ರಂದು ಹಂಗಾಮಿ ಅಧ್ಯಕ್ಷರು, ಕಾರ್ಯದರ್ಶಿಯವರು ಈಗ ಮಾನ್ಯ ಸದಸ್ಯರುಗಳ ಹೆಸರನ್ನು ಕರೆಯಬಹುದು ಎಂದರು. ಆಗ ಶ್ರೀ ಎಸ್.ಬಿ. ಪಾಟೀಲ್(ಕಾರ್ಯದರ್ಶಿ (ಪ್ರ). ಕರ್ನಾಟಕ ವಿಧಾನಸಭೆ): ಮಾನ್ಯ ಸಭಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈಗ ಪ್ರಮಾಣವಚನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗುವುದು ಎಂದರು.[2]

| ಮಾನ್ಯ ಸದಸ್ಯರ ಹೆಸರು | ಕ್ಷೇತ್ರ | ಪ್ರಮಾಣವಚನ ಸ್ವೀಕರಿಸಿದ ಭಾಷೆ |
|---|---|---|
| ಶ್ರೀ ತಿಪ್ಪೇಸ್ವಾಮಿ | ಚಳ್ಳಕೆರೆ | ಕನ್ನಡ |
| ಶ್ರೀ ಎನ್.ವೈ ಗೋಪಾಲಕೃಷ್ಣ | ಮೊಳಕಾಲ್ಮೂರು | ಕನ್ನಡ |

### 5.1.3. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳ ಕುರಿತು

ಹದಿಮೂರನೇ ವಿಧಾನಸಭೆಯ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ತಾಲ್ಲೂಕಿನ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳ ಬಗ್ಗೆ ದಿನಾಂಕ 25.07.2008ರಂದು ಸದನದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಪ್ರಶ್ನೆ ಮಾಡಿದ ವಿವರ ಇಂತಿದೆ. ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳೆಷ್ಟು(ಮೂರು ವರ್ಷಗಳ ಮಾಹಿತಿ ನೀಡುವುದು) ಮತ್ತು ಈ ಶಾಲೆಗಳನ್ನು ನಿರ್ಮಿಸಲು ತಗುಲಿದ ಒಟ್ಟು ವೆಚ್ಚವೆಷ್ಟು(ಮಾಹಿತಿ ನಿಡುವುದು) ಎಂಬ ಪ್ರಶ್ನೆಗಳಿಗೆ ಸಚಿವರು ಪ್ರತಿಕ್ರಿಯಿಸುತ್ತಾ "ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಮಂಜೂರಾದ ಶಾಲೆಗಳ ವಿವರ ಕೆಳಕಂಡಂತಿದೆ. 2005–06ನೇ ಸಾಲಿನಲ್ಲಿ 1 ಶಾಲೆ, 2006–07ನೇ ಸಾಲಿನಲ್ಲಿ 00 ಹಾಗೂ 2007–08ನೇ ಸಾಲಿನಲ್ಲಿ 4 ಶಾಲೆಗಳು ಎಂದು ಉತ್ತರಿಸಿದರು.

ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳನ್ನು ನಿರ್ಮಿಸಲು ತಗುಲಿದ ಒಟ್ಟು ವೆಚ್ಚವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

[2] Karnataka Legislative Assembly Twelth Assembly, Thirteenth Session Vol-1 from 4th to 6th June 2008. Pp. 1 to 18.

**ಕೋಷ್ಟಕ–5.1.**

**ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳ ಸಂಖ್ಯೆ ಕುರಿತು**

| ಹೊಸ ಶಾಲಾ ಕಟ್ಟಡ | | |
|---|---|---|
| ವರ್ಷ | ಭೌತಿಕ | ಆರ್ಥಿಕ(ಲಕ್ಷ ರೂ.ಗಳಲ್ಲಿ) |
| 2005–06 | 1 | 4.1 |
| 2006–07 | 0 | 0 |
| 2007–08 | 4 | 25.32 |
| **ಒಟ್ಟು** | **5** | **29.42** |

ನಂತರ ಮಾತನಾಡಿದ ಶಾಸಕ ಶ್ರೀ ನೆ.ಲ. ನರೇಂದ್ರಬಾಬು(ಮಹಾಲಕ್ಷ್ಮಿ ಬಡಾವಣೆ) (ಶ್ರೀ ಎನ್.ವೈ. ಗೋಪಾಲಕೃಷ್ಣ(ಮೊಳಕಾಲ್ಮೂರು) ಅವರ ಪರವಾಗಿ) ಮಾತನಾಡುತ್ತ ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ಸದಸ್ಯರಾದ ಎನ್.ವೈ. ಗೋಪಾಲಕೃಷ್ಣ ಅವರ ಮೊಳಕಾಲ್ಮೂರು ಕ್ಷೇತ್ರದಲ್ಲಿ ಅವರ ಜೊತೆ ಹಲವಾರು ಬಾರಿ ಪರ್ಯಟನೆ ಮಾಡಿದ್ದೇನೆ. ಆದರೂ ಸಹ ಅಲ್ಲಿ ಕಂಡಿರುವುದೇನೆಂದರೆ, ಸರ್ವ ಶಿಕ್ಷಣ ಅಭಿಯಾನದ ಮೂಲ ಉದ್ದೇಶ, ಸರ್ವರಿಗೂ ಶಿಕ್ಷಣ ಒದಗಿಸಿಕೊಡಬೇಕೆನ್ನುವುದೇ ಆಗಿದೆ. ಈ ಉದ್ದೇಶದಿಂದ 2002ರಲ್ಲಿ ಆರಂಭವಾದ ಈ ಅಭಿಯಾನದ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶಾಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ಮೂಲಭೂತ ಸೌಕರ್ಯ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ಆರಂಭಿಸಲಾಯಿತು. ನಾನು ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಆ ಕ್ಷೇತ್ರದಿಂದ ಬಯಸಿರತಕ್ಕ ಶಾಲಾಕಟ್ಟಡಗಳು, ಸರ್ಕಾರಿ ಜಮೀನು ಬಹಳಷ್ಟು ಒತ್ತುವರಿಯಾಗುತ್ತಿದೆ. ಈ ದೃಷ್ಟಿಯಿಂದ ಶಾಲೆಗಳಿಗೆ ಕಾಂಪೌಂಡ್ ಹಾಕುವುದಕ್ಕೆ ಒಂದು ಪ್ರಸ್ತಾವನೆಯನ್ನು, ಬೇಡಿಕೆಗಳನ್ನು ಸಲ್ಲಿಸಲಾಗಿತ್ತು. ಆದರೆ ಇದುವರೆಗೂ ಅದು ಈಡೇರಿಲ್ಲ. ಕೇವಲ 12 ಮಾತ್ರ ಆಗಿದೆ. 126 ಪೆಂಡಿಂಗ್ ಇದೆ. ಇವತ್ತು ಅಲ್ಲಿನ ಸ್ಥಳೀಯ ಶಾಸಕರು ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಮತ್ತು ಶೌಚಾಲಯಗಳೂ ಅಷ್ಟೇ. ಹೆಣ್ಣುಮಕ್ಕಳಿಗಾಗಲಿ, ಗಂಡುಮಕ್ಕಳಿಗಾಗಲಿ, ಇವತ್ತು ಶೌಚಾಲಯಗಳಿಲ್ಲ. ಇನ್ನು ಕೂಡ 30 ಶಾಲೆಗಳು ಬ್ಯಾಲೆನ್ಸ್ ಉಳಿದಿದೆ. ನೀರು ಎಷ್ಟು ಅಮೂಲ್ಯ ಎಂಬುದು ನಿಮಗೆ ಗೊತ್ತು. ಆಗ ಅಧ್ಯಕ್ಷರು ನರೇಂದ್ರಬಾಬು ಅವರೆ ನೇರವಾಗಿ ಪ್ರಶ್ನೆ ಕೇಳಿ, ಈ ರೀತಿ ಭಾಷಣ ಮಾಡಿದರೆ ಇದಕ್ಕೆ ಸಾಕಷ್ಟು ಸಮಯ ಹಿಡಿಯುತ್ತದೆ. ತಾವು ನೇರವಾಗಿ ಪ್ರಶ್ನೆ ಕೇಳಿ ನಿಮಗೆ ಏನು ಉತ್ತರ ಬೇಕೆಂದು ಪ್ರಶ್ನೆ ಕೇಳಿ ಅಂದರು.

ಆಗ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡುತ್ತ ಮಾನ್ಯ ಅಧ್ಯಕ್ಷರೇ, ಶ್ರೀಯುತ ಗೋಪಾಲಕೃಷ್ಣ ಪರವಾಗಿ ಮಾನ್ಯ ನರೇಂದ್ರಬಾಬು ಅವರು ಏನು ಪ್ರಶ್ನೆ ಕೇಳುತ್ತಿದ್ದಾರೆ, ಅದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಅವರು ಕೇಳುವುದೇನೆಂದರೆ, ಕಾಂಪೌಂಡ್, ಶೌಚಾಲಯ, ಕುಡಿಯುವ ನೀರು, ಇದೆಲ್ಲವೂ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳು ಎಷ್ಟೆಂದು ಕೇಳಿರುವುದಕ್ಕೆ ನಾನು ವರ್ಷವಾರು ವಿವರಗಳನ್ನು ಒದಗಿಸಿಕೊಟ್ಟಿದ್ದೇನೆ. 2005ರಲ್ಲಿ 1, 2007-08ರಲ್ಲಿ 4 ಶಾಲೆಗಳೆಂದು ವಿವರ ಕೊಟ್ಟಿದ್ದೇನೆ. ಈ ಶಾಲೆಗಳನ್ನು ನಿರ್ಮಿಸುವುದಕ್ಕೆ ಎಷ್ಟು ವೆಚ್ಚವಾಗಿದೆ ಎಂದು ಕೇಳಿರುವುದಕ್ಕೆ 2005-06ರಲ್ಲಿ 1 ಶಾಲೆಯನ್ನು 4 ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಿದ್ದೇವೆ. 2007-08ನೇ ಸಾಲಿನಲ್ಲಿ 4 ಶಾಲೆಗಳನ್ನು 25 ಲಕ್ಷ ರೂಪಾಯಿಗಳಲ್ಲಿ ನಾವು ಕಟ್ಟಡ ಕಟ್ಟಿಕೊಟ್ಟಿದ್ದೇವೆ. ಆದರೆ ಮಾನ್ಯ ಶಾಸಕರು ಕೇಳಿದಂತೆ, ಅನೇಕ ಶಾಲೆಗಳಲ್ಲಿ ಕಾಂಪೌಂಡ್, ಶೌಚಾಲಯ, ಕುಡಿಯುವ ನೀರು ಈ ರೀತಿಯಾಗಿ ಪಂಚ ಸೌಲಭ್ಯಗಳ ಕೊರತೆಗಳಿವೆ. ಆ ಕೊರತೆಗಳನ್ನು ನೀಗಿಸುವುದಕ್ಕೆ ಸರ್ವ ಶಿಕ್ಷಣ ಅಭಿಯಾನ ಯೋಜನೆ ಒಳಗೊಂಡಂತೆ ಬೇರೆ ಬೇರೆ ಯೋಜನೆಗಳಡಿಯಲ್ಲಿ ನಾವು ಸರ್ಕಾರದಿಂದ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಅವರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಇನ್ನೂ ಹೆಚ್ಚಿನ ವಿವರಗಳನ್ನು ನೀಡಲಾಗುತ್ತದೆ ಎಂದರು.

ಆಗ ಶ್ರೀ ನೆ.ಲ. ನರೇಂದ್ರಬಾಬು ಮಾತನಾಡುತ್ತ ಮಾನ್ಯ ಅಧ್ಯಕ್ಷರೇ, ಸಚಿವರನ್ನು ತಮ್ಮ ಮುಖೇನ ವಿನಂತಿಸಿಕೊಳ್ಳುವುದೇನೆಂದರೆ, ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್ ಇವುಗಳನ್ನು ಒದಗಿಸಿಕೊಡುವ ಭರವಸೆಯನ್ನು ತಾವು ಕೊಡಬೇಕು ಎಂದರು.

ಆಗ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಆದ್ಯತೆ ಮೇರೆಗೆ ಸರ್ಕಾರದಲ್ಲಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳಲ್ಲೂ ಈ ಪಂಚ ಸೌಲಭ್ಯಗಳು ಅಂದರೆ, ಕುಡಿಯುವ ನೀರು, ಶೌಚಾಲಯ ಒಳಗೊಂಡಂತೆ ಕೊಠಡಿಗಳು ಅಲ್ಲಿ ಡೆಸ್ಕ್, ಬೆಂಚ್‌ಗಳಿಂದಿಡಿದು ಕಾಂಪೌಂಡ್, ಕ್ರೀಡಾಂಗಣ ಎಲ್ಲವನ್ನೂ ಸಹ ಆದ್ಯತೆ ಮೇಲೆ ನಮ್ಮ ರಾಜ್ಯದ ಎಲ್ಲಾ ಶಾಲೆಗಳಲ್ಲೂ ಸಹ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಹಿಂದಿನಕ್ಕಿಂತಲೂ ಹೆಚ್ಚಿನ ಹಣ ಅಂದರೆ, ಸುಮಾರು 250 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣ ತೆಗೆದುಕೊಂಡಿದ್ದೇವೆ. ಹಾಗಾಗಿ ಆದ್ಯತೆ ಮೇರೆಗೆ ಈ ರೀತಿ ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೊಂದು ವಿಷಯವೆಂದರೆ ನಾನು ಈ ಸದನದ ಮೂಲಕ ತಮ್ಮೆಲ್ಲರಲ್ಲೂ

ವಿನಂತಿಸಿಕೊಳ್ಳುತ್ತೇನೆ. ದತ್ತಕ ಯೋಜನೆಯು 2001ರಿಂದ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಆ ಯೋಜನೆಯನ್ನು ಸಹ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿರುವ ಶಾಲೆಗಳಲ್ಲಿ ಈ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಆ ಯೋಜನೆಯನ್ನು ಅಳವಡಿಸಿಕೊಳ್ಳುವುದಕ್ಕೆ ಎಲ್ಲರ ಸಹಕಾರ ಬೇಕೆಂದು ವಿನಂತಿಸಿಕೊಳ್ಳುತ್ತೇನೆ ಎಂದರು.[3]

### 5.1.4. ಚಳ್ಳಕೆರೆ ನಗರದಲ್ಲಿ ಕೊಳವೆ ಬಾವಿಗಳ ಕುರಿತು

ಹದಿಮೂರನೇ ವಿಧಾನಸಭೆಯ ಶಾಸಕ ತಿಪ್ಪೇಸ್ವಾಮಿ ಅವರು ದಿನಾಂಕ 31.07.2008ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ(453) 273 ಯನ್ನು ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಶ್ರೀ ಸುರೇಶ್ ಕುಮಾರ್ ಅವರಿಗೆ ಚಳ್ಳಕೆರೆ ನಗರದಲ್ಲಿ ಕೊಳವೆ ಬಾವಿಗಳಲ್ಲಿನ ನೀರಿನ ಪ್ರಮಾಣ ಕುಸಿದಿದ್ದು, ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? ಚಳ್ಳಕರೆ ಪಟ್ಟಣಕ್ಕೆ ಬೇರೆ ಮೂಲಗಳಿಂದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಚಳ್ಳಕೆರೆ ನಗರದ ಕೊಳವೆ ಬಾವಿಗಳ ಅಂತರ್ಜಲದ ಪ್ರಮಾಣ ಕುಸಿದಿರುವುದು ಗಮನಿಸಿ 2004–05ನೇ ಸಾಲಿನಲ್ಲಿ ರೂ. 1.00 ಲಕ್ಷಗಳ ಅಂದಾಜಿನ ಮೊತ್ತದಲ್ಲಿ ಅಜ್ಜಯ್ಯನ ಕೆರೆ ಅಂಗಳದಲ್ಲಿರುವ 4 ಸಂಖ್ಯೆ ಕೊಳವೆಬಾವಿಗೆ ಇಂಗಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಸದರಿ ಕೊಳವೆಬಾವಿಗಳ ಅಂತರ್ಜಲದ ಪ್ರಮಾಣವು ಶೇ. 25ರಷ್ಟು ಮಳೆಗಾಲದಲ್ಲಿ ಮಾತ್ರ ಹೆಚ್ಚಾಗುತ್ತದೆ. ಚಳ್ಳಕೆರೆ ಪಟ್ಟಣಕ್ಕೆ ಬೇರೆ ಮೂಲಗಳಿಂದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರು ಹಾಗೂ ಇದು ಸರ್ಕಾರದ ಮಟ್ಟದಲ್ಲಿ ಉದ್ಭವಿಸುವುದಿಲ್ಲ ಎಂದರು.[4]

### 5.1.5. ವೈಮಾನಿಕ ದಳದ ಕುರಿತು

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದಲ್ಲಿ ದಿನಾಂಕ 31.07.2008ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ (454) 274 ಯನ್ನು ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ

---

[3] Karnataka Legislative Assembly Thirteenth Assembly, Thirteenth Session Vol-4 (No.1) from 23[ed] June 2008. Pp. 93 to 96.

[4] Karnataka Legislative Assembly Thirteenth Assembly, 2[nd] Session Vol-5 (No.1) from 31[st] July 2008. Pp. 756 to 758.

ಸಚಿವರ ಶ್ರೀ ಜಿ. ಜನಾರ್ಧನ ರೆಡ್ಡಿ ಅವರಿಗೆ ವೈಮಾನಿಕ ದಳಕ್ಕೆ ಬೇಕಾಗುವ ಭೂಮಿ ಎಷ್ಟು? ವೈಮಾನಿಕ ದಳದ ತರಬೇತಿಯು ಇದೇ ಸ್ಥಳದಲ್ಲಿ ಸ್ಥಾಪಿಸುವ ಉದ್ದೇಶವೇನು? ಮತ್ತು ರೈತರ ಭೂಮಿಯನ್ನು ವಶಪಡಿಸಿಕೊಂಡ ವೈಮಾನಿಕ ದಳದ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವುದರಿಂದ ರೈತರಿಗಾಗುವ ಅನುಕೂಲತೆಗಳೇನು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಮುಂದಿನ ಪೀಳಿಗೆಯ ರಕ್ಷಣಾವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಹಾಗೂ ಪರೀಕ್ಷಿಸಲು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಅಧೀನ ರಕ್ಷಣಾ ಸಂಶೋಧನಾ (DRDO) ಸಂಸ್ಥೆಗೆ ಸುಮಾರು 4,000 ಎಕರೆ ಭೂಪ್ರದೇಶದ ಅಗತ್ಯವಿದೆ ಎಂದು ಪ್ರತಿಕ್ರಿಯಿಸಿದರು.

ಎರಡನೆಯ ಪ್ರಶ್ನೆಗೆ ವಿಸ್ತೃತವಾದ ವೈಮಾನಿಕ ಹಾಗೂ ಭೂಸಮೀಕ್ಷೆಯನ್ನು ನಡೆಸಿದ ನಂತರ ಡಿಆರ್‌ಡಿಓ ಸಂಸ್ಥೆ ಚಿತ್ರದುರ್ಗ ಜಿಲ್ಲೆಯ ವರವು ಹಾಗೂ ಕುದಾಪುರ ಕಾವಲ್‌ನಲ್ಲಿ 2 ಸ್ಥಳಗಳನ್ನು ಹಾಲಿ ಕೋಲಾರದಲ್ಲಿನ VOD 179 ಸ್ಥಳಾಂತರಕ್ಕೆ ರಕ್ಷಣಾ ಮಂತ್ರಾಲಯ DRDO ಹಾಗೂ ನಾಗರಿಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರವು ಗುರುತಿಸಿದೆ ಎಂದು ಉತ್ತರಿಸಿದರು.[5]

ಕೊನೆಯದಾಗಿ ಉದ್ದೇಶಿತ ಭೂಮಿ ಅಧೀನವು ಕೆಲವು ಸರ್ಕಾರದ ಜಮೀನನ್ನು ಒಳಗೊಂಡಿದೆ. ಅದುದರಿಂದ ರೈತರಿಗೆ ಯಾವುದೇ ನೇರವಾದ ಅನುಕೂಲ ಆಗುವುದಿಲ್ಲ, ಆದರೂ ಸ್ಥಳೀಯರಿಗೆ ಸ್ವಲ್ಪ ಮಟ್ಟಿಗೆ ಉದ್ಯೋಗವಕಾಶ ದೊರೆಯುವ ಸಾಧ್ಯತೆ ಇದೆ ಎಂಬುದನ್ನು ತಿಳಿಸಿದರು.

### 5.1.6. ಚಿತ್ರದುರ್ಗ ಜಿಲ್ಲೆಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟೆಲ್‌ಗಳು

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 09.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವ ಡಿ. ಸುಧಾಕರ್ ಅವರಿಗೆ ಪ್ರಸಕ್ತ ವರ್ಷದಲ್ಲಿ ಚಿತ್ರದುರ್ಗ ಜಿಲ್ಲೆಗೆ ಮಂಜೂರಾದ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟಲ್‌ಗಳು ಎಷ್ಟು? ಇದಕ್ಕಾಗಿ ಬಿಡುಗಡೆಯಾದ ಅನುದಾನ ಎಷ್ಟು? ಈ ಅನುದಾನದಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ

---

[5] Karnataka Legislative Assembly Thirteenth Assembly, 2nd Session Vol-5 (No.1) from 31st July 2008. Pp.- 756 to 758.

ಮಂಜೂರು ಮಾಡಲಾಗಿದೆ?(ತಾಲ್ಲೂಕುವಾರು ವಿವರ ನೀಡುವುದು) ಮಂಜೂರಾತಿಗೆ ಅನುಸರಿಸಿದ ಮಾನದಂಡಗಳೇನು? ಮಾನದಂಡದಂತೆಯೇ ಅನುದಾನವನ್ನು ಮಂಜೂರು ಮಾಡಲಾಗಿದೆಯೇ? ಮತ್ತು ಹಾಗಿಲ್ಲದಿದ್ದಲ್ಲಿ ಕಾರಣಗಳೇನು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ಪ್ರಸಕ್ತ ವರ್ಷದಲ್ಲಿ ಚಿತ್ರದುರ್ಗ ಜಿಲ್ಲೆಗೆ ಈ ಕೆಳಕಂಡಂತೆ ಹೆಣ್ಣುಮಕ್ಕಳ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ ಎಂದರು.

**ಕೋಷ್ಟಕ–5.2.**
**ಚಿತ್ರದುರ್ಗ ಜಿಲ್ಲೆಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟೆಲ್‌ಗಳ ಸಂಖ್ಯೆ ಕುರಿತು**

| ಕ್ರ.ಸಂ. | ತಾಲ್ಲೂಕು ಹೆಸರು | ಮಂಜೂರಾತಿ ಸಂಖ್ಯೆ | | ಬಿಡುಗಡೆಯಾದ ಅನುದಾನ(ರೂ.ಲಕ್ಷಗಳಲ್ಲಿ) |
|---|---|---|---|---|
| | | ಪ.ಜಾತಿ | ಪ.ವರ್ಗ | 22.18 |
| 1 | ಹೊಸದುರ್ಗ | 1 | -- | 22.18 |
| 2 | ಹಿರಿಯೂರು | 1 | -- | 22.18 |
| 3 | ಹೊಳಲ್ಕೆರೆ | 1 | -- | 22.18 |
| 4 | ಮೊಳಕಾಲ್ಮೂರು | 0 | 1 | 22.18 |
| 5 | ಚಳ್ಳಕೆರೆ | 0 | 1 | 22.18 |
| **ಒಟ್ಟು** | | **3** | **2** | **110.9** |

ಡಾ. ನಂಜುಂಡಪ್ಪ ವರದಿಯಂತೆ ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಈ ವಸತಿಶಾಲೆಗಳನ್ನು ಮಂಜೂರು ಮಾಡಲಾಗಿದೆ. ವಸತಿಶಾಲೆಗಳ ನಿರ್ವಹಣಾ ವೆಚ್ಚ ಭರಿಸಲು ಮೇಲಿದ್ದಂತೆ ಅನುದಾನವನ್ನು ನೀಡಲಾಗುವುದು ಎಂದು ಪ್ರತಿಕ್ರಿಯಿಸಿದರು.[6]

### 5.1.7. ವಿದ್ಯುತ್ ಕಂಬಗಳು, ವಿದ್ಯುತ್ ಲೈನ್ ಹಾಗೂ ವಿದ್ಯುತ್ ವೈರುಗಳ ಕುರಿತು

ಶಾಸಕ ಶ್ರೀ ಎನ್.ವೈ. ಗೋಪಾಲಕೃಷ್ಣ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 22.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಇಂಧನ ಸಚಿವ ಶ್ರೀ ಕೆ.ಎಸ್. ಈಶ್ವರಪ್ಪ ಅವರಿಗೆ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ಕ್ಷೇತ್ರಕ್ಕೆ ಸೇರಿದ ತಳಕು ಹೋಬಳಿಯಲ್ಲಿ ಬಹಳ ಹಳೆಯದಾದ ವಿದ್ಯುತ್ ಕಂಬಗಳು, ವಿದ್ಯುತ್ ಲೈನ್ ಹಾಗೂ ವಿದ್ಯುತ್ ವೈರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ,

[6] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 193 to 194.

ಈ ಹಳೆಯದಾದ ವಿದ್ಯುತ್ ಕಂಬಗಳು ವಿದ್ಯುತ್ ಲೈನ್ ಹಾಗೂ ವಿದ್ಯುತ್ ವೈರುಗಳು ಇರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು(ವಿವರ ಒದಗಿಸುವುದು)? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ಕ್ಷೇತ್ರಕ್ಕೆ ಸೇರಿದ ತಳಕು ಹೋಬಳಿಯಲ್ಲಿ ಬಹಳ ಹಳೆಯದಾದ ವಿದ್ಯುತ್ ಕಂಬಗಳು, ವಿದ್ಯುತ್ ಲೈನ್ ಹಾಗೂ ವಿದ್ಯುತ್ ವೈರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಪ್ರತಿಕ್ರಿಯಿಸಿದರು.

ನಂತರ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಕ್ಷೇತ್ರಕ್ಕೆ ಸೇರಿದ ತಳಕು ಹೋಬಳಿಯಲ್ಲಿ ಕಳೆದ ವರ್ಷವಾದ 2008–09ರಲ್ಲಿ ಹಳೆಯದಾದ 4 ಸಂಖ್ಯೆಗಳ ಕಂಬಗಳು ಹಾಗೂ 5.73 ಕಿ.ಮೀ. ಉದ್ದದ ಹಳೆಯ ವಿದ್ಯುತ್ ವಾಹಕವನ್ನು ಬದಲಾಯಿಸಲಾಗಿದೆ.

ಪ್ರಸಕ್ತ ವರ್ಷವಾದ 2009–10ರಲ್ಲಿ ಒಟ್ಟು 6 ಕಾಮಗಾರಿಗಳಿಗೆ ಅಂದಾಜು 26.88 ಲಕ್ಷ ರೂ.ಗಳಿಗೆ ಅನುಮೋದನೆ ನೀಡಲಾಗಿದ್ದು, ಹಳೆಯದಾಗಿರುವ 113 ಕಂಬಗಳನ್ನು ಹಾಗೂ 17.97 ಕಿ.ಮೀ. ಉದ್ದದ ಹಳೆಯ ವಿದ್ಯುತ್ ವಾಹಕಗಳನ್ನು ಬದಲಾಯಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಡಿಸೆಂಬರ್ 2009ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು.[7]

### 5.1.8. ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯದರ್ಶಿಗಳ ಕುರಿತು

ಶಾಸಕ ಶ್ರೀ ಎನ್.ವೈ. ಗೋಪಾಲಕೃಷ್ಣ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 22.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವೆ ಕು.ಶೋಭಾ ಕರಂದ್ಲಾಜೆ ಅವರಿಗೆ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು?, ಬಹುತೇಕ ಗ್ರಾಮಗಳಲ್ಲಿ ಕಾರ್ಯದರ್ಶಿಗಳು ಇಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಚಿತ್ರದುರ್ಗ

---

[7] Karnataka Legislative Assembly Thirteenth Assembly, 3rd Session Vol-9 (No.3) from 22nd July 2009. Pp.- 814.

ಜಿಲ್ಲೆ ಮೊಳಕಾಲ್ಮೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯದರ್ಶಿಗಳ ಸಂಖ್ಯೆ 16 ಹಾಗೂ ಹಾಲಿ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿಯೂ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ಪ್ರತಿಕ್ರಿಯಿಸಿದರು.[8]

### 5.1.9. ಪಂಪ್‌ಸೆಟ್‌ಗಳ ಅಕ್ರಮ ಸಕ್ರಮ ಕುರಿತು

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 09.06.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 64(129) ಯನ್ನು ಮಾನ್ಯ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಪಂಪ್‌ಸೆಟ್‌ಗಳ ಅಕ್ರಮ/ಸಕ್ರಮ ಯೋಜನೆಯಡಿಯಲ್ಲಿ ನೀಡಿರುವ ಅನುದಾನವೆಷ್ಟು? ಮತ್ತು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಈ ಯೋಜನೆಯ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?(ಸಂಪೂರ್ಣ ವಿವರ ನೀಡುವುದು) ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಶ್ರೀ ಡಿ.ಕೆ. ಶಿವಕುಮಾರ್, ಅಕ್ರಮ ಸಕ್ರಮ Pumpset ಗಳನ್ನು ಈಗಾಗಲೇ ... ನಿಮ್ಮಲ್ಲಿ 803 ಫಲಾನುಭವಿಗಳಿದ್ದಾರೆ. ಬಹಳ ಜನ ರೈತರು ಅಕ್ರಮ ಸಕ್ರಮಕ್ಕೆ ಹಣ ಕಟ್ಟಿಕೊಳ್ಳಬೇಕು. ಅವರು ಕಟ್ಟಿಕೊಂಡಿಲ್ಲ. ರಾಜ್ಯದಲ್ಲಿ ಸುಮಾರು 4 ಲಕ್ಷ 81 ಸಾವಿರ ಜನರು ಈ ಅಕ್ರಮ ಸಕ್ರಮ ಯೋಜನೆಯಲ್ಲಿ ಅಧಿಕೃತ Pumpset ಮಾಡಿಕೊಂಡವರಿದ್ದಾರೆ. ಕೆಲವರು 10–10 ಸಾವಿರ ರೂಪಾಯಿ ಕಟ್ಟಿದ್ದಾರೆ. ಕೆಲವರು 10 ಸಾವಿರ ರೂಪಾಯಿ ಕಟ್ಟಿದ್ದಾರೆ. ಕೆಲವರು deposit ಜೊತೆಗೆ fees ಕಟ್ಟಬೇಕು. ರಾಜ್ಯದಲ್ಲಿ 3 ಲಕ್ಷ 60 ಸಾವಿರ ಜನರಿಗೆ ಮಾಡಿದ್ದೇವೆ. ಇನ್ನೂ 96 ಸಾವಿರ ಜನರಿಗೆ ಮಾಡಬೇಕು. Priority ಮೇಲೆ ಮಾಡುತ್ತೇವೆ. ನಿಮ್ಮಲ್ಲಿ transformerಗೆ ಸ್ವಲ್ಪ ಸಮಸ್ಯೆ ಇದೆ. ಈಗ tender ಕರೆದಿದ್ದೇವೆ. ಯಾರ್‍ಯಾರು ಹಣ ಕಟ್ಟಿರುತ್ತಾರೆ, priority ಮೇಲೆ, ಸಕ್ರಮ ಮಾಡಿಕೊಳ್ಳಲಿಕ್ಕೆ ಒಬ್ಬ ರೈತನಿಗೆ 50 ಸಾವಿರದಿಂದ 1 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ. ನಿಮ್ಮಲ್ಲಿ ಕೂಡ ಯಾರು ಕಟ್ಟಿದ್ದಾರೆ ಅವರಿಗೆ priority ಮೇಲೆ ಮಾಡಿಕೊಡುತ್ತೇವೆ. ಜೊತೆಗೆ transformer ಎಲ್ಲೆಲ್ಲಿ ಸುಟ್ಟುಹೋಗಿವೆ, 3 ದಿನಗಳಲ್ಲಿ ಅದನ್ನು ಸರಿ ಮಾಡಬೇಕೆಂದು ನಾವು ಆದೇಶ ಕೊಟ್ಟಿದ್ದೇವೆ. contract ವಿಚಾರದಲ್ಲಿ ಸ್ವಲ್ಪ delay

---

[8] Karnataka Legislative Assembly Thirteenth Assembly, 3rd Session Vol-9 (No.3) from 22nd July 2009. Pp.- 851.

ಆಗಿದೆ. ಏಕೆಂದರೆ ನಮ್ಮದೇ Government companyಗಳು Supply ಮಾಡುವುದು. ಕೂಡಲೇ ಕ್ರಮ ಕೈಗೊಳ್ಳುತ್ತೇವೆ[9] ಎಂದರು.

### 5.1.10. ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಕುರಿತು

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 17.02.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 78(1324)ಯನ್ನು ಮಾನ್ಯ ಕಂದಾಯ ಸಚಿವರಿಗೆ ಮೊಳಕಾಲ್ಮೂರು ಪಟ್ಟಣದಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ನೀಡಲಾಗಿದೆಯೇ?, ಹಾಗಿದ್ದಲ್ಲಿ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ತಯಾರಿಸಿ, ಸ್ಥಳ ಗುರುತಿಸಲಾಗಿದೆಯೇ? ಈ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣಕ್ಕೆ ಮಂಜೂರಾದ ಅನುದಾನವೆಷ್ಟು? ಮತ್ತು ಈ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಮೊಳಕಾಲ್ಮೂರು ತಾಲ್ಲೂಕಿನ ಬಗ್ಗೆ ನಾವು ವಿಶೇಷವಾದ ಗಮನವನ್ನು ಕೊಡಬೇಕಾಗಿದೆ. ಡಾ. ನಂಜುಂಡಪ್ಪ ವರದಿಯ ಪ್ರಕಾರ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕಾಗಿರುತ್ತದೆ. ಜನಸಂಖ್ಯೆ ಎರಡು ಲಕ್ಷಕ್ಕಿಂತ ಹೆಚ್ಚು ಇರುವ ದೊಡ್ಡ ತಾಲ್ಲೂಕು. ಈ ತಾಲ್ಲೂಕಿನಲ್ಲಿ 1892ರಲ್ಲಿ ಈ ಕಛೇರಿಯ ಕಟ್ಟಡ ನಿರ್ಮಾಣವಾಗಿದೆ. ಈ ಕಟ್ಟಡ ಪೂರ್ತಿ ಶಿಥಿಲವಾಗಿದೆ. ಇದು ನನಗೆ ಅರ್ಥವಾಗುತ್ತಿದೆ. ಸ್ಥಳಾವಕಾಶದ ಕೊರತೆ ಆಸನದ ವ್ಯವಸ್ಥೆ ಅಲ್ಲಿ ತುಂಬಾ ಅವ್ಯವಸ್ಥೆಗಳು ಇದೆ ಎನ್ನತಕ್ಕಂಥ ರೀತಿಯಲ್ಲಿ ಇಲ್ಲಿ ಮಿನಿ ವಿಧಾನಸೌಧದ ಅವಶ್ಯಕತೆ ಇದೆ ಎಂದು ತಾವು ಹೇಳಿದ್ದೀರಿ ಎಂದರು. ಆಗ ಅಧ್ಯಕ್ಷರು ಬೇಗ ತರಿಸಿಕೊಂಡು ಬೇಗ ಮಂಜೂರಾತಿ ಮಾಡಿಕೊಡಿ ಎಂದರು.

ಆಗ ಶ್ರೀ ಶ್ರೀನಿವಾಸ ಪ್ರಸಾದ್ ಮೊಳಕಾಲ್ಮೂರು ತಾಲ್ಲೂಕು ತಹಶೀಲ್ದಾರ್ ಆಫೀಸಿನ ಪರಿಸ್ಥಿತಿ ಹೇಗಿತ್ತು ಎಂದು ತಮಗೆ ಅದರ ಬಗ್ಗೆ ಇಷ್ಟು ಹೇಳಿದೆ. ಈಗಾಗಲೇ ಮಿನಿ ವಿಧಾನಸೌಧ ಮಂಜೂರಾಗಿದೆ. 5 ಕೋಟಿ ರೂ.ಗಳನ್ನು ಕೊಡುವುದು ಹಿಂದೆ ಇತ್ತು. ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದ ಸಚಿವ ಸಂಪುಟದಲ್ಲಿ ನಾವು ತೀರ್ಮಾನ ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಇನ್ನು ಮುಂದೆ ಮಿನಿ ವಿಧಾನಸೌಧಕ್ಕೆ 10 ಕೋಟಿ ರೂ.ಗಳನ್ನು

[9] Karnataka Legislative Assembly Debates. Fourteen Session of the 14th Legislative Assembly, Dated 17th Feb 2017 . Pp.- 28 to 29.

ಕೊಡಬೇಕೆಂದು ಆಗಿರುತ್ತದೆ. ಈಗಾಗಲೇ ಪ್ಲಾನ್, ಡಿಸೈನ್, Estimate ಬೇಗ ಕಳುಹಿಸಿಕೊಡಬೇಕೆಂದು ಆಗಿದೆ. ಅದನ್ನು ಲೋಕೋಪಯೋಗಿ ಇಲಾಖೆಯವರು ಕಳುಹಿಸಿದ್ದಾರೆ. ಅದು ನಮಗೆ ಬಂದ ನಂತರ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಸುವ್ಯವಸ್ಥಿತವಾದಂಥ ಮಿನಿ ವಿಧಾನಸೌಧವನ್ನು ಮೊಳಕಾಲ್ಮೂರಿಗೆ ಕೊಡುತ್ತೇವೆ ಎಂದರು.[10]

### 5.1.11. ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆ ಕುರಿತು

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 12.06.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 987(1324)ಯನ್ನು ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಿಗೆ, ಕಳೆದ 3 ವರ್ಷಗಳಿಂದ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಿರುವ ಅನುದಾನವೆಷ್ಟು? 2015–16ನೇ ಸಾಲಿನಲ್ಲಿ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಟಿ.ಎಸ್.ಪಿ.(ಗಿರಿಜನ) ಯೋಜನೆಗೆ ಯಾವುದೇ ಅನುದಾನ ನೀಡದಿರಲು ಕಾರಣಗಳೇನು? ಮತ್ತು ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು? ಕಾಮಗಾರಿಯು ಯಾವ ಹಂತದಲ್ಲಿದೆ, ಯಾವ ಯಾವ ಏಜೆನ್ಸಿಗೆ ನೀಡಲಾಗಿದೆ? ಎಂದು ಪ್ರಶ್ನಿಸಿದರು.[11]

### 5.1.12. ಚೆಕ್ ಡ್ಯಾಂ ಮತ್ತು ಬೋರ್‌ವೆಲ್‌ಗಳ ಕುರಿತು

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 12.06.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 988(1325)ಯನ್ನು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರಿಗೆ, ಕಳೆದ 3 ವರ್ಷಗಳಿಂದ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಮಂಜೂರಾದ ಬೋರ್‌ವೆಲ್‌ಗಳೆಷ್ಟು? ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ 2014–15ರಿಂದ 2016–17ನೇ ಸಾಲಿನಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಕೈಗೊಂಡ ಚೆಕ್ ಡ್ಯಾಂ ಕಾಮಗಾರಿಗಳೆಷ್ಟು?

---

[10] Karnataka Legislative Assembly Debates. Sixth Session of the 14th Legislative Assembly , Dated 17th Feb 2017. Pp.- 46 to 48.

[11] Karnataka Legislative Assembly Debates. Fourteen Session of the 14th Legislative Assembly , Dated 12th June 2017.

ಮತ್ತು ಈ ಕ್ಷೇತ್ರಕ್ಕೆ 2014–15ರಿಂದ 2016–17ರವರೆಗೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಮಂಜೂರಾದ ಒಟ್ಟು ಅನುದಾನವೆಷ್ಟು.? ಎಂದು ಪ್ರಶ್ನಿಸಿದರು.[12]

**5.1.13. ನೇರಲಗುಂಟೆ ಗ್ರಾಮಕ್ಕೆ ಔಟ್ ಪೋಸ್ಟ್ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವುದರ ಕುರಿತು**

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 13.06.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 95(1344)ಯನ್ನು ಮಾನ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರಿಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ನೇರಲಗುಂಟೆ ಗ್ರಾಮಕ್ಕೆ ಔಟ್ ಪೋಸ್ಟ್ ಪೊಲೀಸ್ ಠಾಣೆಯನ್ನು(Out Post Police Station) ಸರ್ಕಾರ ಮಂಜೂರು ಮಾಡಿದೆಯೇ? ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? ಮತ್ತು ಸದರಿ ಕಾಮಗಾರಿಗೆ ನೀಡಿದ ಅನುದಾನವೆಷ್ಟು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಇಲ್ಲಿ ಒಂದು ಹೊಸ Development ಏನೆಂದರೆ DRDO, defence establishment ಬಹಳ ದೊಡ್ಡ ಪ್ರಮಾಣದಲ್ಲಿ ಅವರ ಕ್ಷೇತ್ರದಲ್ಲಿ ಬರುತ್ತಿದೆ. ಅದೇ ರೀತಿಯಾಗಿ Indian Institute of science ನ second campus ಮಾಡಬೇಕೆಂದು ಅಲ್ಲಿ ಕೂಡ ಪ್ರಾರಂಭವಾಗಿದೆ. ಹೀಗಾಗಿ ಅಲ್ಲಿ ಅಗತ್ಯತೆಯ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ. ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದರು.[13]

**5.1.14. ನಿರೀಕ್ಷಣಾ ಮಂದಿರ ನಿರ್ಮಾಣ ಕುರಿತು**

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 13.06.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ59(714) ಯನ್ನು ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ ಅವರಿಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ತಳಕು ಗ್ರಾಮಕ್ಕೆ ನಿರೀಕ್ಷಣಾ ಮಂದಿರ ನಿರ್ಮಿಸಲು ಸರ್ಕಾರ ಗಮನ ಹರಿಸದಿರಲು ಕಾರಣವೇನು.?, ಪ್ರಸಕ್ತ ಸಾಲಿನಲ್ಲಿ ನಿರೀಕ್ಷಣಾ ಮಂದಿರ ನಿರ್ಮಿಸಲು

---

[12] Karnataka Legislative Assembly Debates. Fourteen Session of the 14th Legislative Assembly, Dated 12th June 2017.

[13] Karnataka Legislative Assembly Debates. Fourteen Session of the 14th Legislative Assembly, Dated 13th June 2017. Pp.- 20.

ಸರ್ಕಾರ ಮಂಜೂರಾತಿ ನೀಡಲಾಗುವುದೇ? ಮತ್ತು ಹಾಗಿದ್ದಲ್ಲಿ ಯಾವಾಗ ನಿರೀಕ್ಷಣಾ ಮಂದಿರದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಅಲ್ಲಿ ಒಂದು IB ಕೊಡಿ ಎನ್ನುತ್ತಾರೆ. ತಳಕು ಹೋಬಳಿಯು ಚಳ್ಳಕೆರೆ ಪಟ್ಟಣದಿಂದ 17 ಕಿ.ಮೀ. ಮತ್ತು ಹಾನಗಲ್ ಪಟ್ಟಣದಿಂದ 35 ಕಿ.ಮೀ. ಅಂತರದಲ್ಲಿದ್ದು ಅಲ್ಲಿಗೆ 20 ನಿಮಿಷದಲ್ಲಿ ಹೋಗಬಹುದು. ಅದು ಹೋಬಳಿ Head quarters ಅಲ್ಲಿ IB ಆಗಲೇಬೇಕೆಂದರೆ ಅದಕ್ಕೆ ಪ್ರಾವಿಷನ್ ಇಲ್ಲ. ಆದರೆ ಅವರು ಹೇಳುವುದನ್ನು ನೋಡೋಣ. ಅಲ್ಲಿ ಅಗತ್ಯವಿಲ್ಲ. ಆದರೆ ಅವರು ಈಗ ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನ ಹೆಚ್ಚಾಗಿದ್ದಾರೆ, ದೊಡ್ಡ ಊರು ಎಂದು ಹೇಳುತ್ತಿದ್ದಾರೆ. ಏಕೆಂದರೆ ಹಾನಗಲ್ ನಿಂದ 35 ಕಿ.ಮೀ. ದೂರ ಇದೆ. ಚಳ್ಳಕೆರೆಯಿಂದ 17 ಕಿ.ಮೀ ದೂರ ಇದೆ. ಅಲ್ಲಿ IB ಇದೆ ಇಲ್ಲಿಯೂ IB ಇದೆ. ಅದರ ಅಗತ್ಯವಿಲ್ಲವೆಂದು ಅಂದುಕೊಂಡಿದ್ದೇನೆ ಎಂದರು. ಆಗ ಎಸ್. ತಿಪ್ಪೇಸ್ವಾಮಿ ದಯಮಾಡಿ ಮಾಡಿಕೊಡಿ ಸ್ವಾಮಿ ಎಂದು ಕೇಳಿಕೊಂಡರು.[14]

### 5.1.15. ಪರಶುರಾಂಪುರ ತಾಲ್ಲೂಕು ರಚನೆ ಕುರಿತು

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನೈದನೇ ಅಧಿವೇಶನದಲ್ಲಿ ದಿನಾಂಕ 20.11.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 67(797)ಯನ್ನು ಮಾನ್ಯ ಕಂದಾಯ ಸಚಿವ ಶ್ರೀ ಕಾಗೋಡು ತಿಮ್ಮಪ್ಪ ಅವರಿಗೆ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಹೋಬಳಿ ಕೇಂದ್ರವನ್ನು ಹೊಸ ತಾಲ್ಲೂಕನ್ನಾಗಿ ಘೋಷಿಸದಿರುವುದಕ್ಕೆ ಕಾರಣವೇನು? ಯಾವಾಗ ಹೊಸ ತಾಲ್ಲೂಕು ಎಂದು ಘೋಷಣೆ ಮಾಡಲಾಗುವುದು? ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆಯಲ್ಲಿ ಉಪವಿಭಾಗಾಧಿಕಾರಿಗಳ ಕಛೇರಿ ಪ್ರಾರಂಭ ಮಾಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಬಂದಿದ್ದರೆ ಯಾವಾಗ ಪ್ರಾರಂಭ ಮಾಡಲಾಗುವುದು? ಎಂದು ಪ್ರಶ್ನಿಸಿದರು. ಪರಶುರಾಂಪುರ ಹೋಬಳಿ ಚಳ್ಳಕೆರೆ ತಾಲ್ಲೂಕಿನಲ್ಲಿರತಕ್ಕಂಥದ್ದು, ಚಿತ್ರದುರ್ಗ ಜಿಲ್ಲೆಗೆ ಸೇರಿರುವಂಥದ್ದು. ಹೊಸದಾಗಿ ತಾಲ್ಲೂಕು ಮಾಡಿ ಎಂದು ನಾನು ಕೇಳುತ್ತಿಲ್ಲ. ಇದು ಬಹಳ ಹಳೆಯ ಪ್ರಸ್ತಾವನೆ. ಏಕೆಂದರೆ 2015–16ನೇ ಸಾಲಿನಲ್ಲೂ ನಾನು ಪ್ರಶ್ನೆಯನ್ನು ಕೇಳಿದಂಥ ಸಂದರ್ಭದಲ್ಲಿ 43 ತಾಲ್ಲೂಕು ಏನು ಘೋಷಣೆ ಆಗಿದೆ ಅದರಲ್ಲಿ ಪರಶುರಾಂಪುರ ಹೋಬಳಿ ಸೇರಿದೆ. ಆ ತಾಲ್ಲೂಕನ್ನು ಘೋಷಣೆ ಮಾಡುವ ಸಂದರ್ಭದಲ್ಲಿ

[14] Karnataka Legislative Assembly Debates. Fifteen Session of the 14th Legislative Assembly, Dated 17th Nov 2017 . Pp.- 39 to 40.

ಮಾಡುತ್ತೇವೆಂದು ಹೇಳಿದರು. ಮೊನ್ನೆ 43 ತಾಲ್ಲೂಕುಗಳ ಬದಲಾಗಿ 49 ತಾಲ್ಲೂಕುಗಳಾಗಿವೆ. ಆ ಸಂದರ್ಭದಲ್ಲಿ ಇದು ಬಿಟ್ಟುಹೋಯಿತು. ಆಗ ಕಂದಾಯಮಂತ್ರಿಗಳಾದ ತಮಗೂ ನಾನು ನಿವೇದನೆ ಮಾಡಿದ್ದೆ. ತಾವು ಸಹ ಸರ್ಕಾರಕ್ಕೆ ಒಂದು ಪತ್ರವನ್ನು ಕೊಟ್ಟಿದ್ದಿರಿ. ಏಕೆಂದರೆ ಆಗಿನ ಕಂದಾಯ ಸಚಿವರು ಅದನ್ನು ತಾಲ್ಲೂಕು ಮಾಡುತ್ತೇವೆಂದು ಹೇಳಿದ್ದಾರೆನ್ನುವುದು ಅಷ್ಟೇ ಅಲ್ಲ, ಅದು ಗಡಿ ಭಾಗದಲ್ಲಿರತಕ್ಕಂಥದ್ದು ಮತ್ತು ಶ್ರೀ ಎಂ.ಪಿ. ಪ್ರಕಾಶ್ ಅವರ ವರದಿಯಲ್ಲೂ ಸಹ ಆ ಹೋಬಳಿಯನ್ನು ತಾಲ್ಲೂಕನ್ನಾಗಿ ಮಾಡಬೇಕೆಂದು ಇದೆ. ಹೀಗಾಗಿ ಆ ಹೋಬಳಿಯನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡಲೇಬೇಕೆಂದು ಕೇಳಿಕೊಳ್ಳುತ್ತೇನೆ ಎಂದರು.[15]

ಸಚಿವರು ಉತ್ತರಿಸುತ್ತ, ಶ್ರೀ ಕಾಗೋಡು ತಿಮ್ಮಪ್ಪ ಮಾತನಾಡುತ್ತ ಈಗಾಗಲೇ ನಾವು 50 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದೇವೆ. ಅವುಗಳನ್ನು ಜನವರಿಗೆ ಅಸ್ತಿತ್ವಕ್ಕೆ ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದಕ್ಕೆ ಹಣವೂ ಬೇಕು ಮತ್ತು ಬೇರೆ ವ್ಯವಸ್ಥೆಗಳು ಬೇಕು. ಆಗ ಅದಲ್ಲದೆಯೇ ಮತ್ತೊಂದಿಷ್ಟು ಹೋಬಳಿಗಳನ್ನು ಸೇರಿಸಬೇಕೆಂದರೆ ಅನೇಕ ತೊಂದರೆ, ಇವೆಲ್ಲ ಇವೆ. ಆದರೂ ಮುಂದಿನ ದಿನಗಳಲ್ಲಿ ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ ಎಂದರು. ಆಗ ಶ್ರೀ ರಘುಮೂರ್ತಿ ಟಿ. ಯವರು Priority ಯಲ್ಲಿ ಸೇರಿಸಿ ಮಾಡಿಕೊಡಬೇಕೆಂದು ಕೇಳಿಕೊಂಡರು. ಆಗ ಅಧ್ಯಕ್ಷರು ಆಯಿತು ಬಿ. ಗಮನದಲ್ಲಿಟ್ಟುಕೊಳ್ಳುತ್ತೇನೆಂದು ಹೇಳಿದ್ದಾರೆ. ಕೊನೆಗೆ ಶ್ರೀ ರಘುಮೂರ್ತಿ ಟಿ. ಇಟ್ಟಿದ್ದಾರೆ. ಆದರೆ ಈ ತರಹ ಆಗಿರುವುದರಿಂದ ಅದನ್ನು ಸೇರಿಸಲೇಬೇಕೆಂದು ಕೇಳಿಕೊಂಡರು.

### 5.1.16. ವೇದಾವತಿ ನದಿಗೆ ಬ್ಯಾರೇಜ್ ನಿರ್ಮಾಣ

ಶಾಸಕ ಶ್ರೀ ಎಸ್. ತಿಪ್ಪೇಸ್ವಾಮಿ ಅವರು ಹದಿನಾಲ್ಕನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶನದಲ್ಲಿ ದಿನಾಂಕ 20.11.2017ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 737(536)ಯನ್ನು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರಿಗೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಕಸವಿಗೊಂಡನಹಳ್ಳಿ ಗ್ರಾಮದ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸಲು ಸರ್ಕಾರ ಗಮನ ಹರಿಸಿದೆಯೇ? ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಬ್ಯಾರೇಜ್ ನಿರ್ಮಿಸಲು ಕ್ರಮ

---

[15] Karnataka Legislative Assembly Debates. Fifteen Session of the 14th Legislative Assembly, Dated 17th Feb 2017 . Pp.- 15 to 16.

ಕೈಗೊಳ್ಳಲಾಗುವುದೇ? ಮತ್ತು ಎಷ್ಟು ಕಾಲಾವಧಿಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು? ಎಂದು ಪ್ರಶ್ನಿಸಿದರು.[16]

## 5.2 ಪರಿಶಿಷ್ಟರ ಹಿತರಕ್ಷಣೆ ಕುರಿತ ಚರ್ಚೆಗಳು

ಕ್ಷೇತ್ರದ ಹಾಗೂ ರಾಜ್ಯದ ಪರಿಶಿಷ್ಟರ ಪರವಾಗಿ ಶಾಸಕರು ಸದನದಲ್ಲಿ ಮಾತನಾಡಿರುವ ವಿವರ ಕೆಳಗಿನಂತಿದೆ.

### 5.2.1. ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 09.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವ ಡಿ. ಸುಧಾಕರ್ ಅವರಿಗೆ 2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆಂದು ಬಿಡುಗಡೆಯಾದ ಅನುದಾನವೆಷ್ಟು, ವಿವಿಧ ಯೋಜನೆಗಳಡಿ ಬಿಡುಗಡೆಗೊಳಿಸಿದ ಅನುದಾನದ ಪೂರ್ಣ ವಿವರ ನೀಡುವುದು? ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾದ ಹಣದ ವಿವರಗಳನ್ನು ನೀಡುವುದು. ಈ ಅನುದಾನದ ಬಿಡುಗಡೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳೇನು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ 2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ ಎಂದು ತಿಳಿಸಿದರು.[17]

---

[16] Karnataka Legislative Assembly Debates, Fourteen Session of the 14th Legislative Assembly, Dated 20th Nov 2017.

[17] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 154 to 155.

**ಕೋಷ್ಟಕ–5.3.**
**ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಕುರಿತು**

| ಕ್ರ. ಸಂ. | ಯೋಜನೆಗಳು | ಬಿಡುಗಡೆಯಾದ ಅನುದಾನ(ಲಕ್ಷ ರೂ.ಗಳು) |
|---|---|---|
| 1 | ವಿಶೇಷ ಕೇಂದ್ರೀಯ ಸಹಾಯಧನ | 122.766 |
| 2 | ಭಾರತ ಸಂವಿಧಾನ ಅನುಚ್ಛೇದ 275(1)ರ ಅನುದಾನ | 124.8 |
| 3 | ಗಿರಿಜನ ಉಪಯೋಜನೆಯಡಿ ಕ್ರೋಡೀಕರಿಸಿದ ಅನುದಾನ | 252.5 |
| | **ಒಟ್ಟು** | **500.066** |

2008–09ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರ.

**ಕೋಷ್ಟಕ–5.4.**
**ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರ ಕುರಿತು**

| ಕ್ರ. ಸಂ | ತಾಲ್ಲೂಕು | ವಿಶೇಷ ಕೇಂದ್ರೀಯ ಸಹಾಯಧನ | ಭಾರತ ಸಂವಿಧಾನ ಅನುಚ್ಛೇಧ 275(1) ರ ಅನುದಾನ | ಗಿರಿಜನ ಉಪ ಯೋಜನೆಯಡಿ ಕ್ರೋಡೀಕರಿಸಿದ ಅನುದಾನ | ತುಂತುರು ನೀರಾವರಿ ಘಟಕ | ಒಟ್ಟು |
|---|---|---|---|---|---|---|
| 1 | ಚಳ್ಳಕೆರೆ | 11 | 16 | 4 | 2.63 | 33.63 |
| 2 | ಹೊಳಲ್ಕೆರೆ | 12 | 17 | 5 | 2.33 | 36.33 |
| 3 | ಹೊಸದುರ್ಗ | 5.25 | 0 | 5 | 2.33 | 12.58 |
| 4 | ಹಿರಿಯೂರು | 43 | 56 | 224.5 | 3.1 | 326.6 |
| 5 | ಮೊಳಕಾಲ್ಮೂರು | 11.5 | 6.8 | 9 | 2.79 | 30.09 |
| 6 | ಚಿತ್ರದುರ್ಗ | 24.5 | 29 | 5 | 2.336 | 60.836 |
| | **ಒಟ್ಟು** | **122.766** | **124.8** | **252.5** | **15.506** | **500.066** |

2008–09ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ಬಿಡುಗಡೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಪ್ರತಿಕ್ರಿಯಿಸಿದರು.

ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಬಗ್ಗೆ ಶ್ರೀ ತಿಪ್ಪೇಸ್ವಾಮಿ ಅವರು ಮಾತನಾಡುತ್ತ, ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಎಸ್.ಟಿ. ಜನಾಂಗಕ್ಕೆ ಬಂದಂಥ ಹಣ ನಮ್ಮ ಚಿತ್ರದುರ್ಗ ಜಿಲ್ಲೆಗೆ 484.30 ಲಕ್ಷ ರೂ.ಗಳು ಬಂದಿದೆ. ಚಿತ್ರದುರ್ಗ ಜಿಲ್ಲೆಗೆ ಬಂದಿರತಕ್ಕಂಥ ಹಣ 484 ಲಕ್ಷ ರೂ. ಗಳು. ಇದರಲ್ಲಿ ಸನ್ಮಾನ್ಯ ಮಂತ್ರಿಗಳು ಕ್ಷೇತ್ರದಿಂದ ಗೆದ್ದಿದ್ದಾರೆ. ಎಸ್.ಟಿ. ಕ್ಷೇತ್ರದಿಂದ ನಾನು ಗೆದ್ದಿದ್ದೇನೆ. ನನ್ನ ಕ್ಷೇತ್ರಕ್ಕೆ 25 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಮಂತ್ರಿಗಳು ತಮ್ಮ ಕ್ಷೇತ್ರಕ್ಕೆ 324 ಲಕ್ಷ ರೂ.ಗಳನ್ನು ಇಟ್ಟುಕೊಂಡಿದ್ದಾರೆ. ಇದು ಎಸ್.ಟಿ. ಫಂಡ್, ಮಂತ್ರಿಗಳ ಕ್ಷೇತ್ರಕ್ಕೆ 324 ಲಕ್ಷ ರೂ.ಗಳು. ಅದು ಜನರಲ್ ಕ್ಷೇತ್ರ, ನನ್ನ ಕ್ಷೇತ್ರಕ್ಕೆ ಕೇವಲ 25 ಲಕ್ಷ ರೂ.ಗಳು, ಇದು ನ್ಯಾಯವೇ? ಇವತ್ತು ತಮ್ಮ ಮುಖೇನ ಸನ್ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ನನಗೆ ನ್ಯಾಯ ದೊರಕಿಸಿಕೊಡಬೇಕು ಎಂದರು. ಆಗ ಶ್ರೀ ಡಿ.ಕೆ. ಶಿವಕುಮಾರ್, ಏನು ಸ್ವಾಮಿ ಇದು ರಾಜಕಾರಣ, ಏನು ಭಿನ್ನಮತ, ಏನು ಭಿನ್ನಾಭಿಪ್ರಾಯ, ಏನು ಆರೋಪ ಎಂದರು.[18]

ಆಗ ಅಧ್ಯಕ್ಷರು, ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ. ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲರೇ, ತಾವು ಕುಳಿತುಕೊಳ್ಳಿ, ಮಾನ್ಯ ಕೃಷ್ಣಮೂರ್ತಿಯವರೆ, ಅವರು ಉತ್ತರವನ್ನು ಕೊಡಲಿ, ಮಾನ್ಯ ಎನ್.ವೈ ಗೋಪಾಲಕೃಷ್ಣ ಅವರು ಅದೇ ಜಿಲ್ಲೆಯವರು ಇರುವುದರಿಂದ ಅವರು ಪ್ರಶ್ನೆಯನ್ನು ಕೇಳುತ್ತಾರೆ ಉತ್ತರವನ್ನು ಹೇಳಿ ಎಂದರು.

ಶ್ರೀ ಎನ್.ವೈ. ಗೋಪಾಲಕೃಷ್ಣ ಅವರು ಮಾತನಾಡುತ್ತ ನನ್ನ ಮೊಳಕಾಲ್ಮೂರು ಕ್ಷೇತ್ರವು ಎಸ್.ಟಿ. ರಿಸರ್ವೇಶನ್ ಕ್ಷೇತ್ರ ಆಗಿರುವಂತಹದ್ದು, ಮಾನ್ಯ ಮಂತ್ರಿಗಳು ಸೆಂಟ್ರಲ್ ಅಸಿಸ್ಟೆನ್ಸಿನಿಂದ ಕೊಟ್ಟಿರುವುದು 172 ಲಕ್ಷ ರೂ.ಗಳು. ಇದರಲ್ಲಿ ಚಳ್ಳಕೆರೆಗೆ 11 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಮೊಳಕಾಲ್ಮೂರಿಗೆ 6.70 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. Grants under Article 275 of the Constitustion of India ಅಡಿಯಲ್ಲಿ 124 ಲಕ್ಷ ರೂ.ಗಳು. ಬಂದಿರತಕ್ಕಂಥದ್ದರಲ್ಲಿ ಚಳ್ಳಕೆರೆಗೆ 12 ಲಕ್ಷ ರೂ.ಗಳು, ಮೊಳಕಾಲ್ಮೂರಿಗೆ 11 ಲಕ್ಷ ರೂ.ಗಳು. ನಂತರ Grants under tribal supply ಇದರಡಿಯಲ್ಲಿ ಬಂದಿರುವ ರೂ. 252 ಲಕ್ಷ ರೂ.ಗಳಲ್ಲಿ 224ಲಕ್ಷ ರೂ. ಗಳನ್ನು ಹಿರಿಯೂರಿಗೆ ತೆಗೆದುಕೊಂಡಿದ್ದಾರೆ. ಮೊಳಕಾಲ್ಮೂರಿಗೆ 9

[18] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 155.

ಲಕ್ಷ ರೂ.ಗಳು, ಚಳ್ಳಕೆರೆಗೆ 4ಲಕ್ಷ ರೂ.ಗಳು, ಇದರಲ್ಲಿ ಒಟ್ಟು 500 ಲಕ್ಷ ರೂ.ಗಳು ಬಂದಿರತಕ್ಕಂಥದ್ದು. ಇದರಲ್ಲಿ ಹಿರಿಯೂರಿಗೆ 326 ಲಕ್ಷ ರೂ.ಗಳನ್ನು ತೆಗೆದುಕೊಂಡಿರತಕ್ಕಂಥದ್ದು, ಮೊಳಕಾಲ್ಮೂರಿಗೆ 30 ಲಕ್ಷ ರೂ.ಗಳು, ಚಳ್ಳಕೆರೆಗೆ 33 ಲಕ್ಷ ರೂ.ಗಳು ಇವೆರಡೂ ಎಸ್.ಟಿ. ಮೀಸಲಾತಿ ಕ್ಷೇತ್ರಗಳು. ದಯವಿಟ್ಟು ಇದರ ಬಗ್ಗೆ ತಮ್ಮ ಮೂಲಕ ಉತ್ತರವನ್ನು ಕೊಡಿಸಬೇಕು ಎಂದರು.[19]

ಆಗ ಶ್ರೀ ಡಿ ಸುಧಾಕರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಕೇಳಿದ ಹಾಗೆ ಕೇಂದ್ರದ ವಿಶೇಷ ಅಡಿಯಲ್ಲಿ ಅವರ ಕ್ಷೇತ್ರಕ್ಕೆ 2006–07ರಲ್ಲಿ 12 ಲಕ್ಷ ರೂ.ಗಳು ಬಂದಿತ್ತು ಎಂದರು.

ಆಗ ಅಧ್ಯಕ್ಷರು ಮಾತನಾಡುತ್ತ ಮಾನ್ಯ ಸಚಿವರೆ, ಸಂಖ್ಯೆಯಲ್ಲಿ ರಿಪೀಟ್ ಮಾಡುವುದು ಬೇಕಾಗಿರುವುದಿಲ್ಲ. ಎಸ್.ಟಿ. ಕ್ಷೇತ್ರ ಇರುವಲ್ಲಿ ಕಡಿಮೆಯಾಗಿದೆ. ನಿಮ್ಮ ಕ್ಷೇತ್ರವಾದ ಹಿರಿಯೂರಿಗೆ ಜಾಸ್ತಿಯಾಗಿದೆ ಎನ್ನುವಂಥ ಪ್ರಶ್ನೆ ಇದೆ, ಅದಕ್ಕೊಂದು ಉತ್ತರವನ್ನು ಕೊಟ್ಟು ಬಿಡಿ ಎಂದು ಪ್ರತಿಕ್ರಿಯಿಸಿದರು.

ಆಗ ಶ್ರೀ ಡಿ. ಸುಧಾಕರ್ ಮಾತನಾಡುತ್ತ ಸರ್ ಈ ವರ್ಷ ಹಿರಿಯೂರಿಗೆ ಒಂದು ವಿಶೇಷವಾದ ಪ್ಯಾಕೇಜನ್ನು ಮಾಡಿದ್ದೇವೆ. ಫುಲ್ ಅಮೌಂಟ್‌ನಲ್ಲಿ ಬೇರೆ ಕ್ಷೇತ್ರಗಳಿಗೆ ಯಾವುದೇ ರೀತಿಯಾಗಿ ತೊಂದರೆಯಾಗದ ರೀತಿಯಲ್ಲಿ ನಮ್ಮಲ್ಲಿ ಉಳಿದಿರುವಂಥ ಸೇವಿಂಗ್ಸ್‌ನಲ್ಲಿ ಈ ಕಾರ್ಯಕ್ರಮವನ್ನು ಮಾಡಿದ್ದೇವೆ. Regular schemeಗಳು ಏನಿದ್ದವು, ಅವುಗಳಿಗೆ ನಾವು ಏನು ಕಡಿಮೆ ಮಾಡಿಲ್ಲ. ಉಳಿದಿರತಕ್ಕಂಥ ಪೂಲ್ಡ್ ಅಮೌಂಟ್‌ನಲ್ಲಿ ಮಹಿಳೆಯರಿಗೆ ಒಂದು ಪ್ಯಾಕೇಜ್ ಮಾಡಿದ್ದೇವೆ. ಮುಂದಿನ ದಿವಸಗಳಲ್ಲಿ ಇವರಿಗೂ ಸಹ ಸರ್ಕಾರ ಹಣದ ಲಭ್ಯತೆಯ ಮೇಲೆ ಸಹಕಾರವನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ ಎನ್ನುವಂಥ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ ಎಂದರು.

ನಂತರ ಶ್ರೀ ತಿಪ್ಪೇಸ್ವಾಮಿ ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಾನು ನಮ್ಮ ಜಿಲ್ಲೆಯಲ್ಲಿರತಕ್ಕಂಥದ್ದಕ್ಕೆ ಒಂದು allotment ಕಳುಹಿಸಿದ್ದಾರೆ. ಜಿಲ್ಲಾ ಪಂಚಾಯಿತಿಗೆ 118 ಲಕ್ಷ ರೂ.ಗಳನ್ನು ಕಳುಹಿಸಿದ್ದಾರೆ.

---

[19] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 190 to 156.

ಜಿಲ್ಲಾಧಿಕಾರಿಗಳಿಗೆ 134.50 ಲಕ್ಷ ರೂಪಾಯಿಗಳನ್ನು ಕಳುಹಿಸಿದ್ದಾರೆ. ನಮ್ಮ ತಾಲ್ಲೂಕಿಗೆ ಬಂದಾಗ ನಾನು ಅವರನ್ನು ಕೇಳಿದೆ, ನೀವು ಇಷ್ಟೊಂದು ಬಂದಿರುವ ಹಣವನ್ನು ನಮಗೆ ಏಕೆ ತಾರತಮ್ಯ ಮಾಡಿದ್ದೀರಿ ಎಂದು ಅಧಿಕಾರಿಗಳನ್ನು ಕೇಳಿದರೆ, ಮಾನ್ಯ ಮಿನಿಸ್ಟರ್ ಅವರು ಡೈರೆಕ್ಷನ್ ಕೊಟ್ಟಿದ್ದಾರೆ. ಇಲ್ಲಿ ನಾವು ಚೇಂಜ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಾನು ಅವರ ಡಿಪಾರ್ಟ್‌ಮೆಂಟಿನಿಂದ ಮಾಹಿತಿಯನ್ನು ತರಿಸಿದ್ದೇನೆ. ದಿನಾಂಕ 5.1.2009ರಂದು ಚಿತ್ರದುರ್ಗಕ್ಕೆ 107ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗದಗಕ್ಕೆ 13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕುವಾರು ನಾನು ಮಾಹಿತಿಯನ್ನು ತರಿಸಿರುತ್ತೇನೆ. ಇವರು ಒಬ್ಬರು ಮಾತ್ರ 324 ಲಕ್ಷ ರೂ.ಗಳನ್ನು ತೆಗೆದುಕೊಂಡಿದ್ದಾರೆ. ಇದರಿಂದ ನಮಗೆಲ್ಲಾ ಅನ್ಯಾಯವಾಗಿದೆ. ಇದನ್ನು ತಾವು ಸರಿ ಮಾಡಿಕೊಡಬೇಕು. ಇವರದ್ದು ಸಾಮಾನ್ಯ ಕ್ಷೇತ್ರವಾಗಿರುತ್ತದೆ ಎಂದರು.[20]

ಆಗ ಶ್ರೀ ಡಿ.ಕೆ. ಶಿವಕುಮಾರ್ ಮಾತನಾಡುತ್ತ ಸ್ವಾಮಿ, ಇದನ್ನು ಸುಧಾಕರ್ ಅವರು ಒಬ್ಬರೆ ಮಾಡಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಬೇಕಾದರೆ ತೆಗೆದುನೋಡಿ, ಅವರು ಕೂಡ ಇದೇ ಕೆಲಸವನ್ನು ಮಾಡಿದ್ದಾರೆ. ಆಗ ಶ್ರೀ ತಿಪ್ಪೇಸ್ವಾಮಿ ಮಾತನಾಡುತ್ತ ತಾರತಮ್ಯವಾಗಿರುವುದರಿಂದ ಎಲ್ಲರಿಗೂ ಸಮಾನವಾಗಿ ಹಂಚುವಂತೆ ಆಗಬೇಕು ಎಂದರು. ಆಗ ಅಧ್ಯಕ್ಷರು ಇದನ್ನು ಸರಿ ಮಾಡುತ್ತೇವೆ ಎನ್ನುವುದನ್ನು ಹೇಳಿ ಸುಧಾಕರ್ ಎಂದರು. ಆಗ ಶ್ರೀ ಡಿ. ಸುಧಾಕರ್ ಮಾತನಾಡುತ್ತ ಮುಂದಿನ ದಿನಗಳಲ್ಲಿ ಅದನ್ನು ಪರಿಶೀಲನೆ ಮಾಡಿ ಸರಿ ಮಾಡುತ್ತೇನೆ ಎಂದು ತಿಳಿಸಿದರು. ಆಗ ಶ್ರೀ ತಿಪ್ಪೇಸ್ವಾಮಿ ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, ಇದೇ ಫಂಡ್‌ನಲ್ಲಿ ತೆಗೆದುಹಾಕಿ ಸರಿ ಮಾಡಿಕೊಡಬೇಕು ಎಂಬುದನ್ನು ತಿಳಿಸಿದರು. ಇದರಿಂದ ಪರಿಶಿಷ್ಟ ವರ್ಗದ ಅಭಿವೃದ್ಧಿಯ ಬಗ್ಗೆ ಇರುವಂತಹ ಕಾಳಜಿ ಗೊತ್ತಾಗುತ್ತದೆ.

### 5.2.2. ಪರಿಶಿಷ್ಟ ಜಾತಿ/ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಕುರಿತು

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 09.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವ ಡಿ. ಸುಧಾಕರ್ ಅವರಿಗೆ ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ

[20] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 157.

ವಿದ್ಯಾರ್ಥಿಗಳಿಗೆ 2008–09ನೇ ಸಾಲಿನಲ್ಲಿ ಮಂಜೂರಾದ ವಿದ್ಯಾರ್ಥಿವೇತನ ಎಷ್ಟು?(ಜಿಲ್ಲಾವಾರು ಮಾಹಿತಿ ನೀಡುವುದು). ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಈ ವಿದ್ಯಾರ್ಥಿವೇತನವನ್ನು ತಾಲ್ಲೂಕುವಾರು ಮಂಜೂರು ಮಾಡಲಾಗಿದೆಯೇ ಹಾಗಿದ್ದಲ್ಲಿ ಸಂಪೂರ್ಣ ವಿವರವನ್ನು ಒದಗಿಸುವುದು? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ 2008–09ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ. 11462.73 ಲಕ್ಷಗಳ ಮತ್ತು ರೂ. 3069.52 ಲಕ್ಷಗಳು ವಿದ್ಯಾರ್ಥಿವೇತನಕ್ಕಾಗಿ ಮಂಜೂರಾಗಿದ್ದು, ಆ ಸಂಬಂಧದ ಜಿಲ್ಲಾವಾರು ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.[21]

[21] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 191 to 193.

## ಅನುಬಂಧ–1

ವಿಧಾನಸಭೆ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ) ಇವರ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ: 115ಕ್ಕೆ (ಪರಿಶಿಷ್ಟ ಜಾತಿ ವಿದ್ಯಾರ್ಥಿ ವೇತನ)

**ಕೋಷ್ಟಕ–5.5.**

**ಪರಿಶಿಷ್ಟ ಜಾತಿ/ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಕುರಿತು**

| ಕ್ರ.ಸಂ | ಜಿಲ್ಲೆಗಳು | ಬಿಡುಗಡೆಯಾದ ಅನುದಾನ |
|---|---|---|
| 1 | ಬೆಂಗಳೂರು ನಗರ | 1830.43 |
| 2 | ಬೆಂಗಳೂರು ಗ್ರಾಮಾಂತರ | 156.22 |
| 3 | ಚಿತ್ರದುರ್ಗ | 374.02 |
| 4 | ಕೋಲಾರ | 540.22 |
| 5 | ಶಿವಮೊಗ್ಗ | 370.72 |
| 6 | ತುಮಕೂರು | 626.42 |
| 7 | ಮೈಸೂರು | 947.87 |
| 8 | ಚಿಕ್ಕಮಗಳೂರು | 199.83 |
| 9 | ದಕ್ಷಿಣ ಕನ್ನಡ | 199.99 |
| 10 | ಹಾಸನ | 354.88 |
| 11 | ಕೊಡಗು | 66.01 |
| 12 | ಮಂಡ್ಯ | 390.28 |
| 13 | ಬೆಳಗಾಂ | 441.98 |
| 14 | ಬಿಜಾಪುರ | 377.49 |
| 15 | ಧಾರವಾಡ | 382.41 |
| 16 | ಉತ್ತರ ಕನ್ನಡ | 102.97 |
| 17 | ಗುಲ್ಬರ್ಗಾ | 854.49 |
| 18 | ಬಳ್ಳಾರಿ | 350.63 |
| 19 | ಬೀದರ್ | 374.59 |
| 20 | ರಾಯಚೂರು | 366.28 |
| 21 | ದಾವಣಗೆರೆ | 515.54 |
| 22 | ರಾಮನಗರ | 163.56 |
| 23 | ಚಿಕ್ಕಬಳ್ಳಾಪುರ | 265.25 |
| 24 | ಚಾಮರಾಜನಗರ | 346.16 |
| 25 | ಉಡುಪಿ | 92.76 |
| 26 | ಬಾಗಲಕೋಟೆ | 303.48 |
| 27 | ಗದಗ | 303.48 |
| 28 | ಹಾವೇರಿ | 169.45 |
| 29 | ಕೊಪ್ಪಳ | 129.79 |
| | **ಒಟ್ಟು** | **11462.73** |

## ಅನುಬಂಧ–II

2008-09ನೇ ಸಾಲಿನ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಮಂಜೂರಾದ ಅನುದಾನ ವಿವರ.

**ಕೋಷ್ಟಕ–5.6.**

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಮಂಜೂರಾದ ಅನುದಾನ ಕುರಿತು

| ಕ್ರ.ಸಂ. | ಜಿಲ್ಲೆಗಳು | ಬಿಡುಗಡೆಯಾದ ಅನುದಾನ |
|---|---|---|
| 1 | ಬೆಂಗಳೂರು ನಗರ | 259.55 |
| 2 | ಬೆಂಗಳೂರು ಗ್ರಾಮಾಂತರ | 19.85 |
| 3 | ಚಿತ್ರದುರ್ಗ | 271.42 |
| 4 | ಕೋಲಾರ | 101.45 |
| 5 | ಶಿವಮೊಗ್ಗ | 72.42 |
| 6 | ತುಮಕೂರು | 216 |
| 7 | ಮೈಸೂರು | 237 |
| 8 | ಚಿಕ್ಕಮಗಳೂರು | 36.82 |
| 9 | ದಕ್ಷಿಣ ಕನ್ನಡ | 87.5 |
| 10 | ಹಾಸನ | 26.12 |
| 11 | ಕೊಡಗು | 12.87 |
| 12 | ಮಂಡ್ಯ | 26.87 |
| 13 | ಬೆಳಗಾಂ | 150 |
| 14 | ಬಿಜಾಪುರ | 39.17 |
| 15 | ಧಾರವಾಡ | 142 |
| 16 | ಉತ್ತರ ಕನ್ನಡ | 15.27 |
| 17 | ಗುಲ್ಬರ್ಗಾ | 108.02 |
| 18 | ಬಳ್ಳಾರಿ | 219 |
| 19 | ಬೀದರ್ | 89.45 |
| 20 | ರಾಯಚೂರು | 132.5 |
| 21 | ದಾವಣಗೆರೆ | 207 |
| 22 | ರಾಮನಗರ | 17.85 |
| 23 | ಚಿಕ್ಕಬಳ್ಳಾಪುರ | 98.45 |
| 24 | ಚಾಮರಾಜನಗರ | 70.1 |
| 25 | ಉಡುಪಿ | 59.5 |
| 26 | ಬಾಗಲಕೋಟೆ | 71 |
| 27 | ಗದಗ | 90.47 |
| 28 | ಹಾವೇರಿ | 111.6 |
| 29 | ಕೊಪ್ಪಳ | 81 |
| **ಒಟ್ಟು** | | **3069.52** |

ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಈ ವಿದ್ಯಾರ್ಥಿವೇತನವನ್ನು ತಾಲ್ಲೂಕುವಾರು ಮಂಜೂರು ಮಾಡಲಾದ ಹಾಗಿದ್ದಲ್ಲಿ ಸಂಪೂರ್ಣ ವಿವರ.

**ಕೋಷ್ಟಕ–5.7.**

**ತಾಲ್ಲೂಕುವಾರು ಮಂಜೂರಾದ ವಿದ್ಯಾರ್ಥಿವೇತನ ಕುರಿತು**

| ತಾಲ್ಲೂಕು | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ | ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ |
|---|---|---|
| ಚಿತ್ರದುರ್ಗ | 173.78 | 106.336 |
| ಚಳ್ಳಕೆರೆ | 61.7 | 73.939 |
| ಹಿರಿಯೂರು | 47.73 | 27 |
| ಹೊಳಲ್ಕೆರೆ | 27.86 | 19 |
| ಹೊಸದುರ್ಗ | 38.7 | 26.839 |
| ಮೊಳಕಾಲ್ಮೂರು | 24.19 | 18.31 |
| **ಒಟ್ಟು** | **374.2** | **271.424** |

### 5.2.3. ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇಕಡ 18ರ ಅನುದಾನದ ಮಿಸಲಾತಿ

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 09.07.2009ರಂದು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವ ಡಿ. ಸುಧಾಕರ್ ಅವರಿಗೆ 2008–09ನೇ ಸಾಲಿನ ಬಜೆಟ್‌ನಲ್ಲಿ ಶೇಕಡ 18ರ ಮೀಸಲಾತಿ ಅಡಿಯಲ್ಲಿ ವಿವಿಧ ಯೋಜನೆಗಳಿಗಾಗಿ ಸರ್ಕಾರ ಬಿಡುಗಡೆ ಮಾಡಿದ/ ಮೀಸಲಿಟ್ಟ ಅನುದಾನವೆಷ್ಟು?(ಸಂಪೂರ್ಣ ವಿವರ ನೀಡುವುದು), ಬಿಡುಗಡೆಯಾದ ಅನುದಾನದಲ್ಲಿ ಖರ್ಚಾದ ಹಣವೆಷ್ಟು ಯೋಜನಾವಾರು ವಿವರ ನೀಡುವುದು? ಖರ್ಚಾಗದೆ ಉಳಿದ ಅನುದಾನವೆಷ್ಟು? ಯೋಜನವಾರು ವಿವರ ನೀಡುವುದು ಮತ್ತು ಹಾಗಿದ್ದಲ್ಲಿ ಅನುದಾನವು ಖರ್ಚಾಗದೆ ಉಳಿದುಕೊಳ್ಳಲು ಕಾರಣವೇನು? ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ, ಅವರ ಮೇಲೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ, ಸಂಪೂರ್ಣ ವಿವರ ನೀಡುವುದು ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ 2008–09ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ರೂ. 323243.77 ಲಕ್ಷಗಳನ್ನು ಹಾಗೂ ಗಿರಿಜನ ಉಪಯೋಜನೆಯಡಿ 126389.08 ಲಕ್ಷಗಳನ್ನು

ನಿಗದಿಪಡಿಸಲಾಗಿದ್ದು, ಅನುಕ್ರಮವಾಗಿ ರೂ. 257568.21 ಲಕ್ಷಗಳು ಮತ್ತು ರೂ. 98876.10 ಲಕ್ಷಗಳ ವೆಚ್ಚ ಉಂಟಾಗಿರುತ್ತದೆ.[22]

2008–09ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಅನುದಾನ ಖರ್ಚಾಗದೆ ಉಳಿದುಕೊಳ್ಳಲು ಕಾರಣವೇನೆಂಬುದರ ವಿವರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದು ನಂತರ ಒದಗಿಸಲಾಗುವುದು ಎಂದು ತಿಳಿಸಿದರು.

## 5.3. ರಾಜ್ಯದ ಪ್ರಮುಖ ವಿಷಯಗಳು

ಶಾಸಕರು ತಮ್ಮ ಕ್ಷೇತ್ರದೊಂದಿಗೆ ರಾಜ್ಯದ ಅಭಿವೃದ್ಧಿ ಕುರಿತು ಚಿಂತಿಸಬೇಕು. ಸರ್ಕಾರ ತಪ್ಪುದಾರಿಗೆ ನಡೆದಾಗ ಸರ್ಕಾರವನ್ನು ಎಚ್ಚರಿಸುವ ಕೆಲಸವನ್ನು ಶಾಸಕರು ನಿರ್ವಹಿಸಬೇಕು. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿರುವ ಯೋಜನೆ ಹಾಗೂ ಕಾನೂನುಗಳನ್ನು ಬೆಂಬಲಿಸಿ, ರಾಜ್ಯಕ್ಕೆ ಮಾರಕವಾಗುವ ಸರ್ಕಾರದ ನಿಲುವುಗಳನ್ನು ವಿರೋಧಿಸಬೇಕು. ಜೊತೆಗೆ ಶಾಸಕರು ತಮ್ಮ ಕ್ಷೇತ್ರಕ್ಕೆ ನ್ಯಾಯ ದೊರಕಿಸಲು ರಾಜ್ಯದಿಂದ ರೂಪಿತವಾಗುವ ಯೋಜನೆ ಹಾಗೂ ಅನುದಾನಗಳಲ್ಲಿ ಕ್ಷೇತ್ರದ ಪಾಲನ್ನು ಪಡೆಯುವಲ್ಲಿ ಸಮರ್ಥರಿರಬೇಕು.

### ರಾಜ್ಯದ ಪ್ರಮುಖ ವಿಷಯಗಳಲ್ಲಿ – ಚಳ್ಳಕೆರೆ ಮತ್ತು ಮೊಳಕಾಲ್ಮೂರು ಶಾಸಕರು

ರಾಜ್ಯದ ಪ್ರಮುಖ ವಿಷಯಗಳ ಕುರಿತ ಚರ್ಚೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಕ್ಷೇತ್ರಗಳ 13 ಮತ್ತು 14ನೇ ವಿಧಾನಸಭೆಗಳ ಶಾಸಕರ ಭಾಗವಹಿಸುವಿಕೆ ಈ ಕೆಳಗಿನಂತಿದೆ.

### 5.3.1. ದಿವಂಗತ ಶ್ರೀಮತಿ ಬಸವರಾಜೇಶ್ವರಿ ಮತ್ತಿತರ ಗಣ್ಯರ ನಿಧನದ ಬಗ್ಗೆ(ಸಂತಾಪ ಸೂಚನೆ)

ಹದಿಮೂರನೇ ವಿಧಾನಸಭೆಯಲ್ಲಿ ಸೋಮವಾರ, ದಿನಾಂಕ–23ನೇ ಜೂನ್ 2008ರಂದು ಮಾನ್ಯ ಸಭಾಧ್ಯಕ್ಷರು ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವೆಯಾದ ಶ್ರೀಮತಿ ಬಸವರಾಜೇಶ್ವರಿ, ಮಾಜಿ ಸಚಿವರಾಗಿದ್ದ ಶ್ರೀ ಬ್ಲೇಸಿಯಸ್ ಎಂ. ಡಿಸೋಜ, ಶ್ರೀ ಎಂ.ಎಂ.ಜೆ. ಸದ್ಯೋಜಾತ ಹಾಗೂ ಶ್ರೀಮತಿ ಇವಾ ವಾಚ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ. ಓ. ಪಾರ್ಥಸಾರಥಿ, ಶ್ರೀ ಡಿ. ಕರಿಯಪ್ಪಗೌಡ, ಶ್ರೀ ಎಂ. ಓಬಣ್ಣ ರಾಜು, ಶ್ರೀ

[22] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 194 to 195.

ದೊಡ್ಡಬೋರೇಗೌಡ, ಶ್ರೀ ಹೆಚ್.ಸಿ. ಶಿವಶಂಕರಪ್ಪ, ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ಚನ್ನಯ್ಯ ಒಡೆಯರ್ ಹಾಗೂ ಶ್ರೀ ಕೆ.ಎಸ್. ವೀರಭದ್ರಪ್ಪ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ ಎಂದರು.

ಆಗ ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ) ಮಾನ್ಯ ಸಭಾಧ್ಯಕ್ಷರೇ, ಈ ದಿನ ನಮ್ಮನ್ನು ಅಗಲಿರತಕ್ಕಂತಹ ಶ್ರೀಮತಿ ಬಸವರಾಜೇಶ್ವರಿ, ಶ್ರೀ ಬ್ಲೇಸಿಯಸ್ ಎಂ. ಡಿಸೋಜ, ಶ್ರೀ ಎಂ.ಎಂ.ಜೆ. ಸದ್ಯೋಜಾತ, ಶ್ರೀಮತಿ ಇವಾ ವಾಜ್, ಶ್ರೀ.ಡಿ. ಕರಿಯಪ್ಪಗೌಡ, ಡಾ. ಓ. ಪಾರ್ಥಸಾರಥಿ, ಶ್ರೀ ಎಂ. ಓಬಣ್ಣ ರಾಜು, ಶ್ರೀ ದೊಡ್ಡಬೋರೇಗೌಡ, ಶ್ರೀ ಹೆಚ್.ಸಿ. ಶಿವಶಂಕರಪ್ಪ, ಶ್ರೀ ಚನ್ನಯ್ಯ ಒಡೆಯರ್ ಮತ್ತು ಕೆ.ಎಸ್. ವೀರಭದ್ರಪ್ಪ ಇವರ ನಿಧನದಿಂದ ಇವತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ತುಂಬಲಾರದ ಅನ್ಯಾಯವಾಗಿದೆ. ಅದರಲ್ಲೂ ವಿಶೇಷವಾಗಿ ಸನ್ಮಾನ್ಯ ಹೆಚ್.ಸಿ. ಶಿವಶಂಕರಪ್ಪ ನಮ್ಮ ಚಳ್ಳಕೆರೆ ತಾಲ್ಲೂಕಿನವರಾಗಿದ್ದು, 1983ನೇ ವಿಧಾನಸಭೆ ಚುನಾವಣೆಯಲ್ಲಿ ನಾವೆಲ್ಲಾ ಒಟ್ಟಾಗಿ ಇದ್ದು, ಆ ಚುನಾವಣೆಯಲ್ಲಿ ಹೆಚ್ಚಿನ ಬಹುಮತದಿಂದ ಸನ್ಮಾನ್ಯ ಶಿವಶಂಕರಪ್ಪನವರು ಗೆದ್ದು, ನಮ್ಮ ತಾಲ್ಲೂಕಿಗೆ ಉತ್ತಮ ಕೆಲಸ ಮಾಡಿದ್ದರು. ಇಷ್ಟೇ ಅಲ್ಲ ಅದಕ್ಕಿಂತ ಮುಂಚೆ ಅವರು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ದುಡಿಯುವುದರ ಜೊತೆಗೆ ಅವರ ನಡೆ–ನುಡಿ, ಅವರ ಸಜ್ಜನಿಕೆ ಇಂದಿಗೂ ನಮಗೆಲ್ಲರಿಗೂ ದಾರಿದೀಪವಾಗಿದೆ. ಅವರ ಜೀವನದಲ್ಲಿ ಯಾರಿಗೂ ತೊಂದರೆ ಕೊಟ್ಟವರಲ್ಲ. ಅಂತಹ ಒಬ್ಬ ವ್ಯಕ್ತಿ ನಮ್ಮ ತಾಲ್ಲೂಕಿನಲ್ಲಿ ಅಗಲಿರತಕ್ಕಂಥದ್ದು ತುಂಬಾ ದುಃಖವಾಗಿರತಕ್ಕಂತಹ ವಿಷಯ. ಇವರು ನಮ್ಮ ತಾಲ್ಲೂಕಿನ ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿಯಾಗಿ ಆ ಕುಟುಂಬದ ಒಬ್ಬ ಮಹಾನ್ ವ್ಯಕ್ತಿ ಆಗಿದ್ದರು. ಇಂತಹ ವ್ಯಕ್ತಿ ನಿಧನದಿಂದ ಅವರ ಕುಟುಂಬಕ್ಕೆ ದೇವರು ಅವರು ಅಗಲಿರತಕ್ಕಂತಹ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಕೊಡುವುದರ ಜೊತೆಗೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದರು.[23]

---

[23] Karnataka Legislative Assembly Thirteenth Assembly, Thirteenth Session Vol-2 (No.3) from 23[ed] to 25[th] June 2008. Pp.- 1 to 16.

### 5.3.2. ಬಿ.ಪಿ.ಎಲ್. ಕಾರ್ಡ್ ವಿತರಣೆ ಕುರಿತು

ಹದಿಮೂರನೇ ವಿಧಾನಸಭೆಯ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ತಾಲ್ಲೂಕಿನ ಬಿ.ಪಿ.ಎಲ್. ಕಾರ್ಡ್‌ಗಳ ವಿತರಣೆ ಬಗ್ಗೆ ದಿನಾಂಕ 25.07.2008ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 54: 159ಯನ್ನು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಶೀ ಹೆಚ್. ಹಾಲಪ್ಪ ಅವರನ್ನು ಕೇಳಿದರು. ಈ ವಿವರ ಇಂತಿದೆ. ಮೊದಲನೆಯದಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಷ್ಟು ಜನರಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಕೇಳಿದರು. ಎರಡನೆಯದಾಗಿ ಹಾಗಿದ್ದಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಯಾವ ಪ್ರಮಾಣದಲ್ಲಿ ಆಹಾರವನ್ನು ವಿತರಿಸಲು ಯೋಜಿಸಲಾಗಿದೆ. ಹಾಗೂ ಮೂರನೆಯದಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಯೋವೃದ್ಧರಿಗೆ, ಅಂಗವಿಕಲರಿಗೆ ಹಾಗೂ ಅಶಕ್ತರಿಗೆ ಆಹಾರಧಾನ್ಯವನ್ನು ವಿತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು(ವಿವರ ನೀಡುವುದು) ಎಂದು ಕೇಳಿದರು. ಅದಕ್ಕೆ ಸಚಿವರು ಪ್ರತಿಕ್ರಿಯಿಸುತ್ತಾ ಮೊದಲನೇ ಪ್ರಶ್ನೆಗೆ ಎಲ್ಲಾ ಅರ್ಹರಿಗೆ ಪಡಿತರ ಚೀಟಿ ವಿತರಿಸಲಾಗುವುದು ಎಂದು ತಿಳಿಸಿದರು. ಎರಡನೆಯ ಪ್ರಶ್ನೆಗೆ ಕೆಳಕಂಡ ಪ್ರಮಾಣದ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ

ಅಂತ್ಯೋದಯ ಪಡಿತರ ಚೀಟಿಗೆ:- ಅಕ್ಕಿ 29 ಕೆ.ಜಿ. ಹಾಗೂ ಗೋಧಿ 6 ಕೆ.ಜಿ.

ಅಕ್ಷಯ ಪಡಿತರ ಚೀಟಿಗೆ:- ಅಕ್ಕಿ ಯೂನಿಟ್ ಒಂದಕ್ಕೆ 04 ಕೆ.ಜಿ, ಗರಿಷ್ಠ 20 ಕೆ.ಜಿ. ಮತ್ತು ಗೋಧಿ ಯೂನಿಟ್ ಒಂದಕ್ಕೆ 01 ಕೆ.ಜಿ. ಗರಿಷ್ಟ 03 ಕೆ.ಜಿ. ಎಂದು ಉತ್ತರಿಸಿದರು.

ಮೂರನೆಯ ಪ್ರಶ್ನೆಗೆ ಗ್ರಾಮೀಣ ಪ್ರದೇಶದಲ್ಲಿ ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುವ ವಯೋವೃದ್ಧರಿಗೆ, ಅಂಗವಿಕಲರಿಗೆ ಹಾಗೂ ಅಶಕ್ತರಿಗೆ ಎಎವೈ/ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಈ ರೀತಿ ಪಡೆದಿರುವ ಎಎವೈ/ ಬಿಪಿಎಲ್ ಪಡಿತರ ಚೀಟಿಗಳಿಗೆ ಆಹಾರಧಾನ್ಯಗಳನ್ನು ಈ ಮೇಲಿನಂತೆ ನೀಡಲಾಗುತ್ತದೆ.

**5.3.2.1. ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಯನ್ನು ಕೆಳಕಂಡವರಿಗೆ ನೀಡಲಾಗುತ್ತಿದೆ.**

ಮೂಲ ಬುಡಕಟ್ಟು (PRIMITIVE TRIBE) ಕುಟುಂಬಗಳು, ಬಡವರಲ್ಲಿ ಕಡುಬಡವರು, ಜೀವನ ನಿರ್ವಹಣೆಗೆ ನಿಶ್ಚಿತ ಆದಾಯ ಹಾಗೂ ಸಾಮಾಜಿಕ ನೆರವಿಲ್ಲದೆ 60 ಅಥವಾ 60 ವರ್ಷಕ್ಕಿಂತ ಮೇಲ್ಪಟ್ಟ ಏಕ ಪುರುಷ ಹಾಗೂ ಏಕ ಮಹಿಳೆ, ವಿಧವೆ, ಅನಾರೋಗ್ಯ ಪೀಡಿತ ಕುಟುಂಬಗಳು, ವಿಧವೆ ಅಥವಾ ಅನಾರೋಗ್ಯ ಪೀಡಿತ ವ್ಯಕ್ತಿಗಳು/ಅಂಗವಿಕಲರು/60 ಹಾಗೂ 60ಕ್ಕೆ ಮೇಲ್ಪಟ್ಟ ವಯಸ್ಸಿನ ಜೀವನ ನಿರ್ವಹಣೆಗೆ ಯಾವುದೇ ನಿಶ್ಚಿತ ಆದಾಯವಿಲ್ಲದ / ಸಾಮಾಜಿಕ ನೆರವಿಲ್ಲದ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡುಬಡವರು ಅಂದರೆ ಕೃಷಿ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರು.

**5.3.2.2. ಬಿಪಿಎಲ್(ಅಕ್ಷಯ) ಪಡಿತರ ಚೀಟಿ**

ಗ್ರಾಮಾಂತರ ಪ್ರದೇಶದಲ್ಲಿ 12,000/– ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಈ ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

1. 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನ ಭೂಮಿ ಹೊಂದಿರುವವರು.
2. ಸ್ಥಿರ ದೂರವಾಣಿ ಹೊಂದಿರುವವರು.
3. ಸ್ವಂತವಾಗಿ ಯಾರೇ ಡೀಸೆಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು(ಲೂನಾ, ಟಿ.ವಿ.ಎಸ್ ಹೊಂದಿರುವವರು ಹೊರತುಪಡಿಸಿ)
4. ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.
5. ಬೋರ್‌ವೆಲ್ ಹೊಂದಿ ನೀರಾವರಿ ಸೌಕರ್ಯ ಪಡೆಯುತ್ತಿರುವವರು.
6. ತಿಂಗಳಿಗೆ ರೂ. 1000ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು.
7. ಆದಾಯ ತೆರಿಗೆ ಪಾವತಿಸುವವರು.

8. ರಿಜಿಸ್ಟರ್ಡ್ ಗುತ್ತಿಗೆದಾರರು/ಎಪಿಎಂಸಿ ಟ್ರೇಡರ್ಸ್/ಕಮಿಷನ್ ಏಜೆಂಟ್ಸ್/ ಬೀಜ/ ರಾಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು. ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

ನಂತರ ಶ್ರೀ ಎನ್. ವೈ. ಗೋಪಾಲಕೃಷ್ಣ ಅವರು ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಉತ್ತರವನ್ನು ಚೆನ್ನಾಗಿ ಕೊಟ್ಟಿದ್ದಾರೆ. ಈಗ ಕಳೆದ 10 ವರ್ಷಗಳಿಂದ ಏನು ನಡೆಯುತ್ತಾ ಇತ್ತೋ ಅದೇ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿರುವಂತಹ ಒಂದು ವ್ಯವಸ್ಥೆ ಇಲ್ಲಿ ಕಾಣುತ್ತಾ ಇದೆ. ಇದರ ಬಗ್ಗೆ ನಾನು ಹೆಚ್ಚಿಗೆ ಕೇಳುವುದಕ್ಕೆ ಹೋಗುವುದಿಲ್ಲ. ನಾನು ಮೂರು ಪಾಯಿಂಟ್‌ಗಳನ್ನು ಮಾತ್ರ ಮಾನ್ಯ ಸಚಿವರನ್ನು ಕೇಳುತ್ತೇನೆ. ಮೊದಲನೆಯದಾಗಿ ಸರ್ಕಾರ ಬರುವುದಕ್ಕೆ ಮುಂಚಿತವಾಗಿ ತಮ್ಮ ಪ್ರಣಾಳಿಕೆಯಲ್ಲಿ ಮೂರು ತಿಂಗಳೊಳಗೆ ಪಡಿತರ ಚೀಟಿಗಳನ್ನು ತಾವು ಕೊಡುತ್ತೇವೆ ಎಂದು ಹೇಳಿದ್ದೀರಿ. ಎರಡನೆಯದಾಗಿ Income Limit ಅನ್ನು 30 ಸಾವಿರ ರೂಪಾಯಿಗಳವರೆಗೂ ಏರಿಕೆ ಮಾಡಿ ಅದರೊಳಗೆ ಬರುವಂತಹ ಎಲ್ಲಾ ಫಲಾನುಭವಿಗಳಿಗೂ ಪಡಿತರ ಚೀಟಿಗಳನ್ನು ಕೊಡುವಂತಹ ವ್ಯವಸ್ಥೆಯಾಗಿದೆ. ಇನ್ನು ಮೂರನೆಯ ಪಟ್ಟಿಯ ವಿಚಾರವಾಗಿ ನಾನು ಮಾತನಾಡುವುದೇನೆಂದರೆ, ಈಗ 300 ಕಾರ್ಡ್‌ಗಳು ಮೀರಿರುವಂಥ ಪ್ರತಿಯೊಂದು ಹಳ್ಳಿಗಳಲ್ಲಿ ಕೂಡ ನ್ಯಾಯಬೆಲೆ ಅಂಗಡಿಯನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುವಂಥ ಸಂದರ್ಭದಲ್ಲಿ, ಇಲ್ಲಿಯವರೆಗೂ 300ಕ್ಕೂ ಹೆಚ್ಚು ಪಡಿತರ ಕಾರ್ಡ್ ಮೀರಿರುವಂತಹ ಸ್ಥಳಗಳಿಗೆ ಇನ್ನೂ ನ್ಯಾಯಬೆಲೆ ಅಂಗಡಿಗಳನ್ನು ಒದಗಿಸುವಂಥ ವ್ಯವಸ್ಥೆ ಅಲ್ಲಿ ಆಗಿರುವುದಿಲ್ಲ. ಒಂದು ವೇಳೆ ಒದಗಿಸುವಂತಹದ್ದು ಆಗಿದ್ದರೂ ಒಂದು ನ್ಯಾಯಬೆಲೆ ಅಂಗಡಿ ಇರುವ ಸ್ಥಳದಿಂದ ಸಮಾರು 3–4 ಕಿ.ಮೀ ದೂರದಲ್ಲಿರುವ ಹಳ್ಳಿಗಳಿಂದ ಮಕ್ಕಳು, ಕೈ ಕಾಲು ಇಲ್ಲದಿರುವಂಥ ವ್ಯಕ್ತಿಗಳು, ಮುದುಕರು ಇವರು ಬರುವಂಥದ್ದಕ್ಕೆ ವ್ಯವಸ್ಥೆಯು ಕೂಡ ಅವ್ಯವಸ್ಥೆಯಾಗಿ ಕಾಣುತ್ತಿದೆ. ಈ ರೀತಿ ಅವರು ಬಾರದೇ ಇರುವಂಥ ಸಂದರ್ಭದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ನಡೆಸುವಂತಹ ವ್ಯಕ್ತಿಗಳು ಬ್ಲಾಕ್ ಮಾರ್ಕೆಟ್‌ನಲ್ಲಿ ಉಳಿದಂಥ ಆಹಾರ ಸಾಮಗ್ರಿಗಳಾಗಿರಬಹುದು ಅಥವಾ ಎಣ್ಣೆ ಕಾಳುಗಳಾಗಿರಬಹುದು ಇವುಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆ ಇಲ್ಲಿ ಆಗಿದೆ. ಹೀಗಾಗಿ ಅವ್ಯವಸ್ಥೆ ಆಗುವುದಕ್ಕಿಂತ ಮುಂಚಿತವಾಗಿ ವ್ಯವಸ್ಥೆಯಾಗುವವರೆಗಾದರೂ ಕನಿಷ್ಠ ವಾರದಲ್ಲಿ ಎರಡು ಸಾರಿಯಾದರೂ

ಆಹಾರ ಸಾಮಗ್ರಿಗಳನ್ನು ಆ ಹಳ್ಳಿಗಳಿಗೆ ಹೋಗಿ ಕೊಡುವಂಥ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ ಎಂದರು.

ಆಗ ಹಾಲಪ್ಪನವರು ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು 300 ಕಾರ್ಡ್‌ಗಳು ಮತ್ತು ಅದಕ್ಕೂ ಹೆಚ್ಚಿಗೆ ಇರುವಂಥ ಪ್ರದೇಶಗಳಲ್ಲಿ ಹೊಸ ಅಂಗಡಿಗಳನ್ನು ಪ್ರಾರಂಭ ಮಾಡಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಹೊಸ ರೇಷನ್ ಅಂಗಡಿಗಳನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ. ಈ ಸಲಹೆಯನ್ನು ಪರಿಶೀಲನೆ ಮಾಡಿ ಸರ್ಕಾರ ಮುಂದೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಶ್ರೀ ಕೆ.ಎಂ. ಕೃಷ್ಣಮೂರ್ತಿ ಮಾತನಾಡುತ್ತಾ ಈ BPL Card ಬಗ್ಗೆ ನಮ್ಮ ಮೊಳಕಾಲ್ಮೂರು ಶಾಸಕರು ಈಗಾಗಲೇ ಹೇಳಿದ್ದಾರೆ. ಇದು ಬಹಳ ಸಮಂಜಸವಾಗಿದೆ. ಈಗಾಗಲೇ ಜಿಲ್ಲೆಯಲ್ಲಿ ತಾಲ್ಲೂಕು ವೈಸ್ ಶೇಕಡವಾರು ಇಷ್ಟು ಕಾರ್ಡ್‌ಗಳೆಂದು ಕೊಟ್ಟಿದ್ದಾರೆ. ಆದರೆ ಈ ಕಾರ್ಡ್‌ಗಳ ವಿತರಣೆ ಸರಿಯಾಗಿ ಆಗಿಲ್ಲ. ಬಡವರಿಗೆ APL Card ಸಿಕ್ಕಿದೆ, ಶ್ರೀಮಂತರಿಗೆ BPL Card ಸಿಕ್ಕಿದೆ. ಈ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಸರಿ ಮಾಡುತ್ತಾರೆಂಬುದನ್ನು ಮಾನ್ಯ ಸಚಿವರು ತಿಳಿಸಿದರೆ ಒಳ್ಳೆಯದು ಮತ್ತೆ ಎಪಿಎಲ್ ಕಾರ್ಡ್ ಕೊಟ್ಟಂಥವರಿಗೆ ನ್ಯಾಯಬೆಲೆ ಅಂಗಡಿಯವರು ಏನು ಮಾಡಿದ್ದಾರೆಂದರೆ ಕಾರ್ಡ್‌ಗಳನ್ನು ಇಟ್ಟುಕೊಂಡು ಅವರಿಗೆ ಪೇಪರ್‌ದಲ್ಲಿ Identification card ಕೊಟ್ಟಿದ್ದಾರೆ. ಅವರಿಗೆ ಇವತ್ತು ಕೊಡಬಾರದೆಂದು ಹೇಳಿ ಸರ್ಕಾರ ಆದೇಶವನ್ನು ಮಾಡಿದೆ. ಅವರಿಗೂ ಕೂಡ BPL Card ಕೊಡುವಂಥ ಪ್ರಯತ್ನವನ್ನು ಮಾಡುತ್ತಾರಾ ಎಂಬುದು ಬಹು ಮುಖ್ಯವಾದ ಪ್ರಶ್ನೆಯಾಗಿರುವುದರಿಂದ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕು ಎಂದರು.

ಆಗ ಶ್ರೀ ಹೆಚ್.ಸಿ. ಬಾಲಕೃಷ್ಣ ಅವರು ಮಾನ್ಯ ಅಧ್ಯಕ್ಷರೇ, ಒಂದೇ ಒಂದು Clarification ಕೇಳುತ್ತೇನೆ ಎಂದರು. ಆಗ ಅಧ್ಯಕ್ಷರು ಬಾಲಕೃಷ್ಣರವರೇ ಒಂದು ನಿಮಿಷ ಇರಿ, ಮಾನ್ಯ ಹಾಲಪ್ಪನರೇ ಈ BPL Card ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡುವುದಕ್ಕೆ ಬಯಸುತ್ತಾರೆ. ಈ ಸಮಸ್ಯೆ ಇದೆ. ನಾನು ಸಭಾಧ್ಯಕ್ಷನಾಗಿ ಎಲ್ಲರ ಪರವಾಗಿ ಹೇಳುತ್ತೇನೆ. ಇದು ನೀವು ಮಂತ್ರಿಯಾದ ಮೇಲೆ ಆದಂತಹ ಸಮಸ್ಯೆಯಲ್ಲ. ಕಳೆದ ಐದಾರು ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ಈ BPL Card ಯಾರು ಅರ್ಹರಿದ್ದಾರೆ ಅವರಿಗೆ ಸಿಗಬೇಕು, ಅದು ಅನರ್ಹರಿಗೆ ಸಿಕ್ಕಿರುವಂಥದ್ದು ಇದೆಲ್ಲ ನಡೆದಿದೆ. ಅದು

APLನವರದ್ದು BPLಗೆ BPL ನವರದ್ದು APLಗೆ. ಇವೆಲ್ಲ ನಡೆಯುತ್ತಿದೆ. ಅದಕ್ಕಾಗಿ ತಾವು ಯುವಕರಾಗಿದ್ದೀರಿ. ಹೊಸದಾಗಿ ಸಚಿವ ಸ್ಥಾನದ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ಇದಕ್ಕೆ ತಾವು Personal interest ತೆಗೆದುಕೊಂಡು ಪ್ರತಿಯೊಂದು ಜಿಲ್ಲೆಗೂ ಓಡಾಡಿ, ಇದನ್ನು ಸಮರ್ಪಕಾಗಿ ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ದಯವಿಟ್ಟು ತಕ್ಷಣವೆ intication ತೆಗೆದುಕೊಳ್ಳಬೇಕು. ನಾನು ಎಲ್ಲಾ ಶಾಸಕರ ಪರವಾಗಿ ಹೇಳುತ್ತಿದ್ದೇನೆ. ಈ ವಿಷಯ ಬಹಳ important ಇದೆ. ಇದು ನಿಜವಾದ ಅರ್ಹರಿಗೆ ಸಿಕ್ಕಿಲ್ಲ. ಯಾರು ಅನರ್ಹರಿದ್ದಾರೆ ಅವರು BPL Card ಅನ್ನು ತೆಗೆದುಕೊಂಡ್ಡಿದ್ದಾರೆ. ಅದಕ್ಕೆ ದಯವಿಟ್ಟು ತಾವು ಈ ವಿಷಯವನ್ನು serious ಆಗಿ ತೆಗೆದುಕೊಂಡು ಇದಕ್ಕೆ taskforce typeನಲ್ಲಿ ಇದನ್ನು ನೀವು ಮಾಡುವುದಾದರೆ ಒಳ್ಳೆಯದಾಗುತ್ತದೆ ಎಂದು ತಿಳಿಸಿದರು.

ನಂತರ ಶ್ರೀ ಹೆಚ್.ಸಿ. ಬಾಲಕೃಷ್ಣ ಅವರು. ಮಾನ್ಯ ಅಧ್ಯಕ್ಷರೆ, ಒಂದೇ ಒಂದು clarification ಏನೆಂದರೆ 65% ಎಂದು ಎಲ್ಲಾ ತಾಲ್ಲೂಕುಗಳಲ್ಲಿ fix ಮಾಡಿದ್ದಾರೆ. ಆದರೆ ಡಾ.ಡಿ.ಎಂ. ನಂಜುಂಡಪ್ಪ ನವರ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಏನಾದರೂ ಹೆಚ್ಚಿಗೆ ಕೊಡುತ್ತೀರ ಎನ್ನುವಂತದ್ದನ್ನು ಮಾನ್ಯ ಸಚಿವರು ತಿಳಿಸಬೇಕು ಎಂದರು. ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ಮೂಲ ಪ್ರಶ್ನೆಗೆ ತಾವೂ ಧ್ವನಿಗೂಡಿಸಿದ್ದರಿಂದ ತಮಗೆ ಧನ್ಯವಾದವನ್ನು ಹೇಳುತ್ತೇನೆ. ನಾವು ಈ ಗೊಂದಲದ ಬಗ್ಗೆ ಎಷ್ಟು ಹೊತ್ತು ಮಾತನಾಡಿದರೂ, ಸುಮಾರು ಒಂದು ದಿವಸವೆಲ್ಲಾ ಮಾತನಾಡಿದರೂ ಬಗೆಹರಿಯದೇ ಇರುವಂಥ ಪ್ರಶ್ನೆಯಾಗಿದೆ. ಮಾನ್ಯ ಸಭಾಧ್ಯಕ್ಷರು APL ಕಾರ್ಡ್ BPL ಕಾರ್ಡ್ ಆಗಿದೆಯೆಂಬುದು ಹೇಳಿದರೋ ಆ ಪ್ರಕಾರವೇ ಆಗಿರುವಂಥದ್ದು. ತಾವು ಒಂದು ಹೇಳಿಕೆಯನ್ನು ಮಾಡಿದ್ದೀರಿ. ಅದು ಇನ್ನು 6 ತಿಂಗಳೋಳಗಾಗಿ ಎಲ್ಲ ಪಡಿತರ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೋಸ್ಕರ ಹೊಸದಾಗಿ ಸರ್ವೆಯ ಮಾತನ್ನು ಹೇಳಿದ್ದೀರಿ. ಅದನ್ನು ಏನಾದರೂ ಮಾಡಿಸಬೇಕೆಂಬ ಚಿಂತನೆ ಇದೆಯಾ? ಈಗ ವಾಸ್ತವಿಕವಾಗಿ ಏನಾಗುತ್ತಿದೆಯೆಂದರೆ ಈಗ ನಮ್ಮಲ್ಲಿ ಫೋಟೋಗಳನ್ನು ತೆಗೆಯುವುದಕ್ಕೆ ಬರುತ್ತಿದ್ದಾರೆ. G-9 ಎಂದು ಏನು ಪಟ್ಟಿಯನ್ನು ಮಾಡಿಕೊಂಡಿದ್ದೀರಿ, ಆ G-9 ಆಪರೇಟ್ ಮಾಡುತ್ತಿಲ್ಲ. ನಿಮ್ಮ ಆಫೀಸ್‌ನಲ್ಲಿ ಕೇಳಿದರೆ G-9 ಆಪರೇಟ್ ಮಾಡುತ್ತಿದ್ದೇವೆನ್ನುತ್ತಾರೆ. ಆದರೆ ಅಲ್ಲಿ ಆಪರೇಟ್ ಮಾಡುತ್ತಿಲ್ಲ. ಅಲ್ಲಿ ಫೋಟೋಗಳನ್ನು ತೆಗೆಯುವುದಕ್ಕೆ ಬಂದಂಥ ಸಂದರ್ಭದಲ್ಲಿ

ಗಲಾಟೆಗಳು ನಡೆಯುತ್ತಿವೆ. ಎಲ್ಲೂ ಕೂಡ ಫೋಟೋವನ್ನು ತೆಗೆಯುವುದಕ್ಕೆ ಬಿಡುತ್ತಿಲ್ಲ. ಆದುದರಿಂದ ಅರ್ಹರಾಗಿರುವಂಥ ಫಲಾನುಭವಿಗಳಿಗೆ ಯಾರಿಗೂ ಕೂಡ ಕಾರ್ಡ್ ಸಿಗುತ್ತಿಲ್ಲ. ಫುಡ್ ಸಿಗುತ್ತಾ ಇಲ್ಲ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಸಮಗ್ರವಾಗಿರುವಂಥ ಉತ್ತರವನ್ನು ಕೊಟ್ಟರೆ ಅದು ಬಹಳ ಸೂಕ್ತವಾಗುತ್ತದೆ ಎಂದರು.

ಆಗ ಅಧ್ಯಕ್ಷರು ಮಾತನಾಡುತ್ತ ಎಲ್ಲರದು ಮತ್ತೆ ಅದೇ ಅಭಿಪ್ರಾಯ ಎಂದರು. ನಂತರ ಶ್ರೀ ಸಿ.ಟಿ.ರವಿ ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, G-9 ಕಾರ್ಡ್‌ಗಳಿಗೆ ಜಿಲ್ಲಾವಾರು allotment ಕೊಡದೇ ಇರುವುದರಿಂದ ಅವರಿಗೆ ವಿತರಣೆ ಆಗುತ್ತಾ ಇಲ್ಲ. ಅಲ್ಲಿ adjust ಮಾಡಿ 20 ಕೆ.ಜಿ. ಕೊಡುವ ಕಡೆ 10 ಕೆ.ಜಿ. ಕೊಡುತ್ತಿದ್ದಾರೆ. ಆ ರೀತಿ ಹಂಚಬಾರದು ಎಂಬ ಆದೇಶವನ್ನು ಕೊಟ್ಟು, ಒಬ್ಬರನ್ನು ಸಸ್ಪೆಂಡ್ ಮಾಡಿದ್ದರಿಂದ ಅವರು G-9 ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತಿಲ್ಲ. ಅವರಿಗೆ ಕಾರ್ಡ್ ಇದೆ. ಪಡಿತರ ಕಾರ್ಡು ಸಿಗುತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಆಗ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾತನಾಡುತ್ತ ಸನ್ಮಾನ್ಯ ಅಧ್ಯಕ್ಷರೆ, ಹಾಲಪ್ಪನವರಿಗೆ ಒಂದು ಮಾತು ಹೇಳುವುದು ಏನೆಂದರೆ ತೊಂದರೆ ಏನಾಗಿದೆ ಎಂದರೆ 60ರ ಮೇಲೆ ಮಾಡಬೇಡಿ ಎಂದು ಆ.ಅ.ಗಳು ಒಂದು ಆದೇಶ ಕೊಟ್ಟಿದ್ದಾರೆ. ಆ ರೀತಿ ಮಾಡಿದರೆ ಬಹಳ ಫಜೀತಿಯಾಗುತ್ತದೆ. ಬಹಳ ಜನ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. A.P.L., B.P.L. ಆಗಿದೆ B.P.L., A.P.L. ಎಂದು ಆಗಿದೆ. ಇದನ್ನು ಸರಿಪಡಿಸಬೇಕು. ಮೊದಲು ಇದ್ದ ಎಲ್ಲ ಕಾರ್ಡ್‌ಗಳನ್ನು ರದ್ದು ಮಾಡುವುದಕ್ಕೆ ಹೋದರೆ ಎಲ್ಲ ಊರುಗಳಲ್ಲಿ ಗಲಾಟೆ ಆಗುತ್ತದೆ. ಇದು ನಮ್ಮೊಬ್ಬರದೇ ಅಲ್ಲ. ಸಾಹೇಬರು ಹೇಳಿದರು ಬಹಳ ಸಂತೋಷ. ಅದಕ್ಕೆ ಅಧ್ಯಕ್ಷರು ಧ್ವನಿಗೂಡಿಸಿರುವುದು ಬಹಳ ಮಹತ್ವವಾಗಿದೆ. ಎಲ್ಲರಿಗೂ ಈ ಸಮಸ್ಯೆ ಇದೆ. ಅದಕ್ಕಾಗಿ ದಯವಿಟ್ಟು ತಾವು ಏನಾದರೂ ಮಾಡಿ ಇದನ್ನು ಸರಿಪಡಿಸಬೇಕು ಎಂದರು.

ನಂತರ ಶ್ರೀ ಕರಡಿ ಸಂಗಣ್ಣ ಮಾತನಾಡುತ್ತ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ವಾರ್ಷಿಕ 12.000 ವರಮಾನ ಇರತಕ್ಕಂಥವರನ್ನು B.P.L. cardಗೆ ಅರ್ಹರು ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಆದರೆ ಅವರು ಒಂದು ಘೋಷಣೆ ಮಾಡಿದ್ದಾರೆ. 30,000 ವರಮಾನ ಇರತಕ್ಕಂಥವರನ್ನೂ ಕೂಡ ಈ ಯೋಜನೆಯ ವ್ಯಾಪ್ತಿಯಲ್ಲಿ ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ ಎಂದರು. ಆಗ ಅಧ್ಯಕ್ಷರು ಮಾತನಾಡುತ್ತ ಅದನ್ನು ಬಿಡಿ ಮೊದಲು

ವ್ಯವಸ್ಥೆಯನ್ನು ಸರಿಮಾಡಿ. ಮುಂದೆ ಅದರ ಬಗ್ಗೆ ಬಜೆಟ್ ಮೇಲೆ ಮಾತನಾಡುವಾಗ ಮಾತನಾಡುವಿರಂತೆ. ಮೊದಲು ಇದ್ದಂಥ ವ್ಯವಸ್ಥೆಯನ್ನು ಸರಿಮಾಡುವ ಬಗ್ಗೆ ಸಲಹೆ ಕೊಡಿ ಎಂದರು. ಮತ್ತೆ ಶ್ರೀ ಕರಡಿ ಸಂಗಣ್ಣ ತಿಳಿಸುತ್ತ ವಾರ್ಷಿಕ ಆದಾಯ 12,000 ಇರತಕ್ಕಂಥವರು ಮಾತ್ರ ಅರ್ಹರು ಎಂದು ಹೇಳಿದ್ದಾರೆ.

ಮತ್ತೆ ಅಧ್ಯಕ್ಷರು ಮಾತನಾಡುತ್ತ ಮತ್ತೆ ಅದನ್ನೇ ಹೇಳುತ್ತಿದ್ದೀರಿ, ಅದನ್ನು ಬಿಡಿ. ಅದನ್ನು ಆ ಮೇಲೆ ನೋಡೋಣವಂತೆ. ಈಗಿರುವಂಥ ವ್ಯವಸ್ಥೆಯನ್ನು ಸರಿಮಾಡುವ ಬಗ್ಗೆ ಮೊದಲು ವಿಚಾರ ಮಾಡಿ ಎಂದರು. ನಂತರ ಶ್ರೀ ಕರಡಿ ಸಂಗಣ್ಣ ಮಾತನಾಡುತ್ತ A.P.L. ಮತ್ತು B.P.L. ವ್ಯವಸ್ಥೆಯನ್ನು ತಲುಪಿಸಬೇಕಾದರೆ ಈ ಕಾರ್ಡ್‌ಗಳನ್ನು ಮಾಡುವ ಕಂಪ್ಯೂಟರ್ ವ್ಯವಸ್ಥೆ ಏನಿದೆ, ಅದು ರಾಜ್ಯಕ್ಕೆ ಒಂದು ಕಡೆ ಮಾತ್ರ ಸೀಮಿತವಾಗಿದೆ. ಅದನ್ನು ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಕೇಂದ್ರೀಕರಣಗೊಳಿಸಿ ಆಯಾ ಪ್ರದೇಶಗಳಿಗೆ ಸೀಮಿತ ಮಾಡಿದಾಗ ಅದರಲ್ಲಿ ಸಣ್ಣಪುಟ್ಟ ತಪ್ಪು ಬಂದರೆ ಜನಸಾಮಾನ್ಯರು ಅಲ್ಲಿಗೆ ಹೋಗಿ ಸರಿಪಡಿಸಿಕೊಂಡು ಬರಬಹುದು. ಈಗ ಏನಾಗಿದೆ ಎಂದರೆ ಸರಿಪಡಿಸುವಂಥ ಪರಿಸ್ಥಿತಿ ಇಲ್ಲ. ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ ನಮ್ಮೆಲ್ಲರ ಪರವಾಗಿ ತಾವು ಇನ್ನೊಂದು ಒತ್ತಾಯ ಮಾಡಬೇಕು. ಯಾರಿಗೆ ಗ್ಯಾಸ್ ಸೌಲಭ್ಯ ಇದೆ. ಅಂಥವರಿಗೆ ತಿಂಗಳಿಗೆ ಕನಿಷ್ಠ 2 ಲೀಟರ್ ಆದರೂ ಸೀಮೆ ಎಣ್ಣೆ ಕೊಡುವಂಥಾದ್ದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಕಲಿಯತಕ್ಕಂಥ ಮಕ್ಕಳಿಗೆ ರಾತ್ರಿಯ ಹೊತ್ತು ಬಹಳಷ್ಟು ತೊಂದರೆಯಾಗುತ್ತಿದೆ. ಹಿಂದುಳಿದ ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ ರಾತ್ರಿಯ ಹೊತ್ತು ಕರೆಂಟು ಹೋದರೆ ಕಲಿಯಲು ತೊಂದರೆಯಾಗುತ್ತಿದೆ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಎಂದರು.

ನಂತರ ಶ್ರೀ ಜೆ.ಡಿ. ನಾಯ್ಕ ಅವರು ಮಾತನಾಡುತ್ತ ಮಾನ್ಯ ಅಧ್ಯಕ್ಷರೇ, ಬಹಳ ಜನ ಬಡವರಿಗೆ B.P.L ಕಾರ್ಡ್ ಇಲ್ಲದೇ ತೊಂದರೆಯಾಗಿದೆ. ಅದಕ್ಕಾಗಿ ಹೊಸದಾಗಿ ಸರ್ವೆ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ ಎಂದು ಹೇಳಬೇಕು. ಮತ್ತೊಂದು ವಿಷಯವೆಂದರೆ, ಈಗ computer cardಗಳನ್ನೇನು ಮಾಡುತ್ತಿದ್ದೀರಿ, ಅದರಲ್ಲಿ ಯಾರದ್ದೋ ಫೋಟೋ, ಯಾರದ್ದೋ ಹೆಸರು ಬರುತ್ತಿದೆ. ಈ ರೀತಿ ಅದರಲ್ಲಿ ಬಹಳ ದೋಷಗಳಿವೆ. ಮುಖ್ಯವಾಗಿ ಆ ಫೋಟೋಗಳನ್ನು ತೆಗೆಯುವುದು. print ಹಾಕುವುದನ್ನು ಬೇರೆ ಬೇರೆ agencyಗಳಿಗೆ ಕೊಟ್ಟಿದ್ದಾರೆ. ಒಬ್ಬರಿಗೇ ಕೊಟ್ಟರೆ

ಸರಿಯಾಗಿ ಆಗತಕ್ಕಂಥ ವ್ಯವಸ್ಥೆಯಾಗುತ್ತದೆ. ಮುಖ್ಯವಾಗಿ B.P.L. ಕಾರ್ಡ್ ಕೊಡಲು ಮಾನದಂಡವೇನಿದೆ. ಅಂದರೆ telephone ಇದ್ದವರು. ದ್ವಿಚಕ್ರ ವಾಹನ ಇದ್ದವರು ಎನ್ನುವ ಮಾನದಂಡವೇನಿದೆ, ಆ ಮಾನದಂಡ ಸರಿಯಿಲ್ಲ. ಆ ಮಾನದಂಡದಲ್ಲಿ ಕೂಡ ಬದಲಾವಣೆಯಾಗಬೇಕು. ಈಗ common ಆಗಿ ಟಿ.ವಿ. ಎಲ್ಲರ ಮನೆಯಲ್ಲಿರುತ್ತದೆ. ಈಗ ಬಹಳ ಅಗ್ಗದಲ್ಲಿ ಟಿ.ವಿ. ಸಿಗುತ್ತದೆ. Telephoneಗಳು ಬಹಳ necessityಯಲ್ಲಿ ಬರುತ್ತವೆ. ಆದ್ದರಿಂದ Telephone ದ್ವಿಚಕ್ರ ವಾಹನ ಎಂದು ಏನು ಮಾನದಂಡವನ್ನು ಹಾಕಿದ್ದಾರೆ. ಆ ಮಾನದಂಡಗಳ ಪರಿಷ್ಕರಣೆಯಾಗಬೇಕಾಗುತ್ತದೆ. ಆದ್ದರಿಂದ ಹೊಸದಾಗಿ ಸರ್ವೆ ಮಾಡಬೇಕು. ಯಾರಿಗೆ ಸಿಕ್ಕಿಲ್ಲವೋ, ಅವರಿಗೆ ಕಾರ್ಡ್ ಸಿಗತಕ್ಕಂಥ ವ್ಯವಸ್ಥೆಯಾಗಬೇಕು ಎಂದರು.

ನಂತರ ಶ್ರೀ ಹೆಚ್. ಕೆ. ಕುಮಾರಸ್ವಾಮಿ ಮಾತನಾಡುತ್ತ ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ತಾವು ಹೇಳಿದ ಹಾಗೆ B.P.L. ಕಾರ್ಡ್ ಇಟ್ಟುಕೊಂಡು ಯಾರಿಗೆ ಸ್ಲಿಪ್ ಕೊಟ್ಟಿದ್ದಾರೆ, ಆ ರೀತಿ ಇಲಾಖೆಯವರು B.P.L. ಕಾರ್ಡ್ ಇಟ್ಟುಕೊಂಡು ಯಾರಿಗೆ ಸ್ಲಿಪ್ ಕೊಟ್ಟಿದ್ದಾರೆ. ಅವರಿಗೆ ಕಡ್ಡಾಯವಾಗಿ ಪುನಃ B.P.L. ಕಾರ್ಡ್ ಅನ್ನು ವಿತರಣೆ ಮಾಡತಕ್ಕಂಥದ್ದು ಆಗಬೇಕು. ಅವರೂ ಸಹ ಕೈಬಿಟ್ಟು ಹೋಗುತ್ತಿರತಕ್ಕಂಥ ಸಂದರ್ಭಗಳಿವೆ. ಅದಕ್ಕಾಗಿ ಇದನ್ನು ಹೇಳುತ್ತಿದ್ದೇನೆ ಎಂದರು.

ಆಗ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡುತ್ತ ಬಹಳ ಗಂಭೀರವಾದ ವಿಷಯ ಚರ್ಚೆಯಾಗುತ್ತಿದೆ. ತಾವೂ ಸಹ ಅದರ ಕೊರತೆಗಳ ಬಗ್ಗೆ ಬಡವರಿಗೆ B.P.L. ಕಾರ್ಡ್ ಸಿಕ್ಕಿಲ್ಲ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನಾನು ಇಲ್ಲಿ ಸನ್ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವಂಥದ್ದು ಏನೆಂದರೆ ನಾನು ಅತ್ಯಂತ ವಿನಯದಿಂದ ನಿಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ನಮಗೆ ಸಹಕಾರ ಕೊಡಿ. ಈಗಾಗಲೇ ಫೋಟೋ ತೆಗೆಸುವಂಥ ಕೆಲಸ ಪ್ರಾರಂಭವಾಗಿದೆ. ಕೆಲವು ತಾಲ್ಲೂಕುಗಳಲ್ಲಿ ಈ ಫೋಟೋ ತೆಗೆಸುವಂಥ ಕೆಲಸ ಪೂರ್ಣವಾಗಿದೆ. ಅಲ್ಲಿ ಈಗ 2,000–3,000 ವ್ಯಕ್ತಿಗಳೇ ಇಲ್ಲ. ಮೊದಲು B.P.L. ಕಾರ್ಡ್ ಇತ್ತಲ್ಲ. ಅದರಲ್ಲಿ ಇಷ್ಟು ಜನರೇ ಪತ್ತೇ ಇಲ್ಲ. ಅಷ್ಟು ಕಾರ್ಡ್ ಉಳಿಯುತ್ತಿವೆ. ನನ್ನದೇನು ಸಲಹೆ ಎಂದರೆ ಇದಕ್ಕೆ ನೀವು ಸಹಕಾರ ಕೊಡಿ. A.P.L. card B.P.L. ಎಂದು, B.P.L ಕಾರ್ಡ್ A.P.L. ಎಂದು ಆಗಿರುವುದು ನಿಜ. ಬಹಳ ದಿನಗಳಿಂದ ನಡೆಯುತ್ತಿದೆ. ಈಗ ಹೊಸ ಸರ್ವೆ ಮಾಡಿಸುವ ಅಗತ್ಯವಿಲ್ಲ. ಈಗ ಫೋಟೋ ತೆಗೆಸುತ್ತಿದ್ದೇವೆ. ಆ

ಸಂದರ್ಭದಲ್ಲಿ ಯಾವ ನ್ಯಾಯಬೆಲೆ ಅಂಗಡಿಯವರು ಆ ಜನರಿಗೆ ಸಹಕಾರ ಕೊಡದೇ ಅವರೇ ಕೆಲವರನ್ನು ಎತ್ತಿಕಟ್ಟಿ, ಫೋಟೋ ತೆಗೆಸಿರತಕ್ಕಂಥದ್ದು ನಿಂತಿದೆ. ದಯಮಾಡಿ ಪ್ರಾಮಾಣಿಕವಾಗಿ ನೀವು ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನೋಡಿ ಫೋಟೋ ತೆಗೆಸುತ್ತಿರುವಂಥ ಈ ಸಂದರ್ಭದಲ್ಲಿ ನೋಡಲು ನಮ್ಮ ಶಾಸಕರಿಗೆ ಸಂಪೂರ್ಣ ಅಧಿಕಾರವಿದೆ. ನೀವು ಒಂದನೇ ತಾರೀಕಿನ ನಂತರ ನಿಮ್ಮ ಕ್ಷೇತ್ರಗಳಿಗೆ ಹೋಗುತ್ತೀರಿ. ನೀವು ಸಹಕಾರ ಕೊಟ್ಟರೆ, ಉಳಿಯುವಂಥ 1,000 ಕಾರ್ಡ್‌ಗಳನ್ನು ಯಾವ ಬಡವರಿಗೆ ತಪ್ಪಿಹೋಗಿದೆ ಅವರಿಗೆ ಕೊಡುವುದಕ್ಕೆ ಬರುತ್ತದೆ. ನಿಮಗೆ ಗೊತ್ತಿದೆ ಎಲ್ಲ ಹಿರಿಯ ಸದಸ್ಯರಿದ್ದೀರಿ. 31 ಲಕ್ಷ ಕುಟುಂಬಕ್ಕೆ ಕೇಂದ್ರ ಸರ್ಕಾರದಿಂದ ನಮಗೆ ಸಹಾಯ ಮಾಡುತ್ತಿರುವುದಕ್ಕೆ we are eligible. ಆದರೆ ನಾವು ಈಗ ಕೊಡುತ್ತಿರುವುದು 72 ಲಕ್ಷ ಕುಟುಂಬಗಳಿಗೆ ಇನ್ನು ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ. ಇಲ್ಲಿ ಯಾರಿಗೆ ಅನ್ಯಾಯವಾಗಿದೆ, ಇದ್ದವರು ಯಾರು ಇಟ್ಟುಕೊಂಡಿದ್ದಾರೆ, ನನಗೆ ಗೊತ್ತಿರುವ ಪ್ರಕಾರ ನಮಗೆ ರಿಪೋರ್ಟ್ ಇರುವಂಥ ಪ್ರಕಾರ ಬಹಳ ಕಡೆ ನ್ಯಾಯಬೆಲೆ ಅಂಗಡಿಗಳವರೇ 40, 50, 60, 70 ಕಾರ್ಡ್‌ಗಳನ್ನು ಬೇನಾಮಿ ಹೆಸರಿನಲ್ಲಿ ಇಟ್ಟುಕೊಂಡಿದ್ದಾರೆ. ಇವತ್ತಿನ ದಿವಸ ಅಕ್ಕಿಯ ರೇಟ್ ಎಷ್ಟಿದೆ ಎಂದು ನಿಮಗೆ ಗೊತ್ತಿದೆ. 23–24 ರೂಪಾಯಿ ಇದೆ. ಅಲ್ಲಿ 3 ರೂಪಾಯಿಗೆ ಸಿಗುತ್ತದೆ. ಈಗ ನೀವೆಲ್ಲಾ ಸಹಕಾರ ಕೊಟ್ಟರೆ ಖಂಡಿತವಾಗಿ ನಿಜವಾದ ಬಡವರಿಗೆ ಒಬ್ಬರಿಗೂ B.P.L, ಕಾರ್ಡ್ ತಪ್ಪದಂತೆ ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳಬಹುದು. ದಯಮಾಡಿ ಈ ಫೋಟೋ ತೆಗೆಯುವಂಥ ಸಂದರ್ಭದಲ್ಲಿ ಸಹಕಾರವನ್ನು ಕೊಡಿ. ಒಂದು ಸರ್ಕಾರ ಎಂದರೆ ನಾವೆಲ್ಲ ಸೇರಿಯೇ ಒಂದು ಸರ್ಕಾರ ಆಗುವುದು. ಯಾವ ಅಧಿಕಾರಿಗಳು ಇದರ ಬಗ್ಗೆ ಗಮನ ಕೊಡುವುದಿಲ್ಲ. ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆ. ಅವರ ಮೇಲೆ ನಾವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ದಯಮಾಡಿ ಸಹಕರಿಸಿ ಎಂದರು. ನಂತರ ಶ್ರೀ ಹೆಚ್.ಸಿ. ಬಾಲಕೃಷ್ಣ ಅವರು ಈಗ ನೀವು ಸರ್ವೆ ಮಾಡದೇ ಫೋಟೋ ತೆಗೆದರೆ A.P.L. ನವರಿಗೂ ಕೂಡ B.P.L. ಪೋಟೋ ತೆಗೆಯುತ್ತಾರೆ ಎಂದರು. ಆಗ ಅಧ್ಯಕ್ಷರು ಮಾತನಾಡುತ್ತ ಅದನ್ನು ಸರಿಮಾಡಬೇಕು ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಇದರ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಅವರೇ ಉತ್ತರ ಕೊಟ್ಟಿದ್ದಾರೆ. ಅಗತ್ಯವಿರುವ ಎಲ್ಲ Action ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ಶ್ರೀ ಹೆಚ್.ಸಿ. ಬಾಲಕೃಷ್ಣ ಮಾತನಾಡುತ್ತ ಅಧ್ಯಕ್ಷರೇ, ನನ್ನ ಒಂದು ಕಳಕಳಿ ಏನೆಂದರೆ ಫೋಟೋ ತೆಗೆಯುವುದಕ್ಕಿಂತ ಮುಂಚೆ

ಸರಿಯಾದಂಥವರನ್ನು ಗುರುತು ಮಾಡಿ ಆಮೇಲೆ ಫೋಟೋ ತೆಗೆಯಿರಿ ಎಂದು ಹೇಳುತ್ತಿದ್ದೇನೆ, ಅದು ಆಗಬೇಕು ಎಂದರು.

ನಂತರ ಶ್ರೀ ಕೆ.ಎಂ. ಕೃಷ್ಣಮೂರ್ತಿ ಮಾತನಾಡುತ್ತಾ ಈ BPL Card ಬಗ್ಗೆ ನಮ್ಮ ಮೊಳಕಾಲ್ಮೂರು ಶಾಸಕರು ಈಗಾಗಲೇ ಹೇಳಿದ್ದಾರೆ. ಇದು ಬಹಳ ಸಮಂಜಸವಾಗಿದೆ. ಈಗಾಗಲೇ ಜಿಲ್ಲೆಯಲ್ಲಿ ತಾಲ್ಲೂಕು ವೈಸ್ ಶೇಕಡವಾರು ಇಷ್ಟು ಕಾರ್ಡ್‌ಗಳೆಂದು ಕೊಟ್ಟಿದ್ದಾರೆ. ಆದರೆ ಈ ಕಾರ್ಡ್‌ಗಳ ವಿತರಣೆ ಸರಿಯಾಗಿ ಆಗಿಲ್ಲ. ಬಡವರಿಗೆ APL Card ಸಿಕ್ಕಿದೆ, ಶ್ರೀಮಂತರಿಗೆ BPL Card ಸಿಕ್ಕಿದೆ. ಈ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಸರಿ ಮಾಡುತ್ತಾರೆಂಬುದನ್ನು ಮಾನ್ಯ ಸಚಿವರು ತಿಳಿಸಿದರೆ ಒಳ್ಳೆಯದು. ಮತ್ತೆ ಎಪಿಎಲ್ ಕಾರ್ಡ್ ಕೊಟ್ಟಂಥವರಿಗೆ ನ್ಯಾಯ ಬೆಲೆ ಅಂಗಡಿಯವರು ಏನು ಮಾಡಿದ್ದಾರೆಂದರೆ ಕಾರ್ಡ್‌ಗಳನ್ನು ಇಟ್ಟುಕೊಂಡು ಅವರಿಗೆ ಪೇಪನದಲ್ಲಿ Identification card ಕೊಟ್ಟಿದ್ದಾರೆ. ಅವರಿಗೆ ಇವತ್ತು ಕೊಡಬಾರದೆಂದು ಹೇಳಿ ಸರ್ಕಾರ ಆದೇಶವನ್ನು ಮಾಡಿದೆ. ಅವರಿಗೂ ಕೂಡ BPL Card ಕೊಡುವಂಥ ಪ್ರಯತ್ನವನ್ನು ಮಾಡುತ್ತಾರಾ ಎಂಬುದು ಬಹು ಮುಖ್ಯವಾದ ಪ್ರಶ್ನೆಯಾಗಿರುವುದರಿಂದ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕು ಎಂದರು.

ನಂತರ ಶ್ರೀ ಎನ್.ವೈ. ಗೋಪಾಲಕೃಷ್ಣ ಮಾತನಾಡುತ್ತ ಇನ್ನೇನಿಲ್ಲ, ಈಗ ಹೇಗಿದ್ದರೂ ಮಂತ್ರಿಗಳು ಉತ್ತರ ಕೊಡಬೇಕು. ಇಲ್ಲಿ ಅಧಿಕಾರಿಗಳೂ ಇದ್ದಾರೆ. ಸದನದಿಂದ ಸಂಬಂಧಪಟ್ಟಂಥ ಜಿಲ್ಲಾ ಇಲಾಖಾ ಅಧಿಕಾರಿಗಳಿಗೆ ಒಂದು message ಹೋಗಲಿ. ನಾನು ಕೇಳಿದ್ದು ಒಂದೇ ಪ್ರಶ್ನೆ. ಈ ಸಮಸ್ಯೆಗಳು ಯಾವ ರೀತಿ ಇವೆ, ಅವುಗಳನ್ನು ಯಾವ ರೀತಿ ಬಗೆಹರಿಸುತ್ತಾರೆ ಎನ್ನುವುದು ನನಗೆ ಬೇಕಿಲ್ಲ. ನನ್ನ ಪ್ರಶ್ನೆ ಇಷ್ಟೇ. ಎಲ್ಲೆಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ನೀವು ಕೊಟ್ಟಿದ್ದೀರಿ, ಆ ನ್ಯಾಯಬೆಲೆ ಅಂಗಡಿಯ ಸುತ್ತಮುತ್ತ ಬರತಕ್ಕಂಥ ಹಳ್ಳಿಗಳು ಸುಮಾರು 3–4 ಕಿ.ಮೀ. ದೂರದಲ್ಲಿದ್ದು. ಅಲ್ಲಿಂದ ಜನರು ಬಂದು ತೆಗೆದುಕೊಂಡು ಹೋಗುವುದಕ್ಕೆ ಸಮಸ್ಯೆಗಳಿವೆ. ಏಕೆಂದರೆ ಮೂಲಭೂತ ಸೌಕರ್ಯಗಳಾದ ರಸ್ತೆಗಳಿಲ್ಲ. ಕೆಲವು ಕಡೆ transportation ಸಮಸ್ಯೆ ಇದೆ. Conveyance ಕೂಡ ಇಲ್ಲ. ನಾನೇನು ಹೇಳುತ್ತಿದ್ದೇನೆ ಎಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇಲ್ಲಿಂದ ಒಂದು message ಹೋಗಲಿ. ಇಲ್ಲವೆಂದರೆ ಒಂದು ಆದೇಶವನ್ನು ಕೊಟ್ಟುಬಿಟ್ಟು ಕನಿಷ್ಠ. ಪಡಿತರ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ವಾರಕ್ಕೋ ಹದಿನೈದು ದಿವಸಕ್ಕೋ ಒಂದು ಸಲ ಆ

ಸ್ಥಳಗಳಿಗೆ ಹೋಗಿ. ಅಲ್ಲಿಗೆ supply ಮಾಡತಕ್ಕಂಥ ವ್ಯವಸ್ಥೆಯನ್ನು ಸದ್ಯಕ್ಕೆ ಮಾಡಲಿ ಎಂದರು.

ಕೊನೆಗೆ ಶ್ರೀ ಹೆಚ್. ಹಾಲಪ್ಪನವರು ಮಾತನಾಡುತ್ತ 300 ಕಾರ್ಡುಗಳಿಗಿಂತ ಹೆಚ್ಚು ಕಾರ್ಡುಗಳು ಎಲ್ಲಿರುತ್ತವೋ ಅಲ್ಲಿ ಹೊಸ ಶಾಪ್‌ಗಳನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನನ್ನ ಮತಕ್ಷೇತ್ರದಲ್ಲೂ ನನಗೆ experience ಆಗಿದೆ. ಅದನ್ನು ನಾವು ಮಾಡುತ್ತೇವೆ. ಖಂಡಿತವಾಗಿಯೂ ಸಹಕಾರ ಮಾಡುತ್ತೇವೆ ಎಂದು ತಿಳಿಸಿದರು.

### 5.3.3. ಚಿತ್ರದುರ್ಗದ ಐತಿಹಾಸಿಕ ಕೋಟೆಯ ಕುರಿತು

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದಲ್ಲಿ ದಿನಾಂಕ 31.07.2008ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ(455)275 ಯನ್ನು ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಶ್ರೀ ಜಿ. ಜನಾರ್ಧನ ರೆಡ್ಡಿ ಅವರಿಗೆ ಚಿತ್ರದುರ್ಗದ ಐತಿಹಾಸಿಕ ಕೋಟೆಯಲ್ಲಿ ವಿದ್ಯುತ್ ಜೋಡಣೆ ಮತ್ತು ಪ್ರವಾಸಿಗರನ್ನು ರಂಜಿಸಲು ಸಪ್ತಸ್ವರದ ಧ್ವನಿವರ್ಧಕ ರೂಪಿಸುವಲ್ಲಿ ಸರ್ಕಾರದ ಕ್ರಮವೇನು? ಕೋಟೆಯಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? ಕೋಟೆಯಲ್ಲಿ ಪ್ರವಾಸಿಗರಿಗೆ ನೆರಳಿನ ವ್ಯವಸ್ಥೆಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? ಮತ್ತು ಕೋಟೆಯ ಒಳಗೆ ಮತ್ತು ಸುತ್ತಲೂ ಸಾರ್ವಜನಿಕರು ನಿವೇಶನಗಳನ್ನು ನಿರ್ಮಿಸಿಕೊಂಡಿದ್ದು, ಅವರುಗಳಿಗೆ ಬೇರೆ ಕಡೆ ನಿವೇಶನಗಳನ್ನು ನೀಡಿ ತೆರವುಗೊಳಿಸುವ ಬಗ್ಗೆ ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ? ಎಂದು ಪ್ರಶ್ನಿಸಿದರು. ಸಚಿವರು ಉತ್ತರಿಸುತ್ತ ಚಿತ್ರದುರ್ಗದ ಕೋಟೆಗೆ ಹೊನಲು ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಕೋಟೆಯಲ್ಲಿ ಧ್ವನಿ ಮತ್ತು ಬೆಳಕಿನ ಯೋಜನೆಯನ್ನು ಅಳವಡಿಸುವ ಪ್ರಸ್ತಾವನೆ ಇಲಾಖೆಯ ಮುಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ಸಪ್ತಸ್ವರದ ಧ್ವನಿವರ್ಧಕ ರೂಪಿಸುವ ಕಾರ್ಯಕ್ರಮ ಇಲಾಖೆಯ ಮುಂದಿರುವುದಿಲ್ಲ. ಚಿತ್ರದುರ್ಗದ ಕೋಟೆಯೊಳಗಿನ ಐತಿಹಾಸಿಕ ಸ್ಮಾರಕಗಳು ಹಾಗೂ ದೇವಾಲಯಗಳನ್ನು ಸಂರಕ್ಷಿಸಲು ಮತ್ತು ಪುನರುತ್ಥಾನಗೊಳಿಸಲು ರೂ. 93.00 ಲಕ್ಷಗಳನ್ನು

ಮಹಾ ನಿರ್ದೇಶಕರು, ಕೇಂದ್ರ ಪುರಾತತ್ವ ಇಲಾಖೆ, ನವದೆಹಲಿ ಅವರಿಗೆ ಬಿಡುಗಡೆ ಮಾಡಲಾಗಿದೆ ಎಂದರು.[24]

ಕೋಟೆಯ ಒಳಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ಎ.ಎಸ್.ಐ. ವ್ಯಾಪ್ತಿಗೆ ಬರುತ್ತದೆ. ಆದರೆ ಚಿತ್ರದುರ್ಗದ ಕೋಟೆ ಪ್ರದೇಶದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರತಿಕ್ರಿಯಿಸಿದರು.

ಕೋಟೆಯಲ್ಲಿ ಪ್ರವಾಸಿಗರಿಗೆ ನೆರಳಿನ ವ್ಯವಸ್ಥೆಯು ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ ಎಂದರು. ಕೊನೆಯದಾಗಿ ಕೋಟೆಯ ಒಳಗೆ ಮತ್ತು ಸುತ್ತಲೂ ಸಾರ್ವಜನಿಕರು ನಿವೇಶನಗಳನ್ನು ನಿರ್ಮಿಸಿಕೊಂಡಿದ್ದು, ಅವರುಗಳಿಗೆ ಬೇರೆ ಕಡೆ ನಿವೇಶನಗಳನ್ನು ನೀಡಿ ತೆರವುಗೊಳಿಸುವ ಕುರಿತು ನಮ್ಮ ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ ಎಂಬುದನ್ನು ವಿವರಿಸಿದರು.

### 5.3.4. ವಿಶ್ವಕನ್ನಡ ಸಮ್ಮೇಳನವನ್ನು ನಡೆಸುವುದರ ಕುರಿತು

ಶಾಸಕ ಶ್ರೀ ತಿಪ್ಪೇಸ್ವಾಮಿ ಅವರು ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದಲ್ಲಿ ದಿನಾಂಕ 31.07.2008ರಂದು ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ(452)272 ಯನ್ನು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ಕೇಳಿದರು. ಈ ವಿವರ ಇಂತಿದೆ. ಮೊದಲನೇ ಪ್ರಶ್ನೆ ಉಡುಪಿ ಸಮಾವೇಶದಲ್ಲಿ ನಿರ್ಧರಿಸಿದಂತೆ ವಿಶ್ವಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸಲಾಗುವುದೇ ಎಂದು ಕೇಳಿದರು. ಎರಡನೆಯದು ವಿಶ್ವಕನ್ನಡ ಸಮ್ಮೇಳನವನ್ನು ಜಿಲ್ಲೆಯಲ್ಲಿ ಯಾವ ತಿಂಗಳಿನಲ್ಲಿ ನಡೆಸುವ ಉದ್ದೇಶವಿದೆ. ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? ಎಂದು ಕೇಳಿದರು ಇದಕ್ಕೆ ಉತ್ತರವಾಗಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮೊದಲನೇ ಪ್ರಶ್ನೆಗೆ ವಿಶ್ವಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ. ಎರಡನೆಯದು ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಮೂರನೆಯದು ಈ ಬಾರಿ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವಕನ್ನಡ ಸಮ್ಮೇಳನಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು

[24] Karnataka Legislative Assembly Thirteenth Assembly, 2nd Session Vol-5 (No.1) from 31st July 2008. Pp.- 756 to 758.

ಆಯವ್ಯಯ-2008-09ರ ಬಜೆಟ್ ಮಂಡನೆಯಲ್ಲಿ ರೂ.25,00 ಕೋಟಿ ಅನುದಾನ ನೀಡುವುದಾಗಿ ಘೋಷಿಸಿರುತ್ತಾರೆ ಎನ್ನಬಹುದು.[25]

### 5.3.5. ರಾಜ್ಯಪಾಲರ ವಂದನಾರ್ಪಣ ಭಾಷಣದ ಮೇಲಿನ ಚರ್ಚೆ

ಶಾಸಕ ತಿಪ್ಪೇಸ್ವಾಮಿಯವರು ದಿನಾಂಕ 16.01.2009ರಂದು ರಾಜ್ಯಪಾಲರ ವಂದನಾರ್ಪಣ ಭಾಷಣದ ಮೇಲಿನ ಚರ್ಚೆಯಲ್ಲಿ ಸದನದಲ್ಲಿ ಆಡಿದ ಮಾತುಗಳ ಸಾರಾಂಶ ಇಂತಿದೆ.

ಶಾಸಕರು ರಾಜ್ಯಪಾಲರ ವಂದನನಿರ್ಣಯದ ಭಾಷಣಕ್ಕೆ ಬೆಂಬಲ ವ್ಯಕ್ತಪಡಿಸಿ, ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಿದರು. ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ) ಮಾತನಾಡುತ್ತ ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 16ನೇ ತಾರೀಕಿನಂದು ಘನತೆವೆತ್ತ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿರುವ ಭಾಷಣದಲ್ಲಿ ಅವರು ಕೊಟ್ಟಿರುವ ವ್ಯವಸ್ಥೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ತಮ್ಮ ಅನುಮತಿ ಕೋರುತ್ತಿದ್ದೇನೆ. ಮೊನ್ನೆ ಚುನಾವಣೆ ನಡೆದ ನಂತರ, ಈ ರಾಜ್ಯದಲ್ಲಿ ಭಾರತೀಯ ಜನತಾಪಕ್ಷಕ್ಕೆ ಕರ್ನಾಟಕದ ಜನತೆ ಅಧಿಕಾರ ಕೊಟ್ಟ ನಂತರ, ಚುನಾವಣಾ ಪೂರ್ವದಲ್ಲಿ ನಮ್ಮ ನಾಯಕರಾದ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು, ನಮ್ಮ ಸರ್ಕಾರ ಬಂದರೆ ಜನತೆಗೆ ಪ್ರಣಾಳಿಕೆಯಲ್ಲಿ ಏನು ಘೋಷಿಸಿದ್ದೆವು, ಆ ರೀತಿ ಘೋಷಣೆ ಮಾಡಿರುವ ರೀತ್ಯಾ ಶೇಕಡ 60ರಿಂದ 70 ರಷ್ಟು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಅದರಲ್ಲಿ ಬಹಳ ಪ್ರಮುಖವಾಗಿರುವುದು ಹಾಗೂ ಸಮಸ್ಯೆ ಇರುವುದೇನೆಂದರೆ, ಈ ದಿನ ಮಾನ್ಯ ಸದಸ್ಯರಾದ ಜಯಚಂದ್ರ ಅವರು ಗಣಿ ಉದ್ಯಮದ ಬಗ್ಗೆ ಬಹಳಷ್ಟು ಬೆಳಕು ಚೆಲ್ಲಿದ್ದಾರೆ. ಅವರ ಭಾವನೆ ಇಷ್ಟೆ. ಈ ರಾಜ್ಯದ ಯಾವುದೇ ಒಂದು ಖನಿಜ ಹಾಗೂ ರಾಜ್ಯಕ್ಕೆ ಬರುವ ಸವಲತ್ತು ಏನಿದೆ, ಅದರಿಂದ ರಾಜ್ಯ ವಂಚಿತವಾಗಬಾರದೆಂದು ಅವರು ಭಾವನೆ ವ್ಯಕ್ತಪಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದರಲ್ಲಿ ಒಂದೇ ಒಂದು ವಿಷಯವನ್ನು ನಾವು ಗಮನಿಸಬೇಕಾಗುತ್ತದೆ. ಏನೆಂದರೆ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ನಂತರ ಗಣಿಗಾರಿಕೆಗೆ ಸಂಬಂಧಿಸಿದಂತೆ ಒಂದೇ ಒಂದು ಮಂಜೂರಾತಿಯನ್ನು ಕೊಟ್ಟಿಲ್ಲ (ಈ ಹಂತದಲ್ಲಿ ಶ್ರೀ ಕೆ.ಜೆ. ಬೋಪಯ್ಯ, ಉಪಾಧ್ಯಕ್ಷರು

---

[25] Karnataka Legislative Assembly Thirteenth Assembly, 2nd Session Vol-5 (No.1) from 31st July 2008. Pp.- 756 to 758.

ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು). ಆ ರೀತಿ ಅನುಮತಿ ಕೊಡದಿದ್ದ ಮೇಲೆ ಇದರಲ್ಲಿ ನಮ್ಮ ಪಾಲುದಾರಿಕೆ ಏನಿದೆ? ಇವತ್ತು ಪ್ರಾಮಾಣಿಕವಾದ ಸತ್ಯವನ್ನು ಈ ಸದನದ ಮುಂದೆ ಇಡಲು ಬಯಸುತ್ತೇನೆ. ಮಾನ್ಯ ಯುಡಿಯೂರಪ್ಪನವರು ಈ ನಾಡಿನ ಮುಖ್ಯಮಂತ್ರಿಗಳಾಗಿ ಏನು ಗಣಿ ವ್ಯವಹಾರದಲ್ಲಿ ಸೋರಿಕೆಯಾಗುತ್ತಿತ್ತೋ ಅದರಲ್ಲಿ ನೂರಕ್ಕೆ 90–95 ಪರ್ಸೆಂಟ್ ತಡೆದಿದ್ದಾರೆ. ನಮ್ಮ ಚಿತ್ರದುರ್ಗ ಮತ್ತು ಬಳ್ಳಾರಿ ಭಾಗಗಳಲ್ಲಿ ಓಡಾಡುತ್ತಿದ್ದ ಸಾವಿರಾರು ಲಾರಿಗಳಿಗೆ ಇವತ್ತು ಕೆಲಸ ಇಲ್ಲದಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ಮೇಲೆ ಏನು ಕಳ್ಳಸಾಗಾಣಿಕೆ ಆಗುತ್ತಿತ್ತು ಅಂತಹ ಗಣಿಗಾರಿಕೆಯನ್ನು ನೂರಕ್ಕೆ ತೊಂಬತ್ತೈದರಷ್ಟು ನಿಲ್ಲಿಸಿರತಕ್ಕದನ್ನು ನಾವು ಗಮನಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ, ಮಾನ್ಯ ವಿರೋಧ ಪಕ್ಷದವರಲ್ಲಿ ನನ್ನ ಮನವಿ ಏನೆಂದರೆ ಇವತ್ತು ನಾವು ನೀವು ಸೇರಿ ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಚಿಂತನೆ ಮಾಡಬೇಕು, ಅದು ಬಿಟ್ಟು ಯಾರು ಪ್ರಾಮಾಣಿಕವಾಗಿ ಈ ಗಣಿ ಉದ್ಯಮವನ್ನು ಮಟ್ಟ ಹಾಕಿ ಇಲ್ಲಿ ಆಗುತ್ತಿದ್ದ ಸೋರಿಕೆಯನ್ನು ತಡೆಗಟ್ಟಿರುವ ಈ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಇಷ್ಟೊಂದು ಹಂತಕ್ಕೆ ಹೋಗಿರುವುದನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಈ ರಾಜ್ಯಕ್ಕೆ ಬಹಳ ಮುಖ್ಯವಾಗಿ ದೊಡ್ಡ ಸಮಸ್ಯೆ ತಲೆದೋರಿರತಕ್ಕದ್ದು ವಿದ್ಯುತ್ ಸಮಸ್ಯೆ. ಈ ವಿದ್ಯುತ್ ಸಮಸ್ಯೆಯನ್ನು ನಮ್ಮ ರಾಜ್ಯ ಮತ್ತು ರೈತರು ಏನು ಎದುರಿಸುತ್ತಿದ್ದಾರೆ, ಈ ಪರಿಸ್ಥಿತಿ ಉದ್ಭವವಾಗಲು ಯಾರು ಕಾರಣ? ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 6 ತಿಂಗಳಿನಲ್ಲಿ ಈ ವಿದ್ಯುತ್ ಕೊರತೆಯನ್ನು ನೀಗಲು ಸಾಧ್ಯವಾಗುತ್ತದೆಯೇ? ಹೋದ ವರ್ಷ ಮಳೆಗಾಲದಲ್ಲಿ ನಮಗೆ ಮಳೆಯ ಕೊರತೆಯಿಂದ ಪ್ರತಿ ವರ್ಷ ನಮ್ಮಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ನಲ್ಲಿ 1927 ಮೆಗಾವ್ಯಾಟ್‌ನಷ್ಟು ವಿದ್ಯುತ್ ಕಡಿಮೆಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಚಿಂತನೆ ನಡೆಸಿ ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದ ಈ ವಿದ್ಯುತ್ ಕೊರತೆಯನ್ನು ನಿವಾರಿಸಬೇಕು. ಆ ತೊಂದರೆಯಿಂದ ಕರ್ನಾಟಕಕ್ಕೆ ಮುಕ್ತಿಯನ್ನು ಕೊಡಬೇಕೆಂಬ ವಿಶಾಲ ದೃಷ್ಟಿಯಿಂದ 5900 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡುವ ಬಗ್ಗೆ ಒಂದು ಕ್ರಿಯಾಯೋಜನೆಯನ್ನು ನಾವು ರೂಪಿಸಿದ್ದೇವೆ. ಅದರ ಪ್ರಕಾರ ಛತ್ತೀಸ್‌ಘಡದಲ್ಲಿ 1200 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡಲು ಪ್ಲಾಂಟ್ ಅನ್ನು ನಿರ್ಮಾಣ ಮಾಡುವುದಕ್ಕೆ ರಾಯಪುರದಲ್ಲಿ ಜಮೀನು ಕೊಳ್ಳುವುದಕ್ಕೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇಷ್ಟೇ ಅಲ್ಲ ಬಿಜಾಪುರ, ರಾಯಚೂರಿನಲ್ಲಿ ಸಹ ವಿದ್ಯುತ್ತನ್ನು ಉತ್ಪಾದನೆ ಮಾಡಿ, ಕರ್ನಾಟಕದಲ್ಲಿ ಭಾರತೀಯ ಜನತಾಪಕ್ಷದ ಆಡಳಿತವನ್ನು ನೋಡಬೇಕೆಂದು

ನಮಗೇನು ಜನತೆ ಅಧಿಕಾರ ಕೊಟ್ಟಿದ್ದಾರೋ ಅದರನ್ವಯ ಜನರಿಗೆ, ರೈತರಿಗೆ ಸಹಾಯವಾಗುವಂತೆ ವಿಶಾಲ ದೃಷ್ಟಿಯಿಂದ ಇನ್ನು ಕೇವಲ 4–5 ವರ್ಷದಲ್ಲಿ, ನಾಡಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಜನರ ಬಹುದಿನಗಳ ಬೇಡಿಕೆಯಾಗಿರುವ ಅತ್ಯವಶ್ಯಕವಾಗಿ ಬೇಕಾಗಿರುವ ವಿದ್ಯುತ್ತಚ್ಛಕ್ತಿಯ ಕೊರತೆಯನ್ನು ನನ್ನ ಕಾಲದಲ್ಲಿ ಇಲ್ಲದಿರುವಂತೆ ಮಾಡಬೇಕು ಎನ್ನುವ ಮಹತ್ತರವಾದ ಕೆಲಸ ಭಾರತೀಯ ಜನತಾಪಕ್ಷದ ವತಿಯಿಂದ ಆಗಬೇಕು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ಸುಮಾರು 5900 ಮೆಗಾವ್ಯಾಟ್ ವಿದ್ಯುತ್ತಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಕ್ರಿಯಾಯೋಜನೆಯನ್ನು ರೂಪಿಸಿದ್ದೇವೆ. ನಮ್ಮ ಅಧಿಕಾರದ ಅವಧಿಯಲ್ಲಿ ಈ ಕಾರ್ಯವನ್ನು ಮಾಡಿಯೇ ಮುಗಿಸುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಜನತೆಯ ಹತ್ತಿರಕ್ಕೆ ಅಧಿಕಾರವನ್ನು ಕೊಂಡೊಯ್ಯಬೇಕೆಂಬ ವಿಶಾಲ ದೃಷ್ಟಿಯಿಂದ ಇವತ್ತು ಗ್ರಾಮ, ಜನಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ತಿಂಗಳಿನ ಎರಡನೇ ಶನಿವಾರ ಬಿಟ್ಟು ಉಳಿದ ಎಲ್ಲಾ ಶನಿವಾರಗಳಂದು ಅಧಿಕಾರಿಗಳು ರಾಜಕಾರಣಿಗಳು ಎಲ್ಲರೂ ಆ ಸಭೆಯಲ್ಲಿದ್ದು ಆ ಹಳ್ಳಿಯ, ಹೋಬಳಿಯ ಜನರ ಎಲ್ಲಾ ಕುಂದುಕೊರತೆಗಳನ್ನು ನಾವು ಶೇಖರಣೆ ಮಾಡಿ ಅಲ್ಲಿ ಬಂದಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು. ಈ ರೀತಿ ಸುಮಾರು ಐದೂವರೆ ಸಾವಿರ ಅರ್ಜಿಗಳು ಬಂದಿದ್ದು ಅದಕ್ಕೆ ಸುಮಾರು 60–65 ಪರ್ಸೆಂಟ್‌ನಷ್ಟು ಪರಿಹಾರವನ್ನು ನಾವು ಕಂಡುಹಿಡಿದಿದ್ದೇವೆ. ಅಲ್ಲಿ ಬಂದಂಥ ಬಹು ಬೇಡಿಕೆಯಾಗಿರತಕ್ಕದ್ದು ಮನೆಗಳು. ಅನಂತರ ಬಿ.ಪಿ.ಎಲ್. ಕಾರ್ಡ್‌ಗಳು. ಈ ಸದನದಲ್ಲಿ ಬಿ.ಪಿ.ಎಲ್. ಕಾರ್ಡ್ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ವಿಶಾಲ ದೃಷ್ಟಿಯಿಂದ ಈ ಬಡಜನತೆಗೆ ನ್ಯಾಯ ಸಿಗಬೇಕು, ಹಿಂದೆ ಆಡಳಿತ ಮಾಡಿಕೊಂಡು ಬಂದಿರುವ ಎಲ್ಲಾ ಸರ್ಕಾರಗಳಲ್ಲೂ ಬಿ.ಪಿ.ಎಲ್. ಕಾರ್ಡ್‌ಗಳಿಗೆ, ನಿಜವಾದ ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವುದರಲ್ಲಿ ಎಲ್ಲೋ ನಾವು ವಂಚಿತರಾಗಿದ್ದೇವೆ, ಆ ವಂಚನೆ ಅನ್ಯಾಯ ಬಡ ಜನತೆಗೆ ಆಗಬಾರದು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ನಮ್ಮ ಆಹಾರ ಸಚಿವರು ಮತ್ತು ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ವಿರೋಧ ಪಕ್ಷದವರು ಕೊಟ್ಟಂಥ ಸಲಹೆಗಳನ್ನು ಸ್ವಾಗತ ಮಾಡಿ ಅದೆಲ್ಲದಕ್ಕೂ ಪರಿಹಾರ ಕಂಡುಹಿಡಿಯುತ್ತೇನೆ. ಮುಂದಿನ ಮಾರ್ಚ್ ತಿಂಗಳೊಳಗೆ ಬಡವರೆಲ್ಲರಿಗೂ ಬಿ.ಪಿ.ಎಲ್. ಕಾರ್ಡನ್ನು ಕೊಟ್ಟೇ ಕೊಡುತ್ತೇವೆಂದು ಘೋಷಣೆ

ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದ ಬಡಜನತೆಗೆ ಅನ್ಯಾಯವಾಗಿದೆಯೆಂಬ ಕೂಗು ಕೇಳಬಾರದು. ನಾವು ಜನಸ್ಪಂದನ ಕಾರ್ಯಕ್ರಮಕ್ಕೆ ಹೋದಂಥ ಸಂದರ್ಭದಲ್ಲಿ ವೃದ್ಧಾಪ್ಯವೇತನ, ಸಂಧ್ಯಾಸುರಕ್ಷ, ಭಾಗ್ಯಲಕ್ಷ್ಮಿ ಯೋಜನೆ, ವಿಧವಾವೇತನ, ತೊಟ್ಟಿಲುಭಾಗ್ಯ, ಸಣ್ಣ ರೈತರಿಗೆ ಒಂದು ಸಾವಿರ ಕೊಡುವಂಥ ಕಾರ್ಯಕ್ರಮಗಳು ತುಂಬ ಯಶಸ್ವಿಯಾಗಿದೆ. ಜನರು ತುಂಬಾ ಹತ್ತಿರದಿಂದ ಇಂಥ ಕಾರ್ಯಕ್ರಮಗಳನ್ನು ಆ ಒಂದು ಮುದಿ ವಯಸ್ಸಿನಲ್ಲಿ ಮೆಚ್ಚಿಕೊಂಡಿದ್ದಾರೆ. ಆಶ್ರಯವೇ ಇಲ್ಲದಿರುವಂಥ ವಯಸ್ಸಿನಲ್ಲಿ ಯಾರೂ ಅವರನ್ನು ಪರಿಗಣಿಸದಿರುವ ಸಂದರ್ಭದಲ್ಲಿ ಈ 400 ರೂಪಾಯಿ ವೃದ್ಧಾಪ್ಯವೇತನ, ಭಾಗ್ಯಜ್ಯೋತಿಯ ವ್ಯವಸ್ಥೆಯಿಂದ ಆ ಒಂದು ಸಂತೋಷ, ಉತ್ಸಾಹ ಆ ಮುದಿ ಜೀವಕ್ಕೆ ಬಂದಿರುವುದನ್ನು ನೋಡಿದರೆ ನಮಗೆ ನಿಜವಾಗಿಯೂ ಯಡಿಯೂರಪ್ಪನವರು ಎಂಥ ಕೆಳಮಟ್ಟದ, ಬಡತನದ, ಆಶ್ರಯವೇ ಇಲ್ಲದಿರುವಂಥ ವಯಸ್ಸಿನವರನ್ನು ಗುರುತಿಸಿ ಅವರಿಗೆ 400 ರೂಪಾಯಿ ವೃದ್ಧಾಪ್ಯವೇತನ ಕೊಟ್ಟಿರುವಂಥದ್ದು ನಿಜವಾಗಿಯೂ ಶ್ಲಾಘನೀಯವಾದದ್ದು. ಹೃದಯ ಶ್ರೀಮಂತಿಕೆಯನ್ನು ಹೊಂದಿರುವ ಒಬ್ಬ ರಾಜಕೀಯ ಮುಖಂಡ ತೆಗೆದುಕೊಂಡಿರುವ ತೀರ್ಮಾನ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ರೈತರು, ಸಣ್ಣ ರೈತರು ಹಿಂದೆ ನೇಣು ಹಾಕಿಕೊಂಡು ಸಾಯುತ್ತಿದ್ದುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೆವು. ಅವರು ಏಕೆ ಸಾಯುತ್ತಾರೆ? ಇವತ್ತು ನಮ್ಮ ರಾಷ್ಟ್ರ ಮತ್ತು ರಾಜ್ಯದಲ್ಲಿ ರೈತರು ಬೆಳೆದಂಥ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ. ಅವರು ಬೆಳೆದಂಥ ಬೆಳೆಗೆ ಧಾರಣೆ ಕಟ್ಟುವಂಥ ವ್ಯವಸ್ಥೆ ನಮ್ಮ ಸಮಾಜದಲ್ಲಿ ಒಬ್ಬ ದಳ್ಳಾಳಿಗಿದೆ. ಆದರೆ ಅದು ಸರ್ಕಾರಕ್ಕೆ ಅಥವಾ ಒಬ್ಬ ರೈತನಿಗೆ ಇಲ್ಲ. ಇಂಥ ಸಂದರ್ಭದಲ್ಲಿ ಆ ರೈತರಿಗೆ ಏನಾದರೂ ನಾವು ಸಹಾಯ ಮಾಡಬೇಕು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸರ್ಕಾರದಿಂದ ಒಂದು ಸಾವಿರ ರೂಪಾಯಿ ಕೊಡುವ ವ್ಯವಸ್ಥೆ ಬಂದಿದೆಯಲ್ಲ ಇದು ತುಂಬಾ ಶ್ಲಾಘನೀಯವಾದ ವಿಚಾರ. ಭಾಗ್ಯಲಕ್ಷ್ಮಿ ಎಂಬ ಯೋಜನೆಯನ್ನು ಹಿಂದೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದಿದ್ದರು.

ಮಾನ್ಯ ಯಡಿಯೂರಪ್ಪನವರು ಒಂದು ಹೆಜ್ಜೆ ಮುಂದೆ ಹೋಗಿ ಯಾವುದೇ ಹೆಣ್ಣುಮಗು ಹುಟ್ಟಿದರೆ ಆ ಮಗುವಿಗೆ 20 ಸಾವಿರ ರೂಪಾಯಿ ಡಿಪಾಜಿಟ್ ಇಟ್ಟು ಆ ಮಗು 18 ವರ್ಷ ವಯಸ್ಸಿಗೆ ಬಂದಾಗ ಒಂದು ಲಕ್ಷ ರೂಪಾಯಿಗಳು ಸಿಗುವಂಥ ಯೋಜನೆಯನ್ನು ಮಾಡಿದ್ದಾರೆ. ಇದರಿಂದ ಹೆಣ್ಣು ಹೆತ್ತವರಲ್ಲಿ ಅಪಾರವಾದಂಥ ಸಂತೋಷದ ದಿನಗಳನ್ನು ನಾವು ಕಾಣುತ್ತಿದ್ದೇವೆ. ಇವೆಲ್ಲವನ್ನು ನೋಡಿದಾಗ ನಿಜವಾಗಿಯೂ ಇವತ್ತೇನು ಮಾನ್ಯ

ಯಡಿಯೂರಪ್ಪನವರು ಭಾರತೀಯ ಜನತಾಪಕ್ಷದ ಚಿಂತನೆ ಯಾವ ದಿಕ್ಕಿನಲ್ಲಿ ಸಾಗಿದೆಯೆಂದರೆ, ಉದಾಹರಣೆಗೆ ನನ್ನ ಚಳ್ಳಕೆರೆ ತಾಲ್ಲೂಕಿನಲ್ಲಿ ಒಂದೊಂದು ಹಳ್ಳಿಗೂ ಆಶ್ರಯ ಯೋಜನೆ, ವೃದ್ಧಾಪ್ಯವೇತನ, ಅಂಗವಿಕಲ ವೇತನ, ವಿಧವಾವೇತನ ಇವುಗಳು ಒಂದೊಂದು ಹಳ್ಳಿಗೆ ಸುಮಾರು 40, 50, 35, 20, 15 ಸಾವಿರ ರೂಪಾಯಿವರೆಗೆ ಪ್ರತಿ ತಿಂಗಳು ಸರ್ಕಾರದ ಹಣ ಹಳ್ಳಿಯ ಬಡ ಜನತೆಗೆ ಸಿಗುತ್ತಿರತಕ್ಕ ಒಂದು ವ್ಯವಸ್ಥೆಗೆ ಮೂಲ ಕಾರಣೀಭೂತರೆಂದರೆ ಮಾನ್ಯ ಯಡಿಯೂರಪ್ಪನವರು. ಇದರ ಜೊತೆಗೆ ಇವತ್ತೇನು ಸಣ್ಣ ರೈತರು ಡೈರಿಗಳಿಗೆ ಹಾಲನ್ನು ಕೊಡುತ್ತಿದ್ದರೋ, ಅಂತಹ ರೈತರಿಗೆ ಸಹಾಯಧನವಾಗಿ ಒಂದು ಲೀಟರಿಗೆ 2 ರೂ.ಗಳಂತೆ ನಾವು ಕೊಡುತ್ತಿದ್ದೇವೆ. ಯಾವ ರೈತರು ಸರ್ಕಾರದಿಂದ ಸಾಲ ಪಡೆಯುತ್ತಾರೋ, ಅವರಿಗೆ ಶೇಕಡ 3ರಷ್ಟು ಬಡ್ಡಿ ದರದಲ್ಲಿ ಸಾಕಷ್ಟು ಹಣವನ್ನು ಒದಗಿಸುತ್ತಿರುವುದನ್ನು ಇವತ್ತು ನಾವು ಕಾಣಬಹುದಾಗಿದೆ. ವಿರೋಧಪಕ್ಷಗಳು ಕೆಲವೊಂದು ಟೀಕೆಗಳನ್ನು ಮಾಡಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ವಿರೋಧ ಪಕ್ಷಗಳು ಮಾನ್ಯ ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೇವಲ ವರ್ಗಾವಣೆಗಳನ್ನೇ ಮಾಡುತ್ತಿವೆ, ಅದೇ ಇವರ ದಂಧೆಯಾಗಿದೆ. ವರ್ಗಾವಣೆಗಳನ್ನು ಮಿತಿ ಮೀರಿ ಮಾಡುತ್ತಿದ್ದಾರೆ. ಇದರಲ್ಲಿ ಅತ್ಯಂತ ಹೆಚ್ಚಿನ ಲಂಚವನ್ನು ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿವೆ.

ಈಗ ನಾನು ಹೇಳುವ ಅಂಕಿ ಸಂಖ್ಯೆಗಳನ್ನು ಮಾನ್ಯ ವಿರೋಧಪಕ್ಷದ ಸ್ನೇಹಿತರು ದಯವಿಟ್ಟು ಕೇಳಬೇಕು. ಕೇವಲ ವಾಸ್ತವಾಂಶಗಳ ಬಗ್ಗೆ ಮಾತ್ರ ಅವರು ಮಾತನಾಡಬೇಕು. ಕರ್ನಾಟಕದ ಜನ ಬಹಳ ಬುದ್ಧಿವಂತರಾಗಿದ್ದಾರೆ. ವಿರೋಧಪಕ್ಷದವರು ಸತ್ಯಾಂಶವನ್ನು ಮಾತ್ರ ಮಾಡಲಿ. ಸತ್ಯಾಂಶವನ್ನು ನಂಬುವಂತಹ ಜನತೆ ಮಾತ್ರವೇ ಇಂದು ಕರ್ನಾಟಕದಲ್ಲಿದ್ದಾರೆಯೇ ವಿನಾ ಏನೋ ಬಾಯಿಗೆ ಬಂದಂತೆ ಮಾತನಾಡಿದರೆ ಅವರು ಅದನ್ನು ನಂಬುವುದಿಲ್ಲ. ಇವತ್ತು ನಾವು ವರ್ಗಾವಣೆ ಬಗ್ಗೆ ಕೊಡುವ ಅಂಕಿ ಅಂಶಗಳನ್ನು ದಯವಿಟ್ಟು ನಮ್ಮ ಸ್ನೇಹಿತರು ಕೇಳಬೇಕು. 2004ರಲ್ಲಿ 24,169 ವರ್ಗಾವಣೆಗಳಾಗಿವೆ. 2005ರಲ್ಲಿ 34,160 ವರ್ಗಾವಣೆಗಳಾಗಿವೆ. 2006ರಲ್ಲಿ 44,402 ವರ್ಗಾವಣೆಗಳಾಗಿವೆ. 2007ರಲ್ಲಿ 25,402 ವರ್ಗಾವಣೆಗಳಾಗಿವೆ. 2008ರಲ್ಲಿ, ಅಂದರೆ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ, ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಕೇವಲ 15,135 ವರ್ಗಾವಣೆಗಳನ್ನು ಮಾತ್ರ ಮಾಡಿದೆ ಎಂದರು.

ಆಗ ಉಪಾಧ್ಯಕ್ಷರು ಮಾತನಾಡುತ್ತ ಮಾನ್ಯ ಸದಸ್ಯರು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಧ್ಯೆ ಯಾರೂ ಮಾತನಾಡಬೇಡಿ. ನಿಮಗೆ ಮಾತನಾಡಲು ಅವಕಾಶ ಸಿಕ್ಕಾಗ ನೀವು ಮಾತನಾಡಬೇಕಾಗಿರುವುದನ್ನು ಹೇಳಿ. ಈಗ ಮಾತನಾಡಬೇಡಿ. ದಯವಿಟ್ಟು ಮಾನ್ಯ ಸದಸ್ಯರು ಮಾತು ಮುಂದುವರಿಸಲಿಕ್ಕೆ ಅವಕಾಶ ಕೊಡಿ. ದಯವಿಟ್ಟು ಕುಳಿತುಕೊಳ್ಳಿ ಎಂದರು.

ಆಗ ಶ್ರೀ ಆರ್. ರೋಷನ್‌ಬೇಗ್ ಅವರು ದಯವಿಟ್ಟು ಸುಳ್ಳು ಹೇಳಬಾರದು. ತಪ್ಪು ಅಂಶಗಳು 0%ಗೆ ಹೋಗಬಾರದು ಎಂದರು. ಆಗ ಶ್ರೀ.ಸಿ.ಟಿ. ರವಿಯವರು ಮಾನ್ಯ ತಿಪ್ಪೇಸ್ವಾಮಿಯವರು ದಯವಿಟ್ಟು ವಿರೋಧಪಕ್ಷಗಳಿಗೆ ಸತ್ಯವನ್ನು ಹೇಳಬಾರದು. ನೀವು ಅವರಿಗೆ ಒಪ್ಪಿಗೆ ಆಗಿರುವುದನ್ನು ಮಾತ್ರ ಹೇಳಬೇಕು ಎಂದರು. ಆಗ ಉಪಾಧ್ಯಕ್ಷರು ಮಾನ್ಯ ತಿಪ್ಪೇಸ್ವಾಮಿಯವರು ದಯವಿಟ್ಟು ಮಾತನಾಡುವುದನ್ನು ಮುಂದುವರಿಸಿ ಎಂದರು. ಆದರೆ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಮಾತನಾಡುತ್ತ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ತಿಪ್ಪೇಸ್ವಾಮಿಯವರು ಹೇಳುತ್ತಿರುವುದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಆದರೆ ನಾನು ಅವರಿಗೆ ಒಂದು ಮನವಿ ಮಾಡುತ್ತೇನೆ. ನನ್ನ ಕಾಲದಲ್ಲಿ ಬಿ.ಜೆ.ಪಿ. ಮಂತ್ರಿಗಳ ಇಲಾಖೆಗಳಲ್ಲಿ ಯಾವ್ಯಾವ ರೀತಿಗಳಾಗಿವೆ, ನಮ್ಮ ಪಕ್ಷದವರು ಮಂತ್ರಿಗಳಾಗಿದ್ದ ಇಲಾಖೆಗಳಲ್ಲಿ ಎಷ್ಟೆಷ್ಟು ಆಗಿವೆ ಎಂಬ ಬಗ್ಗೆ ಮಾಹಿತಿ ಇದ್ದರೆ, ದಯವಿಟ್ಟು ಅವರು ಅದನ್ನು ಹೇಳುವುದು ಒಳ್ಳೆಯದು ಎಂದರು.

ಆಗ ಶ್ರೀ ತಿಪ್ಪೇಸ್ವಾಮಿಯವರು ಮಾತನಾಡುತ್ತ ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಕೇಳಿದಂತಹ ಮಾಹಿತಿ ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಆಮೇಲೆ ಆ ಮಾಹಿತಿಯನ್ನು ನಾನು ತರಿಸಿಕೊಳ್ಳುತ್ತೇನೆ. ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆ ಬಗ್ಗೆ ಹೇಳುವುದಾದರೆ, ಇದು ಸನ್ಮಾನ್ಯ ದೇವೇಗೌಡರ ಕಾಲದಲ್ಲಿ ಜಾರಿಗೆ ಬಂದಿತ್ತು. ಅವರ ಸಂಪುಟದಲ್ಲಿ ನಾನೂ ಕೂಡ ಮಂತ್ರಿಯಾಗಿದ್ದೆ. 1995ರಲ್ಲಿ ಈ ಒಂದು ವ್ಯವಸ್ಥೆಗೆ ಸನ್ಮಾನ್ಯ ದೇವೇಗೌಡರೇ ಚಾಲನೆಯನ್ನು ಕೊಟ್ಟಿದ್ದರು ಎಂದರು. ಆಗ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಮಾತನಾಡುತ್ತ ಸನ್ಮಾನ್ಯ ದೇವೇಗೌಡರು ಸಹಿ ಮಾಡಿದಂತಹ ಸಂದರ್ಭದಲ್ಲಿ ಇದ್ದಂತಹ ಕಂಪೆನಿಗಳೇ ಬೇರೆ. ಆಮೇಲೆ ಹೊಸ ಕಂಪೆನಿಗಳನ್ನು ಹುಟ್ಟು ಹಾಕಲಾಗಿದೆ. ಈ ಬಗ್ಗೆ ಇದೇ ಸದನದಲ್ಲಿ ಐದೂವರೆ ಗಂಟೆಗಳ ಕಾಲ ಉತ್ತರ ಕೊಟ್ಟಿದ್ದೇನೆ. ಅವತ್ತು ನನ್ನ ಸಹಾಯಕ್ಕೆ ಯಾರೂ ಬರಲಿಲ್ಲ. ಇವತ್ತು ಕೋರ್ಟಿನಲ್ಲಿ ಅದರ ಬಗ್ಗೆ ಕೇಸ್ ಇದೆ. ಸನ್ಮಾನ್ಯ

ದೇವೇಗೌಡರೇ ಆ ಕೇಸಿನಲ್ಲಿ ಇವತ್ತು ಆಗುತ್ತಿದ್ದಾರೆ. ಆದ್ದರಿಂದ ಇವತ್ತು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ ಎಂದರು.

ಶ್ರೀ ತಿಪ್ಪೇಸ್ವಾಮಿ ಮಾತನಾಡುತ್ತ ಸನ್ಮಾನ್ಯ ಉಪಾಧ್ಯಕ್ಷರೆ, 2008ರ ಡಿಸೆಂಬರ್ ಅಂತ್ಯದ ವೇಳೆಗೆ ಸಂಗ್ರಹವಾಗಿರತಕ್ಕ ತೆರಿಗೆ ಬಗ್ಗೆ ಪಕ್ಷಿನೋಟವೊಂದನ್ನು ನಾನು ಕೊಡಬಯಸುತ್ತೇನೆ. ಆದರೆ 2008-09ರಲ್ಲಿ 12,677 ಕೋಟಿ ರೂ.ಗಳು ಸಂಗ್ರಹವಾಗಿದೆ. ಇದರಲ್ಲಿ ಶೇಕಡ 14.8 ರಷ್ಟು ಟ್ಯಾಕ್ಸ್ ಅನ್ನು ನಾವು ಹೆಚ್ಚಿಗೆ ಸಂಗ್ರಹಿಸಿದ್ದೇವೆ. ಏಕೆ ನಾನು ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ ಎಂದರೆ, ಇವತ್ತು ಆರ್ಥಿಕ ಪರಿಸ್ಥಿತಿ ಬಿದ್ದು ಹೋಗಿದೆ. ಇಡೀ ವಿಶ್ವದಲ್ಲಿ ಆರ್ಥಿಕ ಪರಿಸ್ಥಿತಿ ಕೆಳಮಟ್ಟಕ್ಕೆ ಹೋಗಿದ್ದರೂ ಸಹ, ಇಂತಹ ಕಷ್ಟಕಾಲದಲ್ಲಿ ನಾವು ಮಾಡುವುದರಲ್ಲಿ ದಿಟ್ಟ ಹೆಜ್ಜೆ ಮುಂದಿಟ್ಟಿದ್ದೇವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಬಕಾರಿಯಿಂದ ನಮಗೆ 2007-08ರಲ್ಲಿ 3436 ಕೋಟಿ ರೂ.ಗಳು ಸಂಗ್ರಹವಾಗಿದ್ದರೆ, 2008-09ರಲ್ಲಿ 3944 ಕೋಟಿ ರೂ.ಗಳು ಸಂಗ್ರಹವಾಯಿತು. ಡಿಸೆಂಬರ್ ಅಂತ್ಯದವರೆಗೆ ಸಂಗ್ರಹವಾಗಿರುವುದನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ವರ್ಷದ ಪೂರ್ತಿ ತೆರಿಗೆ ಸಂಗ್ರಹವಾಗಿರುವುದನ್ನು ನಾನು ಇಲ್ಲಿ ಹೇಳುತ್ತಿಲ್ಲ. ನಿಂದಲೂ ಸಹ ನಾವು ಶೇಕಡ 14.9ರಷ್ಟು ಜಾಸ್ತಿ ತೆರಿಗೆಯನ್ನು ಡಿಸೆಂಬರ್ ಅಂತ್ಯದವರೆಗೆ ಮಾಡಿದ್ದೇವೆ. ವಾಹನ ತೆರಿಗೆ ಬಗ್ಗೆ ಹೇಳುವುದಾದರೆ, 2007-08ರಲ್ಲಿ 1213 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದ್ದರೆ, 2008-09ರಲ್ಲಿ 1324 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಶೇಕಡ 9.8ರಷ್ಟು ಹೆಚ್ಚಿಗೆ ನಾವು ಮಾಡಿದ್ದೇವೆ. ಸರಾಸರಿ ಡಿಸೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಶೇಕಡ 14.4ರಷ್ಟು ಜಾಸ್ತಿ. ಅದನ್ನು ನಾವು ಮಾಡಿದ್ದೇವೆ. ಇನ್ನು 2008ರ ಡಿಸೆಂಬರ್ ಅಂತ್ಯದವರೆಗಿನ ಯೋಜನೇತರ ವೆಚ್ಚದ ಬಗ್ಗೆ ಹೇಳುವುದಾದರೆ, 2003ರಲ್ಲಿ 4015 ಕೋಟಿ ರೂ.ಗಳು ಬಂದಿದೆ.

2004ರಲ್ಲಿ 5043 ಕೋಟಿ ಬಂದಿದೆ. 2005ರಲ್ಲಿ 6194 ಕೋಟಿ ಬಂದಿದೆ. 2006ರಲ್ಲಿ 7844 ಕೋಟಿ ಬಂದಿದೆ. 2007ರಲ್ಲಿ 7721 ಕೋಟಿ ಬಂದಿದೆ. ಮಾನ್ಯ ಯಡಿಯೂರಪ್ಪನವರ ಅಧಿಕಾರಾವಧಿಯೊಳಗೆ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ 2008ರಲ್ಲಿ 9488 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಿಸಿ ಸಾಧನೆಯನ್ನು ನಾವು ಮಾಡಿದ್ದೇವೆ. ಈ ಅಂಕಿ ಅಂಶಗಳನ್ನು ನಾನು ಏತಕ್ಕೆ ಕೊಟ್ಟೆ ಎಂದರೆ, ಇವತ್ತು ಷೇರು

ಮಾರುಕಟ್ಟೆ ಬಿದ್ದುಹೋಗಿದೆ. ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಹಣದ ವಹಿವಾಟು ಕಡಿಮೆಯಾದರೂ ಸಹಿತ, ಇಂತಹ ಕಷ್ಟದಲ್ಲಿ ಕೂಡ ಯಡಿಯೂರಪ್ಪನವರ ಅಧಿಕಾರಾವಧಿಯಲ್ಲಿ ಯಾವುದೇ ಕಂಟ್ರಾಕ್ಟರ್ ಬಿಲ್ ಬೌನ್ಸ್ ಆಗಿಲ್ಲ, ಎಲ್ಲಿಯೂ ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದರಲ್ಲಿ ಕಡಿಮೆಯಾಗಿಲ್ಲ. ಇಷ್ಟೊಂದು ದಕ್ಷತೆಯಿಂದ ಆಡಳಿತವನ್ನು ಮಾಡಿ, ಜನರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟರೂ ಸಹಿತ ಇವತ್ತು ಇಂತಹ ಒಂದು ಆಡಳಿತ ಜನರು ಬೇಕೆಂದು ಮೊನ್ನೆ ನಡೆದ ಉಪಚುನಾವಣೆಯಲ್ಲಿ ಕರ್ನಾಟಕದ ಜನ ಭಾರತೀಯ ಜನತಾಪಕ್ಷಕ್ಕೆ ಆಶೀರ್ವಾದವನ್ನು ಮಾಡಿ 5 ಸೀಟುಗಳಲ್ಲಿ ಗೆಲ್ಲಿಸಿದ್ದಾರೆ. ಇನ್ನು ನಮಗೆ ಉತ್ಸಾಹ, ಪ್ರೋತ್ಸಾಹ ಕೊಟ್ಟಂಥ ಕರ್ನಾಟಕದ ಜನತೆಯನ್ನು ನಾವು ಮರೆಯುವುದಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಭಾರತೀಯ ಜನತಾಪಕ್ಷ, ಈ ನಾಡಿನ ಮುಖ್ಯಮಂತ್ರಿಗಳು ಹಾಗೂ ಸಹೋದ್ಯೋಗಿ ಮಂತ್ರಿಗಳೆಲ್ಲರೂ ಸಹಿತ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಹಣವನ್ನು ರೈತರ, ಬಡಜನತೆಯ ಉದ್ಧಾರಕ್ಕಾಗಿ, ವಿದ್ಯುತ್ ಉತ್ಪಾದನೆಗಾಗಿ ಕೊಟ್ಟು ಭಾರತದ ಅತ್ಯಂತ ದಕ್ಷ, ಪ್ರಾಮಾಣಿಕ ಭಾರತೀಯ ಜನತಾಪಕ್ಷದ ನಾಯಕ ಯಡಿಯೂರಪ್ಪ ಎಂದು ಹೇಳಿ ನಾವು ಹೆಗ್ಗಳಿಕೆಗೆ ಪಾತ್ರರಾಗುತ್ತೇವೆ. ಇನ್ನು 5 ವರ್ಷದಲ್ಲಿ ಇಡೀ ಜನತೆ ಭಾರತೀಯ ಜನತಾಪಕ್ಷದ ಕಡೆಗೆ ನೋಡುವಂತೆ ಮಾಡುತ್ತೇವೆ ಎಂದು ಹೇಳಿ, ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದರು.

### 5.3.6. ಮಾಜಿ ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮತ್ತಿತರ ಗಣ್ಯರ ನಿಧನದ ಬಗ್ಗೆ

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನದಲ್ಲಿ ದಿನಾಂಕ 09.07.2009ರಂದು ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತ ಮಾಜಿ ಸಚಿವರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜಿ. ಶಂಕರೇಗೌಡ, ಶ್ರೀ ಎಂ.ಬಿ. ದಿವಟರ್, ಶ್ರೀ ಬಿ.ಪಿ ಗಂಗಾಧರ್ ಹಾಗೂ ವಿಧಾನಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಟಿ. ಚನ್ನಬಸಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ ಎಂದರು.

ಆಗ ಶಾಸಕ ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ) ಅವರು ಮಾತನಾಡುತ್ತ ಸನ್ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಸೇವೆ ಸಲ್ಲಿಸಿ ನಮ್ಮಿಂದ ಅಗಲಿರತಕ್ಕಂಥ ಮಹಾನ್ ನಾಯಕರುಗಳಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ ಹಾಗೂ ಈ ಪಟ್ಟಿಯಲ್ಲಿರುವ ನಮ್ಮ ಜಿಲ್ಲೆಯವರಾಗಿರುವ ಶ್ರೀ ಬಿ.ಟಿ. ಚನ್ನಬಸಪ್ಪ ಮತ್ತು ನಾವು ಹಾಗೂ ಶ್ರೀ ಇದಿನಬ್ಬನವರು ಈ ಸದನದಲ್ಲಿದ್ದಂಥ ಸಂದರ್ಭದ ಬಗ್ಗೆ ಹೇಳುವುದಾದರೆ, ಮಾನ್ಯ ಇದಿನಬ್ಬನವರು ಕನ್ನಡದ ಅಭಿಮಾನಿಯಾಗಿದ್ದರು. ಈ ಸದನದಲ್ಲಿ ಮಾತನಾಡುವಾಗ ಸಂದರ್ಭಕ್ಕೆ ತಕ್ಕಂತೆ ಕಾವ್ಯದ ಮೂಲಕ ಜನಗಳಿಗೆ ಮತ್ತು ಸದನಕ್ಕೆ ಅರ್ಥವಾಗುವಂತಹ ರೀತಿಯಲ್ಲಿ ಮಾತನಾಡುತ್ತಿದ್ದರು. ಇದರ ಜೊತೆಗೆ ನಮ್ಮ ಜಿಲ್ಲೆಯವರು ಆಗಿರುವಂಥ ಸಜ್ಜನ ಮತ್ತು ಸರಳ ವಿಶಾಲ ಹೃದಯ ಹೊಂದಿದಂಥ ಶ್ರೀ ಚನ್ನಬಸಪ್ಪನವರ ಜೊತೆಯಲ್ಲಿ ಸೇರಿಕೊಂಡು ಬಹಳ ದಿವಸ ಒಟ್ಟಿಗೆ ರಾಜಕಾರಣ ಮಾಡಿದ್ದೇವೆ. ನಿಜವಾಗಿಯೂ ಇವರ ನಡೆ ನುಡಿ ನಮ್ಮ ಜಿಲ್ಲೆಯ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ. ಅವರು ನಿಷ್ಕಳಂಕರಾಗಿದ್ದರು. ಎಲ್ಲಾ ಜಾತಿ ವರ್ಗವನ್ನು ವಿಶಾಲ ಮತ್ತು ಸಮಾನ ದೃಷ್ಟಿಯಿಂದ ನೋಡಿರತಕ್ಕಂತಹ ಮಹಾನ್ ವ್ಯಕ್ತಿಯಾಗಿದ್ದರು. ಇವತ್ತಿನ ದಿವಸ ನಮ್ಮನ್ನೆಲ್ಲ ಅಗಲಿರತಕ್ಕಂಥವರಿಗೆಲ್ಲ ಆತ್ಮಕ್ಕೆ ಶಾಂತಿ ಕೊಡಲೆಂದು ಮತ್ತು ಈ ಮಹಾನ್ ವ್ಯಕ್ತಿಗಳು ಅಗಲಿ ಹೋಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಕೊಡಲೆಂದು ಹೇಳುತ್ತಾ ಇದರ ಜೊತೆಗೆ ಶ್ರೀಯುತ ಹಾರನಹಳ್ಳಿ ರಾಮಸ್ವಾಮಿಯವರದು ವಿಶೇಷವಾದಂಥ ಗುಣ ಇದೆ. ಈ ಸದನಕ್ಕೆ ಮತ್ತು ರಾಜ್ಯಕ್ಕೆ ಹಾಗೂ ಸಮಾಜಕ್ಕೆ ಕೊಟ್ಟಂಥ ಸಲಹೆ ಮತ್ತು ಮಾರ್ಗದರ್ಶನ ಎಂದೆಂದಿಗೂ ಬಹಳ ಅತ್ಯುತ್ತಮವಾದಂಥವಾಗಿವೆ. ಇಂಥ ಮಹಾನ್ ನಾಯಕರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಮತ್ತು ಇತರರು ನಮ್ಮನ್ನು ಅಗಲಿರತಕ್ಕಂಥದ್ದು ಕರ್ನಾಟಕ ರಾಜ್ಯಕ್ಕೆ ಭರಿಸಲಾಗದಂಥ ಒಂದು ಅನ್ಯಾಯ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇವರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಇವರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದೇವರು ಕೊಡಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಎಂದರು.[26]

---

[26] Karnataka Legislative Assembly Thirteenth Assembly, 3rd Session Vol-6 (No.1&2) from 9th to 10th July 2009. Pp.- 17.

### 5.3.7. 2017–18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ ಕುರಿತು

ಮಾನ್ಯ ಶಾಸಕ ಟಿ. ರಘುಮೂರ್ತಿ ಅವರು ಮೇ 27, 2017ರಂದು ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳು, ಸಾಮಾಜಿಕ ಹರಿಕಾರರು ಆದಂಥ ಮಾನ್ಯ ಸಿದ್ದರಾಮಯ್ಯನವರು 2017–18ನೇ ಸಾಲಿನ ಮುಂಗಡ ಪತ್ರದ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಕಳೆದ 4 ದಶಕಗಳಿಂದ ಸಾರ್ವಜನಿಕ ಸೇವೆಯಲ್ಲಿರುವಂಥ ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಬಜೆಟ್ ಮಂಡನೆಯ ಮೂಲಕ ತಮ್ಮ ಅಪಾರವಾದ ಅನುಭವ, ಸಾಮಾಜಿಕ ಕಳಕಳಿ, ಕಾಳಜಿ ಮತ್ತು ಮುತ್ಸದ್ದಿತನವನ್ನು ಮೆರೆದಿದ್ದಾರೆಂದರೆ ಅತಿಶಯೋಕ್ತಿ ಅಲ್ಲ. ನನಗೆ ಸಮಯ ಬಹಳಷ್ಟು ಕಡಿಮೆ ಇರುವುದರಿಂದ ಮೊಟ್ಟಮೊದಲನೆಯದಾಗಿ ನಾನು 2013–14ನೇ ಸಾಲಿನಲ್ಲಿ ಅನುಸೂಚಿತ ಜಾತಿ ಪಂಗಡಕ್ಕೆ ಒಂದು ಕಾಯಿದೆಯನ್ನು ತಂದರು. ಅದಕ್ಕಾಗಿ ಸಮಾಜ ಕಲ್ಯಾಣ ಸಚಿವರು ಮತ್ತು ಮುಖ್ಯಮಂತ್ರಿಗಳು ಮತ್ತು ಈ ಸದನ ಬೆಳಗಾವಿಯಲ್ಲಿ ಅಧಿವೇಶನ ಆಯಿತು. ಅದಕ್ಕೆ ನಾನು ವಿಶೇಷವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿಯಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಮುಂಗಡ ಪತ್ರದಲ್ಲಿ ಬಹಳಷ್ಟು ಯೋಜನೆಗಳನ್ನು ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ, ಶಿಕ್ಷಣ ಇಲಾಖೆ ಇರಬಹುದು, ಆರೋಗ್ಯ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇರಬಹುದು. ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಜಾತಿ ಜನಾಂಗದವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಅವರಿಗೆ ಏನು ಬಲ ನೀಡಬೇಕು ಅದನ್ನು ಮಾಡಿದ್ದಾರೆ. ವಿಶೇಷವಾಗಿ ನಾನು ನನ್ನ ಕ್ಷೇತ್ರ ಹಾಗೂ ಜಿಲ್ಲೆಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ನನ್ನ ಕ್ಷೇತ್ರ ಹಾಗೂ ಜಿಲ್ಲೆಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ಬರಗಾಲವನ್ನು ನೋಡುತ್ತಿದ್ದೇವೆ. ಬರಗಾಲ ಬಂದ ತಕ್ಷಣ ನೀರಿನ ಸಮಸ್ಯೆ ಕಾಣುವುದು. ಅಂಥ ಒಂದು ನೀರಿನ ಸಮಸ್ಯೆಯನ್ನು ಚಿತ್ರದುರ್ಗ ಜಿಲ್ಲೆಯವರು ಚಳ್ಳಕೆರೆ ಸೇರಿ 6 ತಾಲ್ಲೂಕುಗಳವರು ಅನುಭವಿಸುತ್ತಿದ್ದೇವೆ. ಇದಕ್ಕೆ ಪೂರಕವಾಗಿ 2014–15ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಮಂಡನೆ ಆಗಿತ್ತು. ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಪಾವಗಡಕ್ಕೆ ತುಂಗಭದ್ರಾ ಹಿನ್ನೀರಿನಿಂದ ನೀರನ್ನು ಕೊಡಬೇಕೆಂದು ಅದಕ್ಕೆ ಸುಮಾರು 1800 ಕೋಟಿ ರೂ.ಗಳ ಅಂದಾಜು ವೆಚ್ಚ ಎಂದು ಹೇಳಿದ್ದರು. ಆದರೆ ಅದು ಇದುವರೆಗೂ ಕಾರ್ಯಗತವಾಗಿಲ್ಲ. ನಾವು ಸುಮಾರು 3–4 ತಿಂಗಳುಗಳ ಹಿಂದೆ ಸಮಾಜ ಕಲ್ಯಾಣ ಸಚಿವರ ಒಂದು ಅಧ್ಯಕ್ಷತೆಯಲ್ಲಿ ಎಲ್ಲಾ Principal secretaryಗಳ ಒಂದು ಸಭೆಯಲ್ಲಿ ಈ ಮೂರು

ತಾಲ್ಲೂಕುಗಳು ಎಸ್.ಸಿ./ಎಸ್.ಟಿ. ಕ್ಷೇತ್ರಗಳಿಗೆ ಸಂಬಂಧಿಸುತ್ತವೆಂದು ಹೇಳಿ more than 50% population ಇದೆ ಎಂದು ಹೇಳಿ ಸಮಾಜ ಕಲ್ಯಾಣ ಇಲಾಖೆಯಿಂದ 50% ಅನುದಾನ ಕೊಡಬೇಕೆಂದು ಈಗಾಗಲೇ ತೀರ್ಮಾನ ಆಗಿದೆ. ಅದಕ್ಕೆ ಅನುಗುಣವಾಗಿ ಆ ಯೋಜನೆಯನ್ನು ಖಂಡಿತವಾಗಿ ಈ ವರ್ಷವಾದರೂ ಅನುಷ್ಠಾನಗೊಳಿಸಿದರೆ ಇಂತಹ ಬರಗಾಲ ಬಂದರೂ ಕೂಡ ನಮಗೆ ಆ ಒಂದು ಸಮಸ್ಯೆ ಇರುವುದಿಲ್ಲವೆಂದು ಹೇಳಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನೊಂದು ಮುಖ್ಯವಾಗಿ ಹೇಳಬೇಕೆಂದರೆ, ನಮ್ಮ ಸರ್ಕಾರ ಬಜೆಟ್‌ನಲ್ಲಿ 49 ತಾಲ್ಲೂಕುಗಳನ್ನು ಮಂಡನೆ ಮಾಡಿದೆ. ಅದನ್ನು ಖಂಡಿತವಾಗಿ ನಾನು ಸ್ವಾಗತವನ್ನು ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 4 ತಾಲ್ಲೂಕುಗಳು ಆಗಬೇಕಾಗಿತ್ತು. ನನ್ನ ಕ್ಷೇತ್ರದ ಪರಶುರಾಂಪುರ ಮತ್ತು ತುರವನೂರು ಮಾಡಬೇಕಾಗಿತ್ತು. ಆದರೆ ನಾನು ಈ ಸಂದರ್ಭದಲ್ಲಿ ತುರವನೂರು ತಾಲ್ಲೂಕು ಮಾಡಬೇಕೆಂದು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ಪರಶುರಾಂಪುರ ಯಾವ ರೀತಿ ಅಪರಾಧಿಗೆ ಶಿಕ್ಷೆ ಆಗಲಿಲ್ಲವೆಂದರೂ ಕೂಡ ನಿರಪರಾಧಿಗೆ ಶಿಕ್ಷೆ ಆಗಬಾರದೆಂದು ಬಯಸುತ್ತೇನೆ. ಆ ರೀತಿ ಇಲ್ಲಿ ಇರತಕ್ಕಂಥದ್ದು ಪರಶುರಾಂಪುರ ಹೋಬಳಿ. ಏಕೆಂದರೆ ಗಡಿ ಪ್ರದೇಶದಲ್ಲಿರತಕ್ಕಂಥದ್ದು ಮತ್ತು ಎಲ್ಲಾ ರೀತಿಯಲ್ಲಿ ತಾಲ್ಲೂಕು ಮಾಡುವುದಕ್ಕೆ ಯೋಗ್ಯ ಇರತಕ್ಕಂಥದ್ದು. ಮತ್ತು ಎಂ.ಪಿ.ಪ್ರಕಾಶ್ ಅವರ ವರದಿಯಲ್ಲಿರತಕ್ಕಂಥದ್ದು. ಇದಕ್ಕೆ ಪೂರಕವಾಗಿ ಕಳೆದ ಸಾರಿ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಆ ಪ್ರಶ್ನೆ ಸಂಖ್ಯೆ 1724, ಅದರಲ್ಲಿ ನನ್ನ ತಾಲ್ಲೂಕಿನ ಬಗ್ಗೆ ನೀವು ಯಾವಾಗ ಪರಶುರಾಂಪುರ ಹೋಬಳಿಯನ್ನು ತಾಲ್ಲೂಕು ಮಾಡುತ್ತೀರೆಂದು ಕೇಳಿದಾಗ ಸರ್ಕಾರದಿಂದ ಆಗಿನ ಕಂದಾಯ ಸಚಿವರು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಹೊಸ ತಾಲ್ಲೂಕುಗಳ ರಚನೆ ಬಗ್ಗೆ 4 ಸಮಿತಿಗಳು ನೀಡಿರುವ ವರದಿಯ ಆಧಾರದ ಮೇಲೆ 2013–14ನೇ ಸಾಲಿನ ಆಯವ್ಯಯದಲ್ಲಿ 43 ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಣೆ ಮಾಡಲಾಗಿರುತ್ತದೆ. ಇದರಲ್ಲಿ ಪರಶುರಾಂಪುರ ಹೋಬಳಿ ಪ್ರದೇಶವು ಸೇರಿರುತ್ತದೆಂದು ಹೇಳಿರುತ್ತಾರೆ. ಹಾಗಾಗಿ ಈ ಸದನದಲ್ಲಿ ಹೇಳಿರತಕ್ಕಂಥದ್ದು, ಈ ಸಂದರ್ಭದಲ್ಲಿ 43 ತಾಲ್ಲೂಕುಗಳ ಬದಲಾಗಿ 49 ತಾಲ್ಲೂಕುಗಳ ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ಈ ತಾಲ್ಲೂಕನ್ನು ಮಾಡಿಯೇ ತೀರಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.[27]

[27] Karnataka Legislative Assembly Debates. Sixth Session of the 14th Legislative Assembly, Dated 27th Mar 2017 . Pp.- 265 to 267.

ನಮ್ಮ ಚಳ್ಳಕೆರೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ತಾಲ್ಲೂಕಿನಲ್ಲಿ ಬೆಳಗಟ್ಟ ಗ್ರಾಮದಲ್ಲಿ ಜೂನಿಯರ್ ಕಾಲೇಜು 2014–15ರಲ್ಲಿ ಮಂಜೂರಾಗಿತ್ತು. ಅದನ್ನು ಕಾರಣಾಂತರಗಳಿಂದ ಹಾಸನ ಜಿಲ್ಲೆಯಿಂದ ಚಿತ್ರದುರ್ಗ ಜಿಲ್ಲೆಗೆ ವರ್ಗಾಯಿಸಿದರು. ಅದನ್ನು ತಡೆಹಿಡಿದರು. ಅದರ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಆಗಿನ ಶಿಕ್ಷಣ ಸಚಿವರು ಸೇರಿ ಇದೊಂದು ವಿಶೇಷ ಪ್ರಕರಣ ಎಂದು ಅದನ್ನು ಮಂಜೂರುಗೊಳಿಸಿದರು. ಅದು ಬಂದ ನಂತರ ಹಿರಿಯ ಅಧಿಕಾರಿಗಳು ಮತ್ತು ಈಗಿನ ಶಿಕ್ಷಣ ಸಚಿವರಿಗೆ ಅದರ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಕೊಟ್ಟಿದ್ದೇನೆ. ಖಂಡಿತವಾಗಿಯೂ ನಮಗೆ ಈಗಾಗಲೇ ಮಂಜೂರಾಗಿದೆ ಎಂದು ತಿಳಿದು ಅದನ್ನು inauguration ಮಾಡಿದ್ದೇವೆ. ಅಂದರೆ ಪ್ರಾರಂಭ ವ್ಯವಸ್ಥೆ ಮಾಡಿದ್ದೇವೆ. ವಿದ್ಯಾರ್ಥಿಗಳೂ ಕೂಡ ನಮಗೆ ಜೂನಿಯರ್ ಕಾಲೇಜು ಆಯಿತು ಎಂದು ಬಹಳಷ್ಟು ಜನರು ಆಸೆಪಟ್ಟಿದ್ದಾರೆ. ಆದರೆ ಬೇರೆ ಬೇರೆ ವಿಷಯಗಳನ್ನು ಹಾಕಿ ಅದನ್ನು ಯಾವ ರೀತಿ ಮಾಡಬಾರದು ಎನ್ನುವುದಕ್ಕೆ ಅಂಕಿ ಅಂಶಗಳನ್ನು ತರಿಸುತ್ತಾರೆಯೇ ವಿನಾ ಅದನ್ನು ಮಾಡಬೇಕೆಂದು ಮಾಡುತ್ತಿಲ್ಲ. ಹಾಗಾಗಿ ನಮ್ಮ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ಖಂಡಿತವಾಗಿಯೂ ಅವರು ಅದನ್ನು ನೆರವೇರಿಸಬೇಕೆಂದು ಕೇಳುತ್ತಾ, ನಾನು ಇನ್ನೂ ಬಹಳಷ್ಟು ವಿಷಯಗಳನ್ನು ಮಾತನಾಡುವುದು ಇದ್ದರೂ ಕೂಡ ಅನಿವಾರ್ಯ ಕಾರಣಗಳಿಂದ ನನ್ನ ಮಾತನ್ನು ಮೊಟಕುಗೊಳಿಸುತ್ತೇನೆ ಮತ್ತೆ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ನನಗೆ ಖಂಡಿತವಾಗಿಯೂ ನೀವು ತಾಲ್ಲೂಕನ್ನು ಘೋಷಣೆ ಮಾಡಲೇಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಧನ್ಯವಾದಗಳು ಎಂದರು.[28]

[28] Karnataka Legislative Assembly Debates. Fourteen Session of the 14th Legislative Assembly, Dated 17th Feb 2017. Pp.- 39 to 40.

## ಅಧ್ಯಾಯ – 6

## ಉಪಸಂಹಾರ ಮತ್ತು ಸಲಹೆಗಳು

ಮಹಾನ್ ಮಾನವತಾವಾದಿ, ಸಂವಿಧಾನಶಿಲ್ಪಿ ಡಾ. ಅಂಬೇಡ್ಕರ್ ಅವರು ಶಾಸನಸಭೆಗಳಲ್ಲಿ ನಿಮ್ನವರ್ಗದ ರಾಜಕೀಯ ಪ್ರಾತಿನಿಧ್ಯತೆಗಾಗಿ 1917ರ ಸೌತ್‌ಬರೋ ಸಮಿತಿಗೆ ನೀಡಿರುವ ಸಾಕ್ಷಿಯಿಂದ ಸಂವಿಧಾನಾತ್ಮಕ ಹೋರಾಟವನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇದರ ಫಲವಾಗಿ 1919ರ ಮಾಂಟೆಗೋ ಚೆಲ್ಮ್ಸ್ ಫರ್ಡ್ ಕಾಯ್ದೆಯು ನಿಮ್ನವರ್ಗದ ಅಸ್ತಿತ್ವವನ್ನು ಮಾನ್ಯ ಮಾಡುತ್ತದೆ. 1921ರಲ್ಲಿ ರಚನೆಯಾದ ಮುದ್ಧಿಮಾನ್ ಸಮಿತಿಯು ಬಾಂಬೆ ವಿಧಾನಸಭೆಗೆ ಒಬ್ಬ ಅಸ್ಪೃಶ್ಯ ಸದಸ್ಯನನ್ನು ನಾಮಕರಣ ಮಾಡುವ ಅವಕಾಶ ನೀಡಿತು. ಹಾಗಾಗಿ ಅಸ್ಪೃಶ್ಯರ ಮೊದಲ ರಾಜಕೀಯ ಮೀಸಲಾತಿಯ ಫಲಾನುಭವಿಯಾಗಿ ಜಿ.ಎ. ಗಾವಯಿ ಅವರು ನಾಮಕರಣಗೊಂಡರು. ಆದರೆ ನಾಮಕರಣ ಪದ್ಧತಿಯು ನಿಮ್ನವರ್ಗಕ್ಕೆ ನೈಜ ರಾಜಕೀಯ ಪ್ರಾತಿನಿಧಿತ್ವ ಕಲ್ಪಿಸುವಲ್ಲಿ ವಿಫಲವಾಗುತ್ತದೆ ಎಂದು ನಾಮಕರಣ ಪದ್ಧತಿಯನ್ನು ಅಂಬೇಡ್ಕರ್ ವಿರೋಧಿಸಿದರು. ನಾಮಕರಣ ಪದ್ಧತಿಯನ್ನು ಅಂದೇ ಒಪ್ಪಿಕೊಂಡಿದ್ದರೆ ಹಿಂದೂ ಸಮಾಜದಲ್ಲಿ ಅಸ್ಪೃಶ್ಯರು ಈಗಿರುವುದಕ್ಕಿಂತ ಶೋಚನೀಯ ಸ್ಥಿತಿಯಲ್ಲಿರುತ್ತಿದ್ದರು. ಆದ್ದರಿಂದ ಅಂಬೇಡ್ಕರ್ ಅವರು ತಮ್ಮ ದೂರದೃಷ್ಟಿಯಿಂದ ನಾಮಕರಣ ಪದ್ಧತಿಯನ್ನು ವಿರೋಧಿಸಿದ್ದು ಸಮಂಜಸವಾಗಿದೆ.

ನಿಮ್ನವರ್ಗಗಳ ರಾಜಕೀಯ ಹಕ್ಕಿನ ಮುಂದಿನ ಹೋರಾಟವನ್ನು ಅಂಬೇಡ್ಕರ್ ಅವರು 1927ರ ಸೈಮನ್ ಆಯೋಗದ ಮುಂದೆ ಹಾಜರಾಗಿ ನೀಡಿದ ಸಾಕ್ಷಿಯಿಂದ ಗುರುತಿಸಲಾಗಿದೆ. ಅಂಬೇಡ್ಕರ್ ಅವರು ಸಮಿತಿಗೆ ಅಸ್ಪೃಶ್ಯರು ಸಮಾಜದ ಎಲ್ಲಾ ವರ್ಗಗಳಿಂದ ಶೋಷಣೆಗೆ ಒಳಗಾಗಿರುವ ಸತ್ಯ ಸಂಗತಿಯನ್ನು ವಿವರಿಸಿ ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಶಾಸನಸಭೆಗಳಲ್ಲಿ ನಿಮ್ನವರ್ಗಕ್ಕೆ ಪ್ರಾತಿನಿಧಿತ್ವ ಕಲ್ಪಿಸಬೇಕೆಂದು ಒತ್ತಾಯಿಸಿದರು. ಹಾಗೆ 21 ವರ್ಷ ತುಂಬಿದ ಎಲ್ಲಾ ಮಹಿಳೆ–ಪುರುಷರಿಗೆ ವಯಸ್ಕ ಮತದಾನಕ್ಕೆ ಆಗ್ರಹಿಸಿರುವುದನ್ನು ಕಂಡುಕೊಳ್ಳಲಾಗಿದೆ. ಇದರಿಂದ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವಾದಿಯಾಗಿದ್ದರೆಂದು ತಿಳಿದುಕೊಳ್ಳಲಾಗಿದೆ. ಪ್ರಜಾಪ್ರಭುತ್ವದಲ್ಲಿ ಸಮಾಜದ ಎಲ್ಲರ ಭಾಗವಹಿಸುವಿಕೆಯನ್ನು ಅಂಬೇಡ್ಕರ್ ಅವರು ಬಯಸಿದ್ದರು ಎಂದು ಇದರಿಂದ ಸ್ಪಷ್ಟವಾಗಿದೆ. ಆದ್ದರಿಂದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾಸಭೆಯ ಕರಡು ಸಮಿತಿಯ

ಅಧ್ಯಕ್ಷರಾಗಿ "ಒಬ್ಬ ವ್ಯಕ್ತಿಗೆ ಒಂದು ಮತ ಒಂದು ಮತಕ್ಕೆ ಒಂದೇ ಮೌಲ್ಯ"(One man one Vote one Value) ಎನ್ನುವ ತತ್ವವನ್ನು ಸ್ವತಂತ್ರ ಭಾರತ ಸಂವಿಧಾನದಲ್ಲಿ ಅಳವಡಿಸಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬೇಡಿಕೆಗಳನ್ನು ಆಲಿಸಿದ ಸೈಮನ್ ಆಯೋಗ ತನ್ನ ವರದಿಯಲ್ಲಿ ಮತದಾನದ ಅಧಿಕಾರವನ್ನು ಶೇ. 10ರಿಂದ ಶೇ. 15ಗೆ ಹೆಚ್ಚಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಜೊತೆಗೆ ಆಯೋಗವು ಅಸ್ಪೃಶ್ಯರ ಸಮಸ್ಯೆಯನ್ನು ದುಂಡುಮೇಜಿನ ಸಮ್ಮೇಳನಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಲು ಸೈಮನ್ ಆಯೋಗ ಸಲಹೆ ನೀಡಿತು. ಇದರಿಂದ ನಿಮ್ನವರ್ಗದ ರಾಜಕೀಯ ಹೋರಾಟಕ್ಕೆ ಪ್ರಾರಂಭಿಕ ಜಯ ದೊರಕಿತು ಎಂಬುದನ್ನು ಅಧ್ಯಯನ ಗುರುತಿಸಿದೆ.

ಭಾರತದ ಸ್ವತಂತ್ರ ಇತಿಹಾಸದಲ್ಲಿ ಮೈಲುಗಲ್ಲಾದ ದುಂಡುಮೇಜಿನ ಸಮ್ಮೇಳನಗಳಲ್ಲಿ 1930ರಿಂದ 1932ರವರೆಗೆ ನಿಮ್ನವರ್ಗದ ಪ್ರತಿನಿಧಿಯಾಗಿ ಭಾಗವಹಿಸಲು ಬ್ರಿಟಿಷ್ ಸರ್ಕಾರ ಅಂಬೇಡ್ಕರ್ ಅವರಿಗೆ ಆಹ್ವಾನ ನೀಡಿತು. ಅಂಬೇಡ್ಕರ್ ಅವರು ಸಭೆಯಲ್ಲಿ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಜನತಾ ಸರ್ಕಾರವನ್ನು ಭಾರತೀಯರು ಬಯಸುತ್ತಾರೆ ಎಂದು ನಿಜವಾದ ದೇಶಪ್ರೇಮವನ್ನು ಪ್ರದರ್ಶಿಸಿದರು. ಅಸ್ಪೃಶ್ಯರು ಹಿಂದೂ ಸಮಾಜದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಸಭೆಗೆ ಮನವರಿಕೆ ಮಾಡಿದರು. ಅಸ್ಪೃಶ್ಯರ ಸಮಸ್ಯೆ ಮೇಲ್ನೋಟಕ್ಕೆ ಸಾಮಾಜಿಕ ಸಮಸ್ಯೆಯಾಗಿ ಕಂಡುಬಂದರೂ ಅದಕ್ಕೆ ರಾಜಕೀಯ ಅಧಿಕಾರದಿಂದ ಪರಿಹಾರವನ್ನು ಒದಗಿಸಬಹುದು ಎಂದು ಸಭೆಯ ಗಮನ ಸೆಳೆದರು.

ಕಾಂಗ್ರೆಸ್ ಪ್ರತಿನಿಧಿ ಗಾಂಧಿ ಅವರು ಅಸ್ಪೃಶ್ಯರ ಸಮಸ್ಯೆ ಸಾಮಾಜಿಕ ಸಮಸ್ಯೆಯಾಗಿದೆ. ಇದಕ್ಕೆ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದು ಅಸ್ಪೃಶ್ಯರ ರಾಜಕೀಯ ಮಾನ್ಯತೆಯನ್ನು ನಿರಾಕರಿಸಿದರು. ಆದ್ದರಿಂದ ಅಂಬೇಡ್ಕರ್ ಮತ್ತು ಗಾಂಧಿಯವರ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಮೂಡಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಸ್ಪೃಶ್ಯರ ಎಲ್ಲಾ ಸಮಸ್ಯೆಗಳಿಗೂ ರಾಜಕೀಯ ಅಧಿಕಾರ ಪರಿಹಾರ ಸೂಚಿಸುತ್ತದೆ ಎಂದು ಅಂಬೇಡ್ಕರ್ ಅವರ ಮಾತುಗಳಿಂದ ಮನಗಂಡ ಬ್ರಿಟಿಷ್ ಸರ್ಕಾರ ಅಸ್ಪೃಶ್ಯರ ಪರವಾದ ಕೋಮುವಾರು ತೀರ್ಪಿನಲ್ಲಿ ಪ್ರತ್ಯೇಕ ಚುನಾಯಕಗಳನ್ನು ಘೋಷಿಸಿತು. ಗಾಂಧಿ ಅವರು ಹಿಂದು ಸಮಾಜದಲ್ಲಿ ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಉಳಿಯುತ್ತಾರೆ. ಇದರಿಂದ ಹಿಂದೂಧರ್ಮದಲ್ಲಿ ದೊಡ್ಡ ಕಂದಕ ನಿರ್ಮಾಣವಾಗುತ್ತದೆ. ಇದರಿಂದ ಭಾರತದ ಹಳ್ಳಿಗಳು ಎರಡು ಭಾಗಗಳಾಗಿ ವಿಂಗಡಣೆಯಾಗುತ್ತದೆ ಎಂದು ಈ

ತೀರ್ಪಿನ ವಿರುದ್ಧವಾಗಿ ಅವರು ಪೂನಾದ ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಈ ಪರಿಣಾಮವಾಗಿ ದೇಶದೆಲ್ಲೆಡೆ ಗಾಂಧಿ ಅವರ ಉಪವಾಸ ಸತ್ಯಾಗ್ರಹ ನಿಮ್ನವರ್ಗದ ಮೇಲೆ ಒತ್ತಡದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿತು. ಅಂಬೇಡ್ಕರ್ ಅವರ ಮೇಲೆ ರಾಷ್ಟ್ರೀಯವಾದಿ ಜಾತಿಹಿಂದೂಗಳು ತಮ್ಮ ನಿರ್ಧಾರವನ್ನು ಸಡಿಲಿಸುವಂತೆ ಒತ್ತಡ ಹೇರಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಒಂದು ಕಡೆ, ಗಾಂಧಿ ಅವರ ಜೀವ ಮತ್ತೊಂದು ಕಡೆ ಸಮುದಾಯದ ಹಿತಾಸಕ್ತಿ ರಕ್ಷಿಸುವ ಜವಾಬ್ದಾರಿ ಅವರ ಮೇಲಿತ್ತು. ಕೊನೆಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪರಿಸ್ಥಿತಿಯ ಸೂಕ್ಷ್ಮತೆಯನ್ನು ಗ್ರಹಿಸಿ ಗಾಂಧಿ ಅವರ ಜೀವ ಉಳಿಸಲು ಒಲ್ಲದ ಮನಸ್ಸಿನಿಂದ ಪೂನಾ ಒಪ್ಪಂದಕ್ಕೆ ಸಹಿ ಹಾಕಿದರು. ಆ ದಿನವನ್ನು ನಿಮ್ನವರ್ಗದವರ ರಾಜಕೀಯ ಇತಿಹಾಸದಲ್ಲಿ ಕರಾಳದಿನವೆಂದು ಭಾವಿಸಲಾಗಿದೆ. ಇದರಿಂದ ಅಂಬೇಡ್ಕರ್ ಅವರು ಬಯಸಿದ ಪ್ರತ್ಯೇಕ ಚುನಾಯಕಗಳಿಗೆ ಬದಲಾಗಿ ಜಂಟಿ ಮೀಸಲುಕ್ಷೇತ್ರಗಳು ಅಸ್ತಿತ್ವಕ್ಕೆ ಬಂದವು. ಪೂನಾ ಒಪ್ಪಂದದ ಕರಾರುಗಳನ್ನು ಭಾರತ ಸರ್ಕಾರ ಕಾಯ್ದೆ 1935ರಲ್ಲಿ ಅಳವಡಿಸಿ 1937ರ ಚುನಾವಣೆಯ ಮೂಲಕ ಅನುಷ್ಠಾನಕ್ಕೆ ತರಲಾಯಿತು. ಬ್ರಿಟಿಷರು 2ನೇ ಮಹಾಯುದ್ಧದ ಕಾರಣದಿಂದ 1939ರಿಂದ 1946ರವರೆಗೆ ಸಂವಿಧಾನವನ್ನು ಅಮಾನತ್ತಿನಲ್ಲಿಟ್ಟಿದ್ದರಿಂದ ಸ್ವತಂತ್ರಪೂರ್ವ ಭಾರತದಲ್ಲಿ ಅಸ್ಪೃಶ್ಯರು ರಾಜಕೀಯ ಮೀಸಲಾತಿಯನ್ನು ಎರಡು ವರ್ಷ ಮಾತ್ರ ಅನುಭವಿಸಿದರು.

ಭಾರತದ ಸಂವಿಧಾನ ಕರಡುರಚನೆಯಲ್ಲಿ ಕೇಂದ್ರ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಎಸ್.ಸಿ/ಎಸ್.ಟಿ ಗಳ ರಾಜಕೀಯ ಮೀಸಲಾತಿಯು 294ನೇ ಕರಡುವಿಧಿಯಾಗಿತ್ತು. ಈ ಕರಡುವಿಧಿಯನ್ನು ಸಂವಿಧಾನ ಕರಡುಸಮಿತಿಯ ಅಧ್ಯಕ್ಷರಾದ ಅಂಬೇಡ್ಕರ್ ಅವರು ಆಗಸ್ಟ್ 24, 1949ರಂದು ಸಭೆಯಲ್ಲಿ ಮಂಡಿಸಿದರು. ಈ ಕರಡುವಿಧಿಯ ಲೋಪದೋಷಗಳನ್ನು ಚರ್ಚಿಸಿ, 294ನೇ ಕರಡುಮಸೂದೆಯು ಯಾವುದೇ ತಿದ್ದುಪಡಿಯಿಲ್ಲದೇ ಅದೇ ದಿನ ಸಂವಿಧಾನ ರಚನಾಸಭೆಯಿಂದ ಅನುಮೋಧನೆ ಪಡೆದು ಅಧಿಕೃತವಾಗಿ ಭಾರತ ಸಂವಿಧಾನದಲ್ಲಿ 330 ಮತ್ತು 332ನೇ ವಿಧಿಗಳಾಗಿ ಅನುಷ್ಠಾನಗೊಂಡಿವೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿಯನ್ನು 10 ವರ್ಷಕ್ಕೆ ಮಿತಿಗೊಳಿಸಿರುವ 295(ಎ) ಕರಡುವಿಧಿಯನ್ನು ಅಂಬೇಡ್ಕರ್ ಅವರು ಆಗಸ್ಟ್ 24, 1945ರಂದು ಮಂಡಿಸಿದರು. ಈ ವಿಧೇಯಕವು ಅರ್ಥಪೂರ್ಣ ಚರ್ಚೆಯೊಂದಿಗೆ ಆಗಸ್ಟ್

25, 1945ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಸಭೆಯಿಂದ ಅನುಮೋದನೆ ಪಡೆದು ಅಧಿಕೃತವಾಗಿ ಸಂವಿಧಾನದಲ್ಲಿ 334ನೇ ವಿಧಿಯಾಗಿ ಜಾರಿಯಲ್ಲಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿಯ 10 ವರ್ಷಗಳ ಅವಧಿಯನ್ನು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳು ಅಸ್ಪೃಶ್ಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ವಿಫಲವಾಗಿ 334ನೇ ವಿಧಿಗೆ 6 ಬಾರಿ ತಿದ್ದುಪಡಿಯನ್ನು ತಂದು 60 ರಿಂದ 70 ವರ್ಷಕ್ಕೆ ವಿಸ್ತರಿಸಿವೆ. ಈ ಅವಧಿಯು ಜನವರಿ 25, 2020ಕ್ಕೆ ಕೊನೆಗೊಳ್ಳುತ್ತದೆ.

ಪರಿಶಿಷ್ಟರ ಹಿತಾಸಕ್ತಿಗಳನ್ನು ರಕ್ಷಿಸಲು ಶಾಸನಸಭೆಯಲ್ಲಿ ಪರಿಶಿಷ್ಟರ ಪ್ರಾತಿನಿಧಿತ್ವ ಅನಿವಾರ್ಯವಾಗಿದೆ. ಆದ್ದರಿಂದ ಭಾರತದಂತಹ ಜಾತಿ ಆಧಾರಿತ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಸಮಾಜದ ಶೋಷಿತ ವರ್ಗವನ್ನು ಪ್ರತಿನಿಧಿಸುವ ಮೀಸಲುಕ್ಷೇತ್ರಗಳು ಅವಶ್ಯಕವಾಗಿವೆ. ಜಾತಿ ರಾಜಕೀಯದಲ್ಲಿ ಮೀಸಲುವ್ಯವಸ್ಥೆ ಇಲ್ಲದೇ ಪರಿಶಿಷ್ಟರು ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿಸಲು ಆಯ್ಕೆಯಾಗಲು ಸಾಧ್ಯವಾಗುವುದಿಲ್ಲ. ಚುನಾವಣೆಗಳಲ್ಲಿ ಪ್ರಬಲ ಜಾತಿಗಳು ಪರಿಶಿಷ್ಟರನ್ನು ಆಯ್ಕೆಯಾಗಲು ಬಿಡುವುದಿಲ್ಲ. ಸಾಮಾನ್ಯ ಕ್ಷೇತ್ರಗಳಲ್ಲಿ ಪರಿಶಿಷ್ಟ ಅಭ್ಯರ್ಥಿಯು ಎಲ್ಲಾ ಸಾಮರ್ಥ್ಯ ಹೊಂದಿದ್ದರೂ ಬೆರಳೆಣಿಕೆ ಶಾಸಕ/ಸಂಸದರು ಆಯ್ಕೆ ಯಾಗುತ್ತಾರೆ. ಆದ್ದರಿಂದ ಪರಿಶಿಷ್ಟರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧಿತ್ವವನ್ನು ಮೀಸಲು ವ್ಯವಸ್ಥೆ ಕಲ್ಪಿಸುತ್ತದೆ. ಆದ್ದರಿಂದ ಜಾತಿ ಮತ್ತು ವರ್ಗರಹಿತ ಸಮಾಜ ಭಾರತದಲ್ಲಿ ಸ್ಥಾಪನೆಯಾಗುವವರೆಗೆ ಮೀಸಲುಕ್ಷೇತ್ರಗಳು ಮುಂದುವರಿಯಬೇಕು. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವಕ್ಕೆ ಮೀಸಲುಕ್ಷೇತ್ರಗಳು ಪೂರಕವಾಗಿವೆ ಎಂದು ಅಧ್ಯಯನವು ತಿಳಿಸುತ್ತದೆ.

ಚಳ್ಳಕೆರೆ ಮತ್ತು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಗಳು ಕರ್ನಾಟಕದ ಮೈಸೂರು ಭಾಗದ ಚಿತ್ರದುರ್ಗ ಜಿಲ್ಲೆಗೆ ಸೇರ್ಪಟ್ಟಿವೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕ ಮತ್ತು ಭೌಗೋಳಿಕವಾಗಿ ಎರಡು ಮೀಸಲುಕ್ಷೇತ್ರಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ ಎನ್ನುವ ಅಂಶವನ್ನು ಮೂರನೆಯ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ. ಈ ತಾಲ್ಲೂಕಿನಲ್ಲಿ ತುರವನೂರು, ನಾಯಕನಹಟ್ಟಿ, ಪರಶುರಾಂಪುರ ಮತ್ತು ತಳಕು ಎಂಬ 4 ಹೋಬಳಿಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲೇ ಅತಿ ಕಡಿಮೆ ಮಳೆಯಾಗುವ ತಾಲ್ಲೂಕು ಇದಾಗಿದ್ದು, ಇಲ್ಲಿ ಕಡಲೆಕಾಯಿಯನ್ನು ಅತಿ ಹೆಚ್ಚು ಬೆಳೆಯಲಾಗುತ್ತದೆ. 70ಕ್ಕೂ ಹೆಚ್ಚು

ಶೇಂಗಾ ಎಣ್ಣೆಯ ಮಿಲ್‌ಗಳು ಇಲ್ಲಿವೆ. ಆದ್ದರಿಂದಲೇ ಇದನ್ನು ಆಯಿಲ್ ಸಿಟಿ ಮತ್ತು ಚೋಟಾ ಮುಂಬೈ ಎಂದು ಕರೆಯಲಾಗುತ್ತದೆ.

ವಿಧಾನಸಭಾ ಚುನಾವಣೆ ಆರಂಭದಿಂದಲೂ ಚಳ್ಳಕೆರೆ ಕ್ಷೇತ್ರ ಕಾಂಗ್ರೆಸ್ ಹೆಚ್ಚು ಗೆಲುವನ್ನು ಪಡೆದಿದೆ ಹಾಗೂ ಅಭಿವೃದ್ಧಿಯಲ್ಲಿ ಸಾಕಷ್ಟು ಮುಂದುವರಿದ ಕ್ಷೇತ್ರವಾಗಿದೆ. 1957ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಚಳ್ಳಕೆರೆ ಮೊದಲು ದ್ವಿಸದಸ್ಯ ಕ್ಷೇತ್ರವಾಗಿತ್ತು, ಅದರಲ್ಲಿ ಒಂದು ಪರಿಶಿಷ್ಟ ಜಾತಿಗೆ ಮೀಸಲು, ಇನ್ನೊಂದು ಸಾಮಾನ್ಯವರ್ಗಕ್ಕೆ ಮೀಸಲಾಗಿತ್ತು. ಆಗ ಮತದಾರರು 2 ಮತ ಹಾಕುವ ಹಕ್ಕನ್ನು ಹೊಂದಿದ್ದರು. ಒಂದು ಮೀಸಲುಕ್ಷೇತ್ರದ ಅಭ್ಯರ್ಥಿಗೆ ಮತ್ತೊಂದು ಸಾಮಾನ್ಯಕ್ಷೇತ್ರದ ಅಭ್ಯರ್ಥಿಗೆ ಮತ ನೀಡುತ್ತಿದ್ದರು. 2008ರಿಂದ ಇದು ಪರಿಶಿಷ್ಟ ಪಂಗಡ(ಎಸ್.ಟಿ.)ಕ್ಕೆ ಮೀಸಲಾಯಿತು. ಇದುವರೆಗೂ ನಡೆದ ಒಟ್ಟು 16(ದ್ವಿಸದಸ್ಯ ಕ್ಷೇತ್ರ ಸೇರಿ) ಚುನಾವಣೆಯಲ್ಲಿ ಕಾಂಗ್ರೆಸ್ 8 ಬಾರಿ ಗೆದ್ದಿದೆ, ಜೆಎನ್‌ಪಿ, ಬಿಜೆಪಿ ತಲಾ 2 ಬಾರಿ, ಜನತಾದಳ, ಪಿಎಸ್‌ಪಿ ಮತ್ತು ಕಾಂಗ್ರೇಸ್(ಐ) ತಲಾ ಒಂದು ಬಾರಿ ಚುಕ್ಕಾಣಿ ಹಿಡಿದಿವೆ.

1957ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಚಳ್ಳಕೆರೆ ಮೊದಲು ದ್ವಿಸದಸ್ಯ ಕ್ಷೇತ್ರವಾಗಿತ್ತು. ಅದರಲ್ಲಿ ಪರಿಶಿಷ್ಟ ಜಾತಿ ಮೀಸಲುಕ್ಷೇತ್ರದಿಂದ ಟಿ. ಹನುಮಯ್ಯ ಮತ್ತು ಸಾಮಾನ್ಯಕ್ಷೇತ್ರದಿಂದ ಎ. ಭೀಮಪ್ಪ ನಾಯಕರು ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾದರು. 1962ರಲ್ಲಿ ಕಾಂಗ್ರೆಸ್‌ನ ಬಿ.ಎಲ್. ಗೌಡ, 1967ರಲ್ಲಿ ಪಿಎಸ್‌ಪಿಯ ಬಿ.ಎಲ್. ಗೌಡ, 1972ರಲ್ಲಿ ಕಾಂಗ್ರೆಸ್‌ನ ವಿ. ಮಸಿಯಪ್ಪ, 1978ರಲ್ಲಿ ಐಎನ್‌ಸಿ(ಐ)ನ ಎನ್. ಜಯಣ್ಣ, 1983ರಲ್ಲಿ ಜೆಎನ್‌ಪಿಯ ಹೆಚ್.ಸಿ. ಶಿವಶಂಕರಪ್ಪ, 1985ರಲ್ಲಿ ಜೆಎನ್‌ಪಿಯ ತಿಪ್ಪೇಸ್ವಾಮಿ, 1989ರಲ್ಲಿ ಕಾಂಗ್ರೆಸ್‌ನ ಎನ್. ಜಯಣ್ಣ, 1994ರಲ್ಲಿ ಜನತಾದಳದ ತಿಪ್ಪೇಸ್ವಾಮಿ, 1999ರಲ್ಲಿ ಭಾರತೀಯ ಜನತಾಪಕ್ಷದ ಬಸವರಾಜ್ ಮಂಡಿಮಟ್, 2004ರಲ್ಲಿ ಕಾಂಗ್ರೆಸ್‌ನ ಡಿ. ಸುಧಾಕರ್, 2008ರಲ್ಲಿ ಭಾರತೀಯ ಜನತಾಪಕ್ಷದ ತಿಪ್ಪೇಸ್ವಾಮಿ, 2013 ಹಾಗೂ 2018ರಲ್ಲಿ ಕಾಂಗ್ರೆಸ್‌ನ ಟಿ. ರಘುಮೂರ್ತಿ ಆಯ್ಕೆಯಾದರು. ಇಲ್ಲಿ ಆಯ್ಕೆಯಾದ ಎಲ್ಲಾ ಶಾಸಕರು ಇದೇ ಕ್ಷೇತ್ರದವರಾಗಿದ್ದಾರೆ.

1994ರಲ್ಲಿ ಇಲ್ಲಿಂದ ಆಯ್ಕೆಯಾದ ತಿಪ್ಪೇಸ್ವಾಮಿ ಮಂತ್ರಿಯಾಗಿ ಆಯ್ಕೆಯಾಗಿದ್ದರು. ಇದಾದ ನಂತರ ಟಿ. ರಘುಮೂರ್ತಿ ಹಟ್ಟಿ ಚಿನ್ನದ ಗಣಿ ಅಧ್ಯಕ್ಷರಾಗಿದ್ದಾರೆ. ಇದನ್ನು ಹೊರತುಪಡಿಸಿದರೆ ಸಚಿವ ಸ್ಥಾನ ಭಾಗ್ಯ ಯಾರಿಗೂ ಲಭಿಸಿಲ್ಲ. ಶಾಸಕರಾದವರ ಪೈಕಿ ಟಿ.

ಹನುಮಯ್ಯ ಹಾಗೂ ವಿ. ಮಸಿಯಪ್ಪ ಪರಿಶಿಷ್ಟ ಜಾತಿಗೆ ಸೇರಿದರೆ, ಬಿ.ಎಲ್. ಗೌಡ ಒಕ್ಕಲಿಗ ಸಮುದಾಯಕ್ಕೆ ಸೇರಿದರೆ, ಹೆಚ್.ಸಿ. ಶಿವಶಂಕರಪ್ಪ ಹಾಗೂ ಬಸವರಾಜ ಮಂಡಿಮಟ್ ಲಿಂಗಾಯತ ಸಮುದಾಯಕ್ಕೆ ಸೇರಿದರೆ, ಎನ್. ಜಯಣ್ಣ ಮತ್ತು ಡಿ. ಸುಧಾಕರ್ ಜೈನಧರ್ಮಕ್ಕೆ ಸೇರಿದ್ದಾರೆ ಹಾಗೂ ಎ. ಭಿಮಪ್ಪ ನಾಯಕ, ತಿಪ್ಪೇಸ್ವಾಮಿ ಹಾಗೂ ಟಿ. ರಘುಮೂರ್ತಿ ಇವರು ನಾಯಕ ಜನಾಂಗಕ್ಕೆ ಸೇರಿದವರು.

ವಿಧಾನಸಭಾ ಚುನಾವಣೆ ಆರಂಭದಿಂದಲೂ ಮೊಳಕಾಲ್ಮೂರು ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಪಟ್ಟ ಪಡೆದಿದೆ. ಅಭಿವೃದ್ಧಿಯಲ್ಲಿ ಸಾಕಷ್ಟು ಹಿಂದುಳಿದಿದ್ದರೂ ಮುಖ್ಯಮಂತ್ರಿಯನ್ನು ಕೊಡುಗೆಯಾಗಿ ನೀಡಿರುವ ಕ್ಷೇತ್ರವಾಗಿದೆ. 1952ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಮೊಳಕಾಲ್ಮೂರು ಮೊದಲು ಸಾಮಾನ್ಯಕ್ಷೇತ್ರವಾಗಿತ್ತು. 2008 ರಿಂದ ಇದು ಪರಿಶಿಷ್ಟ ಪಂಗಡ(ಎಸ್.ಟಿ)ಕ್ಕೆ ಮೀಸಲಾಯಿತು. ಇದುವರೆಗೂ ನಡೆದ ಒಟ್ಟು 16(ಉಪ ಚುನಾವಣೆ ಸೇರಿ) ಚುನಾವಣೆಯಲ್ಲಿ ಕಾಂಗ್ರೆಸ್ 12 ಬಾರಿ ಗೆದ್ದಿದೆ, ಜೆಎನ್‌ಪಿ, ಜನತಾದಳ, ಬಿಎಸ್‌ಆರ್ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಒಂದು ಬಾರಿ ಚುಕ್ಕಾಣಿ ಹಿಡಿದಿವೆ.

1952ರಲ್ಲಿ ಈಗಿನ ದಾವಣಗೆರೆ ಜಿಲ್ಲೆಯ ಬಿಳಿಚೋಡು ಗ್ರಾಮದ ಕಾಂಗ್ರೆಸ್‌ನ ಎ. ಭೀಮಪ್ಪ ನಾಯಕ ಪ್ರಥಮ ಶಾಸಕರಾಗಿ ಆಯ್ಕೆಯಾದರು. 1957ರಲ್ಲಿ ಕಾಂಗ್ರೇಸ್‌ನ ಎಸ್. ನಿಜಲಿಂಗಪ್ಪ, 1962 ಹಾಗೂ 1967ರಲ್ಲಿ ಕಾಂಗ್ರೆಸ್‌ನ ಎಸ್.ಎಚ್. ಬಸಣ್ಣ, 1972 ಹಾಗೂ 1978ರಲ್ಲಿ ಕಾಂಗ್ರೆಸ್‌ನ ಪಟೇಲ್ ಪಾಪನಾಯಕ, 1983ರಲ್ಲಿ ಕಾಂಗ್ರೆಸ್‌ನ ಎನ್.ಜಿ. ನಾಯಕ್, 1985ರಲ್ಲಿ ಜೆಎನ್‌ಪಿಯ ಪುರ್ಲಮುತ್ತಪ್ಪ, 1989ರಲ್ಲಿ ಕಾಂಗ್ರೆಸ್‌ನ ಎನ್.ಜಿ. ನಾಯಕ್, 1994ರಲ್ಲಿ ಜನತಾದಳದ ಪುರ್ಲಮುತ್ತಪ್ಪ ಆಯ್ಕೆಯಾದರು. 1997ರ ಉಪಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್‌ನ ಎನ್.ವೈ. ಗೋಪಾಲಕೃಷ್ಣ ಅವರು 1999, 2004 ಮತ್ತು 2008ರಲ್ಲಿ ಸತತವಾಗಿ ಗೆಲ್ಲುವ ಮೂಲಕ ಕ್ಷೇತ್ರದ ಮೇಲೆ ಹಿಡಿತವನ್ನು ಸಾಧಿಸಿದ್ದರು. ಆದರೆ 2013ರಲ್ಲಿ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಎಸ್. ತಿಪ್ಪೇಸ್ವಾಮಿ ಆಯ್ಕೆಯಾದರು. 2018ರಲ್ಲಿ ಬಿಜೆಪಿಯ ಬಿ. ಶ್ರೀರಾಮುಲು ಆಯ್ಕೆಯಾದರು. ಎ. ಭೀಮಪ್ಪ ನಾಯಕ, ಎಸ್. ನಿಜಲಿಂಗಪ್ಪ ಹಾಗೂ ಬಿ. ಶ್ರೀರಾಮುಲು ಹೊರತುಪಡಿಸಿ ಉಳಿದ ಎಲ್ಲರೂ ಇದೇ ಕ್ಷೇತ್ರದವರಾಗಿದ್ದಾರೆ.

1957ರಲ್ಲಿ ಇಲ್ಲಿಂದ ಆಯ್ಕೆಯಾಗಿದ್ದ ಎಸ್. ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ಇದಾದ ನಂತರ ಎನ್.ಜಿ. ನಾಯಕ್ ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದರು. ಎನ್.ವೈ. ಗೋಪಾಲಕೃಷ್ಣ ವಿಧಾನಸಭಾ ಉಪಸಭಾಪತಿಯಾಗಿ ಕೆಲಸ

ಮಾಡಿದ್ದರು. ಇದನ್ನು ಹೊರತುಪಡಿಸಿದರೆ ಸಚಿವ ಸ್ಥಾನ ಭಾಗ್ಯ ಯಾರಿಗೂ ಲಭಿಸಿಲ್ಲ. ಶಾಸಕರಾದವರ ಪೈಕಿ ನಿಜಲಿಂಗಪ್ಪ ಹಾಗೂ ಎಸ್.ಎಚ್. ಬಸಣ್ಣ ಲಿಂಗಾಯತರಾಗಿದ್ದರೆ, ಉಳಿದ ಎಲ್ಲರೂ ನಾಯಕ ಜನಾಂಗಕ್ಕೆ ಸೇರಿದವರು. ಯಾವುದೇ ಶಾಶ್ವತ ಕುಡಿಯುವ ನೀರಿನ ಸೌಲಭ್ಯ, ಕೆರೆ ತುಂಬಿಸುವ ಯೋಜನೆ, ಕೈಗಾರಿಕೆ, ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಕ್ಷೇತ್ರ ಕಂಡಿಲ್ಲ. ಪ್ರತಿ ಬಾರಿ ಈ ವಿಷಯವನ್ನೇ ಮುಂದಿಟ್ಟುಕೊಂಡು ಮಂಕುಬೂದಿ ಎರಚಲಾಗುತ್ತಿದೆ ಎಂಬುದು ಮತದಾರರ ದೂರು ಎಂಬುದನ್ನು ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಲಾಗಿದೆ.

13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡ ಸದಸ್ಯರ ಕಾರ್ಯ ನಿರ್ವಹಣೆಯ ಕುರಿತಂತೆ ಎರಡು ಕ್ಷೇತ್ರದ ಮತದಾರರ ಅಭಿಪ್ರಾಯ ಇಂತಿದೆ.

**I ಪರಿಶಿಷ್ಟ ಪಂಗಡೇತರರ ಅಭಿಪ್ರಾಯ**

1. ಚಳ್ಳಕೆರೆಯಲ್ಲಿ ಅಭಿವೃದ್ಧಿಗೆ ಶ್ರಮಿಸುವ ಶಾಸಕರನ್ನು ಬಯಸುತ್ತಾರೆ. ಅದೇ ಮೊಳಕಾಲ್ಮೂರಿನಲ್ಲಿ ಶಾಸಕರು ಪ್ರಾಮಾಣಿಕ ವ್ಯಕ್ತಿಗಳಾಗಿರಬೇಕೆಂದು ಬಯಸುತ್ತಾರೆ.
2. ಚಳ್ಳಕೆರೆಯಲ್ಲಿನ ಶಾಸಕರಲ್ಲಿ ಪ್ರಬಲ ನಾಯಕತ್ವ ಇದ್ದುದರಿಂದ ಪರಿಶಿಷ್ಟ ಪಂಗಡ ನಾಯಕತ್ವ ಒಪ್ಪಿಕೊಳ್ಳುತ್ತಾರೆ. ಅದೇ ಮೊಳಕಾಲ್ಮೂರಿನಲ್ಲಿ ಪ್ರಬಲ ನಾಯಕತ್ವ ಇಲ್ಲದೇ ಇರುವುದರಿಂದ ಪರಿಶಿಷ್ಟ ಪಂಗಡ ನಾಯಕತ್ವವನ್ನು ತಿರಸ್ಕರಿಸುತ್ತಾರೆ.
3. ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಪಂಗಡೇತರ ನಾಯಕತ್ವ ನಡುವಿನ ವ್ಯತ್ಯಾಸವನ್ನು ಚಳ್ಳಕೆರೆಯಲ್ಲಿ ಜನಬೆಂಬಲದಿಂದ ಗುರುತಿಸುತ್ತಾರೆ. ಅದೇ ಮೊಳಕಾಲ್ಮೂರಿನಲ್ಲಿ ಜಾತಿಯಿಂದ ಗುರುತಿಸುತ್ತಾರೆ.

**II ಪರಿಶಿಷ್ಟ ಪಂಗಡೇತರರಲ್ಲಿ ಒಮ್ಮತ ಅಭಿಪ್ರಾಯ**

1. ಚಳ್ಳಕೆರೆ ಮತ್ತು ಮೊಳಕಾಲ್ಮೂರಿನ ಎರಡು ಕ್ಷೇತ್ರಗಳಲ್ಲಿ ಸಮಾಜಸೇವಕರನ್ನು ನಾಯಕರೆಂದು ಒಪ್ಪಿಕೊಳ್ಳುತ್ತಾರೆ.
2. ಚಳ್ಳಕೆರೆ ಮತ್ತು ಮೊಳಕಾಲ್ಮೂರಿನ ಎರಡು ಕ್ಷೇತ್ರಗಳಲ್ಲಿ ಜಾತ್ಯತೀತ ಮನೋಭಾವನೆ ಇರುವ ವ್ಯಕ್ತಿಗಳನ್ನು ಶಾಸಕರಾಗಿ ಬಯಸುತ್ತಾರೆ.

### III ಪರಿಶಿಷ್ಟ ಪಂಗಡದವರ ಅಭಿಪ್ರಾಯಗಳು

1. ಕ್ಷೇತ್ರಗಳಲ್ಲಿ ಅಂಬೇಡ್ಕರ್ ಅವರು ಬಯಸಿದ ಪರಿಶಿಷ್ಟರ ನಾಯಕತ್ವ ಮೀಸಲು ಕ್ಷೇತ್ರಗಳಿಂದ ರೂಪಿತವಾಗಿಲ್ಲ ಎಂಬ ಒಮ್ಮತ ಅಭಿಪ್ರಾಯವಿದೆ(ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅವರನ್ನು ಹೊರತುಪಡಿಸಿ).
2. ಜಾತಿವ್ಯವಸ್ಥೆಯು ಪ್ರಬಲ ಪರಿಶಿಷ್ಟ ಪಂಗಡ ನಾಯಕತ್ವಕ್ಕೆ ಮಾರಕವಾಗಿದೆ ಎಂದು ಎರಡು ಕ್ಷೇತ್ರಗಳಲ್ಲಿ ಒಪ್ಪಿಕೊಳ್ಳುತ್ತಾರೆ.
3. ಸ್ವತಂತ್ರ ನಾಯಕತ್ವ ರೂಪಿಸುವಲ್ಲಿ ಮೀಸಲುಕ್ಷೇತ್ರಗಳು ವಿಫಲವಾಗಿವೆ ಎಂಬ ಅಭಿಪ್ರಾಯ ಎರಡು ಕ್ಷೇತ್ರಗಳಲ್ಲಿದೆ.

ಮೀಸಲುಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಪರಿಶಿಷ್ಟ ಮತದಾರರ ಸಂಖ್ಯೆ ಹೆಚ್ಚಾಗಿರುತ್ತದೆ. ಆದ್ದರಿಂದ ಪರಿಶಿಷ್ಟರ ಮತಗಳು ಸ್ಪರ್ಧಿಸಿದ ಎಲ್ಲಾ ಪರಿಶಿಷ್ಟ ಅಭ್ಯರ್ಥಿಗಳ ನಡುವೆ ನಾನಾ ಕಾರಣಗಳಿಂದ ಹಂಚಿಕೆಯಾಗುತ್ತವೆ. ಮತದಾರರ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದವರು ಆರನೇ ಸ್ಥಾನದಲ್ಲಿರುವ ಸಮುದಾಯ, ರಾಜ್ಯ ರಾಜಕೀಯ ಗಮನಿಸಿ ಮತ್ತು ಸ್ಥಳೀಯವಾಗಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸುವ ಅಭ್ಯರ್ಥಿಗಳನ್ನು ಚುನಾಯಿಸುವಲ್ಲಿ ಯಶಸ್ವಿಯಾಗುತ್ತಾರೆ. ಆದ್ದರಿಂದ ಶಾಸಕರು ಪರಿಶಿಷ್ಟರನ್ನು ನಿರ್ಲಕ್ಷಿಸಿ ಪರಿಶಿಷ್ಟೇತರರಿಗೆ ಮನ್ನಣೆ ನೀಡುತ್ತಾರೆ. ಮೀಸಲುವ್ಯವಸ್ಥೆಯ ಚುನಾವಣೆ ರಾಜಕೀಯದಲ್ಲಿ ಪರಿಶಿಷ್ಟರ ಏಳಿಗೆಗೆ ಶ್ರಮಿಸುವ ಉತ್ತಮ ಚಾರಿತ್ರ್ಯವುಳ್ಳ ವ್ಯಕ್ತಿಗಳು ಶಾಸಕರಾಗುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಅಂಬೇಡ್ಕರ್ ಅವರು ನಿಮ್ನವರ್ಗದವರನ್ನು ನಿಮ್ನವರ್ಗದವರೇ ಆಯ್ಕೆ ಮಾಡುವ ಪ್ರತ್ಯೇಕ ಚುನಾಯಿಕಗಳನ್ನು ಬಯಸುತ್ತಿದ್ದರು. ಮೀಸಲುಕ್ಷೇತ್ರದ ಅವಾಂತರಗಳನ್ನು ನೋಡಿ 1951ರ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಮೀಸಲುವ್ಯವಸ್ಥೆಯು ಪರಿಶಿಷ್ಟರಿಗೆ ಸ್ವತಂತ್ರ ನಾಯಕತ್ವ ರೂಪಿಸುವಲ್ಲಿ ವಿಫಲವಾಗಿದೆ ಎಂದು ತಿಳಿದು ಮೀಸಲುವ್ಯವಸ್ಥೆಯನ್ನು ರದ್ದುಪಡಿಸಬೇಕೆಂಬ ನಿರ್ಣಯವನ್ನು ಎಸ್.ಸಿ.ಎಫ್. ಪಕ್ಷದಿಂದ ಅಂಗೀಕರಿಸಿದ್ದರು.

ಪ್ರಸ್ತುತ ಸಂದರ್ಭದಲ್ಲಿ ಜಾತಿ ರಾಜಕೀಯ ಮೀಸಲುವ್ಯವಸ್ಥೆಯನ್ನು ರದ್ದುಗೊಳಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಸಂಸತ್ತು ಮತ್ತು ರಾಜ್ಯದ ವಿಧಾನಸಭೆಗಳಲ್ಲಿ ಪರಿಶಿಷ್ಟರ ಪ್ರಾತಿನಿಧಿತ್ವವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ಆದ್ದರಿಂದ ಪರಿಶಿಷ್ಟರು ಮೀಸಲುವ್ಯವಸ್ಥೆಯ ಚುನಾವಣಾ ರಾಜಕೀಯದ ಸೂಕ್ಷ್ಮತೆಯನ್ನು ಅರಿತು ಪರಿಶಿಷ್ಟರು ತಮ್ಮೊಳಗಿನ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಉತ್ತಮರನ್ನು

ಆಯ್ಕೆ ಮಾಡಲು ಸಂಘಟಿತರಾಗುವ ಮೂಲಕ ಮೀಸಲುವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಾಗಿದೆ. ಪರಿಶಿಷ್ಟರಲ್ಲಿನ ಉಪಜಾತಿ ಪ್ರತ್ಯಕ್ಷವಾಗಿ ಚುನಾವಣೆಯಲ್ಲಿ ಕೆಲಸ ಮಾಡುತ್ತದೆ. ಮತದಾರರ ಸಂಖ್ಯೆ ಹೆಚ್ಚಾಗಿರುವ ಕೋಮಿನವರು ಸಾಮಾನ್ಯವಾಗಿ ಮೀಸಲು ಕ್ಷೇತ್ರಗಳ ಲಾಭವನ್ನು ಪಡೆಯುತ್ತಾರೆ. ಕೆಲವು ಸಂದರ್ಭದಲ್ಲಿ ಪ್ರಬಲವಾಗಿರುವ ಪರಿಶಿಷ್ಟ ಕೋಮನ್ನು ಹತ್ತಿಕ್ಕಲು ಪರಿಶಿಷ್ಟೇತರರು ಒಟ್ಟಾಗಿ ಸೇರಿ ಅಲ್ಪಸಂಖ್ಯಾತ ಪರಿಶಿಷ್ಟ ಕೋಮಿನ ವ್ಯಕ್ತಿಯನ್ನು ಶಾಸಕರಾಗಿ ಆಯ್ಕೆ ಮಾಡುತ್ತಾರೆ. ಸಾಮಾನ್ಯವಾಗಿ ಮೀಸಲುಕ್ಷೇತ್ರದ ರಾಜಕೀಯದಲ್ಲಿ ಮೊದಲನೇ ಅಂಶ ಸತ್ಯವಾಗುತ್ತದೆ. ಎರಡನೇ ಅಂಶ ತುಂಬಾ ವಿರಳ ಎಂದು ಅಧ್ಯಯನದಲ್ಲಿ ಗುರುತಿಸಬಹುದು.

ರಾಜ್ಯ ರಾಜಕೀಯದಲ್ಲಿ ಮೀಸಲುಕ್ಷೇತ್ರಗಳು ದುರ್ಬಲವಾಗಲು ಪರಿಶಿಷ್ಟ ಪಂಗಡದ ಊರನಾಯಕ ಮತ್ತು ಮ್ಯಾಸನಾಯಕ ಕೋಮುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು ಪರಿಶಿಷ್ಟ ಪಂಗಡದ ರಾಜಕಾರಣಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಊರನಾಯಕ ಮತ್ತು ಮ್ಯಾಸನಾಯಕ ಕೋಮುಗಳು ಸಹೋದರರ ರೀತಿ ಇರಬೇಕಿತ್ತು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ರಾಜಕೀಯ ಲಾಭ ಪಡೆಯಲು ಈ ಜಾತಿಗಳ ನಡುವೆ ವ್ಯವಸ್ಥಿತ ಸಂಚನ್ನು ರೂಪಿಸಿ ಪರಿಶಿಷ್ಟ ಪಂಗಡದವರನ್ನು ರಾಜಕಾರಣದಲ್ಲಿ ಬಲಿಪಶುಗಳಾಗಿ ಮಾಡುತ್ತಿದ್ದಾರೆ. ಆದ್ದರಿಂದ ರಾಜಕೀಯದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರಿಶಿಷ್ಟ ಪಂಗಡದವರೆಲ್ಲ ಒಟ್ಟಾಗಿ ಹೋರಾಡಬೇಕಾಗಿದೆ. ತಮ್ಮ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪ್ರಬಲ ಪರಿಶಿಷ್ಟ ಪಂಗಡ ನಾಯಕತ್ವ ರೂಪಗೊಳ್ಳಲು ಎಲ್ಲರೂ ಸಂಘಟಿತರಾಗಬೇಕು. ಆ ಮೂಲಕ ಸಮಾನತೆಯ ಸಮಾಜದ ನಿರ್ಮಾಣಕ್ಕೆ ದುಡಿಯಬೇಕಾಗಿದೆ.

ಪರಿಶಿಷ್ಟ ಪಂಗಡದವರಲ್ಲಿ 52 ಕೋಮುಗಳು ಸೇರುತ್ತವೆ. ಇದರಲ್ಲಿ ಕೆಲವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಬಲವಾಗಿರುವ ಜಾತಿಗಳನ್ನು ಈ ಪಟ್ಟಿಗೆ ಸೇರಿಸಿದ್ದರಿಂದ ಮೀಸಲುಕ್ಷೇತ್ರಗಳಿಂದ ಪ್ರಬಲ ಶಾಸಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದರಿಂದ ಪರಿಶಿಷ್ಟ ಪಂಗಡದವರ ಅರಿವಿಲ್ಲದ ಪ್ರಬಲ ಶಾಸಕರಿಂದ ನ್ಯಾಯ ದೊರೆಯುವುದಿಲ್ಲ. ಶಾಸಕರು ಮೀಸಲಾತಿಯಿಂದ ಆಯ್ಕೆಯಾಗಿದ್ದೇವೆ ಎಂಬ ಸಾಮಾನ್ಯ ಜ್ಞಾನವಿಲ್ಲದೆ ಅಧಿಕಾರಕ್ಕಾಗಿ ಪ್ರಬಲ ಜಾತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಪರಿಶಿಷ್ಟ ಪಂಗಡದವರ ರಾಜಕೀಯವನ್ನು ಮತ್ತಷ್ಟು ದುರ್ಬಲಗೊಳಿಸುತ್ತಿದ್ದಾರೆ. ಆದ್ದರಿಂದ

ನೈಜ ಪರಿಶಿಷ್ಟ ಪಂಗಡ ಮತದಾರರು ಜಾಣ್ಮೆಯನ್ನು ಪ್ರದರ್ಶಿಸಿ ಚುನಾವಣೆಗಳಲ್ಲಿ ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಬೇಕು.

ಕರ್ನಾಟಕದ 65 ವರ್ಷಗಳ ವಿಧಾನಸಭೆಯ ಇತಿಹಾಸದಲ್ಲಿ ಒಬ್ಬ ಪರಿಶಿಷ್ಟ ಪಂಗಡ ಮಹಿಳೆಯು ಮೀಸಲುಕ್ಷೇತ್ರಗಳಿಂದ ಶಾಸಕಿಯಾಗಿಲ್ಲ. ಪರಿಶಿಷ್ಟ ಪಂಗಡ ಮಹಿಳೆಯ ಪ್ರಾತಿನಿಧ್ಯತೆ ವಿಧಾನಸಭೆಯಲ್ಲಿ ಶೂನ್ಯವಾಗಿದೆ. ಪರಿಶಿಷ್ಟ ಪಂಗಡ ಕುಟುಂಬಗಳು ಪುರುಷಪ್ರಧಾನವಾಗಿರುವುದರಿಂದ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ನಿರ್ಲಕ್ಷಿಸಿರುವಂತೆ ರಾಜಕೀಯದಲ್ಲೂ ಮಹಿಳೆಯರು ಅಲಕ್ಷ್ಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಲೋಕಸಭೆ ಮತ್ತು ರಾಜ್ಯವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ವಿಧೇಯಕದಲ್ಲಿ ಸ್ಥಳೀಯ ಸರ್ಕಾರಗಳಲ್ಲಿರುವಂತೆ ಮೀಸಲಾತಿಯನ್ನು ಕಲ್ಪಿಸಬೇಕಾಗಿದೆ. ಮುಂಬರುವ ಸಂಸತ್ತಿನ ಅಧಿವೇಶನದಲ್ಲಿಯಾದರೂ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದು ಜಾರಿಗೆ ತರುವ ಮೂಲಕ ಶಾಸನಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಅವಕಾಶ ಕಲ್ಪಿಸಕೊಡಬೇಕಾಗುತ್ತದೆ.

**ಸಲಹೆಗಳು**

ಸಂಶೋಧನೆಯನ್ನು ಪೂರೈಸಿದ ನಂತರ ಕೆಲವು ಸಲಹೆಗಳನ್ನು ಸಹ ನೀಡಲಾಗಿದೆ, ಆ ಸಲಹೆಗಳು ಇಂತಿವೆ.

- ಸಮುದಾಯದ ಹಿತ ಮತ್ತು ಏಳಿಗೆ ಕುರಿತಂತೆ ಪಕ್ಷ ಬೇಧ ಮರೆತು ಪರಿಶಿಷ್ಟ ಪಂಗಡದ ರಾಜಕೀಯ ನಾಯಕರೆಲ್ಲರೂ ಒಂದೇ ವೇದಿಕೆಯಡಿ ಬೆರೆತು ಹೋರಾಟ ಮಾಡಬೇಕು.
- ರಾಜಕೀಯ ನಾಯಕರು ಪಕ್ಷಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಾಮಾಜಿಕ ಸೇವೆ ಮಾಡಬೇಕು
- ಎಲ್ಲಾ ರಾಜಕೀಯ ಪಕ್ಷಗಳು ಸಮುದಾಯದ ಯುವ ನಾಗರಿಕರಿಗೆ ಸ್ಪರ್ಧೆಗೆ ಅವಕಾಶ ನೀಡಬೇಕು.
- ಮೇಲ್ವರ್ಗದವರ ಶೋಷಣೆಯನ್ನು ಖಂಡಿಸಬೇಕು.
- ಪರಿಶಿಷ್ಟ ಪಂಗಡ ಸದಸ್ಯರು ಸಾಮಾನ್ಯ ಕ್ಷೇತ್ರಗಳಲ್ಲಿ ಗೆಲ್ಲಲು ಪ್ರಯತ್ನಿಸಬೇಕು.
- ಪರಿಶಿಷ್ಟ ಪಂಗಡ ಮಹಿಳೆಯರಿಗೆ ವಿಧಾನಸಭೆಯ ಚುನಾವಣೆಗಳಲ್ಲಿ ಸ್ಪರ್ಧಿಸಲು ಉತ್ತೇಜನ ನೀಡಬೇಕು.

- ಪರಿಶಿಷ್ಟ ಪಂಗಡ ಸದಸ್ಯರು ಅಧಿವೇಶನಗಳಲ್ಲಿ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸಬೇಕು.
- ಮತದಾರರು ಯಾವುದೇ ಆಸೆ ಅಮೀಷೆಗಳಿಗೆ ಒಳಗಾಗದೆ ಕ್ಷೇತ್ರದ ಅಭಿವೃದ್ಧಿಯನ್ನ ದೃಷ್ಠಿಯಲ್ಲಿಟ್ಟುಕೊಂಡು ಉತ್ತಮ ಅಭ್ಯರ್ಥಿಗಳನ್ನ ಆಯ್ಕೆಮಾಡಬೇಕು.
- ಕಡ್ಡಾಯ ಮತದಾನ ಮಾಡುವುದಕ್ಕೆ ಕಾನೂನು ರಚಿಸಬೇಕು.
- ಚುನಾವಣಾ ಪೂರ್ವದಲ್ಲಿ ಅಥವಾ ಸಮಯದಲ್ಲಿ ಮತದಾರರಿಗೆ ತರಬೇತಿ ನೀಡಬೇಕು.
- ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿ ಅಥವಾ ಮತದಾರ ಯಾವುದೇ ಆಮೀಷೆಗಳನ್ನು ನೀಡಿದಲ್ಲಿ ಅಥವಾ ತೆಗೆದುಕೊಂಡಲ್ಲಿ ಅಂತವರಿಗೆ ಮುಂದಿನ ದಿನಗಳಲ್ಲಿ ಸರ್ಕಾರದಿಂದ ನೀಡುವ ಸೌಲಭ್ಯಗಳನ್ನು ನಿಲ್ಲಿಸಬೇಕು.

ಒಟ್ಟಾರೆ ಹೇಳುವುದಾದರೆ ಲೋಕಸಭೆಯಲ್ಲಿ 84+47 ಮತ್ತು ಕರ್ನಾಟಕ ರಾಜ್ಯ ವಿಧಾನಸಭೆಯಲ್ಲಿ 36+15 ಮೀಸಲು ಕ್ಷೇತ್ರಗಳಿದ್ದರೂ ಯಾವ ಒಬ್ಬ ಪರಿಶಿಷ್ಟರು ಪ್ರಧಾನಮಂತ್ರಿ ಹಾಗೂ ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆ ಅಲಂಕರಿಸಲು ಜಾತಿ ರಾಜಕೀಯದಿಂದ ಸಾಧ್ಯವಾಗಲಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಭಾರತದ ರಾಜಕಾರಣ ಪರಿಶಿಷ್ಟ ಪ್ರಧಾನಮಂತ್ರಿಯನ್ನು ಮತ್ತು ಕರ್ನಾಟಕದಲ್ಲಿ ಪರಿಶಿಷ್ಟ ಮುಖ್ಯಮಂತ್ರಿಯನ್ನು ಹೊಂದುವಂತಹ ಪ್ರಜಾಪ್ರಭುತ್ವವನ್ನು ಕಟ್ಟಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಸಮಾಜದಲ್ಲಿ ಒಳಗೊಳ್ಳುವಿಕೆಯ ರಾಜಕಾರಣ ಹೆಚ್ಚಿನ ರೀತಿಯಲ್ಲಿ ನಿರ್ಮಾಣವಾಗಬೇಕಿದೆ. ಆದ್ದರಿಂದ ಮತದಾರ ಮತ್ತು ನಾಯಕರ ರಾಜಕೀಯ ಸಂಸ್ಕೃತಿ ಈ ನಿಟ್ಟಿನಲ್ಲಿ ರಚನೆಗೊಳ್ಳುವ ಅವಶ್ಯಕತೆ ಭಾರತಕ್ಕೆ ಅತಿ ಅಗತ್ಯವಾಗಿ ಬೇಕಾಗಿದೆ ಎನ್ನಬಹುದು.

## ಪರಾಮರ್ಶನ ಗ್ರಂಥಗಳು


- ಕರ್ನಾಟಕ ಸರ್ಕಾರ, *ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು,* ಸಂಪುಟ 9(ಭಾಗ–2), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1945.
- ಪ್ರೊ. ಮಹೇಶ, *ಮೀಸಲಾತಿ ಮತ್ತು ಭವಿಷ್ಯದ ಪಥಗಳು,* ವಿಮೋಚನಾ ಪ್ರಕಾಶನ, ಚಿತ್ರದುರ್ಗ, 2003. ಪು. ಸಂ. 72.
- ಡಾ. ವಿರೂಪಾಕ್ಷಿ ಪೂಜಾರಹಳ್ಳಿ, *ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008. ಪು.ಸಂ. 204.
- ಮೊಗಳ್ಳಿ ಗಣೇಶ್, *ಆಧುನಿಕತೆ ಬೆನ್ನು ಹತ್ತಿದ ದಲಿತರು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ , ಹಂಪಿ, 2006.
- ಪೋತೆ ಹೆಚ್.ಟಿ. ಮತ್ತು ಜಗನ್ನಾಥ ಸಿಂಧೆ, *ಮೀಸಲಾತಿಯ ಸಮಸ್ಯೆ: ಸವಾಲುಗಳು, ತಿಪ್ಪಣಂಬು ಪ್ರಕಾಶನ,* ಗುಲ್ಬರ್ಗಾ, 2006. ಪು. ಸಂ. 128.
- ರಾಜಶೇಖರ್ ಹೆಚ್.ಎಂ, *ಭಾರತ ಸರ್ಕಾರ* ಮತ್ತು *ರಾಜಕೀಯ,* ಕಿರಣ್ ಪ್ರಕಾಶನ, ಮೈಸೂರು, 2013. ಪು. ಸಂ. 485–487.
- ಡಾ. ಚಂದ್ರಶೇಖರ್ ಟಿ.ಆರ್, *ಅಭಿವೃದ್ಧಿ* ಮತ್ತು *ಸಾಮಾಜಿಕ ನ್ಯಾಯ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.
- ಹಣಮಂತ್ರಾಯ ದೊಡ್ಡಮನಿ, *ದೇವರಾಜ ಅರಸು* ಮತ್ತು *ಕರ್ನಾಟಕ ರಾಜಕಾರಣಿ,* ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2011.
- ಮಿಲ್ಲರ್ ಡೇವಿಡ್, *ದಿ ಐಡಿಯಾಲಾಜಿಕಲ್ ಬ್ಯಾಗ್ರೌಂಡ್ಸ್ ಟು ಕನ್ಸೆಪ್ಷನ್ಸ್ ಆಫ್ ಸೋಶಿಯಲ್ ಜಸ್ಟೀಸ್,* ಪೊಲಿಟಿಕಲ್ ಸ್ಟಡೀಸ್, ವಾಲ್ಯೂಂ – 22 ನಂ: 4 ಪು.ಸಂ. 1–19.
- ಗುಲ್‌ಜಾರಿಲಾಲ್ ನಂದಾ, *ಎಕನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಜಸ್ಟೀಸ್,* ಯೋಜನಾ ವಾಲ್ಯೂಂ–9 ಮಾರ್ಚ್ 14, 1965. ಪು.ಸಂ. 5–7.

- ಶರ್ಮಾ ಬಿ.ಡಿ., *ಸೋಶಿಯಲ್ ಜಸ್ಟೀಸ್ ರಿಯಾಲಿಟಿ ಬ್ಲಾಸ್ಟ್ ಮಿಥ್: ಕಂಡಿಶನ್ ಆಫ್ ಎಸ್.ಸಿ. ಆ್ಯಂಡ್ ಎಸ್.ಟಿ. ಡಿ ಟರಿಯೋರ್ಟ್ಸ್ ಫರದರ್ ಇನ್ ಈಕ್ವಾಲಿಟಿ ಇನ್ ಸೊಸೈಟಿ ಗ್ರೋವಿಂಗ್ ಪಾಸ್ಟ್*, ಕುರುಕ್ಷೇತ್ರ, ವಾಲ್ಯೂಂ–39, ನಂ: 1 ಅಕ್ಟೋಬರ್ 1990. ಪು.ಸಂ. 47–68.
- ಮಂಜಣ್ಣ ಎಂ., *ಅಂಬೇಡ್ಕರ್ ಮತ್ತು ಸ್ವಾತಂತ್ರ್ಯೋತ್ತರ ಭಾರತ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011. ಪು.ಸಂ. 10–11.
- ಕರ್ನಾಟಕ ವಿಧಾನಸಭೆ, *14ನೇ ವಿಧಾನಸಭಾ ಸದಸ್ಯರ ಸಂಕ್ಷಿಪ್ತ ವ್ಯಕ್ತಿ ಪರಿಚಯ*, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಬೆಂಗಳೂರು, 2015. ಪು. ಸಂ.17ರಿಂದ 330.
- ಡಾ. ದುರುಗಪ್ಪ ಎಮ್. ಕೆ., *ವಿಜಯನಗರೋತ್ತರಕಾಲೀನ ಬೇಡ ಜನಾಂಗ: ಚಾರಿತ್ರಿಕ ಅಧ್ಯಯನ*, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, 2010. ಪು.ಸಂ. 192.
- ಪ್ರೊ. ಲಕ್ಕಪ್ಪಗೌಡ ಎಚ್. ಜೆ., *ಕರ್ನಾಟಕ ಬುಡಕಟ್ಟುಗಳು,* ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು, 1998.
- ಶ್ರೀ ಹನುಮಂತಪ್ಪ ತೆ., *ವಿಧಾನಮಂಡಲದ ಇತಿಹಾಸ*, ಮೈಸೂರು ಪ್ರಜಾಪ್ರತಿನಿಧಿ ಸಭೆ, ಸಂಪುಟ 2, ಭಾಗ –1, ಕರ್ನಾಟಕ ವಿಧಾನಸಭಾ ಸಚಿವಾಲಯ, ಬೆಂಗಳೂರು, 2001.
- ಶ್ರೀ ಹನುಮಂತಪ್ಪ ತೆ., *ವಿಧಾನಮಂಡಲದ ಇತಿಹಾಸ,* ಮೈಸೂರು ಪ್ರಜಾಪ್ರತಿನಿಧಿ ಸಭೆ, ಸಂಪುಟ 2, ಭಾಗ –2, ಕರ್ನಾಟಕ ವಿಧಾನಸಭಾ ಸಚಿವಾಲಯ, ಬೆಂಗಳೂರು, 2001.
- ಡಾ. ವಿರೂಪಾಕ್ಷಿ ಪೂಜಾರಹಳ್ಳಿ, *ಬೇಟೆ ಮತ್ತು ಬೇಡರು*, ಚಿನ್ನಹಗರಿ ಪ್ರಕಾಶನ, ಕೆ. ಬಿ. ಹಟ್ಟಿ. 2007. ಪು. ಸಂ. 264.
- ಕರ್ನಾಟಕ ಸರ್ಕಾರ, *ಕರ್ನಾಟಕ ಕೈಪಿಡಿ 2012*, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2012. ಪು.ಸಂ. 141–157.
- ಕರ್ನಾಟಕ ಸರ್ಕಾರ, *ಕರ್ನಾಟಕ ಆರ್ಥಿಕ ಸಮೀಕ್ಷೆ 2013–14,* ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, 2014. ಪು.ಸಂ. 743.
- ಡಾ. ಕೇಶವನ್ ಪ್ರಸಾದ್ ಕೆ. ಮರಟ್ಟಿ, *ಬುಡಕಟ್ಟು ಅಧ್ಯಯನ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂಪುಟ 6, ಸಂಚಿಕೆ 1, ಜನವರಿ–ಜೂನ್, 2009. ಪು.ಸಂ. 57ರಿಂದ 60.

- ಮೊಗಳ್ಳಿ ಗಣೇಶ. *ದಲಿತ ಚಿಂತನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
- ಕೃಷ್ಣಮೂರ್ತಿ ಚಮರಂ, *ಮೀಸಲಾತಿ ಚಳುವಳಿ ಇತಿಹಾಸ ಮತ್ತು ಭವಿಷ್ಯ*, ಜಸ್ಟೀಸ್ ಪ್ರಕಾಶನ, ಮೈಸೂರು, 2003.
- ಜವರಯ್ಯ ಮ.ನ., *ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ*, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 1996.
- ವಿರೂಪಾಕ್ಷ ಪೂಜಾರಹಳ್ಳಿ(ಸಂ). *ದಲಿತರು ಮತ್ತು ಚರಿತ್ರೆ*, *ಪ್ರಸಾರಾಂಗ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.
- ಪಿ.ಎಸ್. ಗಂಗಾಧರ್, *ಭಾರತ ಸಂವಿಧಾನ ಮತ್ತು ರಾಜಕೀಯ*, ಚೈತ್ರ ಪ್ರಕಾಶನ, ಬೆಂಗಳೂರು, 2010.
- ಡಾ. ಕೆ.ಎಂ. ಸುರೇಶ್, *ಭಾರತ ಸಂವಿಧಾನ*, ಸ್ಪರ್ಧಾ ವಿಜೇತ ಪ್ರಕಾಶನ, ಬೆಂಗಳೂರು, 3ನೇ ಆವೃತ್ತಿ–2011.
- ಮಹದೇವಯ್ಯ ಪಿ. *ದಲಿತರು ಮತ್ತು ಪರ್ಯಾಯ ರಾಜಕಾರಣ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.
- ಸೋಮಶೇಖರ್ ಜೆ. ಮತ್ತು ನರೇಂದ್ರಕುಮಾರ್ ಎಸ್.(ಸಂ). *ಅಭಿಮುಖಿ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2005.
- ಚಿನ್ನಸ್ವಾಮಿ ಎನ್. ಸೋಸಲೆ, *ಭಾರತೀಯ ಸಮಾಜ ಮತ್ತು ದಲಿತರು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
- ಸಂಡೇಕೆರೆ ಶಿವಣ್ಣ, *ಅಭಿವೃದ್ಧಿಯ ಕನಸುಗಾರ*, ಶ್ರೀ ಜಯಲಕ್ಷ್ಮೀ ಪ್ರಿಂಟರ್ಸ್, ಹಿರಿಯೂರು, 2017.
- ಸುಜ್ಞಾನಮೂರ್ತಿ ಬಿ., *ದಲಿತ ರಾಜಕೀಯ ಒಂದು ಸಚಿತ್ರ ದರ್ಶನ*, ಲಡಾಯಿ ಪ್ರಕಾಶನ, ಗದಗ, 2016.
- ಡಾ. ಸಣ್ಣರಾಮ, *ಡಾ. ಅಂಬೇಡ್ಕರ್ ಮತ್ತು ಮೀಸಲಾತಿ*, ಪ್ರೀತಂ ಪ್ರಕಾಶನ, ಶಿವಮೊಗ್ಗ, 2008.

- ಕನ್ನಡ ವಿಶ್ವಕೋಶ, ಸಂಪುಟ ಏಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಯಲ, ಮೈಸೂರು, 1974.
- ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು, ಮೇ 2018.
- Ahir. D.C., *Social Problem in India*, Rawat Publications, Jaipur, 1992.
- Aiyar Alladi Krishnaswami, *The Constitution and Fundamental Rights, the Srinivasa Sastri Institution of Politics,* Madras, 1955.
- Andre Beteille, *Caste, Class and Power: Changing Patterns of Stratification in a Tanjore Village,* Oxford University Press, Bombay, 1966.
- Austin Granville, *The Indian Constitution Cornerstone of a Nation,* Oxford University Press, Bombay, 1975.
- B Kar, *Role Perception of scheduled caste and Tribal Legislators in post Emergency Orissa Legislature,* Ph D thesis submitted to Berhampur university (Unpublished), 1979.
- Bailey F.G., *Political in Orissa- The Party in power,* Economic and Political Weekly, vol. 9,(17, October), 1959.
- Banerjee, *Some Aspects of the Indian Constitution* , World Press, Culcutta, 1962.
- Barthwal C.P., *Representation of the scheduled caste in parliament and state Legislators,* Economic and Political Weekly September 6, 1969.
- Basu Durga Das, *Introduction to the Constitution of Indi ($20^{th}$ Edition),* Lexis Nexis Butterworths, Wadhwa. Nagpur, 2009.
- Bhatia K.L., *Dr. Ambedkar–Social justice and the Constitution*, Deep and Deep publications, New Delhi, 1994.
- Bhatt Rakesh, *Dictionary of political Science,* Mohit Publications, New Delhi, 2005.
- Bhatta Anil, *Caste, Class and Politics, An Empirical Profile of Social Stratification in Modern India,* Manohar Book Service, Delhi, 1975.
- *Census of India Primary census Abstract Data Highlights Karnataka Series 30,* Directorate of Census operations Karnataka, 2011. Pp. - 45.

- Chartterji Rekha Hari(ed), *Politics India*, The State Society Interface South Asian Publication, New Delhi, 2001.
- Chaube S.K. and Kaushik Susheel(ed), *India Democracy at the Turn of Century*, Kanishka publisher, New Delhi, 1999.
- Chowdary N.K., *Assembly Elections (1994-95) An Analysis and results*, Shipra Publicatiopns, Delhi, 1995.
- Dalal Suresh, *Dr. Ambedkar Life and Mission*, University of madras, 1989.
- Dayadhar Jha**,** *State Legislature in India: Legislature in Indian system*, Avinav publication, New Delhi, 1947.
- Friedrich Carl. J., *Constitutional Government and Democracy*, Oxford and IBH Publishing House, Calcutta, 1966.
- Gerraint Parry (ed.), *Participation in Politics, Manchester*, University Press Row Man and Little Field, 1972.
- Ghoshal U.N., *A History of Indian Political Ideas*, University Press, Bombay, 1959.
- Goswamy B., *Parliament and Administration*, Rawat Publications, New Delhi, 2002.
- *Government of India Changing Face of Electoral India: Delimitation 2008*, Delimitation Commission of India, 2008, Vol-1.
- Goyal O.P., *Indian Political System, Wasani for Machmillion India Pvt India Ltd*., New Delhi, 1985.
- Hingar Asha, *Leadership Style and Job Satisfaction*, Print Well Publisher, Jaipur, 1981.
- Jayal Niraja Gopal and pai Sudha (ed), *Democratic Governance in India, Challenges of Poverty Development and Identity*, New Delhi, 2001.
- Jena.B.B and Baral J.K.(ed), *Election Politics and Voting Behavior in India*, Discovery publishing House, New Delhi, 1989.
- Johari J.C., *Indian Government and Politics (5th Edition),* Vishal Publications, Delhi, 1982.

- Koli Atul (ed), *India's Democracy An Analysis of Changing State, Society, Relation*, Princeton University Press, New Delhi, 2008.
- Kothari C.R: *Research Methodology – Methods and Techniques*, K.K. Gupta for New Age International (P) Ltd. New Delhi, 2003.
- Mackenziehain, *Political Concepts*, Edinburg University Press, 2005.
- Mahashwari, *Political Development in India*, Concept Publishing Company, Publications, Jaipur, 1984.
- Mohapatra M.K., *The Scheduled caste and Tribal Elites : An Empirical Exploration of the Attitudes, Ascent and Role Perceptions in Indian State*, International Behviour Scientist, vol.4 No. 4, December, 1973.
- Mohapatra M.K., *Political Socialization of Legislators in Orissa: An Empirical study of 1967 Assembly,* Journal of Constitutional and Parliamentary Studies, January-March, 1971.
- Pand A.N., *Political participation of Tribals,* Abhijeet publications, Delhi, 2010, Pag.No 22-23.
- Partha Chatterjee. (ed), *State and Political in India*, Oxford University Press, New Delhi, 1977.
- Puri, *Legislative Elites in An Indian State: A case study of Rajasthan*, Abhinav publications, New Delhi, 1978.
- Raj Hans, *Indian Government and Politics*, Surjeet Publications, New Delhi, 1983.
- Ralham and Lambat, *Political Sociology,* Commonwealth Publications, New Delhi, 2006.
- Rao K.V, *Political in Orissa: Social Ecology and Constitutional Compulsions*, Indian Journal of Political Science, 1965. vol.26.
- Rawls J.A. *Theory of justice*, Oxford University Press, London, 2002.
- Renuka Pamecha, Elite *in a Tribal Society*, Printwell publishers, Jipur, 1985.
- Sachidananda, *The Harijan Elite*, Thomsons Press, Faridabad, 1977.

- Sahu N.K. *Electoral Politics in Federal India, M.P. Local area Development Scheme*, Gain Publishing House, New Delhi, 2006.
- Saksena H.S. *Safeguards for Scheduled Castes and Scheduled Tribes*, Uppal Publishing House, New Delhi, 1981.
- Sastry K.R., *Social Background of Drivid Munnetra kazhagam DMK Legislative Elite,* unpublished Master's thesis, the university of New Brunswick, Federation (NB) Canada, 1978.
- Sharma K.L. (ed), *Caste and Class in India*, Rawat Publication, Jaipur, 2005.
- Sharma S.K and Usha, *Politics and Administration in India* Vol, Mittal Publication, New Delhi, 2008.
- Shashisekhar Jha, *Political Elite in Bihar*, Vora and co. Bombay, 1972.
- Shesh Ganesham. *Politics of Scheduled Castes and Scheduled Tribes, Vora andCo Bombay*
- *Spoberg Gideon Roger Nett. A Methodology for Social Research*. Rawat Publication, New Delhi, 1975.
- Srivastava S, *The pattern of political Leadership in Emerging Areas: A case study of Uttar Pradesh,* Mimeographed Ph.D Thesis, Banaras Hindu University, 1966.
- *Statistical Report on General Election, 2008 to the Legislative Assembly of Karnataka,* Election Commission of India New Delhi, 2008. Pp. -6.
- Statistical Report on General Election, 2013 To The Legislative Assembly of Karnataka, Election Commission of India New Delhi, 2013. Pp. - 6.
- Surjit Sinha, *Tribal Solitarity Movements in K. Suresh Singh (ed.) Tribal Situation in India,* Indian Institute of Advanced Studies, Simla, 1972.
- Tianjiah Shi, *Political Participation in Beijing,* Cambridge M.A. Harvard University Press, 2002.
- Varma S.P. *Modern Political Theory,* Vikas Publishing House, Delhi, 1988.

**ಇಲಾಖಾ ಕೈಪಿಡಿಗಳು**


- ಕರ್ನಾಟಕ ಸರ್ಕಾರ, *ಕರ್ನಾಟಕ ಕೈಪಿಡಿ 2012*, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2012. ಪು.ಸಂ. 141–157.
- ಕರ್ನಾಟಕ ವಿಧಾನಸಭೆ, *14ನೇ ವಿಧಾನಸಭಾ ಸದಸ್ಯರ ಸಂಕ್ಷಿಪ್ತ ವ್ಯಕ್ತಿ ಪರಿಚಯ,* ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಬೆಂಗಳೂರು, 2015. ಪು. ಸಂ.17ರಿಂದ 330.
- ಕರ್ನಾಟಕ ಸರ್ಕಾರ, *ಕರ್ನಾಟಕ ಆರ್ಥಿಕ ಸಮೀಕ್ಷೆ 2013–14*, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, 2014. ಪು.ಸಂ. 743.
- ಕರ್ನಾಟಕ ಸರ್ಕಾರ, *ಕರ್ನಾಟಕ ಆರ್ಥಿಕ ಸಮೀಕ್ಷೆ 2017–18*, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, 2018. ಪು.ಸಂ. 730.
- ಭಾರತದ ಜನಗಣತಿ 2011, ಕರ್ನಾಟಕ ಸರ್ಕಾರ.
- ಕರ್ನಾಟಕ ಸರ್ಕಾರ, *ಚಿತ್ರದುರ್ಗ ಅಂಕಿ–ಅಂಶಗಳ ನೋಟ 2017–18,* ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಕಛೇರಿ, ಚಿತ್ರದುರ್ಗ, 2018.
- ಕರ್ನಾಟಕ ಸರ್ಕಾರ, *ಕರ್ನಾಟಕ ಗ್ರಾಮ ಚರಿತ್ರೆ ಕೋಶ ಚಿತ್ರದುರ್ಗ*, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಾಯೋಜಿತ ಯೋಜನೆ.
- ಕರ್ನಾಟಕ ಮಾಹಿತಿ ಕೈಪಿಡಿ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು, ಕರ್ನಾಟಕ, 2012.
- Census of India 2011 Primary census Abstract Data Highlights Karnataka Series 30, Directorate of Census operations Karnataka, 2011. Pp. - 45.
- Chitradurga District. Census of India 2011: Directorate of Census operations, Karnataka.
- Constituent Assembly Debeats. Vol-9, 30 July 1949 to 1 st September 1949 Lokasabha Secretariat, New Delhi.
- Delimitation Report – 2008, New Delhi.
- Election Commission Report and Result from 1951 to 2018

- Karnataka Legislative Assembly Debates, from 2008 to 2018 Karnataka Legislature Secretariat, Bangalore.
- Mysore Legislative Assembly Debates, from 1951 to 1973 Government Press, Bangalore.
- Statistical Report on General Election, The Legislative Assembly Of Mysore, Election commission of India New Delhi, 1951. Pp. - 97 to 84.
- Statistical Report on General Election, The Legislative Assembly Of Mysore, Election commission of India New Delhi, 1957. Pp.- 97 to 98.
- Statistical Report on General Election, The Legislative Assembly of Mysore, Election commission of India New Delhi, 1962. Pp. - 105 to 106.
- Statistical Report on General Election, The Legislative Assembly of Mysore, Election commission of India New Delhi, 1967. Pp.- 55 to 56.
- Statistical Report on General Election, The Legislative Assembly of Mysore, Election commission of India New Delhi, 1972. Pp.- 54 to 55.
- Statistical Report on General Election, The Legislative Assembly of Karnataka, Election commission of India New Delhi, 1978. Pp.- 59 to 60.
- Statistical Report on General Election, The Legislative Assembly of Karnataka, Election commission of India New Delhi, 1983. Pp.- 60 to 61.
- Statistical Report on General Election, The Legislative Assembly of Karnataka, Election commission of India New Delhi, 1985. Pp.- 63 to 64.
- Statistical Report on General Election, The Legislative Assembly of Karnataka, Election commission of India New Delhi, 1989. Pp.- 251 to 252.
- Statistical Report on General Election, The Legislative Assembly of Karnataka, Election commission of India New Delhi, 1994. Pp.- 254 to 255.
- Statistical Report on General Election, The Legislative Assembly of Karnataka, Election commission of India New Delhi, 1999. Pp.- 249 to 250.
- Statistical Report on General Election, The Legislative Assembly of Karnataka, Election commission of India New Delhi, 2004. Pp - 256.
- Statistical Report on General Election, The Legislative Assembly of Karnataka, Election commission of India New Delhi, 2008. Pp - 116 to 117.

- Statistical Report on General Election, The Legislative Assembly of Karnataka, Election commission of India New Delhi, 2013. Pp.- 121 to 122.
- Statistical Report on General Election, The Legislative Assembly of Karnataka, Election commission of India New Delhi, 2018. Pp.- 59 to 60.


**ಪಿಎಚ್.ಡಿ. ಮಹಾಪ್ರಬಂಧಗಳು**


- ಬಂಡಿ ಎನ್.ಜಿ., *ಕರ್ನಾಟಕದಲ್ಲಿ ಕುರುಬ ಸಮುದಾಯದ ರಾಜಕೀಯ ಭಾಗವಹಿಸುವಿಕೆ: ಒಂದು ಅಧ್ಯಯನ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2017.
- ಚನ್ನಮಲ್ಲಪ್ಪ ಜುಬೀರ್, *ಗುಲ್ಬರ್ಗಾ ಜಿಲ್ಲೆಯ ಬುಡಕಟ್ಟು ರಾಜಕೀಯ ಅಧ್ಯಯನ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001.
- ಕಿರಣ್ ಎಂ., *ಕರ್ನಾಟಕದಲ್ಲಿ ಜಾತಿ ಮತ್ತು ರಾಜಕೀಯ ಕುರುಬ ಜನಾಂಗದ ರಾಜಕೀಯ ಸಂಚಲನ–ಕುರಿತು ಒಂದು ಅಧ್ಯಯನ,* ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2009.
- ಮಂಜುನಾಥ ಜೆ., *ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಆಡಳಿತ,* ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2007.
- ನುಚ್ಚಿ ಬಿ.ಎನ್., *ಬಿ.ಎಂ. ಪಾಟೀಲರ ರಾಜಕೀಯ ನಾಯಕತ್ವ: ಅವರ ರಾಜಕೀಯ ಕೊಡುಗೆಗಳ ಒಂದು ಚಿತ್ರಣ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2009.
- ಪ್ರದೀಪ್ ಕುಮಾರ್ ಜಿ.ಎಂ, *ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮತದಾರರ ವರ್ತನೆ : ಶಿವಮೊಗ್ಗ ಜಿಲ್ಲೆ ಒಂದು ಅಧ್ಯಯನ,* ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2016.
- ಶಶಿಕುಮಾರ್ ಡಿ.ಜೆ., *ರಾಜ್ಯ ರಾಜಕೀಯದಲ್ಲಿ ದಲಿತ ನಾಯಕರ ಪಾತ್ರ: ಬೇಲೂರು ಮತ್ತು ಮಳವಳ್ಳಿ ಮೀಸಲು ವಿಧಾನಸಭಾ ಕ್ಷೇತ್ರಗಳ ಒಂದು ಅಧ್ಯಯನ,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2011.
- ಸುರೇಶ್ ಎನ್. ಬಾರ್ಕಿ, *ಭಿನ್ನಮತ ರಾಜಕಾರಣ ಹಾಗೂ ಭಾರತದ ರಾಜಕೀಯ ಪಕ್ಷಗಳ ನಾಯಕತ್ವ: ಕರ್ನಾಟಕದಲ್ಲಿಯ ಜನತಾದಳದ ಒಂದು ಅಧ್ಯಯನ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2004.

- Roshni Kujur, *Legislative Participation of the Scheduled Tribe M.L.A.s in Orissa* (1999-2009), Sambalpur University, Jyotivihar. Orissa, 2014.
- Vijay kumar M Honakeri, *The Political Participation of Scheduled Casts and Scheduled Tribes in Panchayat Raj institutions: A Case Study of Dharawad District*, Karnataka university, Dharawad, 2004.

**Internet Source**

- http://www.kla.kar.nic.in/assembly/legislation/legislation.htm
- http://www.kla.kar.nic.in/assembly/member/members.htm
- http://www.kla.kar.nic.in/assembly/lh/lh.htm
- https://eci.gov.in/
- https://www.oneindia.com/india/karnataka-election-results-2018-full-list-of-winners-bjp-congress-jds-2696524.html
- http://www.elections.in/karnataka/assembly-constituencies/2013-election-results.html
- http://www.elections.in/karnataka/assembly-constituencies/2008-election-results.html
- http://www.elections.in/karnataka/assembly-constituencies/2013-election-results.html
- file:///D:/Ph%20D%20source/challakere%20Gram%20panchaythi%20list.pdf
- file:///D:/Ph%20D%20source/Gram%20Panchayaths%20_%20Molkalmur.pdf
- https://shodhganga.inflibnet.ac.in/

**JOURNALS AND PAPERS**


1. The Indian Journal Of Public Administration
2. Economic and Political weekly
3. The Journal of Social Political and Economic Studies
4. The Hindu
5. The Times of India
6. Indian Express
7. Deccan Herald
8. Vijaya Times
9. ಪ್ರಜಾವಾಣಿ
10. ಕನ್ನಡ ಪ್ರಭ
11. ವಿಜಯ ಕರ್ನಾಟಕ
12. ವಿಜಯ ವಾಣಿ
13. ಅಂಬೇಡ್ಕರ್ ವಾಯ್ಸ್
14. ದಲಿತ ವಾಯ್ಸ್
15. ಸಂವಾದ
16. ಯೋಜನಾ
17. ವಾಲ್ಮೀಕಿ ಧ್ವನಿ

## ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ

# ಪ್ರಶ್ನಾವಳಿ ನಮೂನೆ

**ವಿಷಯ: 13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡದ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ (ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ)**

**ಸಂಶೋಧಕ**

ಹರೀಶ್ ಕುಮಾರ್ ಬಿ.

ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

**ಸಂಶೋಧನ ಮಾರ್ಗದರ್ಶಕರು**

ಡಾ. ಮೋಹನ್ ದಾಸ್ ಕೆ.

ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

## ಪ್ರಶ್ನಾವಳಿ

### ವಿಷಯ: 13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡದ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ (ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ)

**ಹರೀಶ್ ಕುಮಾರ್ ಬಿ.** ಆದ ನಾನು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ, ಸಹಾಯಕ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು ಆದ **ಡಾ.ಮೋಹನ್ ದಾಸ್ ಕೆ** ಇವರ ಮಾರ್ಗದರ್ಶನದಲ್ಲಿ **13 ಮತ್ತು 14ನೇ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡದ ಸದಸ್ಯರ ಕಾರ್ಯನಿರ್ವಹಣೆಯ ಒಂದು ವಿಮರ್ಶಾತ್ಮಕ ಅಧ್ಯಯನ (ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ)** ಎಂಬ ವಿಷಯದ ಬಗ್ಗೆ ಪಿಹೆಚ್.ಡಿ. ಸಂಶೋಧನೆಯನ್ನು ಕೈಗೊಂಡಿರುತ್ತೇನೆ. ಆದುದರಿಂದ ದಯವಿಟ್ಟು ನೀವುಗಳು ನನ್ನ ಪ್ರಶ್ನೆಗಳಿಗೆ ಮುಕ್ತವಾಗಿ ನಿರ್ಭೀತ, ನಿಸ್ಸಂಕೋಚ ಹಾಗೂ ತೆರೆದ ಮನಸ್ಸಿನಿಂದ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ನೀಡಿದ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗುತ್ತದೆ. ಮತ್ತು ವಿಶ್ವವಿದ್ಯಾಲಯದ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲಾಗುತ್ತದೆ, ಆದ್ದರಿಂದ ತಾವುಗಳು ಸ್ಪಷ್ಟ, ಸತ್ಯ ಹಾಗೂ ನೇರ ಉತ್ತರಗಳನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಸಂಶೋಧಕರ ಸಹಿ** **ಸಂದರ್ಶಿತರ ಸಹಿ**

## ಅನುಬಂಧ–1

**ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಸಿದ್ದಪಡಿಸಿದ ಪ್ರಶ್ನಾವಳಿ.**

1) ಮಾಹಿತಿದಾರರ ಹೆಸರು:

2) ಲಿಂಗ: ಎ) ಗಂಡು ☐ ಬಿ) ಹೆಣ್ಣು ☐

3) ತಾಲ್ಲೂಕು:

4) ಗ್ರಾಮ:

5) ವಯಸ್ಸು: ಎ) 18 ರಿಂದ 35 ☐ ಬಿ) 36 ರಿಂದ 50 ☐
ಸಿ) 51 ರಿಂದ 65 ☐ ಡಿ) 66 ರಿಂದ 80 ☐
ಇ) 80 ಕ್ಕಿಂತ ಹೆಚ್ಚು ☐

6) ಧರ್ಮ: ಎ) ಹಿಂದೂ ☐ ಬಿ) ಮುಸ್ಲಿಂ ☐
ಸಿ) ಕ್ರೈಸ್ತರು ☐ ಡಿ) ಬೌದ್ದ ☐
ಇ) ಜೈನ್ ☐ ಎಫ್) ಸಿಕ್ ☐
ಜಿ) ಇತರೆ ☐

7) ಜಾತಿ: ಎ) ಎಸ್.ಸಿ ☐ ಬಿ) ಎಸ್.ಟಿ ☐
ಸಿ) ಓ.ಬಿ.ಸಿ ☐ ಡಿ) ಜಿ.ಎಮ್ ☐
ಇ) ಇತರೆ ☐

8) ಉಪ ಜಾತಿ:

9) ವಿದ್ಯಾರ್ಹತೆ: ಎ) ಅನಕ್ಷರಸ್ಥರು ☐ ಬಿ) ಅಕ್ಷರಸ್ಥರು ☐
ಸಿ) ಪ್ರಾಥಮಿಕ ☐ ಡಿ) ಮಾಧ್ಯಮಿಕ ☐
ಇ) ಪದವಿ ಪೂರ್ವ ☐ ಎಫ್) ಪದವಿ ☐
ಜಿ) ವೃತ್ತಿಪರ ಪದವಿ ☐
ಹೆಚ್) ಸ್ನಾತ್ತಕೋತ್ತರ ಪದವಿ ☐
ಐ) ಇತರೆ ☐

10) ಉದ್ಯೋಗ:

ಎ) ಕೂಲಿ ☐ ಬಿ) ವ್ಯವಸಾಯ ☐

ಸಿ) ಗೃಹಿಣಿ ☐ ಡಿ) ವ್ಯಾಪಾರ ☐

ಇ) ಸರ್ಕಾರಿ ನೌಕರಿ ☐ ಎಫ್) ಖಾಸಗಿ ನೌಕರಿ ☐

ಜಿ) ಅರೆ ಸರ್ಕಾರಿ ನೌಕರಿ ☐ ಹೆಚ್) ರಾಜಕೀಯ ☐

ಐ) ಇತರೆ ☐

11) ವಾರ್ಷಿಕ ವರಮಾನ:

ಎ) 5,000 ರಿಂದ 10,000 ☐ ಬಿ) 11,000 ರಿಂದ 20,000 ☐

ಸಿ) 21,000 ರಿಂದ 30,000 ☐ ಡಿ) 31,000 ರಿಂದ 40,000 ☐

ಇ) 41,000 ರಿಂದ 50,000 ☐ ಎಫ್) 50,000 ಕ್ಕಿಂತ ಹೆಚ್ಚು ☐

12) ಮತದಾನದ ಬಗ್ಗೆ (ಓಟಿನ ಬಗ್ಗೆ) ನಿಮ್ಮ ಅಭಿಪ್ರಾಯವೇನು?

ಎ) ಮತದಾನ ಮಾಡಲೇಬೇಕು ಅನಿಸುತ್ತದೆ. ☐

ಬಿ) ಮತದಾನ ಮಾಡಬಾರದೆಂದು ಅನಿಸುತ್ತದೆ. ☐

ಸಿ) ಮತದಾನ ಮೌಲ್ಯಯುತ ಮತ್ತು ಅದು ನನ್ನ ಹಕ್ಕು ☐

ಡಿ) ಮತದಾನದಿಂದ ನನಗೆ ಏನು ಪ್ರಯೋಜನವಿಲ್ಲ. ☐

13) ನೀವು ಯಾವ ಯಾವ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದೀರಾ?

ಎ) ವಿಧಾನಸಭೆ ☐ ಬಿ) ಲೋಕಸಭೆ ☐

ಸಿ) ಪಂಚಾಯಿತಿಗಳು/ಮುನ್ಸಿಪಾಲಿಟಿಗಳು ☐ ಡಿ) ಎಲ್ಲವೂ ☐

ಎಫ್) ಯಾವುದು ಇಲ್ಲ ☐

14) ಚುನಾವಣೆಗಳಲ್ಲಿ ಮತಚಲಾಯಿಸಲು ತಮಗೆ ಪ್ರಭಾವ ಬೀರುವ ಅಂಶಗಳಾವುವು?

ಎ) ಕುಟುಂಬ ಸದಸ್ಯರು ☐ ಬಿ) ಸ್ಥಳೀಯ ನಾಯಕರು ☐

ಸಿ) ಸ್ವ–ನಿರ್ಣಯ ☐ ಡಿ) ಜಾತಿ ಸಂಘಟನೆ ☐

15) ನೀವು ರಾಜಕೀಯ ವಿಷಯಗಳ ಬಗ್ಗೆ ಎಲ್ಲಿಂದ ಮಾಹಿತಿ ಪಡೆಯುತ್ತೀರಾ?

ಎ) ದಿನ ಪತ್ರಿಕೆ ☐ ಬಿ) ಟಿ.ವಿ, ರೇಡಿಯೋ ☐

ಸಿ) ಸಾರ್ವಜನಿಕ ಸಭೆಗಳು ☐ ಡಿ) ಸ್ಥಳೀಯ ನಾಯಕರು ☐

ಇ) ಜಾತಿ ಮುಖಂಡರು ☐

16) ಮತದಾರರಿಗೆ ಮತ ಚಲಾಯಿಸಲು ಇರುವ ಅರ್ಹತೆಗಳ ಜೊತೆಗೆ ಇನ್ನಿತರ ಅರ್ಹತೆಗಳಿರಬೇಕೆ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದಾದರೆ ಯಾವ ಅರ್ಹತೆಗಳಿರಬೇಕು?

ಎ) ಶಿಕ್ಷಣ ☐ ಬಿ) ಪ್ರಜಾಪ್ರಭುತ್ವ ಚಿಂತನೆಗಳ ತರಬೇತಿ ☐

ಸಿ) ತೆರಿಗೆ ಪಾವತಿದಾರ ☐ ಡಿ) ವಯೋಮಿತಿ ನಿಗಧಿ ☐

17) ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಯಾವುದಾದರೂ ಸೂಚಿತ ಅರ್ಹತೆ ಅವಶ್ಯಕತೆ ಇದೆಯಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದರೆ ಯಾವ ಬಗೆಯದು

ಎ) ಶಿಕ್ಷಣ ☐ ಬಿ) ಸಮಾಜ ಸೇವೆ ☐

ಸಿ) ಚಳುವಳಿಗಾರರು ☐

ಡಿ) ರಾಜಕೀಯ ತರಬೇತಿಯಂತಹ ಕೋರ್ಸುಗಳಲ್ಲಿ ತೇರ್ಗಡೆಯಾದವರು.

18) ನೀವು ಯಾವುದರ ಆಧಾರದ ಮೇಲೆ ಮತ ನೀಡುವುದನ್ನು ನಿರ್ಧರಿಸುತ್ತೀರಾ?

ಎ) ವ್ಯಕ್ತಿಯ ವ್ಯಕ್ತಿತ್ವ ☐ ಬಿ) ಪಕ್ಷದ ಕಾರ್ಯಕ್ರಮ ನೋಡಿ ☐

ಸಿ) ಆಸೆ ಆಮಿಷಗಳಿಗೆ ಒಳಗಾಗಿ ☐ ಡಿ) ಕೌಟುಂಬಿಕ ಪರಂಪರೆಗೆ ಅನುಗುಣವಾಗಿ ☐

19) ನೀವು ಮತ ಚಲಾಯಿಸುವಾಗ ಯಾವ ಅಂಶಗಳಿಗೆ ಪ್ರಮುಖ ಆದ್ಯತೆ ನೀಡುತ್ತೀರಿ?

ಎ) ಅದು ನನ್ನ ಹಕ್ಕು ☐ ಬಿ) ಜಾತಿ ☐

ಸಿ) ರಾಜಕೀಯ ಪಕ್ಷ ☐ ಡಿ) ನಾಯಕ ವ್ಯಕ್ತಿತ್ವ ☐

ಇ) ಮದ್ಯಪಾನ / ಇತರೆ ಆಕರ್ಷಣೆ ☐

20) ನೀವು ಮೊದಲೇ ನಿರ್ಧರಿಸಿ ಮತಗಟ್ಟೆಯಲ್ಲಿ ಮತ ಚಲಾಯಿಸಲು ಬಂದಾಗ ನಿಮ್ಮ ನಿರ್ಧಾರದಲ್ಲಿ ಬದಲಾವಣೆ ಯಾಗುತ್ತದೆಯೇ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದಾದರೆ ಯಾವ ರೀತಿ,

ಎ) ಚುನಾವಣೆ ಪ್ರಚಾರದ ಸ್ವರೂಪ ☐ ಬಿ) ಗೊಂದಲದ ನಿರ್ಧಾರ ☐

ಸಿ) ಮಾಧ್ಯಮಗಳ ಪ್ರಭಾವ ☐ ಡಿ) ಮೌಲ್ಯಾಧಾರಿತ ಮತದಾನ ನಡವಳಿಕೆ ☐

21) ಸಾಮಾನ್ಯ ವಿಧಾನಸಭಾ ಕ್ಷೇತ್ರಕ್ಕೂ ಮತ್ತು ಮೀಸಲು ವಿಧಾನಸಭಾ ಕ್ಷೇತ್ರಕ್ಕೂ ಏನಾದರೂ ವ್ಯತ್ಯಾಸ ಇದೆಯಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದರೆ ಯಾವ ರೀತಿಯ ವ್ಯತ್ಯಾಸ ವಿದೆ

ಎ) ರಾಜಕೀಯ ನಾಗರೀಕತೆ ☐ ಬಿ) ರಾಜಕೀಯ ನಾಯಕತ್ವದಲ್ಲಿ ☐

ಸಿ) ಜನತೆಯ ಮನೋಭಾವನೆಯಲ್ಲಿ ☐ ಡಿ) ರಾಜಕೀಯದಲ್ಲಿ ಜನತೆಯ ಭಾಗವಹಿಸುವಿಕೆ ☐

22) ಈ ಮೀಸಲು ವಿಧಾನಸಭಾ ಕ್ಷೇತ್ರವು ಜಿಲ್ಲೆಯ ಇತರ ಸಾಮಾನ್ಯ ವಿಧಾನಸಭಾ ಕ್ಷೇತ್ರದಂತೆ ಅಭಿವೃದ್ಧಿ ಹೊಂದಿದೆಯಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದಾದರೆ ಯಾವುದರಲ್ಲಿ,

ಎ) ಕ್ಷೇತ್ರದ ಸಮಗ್ರ ಅಭಿವೃದ್ಧಿ ☐ ಬಿ) ಸಾಮಾಜಿಕ ಅಭಿವೃದ್ಧಿ ☐

ಸಿ) ಆರ್ಥಿಕ ಅಭಿವೃದ್ಧಿ ☐ ಡಿ) ಶೈಕ್ಷಣಿಕ ಅಭಿವೃದ್ಧಿ ☐

23) ನಿಮ್ಮ ದೃಷ್ಟಿಯಲ್ಲಿ ನಾಯಕರು ಎಂದರೆ ಯಾರು ?

ಎ) ರಾಜಕೀಯದವರು ☐ ಬಿ) ಚಳುವಳಿಗಳ ಮುಂದಾಳು ☐

ಸಿ) ಜಾತಿ ಅಥವಾ ಜನಾಂಗದ ಮುಂದಾಳು ☐ ಡಿ) ಸಮಾಜ ಸೇವಕ ☐

24) ನಿಮ್ಮ ದೃಷ್ಟಿಯಲ್ಲಿ ನಾಯಕತ್ವ ಹೇಗಿರಬೇಕು ?

ಎ) ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಟಿಬದ್ಧವಾಗಿರಬೇಕು. ☐

ಬಿ) ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಹೊಂದಿರಬೇಕು. ☐

ಸಿ) ಮತದಾರರ ಜೊತೆ ಮುಕ್ತವಾಗಿ ಬೆರೆಯುವಂತಿರಬೇಕು. ☐

ಡಿ) ಪ್ರಾಮಾಣಿಕ ನಾಯಕತ್ವದ ವ್ಯಕ್ತಿಯಾಗಿರಬೇಕು. ☐

25) ಚಳ್ಳಕೆರೆಯಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಭಾವಿ ಶಾಸಕರು ಯಾರು?

ಎ) ಟಿ ರಘುಮುರ್ತಿ ☐ ಬಿ) ತಿಪ್ಪೇಸ್ವಾಮಿ ☐

ಸಿ) ಯಾರೂ ಅಲ್ಲ ☐

26) ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರಭಾವಿ ಶಾಸಕರು ಯಾರು?

ಎ) ಎನ್.ವೈ ಗೋಪಾಲಕೃಷ್ಣ ☐ ಬಿ) ಎಸ್ ತಿಪ್ಪೇಸ್ವಾಮಿ ☐

ಸಿ) ಯಾರೂ ಅಲ್ಲ ☐

## ಪರಿಶಿಷ್ಟ ಪಂಗಡೇತರ ಮತದಾರರಿಗೆ

27) ಪರಿಶಿಷ್ಟ ಪಂಗಡ ನಾಯಕರಲ್ಲಿ ಯಾವ ನಾಯಕತ್ವದ ಗುಣವನ್ನು ಕಾಣಬಹುದು.

ಎ) ಪರಿಶಿಷ್ಟ ಪಂಗಡದ ಹಿತಕ್ಕಾಗಿ ಹೋರಾಡುವಂತಿರಬೇಕು. ☐

ಬಿ) ಪರಿಶಿಷ್ಟ ಪಂಗಡೇತರರಿಗೆ ಮಾತ್ರ ಹೆಚ್ಚು ಸೌಕರ್ಯವನ್ನು ದೊರಕಿಸುವಂತಿರಬೇಕು. ☐

ಸಿ) ಎಲ್ಲಾ ಜಾತಿ ಮತ್ತು ಧರ್ಮದವರಲ್ಲಿ ಸಾಮರಸ್ಯದಿಂದಿರಬೇಕು. ☐

ಡಿ) ರಾಷ್ಟ್ರ ನಿರ್ಮಾಣದ ಗುಣ ಹೊಂದಿರಬೇಕು. ☐

28) ಪರಿಶಿಷ್ಟ ಪಂಗಡ ರಾಜಕೀಯ ನಾಯಕತ್ವ ಯಾವುದರ ಆಧಾರದ ಮೇಲೆ ನಿರ್ಧಾರವಾಗುತ್ತದೆ ?

ಎ) ಜಾತಿಯಿಂದಾಗಿ ☐ ಬಿ) ಸ್ಥಳೀಯವಾಗಿ ☐

ಸಿ) ವ್ಯಕ್ತಿ ಆಧಾರಿತವಾಗಿ ☐ ಡಿ) ಜಾತ್ಯಾತೀತವಾಗಿ ☐

ಇ) ಶಿಕ್ಷಣ ಆಧಾರಿತವಾಗಿ ☐

29) ಸಾಮಾನ್ಯ ನಾಯಕತ್ವಕ್ಕೂ ಮತ್ತು ಪರಿಶಿಷ್ಟ ಪಂಗಡದವರ ನಾಯಕತ್ವಕ್ಕೂ ಏನಾದರೂ ವ್ಯತ್ಯಾಸ ಇದೆಯಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದರೆ ಯಾವುದರಲ್ಲಿ,

ಎ) ಜನ ಬೆಂಬಲದಲ್ಲಿ ☐ ಬಿ) ವ್ಯಕ್ತಿತ್ವದಲ್ಲಿ ☐

ಸಿ) ಜಾತಿ ಹಿನ್ನೆಲೆಯಲ್ಲಿ ☐ ಡಿ) ಪಕ್ಷ ನೀಡುವ ಸ್ಥಾನದಲ್ಲಿ ☐

30) ಪರಿಶಿಷ್ಟ ಪಂಗಡ ನಾಯಕರ ನಾಯಕತ್ವವನ್ನು ಒಪ್ಪುತ್ತೀರಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಇಲ್ಲ ಎಂದಾದರೆ ಕಾರಣ ತಿಳಿಸಿ,

ಎ) ನಾಯಕತ್ವ ಗುಣದ ಕೊರತೆ ☐ ಬಿ) ಪ್ರತಿನಿಧಿತ್ವದ ರಾಜಕಾರಣ ☐

ಸಿ) ಸಮಸ್ಯೆಗಳನ್ನು ಪರಿಹರಿಸುವಲ್ಲಿ ವೈಪಲ್ಯ ☐ ಡಿ) ಅಧಿಕಾರದ ಆಸೆ ☐

31) ನಿಮ್ಮ ಕ್ಷೇತ್ರದ ಶಾಸಕರು ಎಲ್ಲಾ ಜಾತಿ/ಧರ್ಮಗಳನ್ನು ಸಮಾನ ರೀತಿಯಲ್ಲಿ ನೋಡಿದ್ದಾರಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐ ಡಿ) ನಿರ್ಧರಿಸಿಲ್ಲ ☐

## ಪರಿಶಿಷ್ಟ ಪಂಗಡದವರಿಗೆ

32) ಪರಿಶಿಷ್ಟ ಪಂಗಡ ನಾಯಕತ್ವ ಬೆಳವಣಿಗೆಯಲ್ಲಿ ಪ್ರಬಲ ಜಾತಿಯ ಪಾತ್ರ ಏನು?

ಎ) ನಿಯಂತ್ರಿಸುತ್ತಾರೆ ☐ ಬಿ) ಪ್ರೋತ್ಸಾಹ ನೀಡುತ್ತಾರೆ ☐

ಸಿ) ತಟಸ್ಥ ಧೋರಣೆ ☐ ಡಿ) ತುಳಿಯುವ ಸ್ವಭಾವ ☐

33) ಜಾತಿಯ ಶ್ರೇಷ್ಠತೆಯನ್ನು ನಿರ್ಧರಿಸುವ ಅಂಶಗಳು

ಎ) ಹುಟ್ಟು ☐ ಬಿ) ಆರ್ಥಿಕ ಅಂಶಗಳು ☐

ಸಿ) ಸಾಮಾಜಿಕ ಅಂಶಗಳು ☐ ಡಿ) ಹಿಂದಿನಿಂದಲೂ ಬಂದ ಪದ್ದತಿ ☐

ಇ) ಗೊತ್ತಿಲ್ಲ ☐

34) ನಿಮ್ಮ ಊರಿನಲ್ಲಿರುವ ಪರಿಶಿಷ್ಟ ಪಂಗಡದವರು ಒಂದಾಗಬೇಕೇ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ ☐

ಹೌದು ಎಂದಾದರೆ ಯಾವ ಕಾರಣಕ್ಕೆ ಪರಿಶಿಷ್ಟ ಪಂಗಡದವರು ಒಂದಾಗಬೇಕೆಂದೆನಿಸುತ್ತದೆ ?

ಎ) ರಾಜಕೀಯ ಅಧಿಕಾರ ಪಡೆಯಲು ☐ ಬಿ) ಜಾತಿ ಸಂಘರ್ಷಗಳಿಂದ ರಕ್ಷಣೆ ☐

ಸಿ) ಸಾಮಾಜಿಕ ಸ್ಥಾನಮಾನ ☐ ಡಿ) ಆರ್ಥಿಕ ಸಹಕಾರ ☐

35) ಪರಿಶಿಷ್ಟ ಪಂಗಡದವರ ರಾಜಕೀಯ ಸಂಘಟನೆಯ ರಚನೆಗೆ ಪ್ರೇರಣೆಯ ಅಂಶಗಳು

ಎ) ರಾಜಕೀಯ ನಾಯಕರ ಪ್ರಭಾವ ☐ ಬಿ) ಜಾತಿ ಮುಖಂಡರ ಪ್ರಭಾವ ☐

ಸಿ) ಜನಾಂಗದ ಮಠಗಳ ಪ್ರಭಾವ ☐ ಡಿ) ಸ್ವಯಂ ಇಚ್ಚೆ ☐

ಇ) ಇತರೆ ☐

36) ಪರಿಶಿಷ್ಟ ಪಂಗಡದವರಿಗೆ ಸಂಘಟನೆಯ ಅವಶ್ಯಕತೆ ಇದೆಯಾ.?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎಂದಾದರೆ,

ಎ) ಜಾತಿ ವ್ಯವಸ್ಥೆಯಲ್ಲಿ ಕೆಳಗಿದ್ದು ಶೋಷಣೆಗೆ ಒಳಗಾಗಿದ್ದೇವೆ.

ಬಿ) ಉತ್ತಮ ಐತಿಹಾಸಿಕ ಹಿನ್ನಲೆ ಇದೆ

ಸಿ) ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಜಾತಿ ಸಂಘಟನೆಗಳು ಅನಿವಾರ್ಯ

ಡಿ) ರಾಜಕೀಯ ಅಧಿಕಾರಗಳಿಕೆ

37) ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪರಿಶಿಷ್ಟ ಪಂಗಡ ಸಂಘಗಳ ಸಭೆಗಳು ಏರ್ಪಡುತ್ತವೆಯೇ ?

ಎ) ಹೌದು　　ಬಿ) ಇಲ್ಲ

ಸಿ) ಗೊತ್ತಿಲ್ಲ

ಹೌದೆಂದಾದರೆ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳು?

ಎ) ಜನಾಂಗದ ಅಭಿಪ್ರಾಯ

ಬಿ) ಜನಾಂಗದಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವುದು

ಸಿ) ಸಂಘದ ಕಾರ್ಯಚಟುವಟಿಕೆ ಕುರಿತು ಡಿ) ಇತರೆ

38) ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುತ್ತಾರೆಯೇ?

ಎ) ಹೌದು　　ಬಿ) ಇಲ್ಲ

ಸಿ) ಗೊತ್ತಿಲ್ಲ

39) ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕುಟುಂಬದ ಆಸಕ್ತಿಯಿಂದಲೋ ಅಥವಾ ಸ್ವಂತ ಇಚ್ಛೆಯಿಂದ ಭಾಗವಹಿಸುತ್ತಾರೋ?

ಎ) ಸ್ವಂತ　　ಬಿ) ಇಲ್ಲ

ಸಿ) ಹೇಳಲು ಸಾಧ್ಯವಿಲ್ಲ

40) ಪರಿಶಿಷ್ಟ ಪಂಗಡದವರು ಸಮಾಜದಲ್ಲಿ ಶೋಷಣೆಗೆ ಒಳಗಾಗಿದ್ದಾರೆಯೇ?

ಎ) ಹೌದು　　ಬಿ) ಇಲ್ಲ

ಸಿ) ಗೊತ್ತಿಲ್ಲ

ಹೌದಾದರೆ ಯಾವ ರೀತಿ ಶೋಷಣೆಗೆ ಒಳಗಾಗಿದ್ದಾರೆ.

ಎ) ಸಾಮಾಜಿಕ ಶೋಷಣೆ ☐ ಬಿ) ಆರ್ಥಿಕ ಶೋಷಣೆ ☐

ಸಿ) ಸಾಂಸ್ಕೃತಿಕ ಶೋಷಣೆ ☐ ಡಿ) ಸಾಂಪ್ರದಾಯಿಕ ಶೋಷಣೆ ☐

41) ಪರಿಶಿಷ್ಟ ಪಂಗಡದ ಒಳಪಂಗಡಗಳಲ್ಲಿಯೇ ತಾರತಮ್ಯ ಇದ್ದರೂ ರಾಜಕೀಯವಾಗಿ ಎಲ್ಲರೂ ಸಮಾನರೆಂದು ಒಪ್ಪುತ್ತೀರಾ.?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದೆಂದಾದರೆ ರಾಜಕೀಯ ಸಮಾನತೆಯ ನಿರ್ಧಾರಕ ಅಂಶಗಳಾವುವು?

ಎ) ರಾಜಕೀಯ ಪ್ರಾಬಲ್ಯ ಸಾಧಿಸುವುದು ☐

ಬಿ) ರಾಜಕೀಯ ಸ್ಥಾನಮಾನ ಹೆಚ್ಚಿಸುವುದು ☐

ಸಿ) ರಾಜಕೀಯ ಮುಖಂಡರ ಪ್ರಭಾವ ☐

ಡಿ) ಜಾತಿಯ ಕಾರಣದಿಂದ ಸಾಮಾಜಿಕ ಹಿಂದುಳಿದಿರುವಿಕೆ ☐

42) ಜಾತಿಯ ಒಳಪಂಗಡಗಳಿಂದ ಮತಗಳು ಒಡೆಯುವ ಸಾಧ್ಯತೆ ಇದೆಯೇ.?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

43) ರಾಜಕೀಯದಲ್ಲಿ ಶಿಕ್ಷಣ ಅನಿವಾರ್ಯವೇ ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

44) ಪರಿಶಿಷ್ಟ ಪಂಗಡದವರು ರಾಜಕೀಯವಾಗಿ ಹಿಂದುಳಿಯಲು ಕಾರಣವೇನು ?

ಎ) ಸಾಂಸ್ಕೃತಿಕ ಹಿನ್ನೆಲೆ ☐ ಬಿ) ಆರ್ಥಿಕ ತೊಂದರೆ ☐

ಸಿ) ರಾಜಕೀಯದಲ್ಲಿ ಆಸಕ್ತಿ ಇಲ್ಲದಿರುವುದು ☐ ಡಿ) ಕೌಟುಂಬಿಕ ಕಾರಣಗಳಿಂದಾಗಿ ☐

ಇ) ಕೀಳರಿಮೆ ಮನೋಭಾವನೆ ☐ ಎಫ್) ಅಷ್ಟೊಂದು ಗೊತ್ತಿಲ್ಲ ☐

45) ಮೀಸಲು ಕ್ಷೇತ್ರಗಳು ಪರಿಶಿಷ್ಟ ಪಂಗಡದವರಿಗೆ ರಾಜಕೀಯ ನಾಯಕತ್ವ ರೂಪಿಸುವಲ್ಲಿ ಸಹಕಾರಿಯಾಗಿವೆಯಾ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಇಲ್ಲ ಎಂದಾದರೆ ಏನು ಕಾರಣ,

ಎ) ಪರಿಶಿಷ್ಟ ಪಂಗಡದವರ ಒಗ್ಗಟ್ಟಿನ ಸಮಸ್ಯೆ ☐ ಬಿ) ಪಕ್ಷದ ರಾಜಕೀಯ ☐

ಸಿ) ಚುನಾವಣಾ ರಾಜಕೀಯ ☐ ಡಿ) ಜಾತಿ ರಾಜಕೀಯ ☐

46) ಜಾತಿ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡ ನಾಯಕರ ಸ್ಥಾನಮಾನದಲ್ಲಿ ವ್ಯತ್ಯಾಸವಾಗಿದೆಯಾ.?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಹೌದು ಎನ್ನುವುದಾದರೆ ಹೇಗೆ,

ಎ) ಹೆಚ್ಚಾಗಿದೆ ☐ ಬಿ) ಕಡಿಮೆ ಯಾಗಿದೆ ☐

ಸಿ) ಹೆಚ್ಚು ಇಲ್ಲ ಕಡಿಮೆಯೂ ಇಲ್ಲ ☐ ಡಿ) ಶೋಚನೀಯವಾಗಿದೆ ☐

47) ಕರ್ನಾಟಕದ ರಾಜಕಿಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿದೆಯೇ?

ಎ) ಹೌದು ☐ ಬಿ) ಇಲ್ಲ ☐

ಸಿ) ಗೊತ್ತಿಲ್ಲ ☐

ಇಲ್ಲವಾದರೆ ಯಾವ ಕಾರಣಕ್ಕೆ ಪ್ರಾತಿನಿಧ್ಯ ದೊರೆತಿಲ್ಲ.?

ಎ) ಸಮರ್ಥ ನಾಯಕರ ಕೊರತೆ ☐

ಬಿ) ಜನಾಂಗದ ಸಂಘಟನೆಯಲ್ಲಿನ ಕೊರತೆ ☐

ಸಿ) ಇತರೆ ಪ್ರಭಾವಿ ಜಾತಿ ಸಂಘಟನೆಗಳ ಪ್ರಭಾವ ಡಿ) ಇತರೆ ☐

## ಅನುಬಂಧ–2

## ಚಳ್ಳಕೆರೆ ಮತ್ತು ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕರಿಗೆ ಸಿದ್ದಪಡಿಸಿದ ಸಂದರ್ಶನದ

## ಅನುಸೂಚಿ

1) ಹೆಸರು :

2) ತಾಲ್ಲೂಕು :

3) ವಿದ್ಯಾರ್ಹತೆ :

ಎ) ಅನಕ್ಷರಸ್ಥ ☐ ಬಿ) ಪ್ರಾಥಮಿಕ ☐

ಸಿ) ಪ್ರೌಢ ☐ ಡಿ) ಪದವಿ ಪೂರ್ವ ☐

ಇ) ಪದವಿ ☐ ಎಫ್) ಸ್ನಾತಕೋತ್ತರ ಪದವಿ ☐

4) ಜಾತಿ :

5) ಉಪ ಜಾತಿ :

6) ರಾಜಕೀಯ ಸ್ಥಾನಮಾನ:

ಎ) ಸಚಿವರು ☐ ಬಿ) ಶಾಸಕರು ☐

ಸಿ) ಮಾಜಿ ಶಾಸಕರು ☐

7) ತಮ್ಮ ಅನುಭವದ ಆಧಾರದ ಮೇಲೆ ಭಾರತೀಯ ರಾಜಕಾರಣವನ್ನು ವಿವರಿಸಿ.

8) ರಾಜ್ಯ ರಾಜಕಾರಣದಲ್ಲಿ ನಿಮ್ಮ ಸ್ಥಾನವನ್ನು ತಿಳಿಸಿ.

9) ನೀವು ಪಕ್ಷದ ಶಿಸ್ತಿನ ಸಿಪಾಯಿಯೋ ಅಥವಾ ಪರಿಶಿಷ್ಟರ ಹಿತ ಕಾಯುವ ಸಿಪಾಯಿಯೋ?

10) ಕ್ಷೇತ್ರದಲ್ಲಿ ಪರಿಶಿಷ್ಟರಿಗಾಗಿ ನೀವು ಜಾರಿಗೊಳಿಸಿದ ವಿಶೇಷ ಯೋಜನೆಗಳೇನಾದರೂ ಇದ್ದರೆ ತಿಳಿಸುತ್ತಾ ರಾಜ್ಯ ಮಟ್ಟದಲ್ಲಿ ದಲಿತರ ಹಿತವನ್ನು ಹೇಗೆ ಕಾಪಾಡಿದ್ದೀರಾ?

11) ರಾಜ್ಯದ ಪರಿಶಿಷ್ಟ ಪಂಗಡದವರಿಗಾಗಿ ತಾವು ಕೈಗೊಂಡ ಕಾರ್ಯಕ್ರಮಗಳನ್ನು ತಿಳಿಸಿ.

12) ನೀವು ಕೈಗೊಂಡ ಕ್ಷೇತ್ರದ ಅಭಿವೃದ್ಧಿಯ ಪಕ್ಷಿನೋಟವನ್ನು ನೀಡಿ.

13) ರಾಜ್ಯ ಇನ್ನೂ ಒಬ್ಬ ದಲಿತ ಮುಖ್ಯಮಂತ್ರಿಯನ್ನು ಹೊಂದಿಲ್ಲದಿರುವುದಕ್ಕೆ ಏನು ಹೇಳುತ್ತಿರಾ?

14) ಈಗಿನ ಮೀಸಲು ಕ್ಷೇತ್ರದ ಪದ್ದತಿಗೆ ಪರ್ಯಾಯ ಪದ್ದತಿ ಬಯಸುವುದಾದರೆ ಅದರ ಬಗ್ಗೆ ವಿವರಣೆ ನೀಡಿ.

15) ಪರಿಶಿಷ್ಟ ಪಂಗಡದ ಒಳಪಂಗಡಗಳಲ್ಲಿಯೇ ತಾರತಮ್ಯ ಇದ್ದರೂ ರಾಜಕೀಯವಾಗಿ ಎಲ್ಲರೂ ಸಮಾನರೆಂದು ಒಪ್ಪುತ್ತೀರಾ?

16) ಜಾತಿಯ ಒಳಪಂಗಡಗಳಿಂದ ಮತಗಳು ಒಡೆಯುವ ಸಾಧ್ಯತೆ ಇದೆಯೇ?

17) ಕರ್ನಾಟಕ ರಾಜಕೀಯದ ದೃಷ್ಟಿಯಿಂದ ಪರಿಶಿಷ್ಟ ಪಂಗಡದವರು ಏಳನೇ ದೊಡ್ಡ ಜನಾಂಗವಾಗಿದ್ದರೂ ಜನಾಂಗದ ಸಂಘಟನೆ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂಬ ಮಾತಿದೆ ಇದಕ್ಕೆ ಕಾರಣವೇನು?

18) ನಿಮಗೆ ಅನ್ನಿಸುವಂತೆ ಕರ್ನಾಟಕದ ರಾಜಕೀಯದ ಮೇಲೆ ಪ್ರಭಾವ ಬೀರುವಷ್ಟು ಮಟ್ಟಿಗಿನ ಸಂಘಟನೆ ಪರಿಶಿಷ್ಟ ಪಂಗಡದವರಲ್ಲಿ ಇದೆಯೇ?